ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನ ಮಹಾಪ್ರಬಂಧ)

ಸಂಶೋಧಕ
ಚಂದ್ರಪ್ಪ ಎಸ್.

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರವಾಚಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬



ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನ ಮಹಾಪ್ರಬಂಧ)

ಸಂಶೋಧಕ
ಚಂದ್ರಪ್ಪ ಎಸ್.

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರವಾಚಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೯

ದೃಢೀಕರಣ ಪತ್ರ

ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದ ಕುರಿತು ಚಂದ್ರಪ್ಪ ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 20/8/09

ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರವಾಚಕರು ಮತ್ತು ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದ ಕುರಿತು ಡಾ. ಹೆಬ್ಬಾಲೆ ಕೆ. ನಾಗೇಶ್ ಅವರ ಮಾರ್ಗದರ್ಶನದಲ್ಲಿ ಸಂಶೋಧನ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಇದುವರೆಗೂ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 20/08/09

ಚಂದ್ರಪ್ಪ ಎಸ್.

ಸಂಶೋಧನ ವಿದ್ಯಾರ್ಥಿ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಮೂರು

ಅಧ್ಯಾಯ ನಾಲ್ಕು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಮಹತ್ವ

೧.೧ ಪ್ರವೇಶ

೧.೨. ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ಮಹತ್ವ

೧.೩. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

೧.೪. ಅಧ್ಯಯನದ ಆಕರ ಸಾಮಾಗ್ರಿ ಮತ್ತು ಈವರೆಗಿನ ಅಧ್ಯಯನಗಳು

೧.೫. ಈವರೆಗೆ ಬಂದ ಡೊಳ್ಳಿನ ಹಾಡುಗಳ ಅಧ್ಯಯನಗಳ ತಾತ್ವಿಕ ನಿಲುವುಗಳು

೧.೧. ಪ್ರವೇಶ

ಈಗ ನಡೆಯುತ್ತಿರುವ ಸಾಂಸ್ಕೃತಿಕ ಅಧ್ಯಯನಗಳ ಹಿಂದೆ ಹಲವು ರಾಜಕಾರಣಗಳು ಗುಪ್ತವಾಗಿ ಕೆಲಸ ಮಾಡುತ್ತಿವೆ. ಸಾಂಸ್ಕೃತಿಕ ತಿಳುವಳಿಕೆಯನ್ನು ಯಾವುದೇ ಒಂದು ಗೊತ್ತಾದ ಉದ್ದೇಶಿತ ಚೌಕಟ್ಟಿನಲ್ಲಿ ಕತ್ತರಿಸಿ ಕೂರಿಸಲಾಗುತ್ತಿದೆ. ಈ ಉದ್ದೇಶದಿಂದಲೇ ಹೊಸ ಹೊಸ ಅಧ್ಯಯನ ವಿಧಾನಗಳನ್ನು ಸೃಷ್ಟಿ ಮಾಡಲಾಗುತ್ತಿದೆ. "ಈಗಾಗಲೇ ಜಾಗತಿಕ ಮಟ್ಟದಲ್ಲಿ ಎರಡು ರೀತಿಯ ಅಧ್ಯಯನ ಶಿಸ್ತುಗಳು ಮೇಲುಸ್ತರದಲ್ಲಿವೆ. ೧. ಖಾಸಗೀಕರಣದ ಪರವಾಗಿ ಅದೇ ವಲಯದವರು ಮಾಡುತ್ತಿರುವ ಅಧ್ಯಯನ. ೨. ಸರಕಾರಗಳು, ವಿಶ್ವವಿದ್ಯಾಲಯಗಳು ಮಾಡುತ್ತಿರುವ ಅಧ್ಯಯನ. ಈ ಎರಡು ಶಿಸ್ತುಗಳನ್ನು ನಾವು ತುಂಬಾ ಎಚ್ಚರಿಕೆಯಿಂದ ನೋಡಬೇಕು. ಖಾಸಗೀಕರಣದ ಪರವಾಗಿ ನಡೆಯುತ್ತಿರುವ ಅಧ್ಯಯನಗಳು ವಾಸ್ತವ ಸಂಗತಿಗಳನ್ನು ಅಧ್ಯಯನ ಮಾಡುತ್ತಿಲ್ಲ. ಬದಲಾಗಿ ಜಾಗತೀಕರಣಕ್ಕೆ-ವ್ಯಾಪಾರೀಕರಣಕ್ಕೆ ಅನುಕೂಲವಾಗುವಂತಹ ಮಾರ್ಗಸೂಚಿಗಳ ಮೇಲೆ ನಮ್ಮ ಸಂಸ್ಕೃತಿ, ಭಾಷೆ, ಜಾತಿ, ಪುರಾಣ ಮುಂತಾದ ದೇಶಿ ಜ್ಞಾನಶಿಸ್ತುಗಳನ್ನು ಅಧ್ಯಯನ ಮಾಡುತ್ತಿವೆ. ಭಾರತ ದೇಶದ ಸಾಮಾಜಿಕ ವ್ಯವಸ್ಥೆಯೊಳಗಡೆ ಜಾತಿ ಕೇವಲ ಭ್ರಮೆ ಎನ್ನುವ ವ್ಯಾಖ್ಯಾನ ಮಾಡುತ್ತಿವೆ".[೧] ಈ ಧೋರಣೆಯ ಹಿಂದಿನ ಉದ್ದೇಶಕ್ಕೂ, ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳಿಗೂ ನಮ್ಮ ಭಾರತೀಯ ಸಾಮಾಜಿಕ ಸನ್ನಿವೇಶಗಳಿಗೂ ಹೊಂದಿಕೆಯಾಗುವಂತಹ ತಿಳುವಳಿಕೆ ರೂಪುಗೊಳ್ಳುತ್ತಿಲ್ಲ. ಇದರಿಂದ ಖಾಸಗಿ ವಲಯದವರ ಚಿಂತನೆಗಳು; ಯೋಜನೆಗಳು ವಿಮುಖವಾಗುತ್ತಿವೆ. ಹೀಗೆ ಹೊಂದಾಣಿಕೆಯಾಗದೇ ಇರುವುದನ್ನು ಹೊಡೆದು ಹಾಕುವುದು ಹೇಗೆ? ಅನ್ನುವ ಚಿಂತನೆಗೆ ಪೂರಕವಾಗಿ 'ಜಾತಿ ಅವಾಸ್ತವ' ಅಂತ ಪ್ರತಿಪಾದನೆ ಮಾಡಲಾಗುತ್ತಿದೆ. ಇದು ಪೂರ್ವಸಿದ್ಧತೆಯ ಫಲಿತ ಕೇಂದ್ರಿತ ಅಧ್ಯಯನವಾಗಿದ್ದು 'FAKE' Research ಆಗಿದೆ. ಜೊತೆಗೆ ಇದು ಇರುವ ವಾಸ್ತವ ಸಂಗತಿಯನ್ನು ಬಚ್ಚಿಡುತ್ತದೆ. ದೇಶಿಯ ಸಮುದಾಯಗಳನ್ನು ಅಪರಾಧಿಗಳನ್ನಾಗಿ ಮಾಡುತ್ತಿದೆ. ನಮ್ಮಲ್ಲಿ ಜಾತಿ ಮೂಲವಾದ ಸಂಸ್ಕೃತಿ ಇದೆ. ಜಾತಿ ಮೂಲವಾದ ಭಾಷೆ ಇದೆ. ಜಾತಿ ಮೂಲವಾದ ಆಹಾರ ಪದ್ಧತಿ ಇದೆ. ಜಾತಿ ಮೂಲವಾದ ಧರ್ಮ ಇದೆ. ಜಾತಿ ಮೂಲವಾದ ನಂಬಿಕೆಗಳು, ನಡಾವಳಿಗಳಿವೆ. ಸಾವಿರ ಜಾತಿಗಳಿದ್ದರೆ ಸಾವಿರ ಭಾಷೆಗಳಿವೆ. ಸಾವಿರ ಕಲ್ಪನೆಗಳಿವೆ. ಸಾವಿರ ಆಚರಣೆಗಳಿವೆ. ಇವೆ ಸಾಮಾಜಿಕ ಸತ್ಯಗಳು. ಇವ್ಯಾವೂ ಇಲ್ಲವೇ ಇಲ್ಲ ಎನ್ನುವುದು ಎಷ್ಟು ಸರಿ? ನಮ್ಮದು ಬಹುಸಂಸ್ಕೃತಿಗಳ ದೇಶ. ಇಲ್ಲಿ ಪ್ರತಿಯೊಂದು ಸಂಸ್ಕೃತಿಗಳು ಭಿನ್ನ. ಪ್ರತಿಯೊಂದು ಸಂಸ್ಕೃತಿಯಲ್ಲೂ ಅದರದೇ ಆದ ವಾಸ್ತವ ಇದೆ, ಜೀವ ಚೈತನ್ಯವಿದೆ, ಜ್ಞಾನವಿದೆ, ವಿವೇಕವಿದೆ. ಈ ಪರಿಕಲ್ಪನೆಗಳು ಜಾತಿ, ಧರ್ಮ, ಲಿಂಗ, ಜನಾಂಗಗಳ ಆಧಾರದಲ್ಲಿ ಭಿನ್ನ ಸಮುದಾಯಗಳಾಗಿ ಜೀವಂತವಾಗಿವೆ. "ಇದು ಶ್ರೇಷ್ಠವೆಂದಲ್ಲ.

ಕೆಳಜಾತಿ, ಕೆಳವರ್ಗಗಳು ಅದೇ ವ್ಯವಸ್ಥೆಯ ಪ್ರತಿಷ್ಠಿತ ಜಾತಿ, ವರ್ಗಗಳಿಂದ ತುಳಿತಕ್ಕೆ ಒಳಗಾಗಿವೆ. ಮೌಢ್ಯ, ಜೀವವಿರೋಧಿ ಗುಣಗಳಿರುವಂತೆ ಇಲ್ಲಿ ಅಪಾರವಾದ ಜೀವಪರ ಮೌಲ್ಯಗಳಿವೆ. ಚೈತನ್ಯವಿದೆ. ಈ ಚೈತನ್ಯವನ್ನು ಶೋಧಿಸಿ ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಅನ್ವಯಿಸಿಕೊಳ್ಳುವುದರ ಮೂಲಕ ಪ್ರತಿಷ್ಠಿತರ ಆಲೋಚನ ವಿನ್ಯಾಸಗಳನ್ನು ಬದಲಿಸಬಹುದು. ಇದು ಜಾಗತಿಕ 'ಏಕರೂಪಿ ಚಿಂತನೆ'ಯ ತಾತ್ವಿಕತೆಯನ್ನೂ ದುರ್ಬಲಗೊಳಿಸಲು ನೆರವಾಗುತ್ತದೆ ಈ ಕುರಿತು ನಮ್ಮ ಸಮುದಾಯಗಳಿಗೆ ತಿಳಿಸಿ ಹೇಳಬೇಕಾದ ತುರ್ತು ನಮ್ಮ ಮುಂದಿದೆ".[೨] ಆ ಕಾರಣಕ್ಕೆ ನಮ್ಮಲ್ಲಿರುವ ದೇಶಿ ಜ್ಞಾನ ಪರಂಪರೆಗಳನ್ನು ಹೊಸದಾಗಿ ಸಮರ್ಥಿಸಿಕೊಳ್ಳಬೇಕಾದ ಅನಿವಾರ್ಯತೆ ದಿನದಿನಕ್ಕೆ ಹೆಚ್ಚುತ್ತಲಿದೆ. ಈ ಅನಿವಾರ್ಯತೆಯಲ್ಲಾದರೂ ನಮ್ಮಲ್ಲಿರುವ ದೇಶಿ ಜ್ಞಾನ ನೆಲೆಗಳನ್ನು ಅಧ್ಯಯನ ಮಾಡಬೇಕು. ಹಾಗಾದಾಗ ಮಾತ್ರ ನಮ್ಮಲ್ಲಿರುವ ಪಾರಂಪರಿಕ ಬಹುಮುಖಿ ಜೀವನ ವಿಧಾನವನ್ನು ಪುನಶ್ಚೇತನಗೊಳಿಸಲು ಸಾಧ್ಯವಾಗಬಹುದು. ವಾಸ್ತವ ಸಂಗತಿಗಳನ್ನು ಅನಾವರಣ ಮಾಡಲು ಅವಕಾಶವಾಗಬಹುದು. ಈ ವಿಧಾನದಲ್ಲಿಯೇ ನಮ್ಮಲ್ಲಿರುವ ಹಲವು ಸಮುದಾಯಗಳು ಕಟ್ಟಿಕೊಂಡಿರುವ ಮೌಖಿಕ ಪ್ರಕಾರಗಳನ್ನು ಅಧ್ಯಯನ ಮಾಡಬೇಕಾಗಿದೆ. ಪ್ರಸ್ತುತ ಈ ಸಂಶೋಧನೆ "ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ" ತಾತ್ವಿಕವಾಗಿ ಈ ಮೇಲಿನ ಆಲೋಚನೆಯ ಭಾಗವಾಗಿಯೇ ಹುಟ್ಟಿದ್ದು.

ಖಾಸಗಿ ವಲಯದ 'ಏಕರೂಪಿ ಚಿಂತನ' ಮಾದರಿಗೆ 'ಆಧುನಿಕೋತ್ತರವಾದ' ಬೆಂಬಲವಾಗಿ ನಿಂತಿದೆ. ಖಾಸಗಿ ವಲಯದವರು ಆಧುನಿಕೋತ್ತರವಾದವನ್ನು; ತಮ್ಮ ಚಿಂತನೆಯನ್ನು ಪ್ರತಿಪಾದನೆ ಮಾಡುವುದಕ್ಕೆ ಬಹಮುಖ್ಯ ಆಕರವನ್ನಾಗಿ ಮಾಡಿಕೊಂಡಿದ್ದಾರೆ. ಏಕೆಂದರೆ "ಯಾವ ಗುಣಗಳು ಆಧುನಿಕತೆಯಲ್ಲಿ ಮೌಲ್ಯವೆಂದು ಭಾವಿಸಲಾಗುತ್ತೋ ಅವೆಲ್ಲವೂ ಇಲ್ಲಿ ಹಳತು, ಮೌಲ್ಯಹೀನ. ಆಧುನಿಕತೆಯ ಚೌಕಟ್ಟು ನಿಂತಿದ್ದೇ ಬದುಕಿಗೆ ಅರ್ಥವನ್ನು, ದಿಕ್ಕು-ದೆಸೆಯನ್ನು ಕಾಣಿಸುವ ಕೆಲವು ದೊಡ್ಡ ಚಿಂತನೆಗಳ ಆಧಾರದ ಮೇಲೆ. ಇದನ್ನೆ ಸಂಸ್ಕೃತಿ ಅಧ್ಯಯನದ ಪರಿಭಾಷೆಯಲ್ಲಿ 'ವಿರಾಟ ಕಥನಗಳು' (ಗ್ರಾಂಡ್ ನರೇಟಿವ್ಸ್) ಎಂದು ಕರೆಯಲಾಗುತ್ತದೆ. ಅಂತಹ ಚಿಂತನೆಗಳೆಂದರೆ ಸತ್ಯ, ತರ್ಕ, ನೀತಿ, ದೇವರು, ಸಂಪ್ರದಾಯ, ಇತಿಹಾಸ ಮೊದಲಾದವು. ಗಟ್ಟಿಯಾದ ಟೀಕೆಗಳನ್ನೆಲ್ಲ ಎದುರಿಸಿ ನಿಲ್ಲುವ ಶಕ್ತಿಯುಳ್ಳದಲ್ಲ ಎಂದು ಆಧುನೀಕೋತ್ತರವಾದ ಮಂಡಿಸುತ್ತದೆ. ಅಧುನಿಕೋತ್ತರವಾದದ ಪ್ರಕಾರ ಇವೆಲ್ಲವು ಅರ್ಥಹೀನ. ಇಂಥ ಚಿಂತನೆಗಳ ಮೇಲೆ ನಿಂತು ತಾವು ಸತ್ಯವೆಂದು ವಾದಿಸುವ 'ಲೋಕದೃಷ್ಟಿ'ಗಳೂ ಸಹ ಕೃತಕ ಕಲ್ಪನೆಗಳಿಂದ ಸ್ವಭಾವತಃ, ಸರ್ವಾಧಿಕಾರಿ ಮನೋಧರ್ಮವುಳ್ಳವುಗಳು ಎಂದು ಹೇಳಿತು".[೩] ಹಾಗೂ ಈ ವಾದ ವೈಜ್ಞಾನಿಕ ಸಂಶೋಧನೆಗಳಿಗೆ ಹೆಚ್ಚು ಆದ್ಯತೆ ನೀಡಿತು. ವಿಶ್ವವನ್ನು, ಜೀವನವನ್ನು ಅರ್ಥಮಾಡಿಕೊಳ್ಳುವುದಕ್ಕೆ ವೈಜ್ಞಾನಿಕ ದೃಷ್ಟಿಕೋನವೇ ಏಕೈಕ ಸಾಧನವೆಂಬ ನಂಬಿಕೆಯನ್ನು ಪ್ರತಿಪಾದಿಸಿತು. ಇದರಿಂದ ಪ್ರಯೋಗಾತ್ಮಕ ಜ್ಞಾನಗಳಿಗೆ ಹೆಚ್ಚು ಆದ್ಯತೆ ಸಿಕ್ಕಿತು. ಕೆಲವು ಜನರಲ್ಲಿ ಇವುಗಳ ಆಚೆಗಿನ ಧರ್ಮ ದೇವರುಗಳ ಬಗ್ಗೆ ಸಂದೇಹಗಳಿದ್ದವು. "ಮನುಷ್ಯನೇ ದೇವರ ಅತ್ಯಂತ ಶ್ರೇಷ್ಟ ಸೃಷ್ಟಿ ಎಂಬ ಕ್ರಿಶ್ಚಿಯನ್ ಧರ್ಮದ ನಂಬಿಕೆಯನ್ನು ಡಾರ್ವಿನ್ ವಿಕಾಸವಾದ ಅಲ್ಲಾಡಿಸಿ ಬಿಟ್ಟಿತು. ಇದನ್ನು ಬಲಪಡಿಸುವ ಹಾಗೆ 'ನೀಚೆ'ಯಂಥ ತತ್ವಜ್ಞಾನಿಗಳು 'ದೇವರು ಸತ್ತಿದ್ದಾನೆ' ಎಂದು ಘಂಟಾಘೋಷವಾಗಿ ಸಾರಿಬಿಟ್ಟರು".[೪] ಈ ತಾತ್ವಿಕತೆ

ಮಾನವನ ನಂಬಿಕೆಗಳ ಮೇಲೆ ಹಲವು ಪರಿಣಾಮಗಳನ್ನು ಸೃಷ್ಟಿಸಿತು. ಗ್ರಾಮೀಣ ಪ್ರದೇಶಗಳಲ್ಲಿ ಇದರ ಪರಿಣಾಮ ತೀವ್ರವಾಗಿ ಆಯಿತು. ದೈವಗಳ ಬಗ್ಗೆ ಇದ್ದ ನಂಬಿಕೆಗಳು; ಸಂಪ್ರದಾಯಗಳು; ಪುರಾಣಗಳು; ಐತಿಹ್ಯ ಮುಂತಾದ ಮೌಖಿಕ ಆಕರಗಳು, ಆಚರಣೆಗಳು 'ಸತ್ಯರಹಿತ'ವಾಗಿ ಕಾಣತೊಡಗಿದವು. ಈ ಸಂದರ್ಭವನ್ನು ಬಳಸಿಕೊಂಡ ಬಂಡವಾಳಶಾಹಿವ್ಯವಸ್ಥೆ; ವಸಾಹತುಶಾಹಿ ವ್ಯವಸ್ಥೆ ದೈವಗಳ ನಂಬಿಕೆಗಳನ್ನು ಕಥನಗಳನ್ನು ವ್ಯಾಪರೀಕರಣಗೊಳಿಸಿತು. ಆಗ ವೈಯಕ್ತಿಕ ಅನನ್ಯತೆ ಉದ್ಭವ ಆಯ್ತು. ವೈಯಕ್ತಿಕ ಅನನ್ಯತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿಯೇ ಕಲಾವಿದರು ಪಾರಂಪರಿಕ ಬಂಧನದಿಂದ, ಸಮಷ್ಟಿ ಬಂಧನದಿಂದ ಹೊರಬರತೊಡಗಿದರು. ಪರಂಪರೆ ತನ್ನದೆಯಾದ ವೈಯಕ್ತಿಕ ಚಹರೆಯನ್ನು ಕಟ್ಟಿಕೊಳ್ಳುವುದಕ್ಕೆ ಇರುವ ಸಾಧನ ಅಂದುಕೊಂಡರು. ಹಾಗಾಗಿ ತನ್ನ ಇಚ್ಛೆಗೆ ಅನುಗುಣವಾಗಿ ಬಳಸಿಕೊಳ್ಳುವುದಕ್ಕೆ ಆರಂಭಿಸಿದರು. ಇದರಿಂದ ಸಮಷ್ಟಿ ಪ್ರತಿಭಾಶಕ್ತಿ ವಿನ್ಯಾಸದ ಹಾದಿ ಹಿಡಿಯಿತು. ಅಭಿವ್ಯಕ್ತಿಗಳು ವ್ಯಕ್ತಿನಿಷ್ಟ ನೆಲೆಯಲ್ಲಿ ಸಂವೇದನೆಗೊಂಡವು. ಸ್ವರಚಿತ ಹಾಡುಗಳನ್ನು ರಚನೆ ಮಾಡಿ ಹಾಡುವುದಕ್ಕೆ ಆರಂಭಿಸಿದರು. ಈಗ ಉತ್ತರ ಕರ್ನಾಟಕದ ಹೆಚ್ಚು ಜನಪದ ಗೀತೆಗಳು ವ್ಯಕ್ತಿ ನೆಲೆಯಲ್ಲಿ ಸಂವೇದನೆಗೊಳ್ಳುತ್ತಿವೆ. ಈ ತರಹದ ಹಾಡುಗಳಿಗೆ ಮಾರುಕಟ್ಟೆ ವ್ಯವಸ್ಥೆ ಇದೆ. ಹಾಡುಗಾರರಿಗೆ ಬಂಡವಾಳಶಾಹಿಗಾರರಿಂದ ಸಂಭಾವನೆ ಇದೆ. ಆದರೆ ಸಮಷ್ಟಿ ಪ್ರಕಾರದ ಜನಪದ ಗೀತೆಗಳಿಗೆ ವ್ಯಕ್ತಿ ನೆಲೆಯ ಅಭಿವ್ಯಕ್ತಿಗೆ ಇರುವಷ್ಟು ಮಾರುಕಟ್ಟೆ ಇಲ್ಲ.

ಈ ಚಿಂತನೆಗಳ ಹಿಂದಿನ ತಾತ್ವಿಕ ಧೋರಣೆ 'ಏಕಾತ್ಮಕ' ನೆಲೆಯನ್ನು ಪ್ರತಿಬಿಂಬಿಸುವುದು. ಸಮುದಾಯಗಳ ಅಸ್ಮಿತೆಗಳನ್ನು ವಿಸ್ಮೃತಿಗೊಳಿಸುವುದು. ನನ್ನದು ಶ್ರೇಷ್ಟವೆಂದು ನಂಬಿ ಬಾಳುತ್ತಿರುವ ಸಮುದಾಯಗಳ ನಂಬಿಕೆಗಳನ್ನು ಅಪಮೌಲ್ಯಗೊಳಿಸುವುದು, ಹುಸಿಗೊಳಿಸುವುದು. ಇಂತಹ ಚಿಂತನೆಗಳನ್ನು ಪವಿತ್ರೀಕರಿಸುವ ಸಂಕೇತಗಳನ್ನು ಹೊಡೆದುಹಾಕುವುದು, ನಿರಾಕರಿಸುವುದು, ಸ್ವಂತಿಕೆಯನ್ನು ನಾಶ ಮಾಡುವುದು. ಅವರ ಸಂಸ್ಕೃತಿಯ ಬಗ್ಗೆ ಅವರಲ್ಲಿ ಕೀಳರಿಮೆಯನ್ನು ಹುಟ್ಟಿಸಿ ಸಮಷ್ಟಿ ಮನಸ್ಸುಗಳನ್ನು ಕದಲಿಸುವುದು. ಆ ಮುಖಾಂತರ ಸಮದಾಯಗಳ ಪಾರಂಪರಿಕ ಚರಿತ್ರೆಯನ್ನು ಹೊಡೆದು ಹಾಕುವುದು. ಜಾಗತಿಕ ಸಂಸ್ಕೃತಿಯನ್ನು ಒಪ್ಪಿಕೊಳ್ಳುವಂತೆ ಮಾಡುವುದು ಅಥವಾ 'ಏಕಾತ್ಮಕ ಸಂಸ್ಕೃತಿ'ಯನ್ನು ಪ್ರತಿಪಾದಿಸುವುದು. ಜಾಗತಿಕ, ಖಾಸಗಿವಲಯದವರ ವ್ಯಾಪಾರೀಕರಣಕ್ಕೆ ಅನುವು ಮಾಡಿಕೊಡುವುದು. ಇದಕ್ಕೆ 'ಸರ್ವವ್ಯಾಪ್ತಿ ಸಾಪೇಕ್ಷ ಕಲ್ಪನೆ' ಸಾಕ್ಷಿ. ಹಾಗಾಗಿ ಇದನ್ನು ಪ್ರತಿರೋಧಿಸುವ ಅಧ್ಯಯನಗಳು ನಡೆಯಬೇಕು. ಡೊಳ್ಳಿನ ಹಾಡುಗಳ ಅಧ್ಯಯನ ಈ ನೆಲೆಯ ಉದ್ದೇಶವನ್ನು ಹೊಂದಿರುವಂತಹದ್ದು. ಏಕೆಂದರೆ ಈ ಹಾಡುಗಳನ್ನು ಅಧ್ಯಯನ ಮಾಡುವುದೆಂದರೆ ಪಶುಪಾಲನ ಸಮುದಾಯಗಳನ್ನು ಪಾರಂಪರಿಕ ಚರಿತ್ರೆಯನ್ನು ಅಧ್ಯಯನ ಮಾಡಿದಂತಾಗುತ್ತದೆ.

೧.೨. ಅಧ್ಯಯನ ಸ್ವರೂಪ, ಉದ್ದೇಶ ಮತ್ತು ಮಹತ್ವ

ಸಂಸ್ಕೃತಿಯನ್ನು ಅತ್ಯಂತ ಸ್ಥೂಲವಾಗಿ ಸರಳೀಕರಿಸಿ ಹೇಳುವುದಾದರೆ 'ಜೀವನಕ್ರಮ, ಬದುಕುವ ರೀತಿ' ಅನ್ನಬಹುದು. ಒಟ್ಟಾರೆ ಸಂಸ್ಕೃತಿಯ ಅಧ್ಯಯನವೆಂದರೆ ಬದುಕಿರುವ ಮತ್ತು ಬದುಕುತ್ತಿರುವ ವಿಧಾನವನ್ನು ಕುರಿತ ಅಧ್ಯಯನವೇ ಆಗಿದೆ. ಆ ಬದುಕನ್ನು ಬೇರೆ ಬೇರೆ ಆಯಾಮಗಳಿಂದ

ಗುರುತಿಸುತ್ತಿದ್ದೇವೆ. ಅಂತಹ ಆಯಾಮಗಳಲ್ಲಿ ಮೌಖಿಕ ಅಭಿವ್ಯಕ್ತಿ ಪ್ರಧಾನಧಾರೆಯ ಆಕರಗಳಾಗಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮೌಖಿಕದ ಬಹುಮುಖ್ಯ ಧಾರೆಗಳಲ್ಲಿ ಡೊಳ್ಳಿನ ಹಾಡುಗಳು ಸೇರಿವೆ. ಇವುಗಳ ಮೂಲಕ ಸಂಸ್ಕೃತಿಯೊಂದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವೇ ಈ ಅಧ್ಯಯನದ ತಾತ್ವಿಕ ಪ್ರಮೇಯ.

ಡೊಳ್ಳಿನ ಹಾಡುಗಳು ಹಾಲುಮತ ಸಮುದಾಯದ ಮೌಖಿಕ ಅಭಿವ್ಯಕ್ತಿಯಾಗಿದ್ದು, ಪ್ರಾಚೀನ ಜನಪದ ಗೀತ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. ಹಾಲುಮತ ಸಮುದಾಯದ ಸಾಂಸ್ಕೃತಿಕ ಚಹರೆಯನ್ನು ಕಟ್ಟಿಕೊಳ್ಳುವುದಕ್ಕೆ ಇರುವ ಪ್ರಧಾನಧಾರೆಯ ತಿಳುವಳಿಕೆ ಇಲ್ಲಿದೆ. ಹಾಗೆಂದು ಈ ಹಾಡುಗಳು ಕೇವಲ ಹಾಲುಮತ ಸಂಸ್ಕೃತಿಗೆ ಮಾತ್ರ ಸೀಮಿತವಲ್ಲ. ಸಮಾಜದ ಕನಸು, ಕಾಣ್ಕೆ, ಸಂಘರ್ಷ, ವೈರುಧ್ಯ, ಸ್ನೇಹ ಈ ಎಲ್ಲವನ್ನು ಒಳಗೊಂಡಿವೆ. ಇವುಗಳಲ್ಲಿ ಪಾರಂಪರಿಕ ಮುನ್ನಡೆಯಿದೆ. ಹಾಗೆಂದು ಈ ಹಾಡುಗಳು ಯಾವುದೋ ಒಂದು ವ್ಯವಸ್ಥೆಗೆ ಬದ್ಧವಾಗಲಿಲ್ಲ. ಒಂದು ಕಾಲಘಟ್ಟಕ್ಕೆ ಸಿಕ್ಕಿಕೊಂಡಿಲ್ಲ. ಅಂದರೆ ಕೇವಲ ಪುರಾಣವೂ ಅಲ್ಲ. ವರ್ತಮಾನದ ಕಾಲಬದ್ಧವು ಅಲ್ಲ. ನಮ್ಮ ನಡುವಿನ ವ್ಯವಸ್ಥೆಯ ಜೀವಂತಿಕೆಯ ಕ್ರಿಯಾಶೀಲತೆಯನ್ನು ಒಳಗೊಂಡು ಮುನ್ನಡೆಯುತ್ತಿವೆ. ಆ ಕಾರಣಕ್ಕಾಗಿಯೇ ಇಲ್ಲಿ ಕಾಣಿಸಿಕೊಳ್ಳುವ ಕಥನದ ವಸ್ತು ವೈವಿಧ್ಯತೆ ಕೇಳುಗನನ್ನು, ಓದುಗನನ್ನು ಮತ್ತೆ ಮತ್ತೆ ಕೇಳಿಸಿಕೊಳ್ಳುವಂತೆ, ಓದುವಂತೆ ಉದ್ದೀಪಿಸುತ್ತದೆ. ಮೌಖಿಕ ಅಭಿವ್ಯಕ್ತಿಗೆ ಈ ಕ್ರಿಯೆ ಮಹತ್ವವಾದದ್ದು. ಇದು ಡೊಳ್ಳಿನ ಹಾಡುಗಳಿಗೆ ಇರುವ ವಿಶಿಷ್ಟ ಚಹರೆಯೂ ಹೌದು. ಜೀವಂತಿಕೆಯೂ ಹೌದು. ಹಾಗಾಗಿ ಈ ಹಾಡುಗಳು ಗತ-ಆಧುನಿಕ ಕಾಲದ ಸ್ಮೃತಿ ಸಂಚಯವಾಗಿವೆ. ಕಥನದ ವಸ್ತು, ನಿರೂಪಣ ಶೈಲಿ, ಕನ್ನಡ ಜಾನಪದ ಪರಂಪರೆಯಲ್ಲಿಯೇ ವಿಶಿಷ್ಟವಾದದ್ದು. ಕಥಾವಸ್ತುವಿಗೆ ಜೀವತುಂಬಿ ಅದೊಂದು ಜನಾಂಗಿಕ ಮಹಾಕಾವ್ಯವಾಗಿ ರೂಪಿತವಾಗಿದೆ. ಇವುಗಳ ಅಂತರಂಗದಲ್ಲಿ ಪುರಾಣ, ಚರಿತ್ರೆ, ನೀತಿ, ಧರ್ಮ, ಸಾಮಾಜಿಕ ಕಳಕಳಿ, ತರ್ಕ, ಅನುಭವ-ಅನುಭಾವ, ರಾಜಕೀಯ, ಆರ್ಥಿಕತೆ, ಸಾಂಸ್ಕೃತಿಕ ಸಂಘರ್ಷ, ವೃತ್ತಿಸಂಘರ್ಷ ಮುಂತಾದ ವೈಖರಿಗಳ ಸಂಗಮವಿದೆ. ಇಂತಹ ಹಾಡುಗಳನ್ನು ಕೇವಲ ಹಾಡುಗಳಾಗಿ ನೋಡುವ ಹಳೆಯ ಸಾಂಪ್ರದಾಯಿಕ ಕ್ರಮದಿಂದ ದೂರಸರಿದು, ಅದರಲ್ಲಿ ಅಡಕವಾಗಿರುವ ವಸ್ತುವಿಶಿಷ್ಟತೆಯನ್ನು ಅಂತರ್‌ಶಿಸ್ತೀಯವಾಗಿ--ಅದನ್ನೊಂದು ಚಾರಿತ್ರಿಕ ಸಂದರ್ಭದ ಭಾಗವಾಗಿ ನೋಡುವ ದೃಷ್ಟಿಕೋನ ಆರಂಭವಾಗಬೇಕು. ಈ ಅಧ್ಯಯನ ವಿಧಾನದ ಮುಂದುವರಿಕೆಯಾಗಿ ಡೊಳ್ಳಿನ ಹಾಡುಗಳನ್ನು ವಿಶ್ಲೇಷಿಸುವುದು ಇಲ್ಲಿನ ಮುಖ್ಯ ಹಂಬಲವಾಗಿದೆ. ಉಳಿದಂತೆ ಈ ಅಧ್ಯಯನಕ್ಕಿರುವ ಕೆಲವು ಪ್ರಮುಖ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಕರ್ನಾಟಕದಲ್ಲಿ ಡೊಳ್ಳಿನ ಹಾಡುಗಳ ಅಧ್ಯಯನ ಆರಂಭವಾಗಿ ಸುಮಾರು ಎಂಟು ದಶಕಗಳೆ ಕಳೆದಿವೆ. ಆದರೂ ಸಮಗ್ರವಾದ ಸೈದ್ಧಾಂತಿಕ ಅಧ್ಯಯನ ನಡೆಯಲಿಲ್ಲ. ಕೇವಲ ಪರಿಚಯಾತ್ಮಕ ಬರಹಗಳಿವೆ. ಹಾಡುಗಳು ಸಂಪೂರ್ಣ ಸಂಗ್ರಹ ನಡೆಯಲಿಲ್ಲ. ಹತ್ತಾರು ಮಹಾಕಾವ್ಯಗಳಾಗುವಷ್ಟು ಹಾಡುಗಳು ಜನಪದರ ಮೌಖಿಕ ನೆಲೆಯಲ್ಲಿವೆ. ಆ ಎಲ್ಲಾ ಹಾಡುಗಳನ್ನು ಸಂಗ್ರಹಿಸಬೇಕು. ಇತರ ಆಕರಗಳೊಂದಿಗೆ ತೌಲನಿಕ ಅಧ್ಯಯನ ಮಾಡಬೇಕು. ಹಾಗಾದಾಗ ಮಾತ್ರ

ಡೊಳ್ಳಿನ ಹಾಡುಗಳು ಜನ್ಮತಾಳಿದ ಉದ್ದೇಶವನ್ನೂ, ಹಾಡುಗಳ ಸಮಗ್ರ ಚಿತ್ರಣವನ್ನೂ ಮತ್ತು ಹಾಲುಮತ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನೂ ಗುರುತಿಸುವುದಕ್ಕೆ ಸಾಧ್ಯ. ಜೊತೆಗೆ ಹಾಲುಮತ ಸಮುದಾಯದಿಂದ ಕವಲೊಡೆದು ಪ್ರತ್ಯೇಕ ಅಸ್ಮಿತೆಯನ್ನು ಕಟ್ಟಿಕೊಂಡ ಹಲವು ಸಮುದಾಯಗಳಿವೆ. ಈ ಸಮುದಾಯಗಳು ಈಗ ಪ್ರತ್ಯೇಕವಾದ ಅಸ್ಮಿತೆಯನ್ನು ಕಟ್ಟಿಕೊಂಡಿದ್ದರೂ ತಮ್ಮ ಮೂಲಚರಿತ್ರೆಯನ್ನು ಹೇಳುವಾಗ ಹಾಲುಮತ ಸಂಸ್ಕೃತಿಯಿಂದಲೇ ತಮ್ಮ ಚರಿತ್ರೆಯನ್ನು ಆರಂಭಿಸಿಕೊಳ್ಳುತ್ತವೆ. ಆ ಎಲ್ಲಾ ಸಮುದಾಯಗಳ ಆಸ್ಮಿತೆಯನ್ನು ಗುರುತಿಸಬಹುದು. ಏಕೆಂದರೆ ಈ ಹಾಡುಗಳಲ್ಲಿ ಇವತ್ತಿನ ಹಲವು ಪಶುಪಾಲನ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆ ಇದೆ. ಇಂತಹ ವಿಶಿಷ್ಟತೆಯನ್ನು ತನ್ನಲ್ಲಿಟ್ಟುಕೊಂಡಿರುವುದರಿಂದಲೇ ಈ ಹಾಡುಗಳು; ಮಹಾಕಾವ್ಯಗಳು ಜಗತ್ತಿನ ಇತರ ಮಹಾಕಾವ್ಯಗಳಿಗಿಂತ ಭಿನ್ನವಾಗಿ ಕಾಣಿಸುತ್ತವೆ. ಈ ರೀತಿಯ ಅಧ್ಯಯನ ವಿಧಾನಕ್ಕೆ ಬೇಕಾದ ಸೈದ್ಧಾಂತಿಕ ನೆಲೆಯನ್ನು ಶೋಧಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದು.

೨. ಡೊಳ್ಳಿನ ಹಾಡುಗಳು ಡೊಳ್ಳು ಕಲೆಯ ಒಂದು ಭಾಗವಾಗಿವೆ. ಈ ಕಲೆಯಲ್ಲಿ ಎರಡು ಪ್ರಕಾರಗಳಿವೆ. ಒಂದು 'ಕುಣಿತ', ಮತ್ತೊಂದು 'ಹಾಡು'. ಇವುಗಳಲ್ಲಿ ಒಂದು 'ನೃತ್ಯ ಪ್ರಧಾನ', ಮತ್ತೊಂದು 'ಸಾಹಿತ್ಯ ಪ್ರಧಾನ'. ಒಂದು ಅತೀಪ್ರಾಚೀನ ಮತ್ತೊಂದು ಪ್ರಾಚೀನ. ಒಂದು ಸಂಕ್ಷಿಪ್ತ, ಮತ್ತೊಂದು ಸಮಗ್ರ. ಒಂದು 'ಅಮೂರ್ತ ಪಠ್ಯ' ಮತ್ತೊಂದು 'ಮೂರ್ತ ಪಠ್ಯ'. ಈ ಎರಡು ಪಠ್ಯಗಳನ್ನು ಒಂದೇ ಎಂದಾಗಲಿ, ಪ್ರತ್ಯೇಕವೆಂದಾಗಲೀ ಗ್ರಹಿಸುವಂತಿಲ್ಲ. ಅವು ಏಕಕಾಲಕ್ಕೆ ಭಿನ್ನವೂ, ಅಭಿನ್ನವೂ ಆಗಿರುತ್ತವೆ. ಇದು ಡೊಳ್ಳು ಕಲೆಗಿರುವ ವಿಶಿಷ್ಟ ಗುಣ. ಈ ಎರಡು ಪಠ್ಯಗಳು ಅನಾವರಣಗೊಳ್ಳುವ ಸಂದರ್ಭಗಳು ಒಂದೇ ಅಲ್ಲ. ಬೇರೆ ಬೇರೆ. ಅನಾವರಣಗೊಳ್ಳುವ ವಸ್ತು-ಪ್ರತಿಮೆ ಒಂದು ವಿಧಾನದಲ್ಲಿ ಬಚ್ಚಿಟ್ಟುಕೊಂಡಿದ್ದರೆ ಮತ್ತೊಂದರಲ್ಲಿ ತೆರೆದುಕೊಂಡಿದೆ. ಹಾಗಾಗಿ ಬಾಹ್ಯನೋಟಕ್ಕೆ ಈ ಎರಡು ಪಠ್ಯಗಳು ಪ್ರತ್ಯೇಕವೆಂದು ಕಾಣಿಸುತ್ತವೆ. ಅವುಗಳ ಆಂತರಿಕ ಧೋರಣೆ ಪ್ರತ್ಯೇಕವಾಗಿಲ್ಲ. ಬಹಳ ಸೂಕ್ಷ್ಮವಾಗಿ ತಳುಕು ಹಾಕಿಕೊಂಡಿವೆ. ಈ ಬಗೆಯ ಸಂಕರಶೀಲತೆಯನ್ನು ಅರಿಯದ ವಿದ್ವಾಂಸರು ಪ್ರತ್ಯೇಕವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇದರಲ್ಲಿರುವ ಸಂಕರಶೀಲ ಗುಣವನ್ನು ಗುರುತಿಸಿಲ್ಲ. ಹಾಗಾಗಿ ಡೊಳ್ಳು ಕಲೆಯನ್ನು ಸೂಕ್ಷ್ಮವಾಗಿ ಗ್ರಹಿಸಲು ಸಾಧ್ಯವಾಗಿಲ್ಲ. ಈ ಎರಡೂ ಪಠ್ಯಗಳನ್ನು ಸೈದ್ಧಾಂತಿಕ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಜೊತೆಗೆ ಈ ಪಠ್ಯಗಳ ಧೋರಣೆಯನ್ನು ಆ ಸಮುದಾಯದ ಹಲವು ಚಿತ್ರಣಗಳೊಂದಿಗೆ ಚರ್ಚಿಸಬೇಕಾಗಿದೆ.

೩. ಡೊಳ್ಳಿನ ಹಾಡುಗಳಲ್ಲಿನ ಸಂವೇದನೆಯ ಪ್ರಮುಖ ಉದ್ದೇಶ ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ವೀರರ ಜೀವನಚರಿತ್ರೆಯನ್ನು ಸಂವಹನಗೊಳಿಸುವುದು. ಈ ಹಾಡುಗಳನ್ನು ಬಳಸಿ ಈತನಕ ಸಾಂಸ್ಕೃತಿಕ ವೀರರ ಸಮಗ್ರ ಅಧ್ಯಯನ ಸಾಧ್ಯವಾಗಿಲ್ಲ. ಕೆಲವು ಸಾಂಸ್ಕೃತಿಕ ವೀರರ ಪರಿಚಯಾತ್ಮಕ ಬರಹಗಳು ಸಹ ಬಂದಿಲ್ಲ. ಜೊತೆಗೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳೆಲ್ಲವೂ ಉತ್ತರ ಕರ್ನಾಟಕದ ಕಥನಗಳನ್ನು ಮಾತ್ರ ಗಮನಿಸಿವೆ. ದಕ್ಷಿಣ ಕರ್ನಾಟಕದ ತಿಳುವಳಿಕೆಯನ್ನು ನಿರ್ಲಕ್ಷಿಸಿವೆ. ದಕ್ಷಿಣ ಕರ್ನಾಟಕದಲ್ಲಿ ಉತ್ತರ ಕರ್ನಾಟಕಕ್ಕಿಂತ ಭಿನ್ನವಾಗಿ ಸಾಂಸ್ಕೃತಿಕ ವೀರರು ಆರಾಧನೆಗೊಳ್ಳುತ್ತಿದ್ದಾರೆ.

ಭಿನ್ನಶೈಲಿಯ ಆರಾಧನ ಕೇಂದ್ರಗಳಿವೆ. ಹಾಲುಮತ ಪುರಾಣಗಳು ಮತ್ತು ಡೊಳ್ಳಿನ ಹಾಡುಗಳು ಉಲ್ಲೇಖಿಸುವ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಪ್ರತಿಬಿಂಬಿಸುವ ಪ್ರಮುಖ ಆಚರಣೆಗಳಿವೆ. ಆ ಆಚರಣೆಗಳು ಉತ್ತರ ಕರ್ನಾಟಕದಲ್ಲಿ ಈಗ ಕಣ್ಮರೆಯಾಗಿವೆ. ದಕ್ಷಿಣ ಕರ್ನಾಟಕದಲ್ಲಿ ಜೀವಂತವಾಗಿವೆ. ಹಿಂದಿನ ಅಧ್ಯಯನಗಳು ಇಂತಹ ಹಲವು ಸಂಗತಿಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಆರಾಧನ ವಿಧಾನದಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಆ ಭಿನ್ನತೆಗಳ ತಾತ್ವಿಕ ನೆಲೆಗಳನ್ನು ಗುರುತಿಸಿಲ್ಲ. ಅಲ್ಲದೆ ಈ ಎಲ್ಲಾ ಸಾಂಸ್ಕೃತಿಕ ವೀರರನ್ನು ಏಕರೂಪಿಯಾಗಿ ಚರ್ಚಿಸಿದ್ದಾರೆ. ಹಾಲುಮತ ಸಂಸ್ಕೃತಿಯನ್ನು ಬಿಂಬಿಸುವ ವೀರರ ಆರಾಧನೆಯಲ್ಲಿ ಪ್ರಮುಖವಾಗಿ ಎರಡು ಪಂಥಗಳಿವೆ. 'ಭಂಡಾರ ಸಂಸ್ಕೃತಿ'ಯ (ಭಂಡಾರ ಪಂಥದ) ನಾಯಕರು ಇರುವಂತೆ, 'ವಿಭೂತಿ ಸಂಸ್ಕೃತಿ' (ವಿಭೂತಿ ಪಂಥದ)ಯ ನಾಯಕರು ಇದ್ದಾರೆ. 'ಲಿಂಗವಿರೋಧಿ' ನಾಯಕರು ಇರುವಂತೆ 'ಲಿಂಗಧಾರಿ' ನಾಯಕರು ಉಂಟು. 'ಮಾತೃಪ್ರಧಾನ ಸಂಸ್ಕೃತಿ'ಯನ್ನು ಸಂಕರಶೀಲಗೊಳಿಸಿಕೊಂಡು ಬೇಟೆ, ಪಶುಪಾಲನೆ ಮತ್ತು ಕೃಷಿ ಸಂಸ್ಕೃತಿಯ ಕಾಲಘಟ್ಟಗಳಲ್ಲಿ ಬದುಕಿದವರು. ಈ ಎಲ್ಲಾ ನಾಯಕರು ಅನುಸರಿಸುತ್ತಿದ್ದ ಹಾಲುಮತ ಧರ್ಮ ಒಂದೇ ಅಲ್ಲ, ಭಿನ್ನ. ಈ ಎರಡು ಸಂಸ್ಕೃತಿಯ ನಾಯಕರುಗಳ ನಡುವೆ ಸಂಘರ್ಷಗಳೂ, ಒಪ್ಪಂದಗಳೂ ನಡೆದಿವೆ. ಈ ಸಂಘರ್ಷ ಮತ್ತು ಒಪ್ಪಂದಗಳ ಹಿಂದಿನ ತಾತ್ವಿಕತೆಯನ್ನು ಅರಿಯಬೇಕಾಗಿದೆ. ಆ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಗುರುತಿಸಬೇಕಾಗಿದೆ. ಅವರ ಜೀವನ ಚರಿತ್ರೆಯನ್ನು ಪ್ರತಿಬಿಂಬಿಸುವ ಆಚರಣೆ ಮತ್ತು ಪವಾಡಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬೇಕಾಗಿದೆ. ಇವರ ಜೀವನದ ಸುತ್ತಲೂ ಇರುವ ಪವಾಡಗಳಿಗೆ ಹಿನ್ನೆಲೆಯಾಗಿ ಕೆಲಸ ಮಾಡಿರುವ ಆ ಪರಿಸರದ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಹಿನ್ನೆಲೆಯನ್ನು ಚರ್ಚಿಸಬೇಕಾಗಿದೆ. ಈ ವಿಧಾನಕ್ಕಾಗಿ ಕ್ಷೇತ್ರಕಾರ್ಯದ ಮೂಲಕ ಸಾಂಸ್ಕೃತಿಕ ವೀರರಿಗೆ ಮತ್ತು ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಐತಿಹ್ಯ, ಪುರಾಣ, ಸ್ಥಳೀಯ ಕಥೆಗಳು, ಗಾದೆಗಳು, ಒಗಟುಗಳು, ಆಚರಣೆ-ಸಂಪ್ರದಾಯಗಳು, ಜಾತ್ರೆ-ಉತ್ಸವಗಳು, ಸ್ಥಳನಾಮಗಳು ಮುಂತಾದ ಆಧಾರಗಳನ್ನು ಮುಖಾಮುಖಿಗೊಳಿಸುತ್ತ ಸಾಂಸ್ಕೃತಿಕ ವೀರರ ಬಹುಮುಖ ಜೀವನ ಚರಿತ್ರೆಯನ್ನು ಕಟ್ಟುವ ಉದ್ದೇಶ ಈ ಅಧ್ಯಯನಕ್ಕಿದೆ. ಇದರಿಂದ ಪಶುಪಾಲನ ಸಂಸ್ಕೃತಿಯ ನಾಯಕರ ಜೀವನ ಚರಿತ್ರೆಯನ್ನು ಭಿನ್ನವಾಗಿ ಗ್ರಹಿಸಬಹುದು.

೪. ಡೊಳ್ಳು ಪುರುಷರ ಕಲೆ, ಧಾರ್ಮಿಕ ಕಲೆ, ಹಾಲುಮತ ಸಮುದಾಯದ ಕಲೆ ಅನ್ನುವ ಚೌಕಟ್ಟುಗಳಿಗೆ ಸಿಲುಕಿತ್ತು. ಈಗ ಇಂತಹ ಪಾರಂಪರಿಕ ಗುರುತು ನಶಿಸುತ್ತಿದೆ. ಮಹಿಳೆಯರು ಮತ್ತು ಹಾಲುಮತೇತರ ಸಮುದಾಯದವರೂ ಡೊಳ್ಳು ಬಾರಿಸುತ್ತಿದ್ದಾರೆ. ಧಾರ್ಮಿಕ ಕಾರ್ಯಕ್ರಮಗಳಿಗಲ್ಲದೆ ಜನಪ್ರಿಯ ಕಾರ್ಯಕ್ರಮಗಳಲ್ಲೂ ಬಳಕೆಯಾಗುತ್ತಿದೆ. ಚಲನಚಿತ್ರ-ಧಾರವಾಹಿ ಮುಂತಾದ ಆಧುನಿಕ ಸಮೂಹ ಸಂವಹನ ಮಾಧ್ಯಮಗಳಲ್ಲೂ ಬಳಕೆಯಾಗುತ್ತಿದೆ. ಇವತ್ತಿನ ರಾಜಕೀಯ ಕಾರ್ಯಕ್ರಮಗಳಿಗೆ ಈ ಕಲೆ ಇರಲೇಬೇಕು ಅನ್ನುವಷ್ಟರಮಟ್ಟಿಗೆ ಪ್ರಭಾವ ಬೀರಿದೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕೆಲವು ರಾಜಕೀಯ ನಾಯಕರು ಡೊಳ್ಳು ಬಡಿಯುವುದರ ಮುಖಾಂತರ ತಮ್ಮ ಚುನಾವಣಾ

ಪ್ರಚಾರವನ್ನು ಆರಂಭಿಸಿದರು. ಇದರ ಹಿಂದಿನ ರಾಜಕಾರಣ ಬೇರೆ ಇರಬಹುದು. ಆದರೆ ಡೊಳ್ಳು ಕಲೆ ತನ್ನ ಪಾರಂಪರಿಕ ಚೌಕಟ್ಟನ್ನು ಮೀರುತ್ತಿದೆ ಅನ್ನುವುದು ಖಚಿತ. ಈ ಡೊಳ್ಳುಕಲೆ ಸಾಮಾಜಿಕ ಕಲೆಯಾಗಿ, ಮಹಿಳಾ ಕಲೆಯಾಗಿ, ಜನಪ್ರಿಯ ಕಲೆಯಾಗಿ ರೂಪಾಂತರವಾಗಿದೆ. ಮಹಿಳೆಯರು 'ಕುಣಿತ' ಮತ್ತು 'ಹಾಡುಗಳ' ಪ್ರತ್ಯೇಕ ತಂಡಗಳನ್ನು ಕಟ್ಟಿಕೊಂಡಿದ್ದಾರೆ. ಪುರುಷರ ಜೊತೆ ಪ್ರತಿಸ್ಪರ್ಧಿಯಾಗಿ ಪ್ರದರ್ಶನ ಕೊಡುತ್ತಿದ್ದಾರೆ. ಮಹಿಳೆಯರು ಎಲ್ಲಾ ರಂಗದಲ್ಲಿ ಪ್ರವೇಶ ಪಡೆದಂತೆ ಇಲ್ಲಿ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳುವ ಹಂಬಲವಿದೆ. ಆದರೆ ಇದರಿಂದ ಪುರುಷರಲ್ಲಿ ತಮ್ಮ ಪಾರಂಪರಿಕ ಅಸ್ಮಿತೆಯನ್ನು ಕಳೆದುಕೊಳ್ಳುವ ಆತಂಕ ದಿನದಿನಕ್ಕೆ ಹೆಚ್ಚುತ್ತಿದೆ. ಹಾಗಾಗಿ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವುದಕ್ಕೆ ಅನೇಕ ತಂತ್ರಗಳನ್ನು ರೂಪಿಸುತ್ತಿದ್ದಾರೆ. ಇದರಿಂದ ಕಲೆಯ ಅಭಿವ್ಯಕ್ತಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಮಹಿಳೆಯರ ಭಾಗವಹಿಸುವಿಕೆಯ ಬಗ್ಗೆ ಹಿರಿಯ ಮತ್ತು ಯುವಕ ಕಲಾವಿದರಲ್ಲಿ ಪರ-ವಿರೋಧದ ಚರ್ಚೆಗಳಿವೆ. ಕಲಾವಿದರ ಈ ದ್ವಂದ್ವದ ನಡುವೆ ಮಹಿಳೆಯರನ್ನು ಕೇಳುಗರು ಹೇಗೆ ಸ್ವೀಕರಿಸಿದ್ದಾರೆ ಎನ್ನುವುದರ ಬಗ್ಗೆ ಆಲೋಚಿಸಬೇಕಿದೆ. ಅಭಿವ್ಯಕ್ತಿ ಮತ್ತು ಪ್ರದರ್ಶನದ ಸಂದರ್ಭಗಳು ಬದಲಾಗಿರುವಂತೆ ವಾದ್ಯದ ರಚನೆ ಮತ್ತು ಬಳಕೆಯಲ್ಲೂ ಬದಲಾವಣೆ ಗಳಾಗಿವೆ. ಹೀಗೆ ಡೊಳ್ಳುಕಲೆ ಅನೇಕ ರೂಪಾಂತರಗಳನ್ನು ಪಡೆದಿದೆ. ಇಂತಹ ರೂಪಾಂತರ ಪ್ರಕ್ರಿಯೆಯ ಕಾರಣ ಮತ್ತು ಪರಿಣಾಮಗಳನ್ನು ಈ ಅಧ್ಯಯನ ಶೋಧಿಸುವ ಗುರಿ ಹೊಂದಿದೆ.

೫. ಡೊಳ್ಳಿನ ಹಾಡುಗಳ ಪ್ರದರ್ಶನಕ್ಕೆ ಇವತ್ತು ಒಂದು Context ಬೇಕು ಅನ್ನುವ ನಿಯಮವಿಲ್ಲ ಅಥವಾ ಒಂದು ನಿರ್ದಿಷ್ಟವಾದ Contextನಲ್ಲಿ ಮಾತ್ರ ಅಭಿವ್ಯಕ್ತವಾಗುತ್ತಿಲ್ಲ. Unwritten Documents ಅನ್ನುವ ಲಕ್ಷಣಕ್ಕೆ ಬದ್ಧವಾಗಿಲ್ಲ. ಒಬ್ಬರಿಂದ ಮತ್ತೊಬ್ಬರಿಗೆ ಕೇವಲ ಮೌಖಿಕವಾಗಿ ಚಲನಶೀಲವಾಗುತ್ತಿಲ್ಲ. ಹಲವು ಪಾರಂಪರಿಕ ಜಾನಪದ ವ್ಯಾಖ್ಯಾನಗಳು; ಲಕ್ಷಣಗಳನ್ನು ಮೀರಿ ಬೆಳೆಯುತ್ತಿದೆ. ಚಲನಚಿತ್ರ ಹಾಗೂ ಜನಪ್ರಿಯ ಹಾಡುಗಳಿಗೆ, ತತ್ವಪದಗಳಿಗೆ, ಜನಪದ ಗೀತೆಗಳಿಗೆ, ಪರಭಾಷಾ ಚಲನಚಿತ್ರಗಳ ಹಾಡುಗಳ ಶೈಲಿಗೆ ಪಾರಂಪರಿಕ ಪಠ್ಯದ ವಸ್ತು ಹೊಂದಿಕೆಯಾಗುವಂತೆ ರಚಿಸಿ ಹಾಡುವ ವಿಧಾನ ಆರಂಭವಾಗಿದೆ. ಲಿಖಿತ ಹಾಲುಮತ ಪುರಾಣ ಮತ್ತು ಲೋಕಸೃಷ್ಟಿಯ ಆದಿಪುರಾಣಗಳ ಪಠ್ಯಗಳನ್ನು ಬಳಸಿಕೊಂಡು ರಚಿಸಿ ಹಾಡುತ್ತಿದ್ದಾರೆ. ಹಾಡನ್ನು ಹಾಡುವುದಕ್ಕೂ ಮುಂಚೆ ಒಂದು ಜನಪ್ರಿಯ ವಚನವನ್ನು ಹಾಡುವ ವಿಧಾನ ರೂಢಿಯಾಗಿದೆ. ಹಾಡುಗಳು, ಸಿಡಿ, ಡಿವ್ಹಿಡಿಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿವೆ. ಈ ಹಾಡು ಪರಂಪರೆಯನ್ನು ಉದ್ಯಮವನ್ನಾಗಿ ಪರಿವರ್ತಿಸಲಾಗುತ್ತಿದೆ. ಸಿನಿಮಾ ಮಾದರಿಯಲ್ಲಿ ನೃತ್ಯ ಮಾಡುತ್ತಾ, ಹೊಲ-ಗದ್ದೆ, ಬೆಟ್ಟ-ಗುಡ್ಡ, ದೇವಾಲಯಗಳ ಆವರಣದಲ್ಲಿ ಓಡಾಡುತ್ತ ಹಾಡುಗಳನ್ನು ಹಾಡಿರುವ ಸಿಡಿ, ಡಿವ್ಹಿಡಿಗಳು ಬಂದಿವೆ. ವೈಯಕ್ತಿಕ ಸಂಘರ್ಷದ ಹಾಡುಗಳನ್ನು ಹಾಡಲಾಗುತ್ತಿದೆ. ಹೆಣ್ಣು ಹೆಚ್ಚು ಗಂಡು ಹೆಚ್ಚು ಅನ್ನುವ ವಾದ-ಪ್ರತಿವಾದ ನಡೆಯುತ್ತದೆ. 'ಹಾಲುಮತ' ಮತ್ತು 'ಶೀಲಮತ' ಅನ್ನುವ ಎರಡು ಪಂಥಗಳನ್ನು ಸೃಷ್ಟಿಸಿಕೊಂಡು ವಾದ-ಪ್ರತಿವಾದದ ಪರಿಕಲ್ಪನೆಯಲ್ಲಿ ಹಾಡುತ್ತಿದ್ದಾರೆ. ಈ ವಾದ ಸಮಶ್ರೇಣೀಕರಣದಂತೆ ಕಾಣಿಸುತ್ತದೆ. ಸಮುದಾಯದಲ್ಲಿರುವ ಆಂತರಿಕ ಕುಲ ಸಂಘರ್ಷದಂತೆ ಕಾಣುತ್ತದೆ.

'ಹಾಲುಮತ' ಮತ್ತು 'ಶೀಲಮತ'ಗಳ ಚರ್ಚೆ ತಮ್ಮ ತಮ್ಮ ಕುಲಸ್ಥಾಪನೆಗಾಗಿ ಮಾಡುತ್ತಿರುವ ಹೋರಾಟದಂತಿದೆ. ಹೀಗೆ ಹಲವು ವಿಧಾನದಲ್ಲಿ ಡೊಳ್ಳಿನ ಹಾಡುಗಳು ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಲಿವೆ. ಈ ಬದಲಾವಣೆಗಳ ಉದ್ದೇಶವೇನು? ಈ ಬದಲಾವಣೆಗಳ ಹಿಂದೆ ಕಾರ್ಯನಿರ್ವಹಿಸುತ್ತಿರುವ ವರ್ಗ ಯಾವುದು? ಡೊಳ್ಳಿನ ಹಾಡುಗಳು ಈ ವೈಧಾನಿಕತೆಯನ್ನು ಏಕೆ ಸ್ವೀಕಾರ ಮಾಡುತ್ತಿವೆ? ಈ ಪರಿಕಲ್ಪನೆ ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ಚರಿತ್ರೆಯ ಮೇಲೆ ಯಾವ ಪರಿಣಾಮ ಬೀರುತ್ತಲಿದೆ?. ಹಾಲುಮತ ಮತ್ತು ಶೀಲಮತಗಳು ವಾದಕ್ಕೆ ಅನುಗುಣವಾಗಿ ದೈವಗಳನ್ನು ಹೇಗೆ ವರ್ಗೀಕರಿಸಿಕೊಂಡಿದ್ದಾರೆ? ಈ ವಿಧಾನಕ್ಕೆ ಅನುಸರಿಸುತ್ತಿರುವ ನಿಯಮಗಳು ಯಾವುವು? ಇದರಿಂದ ಹಾಲುಮತ ಸಮುದಾಯದ 'ಸಮಷ್ಟಿ ಸಂಸ್ಕೃತಿ' ಮೇಲೆ ಯಾವ ಪರಿಣಾಮ ಬೀರುತ್ತಿದೆ? ಈ ರೀತಿಯ ಅಭಿವ್ಯಕ್ತಿಕ್ರಮ ಆಚರಣೆ, ಹಬ್ಬ-ಉತ್ಸವಗಳ ಮೇಲೆ ಪರಿಣಾಮ ಬೀರಿದೆಯೇ? ಕೇಳುಗ ಸಮುದಾಯ ಹೇಗೆ ಸ್ವೀಕಾರ ಮಾಡಿದೆ? ಏಕೆ ಸ್ವೀಕಾರ ಮಾಡಿದೆ? ಈ ರೂಪ ಪಡೆಯುವುದಕ್ಕೆ ಇರಬಹುದಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಕಾರಣಗಳು ಯಾವುವು? ಇಂಥ ಹಲವು ಪ್ರಶ್ನೆಗಳು ಅಧ್ಯಯನಕಾರರನ್ನು ಕಾಡುತ್ತಿವೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಜರೂರತೆ ಇದೆ.

೬. ಇವತ್ತು ಡೊಳ್ಳಿನ ಹಾಡುಗಳ ಪ್ರದರ್ಶನ ಪಾರಂಪರಿಕ ಪ್ರದರ್ಶನದ ವ್ಯವಸ್ಥೆಯಲ್ಲಿ ಮಾತ್ರ ನಡೆಯುತ್ತಿಲ್ಲ. ಆಧುನಿಕ ಸಂವಹನ ಮಾಧ್ಯಮಗಳಲ್ಲೂ ನಡೆಯುತ್ತಿದೆ. ಡೊಳ್ಳಿನ ಹಾಡುಗಳ ಕ್ಷೇತ್ರದಲ್ಲಿ ಆಧುನಿಕ ಸಂವಹನ ಮಾಧ್ಯಮಗಳು (ಕ್ಯಾಸೆಟ್, ಸಿಡಿ, ಡಿವ್ಹಿಡಿಗಳು ಮಾತ್ರ) ಪ್ರದರ್ಶನದ ಹೊರಗಿನ ಪರಿಕರಗಳಾಗಿರದೆ, ಹಾಡುಗಾರರ ನಡುವೆ ಪ್ರದರ್ಶನದ ಸಂದರ್ಭವನ್ನು ಬೆಸೆಯುವ ಪರಿಕರಗಳಾಗಿವೆ. ಪಾರಂಪರಿಕ ಪ್ರದರ್ಶನದ ಜವಾಬ್ದಾರಿಯಂತೆ ಕಾರ್ಯನಿರ್ವಹಿಸುತ್ತಿವೆ. ಕಲಾವಿದರ ನಡುವಿನ ಸಂವಾದಕ್ಕೆ ವೇದಿಕೆಯಾಗಿವೆ. ಪ್ರದರ್ಶನದಲ್ಲಿ ನಡೆದ ಸಂವಾದ ಕ್ಯಾಸೆಟ್‌ನಲ್ಲಿ ಮುಂದುವರೆಯುತ್ತಿದೆ. ಕ್ಯಾಸೆಟ್‌ನಲ್ಲಿ ನಡೆದ ಸಂವಾದ ಪ್ರದರ್ಶನದಲ್ಲಿ ಮುಂದುವರೆಯುತ್ತದೆ. ಪ್ರದರ್ಶನಕ್ಕೂ ಆಧುನಿಕ ಸಮೂಹ ಸಂವಹನ ಮಾಧ್ಯಮಗಳ ನಡುವೆ ಸಾವಯವ ಸಂಬಂಧವಿರುವಂತೆ ಕಾಣಿಸುತ್ತದೆ. ಪ್ರಸ್ತುತ ಸಂದರ್ಭವನ್ನು ಗಮನಿಸಿದರೆ ಹಾಡುಗಳು ಈ ಕಾಲದಲ್ಲಿ ಕೇಳುಗ ಸಮುದಾಯದ ಜೀವನ ವಿಧಾನದ ಅಂಗವಾಗಿ ಮಿಲನಗೊಳಿಸಿಕೊಂಡಂತಿದೆ. ಇದರಿಂದ ಪ್ರದರ್ಶನಗಳಲ್ಲಿ ಹಲವು ಬದಲಾವಣೆಗಳಾಗಿವೆ. ಜಾನಪದ ವಿದ್ವಾಂಸರು ಈ ವಾಸ್ತವ ಸ್ಥಿತಿಯನ್ನು ಅರಿಯದೆ, ಕ್ಷೇತ್ರದ ಹೊರಗಡೆ ನಿಂತು ಆಧುನಿಕ ಸಮೂಹ ಮಾಧ್ಯಮಗಳು ಜಾನಪದವನ್ನು ನುಂಗಿ ಹಾಕುತ್ತಿವೆ ಎನ್ನುವ ಆತಂಕವನ್ನು ಮಾತ್ರ ವ್ಯಕ್ತಪಡಿಸುತ್ತಿದ್ದಾರೆ. ಈ ಆತಂಕದ ಜೊತೆಗೆ ಆಧುನಿಕ ಸಂವಹನ ಮಾಧ್ಯಮಗಳ ಪರಿಧಿಯೊಳಗಡೆ ಅಭಿವ್ಯಕ್ತಿಗೊಂಡ ಹಾಡುಗಳನ್ನು FAKE ಎಂದು ಗ್ರಹಿಸುವ ಪರಂಪರೆ ಕನ್ನಡ ಜಾನಪದದಲ್ಲಿದೆ. ಈ ಗ್ರಹಿಕೆ ಅಪಾಯಕಾರಿಯಾದದ್ದು. ವರ್ತಮಾನದ ಜೊತೆ ಮುಖಾಮುಖಿಯಾಗಲು ಬಿಡುವುದಿಲ್ಲ. ಡೊಳ್ಳಿನ ಹಾಡುಗಳ ಇತ್ತೀಚಿನ ಬೆಳವಣಿಗೆಗಳನ್ನು ಅಧ್ಯಯನ ಶಿಸ್ತಿಗೆ ಒಳಪಡಿಸದಿರುವುದು 'ಏಕಮುಖಚಿಂತನೆ'ಯಾಗಿ ಬಿಡುತ್ತದೆ. ಇದರಿಂದ ಅಧ್ಯಯನದಲ್ಲಿ ಹಲವು ತೊಡಕುಗಳು ಉಂಟಾಗಿ

ವಸ್ತು ವಿಶ್ಲೇಷಣೆಗಳ ನಡುವೆ ಅಂತರಗಳು ಸೃಷ್ಟಿಯಾಗುತ್ತವೆ. ಇತ್ತೀಚಿಗೆ ನಡೆದ ಅಧ್ಯಯನಗಳಲ್ಲೂ ಈ ಅಂತರ ಹೆಚ್ಚಾಗಿ ಕಾಣಿಸುತ್ತದೆ. ವಸ್ತುವಿಶ್ಲೇಷಣೆಯ ನಡುವೆ ಸಂಬಂಧವಿಲ್ಲದಂತಾಗಿದೆ. ಹಾಗಾಗಿ ಇವತ್ತಿನ ಹಾಡುಗಳನ್ನು ಅಧ್ಯಯನದ ಪರಿಧಿಯೊಳಗಡೆ ಸೇರಿಸಿಕೊಳ್ಳಬೇಕು. ಈ ಪರಿಕಲ್ಪನೆಯಲ್ಲಿ ಈ ಡೊಳ್ಳಿನ ಹಾಡುಗಳನ್ನು 'ಬಹುಶಿಸ್ತೀಯ ಸಾಂಸ್ಕೃತಿಕ ನೆಲೆ'ಯಲ್ಲಿ ವಿಶ್ಲೇಷಣೆ ಮಾಡಬೇಕಾಗಿದೆ. ಈ ವಿಧಾನವನ್ನು ಅನುಸರಿಸಿದಾಗ ಮಾತ್ರ ಕಲಾವಿದರ ಎಲ್ಲಾ ಕಾಲದ ಅಭಿವ್ಯಕ್ತಿಯನ್ನು ಅಧ್ಯಯನದ ಶಿಸ್ತಿಗೆ ಒಳಪಡಿಸಿದಂತಾಗುತ್ತದೆ. ಎಲ್ಲಾ ಕಾಲದ ಪ್ರಭುತ್ವ ಮತ್ತು ಯಜಮಾನಿಕೆಯನ್ನು ಅರಿಯಲು ಸಾಧ್ಯವಾಗುತ್ತದೆ. ಹಾಗಾಗಿ ಪಾರಂಪರಿಕ ಹಾಡುಗಳೊಂದಿಗೆ ಇವತ್ತಿನ ಆಧುನಿಕ ಸಂವಹನ ಮಾಧ್ಯಮ ಗಳಲ್ಲಿ ಅಭಿವ್ಯಕ್ತಿಗೊಂಡಿರುವ ಹಾಡುಗಳನ್ನು ಸೇರಿಸಿಕೊಂಡು ವಿಶ್ಲೇಷಣೆ ಮಾಡಲಾಗುವುದು.

೭. ಹಾಲುಮತ ಸಮುದಾಯ ಶೈವ; ಸಿದ್ಧ ಪಂಥಕ್ಕೆ ಸೇರಿರುವಂತದ್ದು. ಸೋಮ, ಭೈರ, ಲಾಕುಳ, ಕಾಳಮುಖ, ಕಾಪಾಲಿಕ, ಶಾಕ್ತ, ಕಾಳ, ಪಾಶುಪಾತ, ನಾಥ ಮುಂತಾದ ಪಂಥಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ. ವೀರಶೈವ, ವೈಷ್ಣವ, ಬೌದ್ಧ, ಜೈನ ಮತ್ತು ಮುಸ್ಲಿಂ ಧರ್ಮಗಳೊಂದಿಗೆ ಸಂಘರ್ಷ ಮತ್ತು ಹೊಂದಾಣಿಕೆ ಮಾಡಿಕೊಂಡ ಚಿತ್ರಗಳು ಹಾಲುಮತ ಸಂಸ್ಕೃತಿಯಲ್ಲಿಯೇ ಸಿಗುತ್ತವೆ. ಈ ಸಮುದಾಯದಲ್ಲಿ ಶಿವ ಮತ್ತು ಅವನ ಬೇರೆ ಬೇರೆ ರೂಪಕಗಳು ಶಿವನ ಮಡದಿ ಪಾರ್ವತಿ ಆಕೆಯ ತಾಮಸ ರೂಪಕಗಳೆನಿಸಿರುವ ಮಾರಿ, ಚೌಡಿ, ಯಲ್ಲಮ್ಮ, ಓರಗಲ್ಲಮ್ಮ, ಮಾಯಮ್ಮ ಮುಂತಾದ ದೈವಗಳು ಪ್ರಧಾನ ನೆಲೆಯಲ್ಲಿ ಆರಾಧನೆಗೊಳಗಾಗುತ್ತಿವೆ. ಪುರುಷ ಮತ್ತು ಸ್ತ್ರೀ ದೈವಗಳೊಂದಿಗೆ, ಸ್ತ್ರೀ ದೈವಗಳು ಪುರುಷ ದೈವಗಳೊಂದಿಗೆ ಸಂಘರ್ಷ ಮಾಡಿದ ಕಥನಗಳು ಇವೆ. ಈ ಕಥನಗಳು ಪಿತೃಪ್ರಧಾನ ವ್ಯವಸ್ಥೆಯೊಂದಿಗೆ ಮಾತೃಪ್ರಧಾನ ವ್ಯವಸ್ಥೆ, ಮಾತೃಪ್ರಧಾನ ವ್ಯವಸ್ಥೆಯೊಂದಿಗೆ ಪಿತೃಪ್ರಧಾನ ವ್ಯವಸ್ಥೆ ಹೋರಾಟ ಮಾಡಿರುವ ಅಂಶಗಳನ್ನು ಅನಾವರಣಗೊಳಿಸುತ್ತವೆ. ಒಂದೊಂದು ದೈವಗಳೂ ಭಿನ್ನ ಭಿನ್ನ ರೂಪಗಳನ್ನು ತಾಳಿವೆ. ಒಂದೇ ಸ್ಥಳದಲ್ಲಿ ಎರಡು ದೈವಗಳು ಆರಾಧನೆಗೆ ಒಳಗಾಗುತ್ತಿವೆ. 'ಆಹಾರಸಂಸ್ಕೃತಿ'ಯ ಮೇಲೆ ಹಲವಾರು ರಾಜಕಾರಣಗಳು ನಡೆದಿವೆ. ಇಲ್ಲಿ ಪುರುಷದೈವ ಮಾಂಸವನ್ನು ನಿರಾಕರಣೆ ಮಾಡಿದರೆ ಸ್ತ್ರೀದೈವ ಮಾಂಸವನ್ನು ಬೇಡುತ್ತದೆ. ಅಲ್ಲದೇ ಒಮ್ಮೊಮ್ಮೆ ಕೆಲವು ದೈವಗಳು ಸಸ್ಯಹಾರಿಯಾದರೆ ಮತ್ತೊಂದು ಸಂದರ್ಭದಲ್ಲಿ ಮಾಂಸಹಾರಿಯಾಗಿ ಬಿಡುತ್ತವೆ. ಇಲ್ಲಿ ಮಾಂಸದ 'ನಿರಾಕರಣೆ' ಮತ್ತು 'ಸ್ವೀಕಾರ' ಎರಡು ನಡೆದಿದೆ. ಹಿಂದೆ ಸಮುದಾಯದ ಸಂಸ್ಕೃತಿಯಲ್ಲಿ ನರಬಲಿ ಕೊಡುವ ಪದ್ಧತಿ ಇತ್ತೆಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಹಲವು ಸಮುದಾಯಗಳ ನಾಯಕರನ್ನು ಬಲಿಕೊಟ್ಟ ಚಿತ್ರಣಗಳು ಜನಪದ ಹಾಲುಮತ ಮಹಾಕಾವ್ಯದಲ್ಲಿವೆ. ಸಂಘರ್ಷ ಮತ್ತು ಹೊಂದಾಣಿಕೆಯ ಹಿಂದಿನ ತಾತ್ವಿಕ ಧೋರಣೆಯನ್ನು ಅರಿಯಬೇಕು. ಈ ಸಂಸ್ಕೃತಿ ರೂಪಗೊಂಡ ಕಾರಣವನ್ನು ತಿಳಿಯಬೇಕು. ಈ ನೆಲೆಯಲ್ಲಿ ಡೊಳ್ಳಿನ ಹಾಡುಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡಬೇಕಾಗಿದೆ. ಇದರಿಂದ ಈ ಸಮುದಾಯ ಕಾಲಾನುಘಟ್ಟ ದಲ್ಲಿ ಹೇಗೆ ಸಂಸ್ಕೃತೀಕರಣಕ್ಕೆ ಒಳಗಾಗುತ್ತ ಬಂತು ಅನ್ನುವುದನ್ನು ಗುರುತಿಸುವುದಕ್ಕೆ ಸಾಧ್ಯ.

೮. ಜಾನಪದ ಅಧ್ಯಯನದಲ್ಲಿ 'ಲೋಕದೃಷ್ಟಿ' ಕುರಿತು ತಿಳುವಳಿಕೆ ಜಾನಪದದ ಅರ್ಥವನ್ನು ಒಗ್ಗಿಸುತ್ತಿದೆ. ಪ್ರಸ್ತುತದಲ್ಲಿ ಜಾನಪದದ ಕಾರ್ಯ ಮತ್ತು ಅರ್ಥವನ್ನು ಗ್ರಹಿಸುವುದಕ್ಕೆ ಇರುವ

ಬಹುಮುಖ್ಯವಾದ ಪರಿಕಲ್ಪನೆ ಇದು. ಡೊಳ್ಳಿನ ಹಾಡುಗಳು ತಮ್ಮದೆ ಆದ ಲೋಕದ ತಿಳುವಳಿಕೆಯನ್ನು ಕಟ್ಟಿಕೊಂಡಿವೆ. ಈ ಹಾಡುಗಳಲ್ಲಿರುವ 'ಲೋಕದೃಷ್ಟಿ'ಯನ್ನು ಈತನಕದ ಅಧ್ಯಯನಗಳು ಗುರುತಿಸಿಲ್ಲ. ಈ ಹಾಡುಗಳಲ್ಲಿನ ಲೋಕದೃಷ್ಟಿಯನ್ನು ಅಧ್ಯಯನ ಮಾಡುವುದೆಂದರೆ ಇವತ್ತಿನ ಹಲವು ಸಮುದಾಯಗಳು ಕಟ್ಟಿಕೊಂಡಿರುವ ಲೋಕದೃಷ್ಟಿಯನ್ನು ಅಧ್ಯಯನ ಮಾಡಿದಂತೆ. ಹಾಗಾಗಿ ಈ ಹಾಡುಗಳ 'ಲೋಕದೃಷ್ಟಿ' ಯನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದು.

೧.೩. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

ಅಧ್ಯಯನದ ವಿಧಾನಗಳು ಸಿದ್ಧ ಸೂತ್ರಗಳಲ್ಲ. ಪ್ರತಿಯೊಂದು ಅಧ್ಯಯನವು ತನ್ನದೇ ಆದ ವಿಧಾನವನ್ನು ರೂಪಿಸಿಕೊಳ್ಳಲು ಅಧ್ಯಯನದ ವಸ್ತುವೇ ಪ್ರೇರೇಪಿಸುತ್ತದೆ. ಇದು ಅಧ್ಯಯನಕ್ಕೆ ಬೌದ್ಧಿಕ ಶಿಸ್ತು ಮತ್ತು ಚೌಕಟ್ಟನ್ನು ಒದಗಿಸುತ್ತದೆ. ಹಾಗೂ ಅಧ್ಯಯನವು ಸಿದ್ಧಗೊಳಿಸುವ ವಿಶ್ಲೇಷಣಾತ್ಮಕ ಸಮರ್ಥನೆಯ ನಕ್ಷೆಯಂತೆ ಕೆಲಸ ಮಾಡುತ್ತದೆ. ಹಾಗಾಗಿ ಪ್ರಸ್ತುತ ಅಧ್ಯಯನವು ತನ್ನದೇಯಾದ ವಿಧಾನವನ್ನು ರೂಪಿಸಿಕೊಂಡಿದೆ.

ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಸ್ವರೂಪವನ್ನು ವಿಶ್ಲೇಷಿಸುವುದು ಇಲ್ಲಿನ ಪ್ರಧಾನವಾದ ಆಶಯ. ಹಾಗೆಂದು ಕೇವಲ ಡೊಳ್ಳಿನ ಹಾಡುಗಳಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಚಹರೆಯನ್ನು ಗುರುತಿಸುವುದಿಲ್ಲ. ಹಾಗೆ ಗುರುತಿಸಿದರೆ ಏಕಮುಖಿ ಅಧ್ಯಯನವಾಗುತ್ತದೆ. ಹಾಗಾಗಿ ಹಾಡುಗಳ ಭಿನ್ನ ಸ್ವರೂಪಗಳನ್ನು ಹಾಡುಗಳೇತರ ಇತರೆ ಆಕರಗಳ ನೆರವಿನಿಂದ ನೋಡಲಾಗುವುದು. ಅಂದರೆ ಹಾಲುಮತ ಸಮುದಾಯದ ಜೀವನ ವಿಧಾನವನ್ನು, ನಂಬಿಕೆಗಳನ್ನು, ಆಚರಣೆಗಳನ್ನು, ಸಂಪ್ರದಾಯಗಳನ್ನು, ಜಾತ್ರೆ-ಉತ್ಸವಗಳನ್ನು ಹಾಗೂ ಲಿಖಿತ ಆಧಾರಗಳನ್ನು ಬಳಸಿಕೊಳ್ಳಲಾಗಿದೆ. ಲಿಖಿತ ಆಧಾರಗಳಲ್ಲಿ ಹಾಲುಮತ ಪುರಾಣಗಳನ್ನು ಮತ್ತು ಹಾಲುಮತದ ಸಾಂಸ್ಕೃತಿಕ ವೀರರ ಬಗ್ಗೆ ರಚನೆಯಾದ ಕೃತಿಗಳನ್ನು ಪ್ರಧಾನ ಆಕರಗಳೆಂದು ಪರಿಗಣಿಸಲಾಗಿದೆ.

ಹಾಡುಗಳ ವಿಶ್ಲೇಷಣೆಗೆ ಪ್ರಕಟಿತ ಹಾಗೂ ಅಪ್ರಕಟಿತ ಡೊಳ್ಳಿನ ಹಾಡುಗಳನ್ನು ಬಳಸಿಕೊಳ್ಳ ಲಾಗಿದೆ. ಜೊತೆಗೆ ಹಾಡುಗಳ ಪ್ರದರ್ಶನಗೊಳ್ಳುವ ಸಂದರ್ಭಗಳನ್ನು ಬಳಸಿಕೊಳ್ಳಲಾಗಿದೆ. ಏಕೆಂದರೆ ಮೌಖಿಕ ಪಠ್ಯಕ್ಕೆ ಅಸ್ತಿತ್ವ ಇರುವುದೇ ಪ್ರದರ್ಶನದಲ್ಲಿ ಎಂಬ ನಿಲುವನ್ನು ಪ್ರದರ್ಶನ ಸಿದ್ಧಾಂತ ಹೊಂದಿದೆ. ಪ್ರದರ್ಶನ ಮತ್ತು ಸಂದರ್ಭಗಳು ಪಠ್ಯದ ಅರ್ಥವನ್ನು ನಿಗದಿಪಡಿಸುತ್ತವೆ ಎಂಬುದು ಸಂದರ್ಭ ಸಿದ್ಧಾಂತದ ನಿಲುವು. ಈ ನಿಲುವುಗಳನ್ನು ಆಧಾರವಾಗಿಟ್ಟುಕೊಂಡು ಡೊಳ್ಳಿನ ಹಾಡುಗಳನ್ನು ವಿಶ್ಲೇಷಿಸಲಾಗಿದೆ. ಹಾಡುಗಳ ವಸ್ತುವನ್ನು ಆಧರಿಸಿ ಹಾಡುಗಳನ್ನು ವರ್ಗೀಕರಿಸಲಾಗಿದೆ. ಆಯಾ ವರ್ಗೀಕರಣದ ವಸ್ತುವಿಗೆ ಸಂಬಂಧಪಟ್ಟಂತೆ ಹಾಡುಗಳನ್ನು ಬಳಸಿಕೊಳ್ಳಲಾಗಿದೆ. ಸಾಂಸ್ಕೃತಿಕ ವೀರರ ಅಧ್ಯಯನಕ್ಕೆ, ಸಾಂಸ್ಕೃತಿಕ ವೀರರು ನೆಲೆಸಿದ್ದ ಸ್ಥಳಗಳಿಗೆ ಮತ್ತು ಆ ದೈವಗಳ ತಾಣಗಳಿಗೆ ಭೇಟಿ ಕೊಡಲಾಗಿದೆ. ಅಲ್ಲಿನ ಕಥನಗಳನ್ನು, ಐತಿಹ್ಯಗಳನ್ನು, ಪೂಜಾ ವಿಧಾನಗಳನ್ನು, ಇತರ ಸಂಕೇತಗಳನ್ನು ಹಾಗೂ ಭೌಗೋಳಿಕ ಪರಿಸರವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಆಚರಣೆ-ಉತ್ಸವಗಳನ್ನು ಪ್ರಧಾನವಾಗಿ ಬಳಸಿಕೊಳ್ಳಲಾಗಿದೆ. ಆ ದೈವಗಳ ತಾಣಗಳಲ್ಲಿ ಆಚರಣೆಗಳು ಇಂದಿಗೂ ಜೀವಂತವಾಗಿರು

ವುದರಿಂದ ವಿವಿಧ ಪಠ್ಯಗಳು ಅಸ್ತಿತ್ವದಲ್ಲಿವೆ. ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಮತ್ತು ವ್ಯಕ್ತಿಗಳ ಜೊತೆಗೆ ಮುಕ್ತ ಸಂವಾದ ರೂಪದ ಸಂದರ್ಶನವನ್ನು ನಡೆಸಿ ಬಂದ ಮಾಹಿತಿಯಿಂದ ಹಾಡುಗಳನ್ನು ವಿಶ್ಲೇಷಿಸಿಸುವ ಮೂಲಕ ಈ ಅಧ್ಯಯನ ಕೇವಲ ಡೊಳ್ಳಿನ ಹಾಡುಗಳ ಸಾರಾಂಶದ ಅಧ್ಯಯನವಾಗುವ ಅಪಾಯವನ್ನು ಮೀರಿಲೆತ್ನಿಸಲಾಗಿದೆ. ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದೀಯ ಮತ್ತು ಸಮಾಜ ಶಾಸ್ತ್ರೀಯ ಅಧ್ಯಯನ ವಿಧಾನಗಳು ಒಳಗೊಳ್ಳುವುದರಿಂದ ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಅಂತರಶಿಸ್ತೀಯ ಅಧ್ಯಯನ ಕ್ರಮವನ್ನು ಅನುಸರಿಸಲಾಗುತ್ತದೆ.

ಅಧ್ಯಯನದ ವ್ಯಾಪ್ತಿ

ಅಧ್ಯಯನದ ವ್ಯಾಪ್ತಿ ಎಂದರೆ 'ಅಧ್ಯಯನದ ಚೌಕಟ್ಟು' ಎಂದರ್ಥ. ಒಂದು ಸೈದ್ಧಾಂತಿಕ ಅಧ್ಯಯನಕ್ಕೆ ನಿರ್ದಿಷ್ಟವಾದ ಚೌಕಟ್ಟು ಬಹಳ ಮುಖ್ಯ. ನಿರ್ದಿಷ್ಟವಾದ ಚೌಕಟ್ಟು ಇದ್ದಾಗ ಮಾತ್ರ ನಿಶ್ಚಿತವಾದ ಫಲಿತಗಳನ್ನು ಕಂಡುಕೊಳ್ಳುವುದಕ್ಕೆ ಸಾಧ್ಯ. ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಹೊಂದಿದೆ. ಏಕೆಂದರೆ ಡೊಳ್ಳಿನ ಹಾಡುಗಳ ಕ್ಷೇತ್ರ ತುಂಬಾ ವಿಶಾಲವಾದದ್ದು. ಸುಮಾರು ಹತ್ತು-ಹನ್ನೆರಡು ಮಹಾಕಾವ್ಯಗಳಾಗುವಷ್ಟು ಹಾಡುಗಳು ಸಿಗುತ್ತವೆ. ಉತ್ತರ ಕರ್ನಾಟಕದಲ್ಲಿ ಸುಮಾರು ಮುನ್ನೂರ ಐವತ್ತಕ್ಕೂ ಹೆಚ್ಚು ಡೊಳ್ಳಿನ ಹಾಡನ್ನು ಹಾಡುವ ತಂಡಗಳಿವೆ. ಸಾವಿರಾರು ಕಲಾವಿದರು ಹಾಡುತ್ತಿದ್ದಾರೆ. ಇದರಲ್ಲಿ ಸುಮಾರು ಐದು ವರ್ಷದ ಕಲಾವಿದರಿಂದ ಹಿಡಿದು ೮೦-೮೫ ವರ್ಷದ ಕಲಾವಿದರು ಸೇರಿದ್ದಾರೆ. ಹಾಗಾಗಿ ಈ ಅಧ್ಯಯನಕ್ಕೊಂದು ಚೌಕಟ್ಟು ಅನಿವಾರ್ಯ. ಪ್ರಸ್ತುತ ಅಧ್ಯಯನವನ್ನು ಕಲಾವಿದರ ಆಯ್ಕೆಯ ವ್ಯಾಪ್ತಿ, ಹಾಡುಗಳ ಆಯ್ಕೆಯ ವ್ಯಾಪ್ತಿ, ಪ್ರಾದೇಶಿಕ ಭಾಷೆಯ ವ್ಯಾಪ್ತಿ, ಆಯ್ದು ಕಟ್ಟುವ ವ್ಯಾಪ್ತಿ ಎನ್ನುವ ವರ್ಗೀಕರಣದ ವಿಧಾನದಲ್ಲಿ ಅಧ್ಯಯನ ನಡೆಸಲಾಗುವುದು.

ಕಲಾವಿದರ ಆಯ್ಕೆಯ ವ್ಯಾಪ್ತಿ : ಈ ಅಧ್ಯಯನಕ್ಕೆ ಕೇವಲ ಮೂವತ್ತೆರಡು ಕಲಾವಿದರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಮೊದಲ ಗುಂಪಿನಲ್ಲಿ ಎಂಟು ಜನ ಮಾರ್ಗ ಸಾಹಿತ್ಯವನ್ನು ಹಾಡುವ ಕಲಾವಿದರಿದ್ದಾರೆ. ಇವರು ವಯಸ್ಸು ಅರವತ್ತೈದಕ್ಕಿಂತ ಹೆಚ್ಚು. ಈ ಗುಂಪಿನಲ್ಲಿ 'ಜನಪದ ಹಾಲುಮತ ಮಹಾಕಾವ್ಯ' ಮತ್ತು 'ಮಾಳಿಂಗರಾಯನ ಕಾವ್ಯ'ವನ್ನು ಹಾಡಿರುವ ಕಲಾವಿದರು ಸೇರಿದ್ದಾರೆ. ಇವರು ಹಿರಿಯ ತಲೆಮಾರಿನ ಕಲಾವಿದರು. ಇವರಿಗೆ ಪಂಥಗಳ ಪರಿಕಲ್ಪನೆ ಇಲ್ಲ. ಎರಡನೆಯ ಗುಂಪಿನಲ್ಲಿ ಆರು ಜನ ಕಲಾವಿದರಿದ್ದಾರೆ. ಇದರಲ್ಲಿ ನಾಲ್ಕು ಜನ ಪುರುಷರು ಇಬ್ಬರು ಮಹಿಳೆಯರು ಸೇರಿದ್ದಾರೆ. ವಯಸ್ಸು ಮೂವತ್ತೈದರಿಂದ ಅರವತ್ತರ ಮಧ್ಯ ವಯಸ್ಸಿಗೆ ಸೇರಿದವರು. ಇವರು ವೃತ್ತಿ ಕಲಾವಿದರು. ಆಧುನಿಕ ಸಮೂಹ ಸಂವಹನ ಮಾಧ್ಯಮಗಳಿಗೆ ಹಾಡುತ್ತಾರೆ. ಇವರು 'ಮಾರ್ಗಸಾಹಿತ್ಯ' ಮತ್ತು 'ಖ್ಯಾಲಿಸಾಹಿತ್ಯ'ವನ್ನು ರೂಢಿಗತ ಮಾಡಿಕೊಂಡಿದ್ದಾರೆ. ಇವರಲ್ಲಿ ಕೆಲವರು ಹಾಡುಗಳನ್ನು ಬರೆದು ಹಾಡುತ್ತಾರೆ ಮತ್ತು ಯುವ ಕಲಾವಿದರಿಗೆ ಬರೆದುಕೊಡುತ್ತಾರೆ. ಮತ್ತೆ ಕೆಲವರು ವಿದ್ಯಾವಂತರಿಂದ ಬರೆಯಿಸಿಕೊಂಡು ಹಾಡುತ್ತಾರೆ. ಇವರಲ್ಲಿ ಪಂಥಗಳ ಭೇದವಿದೆ. ಇವರು 'ದೇಶಿ', 'ಆಧುನಿಕತೆ'ಯ ಸಂಕರಶೀಲ ಕಾಲಘಟ್ಟದ ತಲೆಮಾರಿನವರಾಗಿ ಕಾಣಿಸುತ್ತಾರೆ. ಮೂರನೆಯ

ಗುಂಪಿನಲ್ಲಿ ಎಂಟು ಜನ ಯುವ ಕಲಾವಿದರಿದ್ದಾರೆ. ನಾಲ್ಕು ಹುಡುಗರು, ನಾಲ್ಕು ಹುಡುಗಿಯರು. ಇವರ ವಯಸ್ಸು ಹದಿನಾರರಿಂದ ಮೂವತ್ತರ ಆಸುಪಾಸು. ಇವರಲ್ಲಿ ಎರಡನೆಯ ತಲೆಮಾರಿನವರಂತೆ ಕೆಲವರು ಹಾಡುಗಳನ್ನು ರಚನೆ ಮಾಡಿಕೊಡುತ್ತಿದ್ದಾರೆ; ಹಾಡುತ್ತಿದ್ದಾರೆ. ನಾಲ್ಕನೆಯ ಗುಂಪಿನಲ್ಲಿ ಹತ್ತು ಜನ ಎಳೆಯ ಕಲಾವಿದರಿದ್ದಾರೆ. ಇವರ ವಯಸ್ಸು ಏಳರಿಂದ ಹದಿನಾಲ್ಕರ ಆಸುಪಾಸು. ನಾಲ್ವರು ಹುಡುಗರು, ನಾಲ್ವರು ಹುಡುಗಿಯರು ಇದ್ದಾರೆ. ಇವರಿಗೆ ಮಾರ್ಗಸಾಹಿತ್ಯದ ಅನುಭವ ಇಲ್ಲ. ಎರಡು ಮತ್ತು ಮೂರನೆಯ ತಲೆಮಾರಿನವರು ರಚನೆ ಮಾಡಿಕೊಟ್ಟ ಹಾಡುಗಳನ್ನು ಹಾಡುತ್ತಾರೆ. ಇದರಲ್ಲಿ ಜನಪ್ರಿಯ ಸಿನಿಮಾ ಶೈಲಿಯ ಹಾಡುಗಳೇ ಹೆಚ್ಚು (ಒಂದನೇ ಗುಂಪಿನವರನ್ನು ಹೊರತುಪಡಿಸಿ ಉಳಿದ ಗುಂಪಿನವರು ಈ ಸಿನಿಮಾ ಶೈಲಿಯ ಹಾಡುಗಳನ್ನು ಹಾಡುತ್ತಾರೆ). ಹಿರಿಯ ಕಲಾವಿದರನ್ನು ಬೈದು ಹಾಡುವುದು ಶ್ರೇಷ್ಠತೆ ಎನ್ನುವಂತಾಗಿದೆ. ಹಾಡುಗಳ ಜೊತೆ ಅಭಿನಯವೂ ಇರುತ್ತದೆ.

ಹೀಗೆ ನಾಲ್ಕು ತಲೆಮಾರಿನವರ ಕಲಾವಿದರನ್ನು ನಾಲ್ಕು ಗುಂಪುಗಳನ್ನಾಗಿ ವರ್ಗೀಕರಿಸಿಕೊಂಡು ಒಟ್ಟು ಮೂವತ್ತೆರಡು ಕಲಾವಿದರೊಂದಿಗೆ ಚರ್ಚೆ ಮಾಡಲಾಗಿದೆ. ಇದರಲ್ಲಿ ಹದಿನಾಲ್ಕು ಸಂಘಗಳು ಮಾತ್ರ ಸೇರಿವೆ.

ಹಾಡುಗಳ ಆಯ್ಕೆಯ ವ್ಯಾಪ್ತಿ : ಈಗಾಗಲೇ ಸಂಗ್ರಹವಾಗಿರುವ ಎಲ್ಲಾ ಹಾಡುಗಳನ್ನು ಗಮನಿಸಲಾಗಿದೆ. ಆದರೆ ಇಲ್ಲಿಯವರೆಗೆ ಬಂದಂತಹ ಎಲ್ಲಾ ಕ್ಯಾಸೆಟ್, ಸಿಡಿಗಳನ್ನು ಅಧ್ಯಯನದ ಶಿಸ್ತಿನೊಳಗೆ ತೆಗೆದುಕೊಂಡಿಲ್ಲ. ಎಲ್ಲಾ ಕ್ಯಾಸೆಟ್‌ಗಳನ್ನು ಗಮನಿಸಿಬೇಕಾದ ಅವಶ್ಯಕತೆಯಾಗಲಿ, ಅನಿವಾರ್ಯತೆಯಾಗಲಿ ಈ ಅಧ್ಯಯನಕ್ಕೆ ಇಲ್ಲ. ಏಕೆಂದರೆ ಕ್ಯಾಸೆಟ್‌ಗಳಿಗೆ ಹಾಡುಗಳನ್ನು ಬರೆದುಕೊಡುತ್ತಿರುವ ಕಲಾವಿದರ ವರ್ಗ ಚಿಕ್ಕದು. ಪ್ರಧಾನವಾಗಿ ಜಕ್ಕಣ್ಣ ಮಾಸ್ತರ್, ಸುರೇಶ್ ಕುಲಕರ್ಣಿ, ಇಂಡಿ ಜಟ್ಟೆಪ್ಪ, ಉಮದಿ ಮಾನಸಿದ್ಧ, ಅಗಸನಾಳ್ ಗುರುಲಿಂಗ, ಸಿದ್ಧೇಶ ಬಿಜ್ಜರಗಿ ಮುಂತಾದ ಏಳೆಂಟು ಜನರಿದ್ದಾರೆ. ಇವರಲ್ಲಿ ಎರಡು ಪಂಥಗಳಿವೆ. ೧. ಮಾಳಿಂಗರಾಯನ ಪಂಥ ೨. ಅಮೋಘಸಿದ್ಧನ ಪಂಥ. ಇವೆರಡು ಪಂಥದವರು ಒಂದು ಪಂಥವನ್ನು ವಿರೋಧಿಸಿ ಮತ್ತೊಂದು ಪಂಥದವರು ಹಾಡುಗಳನ್ನು ಹಾಡುತ್ತಾರೆ. ಇವೆರಡೂ ಪಂಥಗಳನ್ನು ಅಥವಾ ಬೈದು ಹಾಡುವ ಪದ್ಧತಿಯನ್ನು ವಿರೋಧಿಸಿ ಹಾಡುವ ತಂಡಗಳು ಇವೆ. ಈ ತಂಡಗಳು ಇತ್ತೀಚಿಗೆ ಆರಂಭವಾಗಿವೆ. ವೈಯಕ್ತಿಕವಾಗಿ ಬಡಿದಾಡಿ ಹಾಡುವುದನ್ನು ಬಿಟ್ಟು, ಡೊಳ್ಳಿನ ಹಾಡುಗಳ ಇದ್ದ ವಸ್ತುಸ್ಥಿತಿಯಲ್ಲಿಯೇ ಹಾಡಬೇಕು ಅನ್ನುವುದು ಇವರ ತತ್ವ ಮತ್ತು ವಾದ. ಇವರು ಪಾರಂಪರಿಕ ಶೈಲಿಯನ್ನೇ ಉಳಿಸಿಕೊಳ್ಳಬೇಕು ಅನ್ನುವ ಮನೋಭಾವದವರು. ಹೆಚ್ಚಾಗಿ ಮಕ್ಕಳ ತಂಡಗಳು ಪಂಥವನ್ನು ಕಟ್ಟಿಕೊಂಡು ಹಾಡುತ್ತಿದ್ದಾರೆ. ಇವರಿಗೆ ಒಂದು ಅನನ್ಯತೆ ಇಲ್ಲದಂತೆ ಕಂಡುಬಂದರೂ ತಮ್ಮದೇ ಆದ ವಿಶಿಷ್ಟ ಚಹರೆ ಇದೆ. ಈ ಮೂರು ಬಗೆಯ ವೈಧಾನಿಕತೆಯನ್ನು ಮುನ್ನೆಡೆಸಿಕೊಂಡು ಹೋಗುತ್ತಿರುವ ಮುಂಚೂಣಿಯ ನಾಯಕರು ಕೇವಲ ಎಂಟು-ಹತ್ತು ಜನರು ಮಾತ್ರ. ಅವರ ಮಾರ್ಗದರ್ಶನದಂತೆ, ಅವರು ಹುಟ್ಟುಹಾಕುವ ಚರ್ಚೆಯಂತೆ; ವಾದದಂತೆ, ಉಳಿದ ಹಾಡುಗಾರರು ಮುಂದುವರಿಸಿಕೊಂಡು ಅಥವಾ

ಬೆಳೆಸಿಕೊಂಡು ಹೋಗುತ್ತಾರೆ. ಈ ಒಬ್ಬೊಬ್ಬ ಕಲಾವಿದರು ನಲವತ್ತು-ಐವತ್ತು ತಂಡಗಳಿಗೆ ಹಾಡುಗಳನ್ನು ಕಲಿಸಿದ್ದಾರೆ ಮತ್ತು ಹಾಡುಗಳನ್ನು ಬರೆದುಕೊಡುತ್ತಿದ್ದಾರೆ. ಹಾಗಾಗಿ ಮುಂಚೂಣಿ ನಾಯಕರ ಹಾಡುಗಳನ್ನು ಮಾತ್ರ ಪ್ರಧಾನವಾಗಿ ಗಮನಿಸಲಾಗಿದೆ. ಉಳಿದವರನ್ನು ಪೂರಕವಾಗಿ ಗಮನಿಸಲಾಗಿದೆ. ಇದು ಸಮಗ್ರ ಹಾಡುಗಳ, ಸಮಗ್ರ ಕಲಾವಿದರ ಅಭಿವ್ಯಕ್ತಿಯ ಮಿತಿಯೂ ಹೌದು.

ಪ್ರಾದೇಶಿಕ, ಭಾಷಿಕ ವ್ಯಾಪ್ತಿ : ಈ ಅಧ್ಯಯನ ವಿಶೇಷವಾಗಿ ಹಾಲುಮತದ (ಡೊಳ್ಳಿನ ಹಾಡುಗಳ ಉಲ್ಲೇಖಿತ) ಸಾಂಸ್ಕೃತಿಕ ವೀರರ ಅಧ್ಯಯನ ಪ್ರಧಾನವಾಗಿ ಮೂರು ರಾಜ್ಯಗಳ ಮಹಾರಾಷ್ಟ್ರ-ಕರ್ನಾಟಕ-ಆಂಧ್ರಪ್ರದೇಶದ ಮಾಹಿತಿಯನ್ನು ಬಯಸುತ್ತದೆ. ಆದರೆ ಇಲ್ಲಿ ಕನ್ನಡದ ಡೊಳ್ಳಿನ ಹಾಡುಗಳನ್ನು, ಕನ್ನಡದ ಆಧಾರಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ತಕ್ಕಮಟ್ಟಿಗೆ ಹೊರರಾಜ್ಯದ ಕ್ಷೇತ್ರಕಾರ್ಯ ಮಾಡಲಾಗಿದೆ. ಈ ಅಧ್ಯಯನ ಬಯಸುವಷ್ಟು ಹೊರರಾಜ್ಯಗಳ ಕ್ಷೇತ್ರಕಾರ್ಯ ಮಾಡಿಲ್ಲ. ಇದು ಪ್ರಾದೇಶಿಕತೆ ಮತ್ತು ಭಾಷೆಯ ಮಿತಿಯೂ ಹೌದು.

ಆಯ್ದು ಕಟ್ಟುವ ವ್ಯಾಪ್ತಿ : ಈ ಅಧ್ಯಯನವನ್ನು ಸೈದ್ಧಾಂತಿಕವಾಗಿ ನಿರೂಪಿಸುವ ವಸ್ತು ಆಯ್ಕೆಯ ತಾತ್ವಿಕ ವಿಧಾನದಲ್ಲಿ ಕೆಲವು ಮಿತಿಗಳಿವೆ. ಪ್ರಮುಖ ಕಲಾವಿದರ ಹಾಡುಗಳ ಅಥವಾ ಪ್ರಮುಖ ಆಚರಣೆಯ ಸಂದರ್ಭದ ಹಾಡುಗಳು ಸಿಗದೆ ಇರಬಹುದು. ಇದಕ್ಕೆ ಸಂಶೋಧಕನ ಕ್ಷೇತ್ರಕಾರ್ಯದ ಮಿತಿ ಕಾರಣ. ಜೊತೆಗೆ ಸಂಗ್ರಹಣೆಯ ವೈಧಾನಿಕತೆ ಇದಕ್ಕಿದೆ. ಕ್ಷೇತ್ರಕಾರ್ಯ ಮಾಡುವಾಗ ಸಾಂಸ್ಕೃತಿಕ ವೀರರ ಬಗ್ಗೆ ಮಹಾಕಾವ್ಯಗಳನ್ನು ಹಾಡುವುದು ಗಮನಕ್ಕೆ ಬಂದಿದೆ. ಕಲಾವಿದರು ಹಾಡುತ್ತೇವೆಯೆಂದು ಒಪ್ಪಿಕೊಂಡರೂ ಅವನ್ನು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಇವು ಬೃಹತ್ ಪ್ರಮಾಣದ ಕಾವ್ಯಗಳು. ಪ್ರತ್ಯೇಕವಾದ ಮತ್ತು ದೀರ್ಘಕಾಲದ ಯೋಜನೆಯನ್ನು ಬಯಸುತ್ತವೆ. ಆದ್ದರಿಂದ ಸಂಪೂರ್ಣವಾದ ಹಾಡುಗಳ ಸಂಗ್ರಹಣೆಗೆ ಕೈಹಾಕದೆ, ಸಾರಾಂಶ ರೂಪದ ಕಥನವನ್ನು ಟಿಪ್ಪಣಿ ಮಾಡಿಕೊಳ್ಳಲಾಗಿದೆ. ಅಲ್ಲದೆ ಕೆಲವು ಬಿಡಿ ಹಾಡುಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಇದರಿಂದ ವಿಸ್ತಾರವಾದ, ಭಿನ್ನ ಪಠ್ಯಗಳು ಕಣ್ಮರೆಯಾಗಿ ತಾತ್ವಿಕ ಆಯಾಮಗಳು ಕೈತಪ್ಪಿ ಹೋಗಿವೆ. ಇದು ಸಂಶೋಧನೆಗೆ ಇರುವ ಮಿತಿಯೂ ಹೌದು.

೧.೪. ಆಕರ ಸಾಮಾಗ್ರಿ ಮತ್ತು ಈವರೆಗಿನ ಅಧ್ಯಯನಗಳು

ಇಲ್ಲಿಯವರೆಗೂ ಡೊಳ್ಳಿನ ಹಾಡುಗಳನ್ನು ಕುರಿತು ಗಂಭೀರವಾದ ಸಂಶೋಧನಾತ್ಮಕ ಅಧ್ಯಯನಗಳು ಆಗಿಲ್ಲ. ಆದರೆ ೧೯೫೦ರ ದಶಕದಿಂದಲೂ ಸಂಗ್ರಹಕಾರ್ಯ ನಡೆಯುತ್ತ ಬಂದಿದೆ. ಮಹಾಕಾವ್ಯಗಳು ಪ್ರಕಟವಾಗಿವೆ. ಬಿಡಿ ಬಿಡಿ ಲೇಖನಗಳು ಬಂದಿವೆ. ಅವುಗಳ ಸಮೀಕ್ಷೆ ಈ ಕೆಳಗಿನಂತಿವೆ.

ಡೊಳ್ಳಿನ ಹಾಡುಗಳನ್ನು ಸೈದ್ಧಾಂತಿಕ ವ್ಯವಸ್ಥೆಗೆ ಪರಿಚಯಿಸಿದ ಮೊದಲ ಕೀರ್ತಿ ಮಧುರಚೆನ್ನರಿಗೆ ಸಲ್ಲುತ್ತದೆ. "ಸುಮಾರು ಮೂರುಸಾವಿರ ನುಡಿಗಳನ್ನುಳ್ಳ ಬೀರಪ್ಪನ ಹಾಡುಗಳು ಎಂಬುದೊಂದು ಅರವತ್ತು ಸಂಧಿಗಳನ್ನೊಳಗೊಂಡ ರಸವತ್ತಾದ ಗ್ರಾಮಕಾವ್ಯ ಕುರುಬರಲ್ಲಿದೆ. ಇದನ್ನು ಆರು ರಚಿಸಿದರೋ ತಿಳಿಯದು. ಇಂದಿನವರೆಗೆ ಇದನ್ನು ಆರು ಬರೆಯಲಿಲ್ಲ, ಪರಂಪರಾಗತವಾಗಿಯೇ

ನಡೆದು ಬಂದಿದೆ" ಎಂದು ಬಿಜಾಪುರದಲ್ಲಿ ೧೯೩೩ರಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಳ್ಳಿಯ ಹಾಡುಗಳು ಶೀರ್ಷಿಕೆಯ ಪ್ರಬಂಧದಲ್ಲಿ ಮಂಡಿಸಿದ್ದಾರೆ. ಆದರೆ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿಲ್ಲ.

ಜನಸಾಮಾನ್ಯ ಓದುಗರ ಮನಸ್ಥಿತಿಯನ್ನಾಧರಿಸಿ ಮತ್ತು ಸಂತೆಗಳಂತಹ ಮಾರುಕಟ್ಟೆಗಳನ್ನಾಧರಿಸಿ ೧೯೫೦ರ ದಶಕದಲ್ಲಿ 'ಡೊಳ್ಳಿನಪದಗಳು' ಅನ್ನುವ ಶೀರ್ಷಿಕೆಯಲ್ಲಿ ಚಿಕ್ಕ ಚಿಕ್ಕ ಸಂಗ್ರಹಗಳು ಬಂದವು. ಈ ಸಂಗ್ರಹಗಳನ್ನು ಕರಡಿ ಬುಕ್ ಸೆಲ್ಲರ್, ಹುಬ್ಬಳ್ಳಿ ಮತ್ತು ಗದಗದ ಪ್ರಿಂಟಿಂಗ್ ಪ್ರೆಸ್‌ಗಳು ಹೆಚ್ಚಾಗಿ ಪ್ರಕಟ ಮಾಡಿವೆ. ಈ ಕೃತಿಗಳಿಗೆ ಸಂಗ್ರಹಗಾರರ ಹೆಸರುಗಳಿಲ್ಲ. ಹಾಡುಗಾರರ ಹೆಸರುಗಳು ಮತ್ತು ಪ್ರಕಟವಾದ ವರ್ಷಗಳು ಇಲ್ಲ. ಆದರೆ ಕೆಲವು ಕೃತಿಯಲ್ಲಿನ ಕೆಲವು ಹಾಡುಗಳಲ್ಲಿ ಕಲಾವಿದರು ತಮ್ಮ ಹೆಸರು ಮತ್ತು ಸ್ಥಳಗಳನ್ನು ಹೇಳಿಕೊಂಡಿರುವುದರಿಂದ ಕಲಾವಿದರನ್ನು ಮತ್ತು ಸ್ಥಳಗಳನ್ನು ಗುರುತಿಸಬಹುದು. ವ್ಯಾಪಾರದ ದೃಷ್ಟಿಯಿಂದ ಈ ಕೃತಿಗಳನ್ನು ಹೊರತಂದಿದ್ದಾರೆ. ಕೃತಿಗಳು ಜನಸಾಮಾನ್ಯರ ಆಸಕ್ತಿಯನ್ನು ಹೆಚ್ಚಿಸಿದವೇ ಹೊರತು ಸೈದ್ಧಾಂತಿಕ ವ್ಯವಸ್ಥೆಯೊಳಗೆ ಪ್ರವೇಶ ಪಡೆಯಲಿಲ್ಲ.

'ಕರ್ನಾಟಕ ಜನಪದ ಗೀತೆಗಳು' ಆರ್.ಎಸ್. ಪಂಚಮುಖಿ ಅವರ ಕೃತಿ (೧೯೫೩). ಇದು ಜನಪದ ಗೀತೆಗಳ ಸಂಗ್ರಹ. ಇದರಲ್ಲಿ ಆರು ಡೊಳ್ಳಿನ ಪದಗಳಿವೆ. ಹಂಜಗಿಮಠ (೧೯೫೯) ಅವರು 'ಡೊಳ್ಳಿನ ಪದಗಳು' (ಸಂ.) ಕೃತಿಯನ್ನು ಹೊರತಂದಿದ್ದಾರೆ. ಯಾವಾಗ ಪ್ರಕಟವಾಯಿತು ಅನ್ನುವುದಕ್ಕೆ ಆಧಾರಗಳಿಲ್ಲ. ಜ್ಯೋತಿ ಹೊಸೂರು ಅವರು (೧೯೫೯)ರಲ್ಲಿ ಪ್ರಕಟವಾಯಿತು ಎಂದು ನಮೂದಿಸಿದ್ದಾರೆ. ಇದು ಈ ಕೃತಿಯ ಮರುಮುದ್ರಣದ ವರ್ಷ ಆಗಿರಬೇಕು. ೧೯೫೯ಕ್ಕಿಂತ ಮುಂಚೆ ಪ್ರಕಟವಾಗಿದೆ. Karnataka Celcegs Dharwad Centrel Libraryಯಲ್ಲಿ ಈ ಕೃತಿ ಸಿಕ್ಕಿದೆ. ಕೃತಿಯ ಮೇಲೆ ಆ ಗ್ರಂಥಾಲಯದ ಶೀಲ್ ಹಾಕಲಾಗಿದೆ. ಅದರಲ್ಲಿ ೩೦.೧೦.೧೯೫೫ರ ದಿನಾಂಕವಿದೆ. ಹಾಗಾಗಿ ೧೯೫೫ಕ್ಕಿಂತ ಪೂರ್ವದಲ್ಲಿ ಪ್ರಕಟವಾಗಿಬೇಕು. ಇದು ದೀರ್ಘವಾದ ಒಂದು ಡೊಳ್ಳಿನ ಹಾಡಿನ ಕೃತಿ. ಈ ಹಾಡನ್ನು ೧೯ ಸಂಧಿಗಳಲ್ಲಿ ಹಾಡಲಾಗಿದೆ. ಬೀರಪ್ಪನ ಜೀವನ ಚರಿತ್ರೆಯನ್ನು ಪ್ರತಿಬಿಂಬಿಸುವ ದೀರ್ಘ ಹಾಡುಗಳಲ್ಲಿ ಇದೊಂದು. ೧೮ನೇ ಸಂಧಿಯ ಕೊನೆಯ ಭಾಗದಲ್ಲಿ 'ಗದುಗಿನ ಹುಡುಗರು ಡೊಳ್ಳಿನ ಮ್ಯಾಳದವರು' ಅನ್ನುವ ಸಾಲುಗಳು ಇರುವುದರಿಂದ ಈ ಹಾಡುಗಳನ್ನು ಗದುಗಿನ ಹುಡುಗರು ಹಾಡಿದ್ದಾರೆ ಎಂದು ಹೇಳಬಹುದು.

ವಿನಿತ ರಾಮಚಂದ್ರರಾಯರು (ಸಂ.) (೧೯೬೦) 'ಹಳ್ಳಿಯಹಾಡುಗಳು' ಅನ್ನುವ ಜಾನಪದ ಗೀತೆಗಳ ಸಂಕಲನವನ್ನು ತಂದರು. ಕುರುಬರ ಹಾಡುಗಳು ಅನ್ನುವ ಭಾಗವನ್ನು ಮಾಡಿ ಎರಡು ಹಾಡುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಒಂದು ಬೀರದೇವರ ಹಾಡು. ಈ ಹಾಡನ್ನು ಗಣೆಯವರಿಂದ ಸಂಗ್ರಹಿಸಿರಬೇಕು. ಇದು ಡೊಳ್ಳಿನ ಪದವಲ್ಲ. ಇನ್ನೊಂದು ಡೊಳ್ಳಿನ ಹಾಡು ಚೌಪದಿಲ್ಲಿದೆ. ಈ ಹಾಡಿನ ವಸ್ತು ಕುರುಬರ ಸಾಂಸ್ಕೃತಿಕ ಚಹರೆಯನ್ನು ಪ್ರತಿಬಿಂಬಿಸುತ್ತದೆ. ಸಿಂಪಿ ಲಿಂಗಣ್ಣ (೧೯೭೩-೭೪) ಅವರ 'ಡೊಳ್ಳಿನ ಹಾಡು' ಲೇಖನದಲ್ಲಿ ಆರಾಧ್ಯ ದೈವಗಳ ಸಾಂಸ್ಕೃತಿಕ ವಿಶ್ಲೇಷಣೆ ಇದೆ.

ದೈವಗಳನ್ನು ಸ್ಪಷ್ಟವಾಗಿ ಗುರುತಿಸುವಲ್ಲಿ ವಿಫಲವಾಗಿದ್ದಾರೆ. ಆದರೆ ಹಾಡುಗಳ ಸ್ವರೂಪ ಮತ್ತು ವೈಶಿಷ್ಟ್ಯವನ್ನು ಚರ್ಚಿಸಿದ್ದಾರೆ. ಕನ್ನಡ ವಿಶ್ವಕೋಶ-೯ರಲ್ಲಿ (೧೯೭೭) ಡೊಳ್ಳಿನ ಹಾಡುಗಳ ಸಣ್ಣ ಪರಿಚಯವಿದೆ.

ನಿಂಗಣ್ಣ ಸಣ್ಣಕ್ಕಿ ಮತ್ತು ಶಿವಲಿಂಗಪ್ಪ ಬಾವಿಕಟ್ಟಿ (೧೯೭೨) ಅವರು "ಜಾನಪದದಲ್ಲಿ ಅಂಕಲಗಿಯ ಅಡವೀಶ" ಎಂಬ ಕೃತಿ ಪ್ರಕಟಿಸಿದ್ದಾರೆ. ಅಡವೀಶ ಸ್ವಾಮಿಜೀಯನ್ನು ಕೇಂದ್ರವಾಗಿಟ್ಟು ಕೊಂಡು ರಚನೆಗೊಂಡಿರುವ ಜನಪದ ಗೀತೆಗಳ ಸಂಕಲನವಿದು. ಇದರಲ್ಲಿ ಐದು ಡೊಳ್ಳಿನ ಹಾಡು ಗಳಿವೆ. ಈ ಹಾಡುಗಳನ್ನು ಕಲಾವಿದರು ರಚನೆ ಮಾಡಿ ಹಾಡಿರಬೇಕು. ಇದರಿಂದ ೧೯೭೦ರ ದಶಕದ ವೇಳೆಗಾಗಲೇ ಸ್ಥಳೀಯ ದೈವಗಳನ್ನು ಆಧಾರವಾಗಿಟ್ಟುಕೊಂಡು ಹೇಗೆ ರಚನೆ ಮಾಡುತ್ತಿದ್ದರು ಅನ್ನುವ ದನ್ನು ತಿಳಿಯುವುದಕ್ಕೆ ಇದು ಸಹಾಯಕವಾಗುತ್ತದೆ. ಅಡವೀಶನ ಮೇಲೆ ಬೆಳಕು ಚೆಲ್ಲುವ ಮಹತ್ವದ ಹಾಡುಗಳು ಇವು. 'ಜನಪದ ಸಾಹಿತ್ಯ' ಕೆ. ವಿರೂಪಾಕ್ಷಗೌಡ, ಕಲ್ಲೇಶ ಇಟಗಿ ಮತ್ತು ಪಾಟೀಲ ಕರವೀರನಗೌಡ (ಸಂ) (೧೯೭೨) ಇವರ ಕೃತಿಯಲ್ಲಿ ಒಂದು ಡೊಳ್ಳಿನ ಹಾಡು ಇದೆ. ಇದು ಹರಕೆಯ ಹಾಡು. ಸಂಗ್ರಹವಾದ ಮೊದಲನೆ ಹರಕೆಯ ಹಾಡು ಇದು. ಈ ಹಾಡು ಹರಕೆಯ ಹಾಡಿನ ಮೇಲೆ ಬೆಳಕು ಚೆಲ್ಲಿತು. ಇದರಿಂದ ಪ್ರಭಾವಿತರಾಗಿ ಅನೇಕ ವಿದ್ವಾಂಸರು ಹರಕೆಯ ಹಾಡುಗಳನ್ನು ಸಂಗ್ರಹಿಸಿ ದರು. ಈ ಹಾಡು ವಿಶೇಷವಾಗಿ ಸ್ತ್ರೀದೈವದ ಹರಕೆಯ ಸಂದರ್ಭದಲ್ಲಿ ಹಾಡುವಂತದ್ದು. ಹರಕೆಯ ಹಾಡುಗಳ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತದೆ.

ಬಿ.ಬಿ. ಖಾಡೆ (೧೯೭೩) (ಸಂ.), ಅವರ 'ಕಾಡು ಹೂಗಳು' ಮಹತ್ವದ ಕೃತಿ. ಹಂತಿ, ಬೀಸುವ ಪದಗಳು, ಡೊಳ್ಳಿನ ಹಾಡುಗಳು ಮತ್ತು ಇತರ ಜಾನಪದ ಗೀತೆಗಳಿವೆ. ೬೩ ಸಂದುಗಳ ದೀರ್ಘವಾದ ಡೊಳ್ಳಿನ ಹಾಡು ಇದೆ. ಪ್ರಕಟವಾದ ಮೊದಲ ದೀರ್ಘವಾದ ಡೊಳ್ಳಿನ ಹಾಡು ಇದು. ಭೂತಾಳಸಿದ್ಧ, ರೇವಣಸಿದ್ಧ, ಬೀರಪ್ಪ, ಮಾಳಿಂಗರಾಯ ಮುಂತಾದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಮಹತ್ವದ ಹಾಡು ಇದಾಗಿದೆ. 'ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ' ಕೆ. ರುದ್ರಪ್ಪ ಅವರ ಕೃತಿ. ಈ ಕೃತಿಯಲ್ಲಿ ನಾಲ್ಕು ಡೊಳ್ಳಿನ ಹಾಡುಗಳಿವೆ. ಹಗರಿ ಬೊಮ್ಮನಹಳ್ಳಿ ಸೊನ್ನ ಗ್ರಾಮದ ದಿವಂಗತ ಹಮ್ಮಿಗಿ ಮುದಿಮಲ್ಲಪ್ಪ ಅವರಿಂದ ಹಾಡಿಸಲಾಗಿದೆ. ಮೈಲಾರಲಿಂಗನ ಮೇಲೆ ಹಾಡಿರುವ ಹಾಡು ಮಹತ್ವದ್ದಾಗಿದೆ. ಹುಲಕುಂದ ಭೀಮಕವಿಯ(೧೯೭೭) 'ಸರ್ವೋದಯ ಗ್ರಾಮೀಣ ಜನಪದ ಗೀತೆಗಳು' ಜಾನಪದ ಗೀತೆಗಳ ಸಂಕಲನ. ಇದರಲ್ಲಿ ಎರಡು ಡೊಳ್ಳಿನ ಹಾಡುಗಳಿವೆ. ಭೀಮಕವಿಯ ಸ್ವರಚಿತ ಹಾಡುಗಳು. ಮೌಖಿಕ ಪರಂಪರೆಯ ಹಾಡುಗಳಿಗೂ ಮತ್ತು ಲಿಖಿತ ಪರಂಪರೆಯ ಹಾಡುಗಳಿಗೂ ಇರುವ ವ್ಯತ್ಯಾಸವನ್ನು ಅಧ್ಯಯನ ಮಾಡುವುದಕ್ಕೆ ಸಹಾಯಕವಾಗುತ್ತವೆ.

ಕರ್ನಾಟಕ ವಿಶ್ವವಿದ್ಯಾಲಯದ ಜೀವನ ಜೋಕಾಲಿ ಮಾಲಿಕೆಯಡಿಯಲ್ಲಿ 'ಡೊಳ್ಳಿನ ಹಾಡುಗಳು' ಕೃತಿ ಬಂದಿದೆ. ಸಂ. ಎಂ.ಎಸ್. ಸುಂಕಾಪುರ (೧೯೭೬) ಅವರು ಈ ಹಾಡುಗಳನ್ನು ೧೯೭೪-೭೫ನೇ ಸಾಲಿನ ಎಂ.ಎ. ಜಾನಪದ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದಾರೆ. ೫೩ ಹಾಡುಗಳಿವೆ.

ಪ್ರಸ್ತಾವನೆ ಇದೆ. ಪ್ರಸ್ತಾವನೆಯನ್ನೊಳಗೊಂಡು ಪ್ರಕಟವಾದ ಮೊದಲ ಡೊಳ್ಳಿನ ಹಾಡುಗಳ ಸಂಕಲನವಿದು. ಪ್ರಸ್ತಾವನೆಯಲ್ಲಿ ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಚಹರೆಯನ್ನು ಮತ್ತು ಕುರುಬ ಸಮುದಾಯದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಪರಂಪರೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಜೀ.ಶಂ. ಪರಮಶಿವಯ್ಯ (೧೯೭೬) ಅವರ 'ರಾಯಚೂರು ಜಿಲ್ಲೆಯ ಜನಪದ ಗೀತೆಗಳು' ಕೃತಿಯಲ್ಲಿ ೧೩ ಹಾಡುಗಳಿವೆ. ಭರಮದೇವರು, ಬೀರಪ್ಪ, ದ್ಯಾಮವ್ವ ಮುಂತಾದ ಆರಾಧ್ಯ ದೈವಗಳ ಮೇಲೆ ಬೆಳಕು ಚೆಲ್ಲುವ ಮತ್ತು ರಾಮಾಯಣದ ಕಥನವನ್ನಾಧರಿಸಿದ ಹಾಡುಗಳು ಇವೆ. ಮಾರ್ಗಶೈಲಿಯಲ್ಲಿ ಹಾಡಿರುವ ಮಹತ್ವದ ಹಾಡುಗಳು ಇವು. 'ಜನಪದ ಗೀತಾಂಜಲಿ', ದೇಜಗೌ (೧೯೭೮)ರವರ ಕೃತಿಯಲ್ಲಿ ರೇವಣಸಿದ್ಧನ ಬಗ್ಗೆ ಒಂದು ಹಾಡು ಇದೆ. ಕೇವಲ ಡೊಳ್ಳು ಬಡಿಯುತ್ತ ಕುಣಿಯುವುದರಿಂದ ನಮಗೆ ಗೌರವ ಬರುವುದಿಲ್ಲ. ನಾವು ಹಾಡುಗಳನ್ನು ಹಾಡಬೇಕು. ನಮ್ಮ ಚರಿತ್ರೆಯನ್ನು ಅಭಿವ್ಯಕ್ತಗೊಳಿಸಬೇಕು ಅನ್ನುವ ಹಾಡಿನ ಉಲ್ಲೇಖ ಗಮನ ಸೆಳೆಯುತ್ತದೆ. ಕಲಾವಿದರು ಹಾಡುಗಳನ್ನು ಕಟ್ಟುವುದಕ್ಕೆ ಹಂಬಲಿಸುತ್ತಿದ್ದ ಪ್ರಜ್ಞಾಪೂರ್ವಕ ಚಿತ್ರಣ ಇಲ್ಲಿ ಸಿಗುತ್ತದೆ.

ನಿಂಗಣ್ಣ ಸಣ್ಣಕ್ಕಿ (೧೯೭೮) ಅವರ 'ಗಂಡಸರ ಜನಪದ ಹಾಡುಗಳು' ಕೃತಿಯಲ್ಲಿ ಐದು ಡೊಳ್ಳಿನ ಹಾಡುಗಳಿವೆ. ಈ ಹಾಡುಗಳು ಭೂತಾಳಸಿದ್ಧ, ರೇವಣಸಿದ್ಧ ಮತ್ತು ಸ್ಥಳೀಯ ದೈವಗಳನ್ನು ಗ್ರಹಿಸುವುದಕ್ಕೆ ಸಹಾಯಕವಾಗುತ್ತವೆ. ಬಸವರಾಜ ನೆಲ್ಲಿಸರ (೧೯೭೮) ಅವರು 'ಡೊಳ್ಳಿನ ಹಾಡುಗಳು' ಸಂಕಲನ ತಂದಿದ್ದಾರೆ. ಇದರಲ್ಲಿ ೨೮ ಹಾಡುಗಳಿವೆ. ಈ ಹಾಡುಗಳನ್ನು ಶಿಕಾರಿಪುರ ಮತ್ತು ಹೊನ್ನಾಳ್ಳಿ ತಾಲ್ಲೂಕಿನ ಕಲಾವಿದರಿಂದ ಸಂಗ್ರಹಿಸಲಾಗಿದೆ. ದಕ್ಷಿಣ ಕರ್ನಾಟಕ ಭಾಗದಿಂದ ಸಂಗ್ರಹ ಗೊಂಡಿರುವ ಏಕೈಕ ಸಂಕಲನ ಇದು. ಜೀ.ಶಂ.ಪ. ಅವರ ಮುನ್ನುಡಿ ಸಂಪಾದಕರ ಪ್ರಸ್ತಾವನೆ ಮಹತ್ವವಾದ ಮಾಹಿತಿಯಿಂದ ಕೂಡಿದೆ. ಗೊಂಡ, ಗೊಲ್ಲ, ಮಾದೇಶ್ವರ ಮತ್ತು ಹಾಲುಮತ ಸಮುದಾಯಗಳ ತೌಲನಿಕ ಅಧ್ಯಯನಕ್ಕೆ ಸಹಾಯಕವಾಗುವ ಮಹತ್ವದ ಮಾಹಿತಿ ಇದೆ. ಜೀ.ಶಂ.ಪ. ಅವರು ಎತ್ತುವ ಪ್ರಶ್ನೆಗಳು ಡೊಳ್ಳಿನ ಹಾಡುಗಳ ಅಧ್ಯಯನಕ್ಕೆ ಬೆಳಕು ಚೆಲ್ಲುತ್ತವೆ. 'ಹಾಲುಮತದ ಹರಕೆ ಹಾಡು' ಎಸ್.ಎಸ್. ಪೂಜಾರ (೧೯೭೮) ಅವರ ಲೇಖನ. ಹಾಲುಮತದವರು ತಮ್ಮ ಆರಾಧ್ಯ ದೈವಗಳಿಗೆ ಅರ್ಪಿಸುವ ಹರಕೆಯನ್ನು ಮತ್ತು ಭಿಕ್ಷಕ್ಕೆ ಹೋಗುವ ಸಂಪ್ರದಾಯದ ಸಂದರ್ಭ ದಲ್ಲಿ ಹಾಡುವ ಹಾಡುಗಳನ್ನು ಆಧರಿಸಿ ವಿಶ್ಲೇಷಣೆ ಮಾಡಿದ್ದಾರೆ. ಕೆಲವು ಹರಕೆಯ ಹಾಡುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಹರಕೆ ಸಂಪ್ರದಾಯದ ಮೇಲೆ ಬೆಳಕು ಚೆಲ್ಲುವ ಮಹತ್ವದ ಲೇಖನವಿದು.

ಎಂ.ಎಂ. ಕಲಬುರ್ಗಿ (೧೯೭೮) ಅವರು 'ಉತ್ತರ ಕರ್ನಾಟಕ ಜನಪದ ಪದ್ಯ ಸಾಹಿತ್ಯ' ಕೃತಿಯಲ್ಲಿ ಗೀತ ಮೇಳಗಳನ್ನು ಗುರುತಿಸುವಾಗ 'ಡೊಳ್ಳಿನ ಹಾಡುಗಳನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಿದ್ದಾರೆ. ಎ.ಜಿ. ನೀಲಗಾರ (೧೯೭೯) ಅವರ 'ಜಾನಪದ ಜೇನು' ಕೃತಿಯಲ್ಲಿ ೧೯ ಹಾಡುಗಳಿವೆ. ರೇವಣ್ಣಸಿದ್ಧ ಬೀರಪ್ಪ ಮತ್ತು 'ಕುರುಬ' ಪರಿಕಲ್ಪನೆ ಮತ್ತು ನೀತಿ-ತತ್ತ್ವವನ್ನು ಕುರಿತಂಥವು. ಕರ್ನಾಟಕ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ(೧೯೭೬)ದಲ್ಲಿ ಬಿ.ಬಿ. ಹಂದಿ (೧೯೭೮) ಅವರು 'ಡೊಳ್ಳಿನ ಹಾಡು' ಪ್ರಬಂಧವನ್ನು

ಮಂಡಿಸಿದ್ದಾರೆ. ಈ ಲೇಖನದಲ್ಲಿ ಡೊಳ್ಳಿನ ಹಾಡುಗಳ ಸ್ವರೂಪದ ತಾತ್ವಿಕ ಚರ್ಚೆ ಇದೆ. ಡೊಳ್ಳು ಮತ್ತು ಪೂರಕ ವಾದ್ಯಗಳ ತೌಲನಿಕ ನೋಟವಿದೆ. ಆದರೆ ಸಮಗ್ರವಾದ ಅಧ್ಯಯನ ಆಗಿಲ್ಲ.

'ತೂಕಮಾಡಿ ಹೇಳತೀನಿ ನ್ಯಾಯ' ಬಸವನಗೌಡ ಪಾಟೀಲ(೧೯೮೧)ರವರ ಕೃತಿಯಲ್ಲಿ ೧೮ ಹಾಡುಗಳಿವೆ. ಧಾರವಾಡ ಜಿಲ್ಲೆ ಲಕ್ಷ್ಮೇಶ್ವರ ಮತ್ತು ಸುತ್ತಮುತ್ತಲಿನ ಕಲಾವಿದರಿಂದ ಸಂಗ್ರಹಿದ ಹಾಡುಗಳಿವು. ಪದ್ಯ, ವಚನಮಿಶ್ರಿತ, ಚೌಪದಿ, ತ್ರಿಪದಿ, ದ್ವಿಪದಿ ಮುಂತಾದ ಭಿನ್ನ ಶೈಲಿಯ, ಭಿನ್ನ ವಸ್ತುಗಳ ಹಾಡುಗಳಿವೆ. ಬೀರಪ್ಪ, ಮಾಳಿಂಗರಾಯ, ವೀರಗೊಲ್ಲಾಳ, ರೇವಣಸಿದ್ಧ ಸಾಂಸ್ಕೃತಿಕ ವೀರರ ಬಗ್ಗೆ ಬೆಳಕು ಚೆಲ್ಲುವ ಮಹತ್ವದ ಹಾಡುಗಳಿವೆ. ಡಾ. ಶಿವಾನಂದ ಗುಬ್ಬಣ್ಣನವರು (೧೯೮೦) 'ದೇವಽಽರ್ ಬಂದಾವ್ ಬನ್ನಿರೇ' ಅನ್ನುವ ಶೀರ್ಷಿಕೆಯಲ್ಲಿ ಎರಡು ಡೊಳ್ಳಿನ ಹಾಡುಗಳ ಸಂಪುಟಗಳನ್ನು ತಂದಿದ್ದಾರೆ. ಭಾಗ-೧ರಲ್ಲಿ ೧೯, ಭಾಗ-೨ರಲ್ಲಿ ೧೩ ಹಾಡುಗಳಿವೆ. ಈ ಹಾಡುಗಳನ್ನು ಧಾರವಾಡ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಗ್ರಹಿಸಿದ್ದಾರೆ. ಹಾಡನ್ನು ಹಾಡಿದ ಕಲಾವಿದರ ಹೆಸರು, ವಯಸ್ಸು, ವೃತ್ತಿ, ಸ್ಥಳಗಳ ವಿವರಗಳನ್ನು ಪ್ರತಿ ಹಾಡಿನ ಆರಂಭದಲ್ಲಿ ಕೊಟ್ಟಿದ್ದಾರೆ. ಇದರಿಂದ ಯಾವ ಪ್ರದೇಶದ, ಯಾವ ಕಲಾವಿದನ ಅಭಿವ್ಯಕ್ತಿಯೆಂದು ತಿಳಿಯಬಹುದು. 'ನಡಿಯಪ್ಪ ನಮ್ಮ ನಾಡಿಗೆ' ಕೆ. ವಿರುಪಾಕ್ಷಗೌಡ ಮತ್ತು ಮೇಟಿ ಕೊಟ್ರಪ್ಪ ಅವರ ಸಂಪಾದಿತ ಕೃತಿ. ಬಳ್ಳಾರಿ, ರಾಯಚೂರು ಮತ್ತು ಧಾರವಾಡ ಜಿಲ್ಲೆಯ ಕಲಾವಿದರಿಂದ ಸಂಗ್ರಹಿಸಿದ್ದಾರೆ. ಹಾಡಿರುವ ಕಲಾವಿದರಲ್ಲಿ ಬಳ್ಳಾರಿ ಜಿಲ್ಲೆಯ ಕಲಾವಿದರೇ ಹೆಚ್ಚು. ಹಾಗಾಗಿ ಬಳ್ಳಾರಿ ಜಿಲ್ಲೆಯ ಗ್ರಾಮದೈವಗಳನ್ನು ಕುರಿತು ಹಾಡುಗಳು ಹೆಚ್ಚಾಗಿವೆ. ಸ್ಥಳೀಯತೆ ಡೊಳ್ಳಿನ ಹಾಡುಗಳ ಮೇಲೆ ಹೇಗೆ ಪ್ರಭಾವ ಬೀರಿವೆ ಅನ್ನುವುದನ್ನು ಕುರಿತು ಅಧ್ಯಯನ ಮಾಡಿಲ್ಲ. ಇಂತಹ ಅಧ್ಯಯನಕ್ಕೆ ಮಹತ್ವವಾದ ಆಕರಗಳು ಇವು. ಚಿಕ್ಕ ಪ್ರಸ್ತಾವನೆ ಸೈದ್ಧಾಂತಿಕವಾಗಿದೆ. ಡೊಳ್ಳಿನ ಹಾಡುಗಳು 'ದೇವರು ಬಂದಾವ್ ಬನ್ನಿರೇ' ಅನ್ನುವ ಪಲ್ಲವಿಗಳ ಮುಖಾಂತರ ಆರಂಭವಾಗುತ್ತವೆ ಎಂದು ಗುರುತಿಸಿದ ಮೊದಲ ವಿದ್ವಾಂಸರಿವರು.

'ಡೊಳ್ಳಿನ ಹಾಡುಗಳಲ್ಲಿ ಸಾಮಾಜಿಕ ನೀತಿ' ಹುರಕಡ್ಲಿ ಶಿವಕುಮಾರ (೧೯೮೨) ಅವರ ಲೇಖನ. ಶೀರ್ಷಿಕೆ ಹೇಳುವಂತೆ ಡೊಳ್ಳಿನ ಹಾಡುಗಳಲ್ಲಿ ಅನಾವರಣಗೊಂಡಿರುವ ಸಾಮಾಜಿಕ ಕಳಕಳಿ ಯನ್ನು ಗುರುತಿಸಿದ್ದಾರೆ. ಈ ತಾತ್ವಿಕತೆಯನ್ನು ಗುರುತಿಸುವುದಕ್ಕೆ ಬಳಸಿಕೊಂಡ ಆಕರಗಳು ಮಹತ್ವ ದ್ದಾಗಿವೆ. ಕೆಲವು ಹಾಡುಗಳು ಸಾಂಸ್ಕೃತಿಕ ವೀರರ ಸಂಘರ್ಷವನ್ನು ಪ್ರತಿಬಿಂಬಿಸುತ್ತವೆ. ಸಾಮಾಜಿಕ ಸಂಬಂಧ ಮತ್ತು ಸಾಂಸ್ಕೃತಿಕ ವೀರರ ಸಾಮಾಜಿಕ ಸಂಬಂಧವನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತವೆ. 'ರ‍್ಯಾಣಗಳು' ದೇವಾನಂದ ಮಾಲಗತ್ತಿ (೧೯೯೩) ಅವರ ಕೃತಿ. ರ‍್ಯಾಣಗಳ ಮೊದಲ ಪ್ರತ್ಯೇಕ ಸಂಗ್ರಹವಿದು. ಈ ಕೃತಿಯ ನಂತರವು ಪ್ರತ್ಯೇಕ ಸಂಗ್ರಹಗಳು ಬಂದಿಲ್ಲ. ಈಗ ಈ ಪ್ರಕಾರದ ಹಾಡುಗಳು ಕಣ್ಮರೆಯ ಹಂತದಲ್ಲಿವೆ. ಕೆಲವು ಪ್ರದೇಶದಲ್ಲಿ ಕಣ್ಮರೆ ಆಗಿವೆ. ಯುವಕಲಾವಿದರಿಗೆ ಈ ಹಾಡುಗಳು ಗೊತ್ತೇ ಇಲ್ಲ. ಹಾಗಾಗಿ ಈ ಹಾಡುಗಳ ಸಂಗ್ರಹ ಮಹತ್ವವಾಗಿವೆ. ಡೊಳ್ಳಿನ ಹಾಡುಗಳ ವಿಶ್ಲೇಷಣೆ ಮತ್ತು ಪ್ರದರ್ಶನದ ಸಂದರ್ಭದ ಗ್ರಹಿಕೆಯ ಮೇಲೆ ಬೆಳಕು ಚೆಲ್ಲುತ್ತದೆ. ಹಾಡುಗಳು ವಿಶ್ಲೇಷಣೆ ಮಾಡಿಲ್ಲ. 'ಕುರುಬ ಜನಪದ' ಪ್ರೊ. ಚನ್ನಪ್ಪ ಕಟ್ಟಿ ಮತ್ತು ಆರ್.ಎಸ್.

ವಾಡೇದ (೧೯೯೭) ಅವರ ಸಂಪಾದಿತ ಕೃತಿ. 'ಹಾಲುಮತ ಸಂಸ್ಕೃತಿ'ಯನ್ನು ಅಧ್ಯಯನ ಮಾಡುವುದಕ್ಕೆ ಸಹಕಾರಿಯಾಗುವ ಮಹತ್ವದ ಕೃತಿಗಳಲ್ಲಿ ಒಂದು. ಡೊಳ್ಳಿನ ಹಾಡುಗಳನ್ನು ಕುರಿತ ಮೂರು ಲೇಖನಗಳಿವೆ. ಸ್ವರೂಪ ಸೃಷ್ಟಿ, ಪ್ರದರ್ಶನ, ಪ್ರಸಾರದ ಮಾಹಿತಿಯನ್ನು ಒದಗಿಸುತ್ತವೆ. ಸಮಗ್ರ ಮತ್ತು ತೌಲನಿಕ ಅಧ್ಯಯನ ಆಗಿಲ್ಲ.

ಎಮ್.ಎಮ್. ಕರಡಿ ಬುಕ್ ಸೆಲ್ಲರ್ (೧೯೯೭) ಅವರ 'ಡೊಳ್ಳಿನ ಪದಗಳು' ಕೃತಿಯಲ್ಲಿ ೨೧ ಹಾಡುಗಳಿವೆ. ಪರಂಪರೆಯಿಂದ ಮೌಖಿಕವಾಗಿ ಬಂದಿರುವ ಮತ್ತು ಇತ್ತೀಚೆಗೆ ರಚನೆ ಮಾಡಿರುವ ಹಾಡುಗಳನ್ನು ಸೇರಿಸಿ ಪ್ರಕಟಿಸಿರುವ ಕೃತಿ ಇದು. ಆರಂಭದ ಹಾಡು ಗಮನ ಸೆಳೆಯುತ್ತದೆ. ೧೫ ಸಂದುಗಳಲ್ಲಿ ಹಾಡಿರುವ ಈ ಹಾಡು ಹಾಲುಮತ ಸಂಸ್ಕೃತಿಯ ಚರಿತ್ರೆಯ ಮೇಲೆ ವಿಶಿಷ್ಟ ಬೆಳಕು ಚೆಲ್ಲುತ್ತದೆ. ನೀತಿಯನ್ನು ಪ್ರತಿಬಿಂಬಿಸುವ ಮಹತ್ವದ ಹಾಡುಗಳಿವೆ. ಅರ್ಜುನ ಗೋಳಸಂಗಿ ಅವರ 'ಡೊಳ್ಳಿನ ಪದಗಳು' ಡೊಳ್ಳಿನ ಹಾಡುಗಳ ವಿಶ್ಲೇಷಣೆಯನ್ನೊಳಗೊಂಡ ಕಿರುಕೃತಿ. ಡೊಳ್ಳಿನ ಹಾಡುಗಳ ತಾತ್ವಿಕ ಗ್ರಹಿಕೆಗೆ ಸೈದ್ಧಾಂತಿಕ ಬುನಾದಿಯನ್ನು ಹಾಕಿಕೊಟ್ಟ ಕೃತಿಯಿದು. ಒಂದು ಉಪನ್ಯಾಸವನ್ನು ಕೃತಿಯಾಗಿ ತಂದಿರುವುದರಿಂದ ಸಮಗ್ರವಾಗಿ ಅಧ್ಯಯನ ಮಾಡುವುದಕ್ಕೆ ಆಗಿಲ್ಲ. ಕೇವಲ ಹಾಡುಗಳ ಪ್ರಕಾರಗಳ ಪರಿಚಯ ಸಿಗುತ್ತದೆ. ಆದರೂ ಹಾಡುಗಳ ತಾತ್ವಿಕ ವಿಶ್ಲೇಷಣೆ ಇದೆ.

'ಉತ್ತರ ಕರ್ನಾಟಕದ ಜಾನಪದ ಗೀತಮೇಳಗಳು : ಒಂದು ಸಾಂಸ್ಕೃತಿಕ ಅಧ್ಯಯನ' ವೀರೇಶ ಶೇ. ಬಡಿಗೇರ (೧೯೯೯) ಅವರ ಪ್ರೌಢ ಪ್ರಬಂಧ. ಐದು ಗೀತಮೇಳಗಳನ್ನು ಆಯ್ಕೆ ಮಾಡಿಕೊಂಡು ಸಾಂಸ್ಕೃತಿಕ ಅಧ್ಯಯನ ಮಾಡಿದ್ದಾರೆ. ಮೇಳಗಳ ತೌಲನಿಕ ಅಧ್ಯಯನ ಮಹತ್ವದ್ದಾಗಿದೆ. ಡೊಳ್ಳಿನ ಹಾಡುಗಳ ವೈಶಿಷ್ಟ್ಯವನ್ನು ಗುರುತಿಸುವುದಕ್ಕೆ ಇವರ ಅಧ್ಯಯನ ಸಹಾಯಕವಾಗುತ್ತದೆ. ಇಲ್ಲಿಯವರೆಗೆ ನಡೆದ ಡೊಳ್ಳಿನ ಹಾಡುಗಳ ಅಧ್ಯಯನದಲ್ಲಿ ವಿಸ್ತಾರವಾದ ಅಧ್ಯಯನವಿದು. ತೌಲನಿಕ ಅಧ್ಯಯನ ಮಾಡಿಲ್ಲ. ಜೊತೆಗೆ ಇನ್ನು ಹಲವು ಪ್ರಕಾರಗಳನ್ನು ಕೈಬಿಟ್ಟಿದ್ದಾರೆ. ಆದರೂ ಹಾಡುಗಳ ಸಮಗ್ರ ಪರಿಚಯ ಸಿಗುತ್ತದೆ. ವಿಶ್ಲೇಷಣೆ ಇಲ್ಲ. ಗಂಗಾಧರ ದೈವಜ್ಞ (ಸಂ.), (೧೯೯೯) ಅವರ 'ಮಾಳಿಂಗ ರಾಯನ ಕಾವ್ಯ'. ಈ ಕಾವ್ಯದ ಮುಖಾಂತರ ಡೊಳ್ಳಿನ ಹಾಡುಗಳು 'ಮಹಾಕಾವ್ಯದ ಪರಿಕಲ್ಪನೆ'ಯಲ್ಲಿ ಸೈದ್ಧಾಂತಿಕ ವ್ಯವಸ್ಥೆಯೊಳಗಡೆ ಸೇರಿಕೊಂಡವು. ಡೊಳ್ಳಿನ ಹಾಡುಗಳ ಗ್ರಹಿಕೆಯನ್ನು ಬದಲಾಯಿಸಿದ ಕೃತಿ ಇದು. ಡೊಳ್ಳಿನ ಹಾಡುಗಳು ಮಹಾಕಾವ್ಯಗಳಾಗುತ್ತವೆ ಎಂದು ಪರಿಚಯಿಸಿದ ಕೃತಿ. ಸಾಂಸ್ಕೃತಿಕ ವೀರನನ್ನು ಕುರಿತ ದೀರ್ಘವಾದ ಹಾಡುಗಳಿವೆ. ಮಾಳಿಂಗರಾಯನನ್ನು ಕುರಿತ ಸಮಗ್ರ ಹಾಡು ಇದು. ಪ್ರಸ್ತಾವನೆಯಲ್ಲಿ ಈ ವೀರನ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಆದರೆ ತೌಲನಿಕ ಅಧ್ಯಯನ ಆಗಿಲ್ಲ. ಜನಪದ ಹಾಲುಮತ ಮಹಾಕಾವ್ಯ ವೀರಣ್ಣ ದಂಡೆ (೨೦೦೦) ಅವರ ಸಂಪಾದಿತ ಕೃತಿ. ಸಮಗ್ರ ಡೊಳ್ಳಿನ ಹಾಡುಗಳ ಕಾವ್ಯ ಸಂಕಲನವಿದು. ಏಕವ್ಯಕ್ತಿಯಿಂದ ಅಭಿವ್ಯಕ್ತಗೊಂಡಿರುವ ಕಾವ್ಯ. ಹಲವಾರು ಹಾಲುಮತದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯ ಮೇಲೆ ಮತ್ತು ಸಮುದಾಯದ ಚಾರಿತ್ರಿಕ ಗ್ರಹಿಕೆಯ ಮೇಲೆ ಬೆಳಕು ಚೆಲ್ಲಿದೆ. ಈ ಕಾವ್ಯವನ್ನು ಆಧರಿಸಿ ಕನ್ನಡ ವಿಶ್ವವಿದ್ಯಾಲಯದ

ಸಾಹಿತ್ಯ ಅಧ್ಯಯನ ವಿಭಾಗ ೨೦೦೭ರಲ್ಲಿ ತುಮಕೂರಿನಲ್ಲಿ ಎರಡು ದಿನಗಳ ಸಾಂಸ್ಕೃತಿಕ ಮುಖಾಮುಖಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕೃತಿಯಲ್ಲಿ ಸಂಪಾದಕರು ದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಅದು ಕೇವಲ ಕಥಾಸಾರವನ್ನು ಕುರಿತದ್ದಾಗಿದೆ. ಹಾಡುಗಳ ಸಾಂಸ್ಕೃತಿಕ ವಿಶ್ಲೇಷಣೆ ಆಗಿಲ್ಲ.

'ಹೈದ್ರಾಬಾದ್ ಕರ್ನಾಟಕ ಜನಪದ ಪ್ರದರ್ಶನ ಕಲೆಗಳು', ಎಚ್.ಟಿ. ಪೋತೆ ಅವರ ಪ್ರೌಢ ಪ್ರಬಂಧ. ಇವರು ಡೊಳ್ಳಿನ ಮೇಳವನ್ನು ವಾದ್ಯ ಪ್ರಕಾರದ ಕಲೆಯಂದು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಇಲ್ಲಿ ಹಾಡುಗಳ ವಿಶ್ಲೇಷಣೆ ಕಡಿಮೆ. ಹಾಡುಗಳನ್ನು ಗೀತ ಪ್ರಧಾನವೆಂದು ಗ್ರಹಿಸಿಲ್ಲ. ವಾದ್ಯಪ್ರಧಾನ ಕಲೆಯಂದು ಗ್ರಹಿಸಿದ್ದಾರೆ. ಅಂದರೆ ಪ್ರದರ್ಶನದ ಒಂದು ಭಾಗವನ್ನೇ ಇಡಿ ಕಲೆಯೆಂದು ಗ್ರಹಿಸಿರುವುದಕ್ಕೆ ಇಂತಹ ಅಪಾಯ ಆಗಿದೆ. 'ಡೊಳ್ಳಿನ ಹಾಡುಗಳ ವೈವಿಧ್ಯ', ಮಹಾದೇವಿ ಕಣವಿ (೨೦೦೧) ಅವರ ಲೇಖನದಲ್ಲಿ ಕುರುಬರ ಐತಿಹಾಸಿಕ ಹಿನ್ನಲೆಯನ್ನು ಚರ್ಚಿಸಿದ್ದಾರೆ. ಇವರ ಲೇಖನದಲ್ಲಿ ಡೊಳ್ಳಿನ ಹಾಡುಗಳು ಮೋಜಿಗಾಗಿ ಬಳಕೆ ಆಗುತ್ತಿದ್ದವು ಅನ್ನುವುದು ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. 'ಕೃಷ್ಣಾ ತೀರದ ಹಾಡು-ಸಂಸ್ಕೃತಿ' ಶಿವಾನಂದ ಶೆಲ್ಲಿಕೇರಿ(೨೦೦೧)ರವರ ಕೃತಿ. ಇತರ ಜನಪದ ಗೀತೆಗಳೊಂದಿಗೆ ೧೪ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಹೆಣ್ಣು ಹೆಚ್ಚು ಗಂಡು ಹೆಚ್ಚು ಅನ್ನುವ ವಾದ-ಪ್ರತಿವಾದವನ್ನು ಬಿಂಬಿಸುವ ಹಾಡುಗಳು ಹೆಚ್ಚಾಗಿವೆ. ಡೊಳ್ಳಿನ ಹಾಡುಗಳಲ್ಲಿ ಕಾಣಿಸಿಕೊಳ್ಳುವ ವಾದ- ಪ್ರತಿವಾದವನ್ನು ಗ್ರಹಿಸುವುದಕ್ಕೆ ಮಹತ್ವದ ಹಾಡುಗಳು ಇವು. ಇವತ್ತು ಈ ಪ್ರಕಾರದ ಹಾಡುಗಳು ಕಣ್ಮರೆಯ ಹಂತದಲ್ಲಿವೆ. ಇಂತಹ ಹಾಡುಗಳನ್ನು ಸಂಗ್ರಹಿಸಿಕೊಟ್ಟ ಸಂಪಾದಕರ ಕೆಲಸ ಮಹತ್ವದ್ದಾಗಿದೆ.

ವಾಯ್.ಕೆ. ಗುಂಡಕರ್ಜಗಿ (೨೦೦೨) ಅವರ 'ಹಂಡೆ ಕುರುಬರು : ಒಂದು ಅಧ್ಯಯನ' ಅಪ್ರಕಟಿತ ಪ್ರೌಢ ಪ್ರಬಂಧ. ಹಂಡೆ ಕುರುಬ ಸಮುದಾಯವನ್ನು ಕುರಿತ ಅಧ್ಯಯನವಿದು. ಕುರುಬರ ಸಾಹಿತ್ಯವನ್ನು ವಿಶ್ಲೇಷಣೆ ಮಾಡುವಾಗ ಡೊಳ್ಳಿನ ಹಾಡುಗಳನ್ನು ಕುರಿತು ಚರ್ಚಿಸಿದ್ದಾರೆ. ವಿಶ್ಲೇಷಣೆಯಲ್ಲಿ ಹಿಂದಿನ ಅಧ್ಯಯನಕಾರರ ಬರಹಗಳ ಪುನಾವರ್ತನೆ ಹೆಚ್ಚಾಗಿದೆ. ಜ್ಯೋತಿ ಹೊಸೂರು (೨೦೦೩) ಅವರು 'ಡೊಳ್ಳಿನ ಹಾಡುಗಳ ಸಮೀಕ್ಷೆ' ಕೃತಿಯಲ್ಲಿ ಡೊಳ್ಳಿನ ಹಾಡುಗಳ ಸಮೀಕ್ಷೆ ಇದೆ. ಆರಂಭದಲ್ಲಿ ಹಾಡುಗಳ ಸ್ವರೂಪ ಮತ್ತು ಲಕ್ಷಣಗಳನ್ನು ಚರ್ಚಿಸಿದ್ದಾರೆ. ಡೊಳ್ಳಿನ ಹಾಡುಗಳನ್ನು ಅಧ್ಯಯನ ಮಾಡುವವರಿಗೆ ಸಹಾಯಕವಾಗಬಲ್ಲ ಕಿರುಕೃತಿ ಇದು. 'ಡೊಳ್ಳಿನಮೇಳ' ಕುರುವ ಬಸವರಾಜ (೨೦೦೪) ಅವರ ಕೃತಿ. ಡೊಳ್ಳಿನ ಕಲೆಯ ಪ್ರಾಥಮಿಕ ಹಂತದ ಸಮಗ್ರ ಚಿತ್ರಣವನ್ನು ಕೊಡುತ್ತದೆ. ವಿಸ್ತಾರವಾದ ಈ ಅಧ್ಯಯನದಲ್ಲಿ ತೌಲನಿಕ ಅಧ್ಯಯನದ ವಿಶ್ಲೇಷಣೆ ಇಲ್ಲ. ಆದರೆ ದಕ್ಷಿಣ ಕರ್ನಾಟಕದ ಡೊಳ್ಳಿನ ಕಲೆಯ ಕಥನಗಳನ್ನು ವಿವರಿಸುತ್ತದೆ. ಪ್ರಾದೇಶಿಕ ಹಿನ್ನೆಲೆಯನ್ನು ಅಧ್ಯಯನ ಮಾಡುವವರಿಗೆ ಪೂರಕ ಮಾಹಿತಿಯನ್ನು ಒದಗಿಸುತ್ತದೆ. ಡಾ. ಬಿ.ಎಸ್. ಸ್ವಾಮಿ (೨೦೦೪) ರವರ 'ಕರ್ನಾಟಕ ಜನಪದ ಮಹಾಕಾವ್ಯಗಳು' ಕೃತಿಯಲ್ಲಿ ಬಾನುಲಿ ರೂಪಕಗಳ

ಹಾಡುಗಳಿವೆ. ಮಹಾಕಾವ್ಯಗಳ ಕಿರುಹಾಡುಗಳಿವು. ಅದರಲ್ಲಿ ಡೊಳ್ಳಿನ ಹಾಡುಗಳು ಇವೆ. ಮಹಾಕಾವ್ಯಗಳು ಬಾನುಲಿಯಲ್ಲಿ ಹೇಗೆ ಸ್ವರೂಪ ಪಡೆಯುತ್ತವೆ ಅನ್ನುವುದನ್ನು ಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. 'ಜನಪದ ಕಾವ್ಯ ಡೊಳ್ಳಿನ ಪದಗಳು' ಬೀರಪ್ಪ ಹಳೆಮನಿ (೨೦೦೫) ರವರ ಕೃತಿ. ಈ ಕೃತಿಯಲ್ಲಿ ೪೨ ಹಾಡುಗಳಿವೆ. ಈ ಎಲ್ಲಾ ಹಾಡುಗಳನ್ನು ಲೇಖಕರು ಮೌಖಿಕ ಹಾಡುಗಳ ವಸ್ತುವನ್ನು ಮತ್ತು ಲಿಖಿತ ಪುರಾಣಗಳ ವಸ್ತುವನ್ನು ಸಮೀಕರಿಸಿ ರಚಿಸಿದ್ದಾರೆ. ಆದರೆ ರಚನೆಕಾರರು ಡೊಳ್ಳಿನ ಹಾಡುಗಳನ್ನು ಹೇಗೆ ರಚಿಸುತ್ತಿದ್ದಾರೆ ಅನ್ನುವುದನ್ನು ತಿಳಿಯಬಹುದು. ಚಂದ್ರಕಾಂತ ಬಿಜ್ಜರಗಿ (೨೦೦೬) ಅವರು 'ಕುರುಬರ ಹೆಜ್ಜೆಗಳು' ಕೃತಿಯಲ್ಲಿ ಡೊಳ್ಳುಕಲೆಯ ಮಹತ್ವವನ್ನು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ಹಾಡುಗಳ ಪ್ರಸ್ತುತ ಸಂದರ್ಭದ ಸ್ಥಿತಿಗತಿಯನ್ನು ವಿಶ್ಲೇಷಿಸುವುದು ಪ್ರಮುಖವಾಗಿವೆ. ಆದರೆ ಅವರು ಕೇವಲ ಪ್ರಾಸಂಗಿಕವಾಗಿ ಉಲ್ಲೇಖ ಮಾಡಿದ್ದಾರೆ.

'ಬೀರೇಶ್ವರ ಮಾಳಿಂಗರಾಯರ ಡೊಳ್ಳಿನ ಪದಗಳು'. ಶಿವಲಿಂಗ ಕಂಬಾರ (೨೦೦೬)ರವರ ಸ್ವರಚಿತ ಡೊಳ್ಳಿನ ಹಾಡುಗಳ ಕೃತಿ. ಈ ಕೃತಿಯಲ್ಲಿ ೪೪ ಹಾಡುಗಳಿವೆ. ಲೇಖಕರೇ ಹೇಳುವಂತೆ ಇದು ಚನ್ನಬಸವ ಶಾಸ್ತ್ರಿಗಳ ಹಾಲುಮತ ಪುರಾಣವನ್ನು ಆಧಾರವಾಗಿಟ್ಟುಕೊಂಡು ರಚನೆ ಮಾಡಿರುವ ಹಾಡುಗಳು. ಹಾಗಾಗಿ ಈ ಹಾಡುಗಳು ಚನ್ನಬಸವ ಶಾಸ್ತ್ರಿಗಳ 'ಹಾಲುಮತ ಪುರಾಣ'ವನ್ನು ಮೌಖಿಕ ರೂಪದಲ್ಲಿ ಬಿತ್ತರಿಸುವ ಯಂತ್ರಗಳಂತೆ ಕಾಣಿಸುತ್ತವೆ. ಹೊಸದನ್ನು ಮತ್ತು ಮೌಖಿಕ ಪರಿಕಲ್ಪನೆಯ ವಸ್ತುಗಳನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಈರಪ್ಪ ಮ. ಹಿಂಚೆಡ್ಡಿ(೨೦೦೭)ರವರ 'ಡೊಳ್ಳಿನ ಹಾಡುಗಳು' ಕೃತಿಯಲ್ಲಿ ಸ್ವರಚಿತ ಹಾಡುಗಳಿವೆ. ಲೇಖಕರು ಡೊಳ್ಳು ಹಾಡುಗಳ ಕಲಾವಿದರು. ಡೊಳ್ಳು ಕಲೆ ಇವರ ಮನೆತದ ಕಲೆ. ಮೌಖಿಕವಾಗಿ ಹಲವು ಹಾಡುಗಳನ್ನು ಹಾಡುತ್ತಾರೆ. ಮೌಖಿಕತೆಯಲ್ಲಿ ಹಾಡುವ ಹಾಡುಗಳನ್ನು ರಚನೆ ಮಾಡಿ ಕೃತಿ ರೂಪದಲ್ಲಿ ಹೊರತಂದಿದ್ದಾರೆ. 'ನುಡಿನಮನ' ಶ್ರೀಯುತ ಎಚ್.ಬಿ. ಕಟಿಗೆನ್ನವರ ಅಭಿನಂದನ ಗ್ರಂಥ. ಎಸ್.ಎಫ್. ಜಕಬಾಳ, (೨೦೦೬) ಅವರು ಈ ಕೃತಿಯ ಸಂಪಾದಕರು, ಜನಪದ ಸಾಹಿತ್ಯದರ್ಶನ ಭಾಗದಲ್ಲಿ ಡೊಳ್ಳಿನ ಹಾಡುಗಳನ್ನು ಕುರಿತ ಹನ್ನೆರಡು ಲೇಖನಗಳಿವೆ. ಹಾಡುಗಳನ್ನು, ಹಾಡುಗಳ ವಸ್ತುವನ್ನು ಭಿನ್ನ ಆಯಾಮಗಳಲ್ಲಿ ಚರ್ಚಿಸಿದ್ದಾರೆ. ಸಮಗ್ರವಾದ ಅಧ್ಯಯನ ಆಗಿಲ್ಲ. ಕೆಲವು ಪ್ರಕಾರಗಳನ್ನು ಕುರಿತು ಚರ್ಚಿಸಬೇಕಾಗಿದೆ. ಪುಲಗೇರಿಯ ದೈವಗಳನ್ನು ಆಧರಿಸಿ ನೀಲಪ್ಪ (೨೦೦೭) ಅವರು 'ಬನ್ನಿ ಪುಲಗೇರಿ ಪುಣ್ಯಕ್ಷೇತ್ರಕ್ಕೆ' ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಒಟ್ಟು ಹದಿನಾಲ್ಕು ಹಾಡುಗಳಿವೆ. ಸ್ವರಚಿತ ಹಾಡುಗಳಿವು. ಹಾಲುಮತ ಸಂಸ್ಕೃತಿಯ ಮೇಲೆ ಮಹತ್ವವಾದ ಬೆಳಕನ್ನು ಚೆಲ್ಲಲಾರವು. ಹಾಡುಗಳ ರಚನಾ ವಿಧಾನವನ್ನು ಅಧ್ಯಯನ ಮಾಡುವುದಕ್ಕೆ ಸಹಾಯಕವಾಗುತ್ತವೆ. ಡೊಳ್ಳಿನ ಹಾಡುಗಳ ರಚನೆಯ ಶಿಲ್ಪ(ಎಸ್.ಎಸ್. ಅಂಗಡಿ, ೨೦೦೮) ಎನ್ನುವ ಲೇಖನದಲ್ಲಿ ಹಾಡುಗಳ ಛಂದಸ್ಸನ್ನು ಗುರುತಿಸಿದ್ದಾರೆ. ವಿಶ್ಲೇಷಣೆಗೆ ಕೇವಲ ಸುಂಕಾಪುರ ಅವರ 'ಜೀವನ ಜೋಕಾಲಿ ಭಾಗ-೬ ಡೊಳ್ಳಿನ ಹಾಡು' ಕೃತಿಯಲ್ಲಿನ ಹಾಡುಗಳನ್ನು ಬಳಸಿಕೊಂಡಿದ್ದಾರೆ. ಇವರ ಸಂಗ್ರಹಗಳನ್ನು, ಕ್ಷೇತ್ರದ ಹಾಡುಗಳನ್ನು ಗಮನಿಸಿಲ್ಲ. ಹಾಗಾಗಿ ಪ್ರಾದೇಶಿಕ ಮತ್ತು ಸಾಂದರ್ಭಿಕ ಭಿನ್ನತೆಯನ್ನು ಗುರುತಿಸುವುದಕ್ಕೆ ಸಾಧ್ಯವಾಗಿಲ್ಲ.

೧.೫. ಈವರೆಗೆ ಬಂದ ಡೊಳ್ಳಿನ ಹಾಡುಗಳ ಅಧ್ಯಯನಗಳ ತಾತ್ವಿಕ ನಿಲುವುಗಳು

೧. ೧೯೫೦-೬೦ರ ದಶಕದಲ್ಲಿ ಅಧ್ಯಯನದ ಸೈದ್ಧಾಂತಿಕ ವ್ಯವಸ್ಥೆಯೊಳಗಡೆ ಪ್ರಾಥಮಿಕ ಹಂತದ ಪರಿಚಯವು ಆಗಿರಲಿಲ್ಲ. ಡೊಳ್ಳಿನ ಹಾಡುಗಳು ಒಂದು ಪ್ರತ್ಯೇಕವಾದ ಪ್ರಕಾರವೆಂದು ಗ್ರಹಿಸಿರಲಿಲ್ಲ. ಲಾವಣಿ ಮತ್ತು ಹಂತಿಯ ಪದಗಳಲ್ಲಿ ಸೇರಿಸಲಾಗುತ್ತಿತ್ತು. ಜನಪದಿಗರು ಬರೆವಣಿಗೆ ಮತ್ತು ಸಂಗ್ರಹಿತ ಕೃತಿಗಳನ್ನು ಓದುವುದರ ಮುಖಾಂತರ ಆ ವೇಳೆಗಾಗಲೇ ಸ್ಪಷ್ಟವಾದ ಚಿತ್ರಣವನ್ನು ತಂದುಕೊಟ್ಟಿದ್ದರು. ಈ ಹಾಡುಗಳನ್ನು ಓದುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಂತೆಗಳಂತಹ ಮಾರುಕಟ್ಟೆಯನ್ನಾಧರಿಸಿ ಚಿಕ್ಕ ಚಿಕ್ಕ ಸಂಗ್ರಹಗಳು ಬಂದವು.

೨. ೧೯೬೦-೭೦ರ ದಶಕದ ಮಧ್ಯೆ ಸೈದ್ಧಾಂತಿಕ ವ್ಯವಸ್ಥೆಯೊಳಗೆ ಪ್ರವೇಶ ಪಡೆಯಿತು. ಆದರೆ ಗಂಭೀರವಾದ ಅಧ್ಯಯನಗಳಾಗಲಿ ಅಥವಾ ಸಂತೆಯಂತಹ ಮಾರುಕಟ್ಟೆಯನ್ನು ಹೊರತುಪಡಿಸಿ ಸೈದ್ಧಾಂತಿಕ ವ್ಯವಸ್ಥೆಯೊಳಗಡೆ ಪ್ರತ್ಯೇಕ ಹಾಡುಗಳ ಸಂಗ್ರಹಗಳಾಗಲಿ ಹೊರಬರಲಿಲ್ಲ. ಇತರ ಜಾನಪದ ಗೀತೆಗಳೊಂದಿಗೆ ಹಾಡುಗಳನ್ನು ಸಂಗ್ರಹಿಸಿದರು.

೩. ೧೯೭೦-೯೦ರ ದಶಕದಲ್ಲಿ ಪ್ರತ್ಯೇಕ ಸಂಗ್ರಹಗಳು ಮತ್ತು ಪರಿಚಯಾತ್ಮಕ ಬರಹಗಳು ಬಂದವು. ಹೆಚ್ಚು ಸಂಗ್ರಹಕಾರ್ಯ ನಡೆದದ್ದು ಇದೇ ಕಾಲಘಟ್ಟದಲ್ಲಿ.

೪. ೧೯೯೦-೨೦೦೦ರ ದಶಕದ ಆರಂಭ ಕಾಲಘಟ್ಟದಲ್ಲಿ ಅಧ್ಯಯನಗಳು ಗೌಣ. ಕೊನೆ ಘಟ್ಟದಲ್ಲಿ ಎರಡು ಮಹಾಕಾವ್ಯಗಳು ಬಂದವು. ಇದು ಡೊಳ್ಳಿನ ಹಾಡುಗಳ ಸುವರ್ಣಯುಗ. ಸೈದ್ಧಾಂತಿಕ ವ್ಯವಸ್ಥೆಯೊಳಗೆ ಗಂಭೀರವಾದ ಪ್ರವೇಶ ಪಡೆದವು. ತನ್ನದೆಯಾದ ಸ್ಥಾನವನ್ನು ಖಚಿತಪಡಿಸಿಕೊಂಡವು.

೫. ೨೦೦೦ರ ಈಚೆಗೆ ಸಾಂಸ್ಕೃತಿಕ ವಿಶ್ಲೇಷಣೆಗಳು ನಡೆದವು. ಆದರೆ ಗಂಭೀರವಾದ ಚರ್ಚೆಗಳು ಆಗಿಲ್ಲ. ಈ ದಶಕದಲ್ಲಿ ಸ್ವರಚಿತ ಡೊಳ್ಳಿನ ಹಾಡುಗಳ ಸಂಕಲನಗಳು ಹೆಚ್ಚಾಗಿ ಬಂದಿವೆ.

೬. ಇಲ್ಲಿಯವರೆಗೆ ಪ್ರಕಟವಾದ ಡೊಳ್ಳಿನ ಹಾಡುಗಳಲ್ಲಿ ಹೆಚ್ಚಿನವು ಧಾರವಾಡ ಸುತ್ತಮುತ್ತಲಿನ ಕಲಾವಿದರಿಂದ ಸಂಗ್ರಹಿತವಾದಂತವು. ಬೆಳಗಾಂ, ಸೋಲ್ಲಾಪುರ, ಕೊಲ್ಲಾಪುರ, ಸಾಂಗ್ಲಿ, ಬಿಜಾಪುರ ಪ್ರದೇಶಗಳು ಡೊಳ್ಳಿನ ಹಾಡುಗಳ ಕಣಜ. ಆದರೆ ಆ ಪ್ರದೇಶದ ಹಾಡುಗಳನ್ನು ಇಲ್ಲಿಯವರೆಗೆ ಸಂಗ್ರಹಿಸಿರುವುದು ತುಂಬಾ ಕಡಿಮೆ.

ಅಡಿಟಿಪ್ಪಣಿಗಳು

೧. ಸಿದ್ದಯ್ಯ ಕೆ.ಪಿ., ಆಶಯ ಭಾಷಣ, 'ಜನಪದ ಹಾಲುಮತ ಮಹಾಕಾವ್ಯ : ಸಾಂಸ್ಕೃತಿಕ ಮುಖಾಮುಖಿ' ಕಾರ್ಯಕ್ರಮ ತುಮಕೂರು, ೨೦೦೮.

೨. ರಹಮತ್ ತರೀಕೆರೆ, ಪ್ರತಿಸಂಸ್ಕೃತಿ, ಪು. ೧೬-೧೮.

೩. ವಿನಯಲಾಲ್ ಮತ್ತು ಅಶೀಶ ನಂದಿ (ಸಂ.), ಹೊಸಶತಮಾನಕ್ಕೆ ಹೊಸ ಪರಿಭಾಷೆಗಳು, ಪು. ೪೧.

೪. ಅದೇ., ಪು. ೪೨.

೫. ಅದೇ., ಪು. ೪೧.

೬. ಜನಪದ ಹಾಲುಮತ ಮಹಾಕಾವ್ಯ, ಮಾಳಿಂಗರಾಯ ಮಹಾಕಾವ್ಯ.

೭. ಪ್ರಸ್ತುತ ಅಧ್ಯಯನದಲ್ಲಿ 'ಪಂಥ' ಅನ್ನುವುದನ್ನು ಆರಾಧನೆಗಾಗಿ ಬಳಸುವ ವಸ್ತುಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಇವತ್ತು ಭಂಡಾರ ಮತ್ತು ವಿಭೂತಿಗಳೆರಡು ಧರ್ಮ ಗುರುತಿಸುವ ವಸ್ತುಗಳಾಗಿವೆ. ಇವನ್ನು ಜನರಲ್ಲಿ ರೂಢಿಗೊಳಿಸುವುದಕ್ಕೆ ಸಾಂಸ್ಕೃತಿಕ ಗಾಯಕರು ಹೋರಾಟ ಮಾಡುತ್ತಿದ್ದರು, ಪ್ರತಿಪಾದನೆ ಮಾಡುತ್ತಿದ್ದರು. ಆ ಕಾಲಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಪಂಥವೆಂದು ಕರೆದುಕೊಳ್ಳಲಾಗಿದೆ.

• • •

ಅಧ್ಯಾಯ ಎರಡು

ಹಾಲುಮತ ಸಂಸ್ಕೃತಿ ಮತ್ತು ಡೊಳ್ಳು ಕಲಾಪರಂಪರೆ

೨.೧. ಪ್ರವೇಶ

ಆರ್ಯರು ಭಾರತಕ್ಕೆ ಬರುವುದಕ್ಕಿಂತ ಮೊದಲೇ ಭಾರತ ದೇಶದ ಜನಾಂಗಕ್ಕೆ ಮತ್ತು ಸಂಸ್ಕೃತಿಗೆ ಸಾವಿರಾರು ವರ್ಷಗಳ ಚರಿತ್ರೆ ಇತ್ತೆನ್ನುವುದು ಮೆಗಾಸ್ತನಿಸ್‌ನ ವಾದ. ಆದರೆ ವೇದೋಪನಿಷತ್ತುಗಳು ಆರ್ಯರೇ ಭಾರತದ ಮೂಲನಿವಾಸಿಗಳೆಂದು ಹೇಳುತ್ತವೆ. ವಿದ್ವಾಂಸರು ವೇದೋಪನಿಷತ್ತುಗಳ ವಾದವನ್ನು ಅಲ್ಲಗಳೆಯುತ್ತಾರೆ. ಏಕೆಂದರೆ ವೇದೋಪನಿಷತ್ತುಗಳನ್ನು ಸೃಷ್ಟಿಸಿದ್ದು ಆರ್ಯರು. ಇವುಗಳ ನಿರ್ಮಾಣದ ಉದ್ದೇಶ ಇಲ್ಲಿ ಬೇರೂರಿದ್ದ ಸ್ಥಳೀಯಜನ್ಯ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಹೊಡೆದು ಹಾಕುವುದಾಗಿತ್ತು. ಆರ್ಯರ ಆಗಮನದ ವೇಳೆಗಾಗಲೇ ನೂರಾರು ಸ್ಥಳೀಯಜನ್ಯ ಬುಡಕಟ್ಟುಗಳು ವಾಸಿಸುತ್ತಿದ್ದವು. ತಮ್ಮದೆಯಾದ ಸಾಂಸ್ಕೃತಿಕ ಚಹರೆಯನ್ನು ಹೊಂದಿದ್ದವು. ಹಲವು ಬುಡಕಟ್ಟು ಸಮುದಾಯಗಳೊಂದಿಗೆ ಸಂಕರಶೀಲ ಧಾರ್ಮಿಕ ಜೀವನವನ್ನು ಮಾಡುತ್ತಿದ್ದವು. ಇದು ಭಾರತದ ಬುಡಕಟ್ಟುಗಳು ರೂಡಿಸಿಕೊಂಡಿದ್ದ ವಿಶಿಷ್ಟ ಜೀವನ ವಿಧಾನವಾಗಿತ್ತು. ಆರ್ಯರು ಈ ಸಾಂಸ್ಕೃತಿಕ ಚಹರೆ ಮತ್ತು ಹೊಂದಾಣಿಕೆಯ ಜೀವನದ ಮೇಲೆ ಹೊಡೆತ ತಂದರು. ವೈದಿಕ ಸಂಸ್ಕೃತಿ ಈ ದೇಶದ ನಿಜವಾದ ಸಂಸ್ಕೃತಿಯೆಂದು ಸಾರಿದರು. ಧರ್ಮ ಮತ್ತು ರಾಜಕಾರಣಗಳು ಒಂದಾಗಿ ಬುಡಕಟ್ಟು ಸಮುದಾಯಗಳ ಮೇಲೆ ಯುದ್ಧ ಸಾರಿದ ಕಾರಣ ಹಲವು ಕಿರು ಸಂಸ್ಕೃತಿಗಳು ವಿನಾಸದ ಹಾದಿಯನ್ನು ಕಂಡುಕೊಂಡವು. ಪವಾಡವೆನ್ನುವಂತೆ ಈ ಶತ ಶತಮಾನಗಳ ಹೋರಾಟದ ಮಧ್ಯೆಯು ಕೆಲವು ಬುಡಕಟ್ಟು ಸಮುದಾಯಗಳು ತಮ್ಮ ಸಂಸ್ಕೃತಿಯನ್ನು ನಾಶಪಡಿಸಿಕೊಳ್ಳದೇ ಅಸ್ತಿತ್ವದಲ್ಲಿರಿಸಿಕೊಂಡವು. ಅಂತಹ ಬುಡಕಟ್ಟು ಸಮುದಾಯಗಳಲ್ಲಿ ಹಾಲುಮತ/ಕುರುಬ ಸಮುದಾಯವೂ ಒಂದು.

ಭಾರತದ ಪ್ರಾಚೀನ ಸ್ಥಳೀಯಜನ್ಯ ಬುಡಕಟ್ಟುಗಳಲ್ಲಿ ಹಾಲುಮತ ಸಮುದಾಯವು ಒಂದು. ಈ ಜನಾಂಗವನ್ನು ಭಾರತದ ಮೂಲನಿವಾಸಿಗಳೆಂದು ಕರೆಯುತ್ತಾರೆ. Gustove oppert ಅವರು "ಈ ಜನಾಂಗದ ಮೂಲವನ್ನು ಹುಡುಕುವುದೆಂದರೆ ಮಾನವ ಜನಾಂಗ ಮೂಲವನ್ನು ಹುಡುಕಿದಂತೆ ಅನ್ನುತ್ತಾರೆ".[೧] 'ದಕ್ಷಿಣ ದೇಶದಲ್ಲಿ ಸಿಕ್ಕುವ ನಾಣ್ಯಗಳಲ್ಲಿ ಪ್ರಾಚೀನವಾದವುಗಳೆಂದರೆ ಕುರುಬರವೇ'[೨] ಎನ್ನುವ ಸಿ.ಜೆ. ಬ್ರೌನ್ ಅವರ ಮಾತು ಮತ್ತು 'ದಕ್ಷಿಣ ಭಾರತದಲ್ಲಿ ದೊರೆಯುವ ಗೋರಿ ಮೊದಲಾದ ಪ್ರಾಚೀನ ಅವಶೇಷಗಳೆಂದರೆ ಕುರುಬರವೇ' ಎನ್ನುವ ವಿದ್ವಾಂಸರ ಅಭಿಪ್ರಾಯಗಳು Gustove oppert ಅವರ ವಾದಕ್ಕೆ ಪೂರಕವಾಗಿ ನಿಲ್ಲುತ್ತವೆ. ಇಷ್ಟೊಂದು ಪ್ರಾಚೀನ ಪರಂಪರೆಯನ್ನು ಹೊಂದಿರುವ ಈ ಸಮುದಾಯ ಇವತ್ತು ಭಾರತದ ತುಂಬ ವ್ಯಾಪಿಸಿ ನೆಲೆಸಿದೆ. ಬೇರೆ ಬೇರೆ

ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿದೆ. ಕರ್ನಾಟಕದಲ್ಲಿ ಕುರುಬರು, ಹೆಗ್ಗಡೆಗಳು, ಒಡೆಯರು, ಹಾಲುಮತದವರು; ಮಹಾರಾಷ್ಟ್ರದಲ್ಲಿ ಧನಗರ್, ಕುರುಬರ್, ಕ್ಷತ್ರಿಯರ್, ಪಾಲಕ್ಷತ್ರಿಯರ್; ಆಂಧ್ರಪ್ರದೇಶದಲ್ಲಿ ಕುರುಂಬ, ಕುರುಪು, ಕುರುಮನ್, ಗೊಲ್ಲವಾಡು, ಯಾದವುಲು, ಗೊರ್ರಲು, ಒಡೆಯರ್ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಹೆಸರುಗಳಲ್ಲದೇ ಹಲವು ಉಪನಾಮಗಳು ಆಯಾ ರಾಜ್ಯದಲ್ಲಿವೆ. ಉಪನಾಮಗಳಿಂದ ಕರೆಯುವ ಕುಲಗಳು ಉಪಸಂಸ್ಕೃತಿಯ ಚಹರೆಯನ್ನು ಹೊಂದಿವೆ. ಕರ್ನಾಟಕದಲ್ಲಿ ಕಾಡುಕುರುಬ, ಜೇನುಕುರುಬ, ದಾಸಕುರುಬ, ಕ್ರಿಶ್ಚಿಯನ್ ಕುರುಬ, ಝುಂಡೆ ಕುರುಬ, ಹಂಡೆ ಕುರುಬ, ಲಿಂಗಾಯತ ಕುರುಬ, ಹತ್ತಿ ಕಂಕಣದ ಕುರುಬ, ಉಣ್ಣೆ ಕಂಕಣದ ಕುರುಬ ಮುಂತಾದವು. ಮತ್ತೆ ಈ ಉಪಪಂಗಡಗಳಲ್ಲಿ ಹತ್ತಾರು ಒಳಪಂಗಡಗಳಿವೆ. ಅಲ್ಲದೇ ಯಾದವ, ಹೆಳವ, ಹಾಲಕ್ಕಿ, ಒಕ್ಕಲಿಗ, ಹಾಲಕ್ಕಿಗಳು, ವಕ್ಕಲಿಗ, ಹಕ್ಕಿಪಿಕ್ಕಿಯವರು, ಗೊಲ್ಲರು, ಗೊರವರು, ಗೊಂಡರು, ಗೌಳಿಗರು, ಬೈರವರು, ಸೋಲಿಗರು ಹಾಲುಮತ ಸಮುದಾಯಗಳಿಂದ ಪ್ರತ್ಯೇಕಗೊಂಡ ಸಮುದಾಯಗಳು ಎನ್ನುವ ವಾದ ಇದೆ. 'ಸೋಲಿಗರ ಕುಲದಲ್ಲಿ ಕುರುಬ ಒಕ್ಕಲಿಗ ಜಾತೀಲಿ ದೇವಸೊಲ್ಲ'ವೆಂದು ಕುಲಮೂಲ ಕಥನವನ್ನು ವಿಸ್ತರಿಸಿಕೊಳ್ಳುತ್ತಾರೆ. ಮಾದೇಶ್ವರ ಮಹಾಕಾವ್ಯ 'ಕುಲದಲ್ಲಿ ಕುರುಬೊಕ್ಕಲು ಗೌಡ ನೀತಿಯೊಳಗೆ ನೀಲಯ್ಯ'ನೆಂದೇ ನೀಲಯ್ಯ ಸಂಸ್ಕೃತಿಯನ್ನು ಅನಾವರಣ ಮಾಡುತ್ತದೆ. ಹೀಗೆ ಹಲವಾರು ಬುಡಕಟ್ಟು ಸಮುದಾಯಗಳು ಕುರುಬ ಕುಲದಿಂದ ಕುಲಮೂಲ ಕಥನಗಳನ್ನು ಕಟ್ಟಿಕೊಳ್ಳುತ್ತವೆ. ವೀರಶೈವಲಿಂಗಾಯತ, ಪಂಚಮಸಾಲಿ ಮುಂತಾದ ಸಮುದಾಯಗಳು ಹಾಲುಮತ ಸಮುದಾಯದಿಂದ ವಿಸ್ತೃತವಾದ ಸಮುದಾಯಗಳೆಂದೇ ಕರೆಯಲಾಗುತ್ತದೆ. ಮ್ಯಾಕ್ಸ್ ಮುಲ್ಲರ್ ಅವರು 'ಪಂಜಾಬಿನ ಕುರುಬರು ಭಾರತದ ಬ್ರಾಹ್ಮಣರಾದರು'[೩] ಎಂದು ಹೇಳುತ್ತಾರೆ. ಈ ಎಲ್ಲಾ ವಾದ ಪ್ರತಿವಾದಗಳ ಹಿಂದಿನ ಧೋರಣೆ ಇವರೆಲ್ಲರೂ ಕುರುಬರಾಗಿದ್ದರು ಎನ್ನುವುದು. ಇವರೆಲ್ಲರೂ ಕುರುಬರೇ ಅಥವಾ ಕುರುಬ ಕುಲದಿಂದ ವಿಸ್ತರಣೆ ಆದಂಥವರು ಎನ್ನುವ ಧೋರಣೆಯ ಹಿಂದೆ ಇವರೆಲ್ಲರು "ಪಶುಪಾಲಕರೂ" ಎನ್ನುವ ನಿಲುವು ಇದೆ. ಹೆಚ್ಚಾಗಿ ಈ ತರಹದ ವಾದ ಪ್ರತಿವಾದಕ್ಕೆ ಪಶುಪಾಲನ ಕಾಲಘಟ್ಟ ಸಾಂಸ್ಕೃತಿಕ ಚಹರೆಗಳನ್ನು ಬಳಸಿಕೊಳ್ಳುತ್ತಿದ್ದಾರೆ.

ಉದಾ. ಮ್ಯಾಕ್ಸ್ ಮುಲ್ಲರ್ ಅವರ ಪಂಜಾಬಿನ ಕುರುಬರು ಭಾರತದ ಬ್ರಾಹ್ಮಣರಾದರು ಎನ್ನುವ ವಾದಕ್ಕೆ ಪಶುಪಾಲನ ಸಂಸ್ಕೃತಿಯ ಚಹರೆಗಳು ಆಕರಗಳಾಗಿವೆ. ಮ್ಯಾಕ್ಸ್ ಮುಲ್ಲರ್ ಅವರ ವಾದವನ್ನು ಬೆಂಬಲಿಸುವಂತಹ ಹಲವು ಆಚರಣೆಗಳು ಕರ್ನಾಟಕದಲ್ಲೂ ಪ್ರಚಲಿತದಲ್ಲಿವೆ. ಇವತ್ತು ವಿಠಲನನ್ನು ಬ್ರಾಹ್ಮಣರು ಮತ್ತು ಹಾಲುಮತದವರು ಆರಾಧಿಸುತ್ತಾರೆ. ವಿಠಲ ಬ್ರಾಹ್ಮಣರಿಗೆ ಆರಾಧ್ಯ ದೈವ, ಕುಲದೈವ. ಹಾಲುಮತದವರಿಗೆ ಸಾಂಸ್ಕೃತಿಕ ವೀರ, ಕುಲದೈವ. ಆದರೆ ಹಾಲುಮತ ಸಂಸ್ಕೃತಿಯಲ್ಲಿ ಅವನ ಹೆಸರು ವಿಠಲ ಅಲ್ಲ. ಇಟ್ಟಪ್ಪ (ವಿರೋಬಾ). ಇಟ್ಟಪ್ಪನ ಮುಂದುವರೆದ ಭಾಗವೇ ವಿಠಲ. ಇಟ್ಟಪ್ಪ ಎನ್ನುವುದು ಶೈವ ಆರಾಧನೆಯಲ್ಲಿ ಪ್ರಚಲಿತದಲ್ಲಿದ್ದ ಹೆಸರು. 'ವಿಠಲ' ಎನ್ನುವುದು ವೈಷ್ಣವ ಆರಾಧನೆಯಲ್ಲಿ ಪ್ರಚಲಿತಗೊಂಡ ಹೆಸರು. ವೈಷ್ಣವ ಧರ್ಮ, ಶೈವಧರ್ಮದ ಇಟ್ಟಪ್ಪನನ್ನು ವೈಷ್ಣವೀಕರಿಸಿತು. ಆಗ ಹಲವು ಕುರುಬರು (ಇಟ್ಟಪ್ಪನ ಆರಾಧಕರು) ವೈಷ್ಣವ ಪಂಥಕ್ಕೆ ಪರಿವರ್ತನೆ

ಆದರು. ಅವರೇ ಬ್ರಾಹ್ಮಣರು. ಆದರೆ ಇವತ್ತು ಪಾರಂಪರಿಕ, ಸಾಂಸ್ಕೃತಿಕ ಸಂಬಂಧವನ್ನು ಕಡಿದು ಕೊಳ್ಳಲಿಲ್ಲ. ಮಹಾರಾಷ್ಟ್ರದ ಕೊಲ್ಲಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಬ್ರಾಹ್ಮಣರು ಬೀರಪ್ಪನನ್ನು ಆರಾಧಿಸುತ್ತಾರೆ. ಆ ಪ್ರದೇಶದಲ್ಲಿ ವಿಠಲ ಮತ್ತು ಬೀರಪ್ಪರು ಒಂದೇ ಗದ್ದುಗೆಯ ಮೇಲೆ ಇರುವ ದೇವಾಲಯಗಳು ಸಿಗುತ್ತವೆ. ಇವರಿಬ್ಬರು ಸಹೋದರರು ಎನ್ನುವ ಕಥನ ಗೀತೆಗಳು, ಡೊಳ್ಳಿನ ಹಾಡುಗಳು ಇವೆ. ಮಹಾರಾಷ್ಟ್ರದಲ್ಲಿ ಬೀರಪ್ಪ ವಿಠಲನನ್ನು ಸಹೋದರರೆಂದು ಗ್ರಹಿಸಲಾಗಿದೆ. ಯಲ್ಲಮ್ಮ, ಚಿಂಚಲಿ ಮಾಯವ್ವ ತಿರುಪತಿ ವೆಂಕಟೇಶ, ಮೈಲಾರ ಆರಾಧನೆಯಲ್ಲಿ ಈ ಎರಡು ಸಮುದಾಯಗಳ ಸಂಕರಶೀಲ ಸಂಬಂಧಗಳಿವೆ.

ಆದರೆ ಇವತ್ತು ಹಾಲುಮತವೆಂದು ಕರೆಯಿಸಿಕೊಳ್ಳುವ ಸಮುದಾಯ ಪ್ರಾಚೀನ ಕಾಲದಿಂದಲೂ ಪಶುಪಾಲನೆಯನ್ನೇ ತನ್ನ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡು ಮುಂದುವರೆಸಿಕೊಂಡು ಬಂದಿತು. ಹಾಗಾಗಿ ಈ ಸಮುದಾಯವನ್ನು ಆರಂಭಿಕ ಕಾಲಘಟ್ಟದಿಂದಲೂ ಅಥವಾ ಪಶುಪಾಲನ ಘಟ್ಟದಿಂದಲೂ ಪಶುಪಾನೆಯನ್ನೇ ತನ್ನ ವೃತ್ತಿಯನ್ನಾಗಿಸಿಕೊಂಡು ಬಂದ ಸಮುದಾಯ ಅಥವಾ ಪಶುಪಾಲನೆಯಿಂದ ಬೇರೆಡೆಗೆ ವಿಸ್ತರಣೆಯಾಗದೆ ಅಲ್ಲಿಯೇ ಉಳಿದುಕೊಂಡ ಸಮುದಾಯ ಎಂದು ಹೇಳಬಹುದು. ಪಶುಪಾಲನೆಯಲ್ಲಿ ಎರಡು ಕವಲುಗಳಿವೆ. ಒಂದು ದನಗಾರಿಕೆ, ಮತ್ತೊಂದು ಕುರಿಗಾರಿಕೆ. ಹಾಲುಮತ ಸಮುದಾಯ ಕುರಿಗಾರಿಕೆಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿತು. ದನಗಾರಿಕೆಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡ ಸಮುದಾಯಗಳು ಕುರುಬ ಸಮುದಾಯ(ಕುರಿಗಾರಿಕೆ)ದಿಂದ ಸಂಬಂಧ ಕಳೆದುಕೊಂಡವು. ಗೌಳಿಗರು, ಯಾದವರು, ಗೊಲ್ಲರು, ಮ್ಯಾಸಬೇಡರು ಮತ್ತು ಇವತ್ತು ಸಂಬಂಧವನ್ನು ಕಳೆದುಕೊಳ್ಳುವುದಕ್ಕೆ ತುದಿಗಾಲಲ್ಲಿ ನಿಂತ ಹಂಡೆ ಕುರುಬರು ಮುಂತಾದ ಸಮುದಾಯಗಳು, ನಂತರ ದನಗಾರಿಕೆ ಮತ್ತು ಕುರಿಗಾರಿಕೆ ವೃತ್ತಿಯವರಲ್ಲಿ ಸಂಘರ್ಷಗಳಾದವು. ಬೀರಪ್ಪನ ಕೋಣಾಸುರ ಸಂಹಾರ ಮತ್ತು ಮ್ಯಾಸಬೇಡರ ಕುರಿಗಳ ಅಕ್ರಮಣ ಸಂಘರ್ಷದ ಪ್ರತೀಕವಾಗಿ ಕಾಣಿಸುತ್ತದೆ. ಈ ಕುರಿಗಾರಿಕೆ ವೃತ್ತಿಯನ್ನು ಆಧರಿಸಿ 'ಕುರುಬ' ಎನ್ನುವ ಪದ ಹೆಚ್ಚು ಪ್ರಚಲಿತಕ್ಕೆ ಬಂದಿತು.

೨.೨. 'ಕುರುಬ' ಪದದ ಸಾಂಸ್ಕೃತಿಕ ಚಹರೆಗಳು

ಕುರುಬ (ಕುರು+ಬ) ಪದವು ಕುರುಪ (ಕುರು+ಪ) ಪದದಿಂದ ನಿಷ್ಪನ್ನಗೊಂಡಿದೆ. ಈ ಪದಕ್ಕೆ ಹಲವಾರು ಅರ್ಥಗಳಿವೆ.

* 'ಕುರಿ' ಕಾಯುವವನೇ 'ಕುರುಬ' ಅನ್ನುವುದು ಜನಪ್ರಿಯ ಅರ್ಥ.
* ಶಂಬಾ ಜೋಶಿ ಅವರು 'ಕುಱುಂಬ ಪದ ಈಗ ಕುರುಂಬ ಆಗಿದೆ. ಕುಱುಂಬ ಅನ್ನುವುದು ಕಂಡಮಿಳ್ ಶಬ್ದ. ಕುಱು ಅನ್ನುವುದಕ್ಕೆ ಗುಡ್ಡ, ಎತ್ತರವಾದ ಪ್ರದೇಶ, ಮರಡಿ ಅನ್ನುವ ಅರ್ಥಗಳಿವೆ. ಹಾಗಾಗಿ 'ಕುರುಬ'ರೆಂದರೆ ಎತ್ತರವಾದ ಪ್ರದೇಶದಲ್ಲಿ, ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಜನ ಎಂದು ಹೇಳುತ್ತಾರೆ'.*

* ದ್ರಾವಿಡ ಭಾಷೆಯಲ್ಲಿ ಕು, ಕೊ ಎಂಬಿವು ಬೆಟ್ಟಗಳೆಂದೋ 'ಕೋರಿ' ಎಂದರೆ 'ಕುರಿ' ಎಂದೋ, ಕುರು ಎಂದರೆ ಕುರುಚು, ಕುಳ್ಳು ಎಂದೂ ಅರ್ಥವಾಗುತ್ತದೆ. ಈ ಅರ್ಥನುಸಾರವಾಗಿ ಕುರುಬರು ಬೆಟ್ಟಗುಡ್ಡಗಳಲ್ಲಿ ವಾಸ ಮಾಡಿಕೊಂಡು ಕುರಿಗಳನ್ನು ಕಾಯುತ್ತಿದ್ದರಿಂದ 'ಕುರುಬ'ರೆಂಬ ಹೆಸರು ದ್ರಾವಿಡ ಭಾಷೆಯಲ್ಲಿ ಮೂಡಲು ಸಾಧ್ಯವಾಯಿತು'.[೫]

* Enthoven R.E. ರವರು 'ಕುರುಬ' ಎನ್ನುವ ಪದ 'ಕುರಿ' ಎನ್ನುವ ಪದದಿಂದ ನಿಷ್ಪನ್ನಗೊಂಡಿದೆ ಎಂದು ಹೇಳುತ್ತಾರೆ.[೬]

* ಕನ್ನಡ ಶಬ್ದಕೋಶಗಳಲ್ಲಿ 'ಕುರುಂಬ ಪದಕ್ಕೆ ಕೊಟೆಯವ, ಮುಖಂಡ ಎನ್ನುವ ಅರ್ಥಗಳಿದ್ದರೆ 'ಕುರುಬ' ಪದಕ್ಕೆ ಕುರಿ ಕಾಯುವವ ಎನ್ನುವ ಅರ್ಥಗಳಿವೆ'.[೭]

ಈ ಎಲ್ಲಾ ಪರಿಕಲ್ಪನೆಗಳು 'ಕುರುಬ' ಪದ ಕುರಿಕಾಯುವ ವೃತ್ತಿಯಿಂದಲೇ ಹುಟ್ಟಿಕೊಂಡಿದೆ ಎಂದು ಹೇಳುತ್ತವೆ. ಕುರಿ ಕಾಯುವ ವೃತ್ತಿ ಪ್ರಾಚೀನವಾದದ್ದು. "ಸುಮಾರು ೩೦೦೦ ವರ್ಷಗಳಷ್ಟು ಮುಂಚೆಯೇ ಏಷಿಯಾದ ನೈರುತ್ಯ ಭಾಗದಲ್ಲಿ ಮೇಕೆಯನ್ನು ಸಾಕುತ್ತಿದರು. ಮೇಕೆ ಜಗತ್ತಿನ ಮೊಟ್ಟಮೊದಲ ಸಾಕುಪ್ರಾಣಿ".[೮] ಈ ವಾದವನ್ನು ಹಲವು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಕುರಿ ಮತ್ತು ಮೇಕೆಗಳ ಪ್ರಮುಖವಾದ ಆಹಾರ ಹುಲ್ಲು ಮತ್ತು ಗಿಡಗಂಟೆ. ಕುರಿಸಾಕಾಣಿಕೆಗಾರರು ಹುಲ್ಲು ಮತ್ತು ಗಿಡಗಂಟೆಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಬಿಜಾಪುರ, ಬೆಳಗಾಂ, ಮಹಾರಾಷ್ಟ್ರದ ಕುರಿಗಾರರು ಇವತ್ತು ಹುಲ್ಲನ್ನು ಹುಡುಕಿಕೊಂಡು ಪ್ರತಿವರ್ಷ ಬಳ್ಳಾರಿ, ಕೊಪ್ಪಳ, ರಾಯದುರ್ಗ (ಆಂಧ್ರಪ್ರದೇಶ), ರಾಯಚೂರು, ದಾವಣಗೆರೆ ಜಿಲ್ಲೆಗಳಿಗೆ ವಲಸೆ ಬರುತ್ತಾರೆ. ತಮ್ಮದೆಯಾದ ವಲಸೆ ಮಾರ್ಗವನ್ನು ಹಾಕಿಕೊಂಡಿದ್ದಾರೆ. ಆ ಮಾರ್ಗದುದ್ದಕ್ಕೂ ಅವರ ಸಂಸ್ಕೃತಿಯ ಪಾರಂಪರಿಕ ಕುರುಹುಗಳು ಸಿಗುತ್ತವೆ. ಅವತ್ತಿನ ಕುರಿಸಾಕಾಣಿಕೆಗಾರರು (ಕುರುಬರು) ತಮ್ಮ ಸಾಕುಪ್ರಾಣಿಗಳ ಆಹಾರಕ್ಕಾಗಿ ಗಿಡಗಂಟೆ, ಗುಡ್ಡಗಾಡುಗಳ ಪ್ರದೇಶದಲ್ಲಿ ಅಲೆದಾಡಿದ್ದಾರೆ. ಬೆಟ್ಟಗುಡ್ಡಗಳಲ್ಲಿ ಅವರ ವಾಸ ಸ್ಥಳಗಳಿವೆ. ರೇಖಾಚಿತ್ರಗಳು ಸಿಗುತ್ತವೆ. ಆರಾಧ್ಯ ದೈವಗಳು ಇವೆ. ಈ ಗುಡ್ಡಗಾಡು ಪ್ರದೇಶಗಳಲ್ಲಿ ಹುಲಿ, ಕರಡಿ, ತೋಳ ಮುಂತಾದ ಕಾಡುಪ್ರಾಣಿಗಳ ಹಿಂಸೆ ಹೆಚ್ಚು. ಆ ಕಾಡುಪ್ರಾಣಿಗಳಿಂದ ತಮ್ಮ ಸಾಕು ಪ್ರಾಣಿಗಳನ್ನು ರಕ್ಷಿಸಿಕೊಳ್ಳಲು ದೊಡ್ಡ ಹೋರಾಟವನ್ನು ಮಾಡಿದ್ದಾರೆ. ನಾಯಿಗಳನ್ನು ಸಾಕಿರುವುದು ಅಥವಾ ನಾಯಿಗಳನ್ನು ಸಾಕುವ ವಿಧಾನ ಆರಂಭಗೊಂಡಿದ್ದು ತಮ್ಮ ಸಾಕುಪ್ರಾಣಿಗಳ ರಕ್ಷಣೆಗಾಗಿಯೇ. ಹಿಂದೆ ಹುಲಿ, ಸಿಂಹದ ಜೊತೆ ಹೋರಾಟ ಮಾಡುವಂತಹ ನಾಯಿಗಳು ಇದ್ದವು.[೯] ಇವತ್ತು ಕುರಿಗಾರರು ರಾತ್ರಿ ಕುರಿಗಳ ಸುತ್ತ ಕಾವಲು ನಾಯಿಗಳನ್ನು ಬಿಟ್ಟು ಮಲಗುತ್ತಾರೆ. 'ಡೊಳ್ಳು ಸಹ ಕುರಿಗಳ ಸಂರಕ್ಷಣೆಗಾಗಿ ಬಳಕೆ ಆಯ್ತು'. ಡೊಳ್ಳನ್ನು ಕೊರಳಲ್ಲಿ ಹಾಕಿಕೊಂಡು ಸದಾ ಬಡಿಯುತ್ತಾ, ಸದ್ದು ಹುಟ್ಟಿಸುತ್ತಾ ಕುರಿಗಳನ್ನು ಕಾದಿರಬೇಕು.

"ಕುರಿಯ ಮೇಲೆ ಕಣ್ಣಿರಲಪ್ಪ
ಡೊಳ್ಳಿನ ಮೇಲೆ ಒಂದು ಕೈಯಿರಲಿ"

ಡೊಳ್ಳು ದೊಡ್ಡದಾದ ಧ್ವನಿಯನ್ನು ಹೊರಚೆಲ್ಲುವ ವಾದ್ಯ. ಇದನ್ನು ರಣವಾದ್ಯವೆಂದು ಕರೆಯುತ್ತಾರೆ. ಈ ವಾದ್ಯದ ಬಡಿತದ ಶಬ್ದ ಆಕಾಶವನ್ನೇ ನಡುಗಿಸಿತು ಎನ್ನುವ ಕಥನಗಳೂ ಇವೆ. ಈ ಕಲ್ಪನೆ ಡೊಳ್ಳು ವಾದ್ಯದ ಶಬ್ದದ ವಿಸ್ತಾರವನ್ನು ಹೇಳುತ್ತದೆ. ಈ ಸಪ್ಪಳದಿಂದ ಕಾಡುಪ್ರಾಣಿಗಳು ತಮ್ಮ ಹತ್ತಿರಕ್ಕೆ ಬರಲಾರವು ಎನ್ನುವ ಪ್ರಜ್ಞಾಪೂರ್ವಕ ಎಚ್ಚರ ಕುರಿಗಾರರಲ್ಲಿರಬೇಕು. ಆ ಕಾರಣಕ್ಕೆ ಈ ವಾದ್ಯವನ್ನು ಬಳಸಿದ್ದಾನೆ. ಇವತ್ತು ಕುರಿಗಾರರು ರಾತ್ರಿಯೆಲ್ಲ ಡೊಳ್ಳನ್ನು ಬಡಿಯುತ್ತಾ ಹಾಡಗಳನ್ನು ಹಾಡುತ್ತಾರೆ. ತಮ್ಮ ಸಾಕುಪ್ರಾಣಿಗಳು ಮೇಯ್ದು ಮಲಗಿರುವಾಗ ತನಗೆ ಆನಂದವಾಗಿ ಕುಣಿದು ಕುಪ್ಪಳಿಸಿರಬೇಕು. ಕುಪ್ಪಳಿಸುತ್ತಾ ಕುಪ್ಪಳಿಸುತ್ತಾ ಹೆಜ್ಜೆಗಳನ್ನು ಹಾಕುವ ಶೈಲಿಯನ್ನು ರೂಢಿಸಿಕೊಂಡಿರಬೇಕು. ನಂತರದಲ್ಲಿ ತಮ್ಮ ಕುರಿಗಾರಿಕೆಯ ಆಚರಣೆಯಲ್ಲಿ ಈ ಬಡಿತ ಮತ್ತು ನರ್ತನವನ್ನು ಪ್ರದರ್ಶಿಸಿರಬೇಕು. ಕುರಿಗಳೊಂದಿಗೆ ನರ್ತನ ಮಾಡುವ ರೇಖಾಚಿತ್ರಗಳು ಗುಡ್ಡಗಾಡು ಪ್ರದೇಶಗಳಲ್ಲಿ ಸಿಗುತ್ತವೆ. ತಮ್ಮನ್ನು ಮತ್ತು ತಮ್ಮ ಕುರಿಗಳನ್ನು ಸಂರಕ್ಷಣೆ ಮಾಡುವ ಡೊಳ್ಳು ವಾದ್ಯವನ್ನು ಪೂಜಿಸುವುದಕ್ಕೆ ಆರಂಭಿಸಿರಬೇಕು. ಜನಪದಿಗರಲ್ಲಿ ತಮ್ಮನ್ನು ಸಂರಕ್ಷಣೆ ಮಾಡಿದ ವಸ್ತುಗಳನ್ನು ಪೂಜಿಸುವ ಸಂಪ್ರದಾಯ ಪರಂಪರೆಯಿಂದ ರೂಢಿಗತವಾಗಿ ಬಂದಿದೆ. ಯಾವತ್ತು ಡೊಳ್ಳನ್ನು ಪೂಜಿಸುವುದಕ್ಕೆ ಆರಂಭಿಸಿದರೋ ಅವತ್ತಿನಿಂದ ಆರಾಧನ ವಸ್ತುವಾಗಿ ರೂಪಾಂತರವಾಯಿತು. ಕಾಲಾಂತರದಲ್ಲಿ ಧಾರ್ಮಿಕ, ನಂಬಿಕೆ, ಗೌರವದ ಆಯಾಮ ಪಡೆಯಿತು.

> "ಅಷ್ಟ ವಾಲಗದಲ್ಲಿ ಶ್ರೇಷ್ಠವಾದ್ಯವೆಂದು ಗಟ್ಟ್ಯಾಗಿ ಹೇಳ್ಯಾನು ಕುರುಬರಿಗೆ
> ಕೆಟ್ಟಕಾಯಕ್ಕೆ ಡೊಳ್ಳು ಮುಟ್ಟಬಾರದು ನೀವ್ ಕೆಟ್ಟು ಹೋದಿರಿ ನಿಮ್ಮ ಕುಲದೊಳಗೆ
> ಬೋಧಿಸಿ ಕೈಲಾಸದ ದಾರಿಯ ಹಿಡಿದರು ವಾದಿಸಬಾರದು ಇದರೊಳಗೆ"[೨೦]

ಒಂದು ಚೌಕಟ್ಟಿನ ವ್ಯವಸ್ಥೆಯೊಳಗೆ ಪ್ರದರ್ಶನಗೊಳ್ಳುವುದಕ್ಕೆ ಆರಂಭಿಸಿತು. ಆದರೆ ಇವತ್ತು ಈ ಪಾರಂಪರಿಕ ನಂಬಿಕೆಯ ಪರಧಿಯೊಳಗಡೆ ಪ್ರದರ್ಶನಗೊಳ್ಳುತ್ತಿಲ್ಲ.

ಈ ಕಥನಗಳ ಸೂಕ್ಷ್ಮತೆಯನ್ನು ನೋಡುವುದಾದರೆ ಡೊಳ್ಳುವಾದ್ಯವನ್ನು ಕುರಿಗಾರರು/ಪಶುಪಾಲಕರು ತಮ್ಮ ಸಾಕುಪ್ರಾಣಿಗಳನ್ನು ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಸೃಷ್ಟಿಸಿಕೊಂಡರು. ಕಾಲಾಂತರದಲ್ಲಿ ಧಾರ್ಮಿಕ ವಾದ್ಯವಾಗಿ ರೂಪಗೊಂಡಿತು. ಇದು ಜನಪದರಲ್ಲಿ ನಡೆಯುವ ಸಹಜ ಕ್ರಿಯೆ

೨.೩. ಡೊಳ್ಳು ವಾದ್ಯದ ಹುಟ್ಟು

ಡೊಳ್ಳುವಾದ್ಯ ಹೇಗೆ ಹುಟ್ಟಿತು? ಅದು ಕುರುಬ ಸಮುದಾಯಕ್ಕೆ ಹೇಗೆ ಬಂತು? ಅದರ ಹಿಂದಿನ ಉದ್ದೇಶವೇನು? ಅದರ ಮಹತ್ವವೇನು? ಅನ್ನುವುದನ್ನು ತಿಳಿಸುವ ಅನೇಕ ಸಾಂಸ್ಕೃತಿಕ ಕಥನಗಳು ಹಾಲುಮತ ಸಮುದಾಯದಲ್ಲಿವೆ.

ಕಥನ ಒಂದು : ಶಿವ ಒಂದು ದಿನ ಪಾರ್ವತಿಯ ಕಣ್ಣು ತಪ್ಪಿಸಿ, ಕೈಲಾಸವನ್ನು ತೊರೆದು ಸಿದ್ಧಗಿರಿಯಲ್ಲಿ ತಪಸ್ಸು ಮಾಡಲು ಆರಂಭಿಸಿದ. ತಪ್ಪಸಿಗೆ ವಿಘ್ನವುಂಟಾಗದಿರಲೆಂದು ಚಾರವಾದಕನೆಂಬ ದೈತ್ಯನನ್ನು ಕಾವಲಿಟ್ಟುಕೊಂಡ. ಶಿವ ತಪಸ್ಸು ಮಾಡುತ್ತಿರುವುದು ನಾರದನಿಂದ ಅಕಸ್ಮಾತಾಗಿ ಪಾರ್ವತಿಗೆ ತಿಳಿಯುತ್ತದೆ. ಪಾರ್ವತಿ ನಂದಿಯನ್ನೇರಿ ಶಿವನಲ್ಲಿಗೆ ಬರುತ್ತಾಳೆ. ಚಾರವಾದಕ ಶಿವನ ದರ್ಶನಕ್ಕೆ

[illegible]

ಅವಕಾಶ ಮಾಡಿಕೊಡುವುದಿಲ್ಲ. ಪಾರ್ವತಿ ಕೋಪಿತಗೊಳ್ಳುತ್ತಾಳೆ. ಪಾರ್ವತಿ ವಾಹನವಾದ ನಂದಿಗೂ ಸೇವಕನಿಗೂ ಘೋರಯುದ್ಧ ನಡೆಯುತ್ತದೆ. ಕೋಪಿತನಾದ ನಂದಿ ತನ್ನ ಕೊಂಬಿನಿಂದ ದೈತ್ಯನನ್ನು ತಿವಿದು ತಿವಿದು ಗಾಯಗೊಳಿಸುತ್ತದೆ. ಗಾಯಗೊಂಡ ದೈತ್ಯ ಸಾವಿನ ಸ್ಥಿತಿಯಲ್ಲಿ ಕಿರುಚಿಕೊಳ್ಳುತ್ತಾನೆ. ಈ ಧ್ವನಿಯ ಆರ್ಥನಾದ ಶಿವನಿಗೂ ಮುಟ್ಟುತ್ತದೆ. ತಕ್ಷಣ ಹೊರಗಡೆ ಬರುತ್ತಾನೆ. ಚಾರವಾದಕನಿಗೆ ಶಿವ-ಪಾರ್ವತಿಯರ ಸಂಬಂಧದ ವಾಸ್ತವ ತಿಳಿಯುತ್ತದೆ. ತಪ್ಪಿನ ಅರಿವಾಗುತ್ತದೆ. ತನ್ನನ್ನು ಕ್ಷಮಿಸಿ ಶಾಶ್ವತವಾಗಿ ಭೂಲೋಕದಲ್ಲಿ ಉಳಿಸುವಂತೆ ಶಿವನಲ್ಲಿ ಅಂಗಲಾಚುತ್ತಾನೆ. ಈತನ ಬೇಡಿಕೆಗೆ ಮನಸೋತ ಶಿವ ಚಾರವಾದಕನನ್ನು ಅಮರನನ್ನಾಗಿಸುವುದಕ್ಕೆ ಡೊಳ್ಳನ್ನು ಸೃಷ್ಟಿಸಿದನು.

"ಚರ್ಮವ ತಗೆದು ಆಸ್ತಿಯ ಬಿಗಿದು
ನರದ ಹಗ್ಗವನು ಮಾಡಿದನು
ಪೂರ್ಣವಾಗಿ ನಾದ ಏರಲು ಬ್ರಹ್ಮಕ್ಕೆ
ಹಿರಿಡೊಳ್ಳು ಎಂಬ ಹೆಸರಿಟ್ಟನು"[೧೧]

ಆ ಡೊಳ್ಳನ್ನು ಕುರಿ ಕಾಯುವ ಕುರುಬನ ಕೈಯಲ್ಲಿಟ್ಟು ಮತ್ತೆ ಕೈಲಾಸಕ್ಕೆ ಹೋದನು.

ಕಥನ ಎರಡು : ಡೊಳ್ಳಾಸುರನೆಂಬ ರಾಕ್ಷಸನಿದ್ದ. ಈತನಿಗೆ ತಾನೊಬ್ಬನೇ ಈ ಲೋಕದಲ್ಲಿರಬೇಕೆಂಬ ಆಸೆ. ಆ ಕಾರಣಕ್ಕೆ ಶಿವನನ್ನು ಮೆಚ್ಚಿಸಿಕೊಳ್ಳುವುದಕ್ಕೆ ಘೋರವಾದ ತಪಸ್ಸು ಮಾಡಿದ. ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷವಾಗಿ ಏನು ಬೇಕೆಂದು ಕೇಳಿದ. ಆಗ ರಾಕ್ಷಸ ಶಿವನನ್ನೇ (ನಿನ್ನನ್ನೇ) ನುಂಗುವ ಆಸೆಯನ್ನು ವ್ಯಕ್ತಪಡಿಸಿದ. ಇದಕ್ಕೆ ಒಪ್ಪಿಕೊಂಡ ಶಿವ ನನ್ನ ದೇಹದಲ್ಲಿ ನನ್ನ ಅರ್ಧಾಂಗಿನಿಯ ಪಾಲು ಇದೆ. ಆಕೆಯ ಅಪ್ಪಣೆಯನ್ನು ಪಡೆದುಕೊಂಡು ಬರುವ ಭರವಸೆಯನ್ನು ವ್ಯಕ್ತಪಡಿಸಿದ. ಪತ್ನಿಯ ಅನುಮತಿಯನ್ನು ಶಿವ ಪಡೆದುಕೊಂಡು ಮತ್ತೆ ವಾಪಾಸ್ಸು ಬಂದು ಪಂಚರಾತ್ರಿಗಳು ಕೂಡಿದಾಗ ಹೊರಗಡೆ ಬಿಡಬೇಕು ಅನ್ನುವ ಕರಾರಿನೊಂದಿಗೆ ಡೊಳ್ಳಾಸುರನಿಗೆ ದೇಹವನ್ನು ಒಪ್ಪಿಸಿದ. ಡೊಳ್ಳಾಸುರ ಶಿವನನ್ನು ನುಂಗಿದ. ಪಂಚರಾತ್ರಿಗಳು ಕೂಡಿದವು. ಒಡಂಬಡಿಕೆಯಂತೆ ಡೊಳ್ಳಾಸುರ ಶಿವನನ್ನು ಹೊರಗಡೆ ಬಿಡಲಿಲ್ಲ. ಪಂಚರಾತ್ರಿಗಳು ಕೂಡಿದ ನಂತರ ಶಿವ ಕಾಣೆಸದಿರುವುದಕ್ಕೆ ಪಾರ್ವತಿಗೆ ಆತಂಕವಾಯಿತು. ಹುಡುಕಾಡುವುದಕ್ಕೆ ಆರಂಭಿಸಿದಳು. ಕರಾರು ಮುಗಿದರೂ ಬಿಡದ ಕಾರಣಕ್ಕೆ ಬೇಸತ್ತ ಶಿವ ಡೊಳ್ಳಾಸುರನ ಹೊಟ್ಟೆಯಲ್ಲಿ ಬೆಳೆಯುವುದಕ್ಕೆ ಆರಂಭಿಸಿದ. ಬೆಳೆಯುತ್ತಾ ಹೋದಂತೆಲ್ಲಾ ಡೊಳ್ಳಾಸುರನ ಹೊಟ್ಟೆ ದೊಡ್ಡದಾಗಿ ಸೀಳಿ ಹೊಯ್ತು. ಶಿವ ಅಸುರನ ಡೊಕ್ಕೆಯಿಂದ ಪಡಗ ಮಾಡಿದ. ಚರ್ಮವನ್ನು ಪಡಗಕ್ಕೆ ಮುಚ್ಚಿದ. ಕರುಳು ತೆಗೆದು ಹಗ್ಗ ಮಾಡಿದ. ಕೊರೆಹಲ್ಲುಗಳನ್ನು ಗುಣಿ ಮಾಡಿದ. ಅಂಗೈಯನ್ನು ಕಡಿದು ತಾಳ ಮಾಡಿದ. ತಾನು ಹೊರಗಡೆ ಬಂದಿರುವುದು ಪಾರ್ವತಿಗೆ ಗೊತ್ತಾಗಲಿ ಎಂದು ಆ ಡೊಳ್ಳನ್ನು ಹೆಗಲಿಗೆ ಹಾಕಿಕೊಂಡು ಹಾರ್ಯಾಡಿ ಬಡಿಯುವುದಕ್ಕೆ ಆರಂಭಿಸಿದ. ಆಗ

"ಸ್ವಾಮಿ ನಮ್ಮಯ ದೇವಽಽರ ಬಂದಾರ ಬನ್ನೀರೆ
ದೇವಿ ನಮ್ಮಯ ದೇವಽಽರ ಬಂದಾರ ಬನ್ನಿರೇ"

ಎಂದು ಶಿವನ ಭಕ್ತರು ಹಾಡಿ ಪಾರ್ವತಿಯನ್ನು ಕರೆದರು. ಆ ಸಂದರ್ಭದಲ್ಲಿ ಕರೆದ ವಿಧಾನವೇ ಇವತ್ತು ಡೊಳ್ಳಿನ ಹಾಡುಗಳ ಪಲ್ಲವಿ ಆಯ್ತು. ಈ ನಂಬಿಕೆ ಈಗಲೂ ಕಲಾವಿದರಲ್ಲಿದೆ.

ಕಥನ ಮೂರು : ಆಂಧ್ರಪ್ರದೇಶದಲ್ಲಿ ಈ ಕಥನ ಹೆಚ್ಚು ಜನಪ್ರಿಯ. "ಪ್ರಾಚೀನ ಕಾಲದಲ್ಲಿ ಹದಿನಾರು ಜನ ರಾಕ್ಷಸರು ಒಂದೆಡೆ ನೆಲೆಸಿದ್ದರು. ಇವರ ಮುಖಂಡ ತ್ರಿಪುರಾಂತಕ ಪರ್ವತದಲ್ಲಿದ್ದ. ಆತ ಬ್ರಹ್ಮ, ಶಿವ, ವಿಷ್ಣು ಮುಂತಾದ ಸೃಷ್ಟಿಕರ್ತ ದೇವತೆಗಳ ಪರಮಭಕ್ತ. ಮೂವತ್ತೆರಡು ಆಯುಧ ಗಳಿಂದ ಕೊಂದರೂ ನಾಶವಾಗದಂತೆ, ರಾಕ್ಷಸನ ಹನಿರಕ್ತ ನೆಲಕ್ಕೆ ಬಿದ್ದರೆ ಎಲ್ಲಾ ಸೈನ್ಯ ಪುನಃ ಜನ್ಮತಾಳುವಂತೆ, ಏಳು ನಿಮಿಷಗಳಲ್ಲಿ ಮರಳಿ ಜನ್ಮಧರಿಸುವಂತೆ ಬ್ರಹ್ಮ, ಶಿವ, ವಿಷ್ಣು ದೇವತೆಗಳಿಂದ ವರವನ್ನು ಪಡೆದಿದ್ದ. ತಾನು ವರವನ್ನು ಪಡೆದಿದ್ದೇನೆ ಎನ್ನುವ ಆಹಂನಿಂದ ರಾಕ್ಷಸ ದೇವತೆಗಳಿಗೆ ಹಿಂಸೆ ಕೊಡುತ್ತಿದ್ದ. ಋಷಿಗಳ ಯಜ್ಞಯಾಗಗಳನ್ನು ಹಾಳು ಮಾಡುತ್ತಿದ್ದ. ಇವರೆಲ್ಲರು ಒಟ್ಟಿಗೆ ಸೇರಿ ವಿಶ್ವಕರ್ಮನಿಗೆ ಮೊರೆ ಹೋದರು. ರಾಕ್ಷಸನಿಂದ ತಮ್ಮನ್ನು ರಕ್ಷಿಸಲು ಪ್ರಾರ್ಥಿಸಿದರು. ವಿಶ್ವಕರ್ಮ ರಾಕ್ಷಸನ ವಿರುದ್ಧ ದಾಳಿ ನಡೆಸಿದನು. ಅವನಿಂದ ಒಂದು ತೊಟ್ಟು ರಕ್ತ ನೆಲಕ್ಕೆ ಬೀಳದಂತೆ ಕಾಳಿಕಾದೇವಿ ತನ್ನ ನಾಲಿಗೆಯನ್ನು ಚಾಚಿ ಬಿದ್ದ ರಕ್ತವನ್ನು ನೆಕ್ಕಿದಳು. ಆ ರಾಕ್ಷಸ ಸಂಹಾರನಾದ. ವಿಶ್ವಕರ್ಮ ದೇಹದ ಅಂಗಾಂಗಗಳಿಂದ ಡೊಳ್ಳನ್ನು ನಿರ್ಮಿಸಿ, ದೇವತೆಗಳಿಗೆ ಕಾಣಿಕೆಯಾಗಿ ಕೊಟ್ಟ. ಈ ವಾದ್ಯವನ್ನು ಬಾರಿಸುವುದು ಆ ದೇವತೆಗಳಿಗೆ ಗೊತ್ತಾಗಲಿಲ್ಲ. ಆಗ ದೇವತೆಗಳು ಓಂಕಾರ, ಝೇಂಕಾರ, ಢಂಕಾರ ಸ್ವರ ಹೊರಡುವಂತೆ ಅದನ್ನು ನುಡಿಸುವ ಒಬ್ಬನನ್ನು ಸೃಷ್ಟಿಸುವಂತೆ ವಿಶ್ವಕರ್ಮ ದಲ್ಲಿ ಬೇಡಿಕೆ ಇಟ್ಟರು. ಆಗ ವಿಶ್ವಕರ್ಮ ಚರ್ಮದಿಂದ ಮತ್ತು ಪವಿತ್ರ ಭೂಮಿಯಿಂದ ರುದ್ರ ಮಹೇಶ್ವರರನ್ನು ಸೃಷ್ಟಿಸಿದ".[೨]

ಕಥನಗಳ ಭಿನ್ನ ಪಠ್ಯಗಳು

* ಶಿವನ ಹುಡುಕಾಟಕ್ಕೆ ಪಾರ್ವತಿ ವಿಷ್ಣುವಿನಲ್ಲಿ ಮೊರೆ ಹೋಗುತ್ತಾಳೆ. ಪಾರ್ವತಿಯ ಮನವಿಗೆ ಮನಸೋತ ವಿಷ್ಣು ಶಿವನನ್ನು ಡೊಳ್ಳಾಸುರನೆಂಬ ರಾಕ್ಷಸನ ಹೊಟ್ಟೆಯಿಂದ ಹೊರಗಡೆ ತರುತ್ತಾನೆ. ಇಲ್ಲಿ ಶೈವ ಮತ್ತು ವೈಷ್ಣವ ಧರ್ಮ ಸಂಕರಶೀಲಗೊಂಡಿದೆ.
* ಋಷಿಗಳು ಮತ್ತು ರಾಕ್ಷಸದೇವತೆಗಳು ರಾಕ್ಷಸನ ಸಂಹಾರಕ್ಕಾಗಿ ವಿಶ್ವಕರ್ಮನಲ್ಲಿ ಮನವಿ ಮಾಡಿದರು. ಕಾಳಿಕಾದೇವಿಯ ಜೊತೆಗೂಡಿ, ವಿಶ್ವಕರ್ಮ, ರಾಕ್ಷಸನನ್ನು ಸಂಹಾರ ಮಾಡಿದ. ಆ ದೇಹವನ್ನು ಡೊಳ್ಳು ವಾದ್ಯವನ್ನಾಗಿ ಮಾಡಿ ರಾಕ್ಷಸ ದೇವತೆಗಳಿಗೆ ಕೊಟ್ಟ. ದೇವತೆಗಳಿಗೆ ನುಡಿಸುವುದಕ್ಕೆ ಬರದ ಕಾರಣ ರುದ್ರಮುನಿಯನ್ನು ಸೃಷ್ಟಿಸಿದ. ರುದ್ರಮುನಿ ರೇವಣಸಿದ್ಧನ ಮಗ. ರೇವಣಸಿದ್ಧನ ನಂತರ ಡೊಳ್ಳು ಹುಟ್ಟಿತೆನ್ನುವ ವಾದ ಸರಿಯಾದುದಲ್ಲ.
* ಪಾರ್ವತಿಯ ಅಪ್ಪಣೆಯಂತೆ ನಂದಿ ಡೊಳ್ಳಾಸುರನ ಹೊಟ್ಟೆಗೆ ತಿವಿದು ಶಿವನನ್ನು ಹೊರಗಡೆ ತರುತ್ತಾನೆ.
* ಕಾವಲುಗಾರನ ದೇಹವನ್ನು ಶಿವ ಡೊಳ್ಳಾಗಿಸಿದ. ರಾಕ್ಷಸನ ದೇಹವನ್ನು ಶಿವ ಡೊಳ್ಳು ವಾದ್ಯವನ್ನಾಗಿಸಿದ. ಇನ್ನು ಮುಂತಾದ ಭಿನ್ನಪಠ್ಯಗಳು ಸಿಗುತ್ತವೆ.

೨.೩.೧. ಡೊಳ್ಳು ವಾದ್ಯ ಸೃಷ್ಟಿಯಾದ ತಾತ್ವಿಕ ಆಯಾಮಗಳು

ಡೊಳ್ಳು ವಾದ್ಯ ಸೃಷ್ಟಿಯಾದ ಕಥನಗಳನ್ನು ತಾತ್ವಿಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಈ ಕಥನಗಳಲ್ಲಿ ಹಾಲುಮತ ಸಮುದಾಯದ ಪಾರಂಪರಿಕ ಚಿತ್ರಣಗಳು ಅಡಕವಾಗಿವೆ. ಅವುಗಳನ್ನು ಸಾಂಸ್ಕೃತಿಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕಾದ ಅನಿವಾರ್ಯತೆ ಇದೆ. ಈ ಕಥನಗಳು ಎರಡು ಸಂಸ್ಕೃತಿಗಳು ಸಂಘರ್ಷಿಸಿದ, ಸಂಸ್ಕೃತೀಕರಣಗೊಂಡ ಹಂತಗಳನ್ನು ತಿಳಿಸುತ್ತವೆ. ಮಹಿಳಾ ಪ್ರಧಾನ ಸಂಸ್ಕೃತಿ, ಪುರುಷ ಪ್ರಧಾನ ಸಂಸ್ಕೃತಿಯಾಗಿ; ಶೈವ ಸಂಸ್ಕೃತಿ, ವೈಷ್ಣವ ಸಂಸ್ಕೃತಿಯಾಗಿ; ಶೈವ ಸಂಸ್ಕೃತಿ ವೀರಶೈವ ಸಂಸ್ಕೃತಿಯಾಗಿ ರೂಪಾಂತರವಾಗಿರುವ ಅಂಶಗಳು ಇವೆ. ಶಿವ(ಪುರುಷ)ನನ್ನು ಪಾರ್ವತಿ (ಮಹಿಳೆ) ಹುಡುಕಿಕೊಳ್ಳುವ ಹಂಬಲವಿದೆ. ಅದು ಸ್ವಾರ್ಥದ ಹುಡುಕಾಟವಲ್ಲ. ಪುರುಷನ ಆಸೆಯನ್ನು ಬೆಂಬಲಿಸುವ ಹುಡುಕಾಟ. ಶಿವ ತಪಸ್ಸು-ಸಿದ್ಧಿ-ಸಾಧನೆಗಾಗಿ ಹಂಬಲಿಸುತ್ತಾನೆ. ಮೋಹಿತನಾಗುತ್ತಾನೆ. ಸಿದ್ಧಿಯನ್ನು ಪಡೆಯುವುದಕ್ಕಾಗಿ ಪಾರ್ವತಿಯಿಂದ ದೂರವಾಗುತ್ತಾನೆ. ಸಿದ್ಧಿಯನ್ನು ಪಡೆಯಬೇಕಾದರೆ ಮಹಿಳೆಯಿಂದ ದೂರವಿರಬೇಕು ಅನ್ನುವ ನಿಯಮ ಸಿದ್ಧಪಂಥದಲ್ಲಿದೆ. ನಾಥ ಸಿದ್ಧಿಗಳಂತೂ ಮಹಿಳೆ ಯರನ್ನು ಹತ್ತಿರ ಸೇರಿಸಿಕೊಳ್ಳುತ್ತಿರಲಿಲ್ಲ. ಬಿಂದು(ವೀರ್ಯ)ನಾಶ ತಡೆಯುವ ಉದ್ದೇಶ ಇವರದು. ಆದರೆ ಪಾರ್ವತಿ ಶಿವನನ್ನು ಬಿಟ್ಟು ಇರಲಾರಳು. ಜೀವಿಸಲಾರಳು. ಆ ಕಾರಣಕ್ಕೆ ಶಿವ ಡೊಳ್ಳಾಸುರನ ಹೊಟ್ಟೆಯಿಂದ ಸರಿಯಾದ ಸಮಯಕ್ಕೆ ಬರದೆ ಇದ್ದಾಗ ಅಂದರೆ ಕಣ್ಮರೆಯಾದಾಗ ಹುಡುಕಾಡುತ್ತಾಳೆ. ರೋದಿಸುತ್ತಾಳೆ. ತನ್ನ ಮಗ ಗಣಪತಿ ಮತ್ತು ಆಪ್ತರನ್ನು ಹುಡುಕಾಟಕ್ಕೆ ಹಚ್ಚುತ್ತಾಳೆ. ರಾಕ್ಷಸನ ಜೊತೆ ಯುದ್ಧ ಕೈಗೊಳ್ಳುತ್ತಾಳೆ. ಎದುರಾದವರನ್ನು ಸಂಹಾರ ಮಾಡುತ್ತಾಳೆ.

ಹಾಲುಮತದ ಸಾಂಸ್ಕೃತಿಕ ವೀರರು ತಮ್ಮ ಸಾಧನೆಗಾಗಿ ಮನೆ ವೃತ್ತಿಯನ್ನು ಬಿಟ್ಟು ಗವಿ, ಗುಡ್ಡ ಬೆಟ್ಟಗಳನ್ನು ಸೇರುತ್ತಿದ್ದರು. ಮಾಳಿಂಗರಾಯನನ್ನು ಪಡೆಯುವುದಕ್ಕೆ ಸ್ವಾಮಿರಾಯ ಬೆಟ್ಟಕ್ಕೆ ಹೋಗಿ ತಪಸ್ಸು ಮಾಡುತ್ತಾನೆ. ಹೆಂಡತಿ ಮನೆಯ ಜವಾಬ್ದಾರಿಗಳನ್ನು ಹೊರುತ್ತಾಳೆ. ಅಮೋಘಸಿದ್ಧ ತನ್ನ ಭೂತಾಳಸಿದ್ಧನ ಕೈಯಲ್ಲಿ ನಾಗಬೆತ್ತ ಕಳಿಸಿಕೊಡುತ್ತಾನೆ. ಆ ಬೆತ್ತದೊಂದಿಗೆ ವಿವಾಹ ಮಾಡುತ್ತಾರೆ. "ಪಾರ್ವತಿಯೊಂದಿಗಿನ ಜೂಜಾಟದಲ್ಲಿ ಸೋತ ಶಿವ ಯಾರಿಗೂ ಕಾಣದಂತೆ ಜೀವಿಸಬೇಕು ಎನ್ನುವ ಮಾತಿನಂತೆ ಶಿವ ಕಲ್ಲುಗವಿಯಲ್ಲಿ ಕಲ್ಲಾಗಿ ಬಿದ್ದಿದ್ದ"[೧೧] ಎನ್ನುವ ಕಥನವಿದೆ. ಕಲ್ಲುಗವಿಯಲ್ಲಿ ಕಲ್ಲಾಗುವಿಕೆ ಅಂದರೆ ಗವಿಯೊಳಗೆ ತಪಸ್ಸಿನಲ್ಲಿ ತಲ್ಲೀನನಾಗಿದ್ದ ಎನ್ನುವ ಸೂಕ್ಷ್ಮತೆಯನ್ನು ಹೇಳುತ್ತದೆ. ಶಿವ ಡೊಳ್ಳಾಸುರನ ಹೊಟ್ಟೆಯಲ್ಲಿ ಸೇರುವಿಕೆ ಒಂದು ಬಗೆಯ ಅಡಗುವಿಕೆಯೆ ಸರಿ. ಹೊಟ್ಟೆಯಲ್ಲಿ ಬೆಳೆಯುವುದು ತಪಸ್ಸನ್ನು ಸಾಧಿಸಿದಂತೆ. ಹಾಲುಮತದ ಸಾಂಸ್ಕೃತಿಕ ವೀರರು ಸಿದ್ಧಿಯನ್ನು ಪಡೆಯುವುದಕ್ಕೆ ಹಂಬಲಿಸುತ್ತಿದ್ದರು. ಸ್ವತಃ ಸಿದ್ಧಿಗಳು ಆಗಿದ್ದರು. ಸೋನಾರಸಿದ್ಧ, ರೇವಣಸಿದ್ಧ, ಅಮೋಘಸಿದ್ಧ, ಕರಸಿದ್ಧ ಮುಂತಾದ ಹೆಸರುಗಳು ಇವರು ಸಿದ್ಧಪುರುಷರಾಗಿದ್ದರು ಎನ್ನುವುದನ್ನು ತಿಳಿಸುತ್ತದೆ. ಇವರ ಆರಾಧನ ಕೇಂದ್ರಗಳ ಸುತ್ತ ಗವಿಗಳು, ಬೆಟ್ಟಗಳು ಇವೆ. ಚಿತ್ರದುರ್ಗ ತಾಲ್ಲೂಕು ಹುಲ್ಲೂರು ಗ್ರಾಮದಲ್ಲಿರುವ ರೇವಣಸಿದ್ಧ ದೇವಾಲಯದ ಸುತ್ತ ಸಣ್ಣ ಸಣ್ಣ ಗವಿಗಳು ಇವೆ. ಮುದ್ದೇಬಿಹಾಳ, ಇಂಗಳೇಶ್ವರ ಮುಂತಾದ ಸ್ಥಳಗಳು ಗವಿಗಳು. ಚಿತ್ರದುರ್ಗ ಜಿಲ್ಲೆ, ಕಡೂರು ತಾಲ್ಲೂಕು ಭೈರವೇಶ್ವರ ಬೆಟ್ಟ, ಮಾಗಡಿ ಭೈರಾಮೇಶ್ವರ ಬೆಟ್ಟಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಕೇವಲ ಸಿದ್ಧಿಯಷ್ಟೇ ಜೀವನವಲ್ಲ ಅನ್ನುವುದು ಹಾಲುಮತದ ಸಾಂಸ್ಕೃತಿಕ ವೀರಣೆಯರ ಪರಿಕಲ್ಪನೆ ಆಗಿತ್ತು. ಸಿದ್ಧಿಯತೆಯಿಂದ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಅನ್ನುವ ವಾಸ್ತವವನ್ನು ಈ ಮಹಿಳೆಯರು ಅರಿತಿದ್ದರು. ಹಾಗಾಗಿ ಸಾಂಸ್ಕೃತಿಕ ವೀರರನ್ನು ಸಿದ್ಧಿಯಿಂದ ಹೊರತರುವ ಕೆಲಸ ಮಾಡುತ್ತಿದ್ದರು. ಶಿವನನ್ನು ಪಾರ್ವತಿ ಹುಡುಕಿ ಕರೆತರುವುದು ಸಿದ್ಧಿಯಿಂದ ಹೊರತರುವ ಕೆಲಸದಂತೆ ಕಂಡುಬರುತ್ತದೆ. 'ಬಸವ' ವೃತ್ತಿ(ದನಗಾರಿಕೆ)ಯ ಸಾಂಕೇತಿಕವಾಗಿ ಕಾಣಿಸುತ್ತದೆ.

ಹಾಲುಮತ ಸಮುದಾಯವು ಡೊಳ್ಳನ್ನು ಜಾಗೃತಿಯ ಸಂಕೇತವಾಗಿ, ಉತ್ಪಾದನೆಯ ಸಂಕೇತವಾಗಿ, ಸಂರಕ್ಷಣೆಯ ಸಂಕೇತವಾಗಿ, ಅಭಿವೃದ್ಧಿಯ ಸಂಕೇತವಾಗಿ, ಒಂದು ವೃತ್ತಿಯನ್ನು ಗಟ್ಟಿಗೊಳಿಸಿಕೊಳ್ಳುವ ಸಂಕೇತವಾಗಿ ಪಡೆಯಿತು. ಇಲ್ಲಿ ರಾಕ್ಷಸರನ್ನು ಸಂಹಾರ ಮಾಡುವುದು ಮನುಷ್ಯತ್ವದ ಗುಣಗಳಿಗೆ ವಿರುದ್ಧವಾಗಿರುವ ವ್ಯಕ್ತಿಗಳನ್ನು ಸಂಹಾರ ಮಾಡುವ ಪರಿಕಲ್ಪನೆಯಂತಿದೆ. ಹಿಂಸೆಯನ್ನು ಹೊಡೆದು ಹಾಕಿ ಅಹಿಂಸೆಯನ್ನು ಪ್ರತಿಪಾದಿಸುವ ಧೋರಣೆಯಿದೆ. "ಶಿವ-ಶಿವೆಯರ ಅದ್ವಯ ಸ್ವರೂಪವು ಅಡವಿ ಕುಲಕ್ಕೆ; ರಾಕ್ಷಸ ಕುಲಕ್ಕೆ ನೇರವಾಗಿ ನಿಂತಾಗ ಪಿತೃಸಮಾಜವು ಶಿವೆ(ಪಾರ್ವತಿ)ಯನ್ನು ಚಂಡಿಚಾಮುಂಡಿ ಯನ್ನಾಗಿರಿಸಿ ಅವಳ ಕುಲದವರೇ ಆದ ಅಸುರರನ್ನು ಬಗ್ಗುಪಡಿಸಿರುವುದುಂಟು".[೧೯] ಕಥನ ಮೂರರಲ್ಲಿ ಇಂತಹದೊಂದು ಚಿತ್ರಣವಿದೆ. ಹೆಣ್ಣು ರಾಕ್ಷಸರನ್ನು ಕೊಲ್ಲುವುದಕ್ಕೆ ಚಾಮುಂಡಿ ಸಹಾಯ ಮಾಡುತ್ತಾಳೆ ಅನ್ನುವ ಕಥನಗಳು ಇದಕ್ಕೆ ಪೂರಕವಾಗಿ ನಿಲ್ಲುತ್ತವೆ.

ಡೊಳ್ಳು ವಾದ್ಯ ನರಬಲಿಯ ಸಂಕೇತವಾಗಿ ಕಾಣಿಸುತ್ತದೆ. ಇದು ಮಾನವನ ದೇಹದಿಂದ ರಚನೆ ಆಗಿರುವಂಥದ್ದು. ಪಶುಪಾಲಕರಲ್ಲಿ 'ನರಬಲಿ' ಆಚರಣೆ ರೂಢಿಯಲ್ಲಿತ್ತು. ಜೊತೆಗೆ ಇದು ತುಂಬಾ ಪ್ರಾಚೀನ ವಾದ್ಯ. ಈ ವಾದ್ಯದಲ್ಲಿ ಕಬ್ಬಿಣದ ಬಳಕೆ ಇಲ್ಲ. ಕೇವಲ ಕಟ್ಟಿಗೆ ಮತ್ತು ಪ್ರಾಣಿಗಳ ಚರ್ಮದ ಬಳಕೆ ಇದೆ. ಇದು ತಂತಿ-ಕಬ್ಬಿಣದ ವಾದ್ಯಗಳಿಗಿಂತಲೂ ಪುರಾತನವಾದದ್ದು.

೨.೩.೨ ಡೊಳ್ಳು ವಾದ್ಯದ ಕಥನಗಳ ಮೇಲೆ ಅನ್ಯಧರ್ಮದ ಪ್ರಭಾವ

ಹಾಲುಮತ ಸಮುದಾಯದ ಮೇಲೆ ವೈಷ್ಣವ ಮತ್ತು ವೀರಶೈವ ಧರ್ಮದ ಪ್ರಭಾವ ಆಗಿರುವಂತೆ ಡೊಳ್ಳು ವಾದ್ಯ ಸೃಷ್ಟಿಯಾದ ಕಥನಗಳ ಮೇಲೆ ಹಲವು ಧರ್ಮಗಳ ಪ್ರಭಾವವೂ ಆಗಿದೆ. ಪಾರ್ವತಿ ಶಿವನನ್ನು ಹುಡುಕಿಕೊಳ್ಳುವುದಕ್ಕೆ 'ವಿಷ್ಣು'ವನ್ನು ಅವಲಂಬಿಸುವುದು, ವಿಷ್ಣು ಶಿವನನ್ನು ಹುಡುಕಿಕೊಡುವುದು, ವೈಷ್ಣವ ಧರ್ಮದ ಪ್ರಭಾವವನ್ನು ತಿಳಿಸುತ್ತದೆ. ಇಲ್ಲಿ ಶಿವ ಮತ್ತು ವಿಷ್ಣು ಬೇರೆ ಬೇರೆ ಆಗಿದ್ದಾರೆ. ದೇವಾನುದೇವತೆಗಳು, ಋಷಿಮುನಿಗಳು ವಿಶ್ವಕರ್ಮದ ಹತ್ತಿರ ತಮ್ಮನ್ನು ಪಾರುಮಾಡುವಂತೆ ಬೇಡುವುದು; ವೀರಶೈವ ಧರ್ಮದ ಪ್ರಭಾವದಂತೆ ಕಾಣಿಸುತ್ತದೆ. ವೈಷ್ಣವ-ಶೈವ-ವೀರಶೈವ ಧರ್ಮಗಳು ಮೂಲತಃ ಒಂದೇ ಆದರೂ ಯುರೋಪಿನಲ್ಲಿ ಕ್ಯಾಥೋಲಿಕರಿಂದ ಪ್ರಾಟೆಸ್ಟೆಂಟರು ಬೇರೆಯಾದಂತೆ ಬೇರೆಯಾಗಿವೆ. ಈ ಶೈವರಾಧನೆ ಬೇರೆ ಬೇರೆ ಸ್ವರೂಪ ಪಡೆದಂತೆಲ್ಲ ಡೊಳ್ಳುವಾದ್ಯದ ಕಥನ ಬೇರೆ ಬೇರೆ ಧರ್ಮದ ಪ್ರಭಾವಕ್ಕೆ ಒಳಗಾಗುತ್ತ ಹೋಯಿತು. ಕಥನಗಳು ರೂಪಾಂತರವಾಗುತ್ತಾ ಬಂದವು.

ಡೊಳ್ಳಿನ ಹಾಡುಗಳ ಪ್ರಕಾರ ಕುರಿಗಳನ್ನು ಒಂದು ವೃತ್ತಿ ಎನ್ನುವಂತೆ ಮೊದಲು ಕಾಯ್ದ ವ್ಯಕ್ತಿ 'ಪದ್ಮಗೊಂಡ'. ಪದ್ಮಗೊಂಡನ ಮುಖಾಂತರ ಹಾಲುಮತ ಮತ್ತು ಡೊಳ್ಳು ವಾದ್ಯದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗಿದೆ. ಕೃಷಿ ಮತ್ತು ಪಶುಪಾಲನಾ ಘಟ್ಟದ ಸಂಕರಶೀಲ ವ್ಯಕ್ತಿಯಾಗಿ ಈತ ಕಾಣಿಸುತ್ತಾನೆ. ಕುರುಬ ಕುಲ "ಹತ್ತಿಕಂಕಣ" ಮತ್ತು "ಉಣ್ಣೆಕಂಕಣ"ವೆಂದು ಎರಡು ಕುಲಗಳಾಗಿದ್ದು ಈತನಿಂದಲೇ. ಹತ್ತಿಕಂಕಣ ಮತ್ತು ಉಣ್ಣೆಕಂಕಣ ಹಾಲುಮತ ಸಮುದಾಯದ ಪ್ರಾಚೀನ ಮತ್ತು ಪ್ರಧಾನ ಪಂಗಡಗಳು. ಈ ಪಂಗಡಗಳಿಂದ ಮತ್ತೆ ಹಲವು ಸಮುದಾಯಗಳಾಗಿ ಪ್ರತ್ಯೇಕಗೊಂಡವು ಎನ್ನುವ ಹಾಡುಗಳು ಸಿಗುತ್ತವೆ. ಹಾಗಾಗಿ ಈ ವ್ಯಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಹಾಲುಮತ ಸಮುದಾಯದ ಸಾಂಸ್ಕೃತಿಕ ಹಿನ್ನೆಲೆಯನ್ನು, ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗಿದೆ. ಆದರೆ ಇದು ಅಷ್ಟು ಸುಲಭವಲ್ಲ. ಹಾಲುಮತದ ಮೂಲವನ್ನು ಹುಡುಕುವುದೆಂದರೆ ಹುಟ್ಟಿಲ್ಲದ ದೋಣಿಯಲ್ಲಿ ಕುಳಿತು ಹರಿಯುವ ನದಿಯಲ್ಲಿ ಪಯಣ ಮಾಡಿದಂತೆ. ಸೆಳವು ಬಂದೆತ್ತ ಹೋಗುವ ಆಕರ್ಷಣೆಯೂ ಇದೆ. ಬೇಕಾದೆಡೆಗೆ ಹೋಗಲಾಗದ ಸಮಸ್ಯೆಯೂ ಇದೆ. ಅತ್ತವು ಹೋಗದೆ ಇತ್ತವು ಹೋಗದೆ ಸುಳಿಯಲ್ಲಿ ಸಿಲುಕಿ ಮುಳುಗಲಾಗದೆ ಮೇಲೆ ಬರಲಾರದೆ ಅಲ್ಲೆ ನಿಂತು ಗಿರಗಿರನೆ ತಿರುಗುವ ಸಾಧ್ಯತೆಯು ಇದೆ. ಏಕೆಂದರೆ ಪ್ರತಿಯೊಬ್ಬ ಸಾಂಸ್ಕೃತಿಕ ವೀರರ ಜೀವನ ಚರಿತ್ರೆ ಹಾಲುಮತದ ಮೂಲ ಚರಿತ್ರೆಯ ಮೇಲೆ ಅತ್ಯಾಚಾರ ಮಾಡಿದೆ. ಮತ್ತೊಂದುಕಡೆ ಆದಿಪುರಾಣದೊಂದಿಗೆ ನಮ್ಮ ಪುರಾಣಗಳನ್ನು ಆರಂಭ ಮಾಡಬೇಕು ಅನ್ನುವ ಹಾಲುಮತ ಸಮುದಾಯದ ಬರಹಗಾರರ ಗೀಳು ಸಾರ್ವತ್ರಿಕವಾಗಿ ಹತ್ಯಾಚಾರ ಮಾಡಿದಂತೆ ಕಾಣುತ್ತದೆ. ಇವತ್ತಂತೂ ತೀವ್ರ ಸ್ವರೂಪ ತಾಳಿದೆ. ದಿನ ದಿನಕ್ಕೆ ಹೆಚ್ಚುತ್ತಲಿದೆ. ಮುದ್ದಪ್ಪ ಮುದ್ದವ್ವ ಈ ಕುಲದ, ಲೋಕದ ಮೊದಲಿಗರು ಎಂದು ಕೆಲವು ಪುರಾಣ ಗಳು ಹೇಳುತ್ತವೆ. ಮತ್ತೆ ಕೆಲವು ಪುರಾಣಗಳು ರೇವಣಸಿದ್ಧ, ಶಾಂತಮುತ್ತಯ್ಯ, ಅಮೋಘಸಿದ್ಧರೇ ಈ ಲೋಕದ ಮೊದಲಿಗರೆಂದು ಹೇಳುತ್ತವೆ. ಯಾವುದು ಮೊದಲು ಯಾವುದು ನಂತರ ಅನ್ನುವುದನ್ನು ಗುರುತು ಹಚ್ಚುವುದು ಕಷ್ಟವಾಗಿ ಹೋಗಿದೆ. ಈ ಗೊಂದಲಗಳನ್ನು ಬಿಡಿಸಿಕೊಳ್ಳುವ ಸೈದ್ಧಾಂತಿಕವಾದ ಚರಿತ್ರೆಯನ್ನು ಕಟ್ಟಿಕೊಳ್ಳುವ ಅನಿವಾರ್ಯತೆ ಇದೆ.

೨.೪. ಮುದ್ದಪ್ಪ ಮುದ್ದವ್ವ ಹುಟ್ಟಿನ ಕಥನಗಳು; ಹಾಲುಮತದ ಪರಿಕಲ್ಪನೆ

ಕಥನ ಒಂದು : ಒಮ್ಮೆ ಶಿವನಿಗೆ ಬ್ರಹ್ಮಾಂಡವನ್ನು ನೋಡುವ ಆಸೆಯಾಯಿತು. ತನ್ನ ಪತ್ನಿ ಪಾರ್ವತಿ ಯನ್ನು ಕರೆದುಕೊಂಡು ಭೂಲೋಕಕ್ಕೆ ಬಂದ. ಸಂಚಾರದ ಮಧ್ಯೆ ಒಂದು ರಮ್ಯವಾದ ಸ್ಥಳ ಸಿಕ್ಕಿತು. ಆ ಸ್ಥಳದಲ್ಲಿ ಜಗುಲಿ ಇತ್ತು. ವಿಶ್ರಾಂತಿ ಪಡೆಯುವುದಕ್ಕೆ ಈ ಸ್ಥಳ ಸೂಕ್ತವೆಂದು ಕುಳಿತುಕೊಂಡರು. ಆ ಸಂದರ್ಭದಲ್ಲಿ ಈ ಲೋಕದ ಪ್ರಾಣಿಗಳ ಸಂರಕ್ಷಣೆಗಾಗಿ ಒಬ್ಬ ವ್ಯಕ್ತಿಯನ್ನು ನೇಮಿಸಬೇಕೆಂದು ಪಾರ್ವತಿ ಶಿವನಲ್ಲಿ ಬೇಡಿಕೊಂಡಳು. ಬೇಡಿಕೊಳ್ಳುವ ವೇಳೆಗಾಗಲೇ ಪಾರ್ವತಿಯ ಮೊಲೆಗಳು ತೊರೆಯುತ್ತಿದ್ದವು. ಆಕಸ್ಮಿಕವಾಗಿ ಮೊಲೆ ಹಾಲು ನೆಲಕ್ಕೆ ಬಿದ್ದವು. ಆ ಹಾಲು ಹರಿದು ವ್ಯರ್ಥವಾಗ ಬಾರದೆಂದು ಪಾರ್ವತಿದೇವಿ ಬಲ ಮೊಲೆಯ ಹಾಲನ್ನು ಎಡಗೈಯಲ್ಲಿ ಹಿಡಿದು ಮಣ್ಣಿನಲ್ಲಿ ಬೆರೆಯಿಸಿ ಪುರುಷ ರೂಪವನ್ನು ಕೊಟ್ಟಳು. ಎಡ ಮೊಲೆಯ ಹಾಲನ್ನು ಬಲಗೈಲಿ ಹಿಡಿದು ಮಣ್ಣನ್ನು ಬೆರೆಯಿಸಿ ಸ್ತ್ರೀರೂಪವನ್ನು ಕೊಟ್ಟಳು. ಆ ಎರಡು ಗೊಂಬೆಗಳನ್ನು ಶಿವನ ಮುಂದೆ ಇಟ್ಟು ಜೀವ ತುಂಬುವಂತೆ

[illegible]

[illegible]

ಬೇಡಿಕೊಂಡಳು. ಹಾಲು ಮತ್ತು ಮಣ್ಣು ಮಿಶ್ರಿತ ಗೊಂಬೆಗಳೇ ಈ ಪೃಥ್ವಿಗೆ ಕರ್ತರಾಗಬೇಕು ಅನ್ನುವುದು ಆಕೆಯ ಉದ್ದೇಶವಾಗಿತ್ತು. ಇದಕ್ಕೆ ಸಮ್ಮತಿಸಿದ ಶಿವ ಆ ಎರಡು ಗೊಂಬೆಗಳಿಗೆ ಜೀವ ಕೊಟ್ಟ. ಇವರಿಬ್ಬರು ಮಣ್ಣಿನ ಮುದ್ದೆಯಲ್ಲಿ ಹುಟ್ಟಿದ ಕಾರಣಕ್ಕೆ ಪುರುಷನಿಗೆ 'ಮುದ್ದಪ್ಪ'ನೆಂದು ಸ್ತ್ರೀಗೆ 'ಮುದ್ದವ್ವ'ನೆಂದು ಹೆಸರು ಇಟ್ಟರು. ನೀವು ಈ ಭೂಮಿಯಲ್ಲಿ ಬೀಜವನ್ನು ಭಿತ್ತಿ-ಬೆಳೆದು ಸಕಲ ಪ್ರಾಣಿಗಳನ್ನು ಕಾಪಾಡಿರಿ ಎಂದು ಆಶಿಸಿ ಕೈಲಾಸಕ್ಕೆ ಹೋದರು.

ಕಥನ ಎರಡು : ರಾಕ್ಷಸರು ಹುಟ್ಟಿದ ನಂತರ ಬ್ರಹ್ಮ, ವಿಷ್ಣು, ರುದ್ರ ಮಹೇಶ್ವರ, ಮಹಾದೇವ ಇವರ ಜೊತೆ ಶಾಂತಮುತ್ತಯ್ಯನ ಜನನವಾಗುತ್ತದೆ. ಶಾಂತಮುತ್ತಯ್ಯ ಐದು ಜನ ರಾಕ್ಷಸರನ್ನು ಕುರಿಗಳನ್ನಾಗಿ, ಒಬ್ಬ ರಾಕ್ಷಸನನ್ನು ಟಗರನ್ನಾಗಿ ಪರಿವರ್ತಿಸುತ್ತಾನೆ. ಡೊಳ್ಳಾಸುರ ದೈತ್ಯರನ್ನು ಕೊಂದು ಡೊಳ್ಳನ್ನು ನಿರ್ಮಿಸುತ್ತಾನೆ. ಬ್ರಹ್ಮ, ರುದ್ರ, ವಿಷ್ಣು, ಮಹೇಶ್ವರ ಮತ್ತು ಮಹಾದೇವರು ಕಾಯುತ್ತಾರೆ. ಕಾದು ಕಾದು ಸುಸ್ತಾಗುತ್ತಾರೆ. ಪುರುಷ ದೈವಗಳು ಕುರಿಗಳನ್ನು ಕಾದರು ಅನ್ನುವುದು ಹಾಲುಮತ ಸಂಸ್ಕೃತಿಯ ಪಾರಂಪರಿಕ ಕಥನಕ್ಕೆ ವಿರುದ್ಧವಾಗಿದೆ. ಈ ಕಥನದ ರಾಜಕಾರಣವನ್ನು ತಿಳಿದುಕೊಳ್ಳಬೇಕು. ಇವರ ನಂತರದ ಸರದಿ ಪಾರ್ವತಿಗೂ ಬರುತ್ತದೆ. ಕುರಿಗಳನ್ನು ಹೊಡೆದುಕೊಂಡು ಭೂಮಿಗೆ ಬರುತ್ತಾಳೆ. ಬ್ರಹ್ಮ, ವಿಷ್ಣು ಮುಂತಾದವರಂತೆ ಈಕೆಯೂ ಕುರಿ ಹಿಂದೆ ತಿರುಗಿ ಸುಸ್ತಾಗುತ್ತಾಳೆ. ಷಣ್ಮುಖನನ್ನು ಬಗಲಲ್ಲಿ ಎತ್ತಿಕೊಂಡು ತಿರುಗುವುದೆಂದರೆ ಇನ್ನೂ ಕಷ್ಟ. ತಿರುಗಲಾಗದೆ ಬಂಕಾಪುರ ಭೂಮಿಯ ಹುತ್ತಿನಲ್ಲಿ ಮರವನ್ನು ನಿರ್ಮಾಣ ಮಾಡುತ್ತಾಳೆ. ಆ ಹುತ್ತಿನಲ್ಲಿ ಕುರಿಗಳನ್ನು ಹೊಗಿಸುತ್ತಾಳೆ. ಇವುಗಳ ಸಂರಕ್ಷಣೆಗಾಗಿ ಆ ಜಾಗದಲ್ಲಿ ನಿಂತು

> ಎದಿ ಮ್ಯಾಲ ಕೈಯ ವಗದಾಳೆ ಮಲಿಯಾ ತೊಳಿಯುತಾಳೇನ
> ಎಡಕಿನ ಮಲಿಯ ಮ್ಯಾಲೆನ ಬಲಗೈ ತಿರುವುತಾಳೇನ
> ಎಡಗೈಯಲ್ಲಿನಲ್ಲೇಳ ಮಣ್ಣ ಹಿಡಿಯುತಾಳೇನ
> ಬಲಗೈಲಿ ಹಾಲ ಹಿಂಡ್ಯಾಳೆ ಎಡಗೈವಳಗ ಮಣ್ಣೇನ
> ಎಡಗೈ ವಳಗ ಮಣ್ಣೇನ ಮುದ್ದಿ ಮಾಡುತಾಳೇನ
> ಎಡಗೈ ವೈಯುತಾಳೇನ ಬಲಕಿನ ಮಲಿಯಾ ತಿರುವ್ಯಾಳ
> ಬಲಗೈಯ ಮಣ್ಣ ಹಿಡಿದಾಳೆ ಬಲಕಿನ ಹಾಲ ಹಿಂಡ್ಯಾಳ
> ಎಡಗೈಯ್ಲಿ ಮಲಿಯಾ ಹಿಡಿದಾಳೆ ಬಲಕೊಂಡು ಗೊಂಬಿ ಮಾಡ್ಯಾಳ
> ಹಾಲಿನಿಂದ ನಲ್ಲೇಳ ಎರಡು ಗೊಂಬಿನಾದವ"[೧೫]

ಆ ಎರಡು ಗೊಂಬೆಗಳನ್ನು ಶಿವನ ಮುಂದೆ ಇಟ್ಟು ಜೀವ ತುಂಬುವಂತೆ ಹೇಳುತ್ತಾಳೆ. ಆಗ ಶಿವ ಜೀವ ತುಂಬುತ್ತಾನೆ. ಜೀವ ತುಂಬಿದ ಗೊಂಬೆಗಳಿಗೆ ಹಾಲುಮತದವರೆಂದು ಕರೆದು ಮುದ್ದಪ್ಪ-ಮುದ್ದವ್ವನೆಂದು ಹೆಸರನ್ನು ಇಡುತ್ತಾರೆ.

ಈ ಎರಡು ಕಥನಗಳನ್ನು ವೀರಣ್ಣದಂಡೆ ಅವರು ಸಂಪಾದನೆ ಮಾಡಿರುವ 'ಜನಪದ ಹಾಲುಮತ ಮಹಾಕಾವ್ಯ' ಮತ್ತು ಯಲ್ಲನಗೌಡ ಎಫ್. ಅತ್ತಿಕೊಳ್ಳ ಅವರ 'ಹಾಲುಮತದ ಚರಿತ್ರೆ' ಕೃತಿಗಳಿಂದ ತೆಗೆದುಕೊಳ್ಳಲಾಗಿದೆ. ವ್ಹಿ.ಆರ್. ಹನುಮಂತಯ್ಯ ಅವರ 'ಕುರುಬರ ಚರಿತ್ರೆ' ಕೃತಿಯನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಈ ಎರಡು ಕಥನಗಳು ಕುರಿಗಳ ಉಗಮ ಮತ್ತು ವ್ಯಕ್ತಿಗಳ

ಉಗಮವನ್ನು ಹೇಳುತ್ತವೆ. ಇಲ್ಲಿ ವ್ಯಕ್ತಿಗಳ ಉಗಮ ಅನಿವಾರ್ಯ ಅಲ್ಲ, ಆಕಸ್ಮಿಕವು ಅಲ್ಲ, ಉದ್ದೇಶಪೂರ್ವಕವಾಗಿದೆ. ಅದರಂತೆ ಕುರಿಗಳು ದೊರೆತಿದ್ದು ಉದ್ದೇಶಪೂರಿತ ಅಲ್ಲ; ಅನಿವಾರ್ಯ. ಅನಿವಾರ್ಯತೆಯನ್ನು ಪೂರೈಸುವುದಕ್ಕಾಗಿಯೇ ಪಾರ್ವತಿ ಆಸಕ್ತಿಯಿಂದ ಇವರನ್ನು ಸೃಷ್ಟಿಸುತ್ತಾಳೆ. ಇವರು ಬದುಕಿನ ಅನಿವಾರ್ಯತೆಗಾಗಿ ಕುರಿ ಕಾಯುವುದನ್ನು ರೂಢಿಸಿಕೊಂಡರು. ಬದುಕನ್ನು ರೂಢಿಸಿಕೊಂಡ ವಿಧಾನದಲ್ಲಿ ಪಾರ್ವತಿಯ ಸ್ವ-ಆಸಕ್ತಿ ಇದೆ. ಇದು ಮಾತೃಪ್ರಧಾನತೆಯನ್ನು ಪ್ರತಿಬಿಂಬಿಸುತ್ತದೆ. ಮಾತೃಪ್ರಧಾನ ಸಂಸ್ಕೃತಿಯ ಕಾಲಘಟ್ಟದಲ್ಲಿ ಕುರಿಕಾಯುವ ವೃತ್ತಿ ಒಂದು ವೃತ್ತಿಯಾಗಿ ಬೆಳೆದುಕೊಂಡು ಬಂದಿದೆ.

ಮುದ್ದಪ್ಪ-ಮುದ್ದವ್ವರು ಪಾರ್ವತಿಯ ಮೊಲೆ ಹಾಲಿನಲ್ಲಿ ಹುಟ್ಟಿದ ಕಾರಣಕ್ಕೆ ಹಾಲುಮತದವರು ಎನ್ನುವ ಹೆಸರು ಬಂತು. ಇಲ್ಲಿ 'ಮತ' ಎಂದರೆ ಗುಟ್ಟು. ಗುಟ್ಟು ಅಂದರೆ ಬಚ್ಚಿಟ್ಟುಕೊಂಡ ವಸ್ತು ಅಲ್ಲ. ತಾನು ಲೋಕವನ್ನು ಕಟ್ಟಿಕೊಂಡ ಬಗೆ. ತಾನು ತನ್ನನ್ನು ಲೋಕಕ್ಕೆ ಸಮರ್ಪಿಸಿಕೊಂಡ ಬಗೆ. ಆ ಬಗೆಯನ್ನು ತನ್ನದೆಯಾದ ಆಯಾಮಗಳಲ್ಲಿ ಅನಾವರಣ ಮಾಡುತ್ತಲೇ ಇರುತ್ತದೆ. ಆ ಕಥನಗಳು ತಿಳಿಸುವುದೇನೆಂದರೆ ಇವರು ಶಿವನ ವರಪುತ್ರರು. ಶಿವನಿಂದ ಸೃಷ್ಟಿಯಾದವರು. ಇವತ್ತು ಹಾಲುಮತ ಸಮುದಾಯ ನಮ್ಮ ಪ್ರಾಚೀನ ಪುರುಷರು ಮುದ್ದಪ್ಪ-ಮುದ್ದವ್ವರೆಂದು ಹೇಳುತ್ತಾರೆ. ಹಾಲುಮತ ಎನ್ನುವ ಪದದಲ್ಲಿ ತಮ್ಮದೇ ಆದ ತಾತ್ವಿಕತೆ ಇದೆ. ಇದರಲ್ಲಿ ಹಾಲು+ಮೃತ್ (ಹಾಲುಮೃತ್) ಎನ್ನುವ ಎರಡು ಪದಗಳಿವೆ. ಕಥನಗಳಂತೆ ಹಾಲು ಮತ್ತು ಮಣ್ಣಿನಿಂದ ಸೃಷ್ಟಿಯಾದವರು ಎನ್ನುವ ಅರ್ಥವನ್ನು ಪ್ರತಿಬಿಂಬಿಸುತ್ತದೆ. 'ಪಶುಪಾಲನೆ' ಮತ್ತು 'ಕೃಷಿ' ಕಾಲಘಟ್ಟದ ಸಂದರ್ಭವನ್ನು ಅನಾವರಣ ಮಾಡುತ್ತದೆ.

ಈ ಕಥನ ಒಂದರ ಪ್ರಕಾರ ಮುದ್ದಪ್ಪ-ಮುದ್ದವ್ವರೇ ಪ್ರಾಚೀನ ವ್ಯಕ್ತಿಗಳು. ಇವರ ಹುಟ್ಟಿನ ಮುಖಾಂತರ ಹಾಲುಮತ ಕುಲ-ಮಾನವ ಕುಲ ಆರಂಭವಾಗುತ್ತದೆ. ಇವರ ನಂತರ ಕುರಿಕಾಯುವ ವೃತ್ತಿ ಮನುಷ್ಯ ಜಾತಿಗೆ ಬರುತ್ತದೆ. ಆ ಮುಂಚೆ ಕುರಿಗಾರಿಕೆ ದೈವಗಳ ವೃತ್ತಿ ಆಗಿತ್ತು. ಕಥನ ಎರಡರ ಪ್ರಕಾರ ಮುದ್ದಪ್ಪ-ಮುದ್ದವ್ವರ ಎರಡನೇ ತಲೆಮಾರಿನವರು. ಶಾಂತಮುತ್ತಯ್ಯ ಆರಂಭಿಕ ತಲೆಮಾರಿನ ವ್ಯಕ್ತಿ. ಹಾಲುಮತದ ಮೂಲಪುರುಷ. ಮಹೇಶ್ವರ, ಬ್ರಹ್ಮ, ವಿಷ್ಣು, ಶಿವ, ಮಹಾದೇವರ ಜೊತೆಯಲ್ಲಿ ಹುಟ್ಟಿದವನು. ಈ ಎರಡು ಕಥನಗಳು ನಾ ಮುಂದು ನೀ ಮುಂದು ಎನ್ನುವಂತೆ ಮೌನವಾಗಿ ಕಚ್ಚಾಡುತ್ತಿರುವಂತಿವೆ. ಇವುಗಳಲ್ಲಿ ಯಾವುದು ಮುಂದು ಯಾವುದು ನಂತರ ಅನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಈ ಎರಡು ವಸ್ತುಗಳನ್ನು ಆಧರಿಸಿ ರಚನೆಯಾದ ಪುರಾಣಗಳು ಹಾಲುಮತ ಸಮುದಾಯದಲ್ಲಿವೆ. ಇವತ್ತು ಈ ಎರಡು ಕಥನದ ವಸ್ತುಗಳು ಡೊಳ್ಳಿನ ಹಾಡುಗಳಲ್ಲಿ ಜೀವ ತಾಳುತ್ತಿವೆ.

ಕಥನ ಒಂದು ಡೊಳ್ಳು ಹಾಡುಗಳ ಕೇಂದ್ರಿತ ವಸ್ತು. ಕಥನ ಎರಡು ಸಹ ಡೊಳ್ಳು ಹಾಡು ಕೇಂದ್ರಿತವಾದದ್ದು. ಆದರೆ ಕಥನ ಎರಡರ ಕಥಾವಸ್ತುವಿನಲ್ಲಿ ಮೂಲ ಪಾರಂಪರಿಕ ಚಹರೆ ಇಲ್ಲ. ಕಲ್ಯಾಣದ ಕ್ರಾಂತಿಯ ಸಂಘರ್ಷದ ಕಥನದೊಂದಿಗೆ ಸಂಕರಶೀಲವಾಗಿದೆ. ಈ ಸಂಕರಶೀಲ ಸ್ವರೂಪ

ತಾಳುವಾಗ ಶಾಂತಮುತ್ತಯ್ಯನನ್ನು ಪ್ರಧಾನ ಧಾರೆಗೆ ತಂದಿದೆ. ಶಾಂತಮುತ್ತಯ್ಯನೇ ಪ್ರಧಾನವೆಂದು ಗ್ರಹಿಸಿದರೆ ಹಾಲುಮತ ಸಂಸ್ಕೃತಿಯ ಸೃಷ್ಟಿಮೂಲ ಕಥನಗಳು ಕಣ್ಮರೆ ಆಗುತ್ತವೆ. ಶೈವ ಸಂಸ್ಕೃತಿಯ ಪಾರಂಪರಿಕ ಚರಿತ್ರೆಯನ್ನು ಕಳೆದುಕೊಳ್ಳುತ್ತವೆ. ಶಾಂತಮುತ್ತಯ್ಯನೇ ಮೂಲವೆನ್ನುವ ಸೃಷ್ಟಿಮೂಲ ಕಥನಗಳಿಗೆ ಮೌಲ್ಯವೇ ಇಲ್ಲದಂತಾಗುತ್ತದೆ. ಶಾಂತಮುತ್ತಯ್ಯನನ್ನು ಪ್ರಧಾನ ಧಾರೆಗೆ ತರಬೇಕಾದಾಗ ಶಾಂತಮುತ್ತಯ್ಯನ ಆರಾಧಕರು. ಈತನೇ ಮೂಲಪುರುಷವೆಂದು ಸೃಷ್ಟಿಸಿದರು. ಹಲವು ಲಿಖಿತ ಪುರಾಣಗಳು ರಚನೆಯಾದವು. ಈ ಲಿಖಿತ ಪುರಾಣಗಳನ್ನು ಆಧರಿಸಿ ಡೊಳ್ಳಿನ ಹಾಡುಗಳು ರಚನೆಯಾದವು. ಇವತ್ತು ಈ ಎರಡು ಕಥನಗಳ ಭೇದಿಸದೇ ಅನಾವರಣಗೊಳ್ಳುತ್ತಿವೆ. ಪ್ರಾಚೀನ ಕಾಲದಲ್ಲಿ ಈ ಭೇದತೆ ಇತ್ತು. ಶಾಂತಮುತ್ತಯ್ಯನೇ ಪ್ರಧಾನಧಾರೆಯ ನಾಯಕನೆಂದು ಹೇಳುವುದಕ್ಕೆ ಹಿಂಜರಿಕೆಯನ್ನು ಅನುಭವಿಸುತ್ತಿದ್ದವು. ಈ ಹಿಂಜರಿಕೆ ಡೊಳ್ಳಿನ ಹಾಡುಗಳಿಗೆ ಲಿಖಿತ ಪರಂಪರೆ ಪ್ರವೇಶ ಪಡೆದ ನಂತರ ಕಣ್ಮರೆ ಆಯಿತು. ಅಂದರೆ ಹಾಲುಮತ ಸಂಸ್ಕೃತಿಯ ಚಾರಿತ್ರಿಕತೆ ಶಾಂತಮುತ್ತಯ್ಯನನ್ನು ಪ್ರಧಾನ ದಾರಿಯಲ್ಲಿಟ್ಟುಕೊಂಡು ಮತ್ತೆ ಮರುಸೃಷ್ಟಿಸಿಕೊಂಡಿತು. ಕಥನ ಎರಡು ಮರುಸೃಷ್ಟಿಯಾದ ಕಥನವೇ ಹೊರತು ಪಾರಂಪರಿಕ ಕಥನ ಅಲ್ಲ.

೨.೪.೧. ಪದ್ಮಗೊಂಡನಿಗೆ ಕುರಿಗಳು ದೊರೆತ ವಿಧಾನ

ಕುರಿಗಳು ಭೂಲೋಕಕ್ಕೆ ಪರಿಚಯವಾದ ಕಥನಗಳು ಎಷ್ಟು ಮುಖ್ಯವೋ, ಕುರಿಗಳನ್ನು ಕಾಯುವ ವೃತ್ತಿಯನ್ನು ಆರಂಭಿಸಿಕೊಂಡ ವ್ಯಕ್ತಿಗಳ ಕಥನಗಳು ಅಷ್ಟೇ ಮುಖ್ಯ. ಡೊಳ್ಳಿನ ಹಾಡುಗಳು, ಮೌಖಿಕ ಕಥನಗಳು ಹಾಗೂ ಲಿಖಿತ ಪುರಾಣಗಳ ಪ್ರಕಾರ ಪ್ರಥಮಬಾರಿಗೆ ಕುರಿಗಳನ್ನು ಕಾಯ್ದ ವ್ಯಕ್ತಿ ಪದ್ಮಗೊಂಡ. ಈತನ ವೃತ್ತಿಜೀವನ ಚರಿತ್ರೆಯ ತಾತ್ವಿಕ ಆಯಾಮದ ಮುಖಾಂತರ ಕುರಿ ಕಾಯುವ ವೃತ್ತಿಯ ಚರಿತ್ರೆಯನ್ನು ತಿಳಿದುಕೊಳ್ಳಬಹುದು. ಪದ್ಮಗೊಂಡನಿಗೆ ಕುರಿಗಳು ಹೇಗೆ ದೊರಕಿದವು ಎನ್ನುವ ಕಥನಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡಬೇಕು.

ಕಥನ ಒಂದು : ಮೂಲತಃ ಕುರುಬರು ಅರಣ್ಯವಾಸಿಗಳು. ಇವರ ಪೂರ್ವಜರು ಮಾಸಿರೆಡ್ಡಿ ಮತ್ತು ನೀಲಮ್ಮ. ಈ ದಂಪತಿಗಳಿಗೆ ಆರು ಜನ ಗಂಡುಮಕ್ಕಳು. ಈ ಕುಟುಂಬ ಆರಂಭಿಕ ಕಾಲದಲ್ಲಿ ಸೌದೆಮಾರಿ ಜೀವನ ಮಾಡುತ್ತಿತ್ತು. ಇವರ ಕಷ್ಟವನ್ನು ನೋಡಿದ ಈಶ್ವರಿಗೆ ಬಡತನ ನಿವಾರಿಸಬೇಕೆಂಬ ಆಸೆ ಆಯಿತು. ಆಗ ಜಂಗಮ ವೇಷದಾರಿಯಾಗಿ ಬಂದು ನಿಮಗೆ ಮತ್ತೊಬ್ಬ ಗಂಡುಮಗು ಹುಟ್ಟುತ್ತಾನೆ. ಆತನಿಂದ ನಿಮಗೆ ಸಕಲೈಶ್ವರ್ಯ ದೊರೆಯುತ್ತದೆ ಎಂದು ಹೇಳಿ ವಿಭೂತಿಯನ್ನು ಕೈಯಲ್ಲಿಟ್ಟು ಪೂಜಿಸುವಂತೆ ಹೇಳಿಹೋದ. ಆ ಈಶ್ವರನ ವರಪುತ್ರನೇ ಉಂಡಾಡ ಪದ್ಮಣ್ಣ. ಏಳನೆಯ ಮಗ. ಆಗ ಕುಟುಂಬ ತನ್ನಷ್ಟಕ್ಕೆ ತಾನು ಅಭಿವೃದ್ಧಿ ಹೊಂದಿತು. ಮೊದಲ ಆರು ಜನ ಮಕ್ಕಳು ಕೃಷಿ ಮಾಡುವುದಕ್ಕೆ ಆರಂಭಿಸಿದರು. ಆದರೆ ಪದ್ಮಗೊಂಡ ಕೃಷಿ ಕೆಲಸಕ್ಕೆ ಹೋಗದೆ ಮನೆಯಲ್ಲಿ ಇರುತ್ತಿದ್ದ. ಇದನ್ನು ಸಹಿಸಿಕೊಳ್ಳದ ಸಹೋದರರು ಒತ್ತಾಯಪೂರ್ವಕವಾಗಿ ನೇಗಿಲು ಹೊಡೆಯುವುದಕ್ಕೆ ಕರೆದುಕೊಂಡು ಹೋದರು. ಕುಂಟ ಮತ್ತು ಕುರುಡ ಜೋಡಿ ಎತ್ತುಗಳಿಗೆ ನೇಗಿಲನ್ನು ಕಟ್ಟಿಕೊಟ್ಟರು. ನೇಗಿಲು ಹೊಡೆಯುವಾಗ ಆಕಸ್ಮಿಕವಾಗಿ ಹೊಲದಲ್ಲಿದ್ದ ಹುತ್ತಕ್ಕೆ ನೇಗಿಲು ಹಾಯುತ್ತದೆ. ಹುತ್ತ

ಎರಡು ವಿಭಾಗವಾಗುತ್ತದೆ. ಆ ಹುತ್ತದಲ್ಲಿ ಪಾರ್ವತಿ ಕುರಿಗಳನ್ನು ಹೋಗಿಸಿ ಹೋಗಿದ್ದಳು. ನೇಗಿಲು ಬಡಿತದಿಂದ ಹುತ್ತ ವಿಭಾಗವಾದ ತಕ್ಷಣ ಕುರಿಗಳು ಹೊರಬಂದವು. ಇದರಿಂದ ಭಯಭೀತನಾದ ಪದ್ಮಣ್ಣ ಬೆಂಕಿ ಹಾಕಿದ. ಆದರೂ ಕುರಿಗಳು ಹೊರಬರುವುದು ನಿಲ್ಲಲಿಲ್ಲ. ಮತ್ತಷ್ಟು ಭಯಭೀತನಾಗಿ ಓಡುವುದಕ್ಕೆ ಆರಂಭಿಸಿದ. ಕುರಿಗಳು ಆತನನ್ನೇ ಹಿಂಬಾಲಿಸಿದವು. ಓಡುತ್ತಲೇ ಇದ್ದ. ಆಗ ವಿಷ್ಣು ಪ್ರತ್ಯಕ್ಷವಾಗಿ ನಿನ್ನ ಜೀವನಕ್ಕಾಗಿಯೇ ಇವುಗಳನ್ನು ನಾನು ಸೃಷ್ಟಿಸಿದ್ದೇನೆ. ಭಯ ಬೇಡ ಅವುಗಳನ್ನು ಸಾಕಿ ಅಭಿವೃದ್ಧಿ ಹೊಂದು ಎಂದು ಹೇಳಿ ಕಣ್ಮರೆ ಆಗುತ್ತಾನೆ.

ಕಥನ ಎರಡು : 'ಕಲಿಯುಗದಲ್ಲಿ ಮಾಯಿ ಕೊಲ್ಲಾಪುರದಲ್ಲಿದ್ದಳು. ಈಕೆ ಮಹಿಮಾ ಪುರುಷೆ. ತನ್ನ ಮಹಿಮೆಯಿಂದ ನವಕೋಟಿ ಸಿದ್ಧರನ್ನು ಸೆರೆಯಲ್ಲಿ ಇಟ್ಟುಕೊಂಡಿದ್ದಳು. ಇದನ್ನು ಕೇಳಿದ ಉಗ್ರಮೂರ್ತಿಗೆ ಆಗ್ರಹ ಉಂಟಾಗಿ ರೇವಣಸಿದ್ದೇಶ್ವರನೆಂಬ ಅಭಿದಾನದಿಂದ ಬಂದು ಆ ಕ್ಷುದ್ರದೇವತೆಯನ್ನು ನಿಗ್ರಹಿಸಿ ನವಕೋಟಿ ಸಿದ್ಧರನ್ನು ಉದ್ಧರಿಸಿದನು. ಅವರೆಲ್ಲರನ್ನು ಹೇಗೆ ನಿಗ್ರಹಿಸಬೇಕೆಂದು ತಿಳಿಯಲಿಲ್ಲ. ಆಗ ಅರ್ಧ ಜನರಿಗೆ ತಮ್ಮ (ರೇವಣಸಿದ್ಧ) ಹೆಸರನ್ನು ಹೇಳಿಕೊಂಡು ಭಿಕ್ಷೆ ಬೇಡಿ ಜೀವನ ಮಾಡಿರೆಂದು ಹೇಳಿದ. ಇನ್ನರ್ಧ ಜನರನ್ನು ಕುರಿಗಳನ್ನಾಗಿ ಮಾಡಿದ. ಆ ಕುರಿಗಳನ್ನು ಕುರುಬರ ಮೂಲಪುರುಷನಾದ ಆದಿಗೊಂಡನಿಗೆ ಸೇರಿದ ಹೊಲದ ಹುತ್ತದಲ್ಲಿ ಅಡಗಿಸಿದ. ಆ ಕುರಿಗಳಿಗೆ ವಿಮೋಚನೆ ಕಾಲ ಬರುವರೆಗೂ ನೀವು ಹುತ್ತದಲ್ಲಿ ಉಳಿಯಬೇಕು ಎಂದು ಹೇಳಿದ. ಆದಿಗೊಂಡನಿಗೆ ಉಂಡಾಡು ಪದ್ಮಣ್ಣ ಎಂಬ ಕಿರಿಮಗನಿದ್ದನು. ಅವನು ಹುತ್ತವನ್ನು ಅಗೆಯುತ್ತಿದ್ದಾಗ ಈ ಕುರಿಗಳು ಹೊರಬಂದವು'.

೨.೪.೨. ಮುದ್ದಪ್ಪ-ಮುದ್ದವ್ವ ಮತ್ತು ಪದ್ಮಗೊಂಡನ ಜೀವನ ಚರಿತ್ರೆಯ ತಾತ್ವಿಕ ಆಯಾಮಗಳು

ಮೇಲಿನ ಎರಡು ಕಥನಗಳ ವಸ್ತುಗಳಲ್ಲಿ ಅನೇಕ ರೂಪಾಂತರಗಳಿವೆ. ಆದರೂ ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಸ್ತು ಕುರಿಗಳು ಹುತ್ತದಿಂದ ಹೊರಬರುವುದು ಎನ್ನುವುದು. ಹೊರಬರುವುದಕ್ಕೆ ಕಾರಣವಾದ ವ್ಯಕ್ತಿ ಪದ್ಮಗೊಂಡ. ಈ ಪದ್ಮಗೊಂಡನಿಗೆ ಒಮ್ಮೆ ಶಿವ-ಪಾರ್ವತಿಯಿಂದ ಕುರಿಗಳು ದೊರೆತರೆ ಮತ್ತೊಮ್ಮೆ ಶಾಂತಮುತ್ತಯ್ಯನಿಂದ, ಮತ್ತೊಮ್ಮೆ ರೇವಣಸಿದ್ಧನಿಂದ ಕುರಿಗಳು ದೊರೆಯುತ್ತವೆ. ಒಮ್ಮೆ ಹುತ್ತಕ್ಕೆ ನೇಗಿಲು ಹಾಕಿದ ಕಾರಣಕ್ಕೆ ಹೊರಬಂದರೆ ಮತ್ತೊಮ್ಮೆ ಅಗೆದ ಕಾರಣಕ್ಕೆ ಹೊರಬರುತ್ತವೆ. ಒಮ್ಮೆ ಭಂಡಾರ ಆರಾಧಕನಾದರೆ, ಮತ್ತೊಮ್ಮೆ ವಿಭೂತಿ ಆರಾಧಕನಾಗುತ್ತಾನೆ. ಒಮ್ಮೆ ಈಶ್ವರ ವರಪುತ್ರನಾದರೆ, ಮತ್ತೊಮ್ಮೆ ಆದಿಗೊಂಡನ ಸಹಜವಾದ ಪುತ್ರನಾಗುತ್ತಾನೆ. ಇನ್ನೊಮ್ಮೆ ರೇವಣಸಿದ್ಧನ ವರಪುತ್ರನಾಗುತ್ತಾನೆ. ಒಂದು ಕಥನದಲ್ಲಿ ರಾಕ್ಷಸರು ಕುರಿಗಳಾದರೇ, ಮತ್ತೊಂದು ಕಥನದಲ್ಲಿ ಪಾರ್ವತಿಯನ್ನು ಹೀನಾಯವಾಗಿ ಬೈದವರು ಕುರಿಗಳಾಗುತ್ತಾರೆ. ಈ ಭಿನ್ನ ಕಥನಗಳು ಹಲವು ಸಂಘರ್ಷಗಳನ್ನು ಹೇಳುತ್ತವೆ. ಒಂದು ಕಥನದಲ್ಲಿ ವೈಷ್ಣವ (ಈಶ್ವರ) ಧರ್ಮದ ಪ್ರಭಾವ ಇದ್ದರೆ, ಮತ್ತೊಂದು ಕಥನದಲ್ಲಿ ವೀರಶೈವ ಧರ್ಮದ ಪ್ರಭಾವ (ರೇವಣಸಿದ್ಧ ವಿಭೂತಿ) ಇದೆ. ಈ ಎರಡೂ ಧರ್ಮವನ್ನು ಭೇದಿಸುವ ಕಥನಗಳು ಇವೆ. ಆ ಕಥನಗಳು ಮುದ್ದಪ್ಪ ಮುದ್ದವ್ವ ನನ್ನು ಪ್ರಧಾನವಾಗಿಟ್ಟುಕೊಂಡಿವೆ. ವೈಷ್ಣವ ಮತ್ತು ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಸಂಕರಶೀಲ ರೂಪ ತಾಳಿದ ಕಥನಗಳಲ್ಲಿ ಮುದ್ದಪ್ಪ ಮುದ್ದವ್ವರ ಸುಳಿವು ಬರುವುದಿಲ್ಲ. ಪದ್ಮಗೊಂಡ ನಿಂದಲೇ ಕುರಿ ಕಾಯುವ ವೃತ್ತಿ ಆರಂಭವಾಗಿ ಬಿಡುತ್ತದೆ.

ವೀರಶೈವ ಧರ್ಮಕ್ಕೆ ಒಳಗಾದ ಕುರುಬರು ಆಯಾ ಸಾಂಸ್ಕೃತಿಕ ವೀರನನ್ನು ಬೆಳೆಸುವುದಕ್ಕೆ ತಕ್ಕಂತೆ ಕುರಿಮೂಲದ ಕಥನವನ್ನು ಬದಲಾಯಿಸಿಕೊಂಡಿದ್ದಾರೆ. ಶಾಂತಮುತ್ತಯ್ಯ, ರೇವಣಸಿದ್ಧನೇ ಮೂಲವೆಂದು ಹೇಳುವಾಗ ಮುದ್ದಪ್ಪ ಮುದ್ದವ್ವನನ್ನು, ಶಿವನ ವರವನ್ನು ಕೈಬಿಟ್ಟಿದ್ದಾರೆ. ಜನಪದಿಗರು ತಮ್ಮ ದೈವ, ತಮ್ಮ ಆರಾಧಕನೇ ಮೂಲ ಎನ್ನುವ ವಾದವನ್ನು ಮಂಡಿಸುತ್ತಾರೆ. ಆಗ ಆ ಸಾಂಸ್ಕೃತಿಕ ವೀರರ ಕಾಲಘಟ್ಟವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕಾಲದ ದೃಷ್ಟಿಯಿಂದ ಶಾಂತಮುತ್ತಯ್ಯ ಮತ್ತು ರೇವಣಸಿದ್ಧರ ಕಾಲ ಹನ್ನೆರಡನೇ ಶತಮಾನ. ಮುದ್ದಪ್ಪ ಮುದ್ದವ್ವರ ಚರಿತ್ರೆ ಆ ಕಾಲಕ್ಕಿಂತ ತುಂಬಾ ಹಿಂದಕ್ಕೆ ಹೋಗುತ್ತದೆ. ಹಾಗಾಗಿ ಮುದ್ದಪ್ಪ ಮುದ್ದವ್ವರೇ ಹಾಲುಮತ ಸಮುದಾಯದ ಪ್ರಾಚೀನ ವ್ಯಕ್ತಿಗಳು. ಅವರಿಂದಲೇ ಹಾಲುಮತ ಸಂಸ್ಕೃತಿ, ಸಮುದಾಯ ಹುಟ್ಟಿಕೊಂಡಿತು. ಬೆಳೆಯಿತು. ಕುರಿಕಾಯುವ ವೃತ್ತಿ ರೇವಣಸಿದ್ಧ, ಶಾಂತಮುತ್ತಯ್ಯರ ಕಾಲಕ್ಕಾಗಲೇ ಒಂದು ಪ್ರಮುಖ ಹುದ್ದೆ ಆಗಿತ್ತು. ಆ ವೇಳೆಗಾಗಲೇ ಹಾಲು ಮತ್ತು ಮಾಂಸವನ್ನು ಮಾರುವುದು ಈ ಸಮುದಾಯದ ಪ್ರಧಾನ ವೃತ್ತಿ ಆಗಿತ್ತು. ಈ ವೃತ್ತಿಗೆ ಕಲ್ಯಾಣದಲ್ಲಿ ಭಂಗ ಬಂದಾಗ ಶಾಂತಮುತ್ತಯ್ಯ ಮತ್ತು ರೇವಣಸಿದ್ಧರು ಹೋರಾಟ ಮಾಡುತ್ತಾರೆಂಬುದು 'ತಗರ ಪವಾಡ' ಮತ್ತು 'ಸಿದ್ಧಮಂಕ ಚರಿತೆ' ಕೃತಿಗಳು ಹೇಳುತ್ತವೆ. ಈ ವಾದವನ್ನು ಎಂ.ಎಂ. ಕಲಬುರ್ಗಿ, ಚಿಂತಾಮಣಿ ಢೇರಿ, ಸಿ.ಕೆ. ಪರಶುರಾಮಯ್ಯ, ಶ್ರೀರಾಮ ಇಟ್ಟಣ್ಣ ಮುಂತಾದ ವಿದ್ವಾಂಸರು ಒಪ್ಪಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಒಡೆಯ ಸಮುದಾಯ ಸೃಷ್ಟಿ ಇದೆ, ಆಚರಣೆಗಳಿವೆ ಮತ್ತು ಶಾಸನಗಳಿವೆ. ಹಾಗಾಗಿ ರೇವಣಸಿದ್ಧರಿಗಿಂತ ಮುದ್ದಪ್ಪ-ಮುದ್ದವ್ವರು ಪ್ರಾಚೀನ ವ್ಯಕ್ತಿಗಳು.

ಮುದ್ದಪ್ಪ-ಮುದ್ದವ್ವ, ಪದ್ಮಗೊಂಡ ಮತ್ತು ಕುರುಬ, ಹಾಲುಮತ ಪದಗಳ ಪರಿಕಲ್ಪನೆಯನ್ನು ನೋಡಿದಾಗ ಇವರು ಶೈವ ಆರಾಧಕರು ಎನ್ನುವುದು ಖಚಿತವಾಗುತ್ತದೆ. ಕುರಿ ಕಾಯುವುದನ್ನೇ ಒಂದು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದವರು. ಆ ಕುರಿಗಾರಿಕೆಯನ್ನು ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಡೊಳ್ಳನ್ನು ಸೃಷ್ಟಿಸಿಕೊಂಡಿರಬೇಕು. ಈ ಮೂಲ ಪುರುಷರೊಂದಿಗೆ ಡೊಳ್ಳು ವಾದ್ಯ ತನ್ನ ಸಂಬಂಧವನ್ನು ಬೆಸೆದುಕೊಂಡಿಲ್ಲ. ಶೈವಾರಾಧನೆ ಸಂಬಂಧ ಬೆಸೆದುಕೊಂಡಿದೆ. ಆದರೆ ಕುರಿಗಾರಿಕೆ ವೃತ್ತಿಯೊಂದಿಗೆ ತನ್ನನ್ನು ಸಮೀಕರಿಸಿಕೊಂಡಿದೆ. ಹೀಗಾಗಿ ಈ ವಾದ್ಯ ಕುರಿಗಾರಿಕೆಯ ಜೊತೆ ಜೊತೆಯಲ್ಲಿ ಬೆಳೆದು ಬಂದಿತು. ಕುರಿಗಾರಿಕೆ ವೃತ್ತಿ ಯಾವಾಗ ಆರಂಭವಾಯಿತು. ಯಾವಾಗ ಈ ವಾದ್ಯದ ಸೃಷ್ಟಿ ಆಯಿತು ಎಂದು ಹೇಳಬಹುದು.

೨.೫. ಡೊಳ್ಳು ವಾದ್ಯದ ಪರಂಪರೆ

ಈ ಜನಪದ ವಾದ್ಯಗಳು ಸಾಹಿತ್ಯಿಕ ಆಯಾಮ ಪಡೆದಿರುವುದು ಕಡಿಮೆ. ಹೆಚ್ಚಾಗಿ ಮೌಖಿಕತೆ ಪರಂಪರೆಯಲ್ಲಿ ಉಳಿದುಕೊಂಡು ಬಂದಿವೆ. ಅಂತಹ ವಾದ್ಯಗಳಲ್ಲಿ ಡೊಳ್ಳು ಒಂದು. ಪೌರಾಣಿಕ ಪರಿಕಲ್ಪನೆಯಲ್ಲಿ ವೇದೋಪನಿಷತ್ತುಗಳಿಗಿಂತ ಪ್ರಾಚೀನತೆಗೆ ಹೋಗುತ್ತದೆ. ಆರಾಧನೆಯ ನೆಲೆಯಲ್ಲಿ ಈ ವಾದ್ಯ ಪರಂಪರೆಯನ್ನು ಗುರುತಿಸುವುದಕ್ಕೆ ಸಾಧ್ಯ. ಬೀರದೇವರ ದೇವಾಲಯಗಳಲ್ಲಿ ಡೊಳ್ಳನ್ನು ಕಟ್ಟುವ ಸಂಪ್ರದಾಯವಿದೆ. ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಡೊಳ್ಳನ್ನು ಕಟ್ಟಲಾಗಿದೆ. ಈ

ವಿರೂಪಾಕ್ಷ ದೇವಾಲಯ ಮೂಲತಃ ಬೀರಪ್ಪ ದೇವಾಲಯ. ಇದನ್ನು ಸಂಗಮರು ಸ್ಥಾಪಿಸಿದರು. ಬೀರದೇವರ ಪೂಜೆಗಾಗಿ ಈ ವಾದ್ಯವನ್ನು ಕಟ್ಟಿರಬೇಕು. “ಶಿರಾ ತಾ, ಪಟ್ಟನಾಯಕನಹಳ್ಳಿಯ ‘ನಂಜಾವಧೂತ’ ಮಠದಲ್ಲಿ ಇದೇ ತರದ ಡೊಳ್ಳುವಾದ್ಯವನ್ನು ಕಟ್ಟಲಾಗಿದೆ”.[೧೬] ಹಾಗಾಗಿ ೧೨ನೇ ಶತಮಾನಕ್ಕಿಂತ ಪೂರ್ವದಲ್ಲಿ ಈ ವಾದ್ಯ ಜನಪ್ರಿಯವಾಗಿತ್ತು. ಹಳೇಬೀಡಿನ ದೇವಾಲಯದ ಹೊರಭಾಗದಲ್ಲಿ ಸಾಲಾಗಿ ನಿಂತು ಡೊಳ್ಳು ಬಡಿಯುವ ಉಬ್ಬು ಶಿಲ್ಪಗಳಿವೆ. ಶೃಂಗೇರಿಯಲ್ಲಿ ಉಬ್ಬು ಶಿಲ್ಪಗಳನ್ನು ಕಾಣಬಹುದು. ಚಿಕ್ಕಮಂಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಶಿವನಿ ಗ್ರಾಮದ ಬೀರದೇವರ ದೇವಾಲಯದ ಕಂಬದಲ್ಲಿ ಡೊಳ್ಳು ಬಡಿತದ ಉಬ್ಬು ಶಿಲ್ಪವಿದೆ. ಹಂಪಿಯ ವಿಜಯ ವಿಠಲ ದೇವಾಲಯದಲ್ಲೂ ಉಬ್ಬುಶಿಲ್ಪವನ್ನು ಕಾಣಬಹುದು. ಈ ದೇವಾಲಯ ವಿಜಯನಗರ ಸಂಗಮ ವಂಶದ ಅರಸರ ಕಾಲದಲ್ಲಿ ನಿರ್ಮಾಣವಾಗಿದೆ.

ಡೊಳ್ಳು ವಾದ್ಯದ ರಚನೆ

ಡೊಳ್ಳು ತುಂಬಾ ಪ್ರಾಚೀನ ವಾದ್ಯ. ನಾಗರಿಕತೆಯ ಯಾವುದೇ ಚಹರೆಗಳು ಈ ವಾದ್ಯದಲ್ಲಿ ಇಲ್ಲ. ಇವತ್ತಿನ ಫೈಬರ್ ವಾದ್ಯಗಳಿಗೆ ಈ ಮಾತು ಅನ್ವಯ ಆಗುವುದಿಲ್ಲ. ಆದಿಮ ಸಂಸ್ಕೃತಿಯ ಪ್ರತೀಕವಾಗಿ ಈ ವಾದ್ಯ ಕಾಣಿಸುತ್ತದೆ. ಇವತ್ತಿಗೂ ತನ್ನ ಪಾರಂಪರಿಕ ಚಹರೆಯನ್ನು ಉಳಿಸಿಕೊಂಡಿದೆ. ಮೇಲ್ನೋಟಕ್ಕೆ ತುಂಬಾ ಸರಳವಾಗಿ ರಚಿಸಬಹುದಾದ ವಾದ್ಯದಂತೆ ಕಾಣಿಸುತ್ತದೆ. ಆದರೆ ಅಷ್ಟು ಸರಳವಲ್ಲ. ಸುಮಾರು ಅರ್ಧ ಅಂಗುಲ ದಪ್ಪಗಿನ ಅಂಚುಳ್ಳ, ಒಂದುವರೆ ಅಥವಾ ಎರಡು ಅಡಿ ವ್ಯಾಸವುಳ್ಳ ಮರದ ಕಟ್ಟಿಗೆಯನ್ನು ಸಿಲೆಂಡರಿನ ಆಕಾರದಲ್ಲಿ ಒಳಗೆ ಪೊಳ್ಳು ಇರುವಂತೆ ಕತ್ತರಿಸಿಕೊಳ್ಳುತ್ತಾರೆ. ಇದಕ್ಕೆ ಪಡಗ ಎಂದು ಹೆಸರು. ಇದನ್ನು ಕೊರೆಯುವಾಗ ಸಣ್ಣ ತೂತು ಆಗದಂತೆ ಅಥವಾ ಸೀಳದಂತೆ ನೋಡಿಕೊಳ್ಳಬೇಕು. ಸೀಳಿದರೆ ಹವಾ (ಗಾಳಿ) ಹೊರಗಡೆ ಹೋಗುತ್ತದೆ. ಆಗ ಸರಿಯಾದ ಶಬ್ದ ಹೊರಬರುವುದಿಲ್ಲ. ಪಡಗವನ್ನು ಗಾತ್ರಕ್ಕೆ ತಕ್ಕಂತೆ ತಯಾರಿಸಿಕೊಳ್ಳುತ್ತಾರೆ. ಗಾತ್ರದಲ್ಲಿ ಭಿನ್ನ ರೀತಿಯ ಡೊಳ್ಳುಗಳು ಇವೆ. ವಿದ್ವಾಂಸರು ಪ್ರಮುಖವಾಗಿ ಎರಡು ಪ್ರಕಾರಗಳನ್ನು ಗುರುತಿಸಿದ್ದಾರೆ. ಒಂದು ಚಿಕ್ಕದು ಮತ್ತೊಂದು ದೊಡ್ಡದು. ಚಿಕ್ಕಡೊಳ್ಳಿಗೆ ‘ಕೈಪೆಟ್ಟು’ ಎಂದು ಕರೆಯುತ್ತಾರೆ. ಈ ಡೊಳ್ಳನ್ನು ಗುಣಿಯಿಂದ ಬಾರಿಸುವುದಿಲ್ಲ. ಬದಲಾಗಿ ಎರಡು ಕಡೆ ಕೈಗಳನ್ನು ಬಳಸುತ್ತಾರೆ. ಕೆಲವೊಮ್ಮೆ ಬಲಗೈಗೆ ಸಣ್ಣ ‘ಚಬಕಿ’ಯನ್ನು ಬಳಸುತ್ತಾರೆ. ಇದು ಹಾಡುಗಳನ್ನು ಹಾಡುವ ಮತ್ತು ದಟ್ಟಿ ಕುಣಿಯುವ ಸಂದರ್ಭದಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ದೊಡ್ಡಡೊಳ್ಳಿಗೆ ‘ಬೀರದೇವರ ಡೊಳ್ಳು’ ಎಂದು ಹೆಸರು. ಇದು ಗುಣಿಯಿಂದ ಬಾರಿಸುವುದಕ್ಕೆ ಮತ್ತು ಕುಣಿತಗಳಲ್ಲಿ ಹೆಚ್ಚಾಗಿ ಬಳಕೆ ಆಗುತ್ತದೆ. ಹಿಂದೆ ಈ ಡೊಳ್ಳನ್ನು ಕೇವಲ ಪೂಜೆಯ ಸಂದರ್ಭದಲ್ಲಿ ಮಾತ್ರ ಬಳಸಲಾಗುತ್ತಿತ್ತು ಎಂದು ಹಿರಿಯ ಕಲಾವಿದರು ಹೇಳುತ್ತಾರೆ. ಮನುಷ್ಯರು ಕೊರಳಲ್ಲಿ ನೇತು ಹಾಕಿಕೊಂಡು ಬಡಿಯಲಾರದಷ್ಟು ದೊಡ್ಡ ಡೊಳ್ಳುಗಳು ಬೀರದೇವರ ದೇವಾಲಯಗಳಲ್ಲಿ ಇವೆ. ಬಿ.ಬಿ. ಹೆಂಡಿ ಅವರು “ವ್ಯಾಸದಲ್ಲಿ ಹದಿನೆಂಟು ಅಂಗುಲದಿಂದ ಇಪ್ಪತ್ನಾಲ್ಕು ಅಂಗುಲದವರೆಗೂ ವಿವಿಧ ಪ್ರಮಾಣದ ಡೊಳ್ಳುಗಳಿದ್ದವು”[೧೭] ಎನ್ನುತ್ತಾರೆ.

ಪಡಗವನ್ನು ರಚಿಸುವುದಕ್ಕೆ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಕಟ್ಟಿಗೆಯನ್ನು ಉಪಯೋಗಿಸುತ್ತಾರೆ. ಧಾರವಾಡ, ಗದಗ ಸುತ್ತಮುತ್ತಲಿನ ಪ್ರದೇಶದಲ್ಲಿ ಬೇವು ಮತ್ತು ಹೊನ್ನಿನ

ಮರವನ್ನು ಬಳಸುತ್ತಾರೆ. ಬಳ್ಳಾರಿ, ರಾಯದುರ್ಗ, ಚಿತ್ರದುರ್ಗ, ದಾವಣಗೆರೆ ಪ್ರದೇಶಗಳಲ್ಲಿ ಮಾವು, ಹೆಬ್ಬೇವು, ಬೇವು ಬಳಕೆ ಆಗುತ್ತಿದೆ. ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾವು ಬೇವುಗಳ ಬಳಕೆ ಇಲ್ಲ. ಹೊನ್ನೆ, ಸುರಹೊನ್ನೆ, ಬೈನೆ ಹಲಸು ಹೇಬ್ಬಲಸು, ಹೆಬ್ಬೆವು, ಶಿವನೆ ಮುಂತಾದ ಮರಗಳ ಬಳಕೆ ಇದೆ. ಈ ಕಟ್ಟಿಗೆಗಳು ಹೆಚ್ಚು ಹಗುರವಾಗಿರುವ ಕಾರಣಕ್ಕೆ ಆಯಾ ಪ್ರದೇಶದಲ್ಲಿ ಬಳಕೆ ಆಗುತ್ತಿವೆ. ಕೆಲವು ಕಡೆ 'ತಾಳೆಮರ'ದ ಬಳಕೆ ಇದೆ. ಈ ಮರದ ಬಳಕೆ ತುಂಬಾ ಕಡಿಮೆ. ಮರಗಳನ್ನು ಅಲ್ಲದೇ ತಗಡಿನ 'ಪಿಪಾಯಿ'ಗಳನ್ನು ಬಳಸುತ್ತಾರೆ. ಕಬ್ಬಿಣ, ತಾಮ್ರ, ಬೆಳ್ಳಿ ಮತ್ತು ಬಂಗಾರದ ಪಿಪಾಯಿಗಳ ಬಳಕೆ ಇದೆ. ಪಿಪಾಯಿಗಳ ಬಳಕೆ ಇತ್ತೀಚಿಗೆ ಬಂದಿರುವಂತದ್ದು. ಅಂದರೆ ಸುಮಾರು ಹದಿಮೂರು ಹದಿನಾಲ್ಕನೇ ಶತಮಾನದಿಂದ ಬಳಕೆ ಆಗಿರಬೇಕು. ತರೀಕೆರಿ ತಾಲ್ಲೂಕು ಶಿವನಿ ಗ್ರಾಮದ ಬೀರದೇವರ ಗುಡಿಯಲ್ಲಿ ತಾಮ್ರದ ಪ್ರಾಚೀನ ಡೊಳ್ಳು ಇದೆ. ಹಂಪೆಯ ವಿರೂಪಾಕ್ಷೇಶ್ವರ (ಬೀರಪ್ಪ) ಮತ್ತು ಪಟ್ಟನಾಯಕನಹಳ್ಳಿ ಗ್ರಾಮ ದೇವಾಲಯದಲ್ಲಿ ಎರಡು ಬೃಹತ್ ಕಬ್ಬಿಣದ ಡೊಳ್ಳುಗಳಿವೆ. ಅಲಕನೂರು ಕರಿಸಿದ್ದೇಶ್ವರ (ಬೀರಪ್ಪ) ದೇವಾಲಯದಲ್ಲಿ ಬಂಗಾರದ ಚಿಕ್ಕ ಡೊಳ್ಳು ಇದೆ. ಈಗ ಫೈಬರ್ ಬಳಸಿ ರಚನೆ ಮಾಡುತ್ತಿದ್ದಾರೆ. ಹೀಗೆ ಕಾಲಕ್ಕೆ ತಕ್ಕಂತೆ ಡೊಳ್ಳು ತನ್ನ ರಚನಾ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಬಂದಿದೆ.

ಪಡಗದ ಬಲಭಾಗಕ್ಕೆ ಹದ ಮಾಡಿದ ಹೋತಿನ, ಕುರಿಯ ಚರ್ಮವನ್ನು ಹಾಕಿದರೆ ಎಡಭಾಗಕ್ಕೆ ಆಡಿನ ಚರ್ಮವನ್ನು ಹಾಕಿ ಬಿಗಿಯುತ್ತಾರೆ. ಬಿಗಿಯುವುದಕ್ಕೆ ಹಗ್ಗ ಅಥವಾ ನೂಲನ್ನು ಬಳಸಲಾಗುತ್ತದೆ. ಪಡಗದ ಕಟ್ಟಿನಲ್ಲಿ ಚರ್ಮ ಮತ್ತು ಹಗ್ಗ ಗಟ್ಟಿಯಾಗಿ ಹಿಡಿದಿರಲೆಂದು ಎರಡು ಹೊದಿಕೆಗೂ ಒಂದೊಂದು ಉಲುಪಿ (ನಾಗಬೆತ್ತದಂತೆ ಮಣಿಸಲು ಬರುವಂತದ್ದು) ಕಟ್ಟಿಗೆಯನ್ನು ಹಾಕಲಾಗುತ್ತದೆ. ಕೆಲವರು ಉಲುಪಿಯ ಬದಲು ಕಬ್ಬಿಣದ ಸರಳನ್ನು ಬಳಸುತ್ತಾರೆ. ಬಳಿಕ ಡೊಳ್ಳನ್ನು ಸೊಂಟಕ್ಕೆ ಕಟ್ಟಿಕೊಳ್ಳಲು ಸರಿಯಾಗಿ ಹಗ್ಗವನ್ನು ಜೋಡಿಸುವರು. ಕುಣಿತ ಮತ್ತು ಬಡಿತದ ಸಂದರ್ಭ ದಲ್ಲಿ ಡೊಳ್ಳು ಆಚೆ ಈಚೆ ಅಲುಗಾಡಬಾರದು ಹಾಗೂ ಹೆಚ್ಚು ಹೊತ್ತು ಕೇವಲ ಕುತ್ತಿಗೆಯಲ್ಲಿ ನೇತುಹಾಕಿಕೊಂಡು ಬಡಿಯುವುದಕ್ಕೆ ಮತ್ತು ನರ್ತನ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗೆ ಬಡಿದರೆ ದಣಿವು ಹೆಚ್ಚಾಗಬಹುದು. ಹಾಗಾಗಿ ಕುತ್ತಿಗೆಯ ಭಾರವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಬಳಸುತ್ತಾರೆ. ಹೋತ ಮತ್ತು ಕುರಿಯ ಚರ್ಮ ಗಟ್ಟಿಯಾಗಿರುತ್ತದೆ. ಹಾಗಾಗಿ ತಾಳಿಕೆ ಬರಲಿ ಮತ್ತು ಗುಣಿಯ ಬಡಿತಕ್ಕೆ ತಾಳಲಿ (ಕಿತ್ತು ಹೋಗದಿರಲಿ) ಎನ್ನುವ ಕಾರಣಕ್ಕಾಗಿಯೇ ಬಲಭಾಗಕ್ಕೆ ಬಳಸುತ್ತಾರೆ. ಎಡಭಾಗ ಇದಕ್ಕೆ ವಿರುದ್ಧವಾದದ್ದು. ಇಲ್ಲಿ ಗುಣಿಯ ಬಡಿತವಿಲ್ಲ. ಕೇವಲ ಕೈ ಬಡಿತ. ಈ ಕೈ ಬಡಿತ ಮಾತ್ರ ತಿಳು; ಮೃದುವಾದ ನಾದವನ್ನು ಬಯಸುತ್ತದೆ. ಹಾಗಾಗಿ ಮೃದುನಾದ ಹೊರಬರುವುದಕ್ಕೆ ಬೇಕಾದ ಚರ್ಮವನ್ನು ಮಾತ್ರ ಬಳಸುತ್ತಾರೆ.

ಡೊಳ್ಳಿಗೆ ಬಿಗಿದ ಬಲಭಾಗದ ಚರ್ಮಕ್ಕೆ ಬಾಳೆಯ ಸೊಪ್ಪಿನಿಂದ ತಯಾರಿಸಿದ ಜಿಗುಟಾದ ಮೇಣವನ್ನು, ಇಲ್ಲವೇ ಔಡಲ ಬೀಜ ಅರೆದು ಎಣ್ಣೆಯ ಗಸಿಯೊಡನೆ ಬೆರೆಸಿದ ವಸ್ತುವನ್ನು ಲೇಪಿಸಲಾಗುತ್ತದೆ. ಇದನ್ನು ಲೇಪಿಸುವುದರಿಂದ ಗುಣಿಯ ಹೊಡೆತ ಚರ್ಮಕ್ಕೆ ಬೀಳುವುದಿಲ್ಲ ಹಾಗೂ ಮಂದ್ರವಾದ ನಾದ ಹೊರಡುತ್ತದೆ. ಈ ನಾದ ಡೊಳ್ಳುನಾದದ ಪ್ರಮುಖ ಅಸ್ಮಿತೆ.

ಡೊಳ್ಳು ರಚನೆಯ ಆಚರಣೆಗಳು

ಜನಪದ ಕಲಾವಿದರು ತಮ್ಮ ಪ್ರದರ್ಶನಕ್ಕೆ ಬೇಕಾದ ವಸ್ತುಗಳನ್ನು ತಯಾರಿಸಿಕೊಂಡ ನಂತರ ಅವುಗಳನ್ನು ಪೂಜಿಸದೇ ಬಳಸಲಾರರು. ಈ ವಸ್ತುಗಳು ಕೇವಲ ಪ್ರದರ್ಶನ ವಸ್ತುಗಳಲ್ಲ. ತಮ್ಮನ್ನು ಕಾಪಾಡುವ ವಸ್ತುಗಳು. ಹಾಗಾಗಿ ಪೂಜಿಸಿ, ಪೂಜ್ಯನೀಯ ಭಾವನೆಯಿಂದಲೇ ಬಳಸುತ್ತಾರೆ. ಹಾಗಾಗಿ ರಚನಾ ಪೂರ್ವ ಮತ್ತು ರಚನೇತರ ಆಚರಣೆಗಳು ನಡೆಯುತ್ತವೆ. ಡೊಳ್ಳು ಕಲಾವಿದರು ಇದಕ್ಕೆ ಹೊರತಾಗಿಲ್ಲ.

ರಚನಾ ಪೂರ್ವ ಆಚರಣೆ

ಕಲಾವಿದರು ಡೊಳ್ಳನ್ನು ತಯಾರಿಸಬೇಕು ಎಂದುಕೊಂಡಾಗ ಅರಣ್ಯಕ್ಕೆ ತೆರಳುತ್ತಾರೆ. ಕಾಡಿನಲ್ಲಿ ಸುತ್ತಿ ತಮಗೆ ಅನುಕೂಲವಾಗುವಂತಹ ಒಂದು ಮರವನ್ನು ನೇಮಿಸಿ ಬರುತ್ತಾರೆ. ಒಳ್ಳೆಯ ವಾರ, ದಿನ ಅಥವಾ ಅಮವಾಸ್ಯೆಯ ದಿನ ಮರವನ್ನು ಕಡಿಯುವುದಕ್ಕೆ ಬೇಕಾದ ಆಯುಧಗಳೊಂದಿಗೆ ಮರದ ಬಳಿಗೆ ಹೋಗುತ್ತಾರೆ. ಮರ ಸುತ್ತ ಶುಚಿ ಮಾಡಿ ಹಣ್ಣು ಕಾಯಿ, ಕರ್ಪೂರ ಬಳಸಿ ಪೂಜಿಸಲಾಗುತ್ತದೆ. ನಂತರ ನಮಸ್ಕರಿಸಿ ಕಡಿದುಕೊಂಡು ಬರುವರು.

ರಚನೇತರದ ಆಚರಣೆ

ಡೊಳ್ಳನ್ನು ತಯಾರಿಸಿದ ನಂತರ ದೇವರ ಗುಡಿಯಲ್ಲಿಟ್ಟು ಪೂಜಿಸುವ ಸಂಪ್ರದಾಯವಿದೆ. ಈ ಆಚರಣೆ ಹೆಚ್ಚಾಗಿ ಬೀರದೇವರ ದೇವಾಲಯಗಳಲ್ಲಿ ನಡೆಯುತ್ತದೆ. ಗುಡಿಯಲ್ಲಿ ದೇವರ ಮೂರ್ತಿಯ ಎದುರು ಕಂಬಳಿ ಹಾಸಿ ಅದರ ಮೇಲೆ ಡೊಳ್ಳನ್ನು ಇಟ್ಟು ಭಂಡಾರ, ಹೊನ್ನಂಬರಿಕೆ ಹೂಗಳಿಂದ ಪೂಜಿಸುತ್ತಾರೆ. 'ಹೊನ್ನಂಬರಿಕೆ' ಹೂಗಳನ್ನು ಬಳಸುವುದು ವಿಶೇಷ. ಇದು ಕಾಡಿನ ಸಂಸ್ಕೃತಿ ಪ್ರತೀಕ ವಾಗಿದ್ದು ಇನ್ನೂ ಜೀವಂತವಾಗಿದೆ. ಐದು ಜನರು ಒಂದೊಂದು ಕೈಗಳಿಂದ ಏಕಕಾಲಕ್ಕೆ ಬಾರಿಸುತ್ತಾರೆ. ಇತ್ತೀಚೆಗೆ ಏಳು ಜನರು ಒಬ್ಬೊಬ್ಬರಂತೆ ಹೆಗಲಿಗೆ ಹಾಕಿಕೊಂಡು ಒಂದೆರಡು ನಿಮಿಷ ಬಡಿಯುವ ಪದ್ಧತಿ ಆರಂಭವಾಗಿದೆ. ಸಿರಿಡೋನದ ಬೀರದೇವರು, ಕೋನಗನೂರು, ಅಲಖನೂರು, ಮುಂಡಗನೂರು ಕರಿಸಿದ್ಧ ದೇವರು, ಹುಲಿಜಂತಿ ಮಾಳಿಂಗರಾಯ, ಪಟ್ಟಣಕೊಡಲಿ ಇಟ್ಟಪ್ಪರ ಜಾತ್ರೆಗಳಲ್ಲಿ ಈ ಆಚರಣೆಗಳು ಹೆಚ್ಚಾಗಿ ನಡೆಯುತ್ತಿವೆ. ಫೈಬರ್ ಡೊಳ್ಳುಗಳು ಬಂದ ನಂತರ ಗ್ರಾಮೀಣ ಪ್ರದೇಶದ ದೇವಾಲಯಗಳಲ್ಲಿ ಈ ಆಚರಣೆಗಳು ನಡೆಯುವುದು ಕಡಿಮೆ ಆಗಿದೆ. ಹುಲಿಜಂತಿ, ಪಟ್ಟಣಕೊಡಲಿ ಮುಂತಾದ ಜಾತ್ರೆಗಳಲ್ಲಿ ಡೊಳ್ಳನ್ನು ಖರೀದಿಸಿ ಅಲ್ಲಿಯೇ ಪೂಜಿಸಿಕೊಂಡು ತರುತ್ತಿದ್ದಾರೆ. ಇದರಿಂದ ಡೊಳ್ಳು ರಚನೆಯ ಆಚರಣೆಗಳು ವಿಸ್ಮೃತಿ ಆಗುತ್ತವೆ.

೨.೫.೧. ಡೊಳ್ಳು ವಾದ್ಯಗಳೊಂದಿಗೆ ಬಳಕೆ ಆಗುವ ಇತರ ವಾದ್ಯಗಳು

ಡೊಳ್ಳು ಕಲೆಯಲ್ಲಿ ಎರಡು ಪ್ರಕಾರದ ಪ್ರದರ್ಶನಗಳಿವೆ. ಕುಣಿತ/ಬಡಿತ ಮತ್ತು ಹಾಡುಗಳನ್ನು ಹಾಡುವುದು. ಒಂದು ನೃತ್ಯಾಭಿವ್ಯಕ್ತಿ. ಮತ್ತೊಂದು ಸಾಹಿತ್ಯಾಭಿವ್ಯಕ್ತಿ. ಈ ಎರಡು ಪ್ರಕಾರದ ಸಂದರ್ಭಗಳು ಬೇರೆ ಬೇರೆ. ಈ ಎರಡು ಸಂದರ್ಭಗಳಲ್ಲೂ ಬೇರೆ ಬೇರೆ ವಾದ್ಯಗಳು ಬಳಕೆ ಆಗುತ್ತವೆ. ಇವತ್ತು ಕುಣಿತದ ಸಂದರ್ಭದಲ್ಲಿ ತಾಳ, ಗಗ್ಗರಿ ಮತ್ತು ಕೊಳಲುಗಳು ಬಳಕೆ ಆಗುತ್ತವೆ.

“ಹಿಂದೆ ತಪ್ಪಡಿ ನಿಪುರೆ (ಕಹಳೆ) ಜಾಗಟೆಗಳನ್ನು ಬಳಸುತ್ತಿದ್ದರು”. ಈ ವಾದ್ಯಗಳ ಬಳಕೆ ಇವತ್ತು ಕಡಿಮೆ. ಗಗ್ಗರಿಗಳ ಬಳಕೆ ಹೆಚ್ಚಾಗುತ್ತಿದೆ. ಈ ಗಗ್ಗರಿಗಳು ಇತ್ತೀಚಿಗೆ ಪ್ರವೇಶ ಪಡೆದಿವೆ. ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಈ ವಾದ್ಯ ಹೆಚ್ಚಾಗಿ ಬಳಕೆಯಾಗುತ್ತಿವೆ. ನಗರ ಸಂಸ್ಕೃತಿಯ ಪ್ರಭಾವ ಇದಕ್ಕಿರಬಹುದು. ಡೊಳ್ಳು ಬಡಿತದ ಲಯದೊಂದಿಗೆ ಇನ್ನೂ ಸಂಪೂರ್ಣವಾಗಿ ಬೆರೆತುಕೊಂಡಿಲ್ಲ. ಅಂದರೆ ಲಯದ ಜೊತೆಗೆ ಖಚಿತವಾದ ಅಸ್ತಿತ್ವವನ್ನು ಕಂಡುಕೊಂಡಿಲ್ಲ. ಇಲ್ಲಿ ಬಳಕೆಯಾಗುವ ತಾಳಗಳ ವ್ಯಾಸ ಆರಿಂಚು. ೧/೪ ಸೆಂ.ಮೀ. ದಪ್ಪ. ಇದು ಅಲ್ಲದೇ ೧೫/೧೬ ಸೆಂ.ಮೀ. ವ್ಯಾಸ ಅಗಲವಿರುವ ತಾಳಗಳು ಬಳಕೆಯಾಗುತ್ತಿವೆ. ಈ ತಾಳಗಳನ್ನು ತಂಡಕ್ಕೆ ಒಬ್ಬ ಮಾತ್ರ ಬಾರಿಸುತ್ತಾನೆ. ಈ ತಾಳದ ಲಯ ತಂಡವನ್ನು ಹಾಗೂ ಕುಣಿತ ಮತ್ತು ಬಡಿತದ ವಿಧಾನವನ್ನು ನಿರ್ಧರಿಸುತ್ತದೆ. ಕೊಳಲು ಊದುವವನು ಲಯಕ್ಕೆ ತಕ್ಕಂತೆ ಆಲಾಪ ಮಾಡುತ್ತಿರುತ್ತಾನೆ.

ಹಾಡುಗಳ ಪ್ರದರ್ಶನದ ಸಂದರ್ಭದಲ್ಲಿ ತಾಳ, ದಮಡಿ, ಡಗ್ಗಾ, ಕೊಳಲು, ಹಾರ್ಮೋನಿಯಂ, ಗಗ್ಗರಿ, ಜಾಗಟೆ ಮುಂತಾದ ವಾದ್ಯಗಳು ಬಳಕೆ ಆಗುತ್ತವೆ. ತಾಳ ಮತ್ತು ಕೊಳಲನ್ನು ಹೊರತುಪಡಿಸಿ ಉಳಿದ ವಾದ್ಯಗಳು ಮೂರು ನಾಲ್ಕು ದಶಕಗಳ ಈಚೆಗೆ ಸೇರಿಕೊಂಡಿವೆ. ಇವತ್ತು ಹಿರಿಯ ತಲೆಮಾರಿನವರು ಹಾಡುವಾಗ ಕೇವಲ ಡೊಳ್ಳು ಮತ್ತು ತಾಳಗಳನ್ನಷ್ಟೇ ಬಳಸುತ್ತಾರೆ. ದಮಡಿ, ಡಗ್ಗಾ ಮುಂತಾದ ವಾದ್ಯಗಳನ್ನು ಸೋಮಲಿಂಗ ಬಿಜ್ಜರಗಿ ‘ನಾನೇ ಮೊದಲು ಹಾಡಿನಲ್ಲಿ ಬಳಕೆ ಮಾಡಿದೆ’ ಎಂದು ಹೇಳುತ್ತಿದ್ದಾರೆ. ಬಿಜ್ಜರಗಿಯವರು ಹಾಡನ್ನು ಹಾಡುವುದಕ್ಕೆ ಆರಂಭಿಸಿ ಕೇವಲ ೨೮-೩೦ ವರ್ಷವಾಗಿದೆ. ಹಾಗಾಗಿ ಡೊಳ್ಳುಹಾಡುಗಳಲ್ಲಿ ಈ ವಾದ್ಯಗಳ ಬಳಕೆ ಇತ್ತೀಚಿನದು ಎಂದು ಹೇಳಬಹುದು.

ಡೊಳ್ಳು ಬಾರಿಸುವವರ ಸಂಖ್ಯೆ ಇಂತಿಷ್ಟು ಇರಬೇಕು ಅನ್ನುವ ನಿಯಮವಿಲ್ಲ. ಕನಿಷ್ಟ ಪಕ್ಷ ಇಬ್ಬರಾದರು ಇರಬೇಕು (ಮೇಳಕ್ಕೆ ಮಾತ್ರ). ಇದು ಇಬ್ಬರಿಂದ ೧೫೦-೨೦೦ ಜನರ ತನಕ ಹೋಗತ್ತದೆ. ೨೦೦ ಅಂತಿಮ ಅಲ್ಲ. ಇನ್ನೂ ಹೆಚ್ಚಾಗಬಹುದು. ಚಿಂಚಲಿ ಮಾಯವ್ವ ಮತ್ತು ಪಟ್ಟಣ ಕೊಡಲಿಯ ವಿಠಲನ ಜಾತ್ರೆಯ ಸಂದರ್ಭದಲ್ಲಿ ಏಕಕಾಲಕ್ಕೆ ಒಂದೇ ವೇದಿಕೆಯಲ್ಲಿ ೧೮೦-೨೦೦ಕ್ಕೂ ಹೆಚ್ಚು ಡೊಳ್ಳುಗಳ ಪ್ರದರ್ಶನ ನಡೆಯುತ್ತದೆ.

ಡೊಳ್ಳು ಬಾರಿಸುವಾಗ ಬಲಗೈಯಲ್ಲಿ ಕಟ್ಟಿಗೆಯ ಗುಣಿ ಇರುತ್ತದೆ. ಮೇಳದ ಜನರೆಲ್ಲರ ಬಲಗೈ ಪೆಟ್ಟು ಏಕಲಯದಲ್ಲಿ ಸಾಗುತ್ತದೆ. ಇದಕ್ಕೆ ಸಂವಾದಿಯಾಗಿ ಎಡಗೈಯ ನಾಲ್ಕು ತುದಿ ಬೆರಳುಗಳಿಂದ ಪೆಟ್ಟು ಹಾಕಲಾಗುತ್ತದೆ. ಆದರೆ ಎಡಗೈ ಲಯ ಏಕಕಾಲಕ್ಕೆ ಬರಬಹುದು ಅಥವಾ ಬರದೇ ಇರಬಹುದು. ಕಲಾವಿದ ತನ್ನ ಕಲಾ ಬೌದ್ಧಿಕ ಚಾಣಾಕ್ಷತೆಗೆ ತಕ್ಕಂತೆ ಬಡಿಯುತ್ತಿರುತ್ತಾನೆ. ಆದರೆ ಮೇಳದ ಬಡಿತದ ಲಯಕ್ಕೆ ಅಡ್ಡಿಯನ್ನುಂಟು ಮಾಡುವುದಿಲ್ಲ. ಈ ಕೈ ಬಡಿತವನ್ನು ‘ಕೈ ಪೆಟ್ಟು’ ಎಂದು ಕರೆಯುತ್ತಾರೆ. ಡೊಳ್ಳು ಕುಣಿತ ಮತ್ತು ಬಡಿತದ ಪ್ರದರ್ಶನಗಳ ಸಂದರ್ಭದಲ್ಲಿ ನಂದಿಕೋಲು ಕುಣಿತ, ಕುದುರೆ ಕುಣಿತ, ಗೊಂಬೆ ಕುಣಿತ, ದಟ್ಟಿ ಕುಣಿತ ಮುಂತಾದ ಕುಣಿತಗಳು ಬಳಕೆಯಾಗುತ್ತವೆ. ‘ದಟ್ಟಿ ಕುಣಿತ’ವನ್ನು ಹೊರತುಪಡಿಸಿ ಉಳಿದ ಕುಣಿತಗಳು ಡೊಳ್ಳುಕಲೆಯ

ಭಾಗಗಳಲ್ಲ. ಹಾಗೂ ಈ ಕುಣಿತಗಳು ಇರಲೇಬೇಕು ಎನ್ನುವ ನಿಯಮವಿಲ್ಲ. ಇರದೇ ಇರಬಹುದು. ಈ ಕಲೆಗಳು ಇಲ್ಲದೇ ಪ್ರದರ್ಶನವಾಗುವುದು ಹೆಚ್ಚು. ಡೊಳ್ಳು ಕುಣಿತಕ್ಕೆ ರಮ್ಯತೆಯನ್ನು ಹೆಚ್ಚಿಸುವ ಸಲುವಾಗಿ ಈ ಕಲೆಗಳು ಪ್ರವೇಶ ಪಡೆಯುತ್ತವೆಯಷ್ಟೇ. ಅದಕ್ಕೆ ತಕ್ಕಂತೆ ಮಾತ್ರ ಕಾರ್ಯನಿರ್ವಹಿಸುತ್ತಿರುತ್ತವೆ.

೨.೫.೨. ಡೊಳ್ಳು ಬಡಿತ ಮತ್ತು ಕುಣಿತದ ವಿಧಾನಗಳು

ಜನಪದ ಕಲೆಗಳು, ಕುಣಿತಗಳು ಆಚರಣೆಯ ಸ್ವರೂಪದಿಂದ ಜನ್ಮತಾಳಿವೆ. ಹಾಗಾಗಿ ಅವುಗಳ ಮೂಲಭೂತ ಉದ್ದೇಶ ಮನೋರಂಜನೆ ಆಗಿರುವುದಿಲ್ಲ. ಹಾಗೆಂದು ಈ ಕಲೆಗಳಲ್ಲಿ ಮನೋರಂಜನೆ ಇರುವುದಿಲ್ಲ ಎಂದರ್ಥವಲ್ಲ. ಇರುತ್ತವೆ. ಪ್ರದರ್ಶನದ ಪ್ರಥಮ ಆದ್ಯತೆ ಆರಾಧನೆಯಾಗಿರುತ್ತದೆ. ಆರಾಧನೆ ಮತ್ತು ಮನೋರಂಜನಾ ಪ್ರದರ್ಶನಗಳ ಸಂದರ್ಭಗಳು ಬೇರೆ ಬೇರೆ ಆಗಿರುತ್ತವೆ. ಆರಾಧನಾ ಪ್ರಕಾರಗಳ ಅಭಿವ್ಯಕ್ತಿಯ ಉದ್ದೇಶ ದೈವದಾಗಿದ್ದರೇ, ಮನೋರಂಜನಾತ್ಮಕ ಪ್ರಕಾರಗಳ ಪ್ರದರ್ಶನದ ಉದ್ದೇಶ ಪ್ರೇಕ್ಷಕರಾಗಿರುತ್ತಾರೆ. ಕೆಲವು ಕಲೆಗಳು ಆರಾಧನೆಗೆ ಮಾತ್ರ ಸೀಮಿತವಾಗಿರುತ್ತವೆ. ಆದರೆ ಡೊಳ್ಳು ಕಲೆ ಹಾಗಿಲ್ಲ. ಇವೆರಡನ್ನೂ ಕರಗತ ಮಾಡಿಕೊಂಡಿದೆ. ಹಾಗಾಗಿ ದೈವರಾಧನೆಯ ಸಂದರ್ಭಗಳಲ್ಲೂ ಪ್ರದರ್ಶನಗೊಳ್ಳುತ್ತದೆ. ಜನಸಮುದಾಯದ ಕಾರ್ಯಕ್ರಮಗಳಲ್ಲೂ ಬಳಕೆ ಆಗುತ್ತದೆ. ಪ್ರೇಕ್ಷಕರಿಗಾಗಿ ಪ್ರದರ್ಶನಗೊಳ್ಳುವ ಸಂದರ್ಭಗಳಲ್ಲಿ ದೈವಿಕ ಸಂಬಂಧಗಳಿರುವುದಿಲ್ಲ.

೧೯೯೦ರ ದಶಕದವರೆಗೂ ಈ ಕಲೆ ಕೇವಲ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಪುರುಷರ ಕಲೆ ಅನ್ನುವ ಹಣೆಪಟ್ಟಿಯನ್ನು ಸಹ ಕಟ್ಟಿಕೊಂಡಿತ್ತು. ೧೯೯೦ರ ದಶಕದ ನಂತರ ಮಹಿಳೆಯರು ಈ ಕ್ಷೇತ್ರಕ್ಕೆ ಪ್ರವೇಶ ಮಾಡಿದರು. ಇದು ಡೊಳ್ಳುಕಲೆಯಲ್ಲಿ ಆದ ಮಹತ್ತರ ಬದಲಾವಣೆ. ಆದರೆ ಇವರ ಪ್ರದರ್ಶನಗಳು ಕೇವಲ ಮನೋರಂಜನೆ ವೇದಿಕೆಗಳಿಗೆ ಮಾತ್ರ ಸೀಮಿತವಾಗಿವೆ. ಆರಾಧನಾ ಸಂದರ್ಭಗಳಿಗೆ ಇನ್ನೂ ಪ್ರವೇಶ ಪಡೆದಿಲ್ಲ. ದೈವಗಳ ಕಾರ್ಯಕ್ರಮಗಳಲ್ಲಿ ಮಹಿಳೆಯರು ಡೊಳ್ಳು ಮುಟ್ಟಬಾರದೆನ್ನುವ ನಂಬಿಕೆ ತಡೆದಿರಬಹುದು. ಆರಾಧನಾ ನೆಲೆಗಳಿಗೆ; ಆಚರಣಾ ಸಂದರ್ಭಗಳಿಗೆ; ಬಯಲು ರಂಗಮಂದಿರಕ್ಕೆ ಪ್ರವೇಶ ಪಡೆಯಬೇಕು. ಹಿಂದೆ ಮಹಿಳೆಯರು ಡೊಳ್ಳನ್ನು ಮುಟ್ಟುತ್ತಿರಲಿಲ್ಲ. ಮುಟ್ಟಿದರೆ ಡೊಳ್ಳು ಹರಿದುಹೋಗುತ್ತದೆ. ಬೀರಪ್ಪ ಕೋಪಿಸಿಕೊಳ್ಳುತ್ತಾನೆ. ನಮ್ಮ ಮನೆತನಕ್ಕೆ ಒಳಿತಾಗುವುದಿಲ್ಲ ಮುಂತಾದ ಭಯಾನಕ ನಂಬಿಕೆಗಳನ್ನು ಸೃಷ್ಟಿಸಲಾಗಿತ್ತು. ನಿಷೇಧಗಳನ್ನು ಹೇರಲಾಗಿತ್ತು. ಪಾವಿತ್ರತೆಯ ಮೌಲ್ಯವನ್ನು ಕಟ್ಟಲಾಗಿತ್ತು. ದೇವಾನುದೇವತೆಗಳಿಗೆ ಡೊಳ್ಳು ಬಾರಿಸುವುದಕ್ಕೆ ಬರಲಿಲ್ಲವೆನ್ನುವ ಪುರಾಣಗಳು ಆಂಧ್ರಪ್ರದೇಶದಲ್ಲಿ ಸಿಗುತ್ತವೆ. ಇಂತಹ ನಂಬಿಕೆಗೆ ಬದ್ಧರಾಗಿದ್ದ ಮಹಿಳೆಯರು ಡೊಳ್ಳು ವಾದ್ಯದ ಹತ್ತಿರ ಸುಳಿಯುತ್ತಿರಲಿಲ್ಲ. ಇವತ್ತು ಈ ನಂಬಿಕೆಯನ್ನು ಹೊಡೆದು ಹಾಕಿ ಮಹಿಳೆಯರು ಪುರುಷರಂತೆ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ. ಹಾಲುಮತ ಸಮುದಾಯ ಕಲೆ ಎನ್ನುವ ಚಾರಿತ್ರಿಕ ಅಸ್ಮಿತೆ ಇತ್ತು. ಇವತ್ತು ಈ ಅಸ್ಮಿತೆ ಅಸ್ಮಿತೆಯಾಗಿ ಉಳಿದಿಲ್ಲ. ಹಾಲುಮತದವರು ಮಾತ್ರ ಬಾರಿಸುತ್ತಿಲ್ಲ. ಬೇರೆ ಬೇರೆ ಸಮುದಾಯದವರು ಬಾರಿಸುತ್ತಾರೆ. 'ದಿವಾರರು' ಕುರುಬರಂತೆ ಪರಂಪರೆಯಿಂದಲೂ ಡೊಳ್ಳನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ದೈವಿಕ ನೆಲೆಯನ್ನು ಕಟ್ಟಿಕೊಂಡಿದ್ದಾರೆ.

ಹಾಲುಮತ ಸಮುದಾಯದ ಕಲೆ ಎನ್ನುವ ಹೇಳಿಕೆಯನ್ನು ಕೊಡುವುದರ ಮುಖಾಂತರ ದಿವಾರರನ್ನು ಕರ್ನಾಟಕ ವಿದ್ವಾಂಸರು ಮರೆತಿರುವುದೇ ಹೆಚ್ಚು. ದಿವಾರರಿಗೆ ಈ ಕಲೆ ಹೇಗೆ ಬಂತು? ಆ ಸಮುದಾಯದಲ್ಲಿರುವ ಡೊಳ್ಳು ಕಲೆಯ ಚಾರಿತ್ರಿಕ ಕಥನಗಳಿಗೂ ಮತ್ತು ಹಾಲುಮತ ಸಮದಾಯ ದಲ್ಲಿರುವ ಡೊಳ್ಳು ಕಲೆಯ ಚಾರಿತ್ರಿಕ ಕಥನಗಳಿಗೂ, ಪ್ರದರ್ಶನಕ್ಕೂ ಇರುವ ಸಂಬಂಧ ಮತ್ತು ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿತ್ತು. ಈ ಪರಿಕಲ್ಪನೆಯ ಅಧ್ಯಯನಗಳು ಇನ್ನೂ ಆಗಿಲ್ಲ. ಇವತ್ತು ಹಾಲುಮತ ಸಮುದಾಯದ ಕಲೆ, ಪುರುಷರ ಕಲೆ ಮತ್ತು ಮಹಿಳೆಯರ ಕಲೆಯೆನ್ನುವ ತಾರತಮ್ಯವಿಲ್ಲದೇ ಪ್ರದರ್ಶನಗೊಳ್ಳುತ್ತಿದೆ. ತನ್ನನ್ನು ತಾನು ವಿಸ್ತರಿಸಿಕೊಂಡಿದೆ.

ಡೊಳ್ಳು ಕಲೆಯಲ್ಲಿ ಬಡಿತ ಮತ್ತು ಕುಣಿತವಿದೆ. ಅಧ್ಯಯನಕಾರರು ಇವೆರಡನ್ನು ಬೇರೆ ಬೇರೆ ಎಂದು ಗ್ರಹಿಸಿದ್ದಾರೆ. ಹಾಗಾಗಿ ಇವೆರಡನ್ನು ವರ್ಗೀಕರಿಸಿ ಪ್ರತ್ಯೇಕ ಪ್ರತ್ಯೇಕವಾಗಿ ನೋಡಿರುವುದೇ ಹೆಚ್ಚು. ವಾಸ್ತವಸ್ಥಿತಿ ಹಾಗಿಲ್ಲ. ಇವೆರಡು ಒಂದಕ್ಕೊಂದು ಪೂರಕವಾದವು. ಏಕಕಾಲಕ್ಕೆ ಅನಾವರಣಗೊಳ್ಳು ವಂತವು. ಒಂದು ಇಲ್ಲದೇ ಮತ್ತೊಂದು ಅನಾವರಣವಾಗುವುದೇ ಇಲ್ಲ. ಬಡಿತವಿಲ್ಲದೆ ಕುಣಿತವಂತು ನಡೆಯುವುದೇ ಇಲ್ಲ. ಕುಣಿತಕ್ಕೆ ಬಡಿತವೇ ಜೀವಂತಿಕೆ. ಸಾಹಿತ್ಯ ಅಭಿವ್ಯಕ್ತಿಯೂ ಅಷ್ಟೇ. ಬಡಿತದ ನಂತರ ಹಾಡುಗಳನ್ನು ಹೇಳುವ ಕ್ರಿಯೆ ಆರಂಭವಾಗುತ್ತದೆ. ಬಡಿತದಿಂದ ದೇವರನ್ನು ತನ್ನ ಹತ್ತಿರ ಕರೆದುಕೊಂಡರೆ ಹಾಡುಗಳಿಂದ ಆ ದೈವವನ್ನು ಹಾಡಿ ಹೊಗಳುತ್ತಾನೆ. ಇವೆರಡು ಒಂದು ನಾಣ್ಯದ ಎರಡು ಮುಖಗಳು ಇದ್ದಂತೆ. ಬೇರ್ಪಡಿಸಿ ನೋಡುವ ಅವಶ್ಯಕತೆ ಇಲ್ಲ. ಅಲ್ಲದೇ ಈ ಕಲೆಯನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿರುವುದು ಕಡಿಮೆ. ಹಲವು ವಿದ್ವಾಂಸರು ಹೆಚ್ಚಾಗಿ ಸುಂದರವಾದ ಕಲೆ, ಸುಂದರವಾದ ನೃತ್ಯ, ಸಾಹಸಭರಿತ ಕಲೆ ಮತ್ತು ವೀರರ ಕಲೆ ಎಂದು ವರ್ಣಿಸಿದ್ದಾರೆ. ಈ ಹೇಳಿಕೆಗಳು ಕೇವಲ ಸರಳಾತ್ಮಕ, ನಿರ್ಧಾರಾತ್ಮಕ, ಪೋಷಣಾತ್ಮಕವಾದವು ಮಾತ್ರ. ಇದರಿಂದ ಕಲೆಯ ವಸ್ತು ವಿಶಿಷ್ಟ್ಯತೆಗೆ ನ್ಯಾಯ ಒದಗಿಸಿದಂತೆ ಆಗುವುದಿಲ್ಲ. ಈ ಪರಿಕಲ್ಪನೆಯಿಂದ ಅಧ್ಯಯನ ಮಾಡಿದರೆ ಲಾಭಕ್ಕಿಂತ ಅನಾಹುತಗಳೇ ಹೆಚ್ಚು. ಇಂತಹ ವಿದ್ವಾಂಸರನ್ನು ಚಿನ್ನಪ್ಪ ಗೌಡ್ರು ವಿರೋಧಿಸುತ್ತಾರೆ. ಇಂತಹ ಹೇಳಿಕೆಗಳನ್ನು ಕೊಡುವ ವಿದ್ವಾಂಸರಿಗೆ ಜನಪದ ಕುಣಿತವೊಂದು ಸಂಕೀರ್ಣವಾದ ಅಭಿವ್ಯಕ್ತಿ ಮಾಧ್ಯಮ ಎಂದಾಗಲಿ, ಈ ನಾಡಿನ ಜಾತ್ಯಾಧಾರಿತ ಸಮಾಜವೊಂದರ ಚಾರಿತ್ರಿಕವೆಂದಾಗಲೀ, ಬರಿಯ ಹಾಡು ಮಾತ್ರ ಪಠ್ಯವೆಂದಾಗಲಿ, ಸರಿಯಾದ ತಿಳುವಳಿಕೆ ಇರುವುದಿಲ್ಲ ಎನ್ನುತ್ತಾರೆ. ಇವರ ವಾದ ಸರಿಯಾಗಿದೆ. ಕುಣಿತವನ್ನು ಚಾರಿತ್ರಿಕ ಕಥನವೆಂದು ಗ್ರಹಿಸಬೇಕು. ಚಾರಿತ್ರಿಕ ಕಥನವೆಂದು ಗ್ರಹಿಸದೇ ಹೋದಲ್ಲಿ ಅದರಲ್ಲಿ ಅಡಗಿರುವ ವಸ್ತುವನ್ನು ಕೈಬಿಟ್ಟುಬಿಡುತ್ತೇವೆ. ಅವುಗಳು ಹೇಳುವ ಸಂವಹನವನ್ನು ಅರ್ಥಮಾಡಿಕೊಳ್ಳಲಾರದವರಾಗಿ ಬಿಡುತ್ತೇವೆ. ಕುಣಿತದ ಸನ್ನೆ (ಹಾವಾಭಾವಗಳು) ಸಂಕೇತ, ಸಂಭಾಷಣೆ, ಆರಾಧನೆ, ಜಾತಿ, ಸಂಪ್ರದಾಯ, ಸಮುದಾಯಗಳ ಪಾಲ್ಗೊಳ್ಳುವಿಕೆ ಮುಂತಾದವುಗಳನ್ನು ಬಹಳ ಮುಖ್ಯವಾದ ಪಠ್ಯಗಳೆಂದು ಗ್ರಹಿಸಬೇಕು. ಏಕೆಂದರೆ ಈ ಕಲೆಗಳ್ನು ಪ್ರದರ್ಶಿಸುವ ಜನತೆಯ ಸಂಸ್ಕೃತಿಗೂ ಅವರ ಬದುಕಿನ ನೀತಿಗೂ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಾರಣಗಳು ಇರುತ್ತವೆ. ಅವನ್ನು ಕಂಡುಕೊಳ್ಳಬೇಕು. ಪ್ರಸ್ತುತ ಅಧ್ಯಯನ ಇದಕ್ಕೆ ಪೂರಕವಾಗಿ ವಿಶ್ಲೇಷಣೆಗೆ ಒಳಗಾಗಿದೆ. ಕುಣಿತ ಮತ್ತು ಬಡಿತವನ್ನು ಚಾರಿತ್ರಿಕ ಹಿನ್ನಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಪ್ರಮುಖವಾಗಿ ಈ ಕಲೆ ಮಂಡಲಾಕಾರದಲ್ಲಿ ಪ್ರದರ್ಶನಗೊಳ್ಳುತ್ತದೆ. ಸರಳ ರೇಖಾತ್ಮಕ ಪ್ರದರ್ಶನ ಕಡಿಮೆ. ಮಂಡಲಾಕಾರದ ಕುಣಿತದಲ್ಲಿ ತಾಳ ಹಾಕುವವನು ಮಂಡಲದ ಮಧ್ಯೆ ಇರುತ್ತಾನೆ. ಕುಣಿತಗಾರರು/ಬಡಿತಗಾರರು ತಾಳಗಾರನ ಸುತ್ತ ಕೇಂದ್ರೀಕೃತವಾಗಿರುತ್ತಾರೆ. ಇದಕ್ಕೆ 'ಒ(ವ)ಡ್ಡಿವಾಲಗ' ಎಂದು ಕರೆಯುವುದುಂಟು. ಡೊಳ್ಳು ಬಾರಿಸುವವರು ತಮ್ಮ ನಿತ್ಯದ ಸಾಮಾನ್ಯ ಪೋಷಾಕಿನಲ್ಲಿ ಇರುತ್ತಾರೆ. ಹಿಂದೆ ತುಂಡು ಬಟ್ಟೆ(ದಟ್ಟಿ)ಯನ್ನು ಉಟ್ಟು ಬಡಿಯುತ್ತಿದ್ದ ಅನ್ನುವ ಕಥನಗಳು ಸಿಗುತ್ತವೆ. ಡೊಳ್ಳನ್ನು ಕತ್ತಿಗೆ ನೇತು ಹಾಕಿಕೊಂಡಿರುತ್ತಾರೆ; ಇಲ್ಲವೆ ಟೊಂಕಕ್ಕೆ ಕಟ್ಟಿಕೊಂಡಿರುತ್ತಾರೆ. ಕೆಲವೊಮ್ಮೆ ಕೊರಳಿಗೆ ನೇತುಹಾಕಿಕೊಂಡು ಸೊಂಟಕ್ಕೆ ಕಟ್ಟಿಕೊಂಡಿರುತ್ತಾರೆ. ತಾಳಗಾರ

ಡೊಳ್ಳಂ ಡಿಸ್ಸಂ ಡೊಳ್ಳಂ ಡಿಸ್ಸಂ
ಡೊಳ್ಳಂ ಡಿಸ್ಸಂ ಡೊಳ್ಳಂ ಡಿಸ್ಸಂ

ನಾದ ಹೊರಡುವಂತೆ ತಾಳ ಹಾಕುತ್ತಾನೆ. ಬಡಿತಗಾರರು ಈ ತಾಳಗಳ ನಿರ್ದೇಶನದಂತೆ ಬಡಿಯುವುದಕ್ಕೆ ಆರಂಭಿಸುತ್ತಾರೆ. ಬಡಿತ ಮತ್ತು ಕುಣಿತದ ಪ್ರಕಾರಗಳು ೧೦, ೧೫, ೨೦, ೩೦ ನಿಮಿಷಕ್ಕೊಮ್ಮೆ ಬದಲಾಗುತ್ತಿರುತ್ತವೆ. ಬದಲಾವಣೆ ಪ್ರದರ್ಶನದ ಸಂದರ್ಭ ಮತ್ತು ಸಮಯವನ್ನು ಆಧರಿಸುತ್ತದೆ. ಒಟ್ಟು ೩೦ಕ್ಕೂ ಹೆಚ್ಚು ಹೆಚ್ಚು ಪ್ರಕಾರಗಳು ಸಂವೇದನೆಗೊಳ್ಳುತ್ತವೆ. ಮಂಡಲದಲ್ಲಿದ್ದ ಕುಣಿತಗಾರರು ತಾಳ ಹಾಕುವವನ ಸುತ್ತ ಕುಣಿಯುತ್ತಲೇ ಬಲದಿಂದ ಎಡಕ್ಕೆ, ಎಡದಿಂದ ಬಲಕ್ಕೆ ಚಲಿಸುತ್ತಿರುತ್ತಾರೆ. ಮಂಡಲ ಹೀಗೆ ಇರಬೇಕು. ಇಷ್ಟೇ ಇರಬೇಕು ಅನ್ನುವ ಸಿದ್ಧ ನಿಯಮಗಳು ಇಲ್ಲ. ಇದೊಂದು ಪೂರ್ವನಿರ್ಧಾರಿತ ರಚನೆಯೂ ಅಲ್ಲ. ಕುಣಿತಗಾರರು ಹೆಚ್ಚುತ್ತಾ ಹೋದಂತೆ ಹಿಗ್ಗುತ್ತಾ ಹೋಗುತ್ತದೆ. ಕಡಿಮೆಯಾದಂತೆ ಕುಗ್ಗುತ್ತಾ ಹೋಗುತ್ತದೆ. ಕಲಾವಿದ ತನ್ನ ಆಸಕ್ತಿಗನುಗುಣವಾಗಿ ಯಾವಾಗ ಬೇಕಾದರೂ ಹೊರಬರಬಹುದು. ಯಾವಾಗ ಬೇಕಾದರೂ ಒಳಗಡೆ ಹೋಗಬಹುದು. ಕುಣಿತಕ್ಕೆ ಅನುಕೂಲವಾಗುವಂತೆ ಮೇಳದವರೇ ಆ ಸಂದರ್ಭದಲ್ಲಿ ಒಂದು ವ್ಯವಸ್ಥಿತವಾದ ರಚನೆಯನ್ನು ಮಾಡಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ರಚನೆಯಾದ ಮಂಡಲಕ್ಕೆ ಪ್ರತಿಯೊಬ್ಬ ಕಲಾವಿದ ತನ್ನಷ್ಟಕ್ಕೆ ತಾನು ಪ್ರಜ್ಞಾಪೂರ್ವಕವಾಗಿ ಪ್ರದರ್ಶನ ನಿಯಮಗಳಿಗೆ ಬದ್ಧನಾಗಿ ಬಿಡುತ್ತಾನೆ. ಕೆಲವೊಮ್ಮೆ ಮಂಡಲ ವನ್ನು ಮೀರಿ ಒಳಗೆ-ಹೊರಗೆ ಓಡಾಡಿ ಬಡಿಯುವ, ಕುಣಿಯುವ ವಿಧಾನ ಕಂಡುಬರುತ್ತದೆ. ಈ ವೈಧಾನಿಕತೆ ಬಾಹ್ಯನೋಟಕ್ಕೆ ಮಂಡಲವನ್ನು ಮೀರಿದಂತೆ ಕಂಡುಬರುತ್ತದೆ. ಆದರೆ ಅವರು ಮಂಡಲವನ್ನು ಮೀರಿರುವುದಿಲ್ಲ. ಚೌಕಟ್ಟಿನೊಳಗೆ ಇರುತ್ತಾರೆ. ಮಂಡಲದ ವ್ಯವಸ್ಥೆಗೆ ಬದ್ಧರಾಗಿ ತಮ್ಮ ಕಲಾ ವಿಶಿಷ್ಟತೆಯನ್ನು ಪ್ರದರ್ಶಿಸುತ್ತಿರುತ್ತಾರೆ. ಮಂಡಲವನ್ನು ಮೀರಿ ಕಲಾ ಪ್ರತಿಭೆಯನ್ನು ವೈಯಕ್ತಿಕವಾಗಿ ಅನಾವರಣ ಮಾಡುತ್ತಿದ್ದರು. ಇದು ಮಂಡಲದ ಸಮಷ್ಠಿ ಸಂವೇದನೆಗೆ ಪೂರಕವಾಗಿರುತ್ತದೆ. ಹಾಗಾಗಿ ವಿಶಿಷ್ಟತೆ ಮೇಳದ ಸಮಷ್ಠಿ ಪ್ರತಿಭೆಯನ್ನು ಹೆಚ್ಚಿಸುತ್ತದೆ ಹೊರತು ವ್ಯಕ್ತಿ ಪ್ರತಿಭೆಯನ್ನು ಅಲ್ಲ. ಮಂಡಲವನ್ನು ಮೀರುವಿಕೆ ಕುಣಿತಗಾರರ ಹುಮ್ಮಸ್ಸಿಗೆ, ತೀವ್ರತೆಗೆ ಅನುಗುಣವಾಗಿ ಬಿಂಬಿತವಾಗು ತ್ತಿರುತ್ತದೆ. ಇದಕ್ಕೆ ಇಂತಹದ್ದೇ ಸಂದರ್ಭಗಳು ಇಲ್ಲ. ಯಾವುದೇ ಸಂದರ್ಭದಲ್ಲಾದರೂ ಒಳಹೊರ ಹೋಗಿ ಬರಬಹುದು. ಹಿಂದೆ ಹೇಳಿದಂತೆ ಕಲಾವಿದರ ಹುಮ್ಮಸ್ಸಿಗೆ ಅನುಗುಣವಾಗಿ ಈ ವೈಧಾನಿಕತೆ ರೂಪಗೊಳ್ಳುತ್ತಿರುತ್ತದೆ. ಆದರೆ ಮಂಡಲದ ನಿಯವನ್ನು ಮೀರುವುದಿಲ್ಲ. ಆಟದ ನಿರ್ದಿಷ್ಟ ಲಯ

ವನ್ನು ತಪ್ಪುವುದಿಲ್ಲ. ಮಂಡಲದ ನಿಯಮಕ್ಕೆ ಬದ್ಧವಾಗಿರುವಂತೆ ಒತ್ತಡ ಹೇರುತ್ತಿದ್ದರು ಅನ್ನುವುದು ಡೊಳ್ಳಿನ ಹಾಡುಗಳಿಂದ ತಿಳಿದುಬರುತ್ತದೆ.

"ತಾಳ ನಿಮ್ಮ ಕೈಯಲ್ಲಿದ್ದರ ತಮ್ಮಾ ತಾಳದ ಗ್ಯಾನೊಂದಿರಬೇಕೋ
ದಿಮ್ಮು ನಿಮ್ಮಲ್ಲಿದ್ದರೆ ತಮ್ಮಾ ದಿಮ್ಮಿನ ಗ್ಯಾನೊಂದಿರಬೇಕೋ
ಡೊಳ್ಳು ನಿಮ್ಮಲಿಯಿದ್ದರೆ ತಮ್ಮಾ ನಾದದ ಗ್ಯಾನೊಂದಿರಬೇಕೋ"

ಸರಳ ರೇಖೆಯಲ್ಲಿ ಚಲಿಸುತ್ತ ಬಡಿಯುವ ಸಂದರ್ಭದಲ್ಲಿ ಈ ಮಂಡಲ ಬಳಕೆ ಆಗುವುದಿಲ್ಲ. ಈ ವಿಧಾನ ಬಳಕೆಯಾಗುತ್ತದೆ. ವಿಧಾನದಲ್ಲಿ ಬಡಿತಗಾರರು ಎರಡು ಸಾಲು ಮಾಡಿಕೊಂಡು ಬಡಿಯುತ್ತಾ ಸಾಗುತ್ತಿರುತ್ತಾರೆ. ಇವರ ಮಧ್ಯೆ ತಾಳಗಾರ ಇರುತ್ತಾನೆ. ಸಾಗುವ ಮಧ್ಯದಲ್ಲಿ ಕಲಾ ವಿಶಿಷ್ಟತೆಯನ್ನು ಬಿಂಬಿಸಬೇಕು ಎಂದುಕೊಂಡಾಗ ಪ್ರದರ್ಶನಕ್ಕೆ ಅನುಕೂಲವಾಗುವ ಸ್ಥಳದಲ್ಲಿ ಒಂದು ಕಡೆ ನಿಂತು ಪ್ರದರ್ಶಿಸುತ್ತಾರೆ. ಇದಕ್ಕೆ 'ಮಜಲು' ಎಂದು ಹೆಸರು. ಇಲ್ಲವೇ, ಸರಳರೇಖೆಯನ್ನು ಮುರಿದು ಕಲೆಯನ್ನು ಪ್ರದರ್ಶಿಸುತ್ತ ತಕ್ಷಣವೇ ಮಂಡಲವನ್ನು ಕಟ್ಟಿಕೊಳ್ಳುತ್ತಾರೆ. ಮಜಲು ಮುಗಿದ ತಕ್ಷಣ ಮತ್ತೆ ಸರಳರೇಖೆಯನ್ನು ರಚಿಸಿಕೊಂಡು ಮುನ್ನಡೆಯುತ್ತಾರೆ.

ಹೀಗೆ ಡೊಳ್ಳು ಕಲೆ ಹಲವು ವಿಧಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಅವನ್ನು ಈಗಾಗಲೇ ಹಲವಾರು ವಿದ್ವಾಂಸರು ಗುರುತಿಸಿದ್ದಾರೆ. ಆ ವರ್ಗೀಕರಣಗಳಲ್ಲಿ ಕುರುವ ಬಸವರಾಜರವರ ವರ್ಗೀಕರಣ ಸೈದ್ಧಾಂತಿಕವಾಗಿ ಗಮನಸೆಳೆಯುತ್ತದೆ. ಹಾಗೂ ಇವರು ಕುಣಿತ ಮತ್ತು ಬಡಿತ ಪ್ರಕಾರಗಳನ್ನು ಬೇರೆ ಬೇರೆಯಾಗಿ ಗುರುತಿಸಿದ್ದಾರೆ.

ವರ್ಗೀಕರಣ ೧.

೧. ಗೆಜ್ಜೆ ಕುಣಿತ
೨. ಉಯ್ಯಾಲೆ ಕುಣಿತ
೩. ನವಿಲ ಕುಣಿತ
೪. ರಂಗೋಲಿ ಕುಣಿತ
೫. ಬೀರಲಿಂಗನ ಕುಣಿತ
೬. ರುದ್ರನ ಕುಣಿತ
೭. ಮಾದೇಶ್ವರನ ಕುಣಿತ

ವರ್ಗೀಕರಣ ೨.

೧. ಗೋಪುರ ಕುಣಿತ
೨. ಒಬ್ಬರ ಮೇಲೊಬ್ಬರು
೩. ಇಬ್ಬಿಬ್ಬರು
೪. ಡೊಳ್ಳುಗಳ ಮೇಲೆ ನಡೆದಾಟ
೫. ಬಂಡಿಗಾಡಿ ಚಕ್ರದ ಮೇಲೆ
೬. ಏಣಿಯ ಮೇಲೆ ನಡದಾಟ

೭. ಕೊಡ ಕಚ್ಚಿ ಕುಣಿತ

೮. ಲಾಗ ಹಾಕುವುದು

೯. ನೋಟು ಎತ್ತುವುದು

೧೦. ಮರಗಾಲು ಕುಣಿತ

೧೧. ಮೇಲೊಬ್ಬರು ಹಿಂದಕ್ಕೆ ಬಾಗಿ

೧೨. ಮಂಡಿ ಮೇಲೆ ಕೂತು ಹಿಂದಕ್ಕೆ ಬಾಗಿ

೧೩. ಕೆಳಗೆ ಮಾಡಿ ಏಣಿ ಹತ್ತಿಳಿವ ಕಸರತ್ತು.

ಬಿ.ಬಿ. ಹೆಂಡಿ, ಶಿವಾನಂದ ಗುಬ್ಬಣ್ಣವರು, ಶ್ರೀರಾಮ ಇಟ್ಟಣ್ಣ, ಬಸವರಾಜ ಮಲಶೆಟ್ಟಿ, ಜ್ಯೋತಿ ಹೊಸೂರು, ಜಕಬಾಳ ಎಸ್.ಎಫ್., ಬೋರಲಿಂಗಯ್ಯ ಹಿ.ಚಿ. ಮುಂತಾದ ವಿದ್ವಾಂಸರು ಕುರುವ ಬಸವರಾಜರವರ ವರ್ಗೀಕರಣದ ಎರಡನೆ ವರ್ಗೀಕರಣವನ್ನು ಡೊಳ್ಳುಕುಣಿತದ-ಬಡಿತದ ವಿವಿಧ ಪ್ರಕಾರಗಳೆಂದು ಗುರುತಿಸಿದ್ದಾರೆ. ಈ ವಿದ್ವಾಂಸರು ಗುರುತಿಸಿರುವ ಹಲವು ಪ್ರಕಾರಗಳನ್ನು ಬಸವರಾಜ ರವರು ಕೈಬಿಟ್ಟಿದ್ದಾರೆ. ಅವುಗಳು ಇಂತಿವೆ.

೧. ಜಡೆ ಹೆಣೆಯುವುದು ಅಥವಾ ಲವಳ ಹಾಕುವುದು

೨. ಅಂಗಾತ ಮಲಗಿ ಬಾರಿಸುವುದು ಇನ್ನು ಮುಂತಾದವುಗಳು.

ಕುರುವ ಬಸವರಾಜ ಅವರ ವರ್ಗೀಕರಣ ವೈಜ್ಞಾನಿಕವಾಗಿದೆ. ಕಲೆ ಸಮಷ್ಠಿ ಅಂಶವನ್ನು ಪ್ರದರ್ಶನದ ವಿಶಿಷ್ಟತೆಯನ್ನು ಹಿಡಿದಿಟ್ಟುಕೊಂಡಿದೆ. ವರ್ಗೀಕರಣ ೧ನೇ ವರ್ಗೀಕರಣದಲ್ಲಿ ಕುಣಿತ ಪ್ರಧಾನವಾಗಿದ್ದರೆ ವರ್ಗೀಕರಣ ಎರಡರಲ್ಲಿ ಬಡಿತ ಪ್ರಧಾನವಾಗಿದೆ. ಎರಡನೇ ವರ್ಗೀಕರಣದ ಕುಣಿತಗಳು ಕೇವಲ ಕುಣಿತಗಳಲ್ಲ ಅಥವಾ ಬಡಿತಗಳಲ್ಲ. ದೈಹಿಕ ಕಸರತ್ತುಗಳು ಎನ್ನುವುದು ಬಸವರಾಜ ಅವರ ವಾದ. ಈ ವಾದ ಸರಿಯಾಗಿಯೇ ಇದೆ. ಎರಡನೇ ಪ್ರಕಾರದ ಕುಣಿತಗಳು ಕೇವಲ ಕುಣಿತಗಳಲ್ಲ. ಕುಣಿತಗಳು, ಆಂಗಿಕ ಚಲನೆಗಳು ಪ್ರಧಾನವಾಗಿ ಕಾಣಿಸಿಕೊಳ್ಳುವುದೇ ಇಲ್ಲ. ಬಡಿತಗಳು ಮತ್ತು ದೈಹಿಕ ಕಸರತ್ತುಗಳು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ.

ಗ್ರಾಮದೇವತೆ, ಬೀರದೇವರು, ಮೈಲಾರ, ಮಾಳಿಂಗರಾಯ, ಅಮೋಘಸಿದ್ಧ, ಇಟ್ಟಪ್ಪ, ಬುಳ್ಳಪ್ಪ, ಮಾರಮ್ಮ, ಹುಲಿಗೆಮ್ಮ ಮುಂತಾದ ದೈವಗಳ ಆಚರಣೆಗಳ ಸಂದರ್ಭಗಳಲ್ಲಿ ಡೊಳ್ಳು ಪ್ರದರ್ಶನಗೊಳ್ಳುತ್ತದೆ. ದೈವಗಳ ಆಚರಣೆಯ ಸಂದರ್ಭದಲ್ಲಿ ವಿವಿಧ ಗ್ರಾಮದ ಮೇಳದವರು ಅಮಂತ್ರಿಸುವ ಪದ್ಧತಿ ಇದೆ. ಇದನ್ನು 'ಭಂಡಾರ ಹಿಡಿಯುವುದು' ಎನ್ನುತ್ತಾರೆ. ಅಂದರೆ ಆಹ್ವಾನ ಮಾಡುವ ಗ್ರಾಮದವರು ಮೇಳದ ನಾಯಕನಿಗೆ ತಮ್ಮ ಗ್ರಾಮಕ್ಕೆ ಕಲೆ ಪ್ರದರ್ಶನಕ್ಕೆ ಬರಬೇಕೆಂದು ಕೇಳಿಕೊಂಡು ತಂಡದ ನಾಯಕನ ಕೈಯಲ್ಲಿ ಭಂಡಾರ ಕೊಡುತ್ತಾರೆ. ನಾಯಕನು ಇಲ್ಲದಿದ್ದರೆ ಮೇಳ ಕಲಾವಿದನ ಕೈಗೆ ಕೊಡುತ್ತಾರೆ. ಈ ಭಂಡಾರ ಹಿಡಿದರೆ 'ದೇವರಾಣೆ' ಮಾಡಿದಂತೆ. ತಪ್ಪದೇ ಪ್ರದರ್ಶನಕ್ಕೆ ಹೋಗಲಾಗುತ್ತದೆ. ಹಿಂದೆ ಕಲೆ ಪ್ರದರ್ಶನಕ್ಕೆ ದುಡ್ಡು ತೆಗೆದುಕೊಳ್ಳುತ್ತಿರಲಿಲ್ಲ. ಹೋದ

ವರಿಗೆ ಊಟ, ಉಪಚಾರ, ಚಹಾ ತಂಬಾಕಿನ ವ್ಯವಸ್ಥೆ ಮಾಡಿದರೆ ಸಾಕಿತ್ತು. ಕಲೆ ಪ್ರದರ್ಶಿಸಿ ಬರುತ್ತಿದ್ದರು. ಅಂಥ ದೈವ ಸಂಕಲ್ಪ ಇವರಲ್ಲಿತ್ತು. ಕೆಲವು ಗ್ರಾಮದೇವತೆಗಳ ಜಾತ್ರೆಗಳಲ್ಲಿ ಗ್ರಾಮದ ದೈವಸ್ಥರಿಂದ ಒಂದು ಬ್ಯಾಟಿ (ಕುರಿ-ಟಗರು ಮೇಕೆ) ಮತ್ತು ಅಡಿಗೆಯ ಸಾಮಗ್ರಿಗಳನ್ನು ಕೊಡುತ್ತಾರೆ. ಹಗರಿಬೊಮ್ಮನಹಳ್ಳಿ ತಾಲ್ಲೂಕು ಸೊನ್ನ, ಮುಟುಗನಹಳ್ಳಿ, ಕೆಚ್ಚಿನಬಂಡಿ, ಗುಳೇದಾಳ್ ಮುಂತಾದ ಗ್ರಾಮಗಳಲ್ಲಿ ಈ ವಿಧಾನವಿದೆ. ಬ್ಯಾಟಿ ಕೊಡದಿದ್ದರೆ ಗ್ರಾಮದವರು ಮನೆಗೊಬ್ಬ ಕಲಾವಿದನಂತೆ ಕರೆದುಕೊಂಡು ಹೋಗಿ ಊಟ ಮಾಡಿಸಿ ಕಳುಹಿಸುವ ನಿಯಮವಿದೆ. ಕೆಚ್ಚಿನಬಂಡಿ ಗ್ರಾಮದಲ್ಲಿ ಊರ ಯಜಮಾನ ಕಳುಹಿಸಿದ ಕಲಾವಿದನನ್ನು ಮನೆಯವರು ತಪ್ಪದೇ ಒಳ್ಳೆಯ ಅತಿಥ್ಯ ಮಾಡಿ ಕಳಿಸುತ್ತಾರೆ. ಅಷ್ಟೊಂದು ಗೌರವ ಮತ್ತು ಹೊಂದಾಣಿಕೆ ಇತ್ತು. ಕೆಲವು ಗ್ರಾಮಗಳಲ್ಲಿ ಇವತ್ತು ಇದೆ. ಪ್ರಮಾಣ ಕಡಿಮೆ ಆಗುತ್ತಿದೆ. ಬದಲಾಗಿ ತಂಡಕ್ಕೆ ಇಂತಿಷ್ಟು ಹಣವನ್ನು ಕೊಡುವ ಪದ್ಧತಿ ಆರಂಭವಾಗಿದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಮನೆಗಳಲ್ಲಿ ಹೋದಾಗ ಅವರು ಕಲಾವಿದರಿಗೆ ಹೊಂದಿಕೊಳ್ಳ ದಿರುವುದು, ಒಳ್ಳೆಯ ಆಹಾರ ಕೊಡದಿರುವುದು ಇನ್ನೂ ಮುಂತಾದವು ಬಿಜಾಪುರ, ಬೆಳಗಾಂ, ಬಾಗಲಕೋಟೆ ಜಿಲ್ಲೆಗಳಲ್ಲಿ ಇದರ ತೀವ್ರತೆ ಹೆಚ್ಚು.

೨.೫.೩. ಡೊಳ್ಳು ಬಡಿತ ಮತ್ತು ಕುಣಿತಗಳ ತಾತ್ವಿಕ ಆಯಾಮಗಳು

ಡೊಳ್ಳು ಬಡಿತದ ಬಲಗೈ ಬಡಿತ 'ಬ್ರಹ್ಮದೊಡ್' ಅನ್ನುವ ಧ್ವನಿಯನ್ನು ಹೊರಡಿಸಿದರೆ ಎಡಗೈ ಬಡಿತ ಡಾಂವ್ (ಡೌಂವ್) ಎಂಬ ಧ್ವನಿಯನ್ನು ಹೊರಹಾಕುವುತ್ತದೆ ಎನ್ನುವುದು ಕಲಾವಿದರ ನಂಬಿಕೆ. ಈ ನಂಬಿಕೆಯನ್ನು ಬಿ.ಬಿ. ಹೆಂಡಿ, ಎಚ್.ಟಿ. ಪೋತೆ, ಜ್ಯೋತಿ ಹೊಸೂರ ಮುಂತಾದ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಸಿಂಪಿ ಲಿಂಗಣ್ಣನವರು ಬಡಿತದ ಧ್ವನಿಯನ್ನು ಈ ರೀತಿ ಗುರುತಿಸಿದ್ದಾರೆ.

> "ಬ್ರಹ್ಮದೊಡ್-ಡಾವ್ ಬ್ರಹ್ಮದೊಡ್-ಡಾಂವ
> ಹಿಡಿದ್ಯಾಽಂಗ್ ಬಿಟ್ಯಾಽಂಗ್
> ಹಿಡಿದ್ಯಾಽಂಗ್ ಬಿಟ್ಯಾಽಂಗ್
> ಡುಬ್ಬದ್ಪುರಿ ಡುಬ್ಬದ್ಪುರಿ ಡುಬ್ಬಹ್ಪುರಿ"

ಮತ್ತು ಬ್ರಹ್ಮ ದೊಡ್ಡ ಮತ್ತು ಡಾಂವ್ ಧ್ವನಿಗಳನ್ನು ಕೊಡಿಸಿದಾಗ "ಬ್ರಹ್ಮದೊಡ್ಡಂವ್" ಎಂದಾಗುತ್ತದೆ. 'ಬ್ರಹ್ಮದೊಡ್ಡಾಂವ್' ಅನ್ನುವ ಧ್ವನಿಯಲ್ಲಿ ಸಾಂಕೇತಿಕ ಇದೆ. ಆ ಸಂಕೇತ ಮುಖ್ಯ. ಹಾಲುಮತದವರು ಮೂಲತಃ ಶೈವ ಆರಾಧಕರು. ಶಿವನು ಬೇರೆ ಅಲ್ಲ ನಾವು ಬೇರೆ ಅಲ್ಲ ಅಂದುಕೊಂಡವರು. ಹಾಗಾಗಿ ತಮ್ಮ ಪ್ರತಿಯೊಂದು ಕಾರ್ಯವನ್ನು ಶಿವನಿಂದಲೇ ಅಥವಾ ಶಿವನ ಪತ್ನಿಯಿಂದಲೇ ಆರಂಭಿಸಿಕೊಳ್ಳುತ್ತಾರೆ. ಮಾತೃಪ್ರಧಾನ ಮತ್ತು ಪಿತೃಪ್ರಧಾನ ಆಚರಣೆಯಲ್ಲಿ ಬೇರೆ ಬೇರೆ ಆಗಿದೆ. ಆ ಚರ್ಚೆ ಇಲ್ಲಿ ಅನಗತ್ಯ. 'ಬ್ರಹ್ಮದೊಡ್ಡಾಂವ್' ಎನ್ನುವ ಸಾಂಕೇತಿಕ ಧ್ವನಿಯಲ್ಲಿ ತಮ್ಮ ಆರಾಧ್ಯ ದೈವವನ್ನು ಉನ್ನತ ಸ್ಥಾನಕ್ಕೇರಿಸುವ ಉದ್ದೇಶವಿದೆ. ನಮ್ಮ ಆರಾಧ್ಯ ದೈವವಾದ ಶಿವನೇ ಶ್ರೇಷ್ಠ ಎನ್ನುವ ಧೋರಣೆ ಇದೆ. ಎಲ್ಲಾ ದೈವಗಳಿಗಿಂತ ಶಿವನೇ ದೊಡ್ಡವನು ಎನ್ನುವ ಪ್ರತಿಪಾದನೆ ಇದೆ. ಹಾಲುಮತ ಧರ್ಮದ ಮೇಲೆ, ಶೈವ ಧರ್ಮದ ಆರಂಭಿಕ ಕಾಲಘಟ್ಟದಿಂದಲೂ

ಇತರ ಧರ್ಮಗಳು ಧಾರ್ಮಿಕ ಯುದ್ಧ ಮಾಡಿವೆ. ಈ ರಾಜಕಾರಣವನ್ನು ಹೆದರಿಸುವ ಮತ್ತು ನಮ್ಮ ದೇವರು ಶ್ರೇಷ್ಟವೆಂದು ಪ್ರತಿರೋಧ ಒಡ್ಡುವ ಅನಿವಾರ್ಯತೆ ಹಾಲುಮತ ಸಮುದಾಯಕ್ಕೆ ಇತ್ತು. ಈ ಸಮುದಾಯ ಧರ್ಮಯುದ್ಧವನ್ನು ಸಾರುವ ಧರ್ಮಗಳ ವ್ಯವಸ್ಥೆಯ ವಿರುದ್ಧ ನೇರವಾದ ಹೋರಾಟವನ್ನು ಮಾಡುವ ಶಕ್ತಿಯನ್ನು, ಬೌದ್ಧಿಕತೆಯನ್ನು ಹೊಂದಿದ್ದಿಲ್ಲ. ಹಾಗಾಗಿ ತಮ್ಮ ಪ್ರತಿರೋಧವನ್ನು ಕುಣಿತ ಮತ್ತು ಜನಪದ ವಾದ್ಯಗಳ; ತಮ್ಮ ಆರಾಧ್ಯ ವಾದ್ಯಗಳ ಮುಖಾಂತರ ಅಭಿವ್ಯಕ್ತಿಗೊಳಿಸಿದ್ದಾರೆ. ಈ ತರಹದ ಪ್ರತಿರೋಧವನ್ನೇ ಮೊಗಳ್ಳಿ ಗಣೇಶ ಅವರು 'ಬಚ್ಚಿಟ್ಟ ಪಠ್ಯ'ವೆಂದು ಕರೆಯುವುದು. ಶೈವ ಆರಾಧನೆಯ ಮೇಲೆ ಇತರ ಧರ್ಮ ದಾಳಿಮಾಡಿದಾಗ ಈ ಪಶುಪಾಲಕ (ಹಾಲುಮತ) ಸಮುದಾಯ ಡೊಳ್ಳಿನ ಬಡಿತದ ಮುಖಾಂತರ ಪ್ರತಿರೋಧ ಮಾಡಿದ್ದಾರೆ. ಪ್ರತಿರೋಧ ಘಟನೆಯನ್ನೇ ಸಮುದಾಯದ ಕಥನವನ್ನಾಗಿ ಸೃಷ್ಟಿಸಿಕೊಂಡಿದೆ. ಹಾಗಾಗಿ ಡೊಳ್ಳು ಕುಣಿತ ಮತ್ತು ಬಡಿತ ಶಿವನೇ ದೊಡ್ಡವನೆನ್ನುವ ಹಠದ ಪ್ರತಿಪಾದನೆಯಾಗಿ ಕಂಡುಬರುತ್ತದೆ.

ಇದು ವೀರರ ಕಲೆ. ವೀರರಿಗೆ ಒಪ್ಪುವ ಕಲೆ ಅನ್ನುವ ಧ್ಯೇಯವಿದೆ. ಡೊಳ್ಳುಕುಣಿತ ಅಭಿಯನಗಳು ಯುದ್ಧದ ಅರ್ಭಟದಂತೆ ಕಾಣುತ್ತದೆ. ಕೆಲವು ಭಂಗಿಗಳು ಯುದ್ಧದಲ್ಲಿ ಜಯಶೀಲರಾದ ವೀರರು ಹರ್ಷ ವ್ಯಕ್ತಪಡಿಸುವ ವಿಶಿಷ್ಟತೆಯಂತಿವೆ. ವಾದ್ಯ ಬಡಿಯುತ್ತಲೇ ಅರ್ಭಟಿಸುವ ಗಂಭೀರತೆ ಪ್ರತಿರೋಧದಂತೆ ಕಾಣಿಸುತ್ತದೆ. ಮೇಲಕ್ಕೆ ಕೈ ಎತ್ತುವ, ಎರಗುವ ವಿವಿಧ ಭಂಗಿಗಳ ಕುಣಿತಗಳು ಜಯಶೀಲರಾದವರ ಸಾಂಕೇತಿಕದಂತೆ ಕಂಡುಬರುತ್ತವೆ. ಇಲ್ಲಿ ಹುಲಿಯ ಚರ್ಮವನ್ನು ಧರಿಸಿ ಡೊಳ್ಳು ಬಡಿಯುವ ಸಂಪ್ರದಾಯವಿದೆ. ತಮ್ಮ ಅಭಿವ್ಯಕ್ತಿ ಧೈರ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುವುದಕ್ಕೆ ಈ ಚರ್ಮವನ್ನು ಬಳಸಿರಬೇಕು. ಡೊಳ್ಳು ಕಲೆಯ ಕುಣಿತ ಮತ್ತು ಬಡಿತದಲ್ಲಿ ಅರ್ಭಟವಿದೆ, ಪ್ರತಿರೋಧವಿದೆ. ಸಂತೋಷವಿದೆ. ಜಯಶೀಲರಾದ ವೈಧಾನಿಕತೆ ಇದೆ. ತಮ್ಮ ಧರ್ಮವನ್ನು ಸಂರಕ್ಷಣೆ ಮಾಡಿಕೊಂಡಿರುವ ವಿಶಿಷ್ಟತೆ ಇದೆ. ಇದನ್ನು ತುಂಬಾ ನೇರವಾಗಿ ಹೇಳದೇ ತಮ್ಮ ಕಲೆಯಲ್ಲಿ ಬಚ್ಚಿಟ್ಟುಕೊಂಡು ರಾಜಗಂಭೀರವಾಗಿ ಇವತ್ತಿಗೂ ಅನಾವರಣ ಮಾಡುತ್ತಿದೆ. ಈ ಕಲೆಯಲ್ಲಿ ಮಾತೃಪ್ರಧಾನ ಸಂಸ್ಕೃತಿಯಿಂದ ಪಿತೃಪ್ರಧಾನ ಸಂಸ್ಕೃತಿಯತ್ತ ಜಾರಿರುವ ಸೂಕ್ಷ್ಮತೆಗಳಿವೆ.

೨.೫.೪. ಕುಣಿತ ಮತ್ತು ಹಾಡುಗಾರಿಕೆಗೂ ಇರುವ ಸಂಬಂಧ

ಬಿ.ಬಿ. ಹೆಂಡಿ ಅವರು ಕುಣಿತ ಮತ್ತು ಹಾಡುಗಾರಿಕೆಯ ಅಭಿವ್ಯಕ್ತಿ ಸಂದರ್ಭಗಳು ಒಂದೇ ಎಂದು ಗುರುತಿಸಿದ್ದಾರೆ. ಇವರ ಗ್ರಹಿಕೆ ಸರಿಯಾಗಿದೆ. ಅಂದರೆ "ದೇವರ ರಥೋತ್ಸವ ಅಥವಾ ಪಲ್ಲಕ್ಕಿ ಉತ್ಸವ ಕಾಲದಲ್ಲಿ ಮೇಳದವರು ಪರಿಶೆಯ ಮುಂಚೂಣಿಯಲ್ಲಿ ಎರಡು ಸಾಲಾಗಿ 'ಡಗ್ಗೆ ಪಟದಂ' ಎಂದು ತಾಳ ಹಾಕುತ್ತ ನಡೆಯುತ್ತಾರೆ. ವೀರಗಾರನು ಎರಡು ಸಾಲುಗಳ ನಡುವೆ ಇದ್ದು ತಾಳಕ್ಕನುಸಾರವಾಗಿ ಹಾಡು ಹೇಳುತ್ತಿರುತ್ತಾನೆ"[೧೯] ಎನ್ನುತ್ತಾರೆ. ಆದರೆ ಅಧ್ಯಯನಕಾರರು ಇವೆರಡು ಬೇರೆ ಬೇರೆ ಎಂದು ಹೇಳುವುದರ ಮುಖಾಂತರ ಅವುಗಳ ಉದ್ದೇಶದ ಧೋರಣೆಯನ್ನು ಹೊಡೆದು ಹಾಕಿದ್ದಾರೆ. ಈ ಹಾಡುಗಾರಿಕೆಯ ಮುಂದುವರೆದ ಭಾಗವಾಗಿ ಹೇಳಿಕೆಗಳು ನಡೆಯುತ್ತಿವೆ. ಡೊಳ್ಳು ಮೇಲೆ ನಿಂತು ಹೇಳಿಕೆ ಹೇಳುವ ಆಚರಣೆಗಳು ಇವೆ. ಹಾಲುಮತದ ಸಾಂಸ್ಕೃತಿಕ ವೀರರು ಭೂಮಿಗೆ

ಬರುವಾಗ ಶಿವನಿಂದ ಮಳೆಯ ಕೀಲಿಯ ವರಗಳನ್ನು ಪಡೆದುಕೊಂಡು ಬರುತ್ತಾರೆ. ಹೇಳಿಕೆಗಳನ್ನು ಹೇಳುವಾಗ ನಾವು ಹೇಳುತ್ತಿರುವುದು 'ಶಿವನ ನುಡಿಗಳು' ಎಂದು ಆರಂಭಿಸುತ್ತಾರೆ. ಶಿವನನ್ನು ಮೈದುಂಬಿಕೊಳ್ಳುವ ವಿಧಾನವಿದೆ. ಶಿವನನ್ನು ಮೈದುಂಬಿಸಿಕೊಳ್ಳುವುದಕ್ಕಾಗಿಯೇ ಕೆಲವು ಆಚರಣೆಗಳನ್ನು ಮಾಡುತ್ತಾರೆ. ಅವುಗಳಲ್ಲಿ 'ಹಲಗಸೇವೆ', 'ಡೊಳ್ಳು ಬಡಿತಗಳು', 'ತಲೆಯ ಮೇಲೆ ತೆಂಗಿನ ಕಾಯಿ ಹೊಡೆದುಕೊಳ್ಳುವ ಪವಾಡ' ಆಚರಣೆಗಳು ಮುಂಚೂಣಿಯಲ್ಲಿವೆ. ಹಾಗಾಗಿ ಕುಣಿತಕ್ಕೂ, ಹಾಡುಗಾರಿಕೆಗೂ ಮತ್ತು ಹೇಳಿಕೆಗಳಿಗೂ ಪ್ರದರ್ಶನಾತ್ಮಕ ಸಂಬಂಧವಿದೆ.

ಹಾಡುಗಾರಿಕೆಗೆ ಕುಣಿತ, ಬಡಿತವೇ ಪ್ರೇರಣೆ. ಹಾಡನ್ನು ಹಾಡುವುದಕ್ಕೆ ಮುಂಚೆ ನೆರೆದ ಕಲಾವಿದರಿಂದ 'ವಾಲಗ' ನಡೆಯುತ್ತದೆ. ವಾಲಗದ ಉದ್ದೇಶ ಬ್ರಹ್ಮದೇವರನ್ನು ಎಚ್ಚರಿಸುವುದು. ಆಕಾಶದಲ್ಲಿರುವ ಶಿವನಿಗೆ ತಮ್ಮ ಆರಾಧನೆಯ ಸುದ್ದಿಯನ್ನು ರವಾನಿಸುವುದು. ಡೊಳ್ಳು ಬಡಿತದ ಸದ್ದು ಆಕಾಶ ಭೂಮಿಯನ್ನು ಒಂದುಗೂಡಿಸುತ್ತದೆ ಎನ್ನುವುದು ಕಲಾವಿದರ ನಂಬಿಕೆ. ಅಂದರೆ ಆಕಾಶದಲ್ಲಿರುವ ಶಿವನಿಗೆ ತಲುಪುತ್ತದೆ. ಈ ಸದ್ದು ಮುಟ್ಟಿದ ತಕ್ಷಣ ಶಿವ ತಮ್ಮ ಹತ್ತಿರ ಬರುತ್ತಾನೆ. ಅಂದರೆ ಶಿವನನ್ನು ಕರೆದುಕೊಳ್ಳುವ ಕ್ರಿಯೆ ಆರಂಭವಾಗುತ್ತದೆ. ದೇವರನ್ನು ತಮ್ಮ ಹತ್ತಿರ ಕರೆದುಕೊಳ್ಳುವ ಕ್ರಿಯೆಯೇ ಹಾಡುಗಾರಿಕೆಯಲ್ಲಿಯೂ ಇದೆ. ಬಡಿತ ಮತ್ತು ಹಾಡುಗಾರಿಕೆಯ ಉದ್ದೇಶ ಶಿವನನ್ನು ತಮ್ಮ ಹತ್ತಿರ ಕರೆದುಕೊಳ್ಳುವುದು. ಆ ದೇವರು ತಮ್ಮ ಹತ್ತಿರ ಬರುತ್ತಾನೆ ಎನ್ನುವುದು ಈ ಕಲಾವಿದರ ಮತ್ತು ಭಕ್ತಾದಿಗಳ ಗಾಢವಾದ ನಂಬಿಕೆ. ದೇವರು ಬಂದಿರುವ ಸುದ್ದಿಯನ್ನು ತಮ್ಮ ಬಳಗದವರಿಗೆ ತಿಳಿಸಿ ಎಲ್ಲರನ್ನು ಒಟ್ಟಿಗೆ ಸೇರಿಸಬೇಕಾಗಿದೆ. ಆ ಕಾರಣಕ್ಕೆ

"ಶಿವ ಗುರುವೇ ನಮ್ಮಯ ದೇsssವರ ಬಂದಾರ ಬನ್ನೀರೆ
ಶಿವನೇ ನಮ್ಮಯ ದೇsssವರ ಬಂದಾರ ಬನ್ನಿರೆ"

ಎಂದು ಹಾಡಿ ಕರೆಯುವುದಕ್ಕೆ ಆರಂಭಿಸಿರಬೇಕು. ಮೂಲತಃ ಅಲೆಮಾರಿಗಳಾದ ಇವರು ಅಲ್ಲಲ್ಲಿ ನೆಲೆಸುತ್ತಿದ್ದರು. ಇವತ್ತು ಕುರಿಗಾರರು ರಾತ್ರಿ ಅಡವಿಗಳಲ್ಲಿ ಕುರಿಗಳನ್ನು ನಿಲ್ಲಿಸುವಾಗ ಅಲ್ಲಲ್ಲಿ ಗುಂಪು ಕಟ್ಟಿಕೊಂಡು ವಾಸಿಸುತ್ತಾರೆ. ಶೈವಾರಾಧನೆಗಾಗಿ ಅವರೆಲ್ಲರನ್ನು ಒಟ್ಟುಗೂಡಿಸುವ ಅನಿವಾರ್ಯತೆ ಇತ್ತು. ಡೊಳ್ಳುವಾಲಗ ಎಲ್ಲರನ್ನು ಒಂದೆಡೆ ಸೇರಿಸುವ ತಂತ್ರಗಾರಿಕೆಯಾಗಿ ಆರಂಭವಾಗಿರುವ ಸಾಧ್ಯತೆ ಇದೆ. 'ವಾಲಗ'ದ ಉದ್ದೇಶವಂತು ನೆರೆದ ಅಥವಾ ಆರಾಧನೆ ಮಾಡುತ್ತಿರುವ ಸುದ್ದಿಯನ್ನು ದೂರದ ಸ್ಥಳಕ್ಕೆ ರವಾನಿಸುವುದು ಆಗಿತ್ತು. ಹಾಗಾಗಿ ಆರಾಧನೆಗಾಗಿ ಜನರನ್ನು ಸಂಗ್ರಹಿಸುವ ಮತ್ತು ಒಟ್ಟುಗೂಡಿಸುವ ತಂತ್ರಗಾರಿಕೆಯಾಗಿ ವಾಲಗ ಮತ್ತು ದೇವರನ್ನು ಕರೆದುಕೊಳ್ಳುವ ಕ್ರಿಯೆ ರೂಪಿತವಾಗಿದೆ. ಆಹ್ವಾನಿಸುವ ದೇವರನ್ನು 'ಒಡೆಯ'ನೆಂದು ತಮ್ಮನ್ನು 'ಆಳುಮಕ್ಕಳು' ಎಂದು ಕರೆದುಕೊಳ್ಳುತ್ತಾರೆ. ಆ ಒಡೆಯನ ಸೇವೆ ಮಾಡುವುದೇ ನಮ್ಮ ಕಾಯಕ. ಆ ಕಾರ್ಯಕ್ಕಾಗಿ ನಾವು ಹಾಡುತ್ತಿದ್ದೇವೆ ಎನ್ನುವ ಮನೋಭಾವ ಕಲಾವಿದರದು. ಇದರ ವಿವರವಾದ ಚರ್ಚೆಯನ್ನು ಹಾಡುಗಳ ಸ್ವರೂಪದಲ್ಲಿ ಚರ್ಚಿಸಲಾಗಿದೆ.

ದೇವರನ್ನು ತಮ್ಮ ಹತ್ತಿರ ಕರೆದುಕೊಳ್ಳುವ ವಿಧಾನ ಡೊಳ್ಳು ವಾದ್ಯದ ಸೃಷ್ಟಿಯೊಂದಿಗೆ ತಳುಕು ಹಾಕಿಕೊಂಡಿದೆ. ಅಂದರೆ ಡೊಳ್ಳಾಸುರನ ಹೊಟ್ಟೆಯಲ್ಲಿ ಅಡಗಿದ ಶಿವ ಪಾರ್ವತಿಗೆ ಕಾಣಿಸುವ

ದಿಲ್ಲ. ಹುಡುಕುತ್ತಾಳೆ. ಹುಡುಕುತ್ತಾ ಹುಡುಕುತ್ತಾ ದೂರ ಹೋಗುತ್ತಾಳೆ. ಆಗ ಶಿವ ಹೊರಬರುತ್ತಾನೆ. ಹೊರಬರುವಿಕೆಯ ಕಥನಗಳು ಭಿನ್ನವಾಗಿವೆ. ಕೆಲವು ಕಥನಗಳಲ್ಲಿ ಶಿವ ಸ್ವಪ್ರಯತ್ನದಿಂದ ಹೊರಬಂದಿದ್ದಾನೆ. ಮತ್ತೆ ಕೆಲವು ಕಥನಗಳಲ್ಲಿ ಪಾರ್ವತಿ ಹೊರಬರುವಂತೆ ಮಾಡಿದ್ದಾಳೆ. ಇನ್ನೂ ಕೆಲವು ಕಥನಗಳಲ್ಲಿ ವಿಷ್ಣು ಹೊರತಂದಿದ್ದಾನೆ. ಹೀಗೆ ಹಲವು ಕಥನಗಳಿವೆ. ಆದರೆ ಈ ಕಥನಗಳಲ್ಲಿ ಶಿವ ಹೊರಬಂದ ಎನ್ನುವ ಸಾಂಕೇತಿಕತೆ ಇದೆ. ಇಲ್ಲಿ ಭಿನ್ನ ಪಠ್ಯಗಳು ಮುಖ್ಯವಲ್ಲ. ಶಿವ, ವಿಷ್ಣು; ಪುರುಷ ಹೊರಬಂದ ಎನ್ನುವುದು ಮುಖ್ಯ. ಶಿವ ಹೊರಬಂದ ಸುದ್ದಿಯನ್ನು ಪಾರ್ವತಿಗೆ ಭಕ್ತಾದಿಗಳು ತಿಳಿಸಬೇಕಾಗಿತ್ತು. ಹಾಗಾಗಿ ಭಕ್ತಾದಿಗಳು

ದೇವಿಯ ನಮ್ಮಯ ದೇವರ ಬಂದಾವ ಬನ್ನಿರೇss
ಶಿವನೇ ನಮ್ಮ ದೇವssರ ಬಂದಾವ ಬನ್ನಿರೇ

ಎಂದು ಹಾಡುವುದಕ್ಕೆ ಆರಂಭಿಸಿದರು. ದೇವಿಯನ್ನು ಹುಡುಕುವ ಪರಿಕಲ್ಪನೆ ಪ್ರಾಚೀನವಾದದ್ದು. ಮಾತೃಪ್ರಧಾನ ವ್ಯವಸ್ಥೆಯಲ್ಲಿ ರೂಪಿತವಾದದ್ದು. ದೇವಿಯನ್ನು ಆಹ್ವಾನ ಮಾಡಿಕೊಳ್ಳುವ ವಿಧಾನಕ್ಕೂ ಡೊಳ್ಳುವಾದ್ಯದ ಚಾರಿತ್ರಿಕ ಕಥನಕ್ಕೂ ತಾತ್ವಿಕ ಸಂಬಂಧವಿದೆ. ಧಾರ್ಮಿಕ ಸಂಬಂಧವಿದೆ. ಶಿವನೇ ನಮ್ಮ ದೇವssರ ಬಂದಾವ ಬನ್ನಿರೇ ಎಂದು ಹಾಡುವ ವಿಧಾನ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಜಾರಿಗೆ ಬಂದಿರಬೇಕು.

ಗುರುವೇ ನಮ್ಮಯ ದೇವssರ ಬಂದಾರ ಬನ್ನಿರೇ
ಶಿವನೇ ನಮ್ಮ ದೇವssರ ಬಂದಾರ ಬನ್ನಿರೇ

ಹಾಗೂ

ಗುರುವೇ ನಮ್ಮಯ ದೇವರ ಬಂದಾವ ಗೇsss
ಗುರುವ ರೇವಣಸಿದ್ಧಗ ಶರಣೆನ್ನುವೆನೋsss

ಪಲ್ಲವಿಯಲ್ಲಿ ಮಹಿಳೆಯ; ಪಾರ್ವತಿಯ ನೆನಪು ಇಲ್ಲ. ಮಹಿಳಾ ಪ್ರಧಾನತೆಯನ್ನು ಅದೃಶ್ಯಗೊಳಿಸುವ ಕೆಲಸ ಪುರುಷ ಪ್ರಧಾನ ವ್ಯವಸ್ಥೆ ಮಾಡಿದೆ. ಹಾಗಾಗಿ ಮಹಿಳೆ ಮತ್ತು ಪುರುಷ ಪ್ರಧಾನ ವ್ಯವಸ್ಥೆಗಳ ಸಂಘರ್ಷಗಳಾಗಿ ಈ ಹಾಡುಗಳು ಕಾಣಿಸುತ್ತವೆ.

ಅಡಿಟಿಪ್ಪಣಿಗಳು

೧. Gustove oppert **'The original Inhabitants of India'** Pp. 216-217.

೨. Brown C.J., **Coins of India,** Pp. 58.

೩. Maxmuller, **'Popular Educotor'** Vol. VI, Pp. 256.

೪. ಮಲ್ಲೇಪುರಂ ಜಿ. ವೆಂಕಟೇಶ (ಸಂ.), **ಶಂಬಾ ಸಂಪುಟ ೩,** ಪು. ೨೫೧.

೫. ಹನುಮಂತಯ್ಯ ವ್ಹಿ.ಆರ್. **ಕುರುಬರ ಚರಿತ್ರೆ,** ಪು. ೧೧.

೬. Entnoven R.E., **Tribes and castes of Bombay**, Vol. II, Pp. 317.

೭. ಗುರುನಾಥ ಜೋಶಿ, **ಕನ್ನಡ ಶಬ್ದಕೋಶ,** ಪು. ೧೪೪.

೮. ಹೆಬ್ಬಾಲೆ ಕೆ. ನಾಗೇಶ್ (ಸಂ.), **ಜಾನಪದ ಕರ್ನಾಟಕ**, ಪು. ೧೦೮.

೯. ಹೆಂಡಿ ಬಿ.ವಿ.,, ಡೊಳ್ಳಿನ ಹಾಡು (ಲೇಖನ), **ಸುವರ್ಣ ಜಾನಪದ ಸಂ. ೧**, ಪು. ೨೯೭.

೧೦. ವಿರೂಪಾಕ್ಷ ಗೌಡ ಕೆ., ಮೇಟಿ ಕೊಟ್ರಪ್ಪ, **ನಡಿಯಪ್ಪ ನಮ್ಮ ನಾಡಿಗೆ**, ಪು. ೯.

೧೧. ಹಾಲೇಶ ಎಂ. ಮೇಟಿ, **ಡೊಳ್ಳಿನ ಪದಗಳು**, ಪು. ೨೮.

೧೨. ದೇವೇಂದ್ರಪ್ಪ, **ಜನಪದ ಕಲೆಗಳು**, ಪು. ೧೬೭.

೧೩. ಬೋರಲಿಂಗಯ್ಯ ಹಿ.ಚಿ., **ಕರ್ನಾಟಕ ಕಲೆಗಳ ಕೋಶ**, ಪು. ೧೦೭.

೧೪. ರಾಜೇಗೌಡ ಹೊಸಹಳ್ಳಿ, **ತಾಳಬಂದೋ...ತಂಬೂರಿ ಬಂದೋ**, ಪು. ೨೩.

೧೫. ವೀರಣ್ಣದಂಡೆ (ಸಂ.), **ಜನಪದ ಹಾಲುಮತ ಮಹಾಕಾವ್ಯ**, ಪು. ೧೨.

೧೬. ಬಸವರಾಜ ಮಲಶೆಟ್ಟಿ, **ಉತ್ತರ ಕರ್ನಾಟಕ ಜನಪದ ವಾದ್ಯಗಳು**, ಪು. ೬೪.

೧೭. ಸುಂಕಾಪೂರ ಎಂ.ಎಸ್ (ಸಂ.), **ಜಾನಪದ ಸಾಹಿತ್ಯ ದರ್ಶನ-೪**, ಪು. ೫೪.

೧೮. ಕುರುವ ಬಸವರಾಜ, **ಡೊಳ್ಳುಮೇಳ**, ಪು. ೨೩-೨೭.

೧೯. ರಾಮಚಂದ್ರೇಗಡ ಮತ್ತು ಕೃಷ್ಣಮೂರ್ತಿ ಹನೂರು (ಸಂ.), **ಸುವರ್ಣ ಜಾನಪದ**, ಪು. ೨೯೧.

೨೦. ಜ್ಯೋತಿ ಹೊಸೂರು, **ಡೊಳ್ಳಿನ ಹಾಡುಗಳ ಸಮೀಕ್ಷೆ**, ಪು. ೧೨.

• • •

ಅಧ್ಯಾಯ ಮೂರು

ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ

೩.೧. ಪ್ರವೇಶ

ಸಂಸ್ಕೃತಿ ಎಂದರೆ 'ಒಂದು ಜನಾಂಗದ ಜೀವನ ವಿಧಾನಗಳ ಮೊತ್ತ' ಎಂಬ ವ್ಯಾಖ್ಯಾನವೊಂದು ಸದ್ಯಕ್ಕೆ ಪ್ರಚಲಿತದಲ್ಲಿದೆ. ಜೀವನ ವಿಧಾನ ಉಡುವ ಬಟ್ಟೆ ಉಣ್ಣುವ ಊಟ, ಆಡುವ ಮಾತು, ಮಾಡುವ ಆಚರಣೆ, ನಂಬುವ ಸಂಗತಿ - ಮುಂತಾದವನ್ನು ಒಳಗೊಂಡಿದೆ ಎನ್ನಲಾಗುತ್ತಿದೆ. ಇದನ್ನು ಸ್ಥೂಲವಾಗಿ ಸರಳೀಕರಿಸಿ ಹೇಳುವುದಾದರೆ 'ಜೀವನ ಕ್ರಮ ಬದುಕುವ ರೀತಿ' ಎನ್ನಬಹುದು. ಒಟ್ಟಾರೆ ಸಂಸ್ಕೃತಿಯ ಅಧ್ಯಯನವೆಂದರೆ ಬದುಕಿರುವ ಮತ್ತು ಬದುಕುತ್ತಿರುವ ಕ್ರಮವನ್ನು ಕುರಿತ ಅಧ್ಯಯನವೇ ಆಗಿದೆ. ಆ ಬದುಕನ್ನು ಬೇರೆ ಬೇರೆ ಆಯಾಮಗಳಿಂದ ಗುರುತಿಸುತ್ತಿದ್ದೇವೆ. ಅಂತಹ ಆಯಾಮಗಳಲ್ಲಿ ಮೌಖಿಕ ಅಭಿವ್ಯಕ್ತಿ ಪ್ರಧಾನಧಾರೆಯ ಆಕರವಾಗಿ ಬಳಕೆ ಆಗುತ್ತಿದೆ. ಅಂಥ ಬಹುಮುಖ್ಯಧಾರೆಗಳಲ್ಲಿ ಡೊಳ್ಳಿನ ಹಾಡುಗಳು ಸೇರಿವೆ. ಈ ಮೂಲಕ ಸಂಸ್ಕೃತಿಯೊಂದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವೇ ಈ ಅಧ್ಯಯನದ ತಾತ್ವಿಕ ಪ್ರಮೇಯ. ಈಗ 'ಸಂಸ್ಕೃತಿ' ಎನ್ನುವ ಪದ ರಾಜಕೀಯ, ಆರ್ಥಿಕ, ಶೈಕ್ಷಣಿಕ ಈ ವಿದ್ಯಾಮಾನವನ್ನು ವಿಶ್ಲೇಷಿಸುವ ತಾತ್ವಿಕ ಪದವಾಗಿ ಬಳಕೆ ಆಗುತ್ತಿದೆ.

ಡೊಳ್ಳಿನ ಹಾಡುಗಳು ಪ್ರಧಾನವಾಗಿ ಹಾಲುಮತ ಸಮುದಾಯದ ಮೌಖಿಕ ಅಭಿವ್ಯಕ್ತಿ. ಇದು ಪ್ರಾಚೀನ ಗೀತಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. ಹಾಲುಮತ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಬಹುಮುಖ್ಯ ಆಕರಗಳು ಹೌದು. ಹಾಗೆಂದು ಈ ಹಾಡುಗಳು ಕೇವಲ ಹಾಲುಮತ ಸಂಸ್ಕೃತಿಗೆ ಮಾತ್ರ ಸೀಮಿತವಲ್ಲ. ಸಮಾಜದ ಕನಸು, ಕಾಣ್ಕೆ, ವೈರುಧ್ಯ, ಸ್ನೇಹ, ಅನ್ಯಾಯ, ನೀತಿ, ತತ್ವ ಮುಂತಾದಗಳನ್ನು ಒಳಗೊಂಡಿದೆ. ಜೊತೆಗೆ ಇವು ಯಾವುದೋ ಒಂದು ವ್ಯವಸ್ಥೆಗೆ ಬದ್ಧವಾಗಿಲ್ಲ. ಒಂದು ಕಾಲಘಟ್ಟಕ್ಕೆ ಸಿಕ್ಕಿಕೊಂಡಿಲ್ಲ. ಅಂದರೆ ಕೇವಲ ಪುರಾಣವೂ ಅಲ್ಲ. ಚರಿತ್ರೆ, ವರ್ತಮಾನ ಕಾಲಬದ್ಧವೂ ಅಲ್ಲ. ನಮ್ಮ ನಡುವಿನ ವ್ಯವಸ್ಥೆಯನ್ನು ಜೀವಂತಿಕೆಯ ಕ್ರಿಯಾಶೀಲತೆಯನ್ನು ಒಳಗೊಂಡು ಮುನ್ನಡೆಯುತ್ತಿವೆ. ಹಾಗಾಗಿ ಇಲ್ಲಿ ಕಾಣಿಸಿಕೊಳ್ಳುವ ಕಥನದ ವಸ್ತು ವೈವಿಧ್ಯತೆ ಕೇಳುಗನನ್ನು, ಓದುಗನನ್ನು ಮತ್ತೆ ಮತ್ತೆ ಕೇಳಿಸಿಕೊಳ್ಳುವಂತೆ, ಓದುವಂತೆ ಉದ್ದೀಪಿಸುತ್ತದೆ. ಜಾನಪದಕ್ಕೆ ಈ ಕ್ರಿಯೆ ಮಹತ್ವವಾದದ್ದು. ಇದು ಡೊಳ್ಳಿನ ಹಾಡುಗಳಿಗೆ ಇರುವ ವಿಶಿಷ್ಟ ಚಹರೆಯೂ ಹೌದು, ಜೀವಂತಿಕೆಯೂ ಹೌದು. ಹಾಗಾಗಿ ಈ ಹಾಡುಗಳನ್ನು ಗತ-ಆಧುನಿಕ ಕಾಲದ ಸ್ಮೃತಿ ಸಂಚಯವೆಂದೆ ಕರೆಯಬಹುದು. ಇವುಗಳ ವಸ್ತು ನಿರೂಪಣ ಶೈಲಿ ಕನ್ನಡ ಜಾನಪದ ಪರಂಪರೆಯಲ್ಲೇ ವಿಶಿಷ್ಟವಾದುದು. ಕಥಾವಸ್ತುವಿಗೆ ಜೀವತುಂಬಿ ಅದೊಂದು

ಜನಾಂಗಿಕ ಮಹಾಕಾವ್ಯವಾಗಿ ರೂಪಿತವಾಗಿದೆ. ಇವುಗಳ ಅಂತರಂಗದಲ್ಲಿ ಸಾಂಸ್ಕೃತಿಕ, ಆರ್ಥಿಕ, ವೃತ್ತಿ ಮತ್ತು ಧಾರ್ಮಿಕ, ಸಂಘರ್ಷ, ಪುರಾಣ, ಚರಿತ್ರೆ, ನೀತಿ, ಸಾಮಾಜಿಕ ಕಳಕಳಿ, ತರ್ಕ, ಅನುಭವ-ಅನುಭಾವ - ಮುಂತಾದ ವೈಖರಿಗಳ ಸಂಗಮವಿದೆ. ಇಂತಹ ಹಾಡುಗಳನ್ನು ಕೇವಲ ಹಾಡುಗಳಾಗಿ ನೋಡುವ ಹಳೆಯ ಸಾಂಪ್ರದಾಯಿಕ ಕ್ರಮದಿಂದ ದೂರ ಸರಿದು ಅದರಲ್ಲಿ ಅಡಕವಾಗಿರುವ ವಸ್ತು ವಿಶಿಷ್ಟ್ಯತೆಯನ್ನು ಸಮುದಾಯ ಮತ್ತು ಸಮುದಾಯೇತರ ಕಥನಗಳಲ್ಲಿ ಸಿಗುವ ಕಥನಗಳೊಂದಿಗೆ ಅಂತರ್‌ಶಿಸ್ತೀಯವಾಗಿ, ಅದನ್ನೊಂದು ಚಾರಿತ್ರಿಕ ಸಂದರ್ಭದ ಭಾಗವಾಗಿ ನೋಡುವ ದೃಷ್ಟಿಕೋನ ಆರಂಭವಾಗಬೇಕು. ಪ್ರಸ್ತುತ ಅಧ್ಯಯನ ಈ ವಿಧಾನದ ಮುಂದುವರಿಕೆಯಾಗಿದೆ.

೩.೨. ಡೊಳ್ಳಿನ ಹಾಡುಗಳ ಸ್ವರೂಪ ಮತ್ತು ಲಕ್ಷಣ

ಡೊಳ್ಳಿನ ಹಾಡುಗಳ ಅಧ್ಯಯನ ಮತ್ತು ಅವುಗಳನ್ನು ಗುರುತಿಸುವ ಕಾರ್ಯ ಹಿಂದಿನ ದಿನಮಾನಗಳಿಗಿಂತಲೂ ಈಗ ಯಶಸ್ವಿಯಾಗಿ ನಡೆಯುತ್ತಿದೆ. ಹಾಗಾಗಿ ಈಗ ಪ್ರಕಟವಾಗಿರುವ ಡೊಳ್ಳಿನ ಹಾಡುಗಳ ಸ್ವರೂಪ ಹಾಗೂ ಲಕ್ಷಣಗಳೇನು? ಎನ್ನುವ ಸೈದ್ಧಾಂತಿಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾದುದು ಅನಿವಾರ್ಯ. ಇಂಥ ಪ್ರಶ್ನೆಗಳನ್ನು ಹಾಕಿಕೊಳ್ಳುವುದೇ ಅತ್ಯಂತ ಕುತೂಹಲಕರ. ಈಗ ದೊರತಿರುವ ಡೊಳ್ಳಿನ ಹಾಡುಗಳಲ್ಲಿ ಯಾವ ವಸ್ತು ಹೆಚ್ಚಾಗಿ ರೂಢಿಗತವಾಗಿದೆ?. ಇವುಗಳಲ್ಲಿ ರೂಪ ಪಡೆದಿರುವ ಕಥಾ ವಸ್ತುವಿನ ಮಾದರಿ ಎಂತಹದ್ದು? ಯಾವ ಸಮುದಾಯದವರು ಯಾವ ಉದ್ದೇಶಗಳಿಗಾಗಿ ಹಾಡುತ್ತಾರೆ? ಯಾವ ಸಂದರ್ಭಗಳಲ್ಲಿ ಯಾವ ಸ್ಥಳಗಳಲ್ಲಿ ಹಾಡುತ್ತಾರೆ? ಈ ಹಾಡುಗಳನ್ನು ಹಾಡುವ ಗಾಯಕರಿಗೂ, ಸಮುದಾಯಕ್ಕೂ ಇರುವ ಸಂಬಂಧಗಳ ಸ್ವರೂಪ ಎಂತಹದ್ದು? ಮೌಖಿಕ ನೆಲೆಯಲ್ಲಿ ಜೀವಂತವಿರುವ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸುವ ಮತ್ತು ಸಂಗ್ರಹಿಸಿದ ಪಠ್ಯಗಳನ್ನು ಲಿಪೀಕರಣಗೊಳಿಸುವ ಮಾದರಿಗಳು ಯಾವವು? ಇವತ್ತಿನ ಕಾಲಮಾನಕ್ಕೆ ಹೇಗೆ ಹೊಂದಿಕೊಂಡಿವೆ? ಅಥವಾ ಹೊಂದಿಕೊಂಡಿಲ್ಲವೆ? ಹೊಂದಿಕೊಂಡಿದ್ದರೆ ಯಾವ ಸ್ವರೂಪ ಪಡೆದುಕೊಂಡು ಜೀವಂತವಾಗಿವೆ? ಎನ್ನುವ ಮೊದಲಾದ ಪ್ರಶ್ನೆಗಳನ್ನು ಚರ್ಚಿಸುವುದರ ಮುಖಾಂತರ ಡೊಳ್ಳಿನ ಹಾಡುಗಳ ಸ್ವರೂಪ ಹಾಗೂ ವಿಧಾನಗಳನ್ನು ಕಂಡುಕೊಳ್ಳಬೇಕಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಇದರ ಸ್ವರೂಪ ಮತ್ತು ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

ದೈವಗಳನ್ನು ಸಂತೃಪ್ತಿಗೊಳಿಸುವುದಕ್ಕಾಗಿಯೇ ಹಾಡಲಾಗುವುದು

‘ದಿಮ್ಮಿಟ್ಟೆವು ನಾವು ದೇವರೆದುರಿಗೆ
ಹಾಡ ಹೇಳತೇವು ಕುಂತ ಜನರಿಗೆ’

ಡೊಳ್ಳಿನ ಹಾಡುಗಳನ್ನು ದೈವಗಳ ತಾಣಗಳಲ್ಲಿ ಹಾಡಲಾಗುತ್ತದೆ. ದೈವಗಳನ್ನು ತೃಪ್ತಿಗೊಳಿಸು ವುದಕ್ಕೆ ಹಾಡುತ್ತೇವೆ ಎನ್ನುವುದು ಹಾಡುಗಾರರ ಭಾವನೆ. ಈ ಭಾವನೆ ಕುಲದೈವಗಳಿಗೆ ಅನ್ವಯ ಆದಂತೆ ಕುಲೇತರ ದೈವಗಳಿಗೆ ಅನ್ವಯ ಆಗುವುದಿಲ್ಲ. ಹಾಡುಗಾರರು ತಮ್ಮನ್ನು ದೈವಗಳನ್ನು ಸೇವೆ ಮಾಡುವ ‘ಸೇವಕ’ರು ‘ಆಳುಮಕ್ಕಳ’ೆಂದು ಕರೆದುಕೊಂಡರೆ ‘ದೈವ’ವನ್ನು ‘ಒಡೆಯ’ನೆಂದು ಕರೆದುಕೊಳ್ಳು

ವರು. ಹಾಗಾಗಿ ಡೊಳ್ಳಿನ ಹಾಡುಗಾರಿಕೆಯನ್ನು ದೈವ ಮತ್ತು ಆಳುಮಕ್ಕಳ ನಡುವೆ ನಡೆಯುವ ಸಂವಾದವೆಂದು ಕರೆಯಬಹುದು. ಆಳುಮಕ್ಕಳೆಂದು ದೇವರ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುವ ಸಂಪ್ರದಾಯ ಬೀರಪ್ಪನ ಆರಾಧನೆಯಲ್ಲಿದೆ. ಕೋಣಗನೂರು ಕರಿಸಿದ್ಧನ ಪಲ್ಲಕ್ಕಿಯನ್ನು ಹೊತ್ತು ತಿಂಗಳುಗಟ್ಟಲೆ ಭಕ್ತರ ಮನೆ ಮನೆಗೆ ಹೋಗಿ ದೇವರ ಸೇವೆ ಮಾಡಿ ಆತಿಥ್ಯ ಸ್ವೀಕರಿಸಿ ಕೊಂಡು ಬರುತ್ತಾರೆ. ಆ ಸಂದರ್ಭದಲ್ಲಿ ಹಾಡುವ ಹಾಡನ್ನು ನೋಡಬೇಕು.

‘ಆಳುಮಕ್ಕಳು ಉಂಡ ಮನ್ಯಾಗ ಹಾಲ ಕಾವಲಿ ಹರಿಯಲಿ
ಅಪ್ಪ ಪೂಜಾರಿ ಉಂಡ ಮನ್ಯಾಗ ತುಪ್ಪದ ಕಾವಲಿ ಹರಿಯಲಿ’

ಈ ಒಡೆಯ ಮತ್ತು ಆಳುಮಕ್ಕಳ ಪರಿಕಲ್ಪನೆ ಅಧ್ಯಯನಕಾರರನ್ನು ಬೇರೆಡೆ ಕರೆದುಕೊಂಡು ಹೋಗುತ್ತದೆ. ಬೀರಪ್ಪ ಮತ್ತು ಮಾಳಿಂಗರಾಯರ ಗುರುಶಿಷ್ಯರ ಸಂಬಂಧ ಒಡೆಯ ಮತ್ತು ಸೇವಕ ಎನ್ನುವ ಭಾವನೆಯಿಂದ ಬೆಳೆದುಬಂದಿದೆ. ಬೀರಪ್ಪನ ಸೇವೆ ಮಾಡುವುದೇ ಮಾಳಿಂಗರಾಯನ ವೃತ್ತಿ ಆಗಿತ್ತು. ಈ ಸಂಬಂಧ ಅಥವಾ ವೃತ್ತಿ ಗುರು ಶಿಷ್ಯರ ಸಂಬಂಧಕ್ಕಿಂತ ಭಿನ್ನವಾದದು. ಈಗಲೂ ಮಾಳಿಂಗರಾಯನ ವಂಶಸ್ಥರು ಬೀರಪ್ಪನ ಸೇವೆ ಮಾಡುವುದು ಪಾರಂಪರಿಕ ವೃತ್ತಿಯೆಂದುಕೊಂಡಿದ್ದಾರೆ. ಇವರನ್ನು ‘ಪೂಜಾರಿ’ಗಳೆಂದು ಕರೆಯುವರು. ಇವರು ಬೀರಪ್ಪನ ಹೆಸರಿನಲ್ಲಿ ‘ದೀಕ್ಷೆ’ ತೆಗೆದುಕೊಳ್ಳುವರು. ಈ ಪೂಜಾರಿಗಳು ಹೆಚ್ಚಾಗಿ ಡೊಳ್ಳಿನ ಹಾಡುಗಳನ್ನು ಹಾಡುತ್ತಾರೆ. ಇವರಿಗೆ ಹಾಡುಗಳ ಪ್ರದರ್ಶನಗಳಲ್ಲಿ; ಸ್ಪರ್ಧೆಗಳಲ್ಲಿ ವಿಶೇಷವಾದ ಗೌರವ. ಇವರು ಬೀರಪ್ಪನ ಮನೆಯ ಸೇವಕರು. ಹಾಗಾಗಿ ಹಾಲುಮತದ ಚರಿತ್ರೆ ಚೆನ್ನಾಗಿ ತಿಳಿದಿದೆ ಎನ್ನುವುದು ಉಳಿದ ಕಲಾವಿದರ ನಂಬಿಕೆ. ಪೂಜಾರಿಗಳಲ್ಲದೆ ‘ಈರಗಾರರು’ ಡೊಳ್ಳಿನ ಹಾಡುಗಳನ್ನು ಹಾಡುತ್ತಾರೆ. ಈರಗಾರರು ಪೂಜಾರಿಗಳಂತೆ ಬೀರಪ್ಪನ ಹೆಸರಿನಲ್ಲಿ ದೀಕ್ಷೆ ತೆಗೆದುಕೊಳ್ಳುವರು ಮತ್ತು ಸೇವಕರಾಗಿ ಕಾರ್ಯನಿರ್ವಹಿಸುವರು. ಆದರೆ ಇವರು ಪೂಜಾರಿಕೆ ಮಾಡುವುದಿಲ್ಲ.

“ಡೊಳ್ಳಿನೀರನ ಕರಿಸ್ಯಾನ ನಿಂಗಣ್ಣ ಡೊಳ್ಳ ಕೈಯಲ್ಲಿ ಕೊಟ್ಟಾನ
ತಾಳದೀರನ ಕರಿಸ್ಯಾನ ನಿಂಗಣ್ಣ ತಾಳ ಕೈಯಲ್ಲಿ ಕೊಟ್ಟಾನ
ಕೊಳಲದೀರನ ಕರಿಸ್ಯಾನ ನಿಂಗಣ್ಣ ಕೊಳಲ ಕೈಯಲಿ ಕೊಟ್ಟಾನ
ಈ ಬತ್ತಿಪಟ್ಟನ ಈರನ ಕರಿಸ್ಯಾನ ಪುಟ್ಟದ ದಟ್ಟಿಲುಡಿಸ್ಯಾನ
ನಿಶಾನಿ ಈರನ ಕರಿಸ್ಯಾನ ನಿಂಗಣ್ಣ ನಿಶಾನಿ ಏರಿಸಿರಂದಾನ
ಇಷ್ಟೆ ಮಂದಿ ಈರರು ಕೂಡಿ ಏಣಕಲ್ಲಪ್ಪಗ ನಡದಾರ
ನೂರೊಂದು ಈರರು ಕೊಡಿದ ಬೈಲಾಗ ಹಾಡಂದಾರ ನಿಂಗಣ್ಣನ
ಹಾಡಲಾರೆನೊ ಹರಸಲಾರೆನೊ ಬೇಡಲಾರೆನೊ ನಿಮ ಚಾಜವನು”[೫]

ಒಂದೆ ಹಾಡುಗಳನ್ನು ಹಾಡುವುದಕ್ಕೆ ಈರಗಾರೆಲ್ಲರು ಸೇರುತ್ತಿದ್ದರು. ಇಲ್ಲಿ ಬಳಕೆ ಆಗಿರುವ ‘ದಟ್ಟಿ’, ‘ನಿಶಾನಿ’, ‘ದಟ್ಟಿಲು’, ಮುಂತಾದ ಪದಗಳು ಬಳಕೆ ವಿಶೇಷ ಗಮನ ಸೆಳೆಯುತ್ತವೆ. ‘ನಿಶಾನಿ’ ಎಂದರೆ ‘ಬಾವುಟ’, ‘ಧ್ವಜ’ ಎಂದರ್ಥ. ‘ದಟ್ಟಿಲು’ ಎಂದರೆ ‘ಕೈಪೆಟ್ಟು ವಾದ್ಯದೊಡನೆ ಕೆಂಪು ಸಮವಸ್ತ್ರ

[illegible]

[illegible]

[illegible]

[illegible]

[illegible]

ಧರಿಸಿ ಲಾಗ ಹಾಕಿ ಮಾಡುವ ಕುಣಿತ' ಎಂದು ಕರೆಯಲಾಗುತ್ತದೆ. ಹಾಲುಮತಸ್ಥರಲ್ಲಿ ತಮ್ಮ ಆರಾಧ್ಯದೈವಗಳನ್ನು ಒಲಿಸಿಕೊಳ್ಳುವುದಕ್ಕೆ 'ದಟ್ಟಿ'(ಸೀರೆ)ಯುಟ್ಟು ಕುಣಿಯುವ ಕುಣಿತ ಪ್ರಚಲಿತದಲ್ಲಿದೆ. ಇದನ್ನು ದಟ್ಟಿ 'ಕುಣಿತ'ವೆಂದು ಕರೆಯುವರು. ಈ ಕುಣಿತ ಇಟ್ಟಪ್ಪ ಮೈಲಾರಲಿಂಗ ಬೀರಪ್ಪನ ಜಾತ್ರೆಯಲ್ಲಿ ಪ್ರಧಾನವಾಗಿ ಕಂಡು ಬರುತ್ತದೆ. ಅಲ್ಲದೆ ಈರಗಾರರು ಕೆಂಪು ತುಂಡು ಬಟ್ಟೆಯನ್ನು ಧರಿಸಿ ಶಿವನನ್ನು ಒಲಿಸಿಕೊಳ್ಳುವುದಕ್ಕೆ ಹೊಟ್ಟೆಗೆ ಅಲಗ ಹಾಕಿಕೊಳ್ಳುವ ಆಚರಣೆಯನ್ನೂ ಮಾಡುತ್ತಾರೆ. ಈ ಆಚರಣೆ ಬೀರದೇವರ ತೋಪು ಜಾತ್ರೆಗಳಲ್ಲಿ ಮತ್ತು ಬೀರದೇವರ ಪಲ್ಲಕ್ಕಿ ಉತ್ಸವಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಆಚರಣೆ ಶಿವನನ್ನು ತಮ್ಮತ್ತಿರ ಕರೆದುಕೊಳ್ಳುವ ವೈಧಾನಿಕತೆಗಾಗಿ ಈ ಸಮುದಾಯದಲ್ಲಿ ಬಳಕೆಯಲ್ಲಿದೆ. ಶಿವ ತಮ್ಮ ಹತ್ತಿರ ಬರುತ್ತಾನೆ ಎನ್ನುವುದು ಹಾಡುಗಾರರ ನಂಬಿಕೆ. ಶಿವನನ್ನು ಕರೆದುಕೊಳ್ಳುವುದಕ್ಕೆ ಹಾಡನ್ನು ಹಾಡುವುದಕ್ಕಿಂತ ಮುಂಚೆ ಡೊಳ್ಳುಗಳನ್ನು ಬಡಿಯುತ್ತಾರೆ. ಇದಕ್ಕೆ 'ವಾಲಗ' ಎಂದು ಹೆಸರು. ಈ ಬಡಿತದ ಶಬ್ದ ಆಕಾಶಕ್ಕೆ ಮುಟ್ಟುತ್ತದೆ. ಈ ಶಬ್ದವನ್ನು ಕೇಳಿದ ಶಿವನು ತನಗೆ ಭಕ್ತರು ಆಹ್ವಾನ ನೀಡುತ್ತಿದ್ದಾರೆಂದು ತಿಳಿದು ಆತಿಥ್ಯ ಸ್ವೀಕರಿಸಲು ತಮ್ಮತ್ತಿರ ಬರುತ್ತಾನೆ ಎನ್ನುವ ಕಥನಗಳು ಸಿಗುತ್ತವೆ. ತಮ್ಮ ಹತ್ತಿರ ಬಂದ ದೈವ (ಶಿವ)ನನ್ನು ಹಾಡಿ ಹೊಗಳುವುದಕ್ಕೆ ಆರಂಭಿಸುತ್ತಾರೆ. ಹಾಡನ್ನು ಆರಂಭಿಸುವ ವಿಧಾನವು ಸಹ 'ನಮ್ಮ ಶಿವ ಬಂದಿದ್ದಾನೆ' ಬನ್ನಿರೆಯಂದು ಎಲ್ಲರನ್ನು ಕರೆಯುವುದರ ಮುಖಾಂತರ ಆರಂಭವಾಗುತ್ತದೆ.

ಸ್ವಾಮಿ ನಮ್ಮಯ ದೇವರ ಬಂದಾರ ಬನ್ನಿರೆ
ದೇವಿ ನಮ್ಮಯ ದೇವರ ಬಂದಾರ ಬನ್ನಿರೆ

ಜ್ಯೋತಿ ಹೊಸೂರ ಅವರು ಈ ಪಲ್ಲವಿಯ ತಾತ್ವಿಕತೆಯನ್ನು ಈ ರೀತಿಯಲ್ಲಿ ವಿಶ್ಲೇಷಣೆ ಮಾಡುತ್ತಾರೆ. "ಹಾಡುಗಾರರು ಪದಗಳನ್ನು ಪ್ರಾರಂಭಿಸುವ ಮೊದಲೇ 'ಸ್ವಾಮಿ' ಮತ್ತು 'ದೇವಿ' ಅಂದರೆ 'ದೇವರು' ಬಂದೇ ಬರುತ್ತಿದ್ದಾರೆಂಬ ಆತ್ಮೀಯವಾದ ಗಟ್ಟಿ ಸಂಬಂಧ ಅದರಲ್ಲಿದೆ. ದೇವರು ಬಂದಿರದಿದ್ದರೆ ನಾವು ಹಾಡುತ್ತಿರಲಿಲ್ಲವೆಂಬ ಸೂಚನೆಯನ್ನೂ ಹಾಡುಗಾರರಾದ 'ಆಳುಮಕ್ಕಳು' ಈ ಪಲ್ಲವಿ ಮೂಲಕ ಧ್ವನಿಸುತ್ತಲಿದ್ದಾರೆಂಬುದನ್ನು ನಾವಿಲ್ಲಿ ಪರಿಭಾವಿಸಿಕೊಳ್ಳಬೇಕು".[೨] ಹೀಗೆ ದೈವೀಭಾವನೆ ಯನ್ನು ಹೊಂದಿದ್ದ ಕಲಾವಿದರು ಆರಂಭದಲ್ಲಿ ಕೇವಲ ದೇವರ ಸನ್ನಿಧಿಯಲ್ಲಿ ಭಕ್ತಿಗಾಗಿ ಮಾತ್ರ ಹಾಡುತ್ತಿದ್ದರು.

"ಡೊಳ್ಳಿನ ಮ್ಯಾಳ ದೇವಸ್ಥಾನದಲ್ಲಿ
ಭಕ್ತರು ಕೂಡ್ಯಾರ ಭಕ್ತಿ ಮಾಡುತಲಿ
ಇದನ ನೋಡಿ ದೇವರು ಆನಂದದಲಿ
ಆನಂದಾಗಿ ಅವರು ಆರ್ಶೀವಾದ
ಕೊಡುತಾರ ನಮಗಿದು ನೆನಪಿರಲಿ"[೩]

ಈಗ ಮೇಲಿನ ಈ ನಂಬಿಕೆಗೆ ಮಾತ್ರ ಹಾಡುಗಳು ಬದ್ಧವಾಗಿಲ್ಲ. ದೈವೇತರ ಕಾರ್ಯಕ್ರಮ ಗಳಲ್ಲೂ ಹಾಡುತ್ತಾರೆ. ಹಾಡುಗಾರಿಕೆ ಒಂದು ಉದ್ದಿಮೆಯಾಗಿ ಬಳಕೆಯಾಗುವುದಕ್ಕೆ ಆರಂಭವಾದ

ನಂತರ ಹಾಲುಮತ ಸಮುದಾಯೇತರರು ಈ ರಂಗಕ್ಕೆ ಪ್ರವೇಶ ಪಡೆದ ನಂತರ ಈ ಪರಿಕಲ್ಪನೆ ಹೆಚ್ಚಾಗಿ ದೂರವಾಗುತ್ತ ಬಂದಿತು.

ವಾದ್ಯಗಳ ಜೊತೆ ಸಂಯುಕ್ತಗೊಂಡು ಜೀವತಾಳುತ್ತವೆ

ಡೊಳ್ಳಿನ ಹಾಡುಗಳನ್ನು ಆರಾಧ್ಯ ದೈವಗಳ ತಾಣಗಳಲ್ಲಿ ಹಾಡುವುದು ಪಾರಂಪರಿಕ ಸಂಪ್ರದಾಯ. ದೈವೇತರ ಕಾರ್ಯಕ್ರಮಗಳಲ್ಲಿ ಹಾಡಬಾರದೆನ್ನುವ ನಿರ್ಬಂಧವು ಇತ್ತು. ಆದರೆ ಇದು ಈಗಿಲ್ಲ. ಹಾಲುಮತಸ್ಥರು ತಮ್ಮ ಆರಾಧ್ಯ ದೈವಗಳ ವಾರಗಳೆಂದು ಕರೆದುಕೊಂಡಿರುವ ರವಿವಾರ, ಸೋಮವಾರ ಮತ್ತು ಹುಣ್ಣಿಮೆ. ಅಮವಾಸೆ ದಿನಗಳಲ್ಲಿ ಪ್ರಧಾನವಾಗಿ ಹಾಡುವರು. ಕುರಿಗಾರರು ಹೊಲ-ಗದ್ದೆಗಳಲ್ಲಿ ಕುರಿಗಳನ್ನು ನಿಲ್ಲಿಸಿದಾಗ ಪ್ರತಿದಿನ ರಾತ್ರಿ ಹಾಡುತ್ತಾರೆ. 'ಅಲೆಮಾರಿ ಕುರುಬ'ರಲ್ಲಿ ಈ ಸಂಪ್ರದಾಯ ಹೆಚ್ಚಾಗಿದೆ. ರಾತ್ರಿ ಕಾಲ ಕಳೆಯಲು ಮತ್ತು ಭಕ್ತಿಗಾಗಿ ಹಾಡನ್ನು ಹಾಡುವುದು ಇವರಲ್ಲಿ ರೂಢಿಯಾಗಿದೆ ಎಂದು 'ಅಪ್ಪಣ ಸಾಂದಲಗ' ಅವರು ಹೇಳುತ್ತಾರೆ. ಅಲೆಮಾರಿ ಕುರಿಗಾರರು 'ಲಕ್ಷ್ಮಿಪೂಜೆ' (ದೀಪಾವಳಿ), 'ಕತ್ತೆ ಬಿಡುವ ಆಚರಣೆ', 'ಮಲಪುರಿ ಹಬ್ಬ', 'ಹಿಸ್ಯಾಳ ಅಮವಾಸೆ', 'ಯುಗಾದಿ' ಮುಂತಾದ ಹಬ್ಬಗಳಲ್ಲಿ ತಪ್ಪದೆ ಹಾಡುವರು. ಬೀರದೇವರ ಜಾತ್ರೆ, ಮಾಳಿಂಗರಾಯನ ಜಾತ್ರೆ ಮುಂತಾದ ದೈವಗಳ ಜಾತ್ರೆಯ ದಿವಸ ಹಾಡಲೇಬೇಕು ಎನ್ನುವ ನಿಯಮ ಇವರಲ್ಲಿದೆ. ಅವತ್ತಿನ ದಿವಸ ಕೆಲವು 'ಸಂದು'ಗಳನ್ನಾದರೂ ಹಾಡುತ್ತೇವೆಂದು 'ಬೀರಪ್ಪ ಕಲ್ಲಪ್ಪ ಚಿಮಟಗಿ'ಯವರು ಹೇಳುತ್ತಾರೆ. ಗುಡಿಯಲ್ಲಿ ಹಾಡನ್ನು ಹಾಡುತ್ತಿದ್ದರೆ ದೇವರ ಎದುರಿಗೆ ನಿಂತು ಅಥವಾ ಕುಳಿತು ಹಾಡುವರು. ದೇವರಿಗೆ ಬೆನ್ನುಕೊಟ್ಟು ಕುಳಿತುಕೊಳ್ಳುವುದೆಂದರೆ ಅಪರಾಧ ಮಾಡಿದಂತೆ ಎನ್ನುವ ನಂಬಿಕೆ ಇವರದು. ಕುರಿಗಳನ್ನು ನಿಲ್ಲಿಸಿದ ಜಾಗ ಅಥವಾ ಹೊಲ-ಗದ್ದೆಗಳಲ್ಲಾದರೆ ಉತ್ತರ ಅಥವಾ ಪೂರ್ವ ದಿಕ್ಕಿಗೆ ಅಭಿಮುಖವಾಗಿ ಕುಳಿತು ಇಲ್ಲವೆ ನಿಂತು ಹಾಡುಗಳನ್ನು ಹಾಡುತ್ತಾರೆ. ಈಗಿನ ಕಲಾವಿದರಲ್ಲಿ ಕುಳಿತು ಹಾಡುವ ವಿಧಾನಕ್ಕಿಂತ ಹೆಚ್ಚಾಗಿ ನಿಂತು ಹಾಡುವ ವಿಧಾನ ಕಂಡುಬರುತ್ತದೆ. ಹಿಂದೆ ಹಾಡುಗಾರರಲ್ಲಿ ಒಬ್ಬಾತ ಡೊಳ್ಳನ್ನು ಬಡಿಯುತ್ತಾ ಹಾಡುಗಳನ್ನು ಹಾಡುತ್ತಿದ್ದ. ಈಗ ಹಾಡುಗಾರರ ಡೊಳ್ಳನ್ನು ಹಾಕಿಕೊಳ್ಳುವುದಿಲ್ಲ. ಹಾಡುಗಳಿಗೆ ತಕ್ಕಂತೆ ಆಂಗಿಕ ಅಭಿನಯ ವ್ಯಕ್ತಪಡಿಸಬೇಕು ಎನ್ನುವ ವಿಧಾನ ಇದಕ್ಕೆ ಕಾರಣ. ಈ ವಿಧಾನ ಎಲ್ಲಾ ಹಾಡುಗಾರರಿಗೆ ಒಪ್ಪಿತವಾದಂತೆ ಅಥವಾ ಇಷ್ಟವಾದಂತೆ ಕಂಡುಬಂದಿಲ್ಲ. ಈ ವಿಧಾನವನ್ನು ವಿರೋಧಿಸುವ ಹಾಡುಗಳು ಸಿಗುತ್ತವೆ.

> "ಮೊದಲಿಗೆ ಮಾಡೋ ನೀನು ಜ್ಞಾನಿ ಸಂಘ
> ಕುಣಿಯ ಬೇಡೋ ನೀ ಕೋತಿಯ ಹಂಗ
> ಉಮಾದಿ ಮಾನಸಿದ್ಧನ ಕೊಳ್ಳಿನ ಅಜ್ಞಾನಿ ಗ್ಯಾಂಗ್
> ಕುಣಿತ ತಪ್ಪಿದರೆ ಹಚ್ಚತೇವೊ ದಶರಾಗ"[೨]

ಅಭಿನಯ ಒಂದು ಮಿತಿಯಲ್ಲಿರಬೇಕು ಅಥವಾ ಹಾಡಿನ ವಸ್ತುವಿಗೆ ತಕ್ಕಂತಿರಬೇಕು ಎನ್ನುವುದು ಈ ಹಾಡುಗಾರರ ವಾದ.

ಹಾಡುಗಾರಿಕೆಯಲ್ಲಿ ದಿಮ್ಮು, ತಾಳ, ಡಗ್ಗ, ಕೊಳಲು, ಹಾರ್ಮೋನಿಯಂ ಮುಂತಾದ ವಾದ್ಯಗಳು ಬಳಕೆಯಾಗುತ್ತವೆ. ಕೆಲವು ದಶಕದ ಕೆಳಗೆ ದಿಮ್ಮು, ತಾಳಗಳು ಮತ್ತು ಕೊಳಲು ಮಾತ್ರ ಬಳಕೆಯಾಗುತ್ತಿದ್ದವು. ಡಗ್ಗ, ಹಾರ್ಮೋನಿಯಂ ಮುಂತಾದ ವಾದ್ಯಗಳ ಬಳಕೆ ಇತ್ತೀಚಿಗೆ ಆರಂಭವಾಗಿದೆ. ಈ ವಾದ್ಯಗಳ ಬಳಕೆಯನ್ನು 'ನಾನು ಪ್ರಯೋಗ ಮಾಡಿದೆ' ಎಂದು 'ಸೋಮಲಿಂಗ ದನಗೊಂಡ ಬಿಜ್ಜರಗಿ' ಅವರು ಹೇಳುತ್ತಾರೆ. ಇಲ್ಲಿ 'ದಿಮ್ಮು' ಎಂದರೆ 'ಕಿರಿದಾದ ಡೊಳ್ಳು' ಎಂದರ್ಥ. ಇದನ್ನು ಕಲಾವಿದರು 'ಕೈಪೆಟ್ಟಿನ ಡೊಳ್ಳು' ಎಂದು ಕರೆಯುತ್ತಾರೆ. "ಈ ಪೆಟ್ಟಿನ ಡೊಳ್ಳಿನ ರಚನೆ ಕರಡಿಯ ಬೋಲ್ ಹೊರಡಿಸಲು ಅನುಕೂಲವಾಗಿರುತ್ತದೆ. ಒಂದುವರೆ ಅಡಿ ಅಗಲದ ಒಂದಡಿ ವ್ಯಾಸದ ಅಳತೆಯ ಪಡಗಕ್ಕೆ ಕುರಿ ಚರ್ಮ ಬಿಗಿದಿರುತ್ತಾರೆ. ಚರ್ಮವನ್ನು ಪಡಗದಂತೆ ಬಿಗಿಯಲು ಬೆತ್ತದ ಸುರುಳಿ ಇರುತ್ತದೆ. ಇದಕ್ಕೆ 'ಬಿಂಗ' ಎನ್ನುವರು. ಬಲಗಡೆಯ ಚರ್ಮದ ಒಳಮಗ್ಗಲು ಎಣ್ಣೆಯ ಜಿಗಿ ಹಚ್ಚಿರುವುದರಿಂದ ಅದು ಮಂದ್ರ ನಾದ ಕೊಡುತ್ತದೆ. ಬಾರಿಸುವ ಮುಂಚೆ ಜೋರಾಗಿ ಬಿಗಿದುರುವುದರಿಂದ ಎಡ ಮಗ್ಗಲು ತನ್ ತನ್ ತನ್ ನಾದ ಕೊಡುತ್ತಿರುತ್ತದೆ. ಇದು ಕಪ್ಪು ಎರಡು ತಾರಸ್ವರಕ್ಕೆ ಹೊಂದುವಂತಿರುತ್ತದೆ".[೫] ಈ ದಿಮ್ಮನ್ನು ಹಾಸಿದ ಕಂಬಳಿಯ ಮೇಲೆ ಇಟ್ಟು ಅಥವಾ ಕೊರಳಲ್ಲಿ ಹಾಕಿಕೊಂಡು ನಿಂತು ಬಾರಿಸಲು ತೊಡಗುವುದರ ಮುಖಾಂತರ ಹಾಡನ್ನು ಹಾಡುವುದಕ್ಕೆ ಆರಂಭಿಸುವರು. ಮುಮ್ಮೇಳ ಮತ್ತು ಹಿಮ್ಮೇಳಗಾರರ ಸಂಯುಕ್ತ ವಿಧಾನದಲ್ಲಿ ಹಾಡುಗಾರಿಕೆ ನಡೆಯುತ್ತದೆ. ಮುಮ್ಮೇಳದಲ್ಲಿ ಇಬ್ಬರಿದ್ದರೆ, ಹಿಮ್ಮೇಳದಲ್ಲಿ ನಾಲ್ಕು ಜನರು ಇರುತ್ತಾರೆ. ಈಗ ನಾಲ್ಕಕ್ಕಿಂತ ಹೆಚ್ಚು ಜನರು ಇರಬಹುದು. ಈಗ ಇದರ ಸಂಖ್ಯೆ ಸುಮಾರು ಹತ್ತರಿಂದ ಹದಿನಾಲ್ಕನ್ನು ದಾಟುತ್ತಿದೆ. ಇದಕ್ಕೆ ವಾದ್ಯಗಳ ಬಳಕೆಯ ಹೆಚ್ಚಳ. ಹಿಮ್ಮೇಳಗಾರರ ಧ್ವನಿ ಎತ್ತರದಲ್ಲಿರಬೇಕು ಎನ್ನುವ ಮುಂತಾದ ವಿಧಾನಗಳು ಕಾರಣವಾಗಿವೆ. ಮುಮ್ಮೇಳದಲ್ಲಿ ಒಬ್ಬಾತ ಡೊಳ್ಳು ಬಾರಿಸುತ್ತ ಹಾಡನ್ನು ಹಾಡುವನು. ಈತನ ಧ್ವನಿಗೂ ದಿಮ್ಮಿನ ಬಡಿತದ ಲಯಕ್ಕೂ, ಹಾಡುಗಳ ಶೈಲಿಗೂ ಸಂಬಂಧವಿರುತ್ತದೆ. ಹಿಮ್ಮೇಳಗಾರರು ಡಗ್ಗ, ಕೊಳಲು, ತಾಳ ಮುಂತಾದ ವಾದ್ಯಗಳನ್ನು ಬಾರಿಸುತ್ತ ಮುಮ್ಮೇಳಗಾರ ಹಾಡಿದ ಸಾಲನ್ನು ಅಥವಾ ಪಲ್ಲವಿಯನ್ನು ಮತ್ತೆ ಮತ್ತೆ ಹಾಡುತ್ತಿರುತ್ತಾರೆ. ಇವತ್ತು ಹಾಡುವ ಹಾಡುಗಾರರು ದಿಮ್ಮನ್ನು ಬಾರಿಸುವುದಿಲ್ಲ. ಬದಲಾಗಿ ಇಬ್ಬರು ಎದುರು-ಬದರು ಎದ್ದು ನಿಂತು ಆಂಗಿಕ ಅಭಿನಯ ಮಾಡುತ್ತಾ ಹಾಡುತ್ತಾರೆ. ಮೇಳದಲ್ಲಿ ಕುಳಿತವರಲ್ಲಿ ಒಬ್ಬಾತ ದಿಮ್ಮು ಹಾಕುತ್ತಿರುತ್ತಾನೆ. ಹಿರಿಯ ತಲೆಮಾರಿನ ಕಲಾವಿದರಿಗೆ ಡೊಳ್ಳು ಬಡಿಯದೆ ಕೇವಲ ಹಾಡನ್ನು ಹಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸುಮಾರು ೭೦ ವರ್ಷದ ಹಿರಿಯ ತಲೆಮಾರಿನವರು. ವಿಶೇಷವಾಗಿ ಇವತ್ತಿನ ಸ್ಪರ್ಧೆಯ ಪ್ರದರ್ಶನಗಳಿಂದ ದೂರ ಉಳಿದಿರುವ ಕಲಾವಿದರಿಂದ ಸಾಧ್ಯವಾಗುತ್ತಿಲ್ಲ. ಶಾಹಪುರ ತಾಲೂಕು ಗಂಗನಾಳ್ ಗ್ರಾಮದ 'ಮಾಳಪ್ಪಜ್ಜ ಪೂಜಾರಿ' ಅವರು ಡೊಳ್ಳು ವಾದ್ಯವನ್ನು ಬಿಟ್ಟು ಹಾಡುವುದಕ್ಕೆ ಬರುವುದಿಲ್ಲ. ಹಾಡಲು ಬಾರದು ಎನ್ನುತ್ತಾರೆ. ಅಥಣಿ 'ಕಲ್ಲಪ್ಪಜ್ಜ' ಮತ್ತು 'ವಿಠಲ ಯನಕಂಚಿ' ಅವರು ವಾದ್ಯ ಬಿಟ್ಟು ಹಾಡುಗಳನ್ನು

ಹಾಡುವುದಕ್ಕೆ ನಿರಾಕರಿಸಿದರು. ವಾದ್ಯ ಬಡಿಯುತ್ತಿದ್ದರೆ ಮಾತ್ರ ಹಾಡುವುದಕ್ಕೆ 'ಲಯ' ಮತ್ತು ಹುಮ್ಮಸ್ಸು ಬರುತ್ತದೆ ಎನ್ನುವುದು ಇವರ ಅನಿಸಿಕೆ. ಹಿರಿಯ ತಲೆಮಾರಿನ ಹಾಡುಗಾರರು ವಾದ್ಯದೊಂದಿಗೆ ಅಷ್ಟೊಂದು ಸಂಬಂಧವಿಟ್ಟುಕೊಂಡಿದ್ದರು.

ಪದಗಳನ್ನು ಹಾಡುವಾಗ ಆರಂಭದಲ್ಲಿ ಬಾರಿಸುವ ದಿಮ್ಮಿನ 'ಚ(ಚಾ)ತ್ರಿ'ಗೆ 'ಸರಿಪೆಟ್ಟು' ಎಂದು ಕರೆಯುತ್ತಾರೆ. ಇದು ಏಕ ಲಯದಲ್ಲಿ ಪ್ರಾರಂಭವಾಗುತ್ತದೆ. ಇದಕ್ಕೆ 'ವಾಲಗ' ಎನ್ನುವರು. ಮುಂದೆ 'ದ್ರುತ್' ಗತಿಯಲ್ಲಿ ಲಯ ತಿರುಗಿಸಿ ಬಾರಿಸುವರು. ಇದನ್ನು 'ಸಿಡಿ ಕಡಿಯುವುದು' ಎಂದು ಕರೆಯಲಾಗುತ್ತದೆ".[೬] ಸರಿಪೆಟ್ಟಿನ ಆರಂಭಿಕ ಲಯವನ್ನು ಅರ್ಜುನ ಗೋಳಸಂಗಿ ಅವರು ಈ ರೀತಿಯಾಗಿ ಗುರುತಿಸುತ್ತಾರೆ.

"ದಮ್ ತಂಗ್ ತಂಗ್ ತಂಗ್
೧ ೨ ೩ ೪
ದಮ್ ತಂಗ್ ತಂಗ್ ತಂಗ್
೧ ೨ ೩ ೪"[೭]

ಹೀಗೆ 'ನಾಲ್ಕುಗತಿ'ಯಲ್ಲಿ ಬಾರಿಸುತ್ತ ಹಾಡುಗಳನ್ನು ಹೇಳುತ್ತಿದ್ದರೆ ಹಿಮ್ಮೇಳದವರು ಇದಕ್ಕೆ ಹೊಂದಿಕೆ ಆಗುವಂತೆ ವಿವಿಧ ಠೇಕಾ ನುಡಿಸುತ್ತಾರೆ. ಆ ಠೇಕಾಗಳನ್ನು ಕೆಳಗಿನಂತೆ ಗುರುತಿಸಬಹುದು.

"ತಂಗ್ ತಂಗ್ ತ ಮಕ್
೧ ೨ ೩ ೪
ತಂ ಗಂಗ ತನ್ನ ಗಿಡ ಗಿಡ
೧ ೨ ೩ ೪
ತನ್ನಾ ಗಿಡಗಿಡ ತನ್ನಾ ಗಿಡ ಗಿಡ
೧ ೨ ೩ ೪
ಥಾಂ ಚಪಾಂಗ ಥಾಂ ಚಪಾಂಗ್"[೮]
೧ ೨ ೩ ೪

ಠೇಕಾಗಳ ಮಟ್ಟುಗಳು ಹಾಡುಗಾರಿಕೆ ಬೆಳೆದಂತೆಲ್ಲಾ ಬದಲಾಗುತ್ತಿರುತ್ತವೆ. ಹೀಗೆ ವಿವಿಧ ಮಟ್ಟುಗಳ ಜೊತೆ ಸಂಯುಕ್ತಗೊಂಡು ಹಾಡುಗಳು ಅನಾವರಣಗೊಳ್ಳುತ್ತವೆ.

ಹಾಡುಗಳಿಗೆ ಸಾಂಸ್ಕೃತಿಕ ವೀರರೇ ಜೀವಂತಿಕೆ

ಕಾವ್ಯಕಲೆಯ ಅತ್ಯಂತ ಪ್ರಾಚೀನ ರೂಪಗಳಲ್ಲಿ ಡೊಳ್ಳಿನ ಹಾಡು ಒಂದು. ಈ ಹಾಡುಗಳನ್ನು ಗ್ರಾಂಥಿಕ ರೂಪದಲ್ಲಿ 'ಡೊಳ್ಳಿನ ಹಾಡು'ಗಳೆಂದು ಕರೆದರೆ ಸೈದ್ಧಾಂತಿಕ ಪರಿಭಾಷೆಯಲ್ಲಿ 'ಮಹಾಕಾವ್ಯ'ವೆಂದು ಗ್ರಹಿಸಲಾಗುತ್ತದೆ. ಇವುಗಳನ್ನು ಗದ್ಯ-ಪದ್ಯ ರೂಪದ ದೀರ್ಘವಾದ ಕಥನಗಳೆಂದು ಕರೆಯಬಹುದು. ಇಲ್ಲಿ ಕಥೆಗಿಂತ ಹೆಚ್ಚಾಗಿ ವಸ್ತು ಇರುತ್ತದೆ. ಆ ವಸ್ತುವೇ ಹಾಡುಗಳ ರೂಪದಲ್ಲಿ ಅನಾವರಣವಾಗುತ್ತಿರುತ್ತದೆ. ಈ ಹಾಡುಗಳಲ್ಲಿ ಪ್ರಧಾನವಾಗಿ ಕಂಡುಬರುವ ವಸ್ತುವೆಂದರೆ ಸಾಂಸ್ಕೃತಿಕ ವೀರರ ಜೀವನಚರಿತ್ರೆ. ಇವುಗಳ ಜೀವಂತಿಕೆ ಇರುವುದೇ ಹಾಲುಮತ ಸಮುದಾಯದ ಸಾಂಸ್ಕೃತಿಕ

ವೀರರ ಜೀವನಚರಿತ್ರೆಯನ್ನು ಅನಾವರಣ ಮಾಡುವಲ್ಲಿ. ಈ ವೀರರ ಚರಿತ್ರೆಯನ್ನು ಜೀವಂತಗೊಳಿಸುವುದಕ್ಕಾಗಿಯೇ ಈ ಹಾಡುಗಳು ಸೃಷ್ಟಿಯಾದವು. ಹಾಗಾಗಿ ಇಲ್ಲಿ ಸಾಂಸ್ಕೃತಿಕ ವೀರರದ್ದೇ ಮೇಲುಗೈ. ಹಾಲುಮತ ಸಮುದಾಯದ ಸಮಗ್ರ ಸಾಂಸ್ಕೃತಿಕ ನಾಯಕರ ಚರಿತ್ರೆ ಇಲ್ಲಿ ಪ್ರಧಾನವಾಗಿ ಕಂಡು ಬರುವುದಿಲ್ಲ. 'ಭಂಡಾರ ಪಂಥ'ದ ದೈವಗಳ ವಿವರಗಳು ಮಾತ್ರ ಮುಖ್ಯವಾಹಿನಿಯಲ್ಲಿವೆ. 'ವಿಭೂತಿ ಪಂಥ'ದ ನಾಯಕರ ವಿವರಗಳು ಅಷ್ಟಾಗಿ ಕಾಣಿಸುವುದಿಲ್ಲ. ಕಾಣಿಸುವ ಹಾಡುಗಳಲ್ಲಿ ಲಿಖಿತ ಪರಂಪರೆಯ ಹಾಡುಗಳು ಹೆಚ್ಚಾಗಿವೆ. ಈ ಪರಿಕಲ್ಪನೆಗೆ ಇರುವ ಕಾರಣಗಳ ತಾತ್ವಿಕ ಚರ್ಚೆಯನ್ನು ಸಾಂಸ್ಕೃತಿಕ ವೀರರ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಪ್ರದರ್ಶನದ ಸಂದರ್ಭಕ್ಕೆ ತಕ್ಕಂತೆ ಹಾಡುಗಾರ ಸಾಂಸ್ಕೃತಿಕ ವೀರರ ವಿವರಗಳನ್ನು ಹಿಗ್ಗಿಸುತ್ತಾ ಕುಗ್ಗಿಸುತ್ತಾ ಹೋಗುತ್ತಾನೆ. ಇದು ಹಾಡುಗಳ ಗಾತ್ರದ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯೂ ಹೌದು. ಹಾಗಾಗಿ ಬಿಡಿ ಬಿಡಿ ಹಾಡುಗಳು ಮತ್ತು ದೀರ್ಘವಾದ ಹಾಡುಗಳು ಕಂಡು ಬರುತ್ತವೆ. ದೀರ್ಘವಾದ ಹಾಡುಗಳನ್ನು ಸಾಂಸ್ಕೃತಿಕ ವೀರರ ಜಾತ್ರೆಗಳು ಆರಂಭವಾಗುವ ಸಂದರ್ಭಗಳಿಗಿಂತ ಒಂದು ತಿಂಗಳು ಅಥವಾ ಇಪ್ಪತ್ತೊಂದು ದಿವಸ ಮುಂಚೆ ಹಾಡುವುದಕ್ಕೆ ಆರಂಭ ಮಾಡುತ್ತಾರೆ. ಉದಾಹರಣೆಗೆ ಶಹಾಪುರ ತಾಲೂಕು 'ಸೈದಾಪುರ' ಗ್ರಾಮದಲ್ಲಿ ನಡೆಯುವ 'ಮಾಳಿಂಗರಾಯನ ಜಾತ್ರೆ' ಆರಂಭ ಮಾಡುವ ಮುಂಚೆ ಇಪ್ಪತ್ತೊಂದು ದಿವಸಗಳ ಕಾಲ ಹಾಡುಗಳನ್ನು ಹಾಡುತ್ತಾರೆ. ಈ ಹಾಡುಗಳು ಲೋಕಸೃಷ್ಟಿಯಿಂದ ಆರಂಭವಾಗುತ್ತವೆ. ಉದಾಹರಣೆಗೆ ಜನಪದ ಹಾಲುಮತ ಮಹಾಕಾವ್ಯ ಮತ್ತು ಮಾಳಿಂಗರಾಯನ ಕಾವ್ಯ. ಈ ಪ್ರಕಾರದ ಹಾಡುಗಳನ್ನು ಜ್ಯೋತಿ ಹೊಸೂರ ಅವರು "ಮಾರ್ಗದ ಪದಗಳು" ಎಂದು ಕರೆಯುವರು. ಕಲಾವಿದರೂ ಈ ಪದದಿಂದಲೇ ಗುರುತಿಸುತ್ತಾರೆ. ಹಾಡುಗಾರರಲ್ಲೂ 'ಮಾರ್ಗದ ಪದಗಳೆಂದು ಕರೆಯುವ ರೂಢಿ. ಉತ್ಸವ ಆಚರಣೆ ಮತ್ತು ಮನೋರಂಜನೆ ಕಾರ್ಯಕ್ರಮಗಳಲ್ಲಿ ಬಿಡಿ ಬಿಡಿ ಹಾಡುಗಳನ್ನು ಹಾಡುತ್ತಾರೆ. ಉದಾಹರಣೆ 'ನಡಿಯಪ್ಪ ನಮ್ಮ ನಾಡಿಗೆ 'ಸಂಗ್ರಹದಲ್ಲಿ ಕಂಡುಬರುವ ರೇವಣಸಿದ್ಧ, ಬೀರದೇವರು, ಭರಮಣ್ಣ, ಮಾಯವ್ವ. 'ತೂಕ ಮಾಡಿ ಹೇಳತೀನಿ ನ್ಯಾಯ' ಮತ್ತು 'ಸಂಗ್ರಹದಲ್ಲಿ ಸಿಗುವ ಆದಿಗೊಂಡನ ಚರಿತ್ರೆ', 'ಮಾಳಿಂಗರಾಯನ ಚರಿತ್ರೆ', 'ಬೀರೇಶ್ವರ ಚರಿತ್ರೆ', 'ಕರಿಯದೇವರ ಚರಿತ್ರೆ', 'ರೇವಣಸಿದ್ಧನ ಮಹಿಮೆ', 'ಶಿದ್ಧಬೀರ ಚರಿತ್ರೆ' ಮುಂತಾದ ಹಾಡುಗಳು. ಈ ಎಲ್ಲಾ ಹಾಡುಗಳನ್ನು 'ಸಂದು'ಗಳ ರೂಪದಲ್ಲಿ ಹಾಡುವ ವಿಧಾನ ಇವರಲ್ಲಿದೆ.

ಪುರಾಣದ ಮೂಲಕ ನೈತಿಕ ಶಿಕ್ಷಣ ಕೊಡುತ್ತವೆ.

ಡೊಳ್ಳಿನ ಹಾಡುಗಳ ಮೂರನೆಯ ಮುಖ್ಯ ಲಕ್ಷಣವೆಂದರೆ ನ್ಯಾಯ ನೀತಿ ತತ್ವವನ್ನು ಹೇಳುವುದು. ಇವುಗಳನ್ನು ಹೇಳುವುದಕ್ಕಾಗಿಯೇ ಹಲವು ದೈವಗಳ, ಪವಾಡ ಪುರುಷರ; ಮಹಿಳೆಯರ ಚಿತ್ರಣಗಳನ್ನು ಹಾಡಿನಲ್ಲಿ ತರುತ್ತಾರೆ. ಉದಾಹರಣೆಗೆ 'ದೇವರ್ ಬಂದಾವ್ ಬನ್ನಿರೇ' ಭಾಗ-೧ ಸಂಗ್ರಹದಲ್ಲಿನ ಮಹಾಸತಿ ಅನುಸೂಯೆ, ಅಕ್ಕನಾಗಮ್ಮ ಮತ್ತು 'ದೇವರ್ ಬಂದಾವ್ ಬನ್ನಿರೇ; ಭಾಗ-೨' ಸಂಗ್ರಹದಲ್ಲಿ ಸಿಗುವ ಗುರುಭಕ್ತ, ತಿರುನೀಲಕಂಠ, ಭೀಮಾರ್ಜುನ ಗರ್ವಭಂಗ, ಪಾರ್ವತಿಯ

ಗರ್ವಭಂಗ ಮುಂತಾದ ಹಾಡುಗಳು. ನ್ಯಾಯ, ನೀತಿ, ತತ್ವ, ದೇಶಭಕ್ತಿ ಮುಂತಾದ ಮಾನವಿಯ ಮೌಲ್ಯಗಳನ್ನು ಹೇಳುವುದಕ್ಕೆ ಭಕ್ತಿಯನ್ನು ಪ್ರಧಾನ ವಸ್ತುವನ್ನಾಗಿ ಮಾಡಿಕೊಳ್ಳುವುದು ಈ ಹಾಡುಗಳ ವಿಶಿಷ್ಟ ಗುಣ. ತಪ್ಪು, ಅನ್ಯಾಯ ಮಾಡಿದರೆ ನಿನ್ನನ್ನು ದೇವರು ಮೆಚ್ಚುವುದಿಲ್ಲ. ನೀನು ನರಕಕ್ಕೆ ಹೋಗುತ್ತಿಯ ಅನ್ನುವ ಭಯಗಳನ್ನು ಮುಂದಿಡುವುದರ ಮುಖಾಂತರ ಮನುಷ್ಯನನ್ನು ತಿದ್ದುವುದಕ್ಕೆ ಮುಂದಾಗುತ್ತವೆ. ಇದು ಬುಡಕಟ್ಟು ಸಮುದಾಯಗಳ ಅಸ್ಮಿತೆಯೂ ಹೌದು.

"ಎಷ್ಟು ಜಲ್ಮ ಹುಟ್ಟಿ ಬಂದಿ ಇದೆ ಭೂಮಿ ಮ್ಯಾಲ
ಅರಿವನಿಂದ ನಡಿಯಬೇಕೋ ಮಾನವನಾದ ಮ್ಯಾಲ
ನಾ ಎಂದು ನಡದೇ ನಿನ್ನಾರು ಎಂಬುದು ಅರತಿಲ್ಲ
ನಾ ಎಂದು ನಡೆದರೆ ನಿನ್ನಗ ನರಕ ತಪ್ಪುದ್ದಲ್ಲ ||೩||

ಸುಳ್ಳಿನ ಸಂಸಾರದೊಳಗೆ ಏನು ಸುಖ
ಗುರು ಕೊಟ್ಟ ಕಾಲಕ ದಾನ ಧರ್ಮ ಮಾಡೋ
ಮಾನವನಾಗಿ ಬಂದೇಲ್ಲ. ಅವರವ ಅಂಬುದ ಹಿಡಿಲಿಲ್ಲ
ಮರೆವಿಗಿ ಬಿದ್ದರು ಮಂಗ್ಯಾ ಮೋಕ್ಷ ಸಿಗುವುದಿಲ್ಲ"[೯] ||೪||

ಈ ಪರಿಕಲ್ಪನೆಯುಳ್ಳ ಹಾಡುಗಳು ಡೊಳ್ಳಿನ ಹಾಡುಗಳ ಕ್ಷೇತ್ರಕ್ಕೆ ಇತ್ತೀಚೆಗೆ ಬಂದಿದೆ. ಈ ಹಾಡುಗಳ ಸೃಷ್ಟಿಯ ಬಗ್ಗೆ ಬಿ.ಬಿ. ಹೆಂಡಿ ಅವರು ಈ ರೀತಿ ಹೇಳುತ್ತಾರೆ. "ಮೂಲತಃ ಹಾಲುಮತ ಸಂಪ್ರದಾಯ ವನ್ನು ನಿರೂಪಿಸುತ್ತಿದ್ದ ಈ ಹಾಡುಗಳಲ್ಲಿ ಬರುಬರುತ್ತ ಅಲ್ಪಸ್ವಲ್ಪವಾಗಿಯಾದರೂ ಆದ ನಾಗರಿಕತೆ ಹಾಗೂ ನೆರೆಯ ಸಮಾಜಗಳ ಪ್ರಭಾವದಿಂದ ಇತರ ವಸ್ತು ವಿಷಯಗಳು ಸೇರಿಸಿಕೊಂಡಿವೆ. ವೈದಿಕ ಸಂಪ್ರದಾಯಕ್ಕೆ ಸೇರುವ ಭೃಂಗಿ, ಮಾರ್ಕಂಡೇಯ, ಜಮದಗ್ನಿ, ಶನಿದೇವರು ಕೌರವ-ಪಾಂಡವರು, ಹರಿಶ್ಚಂದ್ರ ಮುಂತಾದವರ ಚರಿತ್ರೆ ಹಾಗೂ ಶಿವಶರಣರ ಚರಿತ್ರೆ ನೀತಿ ಬೋಧನೆ ಈ ಮುಂತಾದ ವಿಷಯಗಳ ಹಾಡುಗಳು ಅನಂತರ ಹುಟ್ಟಿಕೊಂಡಿರಬೇಕು"[೧೦] ಎನ್ನುವ ಗ್ರಹಿಕೆ ಸರಿಯಾಗಿದೆ. ಈ ಹಾಡುಗಳನ್ನು ಜೋತಿ ಹೊಸೂರು ಅವರು 'ಮಾರ್ಗೇತರ' ಹಾಡುಗಳೆಂದು ಕರೆದರೆ, ಹಾಡುಗಾರರು 'ಖ್ಯಾಲಿ' ಹಾಡುಗಳೆನ್ನುವರು. ಈ ಪ್ರಕಾರಗಳ ವಿವರವಾದ ಚರ್ಚೆಯನ್ನು ವರ್ಗೀಕರಣದಲ್ಲಿ ಮಾಡಲಾಗಿದೆ.

ಗದ್ಯ-ಪದ್ಯಗಳಿಂದ ಕೂಡಿರುತ್ತವೆ

ಡೊಳ್ಳಿನ ಹಾಡುಗಳಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ. ಒಂದು 'ಮಾರ್ಗದ ಹಾಡು'. ಎರಡು 'ಖ್ಯಾಲಿ ಹಾಡು'. ಸಾಂಸ್ಕೃತಿಕ ವೀರರ ಹಾಡುಗಳನ್ನು ಮಾರ್ಗದ ಹಾಡುಗಳೆಂದು ಕರೆದರೆ ಸಾಂಸ್ಕೃತಿಕ ವೀರೇತರರ ಹಾಡುಗಳನ್ನು 'ಖ್ಯಾಲಿ' ಹಾಡುಗಳೆಂದು ಕರೆಯಲಾಗುತ್ತದೆ. ಮಾರ್ಗದ ಹಾಡುಗಳು ರಗಳೆಯ ಶೈಲಿಯನ್ನು ಹೊಂದಿದ್ದು ಸರಳ ಸುಂದರ ಆಡುಮಾತಿನ ಅಪ್ಪಟ ಜನಪದ ಶೈಲಿಯಲ್ಲಿರುತ್ತವೆ. "ನಿರರ್ಗಳವಾಗಿ ಬಳಕೆಯಾದ ಪದಪುಂಜ ಸರಳ ವಾಕ್ಯ ರಚನ ಕೌಶಲ್ಯತೆ ಗಮನ ಸೆಳೆಯುತ್ತದೆ. ಇಂತಹದೇ ಶಬ್ದವನ್ನು ಇಲ್ಲಿಯೇ ಬಳಸಿ ಇಂತಿಷ್ಟೇ ಸಾಲುಗಳಲ್ಲಿ ಹಾಡಬೇಕೆಂದು ಹೆಣಗಿದವರಲ್ಲ. ಆದರೂ ಆಶುಕವಿತ್ವಶಕ್ತಿ ಪಡೆದಿರುವ ಇವರು ಚಾಕಚಕ್ಯತೆಯಿಂದ ಸಮಯೋಚಿತ ಅರ್ಥವತ್ತಾದ ಪದಗಳನ್ನು ಬಳಸಿಕೊಂಡಿದ್ದನ್ನು ಡೊಳ್ಳಿನ ಹಾಡಿನುದ್ದಕ್ಕೂ ಕಣಬಹುದು"[೧೧] ಖ್ಯಾಲಿ

ಹಾಡುಗಳು ಮಾರ್ಗದ ಹಾಡುಗಳಂತೆ ಏಕತಾನದಲ್ಲಿ ಇಲ್ಲದೆ ಭಿನ್ನ ಭಿನ್ನ ಶೈಲಿಗಳನ್ನು ಹೊಂದಿವೆ. ದ್ವಿಪದಿ, ತ್ರಿಪದಿ, ಚೌಪದಿ ರಗಳೆಗಳಿಂದ ಕೂಡಿದ ಅಂಶಗಣಗಳ ದೇಶಿಯ ಬಂಧಗಳು ಅಧಿಕ ಪ್ರಾಸ ಮುಡಿ ಹಾಗೂ ಪದ್ಮಗಣ ಮುಂತಾದ ಲಯ ವಿನ್ಯಾಸಗಳು ಇಲ್ಲಿ ಅಡಕವಾಗಿವೆ.

ನಂದನ | ವನದಾಗ | ಚಂದ ತೊ | ಟ್ಟಿಲ ಕಟ್ಟಿ
ಕಂದ ಮ | ನಗ್ಯಾನ | ಗುರು ಬೀರಪ್ಪ | ನೋ
ಬಾಳಿಯ | ವನದಾ | ಬಾಲೇರು | ತೊಟ್ಲಕಟ್ಟಿ
ಬಾಲ ಮನ | ಗ್ಯಾನ | ಗುರು ಬೀರಪ್ಪ | ನೋ

ಒಂದು ಮತ್ತು ಮೂರನೆಯ ಚರಣದಲ್ಲಿ ವಿ ಬ್ರ ವಿ ವಿ ಗಣ ಸಂಯೋಜನೆಯನ್ನು ಹೊಂದಿವೆ. ಈ ಸಂಯೋಜನೆ ಎರಡು ಮತ್ತು ನಾಲ್ಕನೆ ಚರಣದಲ್ಲಿ ವಿ ಬ್ರ ವಿ ಗಣಕ್ಕೆ ತಿರುಗುತ್ತದೆ. ಹೀಗೆ ಈ ಹಾಡುಗಾರರು ಗಣ ಮತ್ತು ಪ್ರಾಸ ಬದ್ಧತೆಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಆದಿ ಅಂತ್ಯ ಅನು ಪ್ರಾಸಗಳ ಪ್ರಯೋಗವು ಇಲ್ಲಿದೆ.

"ಹಿಂಡ ನೀರಿಗೆ ತಿರಿವ್ಯಾನೋ ಬೀರಣ್ಣ
ಹಂಡೆ ನೀರನು ಕುಡಿಸ್ಯಾನೋ
ಹಂಡೆ ನೀರನು ಕುಡಿಸ್ಯಾನೋ ಬೀರಣ್ಣ
ಹಿಂಡ ಬಯಲಿಗೆ ತಿರುವ್ಯಾನೋ" [೨]

ಈ ಪ್ರಯೋಗಗಳು ಡೊಳ್ಳಿನ ಹಾಡುಗಳಲ್ಲಿ ಪ್ರಜ್ಞಾಪೂರ್ವಕವಾಗಿ ನಡೆದಿವೆ. ತಾವು ಹಾಡುವ ಶೈಲಿಗಾಗಿ ಅಲ್ಲದಿದ್ದರೂ ಜನ ಮೆಚ್ಚುಕೆಗಾಗಿ ವಿವಿಧ ಛಂದೋ ಪ್ರಕಾರದ ಪ್ರಯೋಗಗಳನ್ನು ಮಾಡಬೇಕು ಅನ್ನುವುದು ಇವರ ಉದ್ದೇಶ. ಹಾಗಾಗಿ ಇಲ್ಲಿ ವಿವಿಧ ಛಂದೋ ಪ್ರಕಾರಗಳ ಪ್ರಯೋಗವು ಆಗಿದೆ. ಖ್ಯಾಲಿ ಹಾಡುಗಳಲ್ಲಿ ಈ ಪ್ರಯೋಗ ಹೆಚ್ಚಾಗಿ ಕಾಣುತ್ತದೆ.

"ಚರಣ ಪ್ರಾಸ ಗಣ ವರ್ಣ ಕೂಡಿದರೆ ಕವಿತೆ ಆಗುವುದು
ಕವಿತೆ ಆಗುವುದು ರಸಬರಿತಾ ವಿದ್ವಾನರಾಗುವರು ಸನಮಂತಾ" [೨೬]

ಹಾಡಿನ ಏಕತಾನತೆಯನ್ನು ಮುರಿಯಲು ಅಲ್ಲಲ್ಲಿ ಗದ್ಯದ ಪ್ರಯೋಗವನ್ನು ಮಾಡಿದ್ದಾರೆ. ಇದರ ಬಹುಮುಖ್ಯ ಉದ್ದೇಶವೆಂದರೆ 'ಪಾಮರ'ರಿಗೆ ತಿಳಿಯುವ ಹಾಗೆ ಕಥೆಯನ್ನು ಸರಳವಾಗಿ ಅರ್ಥೈಸುವುದು. ಈ ಉದ್ದೇಶ ಹಾಡುಗಳೇ ವಚನ ರೂಪ ತಾಳುವುದಕ್ಕೆ ಪ್ರಮುಖ ಕಾರಣ. ನಾಲ್ಕು, ಐದು, ಆರು ನುಡಿಗಳನ್ನು ಹಾಡಿದ ನಂತರ ಆ ನುಡಿಗಳನ್ನು ಅರ್ಥೈಸುತ್ತಾರೆ. ಅರ್ಥೈಸುವಿಕೆಯ ವಿಧಾನವನ್ನೇ ಕಲಾವಿದರು 'ವಚನ'ಎಂದು ಕರೆಯುವರು. ಅತಿ ಕಡಿಮೆ ಅವಧಿಯಲ್ಲಿ ಹಾಡುಗಳನ್ನು ಅರ್ಥೈಸುವುದು ಈ ಹಾಡುಗಳ ವಿಶೇಷ. ಮುಖ್ಯ ಹಾಡುಗಾರ ಕಥೆಯನ್ನು ಅರ್ಥೈಸುತ್ತಿದ್ದಾರೆ. ಹಿಮ್ಮೇಳಕದವರಲ್ಲಿ ಒಬ್ಬಾತ ಆತನ ಮುಂದುವರಿಕೆಗಾಗಿ 'ಹಾಂ', 'ಹೂಂ', 'ಹಾಗಲಿ', ಎಂದು ಧ್ವನಿ ಗುಟ್ಟುವುದರ ಮುಖಾಂತರ 'ಉಟಾಣಾಕಿ' ಕೊಡುತ್ತಿರುತ್ತಾನೆ. ಈ ಪ್ರಯೋಗ ಪೌರಾಣಿಕ ಹಾಡುಗಳನ್ನು ಹಾಡುವ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಪುರಾಣಗಳ ಪ್ರವಚನದ

ಶೈಲಿಯ ಪ್ರಭಾವದಿಂದ ಈ ವಿಧಾನ ಜನ್ಮ ತಾಳಿರಬೇಕು. ಈ ಹಾಡುಗಳ ವಿಶೇಷವೆಂದರೆ ಹಾಡು ರಚನೆ ಮಾಡಿದ ಮತ್ತು ಹಾಡು ಹಾಡಿದವರ ಹೆಸರುಗಳು ತಪ್ಪದೇ ದಾಖಲಾಗಿರುತ್ತವೆ.

ಕೇಳುಗರಿಗೆ ನಾವು ಹೇಳುವ ಕಥೆ ಅರ್ಥವಾಗಬೇಕು. ನಾವು ಜ್ಞಾನವಂತರೆಂದು ಸಾಬೀತು ಪಡಿಸಬೇಕು. ಅಂದರೆ ನಮಗೂ ವಿವಿಧ ಛಂದೋ ಪ್ರಕಾರಗಳು ಗೊತ್ತಿವೆ ಅನ್ನುವುದನ್ನು ಗೊತ್ತು ಪಡಿಸಬೇಕು ಅನ್ನುವ ಪ್ರಜ್ಞಾಪೂರ್ವಕ ಉದ್ದೇಶಗಳಿಂದ ಮತ್ತು ಪ್ರದರ್ಶನದ ಏಕತಾನತೆ ಹೊಡೆದು ಹಾಕುವ ಉದ್ದೇಶದಿಂದ ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಜನಪದ ಸಾಹಿತ್ಯದಲ್ಲಿ ಕಲಾವಿದರು ಪ್ರಜ್ಞಾಪೂರ್ವಕವಾಗಿ ತರುವ ತಿಳುವಳಿಕೆಯನ್ನು ಅಧ್ಯಯನ ಮಾಡುವುದಕ್ಕೆ ಈ ಹಾಡುಗಳು ಬಹುಮುಖ್ಯ ಆಕರಗಳಾಗಿವೆ. ಈ ಹಾಡುಗಳನ್ನು ಅಧ್ಯಯನ ಮಾಡುವುದರ ಮುಖಾಂತರ ಜನಪದ ಹಾಡುಗಾರರ ತುಡಿತಗಳನ್ನು ತಿಳಿದುಕೊಳ್ಳಬಹುದು.

ಭಂಡಾರ ಕೊಟ್ಟು ಹಾಡಿಸುವ ಪದ್ಧತಿ ಇವರಲ್ಲಿದೆ

ಈ ಹಾಡುಗಳನ್ನು ಹಾಡುವುದಕ್ಕೆ ಗಾಯಕರನ್ನು ಆಹ್ವಾನಿಸುವ ಪರಿಪಾಠವಿದೆ. ಇದಕ್ಕೆ 'ಭಂಡಾರ' ಕೊಡುವುದು ಎನ್ನುತ್ತಾರೆ. ಅಂದರೆ ಒಂದು ಊರಿನ ಗ್ರಾಮದವರು ಮತ್ತೊಂದು ದಿನ ತಂಡವನ್ನು ಆಹ್ವಾನಿಸುವಾಗ ಭಂಡಾರ ಕೊಡುವರು. ಇದರಲ್ಲಿ ಎಲೆ-ಅಡಿಕೆ, ಕಾಯಿ, ಭಂಡಾರ ಇರುತ್ತದೆ. ಭಂಡಾರ ತೆಗೆದುಕೊಂಡರೆ ದೇವರ ಮೇಲೆ ಪ್ರಮಾಣ ಮಾಡಿದಂತೆ. ಹಾಗಾಗಿ ಆ ಗ್ರಾಮಕ್ಕೆ ತಪ್ಪದೇ ಹೋಗಿ ಪ್ರದರ್ಶನ ಕೊಟ್ಟು ಬರುತ್ತಾರೆ. ಹೀಗೆ ಹಲವು ಲಕ್ಷಣಗಳನ್ನು ಗುರುತಿಸಬಹುದು.

೩.೩. ಡೊಳ್ಳಿನ ಹಾಡುಗಳ ಪ್ರಕಾರಗಳು

ಯಾವುದೇ ಒಂದು ಸೈದ್ಧಾಂತಿಕ ಅಧ್ಯಯನದ ಬಹುಮಹತ್ವ ಹಾಗೂ ಆದ್ಯತೆಯ ಕಾರ್ಯವೆಂದರೆ ವರ್ಗೀಕರಣ. ಈ ವರ್ಗೀಕರಣದ ವೈಧಾನಿಕತೆಯ ಮೇಲೆ ಅಧ್ಯಯನದ ಶಿಸ್ತುಗಳು ರೂಪಗೊಳ್ಳುತ್ತವೆ. ಜಾನಪದ ಕ್ಷೇತ್ರದಲ್ಲಿ ವರ್ಗೀಕರಣದ ಸಮಸ್ಯೆ ಬಹು ತೊಡಕಿನದು. ಈ ತನಕ ಒಂದು ಸ್ಪಷ್ಟವಾದ ವರ್ಗೀಕರಣವನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಡೊಳ್ಳಿನ ಹಾಡುಗಳ ಕ್ಷೇತ್ರ ಇದಕ್ಕೆ ಹೊರತಾಗಿಲ್ಲ. ಹಾಡುಗಳ ಸಂಗ್ರಹದ ಕಾಲಘಟ್ಟದಿಂದ ಇಲ್ಲಿಯವರೆಗೂ ಹಲವು ಜನರು ವರ್ಗೀಕರಣ ಮಾಡುತ್ತಲೇ ಬಂದಿದ್ದಾರೆ. ಆದರೂ ಸ್ಪಷ್ಟವಾದ ವರ್ಗೀಕರಣ ಕಂಡುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅವರಲ್ಲಿ ಸುಂಕಾಪುರ, ಜೀಶಂಪ, ಜಕಬಾಳ್, ಶ್ರೀರಾಮ ಇಟ್ಟಣ್ಣ ಜ್ಯೋತಿ ಹೊಸೂರ, ಶಿವಾನಂದ ಗುಬ್ಬಣ್ಣ, ಅರ್ಜುನ ಗೊಳಸಂಗಿ, ಮಹಾದೇವ ಕಣವಿ, ವೀರೇಶ ಬಡಿಗೇರ್ ಪ್ರಮುಖವಾಗಿ ಕಂಡು ಬರುತ್ತಾರೆ.

ಎಂ.ಎಸ್. ಸುಂಕಾಪುರ ಅವರು 'ಜೀವನ ಜೋಕಾಲಿ ಭಾಗ; ೬- ಡೊಳ್ಳಿನ ಹಾಡು' ಕೃತಿಯಲ್ಲಿ ಹಾಡುಗಳನ್ನು ಮೂರು ಪ್ರಕಾರಗಳಲ್ಲಿ ವರ್ಗೀಕರಿಸಿ ಪ್ರಕಟ ಮಾಡಿದರು. ಅವುಗಳೆಂದರೆ ೧. ಗಣಸ್ತುತಿ, ೨. ಗುರುಸ್ತುತಿ, ೩. ಮತಸ್ತುತಿ ಹಾಡುಗಳನ್ನು ವರ್ಗೀಕರಿಸಿದ ಪ್ರಥಮ ವರ್ಗೀಕರಣ

ವಿದು. ಎಸ್.ಎಫ್. ಜಕಬಾಳ ಅವರು ೧. ಪೌರಾಣಿಕ ಹಾಡುಗಳು, ೨. ಚರಿತ್ರೆಯ ಹಾಡುಗಳು, ೩. ಶಿವಶರಣರ ಹಾಡುಗಳು, ೪. ನೀತಿಬೋಧಕ ಹಾಡುಗಳು, ೫. ಒಗಟಿನ ಹಾಡುಗಳು ಎಂದು ಐದು ಪ್ರಕಾರಗಳಲ್ಲಿ ವರ್ಗೀಕರಿಸಿದರು. ಇವರು ಹಾಡುಗಳ ವಸ್ತು-ವಿಶಿಷ್ಟತೆಯನ್ನು ಸಮಗ್ರವಾಗಿ ಹಿಡಿಯುವುದಕ್ಕೆ ಪ್ರಯತ್ನಿಸಿದರು. ಈ ವರ್ಗೀಕರಣ ಡೊಳ್ಳಿನ ಹಾಡುಗಳನ್ನು ಅಧ್ಯಯನ ಮಾಡುವವರಿಗೆ ಉಪಯುಕ್ತವಾಯಿತು. ಅನೇಕ ವಿದ್ವಾಂಸರು ಈ ವರ್ಗೀಕರಣವನ್ನು ಒಪ್ಪಿಕೊಂಡು ಇದಕ್ಕೆ ಹೊಸ ಹೊಸ ಪ್ರಕಾರಗಳನ್ನು ಸೇರಿಸುತ್ತಾ ಬಂದರು. ಅರ್ಜುನ ಗೊಳಸಂಗಿ ಅವರು ೧. ಪುರಾಣದ ಪದಗಳು, ೨. ಲೀಲಾ ಪದಗಳು, ೩. ನೀತಿಯ ಪದಗಳು, ೪. ಧಾರ್ಮಿಕ ಪದಗಳು, ೫. ಒಗಟಿನ ಪದಗಳು ಹಾಗೂ ಚುಟುಕುಗಳು ಎಂದು ವರ್ಗೀಕರಿಸಿದ್ದಾರೆ. ಬಸವರಾಜ ನೆಲ್ಲಿಸರರವರು ಸಂಗ್ರಹಿಸಿದ 'ಡೊಳ್ಳಿನ ಹಾಡು' ಸಂಗ್ರಹಕ್ಕೆ ಮುನ್ನುಡಿಯನ್ನು ಜೀಶಂಪ ಅವರು ಬರೆಯುತ್ತಾ ಹಲವು ಪ್ರಕಾರದ ಹಾಡುಗಳನ್ನು ಪರಿಚಯಿಸುತ್ತಾರೆ. ಅವುಗಳೆಂದರೆ ೧. ಪೌರಾಣಿಕ ಹಾಡುಗಳು, ೨. ಸ್ತುತಿ ಪದಗಳು, ೩. ದೇವರ ಸ್ತುತಿ ಹಾಡುಗಳು, ೪. ನೀತಿ, ತತ್ವಗಳ ಹಾಡುಗಳು, ೫. ಒಗಟಿನ ಹಾಡುಗಳು, ೬. ಖರೆ ಹಾಡುಗಳು, ೭. ಹರಕೆ ಸಂಪ್ರದಾಯದ ಹಾಡುಗಳು ಇನ್ನೂ ಮುಂತಾದವು. ಇವರು ಹೊಸದಾಗಿ ಪರಿಚಯಿಸಿದ ಹರಕೆ ಸಂಪ್ರದಾಯದ ಹಾಡುಗಳು ಮತ್ತು ಖರೆ ಹಾಡುಗಳು ಡೊಳ್ಳಿನ ಹಾಡುಗಳ ಸಂಗ್ರಹ ಮತ್ತು ವಿಶ್ಲೇಷಣೆಗಳ ಮೇಲೆ ಬೆಳಕು ಚೆಲ್ಲಿತು. ಇಲ್ಲಿ ಕಂಡುಬಂದ ಹರಕೆಯ ಹಾಡುಗಳ ಪರಿಚಯವನ್ನು ಆಧಾರವಾಗಿಟ್ಟುಕೊಂಡು ಶ್ರೀರಾಮ ಇಟ್ಟಣ್ಣ ಮತ್ತು ಎಸ್.ಎಸ್. ಪೂಜಾರ ಅವರು ವಿಶೇಷವಾದ ಅಧ್ಯಯನ ಮಾಡಿದರು. ಇವರ ನಂತರ ಅಧ್ಯಯನಗಳಾಗದೆ ಇರುವುದು ಅಲಕ್ಷ್ಯವೆ ಸರಿ.

ಮಹಾದೇವ ಕಣವಿ ಅವರ ವರ್ಗೀಕರಣ ಗಮನ ಸೆಳೆಯುತ್ತದೆ. ಇವರು ೧. ಹರಕೆಯ ಹಾಡುಗಳು, ೨. ಪೌರಾಣಿಕ ಹಾಡುಗಳು, ೩. ಚರಿತ್ರೆಯ ಹಾಡುಗಳು, ೪. ನೀತಿ ಹಾಡುಗಳು, ೫. ಒಗಟಿನ ಹಾಡುಗಳು, ೬. ರ್‍ಯಾಣಗಳು, ೭. ಮೋಜಿನ ಪದಗಳು, ೮. ದೇಶಭಕ್ತಿಯ ಹಾಡುಗಳು ಎಂದು ಎಂಟು ಪ್ರಕಾರಗಳಲ್ಲಿ ವರ್ಗೀಕರಿಸಿದ್ದಾರೆ. ಇವರು ರ್‍ಯಾಣಗಳು, ಮೋಜಿನ ಪದಗಳು ಮತ್ತು ದೇಶಭಕ್ತಿಯ ಹಾಡುಗಳು ಅನ್ನುವ ಪ್ರಕಾರಗಳನ್ನು ಹೊಸದಾಗಿ ಪರಿಚಯಿಸಿಕೊಟ್ಟರು. ರ್‍ಯಾಣಗಳು ಅನ್ನುವ ಪ್ರಮುಖ ಪ್ರಕಾರದ ಹಾಡುಗಳನ್ನು ಗುರುತಿಸಿದ ಮೊದಲಿಗರಿವರು. ಡಾ. ವೀರೇಶ ಬಡಿಗೇರ ಅವರು ೧. ಸ್ತುತಿ ಪದಗಳು, ೨. ಸಭಾ ಮಾರ್ಯದೆ ಪಲ್ಲವಿಗಳು, ೩. ಆರಾಧ್ಯ ದೈವದ ಚರಿತ್ರೆ, ೪. ಅನ್ಯದೇವರ ಚರಿತ್ರೆ, ೫. ಪೌರಾಣಿಕ ಹಾಗೂ ಚಾರಿತ್ರಿಕ ಹಾಡುಗಳು, ೬. ಇತಿಹಾಸ ಕುರಿತ ಹಾಡುಗಳು, ೭. ಮುಗ್ಧಭಕ್ತಿಯ ಹಾಡುಗಳು, ೮. ವೀರರ ಹಾಡುಗಳು, ೯. ನೀತಿ ಕುರಿತಾದ ಹಾಡುಗಳು, ೧೦. ಹಿಂದು-ಮುಂದು ನೆನೆಕೆ, ೧೧. ಎಂಥವರಿಗಿಷ್ಟ ನಮ್ಮ ಹಾಡುಗಳು, ೧೨. ಕುರುಬರ ವಿನಯ, ೧೩. ಸಮಕಾಲೀನ ಪ್ರಜ್ಞೆಯುಳ್ಳ ಹಾಡುಗಳು, ೧೪. 'ಖರೆ' ಪದ್ಯಗಳು ಅಥವಾ ಹೆಚ್ಚೂ ಪದ್ಯಗಳು ಎಂದು ಹದಿನಾಲ್ಕು ಪ್ರಕಾರಗಳಲ್ಲಿ ವರ್ಗೀಕರಿಸಿದ್ದಾರೆ. ಈವರೆಗೆ ಬಂದ ಡೊಳ್ಳಿನ

ಹಾಡುಗಳ ವಿಸ್ತಾರವಾದ ವರ್ಗೀಕರಣವಿದು. ಇಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ಲೋಪವೆಂದರೆ ಪುನಾರಾವರ್ತನೆ. ಊದಾಹರಣೆ ಹಿಂದು ಮುಂದು ನೆನೆಕೆ, ಎಂಥವರಿಗಿಷ್ಟ ನಮ್ಮ ಹಾಡುಗಳು, ಕುರುಬರ ವಿನಯ ಹಾಡುಗಳು ಎನ್ನುವ ಪ್ರಕಾರಗಳನ್ನು ನೆನೆಕೆಯ ಹಾಡಿನಲ್ಲಿ ಗುರುತಿಸಬಹುದು. ಎಂಥವರಿಗಿಷ್ಟ ನಮ್ಮ ಹಾಡುಗಳು ಸಭಾ ಮಾರ್ಯದೆ ಪಲ್ಲವಿಯಲ್ಲಿ ಬರುತ್ತವೆ. ಆರಾಧ್ಯ ದೈವರ ಚರಿತ್ರೆ, ಅನ್ಯದೇವರ ಚರಿತ್ರೆ ಮತ್ತು ವೀರರ ಹಾಡುಗಳನ್ನು ಆರಾಧ್ಯ ದೈವದ ಪ್ರಕಾರದಲ್ಲಿ ಗುರುತಿಸಿದರೆ ತಪ್ಪಾಗಲಾರದು. ಜೊತೆಗೆ 'ರ್‍ಯಾಣ' ಮತ್ತು ಒಗಟಿನ ಹಾಡುಗಳನ್ನು ಕೈಬಿಟ್ಟಿರುವುದರಿಂದ ವರ್ಗೀಕರಣ ಪೂರ್ಣವಾದಂತೆ ಕಾಣಿಸುವುದಿಲ್ಲ.

ವರ್ಗೀಕರಣದ ಸಮಸ್ಯೆ ಮತ್ತು ಸವಾಲುಗಳು

ಡೊಳ್ಳಿನ ಹಾಡುಗಳ ವರ್ಗೀಕರಣ ಸಂಗ್ರಹದ ಜೊತೆ ಜೊತೆಗೆ ಆರಂಭವಾಗಿದೆ. ಆರಂಭದ ಕಾಲಘಟ್ಟದಿಂದಲೂ ಇವತ್ತಿನವರೆಗೂ ವಿದ್ವಾಂಸರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಮೇಲಿನ ವರ್ಗೀಕರಣಗಳಿಂದ ತಿಳಿದು ಬರುತ್ತದೆ. ಹಾಡುಗಳ ಸಮಗ್ರ ಸಂಗ್ರಹ ಆಗದೇ ಇರುವುದು ಇದಕ್ಕೆ ಪ್ರಮುಖ ಕಾರಣ. ಒಂದು ಪ್ರದೇಶ ಅಥವಾ ಒಂದು ಸಂಗ್ರಹದ ಹಾಡುಗಳನ್ನು ಆಧಾರ ವಾಗಿಟ್ಟುಕೊಂಡು ವರ್ಗೀಕರಣ ಮಾಡಲಾಗುತ್ತಿರುವುದು ಮತ್ತೊಂದು ಪ್ರಮುಖ ಕಾರಣ. ಉದಾಹರಣೆ ಎಂ.ಎಸ್. ಸುಂಕಾಪುರ ಅವರ ವರ್ಗೀಕರಣ. ಜೊತೆಗೆ ಹಾಡುಗಳ ಸಂಗ್ರಹವಾದಂತೆ ವರ್ಗೀಕರಣಗಳು ವಿಸ್ತರಣೆ ಆಗುತ್ತ ಹೋದವು. ಹಾಗಾಗಿ ಹಿಂದಿನ ವರ್ಗೀಕರಣಗಳು ಅಥವಾ ವರ್ಗೀಕರಣಗಾರರು ಪ್ರಮುಖವಾಗಲಿಲ್ಲ. ಈ ಸಮಸ್ಯೆ ಈಗಲೂ ಇದ್ದು ಸ್ಪಷ್ಟವಾದ ವರ್ಗೀಕರಣವನ್ನು ಕಂಡುಕೊಳ್ಳುವುದು ಕಷ್ಟವಾಗುತ್ತಿದೆ.

ಪ್ರಸ್ತುತ ಅಧ್ಯಯನದಲ್ಲಿ ಮೇಲಿನ ವರ್ಗೀಕರಣಗಳನ್ನು ಮತ್ತು ಹಾಡುಗಳ ವಸ್ತು, ಪ್ರದರ್ಶನಗಳನ್ನು ಗಮನದಲ್ಲಿಟ್ಟುಕೊಂಡು ಕೆಳಗಿನಂತೆ ವರ್ಗೀಕರಣ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. ಸ್ತುತಿ ಹಾಡುಗಳು

೨. ಸಭಾ ಮಾರ್ಯದೆಯ ಹಾಡುಗಳು

೩. ಹರಕೆಯ ಹಾಡುಗಳು

೪. ಪೌರಾಣಿಕ ಹಾಗೂ ಚಾರಿತ್ರಿಕ ಹಾಡುಗಳು

೫. ಆರಾಧ್ಯ ದೈವಗಳ ಹಾಡುಗಳು

೬. ನೀತಿ ಹಾಡುಗಳು

೭. ಪಂಥಗಳ ಹಾಡುಗಳು

೮. ಸಮಕಾಲೀನ ಸಂದರ್ಭದ ಹಾಡುಗಳು

೯. ಒಗಟಿನ ಹಾಡುಗಳು

೧೦. ಖರೆ ಹಾಡುಗಳು

೧೧. ರ್‍ವಾಣಗಳು

ಈ ವರ್ಗೀಕರಣವೂ ಸಂಪೂರ್ಣವಲ್ಲ. ಹಲವು ಪ್ರಕಾರದ ಹಾಡುಗಳು ಇಲ್ಲಿ ಬಿಟ್ಟು ಹೋಗಿವೆ. ಆದರೂ ಡೊಳ್ಳಿನ ಹಾಡುಗಳ ಸಮಗ್ರ ಗ್ರಹಿಕೆಗೆ ಮತ್ತು ಸೈದ್ಧಾಂತಿಕ ವಿಶ್ಲೇಷಣೆಗೆ ಹೆಚ್ಚು ಸಹಾಯವಾಗುತ್ತದೆ.

೩.೧. ಸ್ತುತಿಪದಗಳು

ಜನಪದ ಕಲಾವಿದರು ಕಲೆಯ ಪ್ರದರ್ಶನವನ್ನು ಆರಂಭ ಮಾಡುವಾಗ ಮತ್ತು ಮುಕ್ತಾಯ ಮಾಡುವಾಗ ದೇವರು ಮತ್ತು ಗುರು ಹಿರಿಯರನ್ನು ನೆನೆಯುವುದು ವಾಡಿಕೆ. ಡೊಳ್ಳಿನ ಹಾಡುಗಳ ಕಲಾವಿದರು ಇದಕ್ಕೆ ಹೊರತಾಗಿಲ್ಲ. ಇಂತಹ ಹಾಡುಗಳನ್ನು 'ಸ್ತುತಿ' ಪದಗಳೆಂದು ಕರೆಯಲಾಗುತ್ತದೆ. ಇದರಲ್ಲಿ ಪ್ರಮುಖವಾಗಿ ದೇವಸ್ತುತಿ, ಗಣಸ್ತುತಿ, ಗುರುಸ್ತುತಿ ಹಾಡುಗಳಿರುತ್ತವೆ. ಡೊಳ್ಳಿನ ಹಾಡುಗಾರರಲ್ಲಿ ಕಲಿಸಿದ ಗುರುವಿಗೆ ಮೊದಲ ಆದ್ಯತೆ. ಗುರುವನ್ನು ನೆನೆಯದೆ ಹಾಡುವುದಕ್ಕೆ ಆರಂಭಿಸುವುದಿಲ್ಲ ಹಾಗೂ ಮುಕ್ತಾಯ ಮಾಡುವುದಿಲ್ಲ.

"ಮೊದಲ ಗುರುವಿನ ಸ್ಮರಣೆಯ ತಗೆದು
ಸರ್ವರಿಗಿ ಮಾಡುವೆ ನಮ ಶರಣು"[೧೮]

"ಹಾಡ ಕಲಿಸಿದ ಹರ ನಿನ್ನ ಓದು ಕಲಿಸಿದ ಗುರುವಿನ
ಓದ ಕಲಿಸಿದ ಗುರುವಿನ ಧರ್ಮದ ಸಂಧಿಗೊಮ್ಮೆ ನೆನದೇವ"[೧೯]

ನಮ್ಮ ಸಕಲ ಉದ್ಧಾರ ಗುರುವಿನಿಂದ ಎಂಬ ನಂಬಿಕೆ ಇವರದು. ಹರ ಮುನಿದರೆ ಗುರು ಕಾಯುವನೆಂಬ ಶ್ರದ್ಧೆ ಇಲ್ಲಿ ಪ್ರಮುಖವಾಗಿದೆ. ಗುರುವನ್ನು ನೆನೆದ ನಂತರ ದೈವಗಳನ್ನು ನೆನೆಯುತ್ತಾರೆ. ಇವರು ದೈವಗಳನ್ನು ನೆನೆಯುವುದು ವಿಶೇಷ. ಗ್ರಾಮದ ಎಲ್ಲಾ ದೈವಗಳನ್ನು ಹಾಡಿನಲ್ಲಿ ತರುತ್ತಾರೆ.

"ನಿರಂಕಾರ ನೀರಬೈಲಿನೊಳಗೆ ಇದ್ದ
ಆದಿ ಮೂರುತಿಗಿ ನಮ ಶರಣೋ
ತಾಯಿ ಸರಸ್ವತಿ ತಂದಿ ಗಣಪಯ್ಯ
ಅವರ ಪಾದಕ ನಮ ಶರಣೊ
ಬೇಗ ಬೆಳಗ ಮಾಡುವ ಅಂತ
ಸೂರ್ಯ ಚಂದ್ರರಿಗೆ ನಮ ಶರಣೋ
ಸಿದ್ಧರಿಗೆಲ್ಲ ಅಧಿಪತಿಯಾದಂತ
ರೇವಣಸಿದ್ಧನ ನಮ ಶರಣೋ
ಹರುಷದಿಂದ ಹನುಮಂತ ದೇವರಿಗಿ
ಮುಜರಿ ಕೊಟ್ಟು ಮಾಡುವೆ ಶರಣೋ
ಹಾಲುಮತಕ ಗುರುವಾದಂತ

ಬೀರದೇವರಿಗಿ ನಮ ಶರಣೋ
ಕೈಲಾಸದಿಂದ ಮಾಯದ ಮುಂಡಾಸ ತರಿಸಿ
ಸುತ್ತಿಕೊಂಡ ಮಾಳಿಂಗರಾಯಗ ನಮ ಶರಣೋ
ಬೆಣ್ಣೂರು ಗ್ರಾಮದಲ್ಲಿ ಭಕ್ತರಿಗೊಲಿದಂತ
ತಾಯಿ ಲಕ್ಕಮ್ಮಗ ನಮ ಶರಣೋ"[೧೬]

ಗಣಪತಿಯನ್ನು ನಿರ್ವಿಘ್ನತೆಗಾಗಿ, ಸರಸ್ವತಿಯನ್ನು ಶುದ್ಧ ಉಚ್ಚಾರಕ್ಕಾಗಿ, ಲೋಕದ ಕ್ರಿಯಾಶೀಲತೆಗಾಗಿ ಕಾರಣರಾದ ಸೂರ್ಯ ಚಂದ್ರರನ್ನು ಮತ್ತು ಗ್ರಾಮದೈವಗಳನ್ನು ನೆನೆಯುವ ಇಲ್ಲಿನ ಪ್ರಕ್ರಿಯೆ ಜನಪದರ ಮುಗ್ಧ ಭಕ್ತಿಯ ಪ್ರತೀಕ. ಸರ್ವಧರ್ಮದ ಪ್ರತೀಕ. ಇದು ದೇವನೊಬ್ಬ ನಾಮ ಹಲವು ಎನ್ನುವ ತತ್ವವನ್ನು ಪ್ರತಿಪಾದನೆ ಮಾಡುತ್ತದೆ. ಡೊಳ್ಳಿನ ಹಾಡುಗಾರರು ಅಥವಾ ಜನಪದರು ವಿಶಿಷ್ಟವಾಗಿ ನಿಲ್ಲುವುದು ಈ ತಾತ್ವಿಕ ಧೋರಣೆಯಿಂದಲೆ. ಇವರು ಯಾವುದೇ ಒಂದು ಧರ್ಮಕ್ಕೆ ಒಂದು ದೈವಕ್ಕೆ ಅಂಟು ಬಿದ್ದವರಲ್ಲ. "ಇವರಿಗೆ ಊರ ಮುಂದಿನ ಪಾದಗಟ್ಟೆಯ ಬಸವನೂ ಬೇಕು. ಊರ ಹೊರಗಿನ ಗರುಡಗಂಬದೆದುರಿನ ಹನುಮನೂ ಬೇಕು. ರೋಗಾದಿಗಳ ಪೀಡಿಯಾದರೆ ಮಾರಿ ಮಸಣಿ ಮೊದಲಾದ ದೇವತೆಗಳೂ ಬೇಕು. ಭೂತ-ಪಿಶಾಚಿಗಳ ಕಾಟ ಉಪಟಳವಾದರೆ ನವಗ್ರಹದಿಗಳ ಚಲವೂ ಬೇಕು"[೧೭] ಆದರೆ ದೈವಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಆಯಾ ದೈವಗಳನ್ನು ನೆನೆಯುವ ವಿಧಾನ ಜನಪದರಲ್ಲಿದೆ. ಕೃಷಿ ಮಹಿಳೆ ಬೆಳಗಾದ ತಕ್ಷಣ ಕೃಷಿಭೂಮಿಯನ್ನು ನೆನೆಯುತ್ತಾಳೆ.

ಎಳುತಾಲೆ ಎದ್ದು ಯಾರ‍್ಯಾರ ನೆನೆಯಾಲೆ
ಎಳ್ಳು ಜೀರಿಗೆ ಬೆಳೆಯೋಳ ಭೂತಾಯಿ
ಎದ್ದೊಂದು ಗಳಿಗೆ ನೆನದೇನು

ಕೃಷಿಕರಿಗೆ ಅನ್ನ ಕೊಡುವ ದೇವತೆಯಂದರೆ ಭೂಮಿ. ಹಾಗಾಗಿ ಭೂಮಿಯನ್ನು ನೆನೆಯುತ್ತಾರೆ. ತಮಗೆ ಅನ್ನ ಕೊಡುವ ಮೂಲಗಳನ್ನು ಆರಾಧಿಸುವ ಅಥವಾ ಪೂಜಿಸುವ ಪರಿಭಾವನೆ ಜನಪದರಲ್ಲಿದೆ. ಪಶುಪಾಲಕರು ಪಶುಗಳನ್ನು ಪೂಜಿಸುವುದು, ಗುಡಿಕೈಗಾರಿಕೆಗಳ ಕೆಲಸಗಾರರು ತಮ್ಮ ಸಾಮಾಗ್ರಿಗಳನ್ನು ಪೂಜಿಸುವುದು ಈ ಪರಿಕಲ್ಪನೆಗೆ ಪೂರಕವಾಗಿ ನಿಲ್ಲುತ್ತದೆ. ಡೊಳ್ಳಿನ ಹಾಡುಗಳ ಕಲಾವಿದರಿಗೆ ಅನ್ನ ಕೊಡುವ ಮೂಲವೆಂದರೆ ಪ್ರದರ್ಶನಗಳು. ಈ ಮಾತು ಉಳಿದ ಜನಪದ ಗೀತ ಮೇಳಗಳಿಗೂ ಅನ್ವಯವಾಗುತ್ತದೆ. ಹಾಗಾಗಿ ಪ್ರದರ್ಶನದುದ್ದಕ್ಕೂ ತಮ್ಮನ್ನು ಕಾಪಾಡುವಂತೆ ದೈವಗಳಲ್ಲಿ ಮತ್ತು ಪ್ರೇಕ್ಷಕರಲ್ಲಿ ಮನವಿ ಸಲ್ಲಿಸುತ್ತಾರೆ.

"ಸಿದ್ಧಿ ವಿನಾಯಕ ಬುದ್ಧಿಪ್ರದಾಯಕ
ಸ್ತುತಿ ಮಾಡುವೆ ನಾ ನಿನ್ನ ಪಾದಾ
ಭಜಿಸುವೆ ನಿನ್ನ ಏಕೋಭಾವದಿಂದ
ಸಭಾದಾಗ ಕಾಯೊ ಮಾನವನಾ"[೧೮]

ಹೀಗೆ ಡೊಳ್ಳಿನ ಹಾಡುಗಳ ಸ್ತುತಿ ಪದಗಳಲ್ಲಿ ದೇವರನ್ನು ಮತ್ತು ದೈವವನ್ನು ತಮ್ಮನ್ನು ಕಾಪಾಡುವಂತೆ ಸಮಷ್ಟಿ ದೈವಗಳನ್ನು ನೆನೆಯುತ್ತಾರೆ. ಸರ್ವಧರ್ಮ, ಸರ್ವಧರ್ಮದ ದೈವಗಳನ್ನು

ನೆನೆಯುವ ಇಂತ ಹಾಡುಗಳು ಇವತ್ತಿನ ಜಾತಿ ಸಂಘರ್ಷದ ಕಲುಷಿತ ವಾತಾವರಣಕ್ಕೆ ತುಂಬ ಉಪಯುಕ್ತ ಮಾದರಿಗಳಾಗಿವೆ.

೩.೨. ಸಭಾಮಾರ್ಯದೆಯ ಹಾಡುಗಳು

ಜನಪದ ಕಲೆಗಳ ಪ್ರದರ್ಶನಕ್ಕೆ ಕೇಳುಗರೇ ಜೀವಂತಿಕೆ. ಕೇಳುಗರು ಇಲ್ಲದಿದ್ದರೆ ಆ ಕಲೆಗಳಿಗೆ ಅಸ್ತಿತ್ವವೇ ಇಲ್ಲ. ಈ ವಾಸ್ತವತೆ ಕಲಾವಿದರಿಗೂ ಗೊತ್ತು. ಆ ಕಾರಣಕ್ಕೆ ಪ್ರೇಕ್ಷಕರಿಗೆ ವಿಶೇಷವಾದ ಗೌರವ ಕೊಡುತ್ತಾರೆ. ಇದು ಪ್ರದರ್ಶನದಲ್ಲಿ ತುಂಬಾ ಪ್ರಜ್ಞಾಪೂರ್ವಕವಾಗಿ ನಡೆಯುವ ಕ್ರಿಯೆ. ಈ ವಿಧಾನಕ್ಕಾಗಿಯೆ ಕಲೆಯ ಪ್ರದರ್ಶನದಲ್ಲಿ ಸಮಯವನ್ನು ಮೀಸಲು ಇಡಲಾಗಿದೆ. ಈ ವಿಧಾನ ಆಯಾ ಕಲೆಯ ಸ್ವರೂಪ ಮತ್ತು ವೈಧಾನಿಕತೆಗೆ ತಕ್ಕಂತೆ ರೂಪಗೊಂಡಿರುತ್ತದೆ. ಪ್ರಮುಖವಾಗಿ ಎರಡು ಸಂದರ್ಭಗಳಲ್ಲಿ ಈ ವಿಧಾನ ನಡೆಯುತ್ತದೆ. ಒಂದು ಕಲೆಯ ಆರಂಭದಲ್ಲಿ ನಡೆದರೆ ಮತ್ತೊಂದು ಕಲೆಯ ಮಧ್ಯಭಾಗದಲ್ಲಿ ನಡೆಯುತ್ತದೆ. ಮಧ್ಯಭಾಗದಲ್ಲಿ ಅರ್ಪಿಸುವ ಗೌರವವೂ ಆ ಕಲೆಯ ಸ್ವರೂಪಕ್ಕೆ ತಕ್ಕಂತೆ ರೂಪಗೊಂಡಿರುತ್ತದೆ. ಕೆಲವು ಕಲೆಯಲ್ಲಿ ಒಂದು ಬಾರಿ ಪ್ರವೇಶ ಪಡೆದು ಕಣ್ಮರೆಯಾಗಿ ಬಿಡುತ್ತದೆ. ಉದಾಹರಣೆಗೆ ಗೊಂದಲಿಗರ ಆಟ. ಕೆಲವು ಕಲೆಗಳಲ್ಲಿ ಪ್ರದರ್ಶನದುದ್ದಕ್ಕೂ ಈ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಉದಾಹರಣೆಗೆ ದೊಡ್ಡಾಟ, ಸಣ್ಣಾಟ. ಈ ಎರಡು ಸಂದರ್ಭಗಳು ಬೇರೆ ಬೇರೆ ಉದ್ದೇಶವನ್ನು ಹೊಂದಿವೆ. ಆರಂಭದಲ್ಲಿ ಹೇಳುವ ವಿಧಾನದಲ್ಲಿ ತನ್ನ ಪ್ರತಿಭೆಯನ್ನು, ಕಲೆಯನ್ನು ಸಂರಕ್ಷಿಸಿಕೊಳ್ಳುವ ಬೌದ್ಧಿಕತೆ ಇದೆ. ಎರಡನೆಯದು ವ್ಯಕ್ತಿಗತವಾದದ್ದು ಅಥವಾ ಕಲೆಯ ತಂಡಕ್ಕೆ ಸೇರಿರುವಂತದ್ದು. ಇದರಲ್ಲಿ ಆರ್ಥಿಕ ರಾಜಕಾರಣವಿದೆ. ಲಾಭದ ಪರಿಕಲ್ಪನೆ ಇದೆ. ಹೊಟ್ಟೆ ಜೀವನವನ್ನು ನಿಭಾಯಿಸಿಕೊಳ್ಳುವ ತಾತ್ವಿಕತೆ ಇದೆ. ಪ್ರದರ್ಶನದ ವಿನಯತೆ ಇದೆ.

ಆರಂಭಿಕ ಮಾರ್ಯದೆಯ ಹಾಡುಗಳು

'ದೇವಾತ ಸ್ತುತಿ'ಯನ್ನು ಹಾಡಿದ ನಂತರ ಸಭೆಗೆ ಹೊಂದಿಸುವ ಹಾಡುಗಳನ್ನು ಆರಂಭಿಕ ಮಾರ್ಯದೆಯ ಹಾಡುಗಳೆಂದು ಕರೆಯಬಹುದು. ಇದರಲ್ಲಿ ಪ್ರೇಕ್ಷಕರನ್ನು ಸಭೆಗೆ ಆಹ್ವಾನ ಮಾಡಿಕೊಳ್ಳುವ; ಸ್ವಾಗತವನ್ನು ಕೋರುವ ವೈಧಾನಿಕತೆ ಇದೆ.

> "ಪಂಡಿತ ಜನರೆಲ್ಲ ಬಂದು ಕೂಡಿರಿ ಇಂದ್ರ ಸಭಾಕಿಂತ ಬಲೆ ಖಡಕ
> ದೈವವಿದ್ದಲ್ಲಿ ದೇವರಿರುವನೆಂದು ತಿಳಿದು ಬಂದೆ ನಾನು ಇಲ್ಲಿ ತನಕ
> ದೈವದ ಸೇವಾ ಮಾಡಿದವನಿಗೆ ದೇವರು ಒಲಿತಾನ ತಾ ಮುಂದ
> ಸೇವಾದಲ್ಲಿ ಸ್ವಲ್ಪ ಕುಂದು ಬಂದರೆ ಹಂಸ ಕ್ಷಿರ ನ್ಯಾಯ ಅನಬೇಕ
> ಹಂಸ ಪಕ್ಷಿಯ ಹಾಲನು ಕುಡಿದು ನೀರನು ಬಿಡುವುದು ಕಡಿಯಾಕ
> ಇದರಂತೆ ನನ್ನದು ತಪ್ಪು ಆದರೆ ಅಟ್ಟಿಕೊಳ್ಳಿರಿ ಕಡೆತನಕ
> ಇಷ್ಟರಿಂದ ನಾ ಸಂತೋಷನಾಗುವೆ ಇನ್ನು ಮುಂದ ಬೆಳತನಕ"[೨೫]

ಹಾಡುಗಾರನ ದೃಷ್ಟಿಯಲ್ಲಿ ಕೇಳುಗರು ಕೇವಲ ಕೇಳುಗರಲ್ಲ. ಪಂಡಿತರು, ನ್ಯಾಯಾಧೀಶರು, ತೀರ್ಮಾಣಕಾರರು, ನಿರ್ಣಾಯಕರು, ಹಾಗೂ ದೇವರು. ಇಲ್ಲಿ ಸಭೆಯನ್ನು ಗೆಲ್ಲುವುದು ಈತನ

ಮುಖ್ಯ ಉದ್ದೇಶ. ಈ ಧ್ವನಿಯಲ್ಲಿ ಪ್ರೇಕ್ಷಕರ ಮನಸ್ಸನ್ನು ಗೆಲ್ಲುವುದಕ್ಕೆ ಮಾಡಿಕೊಂಡು ಬಂದ ಪೂರ್ವತಯಾರಿ ಇದೆ. ಯೋಜನೆಗಳಿವೆ. ಭರವಸೆ ಇದೆ. ಆದರೆ ಇವುಗಳು ತನಗಾಗಿ ಅಲ್ಲ. ಪ್ರೇಕ್ಷಕರಿಗಾಗಿ. ಪ್ರೇಕ್ಷರನ್ನು ಸಂತೃಪ್ತಿಗೊಳಿಸಿದರೆ ದೇವರನ್ನು ಸಂತೃಪ್ತಿಗೊಳಿಸಿದಂತೆ ಎನ್ನುವುದು ಇವರ ವಾದ. ದೈವ ತೃಪ್ತಿಯಾದರೆ ನನಗೆ ಲಾಭವಾಗುತ್ತದೆ ಎನ್ನುವ ಕಲಾವಿದನ ತತ್ವವು ಇದರಲ್ಲಿದೆ.

“ನಮಗೆ ನಾವು ಬಲಾ ಅಂದರ ಜನರು ಹ್ಯಾಂಗ್ ಅಗತಾರ ಸನಮಾಂತ
ಕುಂತ ನಿಂತವರು ಶಬಾಸ್ ಅಂದರ ಹಾಡುವವರಿಗೆ ಮನಸ್ಸಿಗೆ ಶಾಂತಾ
ನಾಲ್ಕು ದುಡ್ಡಿಗೊಬ್ಬ ಬೇಕ ಅನ್ನುವರ ತರುವಿರೆಪ್ಪ ಮಾಡಿಕೊಂಡು ಬೇಕ
ಕೇಳವರ‍್ಯಾರಿಲ್ಲ ಹಾಳಹರಟೆ ಹೊಡೆದು ವ್ಯಾಳಗಳೆದು ಹೋಗತೀರಿ ವ್ಯರ್ಥಾ”[೩೦]

ಇಲ್ಲಿ ವ್ಯರ್ಥವಾಗಿ ಪ್ರೇಕ್ಷಕರನ್ನು ಹಾಳುಮಾಡಬೇಡಿ ಎನ್ನುವ ತತ್ವ ಇದೆ. ‘ಕಲೆ ಕಲೆಗಾಗಿ’ ಎನ್ನುವ ತಾತ್ವಿಕತೆಗೆ ಬದ್ಧವಾಗುವ ಮನಸ್ಥಿತಿ ಇದು. ತನ್ನ ಬರವಸೆಗಳ ನಡುವೆ ಅಕಸ್ಮಾತ್ ತಪ್ಪುಗಳಾದರೆ ಸಹಿಸಿಕೊಂಡು ಕಲೆ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಬೇಡಿಕೆ, ವಿನಯತೆ, ಪ್ರೇಕ್ಷಕರ ಮನಸ್ಸನ್ನು ಗೆದ್ದುಬಿಡುತ್ತದೆ. ಕಲಾವಿದ ಕಲೆಯಲ್ಲಿ ತಾನೆಷ್ಟೇ ಬೌದ್ಧಿಕ ಶಕ್ತಿಯುಳ್ಳವನಾಗಿದ್ದರೂ ಇಲ್ಲಿ ಸಣ್ಣವನಾಗುವ ತಂತ್ರ ಗಮನ ಸೆಳೆಯುತ್ತದೆ.

“ಮಂದಮತಿಯ ನಿಮ್ಮ ಕಂದನು ನಾನು
ವಂದಿಸಿ ಸಭಾದೊಳು ನಿಂತಿಹೆ ನಾ
ಚಂದದಿ ವಂದನೆ ಮಾಡುವೆ ನಾ
ಏನು ಅರಿಯದ ಬಾಲಕ ನಾ”[೩೧]

ಕಲಾವಿದನ ಪ್ರಜ್ಞಾಪೂರ್ವಕ ಕಲಾ ತಂತ್ರವಿದು. ಕಲೆಯನ್ನು ಯಶಸ್ವಿಯಾಗಿ ನಡೆಸಿಕೊಳ್ಳುವುದಕ್ಕೆ ಬೇಕಾದ ಎಲ್ಲಾ ರೀತಿಯ ಆಯಾಮಗಳನ್ನು ಇಲ್ಲಿ ಸೃಷ್ಟಿ ಮಾಡಿಕೊಳ್ಳುತ್ತಾನೆ. ಅದಕ್ಕಾಗಿ ಈ ಮಾನದಂಡಗಳನ್ನು ಅನುಸರಿಸುತ್ತಾನೆ. ಕೇವಲ ಕೋರಿಕೆ ಇಲ್ಲ. ಪ್ರತಿರೋದವು ಇದೆ. ಅಂದರೆ ಪ್ರದರ್ಶನಕ್ಕೆ ತೊಂದರೆ ಕೊಡುವವರನ್ನು ಸಹಿಸಿಕೊಳ್ಳದೆ ಪ್ರದರ್ಶನದಿಂದ ಹೊರ ಹಾಕುವ ಮನೋಧೋರಣೆಯೂ ಇವರಲ್ಲಿದೆ.

ಶಾಂತಾ ಸಭಾ ಕೂಡಿ ಕುಂತೀರಿ
ದೈವಕ ಮಾಡತೀವರಿ ನಮಷ್ಕಾರ ಗಲ್ಲಮಾಡ
ಬೇಡರಿ ಗಲ್ಲ ಮಾಡಿ ಗದ್ದಲ ಮಾಡಿ ಎದ್ದು
ಹೋಗವರಿಗಿ ನಮ್ಮನಮಸ್ಕಾರ[೩೨] ||ಪ||

ಈ ವಿಶಿಷ್ಟ ಗುಣವನ್ನು ರೂಢಿಸಿಕೊಂಡಿರುವದರಿಂದಲೇ ಡೊಳ್ಳಿನ ಹಾಡುಗಳ ಪ್ರದರ್ಶನದ ಸಂದರ್ಭ ಭಿನ್ನವಾಗಿ ಕಾಣುತ್ತದೆ. ಈ ಹಾಡುಗಳ ಅಂತಿಮ ಉದ್ದೇಶ ಪ್ರದರ್ಶನದ ವಾತವರಣವನ್ನು ವ್ಯವಸ್ಥಿತವಾಗಿ ಕಾಪಾಡಿಕೊಳ್ಳುವುದು. ಈ ಹಾಡುಗಳನ್ನು ಕಲಾವಿದರು ‘ಗುರು ಹಿರಿಯರ ಸ್ತುತಿ’ ‘ಬಲ್ಲವರ ಸ್ತುತಿ’ ಎಂದು ಕರೆಯುತ್ತಾರೆ.

ಪ್ರದರ್ಶನದ ಮಧ್ಯದಲ್ಲಿ ನಡೆಯುವ ಮಾರ್ಯದೆಯ ಹಾಡುಗಳು

ಈ ಹಾಡುಗಳನ್ನು ಪ್ರೇಕ್ಷಕರು ಕಲಾವಿದರ ಕಲೆಯನ್ನು ಮೆಚ್ಚಿ ನೀಡಿದ ಕಾಣಿಕೆಗೆ ಪ್ರತಿಕ್ರಿಯೆಯಾಗಿ ಗೌರವ ಅರ್ಪಿಸುವ ಉದ್ದೇಶಕ್ಕೆ ಸೃಷ್ಟಿ ಆಗಿರುವಂತವು. ಇಲ್ಲಿ ಹಾಡುಗಳಿಗಿಂತ ಹೆಚ್ಚಾಗಿ ಮಾತುಗಳಿರುತ್ತವೆ. ಧನ್ಯವಾದ ಹೇಳುವುದರ ಜೊತೆಗೆ 'ಹಾರೈಸುವ' ವಿಧಾನವೂ ಇಲ್ಲಿದೆ. ಇದಕ್ಕಾಗಿ ಹಲವಾರು ವಿಧಾನಗಳನ್ನು ಅನುಸರಿಸುತ್ತಾರೆ. ಅವುಗಳಲ್ಲಿ ಒಂದನ್ನು ನೋಡಬಹುದು.

> "ಹಣ ಕೊಟ್ಟಂತ ಮಾನ್ಯರಿಗೆ ಶ್ರೀ ಗುರು ರೇವಣಸಿದ್ಧೇಶ್ವರ
> ಬೀರಪ್ಪ ದೇವರು, ಮಾಳಿಂಗರಾಯ ಮುತ್ಯಾ ಅಷ್ಟೈಶ್ವರ್ಯ
> ಹಿರಿಯ ಸಂಪತ್ತು ಭಾಗ್ಯ ಭೋಗಳನ್ನು ಕೊಟ್ಟು
> ಕಾಪಾಡಬೇಕೆಂದು ಬೇಡಿಕೊಳ್ಳುತ್ತಿರುವೆ. ಇವರು ಕೊಟ್ಟ
> ಹತ್ತುರೂಪಾಯಿ ಹತ್ತು ಸಾವಿರಕ್ಕೆ ಸಮಾನವೆಂದು ತಿಳಿದು ಸ್ವೀಕರಿಸುವೆ"[೨೩]

ಮಾರ್ಗದ ಹಾಡುಗಳಿಗಿಂತ ಖ್ಯಾಲಿ ಹಾಡುಗಳನ್ನು ಹಾಡುವ ಸಂದರ್ಭದಲ್ಲಿ ಈ ವಿಧಾನ ಹೆಚ್ಚಾಗಿ ಕಂಡುಬರುತ್ತದೆ. ಇವತ್ತಿನ ಹಾಡುಗಳ ಸ್ಪರ್ಧೆಗಳ ಕಾರ್ಯಕ್ರಮಗಳಲ್ಲಿ ಇನ್ನೂ ಹೆಚ್ಚು. ಇದಕ್ಕೆ ಹಲವು ಕಾರಣಗಳಿವೆ. ೧. ಹಾಡುಗಳು ೫-೬ ನಿಮಿಷದೊಳಗೆ ಮುಗಿಯುವುದು. ೨. ಕೇಳುಗರು ಪಂಥವನ್ನು ಬೆಂಬಲಿಸುತ್ತಿರುವುದು. ೩. ಆಯಾ ಕುಲದ ಆರಾಧ್ಯ ದೈವಗಳ ಕೇಳುಗರು ಆಯಾ ಆರಾಧ್ಯದೈವಗಳ ಪಂಥದ ಕಲಾವಿದರಿಗೆ ಹೆಚ್ಚು 'ಆಯಾರ' ಮಾಡುವುದು. ಈ ವಿಧಾನ ಇವತ್ತು ಅಲೆಯಾಗಿದೆ. ಇದರಿಂದ ಬೇಸತ್ತ ಕೇಳುಗರು ಹಾಡುಗಳನ್ನು ಹಾಡುವಂತೆ ಕೂಗುತ್ತಿರುತ್ತಾರೆ. ಹಾಡುಗಾರರ ಮತ್ತು ಕೇಳುಗರ ಮಧ್ಯೆ ಈ ವಿಧಾನವನ್ನು ಕಡಿಮೆ ಮಾಡುವ ಉದ್ದೇಶಕ್ಕಾಗಿ ಜಗಳಗಳು ನಡೆದ ಉದಾಹರಣೆಗಳು ಇವೆ.

೩.೩.೩. ಹರಕೆಯ ಹಾಡುಗಳು

'ಹರಕೆ' ಎನ್ನುವ ಪದಕ್ಕೆ ಆಶೀರ್ವಾದ, "ಆಶೀರ್ವಚನ, ತನ್ನ ಅಭೀಷ್ಟಸಿದ್ಧಿಗಾಗಿ ದೇವರಲ್ಲಿ ಮಾಡಿಕೊಳ್ಳುವ ಸೇವೆಯ ನಿರ್ಧಾರ"[೨೪] ಮುಂತಾದ ಅರ್ಥಗಳಿವೆ. "ಒಳ್ಳೆಯದಾಗಲಿ ಎಂದು ದೇವರಲ್ಲಿ ಬೇಡಿಕೊಳ್ಳುವಿಕೆಯೇ ಹರಕೆ. ಪ್ರಕೃತಿಯ ಅನಂತ ಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನಪದರು ನಡೆಸುತ್ತ ಬಂದ ಹಲವು ಬಗೆಯ ಆಚರಣೆಗಳಲ್ಲಿ ಇದು ಒಂದು. ಹರಕೆ ನಿತ್ಯದ ಪ್ರಾರ್ಥನೆಯಿಂದ ಭಿನ್ನ. ಹಾಗೂ ವಿಶಿಷ್ಟವಾದುದು. ನಿತ್ಯದ ಪ್ರಾರ್ಥನೆ ಬಹುಪಾಲು ವ್ಯಕ್ತಿಗತವಾಗಿರುತ್ತದೆ. ಹರಕೆಯಲ್ಲಿ ವ್ಯಕ್ತಿಗತವಾದ ಅಂಶ ಭಾಗಶಃ ಇದ್ದರೂ ಸಾರ್ವತ್ರಿಕ ಅಥವಾ ಸಾಮೂಹಿಕ ಇಲ್ಲವೆ ಕೌಟುಂಬಿಕ ಹಿತ ಪ್ರಧಾನವಾಗಿರುತ್ತದೆ ಎನ್ನಬಹುದು"[೨೪] ಹರಕೆಯಲ್ಲಿ ಹಲವಾರು ವಿಧಗಳಿವೆ. ವೈಯಕ್ತಿಕ ಹರಕೆ, ಕೌಟುಂಬಿಕ ಹರಕೆ, ಸಾಮೂಹಿಕ ಹರಕೆ, ಊರ ಹರಕೆ ಮುಂತಾದವು. ಈ ಹರಕೆ ಅರ್ಪಿಸುವ ವಿಧಾನಗಳು ಭಿನ್ನವಾಗಿವೆ. ಬಲಿ ಆಚರಣೆ, ಉರುಳು ಸೇವೆ, ಸಿಡಿ ಆಡುವುದು, ಕೆಂಡ ತುಳಿಯುವುದು, ಎಡೆ ಅರ್ಪಿಸುವುದು, ಹಾಡುಗಳನ್ನು ಹೇಳುವುದು ಮುಂತಾದವಗಳು. ಡೊಳ್ಳಿನ ಹಾಡುಗಳಲ್ಲಿ ಹಾಡುಗಳನ್ನು ಹೇಳುವುದರ ಮುಖಾಂತರ

ಹರಕೆ ಸಲ್ಲಿಸುವ ವಿಧಾನವಿದೆ. ಈ ಹಾಡುಗಳನ್ನು 'ಹರಕೆಯ ಹಾಡುಗಳೆ'ಂದು ಕರೆಯುತ್ತಾರೆ. ಒಂದು ಬಗೆಯಲ್ಲಿ ಡೊಳ್ಳಿನ ಹಾಡುಗಳನ್ನು ಹಾಡುವುದೇ ಹರಕೆಗಾಗಿ. ಇಲ್ಲಿ ಹಾಡುವುದೇ ತಮ್ಮ ದೈವಗಳ ಸೇವೆಗಾಗಿ ಎಂದುಕೊಂಡಿದ್ದಾರೆ.

ಹರಕೆಯ ಹಾಡುಗಳ ಬಗ್ಗೆ ಹೆಚ್ಚು ಅಧ್ಯಯನಗಳಾಗಿಲ್ಲ, ಹಾಡುಗಳ ಸಂಗ್ರಹವು ಆಗಿಲ್ಲ. ಆದರೆ ಡೊಳ್ಳಿನ ಹಾಡುಗಳಲ್ಲಿ ಹರಕೆಯ ಹಾಡುಗಳನ್ನು ಹಾಡುವ ದೊಡ್ಡ ಪರಂಪರೆಯಿದೆ. ಈ ಹಾಡುಗಳ್ನು ಮೊದಲು ಜಿ.ಶಂ.ಪ. ಗುರುತಿಸಿದರು. ನೆಲ್ಲಿಸರ ಅವರು ಸಂಗ್ರಹ ಮಾಡಿರುವ ಡೊಳ್ಳಿನ ಹಾಡುಗಳ ಸಂಕಲನಕ್ಕೆ ಮುನ್ನುಡಿ ಬರೆಯುವಾಗ ಹಾಲುಮತ ಸಂಸ್ಕೃತಿಯಲ್ಲಿ ಭಾಗವಂತಿಕೆಯ ಮೇಳದಂತೆ ಹರಕೆಯ ಸಂಪ್ರದಾಯದ ಹಾಡುಗಳು ಇರುವುದಕ್ಕೆ ಸಾಧ್ಯವಿದೆ ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದರು. ನಂತರ ಶ್ರೀ ರಾಮ ಇಟ್ಟಣ್ಣ, ಎಸ್.ಎಸ್. ಪೂಜಾರಿ ಅವರು ಹರಕೆಯ ಹಾಡು ಗಳನ್ನು ಸಂಗ್ರಹಿಸಿ ಹಾಡುವ ಸಂದರ್ಭಗಳನ್ನು ವಿಶ್ಲೇಷಿಸಿದರು. ಅಭಿವ್ಯಕ್ತಿ ಸಂದರ್ಭವನ್ನು ಕುರಿತು ಇಟ್ಟಣ್ಣ ಅವರು ಹೇಳುವ ಮಾತಗಳು ಹೀಗಿವೆ. "ಭಕ್ತರ ಊರಿಗೆ ಹೋಗುವ ದೇವರು ಆ ಊರಿನಲ್ಲಿರುವ ತನ್ನ ಭಕ್ತರ ಮನೆಯಲ್ಲಿ ಒಂದೊಂದು ವಸ್ತಿ ಉಳಿಯುವುದುಂಟು. ಆ ಮನೆಯಲ್ಲಿಯೇ ಪಲ್ಲಕ್ಕಿಯ ಹಿಂದೆ ಬಂದಿರುವ ಪೂಜಾರಿಗಳನ್ನೆಲ್ಲ ಉಣಿಸಿ ತೃಪ್ತಿಪಡಿಸಲಾಗುತ್ತದೆ. ಮರುದಿನ ಮುಂಜಾನೆ ಪಲ್ಲಕ್ಕಿ ಮನೆಯಿಂದ ಹೊರಟ ಸಂದರ್ಭದಲ್ಲಿ ಭಕ್ತ ತನ್ನ ಶಕ್ತ್ಯಾನುಸಾರ ದೇವರಿಗೆ ಕಾಣಿಕೆ ಕೊಡುತ್ತಾನೆ. ಆಗ ದೇವರಿದ್ದ ಪಲ್ಲಕ್ಕಿಯನ್ನು ಭಕ್ತನ ಮನೆಗೆ ಎದುರಾಗಿ ನಿಲ್ಲಿಸಿಕೊಂಡು ಪೂಜಾರಿಗಳು ಹರಕೆಯ ಹಾಡೊಂದನ್ನು ಹಾಡುತ್ತಾರೆ. ಈ ಹರಕೆಯ ಹಾಡುಗಳು 'ಸ್ವಾಮಿ ನಮ್ಮಯ್ ದೇವರ ಬಂದಾವ್ ಬನ್ನಿರೇ' ಎಂಬ ಪಲ್ಲವಿಯೊಂದಿಗೆ ಪ್ರರಾಂಭಗೊಳ್ಳುತ್ತದೆ."[೨೬] ಈ ಹಾಡುಗಳು ಭಕ್ತರ ಮನೆಯ ಬಿಳ್‌ಕೊಡುವ ಸಂದರ್ಭವನ್ನು ಆಧರಿಸಿ ಸೃಷ್ಟಿಯಾದವು. ಇವುಗಳ ಉದ್ದೇಶವೇ 'ದೈವದ ಸೇವೆ' ಮಾಡಿದ ಭಕ್ತರನ್ನು ಹಾರೈಸುವುದು.

"ಭಾವುಳ್ಳ ಭಕ್ತನ ಮನಿಯಲ್ಲಿ ರಾಯಭಾರಿಯ ಮರವೇನ
ರಾಯಭಾರಿಯ ಮರಕಪ್ಪ ರಾಜದ್ಹಕ್ಕಿಗಳ ಕೂಡ್ಯಾವ
ಪಕ್ಕನಿಲ್ಲದ ಪಾರಿಗೋಳ ಲೆಕ್ಕನಿಲ್ಲದ ಗಿಣಿ ಹಿಂಡ
ಲೆಕ್ಕನಿಲ್ಲದ ಗಿಣಿಹಿಂಡ ಕೂಡಿ ಹಾಲ ಹಣ್ಣವ ಮೇದಾವ
ಹಾಲ ಹಣ್ಣವ ಮೇದಾವಲ್ಲೂ ಭಕ್ತಗ ಹರಕಿಯ ಕೊಟ್ಟಾವೊ
ಆಳಮಕ್ಕಳ ಉಂಡ ಮನಿಯಾಗ ಹಾಲ ಕಾವಲ್ಯಾಗ ಹರಿಯಲಿ
ಪೂಜೇರಿ ಉಂಡ ಮನಿಯೊಳಗ ತುಪ್ಪದ ಕಾವಲಿ ಹರಿಯಲಿ
ನನ್ನ ಗುರುವ ಉಂಡ ಮನಿಯಾಗ ಹೊನ್ನರಾಶಿಯಾ ಹೊಯ್ಯಲೊ
ಕರಿ ಕಂಬಳಿ ಧರಮಾರೊ ಭಕ್ತಗರ್ಹಕಿಯ ಕೊಟ್ಟಾರೊ
ಅಂಗೈಯಷ್ಟ ಹೊಲವ ಮಾಡಿ ಬಂಗಾರ ಬಿತ್ತಿ ಬೆಳಿಯಲಿ
ಹರಿ ಎಂಬೂ ಶಬ್ದ ಹೊಲದಾಗಿರಲಿ ಮೇಲಗ್ಯೆಯ ನಿನ ಮನಿಯೊಳಗ
ಆಸಿವಂತನ ಆಗೋ ಮಗನ ಗಂಟಲಗಾಣ ಆಗಲ್ಯೋ
ವೈರಿ ಹಸ್ತ ಒಡಿಯಲಿ ಮಗನ ನಿನ್ನ ಹಸ್ತ ಮೇಲಾಗಲೋ

ಕರಿ ಕಂಬಳಿ ಧರಮಾರೋ ಭಕ್ತಗರ್ಧಕಿಯ ಕೊಟ್ಟಾರೋ
ಹೀರಿಬಳ್ಳಿ ಹಂಗ ಹಬ್ಬಲಿ ನಿನ್ನ ಮನಿ ಹೀರಿತಾನ ಮುಂದಾಗಲಿ
ಕವಡಿಕಿ ಬಳ್ಳಿ ಹಾಂಗ ಹಬ್ಬಲಿ ನಿನ್ನ ಮನಿ ಗೌಡಿಕೇಳ ಅನುವಾಗಲಿ
ವಾಲಿಗ ವಾಲಿಗೆ ಚಿಗಿಯಲಿ ನಿನ್ನ ಮನಿ ಬಾಲೇರ ಜೋಗುಳ ಹಾಡಲ್ಯೋ
ತೊಟ್ಟಲಿಟ್ಟ ತೂಗಲಿ ನಿನ್ನ ಮನಿ ಬಟ್ಟಲಿಟ್ಟ ಬೀರಲಿ
ಗಂಗವ್ವ ಗೌರವ್ವನೆಂಬು ಜೋಡೆರಡ ಹಗೆಯ ಹಾಕಲಿ
ನಿಂಬೆವ್ವ ನೀಲವ್ವನೆಂಬು ಜೋಡೆರಡ ಹಣ್ಣುಮಕ್ಕಳು
ಕಾಮಣ್ಣ ಭೀಮಣ್ಣನೆಂಬ ಜೋಡೆರಡ ಗಂಡುಮಕ್ಕಳು
ರಾಮಣ್ಣ ಲಕ್ಷ್ಮಣನೆಂಬ ಜೋಡೆರಡ ಹಗೆಯ ಹಾಗಲಿ
ರಾಮಣ್ಣ ಲಕ್ಷ್ಮಣನೆಂಬ ಜೋಡೆರಡ ಬಣಮಿ ಒಟ್ಟಲಿ
ಮಾರಾಯ ನನ್ನ ಕುರಿ ದೇವರ ಉಂಡ ಮೆರದ ಹೊಂಟಾನೊ"[೨]

ಹಾಡುಗಾರರು ಭಕ್ತರ ಒಳಿತನ್ನು, ಅಭಿವೃದ್ಧಿಯನ್ನು ಕುರಿತು ಹಾಡಿ ಹೋಗುತ್ತಾರೆ. ಈ ರೀತಿಯಾಗಿ ಸೇವೆ ಮಾಡಿದ ಭಕ್ತರನ್ನು ಹಾರೈಸುವ ಸಂಪ್ರದಾಯ ಹಲವು ಜನಪದ ಕಲೆಗಳಲ್ಲಿದೆ. ಕೊರವತಿ, ಗಣೆಯವರು, ಕೊಲೆ ಬಸವರು, ಗೊರವರು, ಗೊಂದಲಿಗರಲ್ಲಿ ಕಾಣಬಹುದು. ಈ ಹಾಡಿನಲ್ಲಿ ಬಳಕೆ ಆಗುವ ಪದಗಳು ಕುತೂಹಲಕರವಾದವು. 'ಆಳುಮಕ್ಕಳು' ಎಂದರೆ ಹಾಡುಗಾರರು. 'ಪೂಜಾರಿ' ಎಂದರೆ ಬೀರಪ್ಪನ ಸೇವಕ. 'ಗುರು' ಎಂದರೆ ಬೀರಪ್ಪ. 'ಕರಿ ಕಂಬಳಿ ಧರಮಾರೋ' ಎಂದರೆ ಬೀರಪ್ಪನ ಆರಾಧಕ ವರ್ಗ, ಸೇವಕ ವರ್ಗ, ಅಂದರೆ ಭಂಡಾರ ಪಂಥದ ಶೈವ ಆರಾಧಕ ಹಾಲುಮತ ಸಮುದಾಯದ ವರ್ಗ ಎಂದರ್ಥ. ರೇವಣಸಿದ್ಧ, ಅಮೋಘಸಿದ್ಧ ಮತ್ತು ಸಿದ್ಧರಾಮನ ಅನುಯಾಯಿಗಳು 'ಬಿಳಿ ಕಂಬಳಿ'ಯನ್ನು ಬಳಸುತ್ತಾರೆ. ಅಂದರೆ ಈ ಹಾಡುಗಳು ಬೀರಪ್ಪನ ಆರಾಧನೆಯಲ್ಲಿ ಮಾತ್ರ ಕಾಣಬಹುದು. ಕೋಣಗನೂರು ಕರಿಸಿದ್ಧ ದೈವದ ಆರಾಧನೆಯಲ್ಲಿ ಈ ಸಂಪ್ರದಾಯ ಪ್ರಮುಖವಾಗಿ ಕಂಡುಬರುತ್ತದೆ. ವರ್ಷದಲ್ಲಿ ಯುಗಾದಿಯ ಪಾಡ್ಯದ ನಂತರ ದೈವದ ಪಲ್ಲಕ್ಕಿಯನ್ನು ಭಕ್ತರ ಮನೆಗೆ ಹೊರಡಿಸಿದವರು ಮತ್ತೆ ಕಾರಹುಣ್ಣಿಮೆಯ ದಿನ ಮರಳಿ ಗುಡಿಗೆ ಸೇರಿಸುತ್ತಾರೆ.

ಕರಿಸಿದ್ಧ ದೈವದ ಪಲ್ಲಕ್ಕಿ ಭಕ್ತರ ಮನೆಗೆ ಹೊರಡುವುದಕ್ಕೆ ಸಿದ್ಧವಾಗುತ್ತಿದ್ದಂತೆ ಭಕ್ತರು ಭಂಡಾರ ಕೊಟ್ಟು ತಮ್ಮ ಮನೆಗೆ ಬರುವಂತೆ ಅಹ್ವಾನ ಮಾಡುತ್ತಾರೆ. ಕರೆದ ಭಕ್ತ ಮನೆಗೆ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗಿ ಸೇವೆ ಪಡೆದು, ಭಂಡಾರ ಕೊಟ್ಟ ಮತ್ತೊಬ್ಬ ಭಕ್ತನ ಮನೆಗೆ ಮುನ್ನಡೆಯುತ್ತಾರೆ. ಮನೆ ಬಿಡುವ ಸಂದರ್ಭ ಗಮನಸೆಳೆಯುತ್ತದೆ. "ಬಾರೋ ಬಾರೋ ಏನಂಭಕ್ತ ನಮಗಪ್ಪಣಿ ಕೊಡಬಾರ" ಎಂದು ಪೂಜಾರಿಗಳು ಕೇಳುತ್ತಾರೆ. ಈ ಮಾತನ್ನು ಕೇಳಿದ ಭಕ್ತ "ನಿಮಗಪ್ಪಣಿ ಕೊಡುವುದೆ? ಗುರುವೆ ನಮ್ಮ ಕೈಯಲ್ಲಿ ಇಲ್ಲೇಳ" ಎನ್ನುವುದರ ಜೊತೆಗೆ ನಾನು ನಿನ್ನ ಸೇವೆಗಾಗಿ ತಂದ ಬ್ಯಾಳಿ, ಬೆಲ್ಲ, ಹಿಟ್ಟು ಮುಂತಾದ ವಸ್ತುಗಳ್ಯಾವು ಸವೆದಿಲ್ಲ. ಇನ್ನೂ ಸ್ವಲ್ಪ ದಿನ ಇರಬೇಕು ಅಂತ ಬೇಡಿಕೊಳ್ಳುತ್ತಾನೆ. ದೈವ ಉಂಡಿದ್ದು ಯಾವತ್ತು ಸವೆಯುವುದಿಲ್ಲ ಎನ್ನುವ ಪರಿಕಲ್ಪನೆ ಇದು.

“ಮುಂದಿನೂರ ಭಂಡಾರ ಬಂದಾವ ನಿಲ್ಲಲಾಕ ನಂಭಾಗಿಲ್ಲ
ಮುಂದೊಂದಿನಾ ಬಂದ ಬರತೀವ ಎಂದಿಗು ಹೋಗೇವಂತಾರ”[೨೮]

ಎನ್ನುವ ಭರವಸೆಯನ್ನು ಕೊಟ್ಟು ಮುಂದಕ್ಕೆ ಹೋಗುತ್ತಾರೆ. ಹಾಲುಮತ ಸಂಸ್ಕೃತಿಯಲ್ಲಿ ಈ ಹರಕೆಯ ಸಂಪ್ರದಾಯ ವಿಶಿಷ್ಟವಾಗಿದೆ. ಈ ದೈವದಂತೆ ಮೈಲಾರಲಿಂಗನ ಭಕ್ತನಾದ ಗೊರವರು ತಮ್ಮ ಭಕ್ತರ ಮನೆಗಳಿಗೆ ತೆರಳಿ ಸೇವೆಯನ್ನು ಸ್ವೀಕರಿಸಿ ಹಾರೈಸಿ ಬರುತ್ತಾರೆ. ಇದು ಶೈವ ಸಂಸ್ಕೃತಿಯ, ಭಂಡಾರ ಸಂಸ್ಕೃತಿಯ ಪ್ರಚಾರದಂತೆ ಕಾಣಿಸುತ್ತದೆ. ದೈವಗಳ ಸೇವಕರು ಭಕ್ತರಲ್ಲಿ ಸದಾ ಜೀವಂತವಿರುವ ಅಥವಾ ಸಂಬಂಧವನ್ನು ಉಳಿಸಿಕೊಳ್ಳುವ ವಿಧಾನವಿದು. ಈ ಸಂಪ್ರದಾಯದ ಬಗ್ಗೆ ವಿಶೇಷವಾದ ಅಧ್ಯಯನ ಆಗಬೇಕಾಗಿದೆ.

೩.೩.೪. ಆರಾಧ್ಯ ದೈವಗಳನ್ನು ಕುರಿತ ಹಾಡುಗಳು

ಡೊಳ್ಳಿನ ಹಾಡುಗಳಲ್ಲಿ ಆರಾಧ್ಯ ದೈವಗಳ ವಿವರಗಳನ್ನು ಹುಡುಕುವುದೇ ಒಂದು ಬಗೆಯಲ್ಲಿ ವ್ಯಂಗ್ಯ. ಕಾರಣ ಹಾಲುಮತ ಸಮುದಾಯ ಡೊಳ್ಳಿನ ಹಾಡುಗಳನ್ನು ಸೃಷ್ಟಿ ಮಾಡಿಕೊಂಡಿರುವುದೇ ತಮ್ಮ ಕುಲದೈವಗಳನ್ನು ನೆನೆಯುವ ಉದ್ದೇಶಕ್ಕಾಗಿ. ಆದರೆ ನಾವು ಆರಾಧ್ಯ ದೈವಗಳನ್ನು ಹಾಡಿ ಹೊಗಳುತ್ತೇವೆಯೆಂದು ಅಥವಾ ಅವರ ಚರಿತ್ರೆಯನ್ನು ಮುಂದುವರೆಸುತ್ತೇವೆಯೆಂದು ಅವರಿಗೆ ತಿಳಿದಿಲ್ಲ. ಬಸವಣ್ಣ ನಾನು ಒಲಿದಂತೆ ಹಾಡುವೆನು ಎಂದು ಘೋಷಿಸಿಕೊಂಡ ಸ್ವರೂಪದಂತೆ ಇವರು ತಮ್ಮ ದೈವಗಳನ್ನು ತೃಪ್ತಿಗೊಳಿಸುವ ಉದ್ದೇಶಕ್ಕಾಗಿ ಹಾಡಿ ಹೊಗಳುತ್ತಿದ್ದೇವೆ ಎನ್ನುವ ಮನೋಭಾವನೆಯನ್ನು ಹೊಂದಿದ್ದಾರೆ. ಡೊಳ್ಳಿನ ಹಾಡುಗಳ ಸೃಷ್ಟಿಯಾದದ್ದು ಈ ಹಿನ್ನೆಲೆಯಲ್ಲಿಯೇ. ಕಲಾವಿದರು ಹಾಡುಗಳನ್ನು ಹಾಡುವುದಕ್ಕೆ ಆರಂಭಿಸುವ ಮೊದಲು ಡೊಳ್ಳುಗಳ ‘ವಾಲಗ’ ಮಾಡಿ ದೇವರನ್ನು ತಮ್ಮ ಹತ್ತಿರ ಕರೆದುಕೊಳ್ಳುವ ಮತ್ತು ನಾವು (ಹಾಡುಗಾರರು) ‘ದೇವರ ಆಳುಮಕ್ಕಳೆನ್ನುವ’ ಮಾತುಗಳು ಮತ್ತು ಹಾಡುವುದು ದೇವರ ಸೇವೆಗಾಗಿ ಎಂದು ಹೇಳಿಕೊಳ್ಳುವ ಮಾತುಗಳು ಮೇಲಿನ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ.

ಡಾ. ವೀರೇಶ ಶೇ. ಬಡಿಗೇರ ಅವರು ಡೊಳ್ಳಿನ ಹಾಡುಗಳಲ್ಲಿ ಉಲ್ಲೇಖಗೊಂಡಿರುವ ದೈವಗಳನ್ನು ‘ಆರಾಧ್ಯ ದೈವದ ಚರಿತ್ರೆ’ ಮತ್ತು ‘ಅನ್ಯದೇವರ ಚರಿತ್ರೆ’ಯೆಂದು. ವರ್ಗೀಕರಿಸಿದ್ದಾರೆ.[೨೯] ಅಂದರೆ ಡೊಳ್ಳಿನ ಹಾಡುಗಳನ್ನು ಹಾಡುವ ಸಮುದಾಯದ ಕುಲದೈವಗಳು ಮತ್ತು ಕುಲೇತರ ದೈವಗಳು ಎಂದಾರ್ಥ. ಈ ವರ್ಗೀಕರಣದ ಹಿಂದೆ ಡೊಳ್ಳಿನ ಹಾಡುಗಳು ಹಾಲುಮತ ಸಮುದಾಯಕ್ಕೆ ಸೇರಿದವು ಎನ್ನುವ ಪ್ರಜ್ಞೆ ಪ್ರಮುಖವಾಗಿದೆ. ಇದು ವಾಸ್ತವ ಸಹ. ಹಾಗಾಗಿ ಹಾಲುಮತ ಹಾಲುಮತೇತರ ದೈವಗಳೆಂದು ಪ್ರತ್ಯೇಕವಾಗಿ ನೋಡುತ್ತಾರೆ. ಸಂಗ್ರಹಕಾರರು ಸಹ ಈ ಪ್ರಜ್ಞೆಯಿಂದಲೇ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇದರಿಂದ ಡೊಳ್ಳಿನ ಹಾಡುಗಳಲ್ಲಿ ಉಲ್ಲೇಖಗೊಳ್ಳುವ ದೈವಗಳನ್ನು ಮತ್ತು ಡೊಳ್ಳಿನ ಹಾಡುಗಳ ಉದ್ದೇಶವನ್ನು ನೋಡುವ ಕ್ರಮ ಬದಲಾಯಿತು. ಇದರಿಂದ ಹಲವು ಪರಿಣಾಮಗಳು ಉಂಟಾದವು. ಸಂಗ್ರಹಕಾರರು ಸಮುದಾಯದ ದೈವಗಳಿಗೆ ಅಂಟು ಬಿದ್ದದ್ದೇ ಹೆಚ್ಚು.

ಸಮುದಾಯಗಳು ಯಾವತ್ತೂ ಒಂದು ಧರ್ಮಕ್ಕೆ ಅಥವಾ ಒಂದು ಧರ್ಮದ ದೈವಗಳ ಆರಾಧನೆಗೆ ಸೀಮಿತವಾದವುಗಳಲ್ಲ, ಎನ್ನುವ ವಿಶ್ಲೇಷಣೆಗಾಗಲೀ, ಅಥವಾ ಆ ದೈವಗಳನ್ನು ಸ್ವೀಕಾರ ಮಾಡಿಕೊಂಡ ರಾಜಕಾರಣವನ್ನಾಗಲೀ ಗುರುತಿಸುವುದಕ್ಕೆ ಸಾಧ್ಯವಾಗಲಿಲ್ಲ. ಹೀಗೆ ವರ್ಗೀಕರಿಸುವುದೇ ಅಪಾಯಕಾರಿ. ಉದಾಹರಣೆ ದ್ಯಾಮವ್ವ, ಲಕ್ಕಮ್ಮ, ಎಲ್ಲಮ್ಮ, ಮಾರಮ್ಮ ಮತ್ತು ಆಂಜನೇಯ ಮುಂತಾದ ಗ್ರಾಮದೈವಗಳನ್ನು ಕುಲೇತರ ದೈವಗಳೆಂದು ಪರಿಗಣಿಸಲಾಗುತ್ತದೆ. ಹಾಲುಮತ ಸಮುದಾಯದಲ್ಲಿ ಲಕ್ಕಮ್ಮ, ದ್ಯಾಮವ್ವ, ಮಾರಮ್ಮ, ಯಲ್ಲಮ್ಮನನ್ನು ಕುಲದೈಗಳನ್ನಾಗಿ ಮಾಡಿಕೊಂಡ ಕುಲ(ಗೋತ್ರ)ಗಳು ಇವೆ. ಅಲ್ಲದೆ ಹಾಲುಮತದ ಪುರುಷ ದೈವಗಳೊಂದಿಗೆ ಸಂಕರಶೀಲ ಸಂಬಂಧವನ್ನು ಇಟ್ಟುಕೊಂಡಿದೆ. ತೋಪುಜಾತ್ರೆ, ಕಂತೆಸೇವೆ, ಹೊಳೆಪೂಜೆ, ಪಲ್ಲಕ್ಕಿ ಉತ್ಸವ, ಪಲ್ಲಕ್ಕಿ, ಬೇಟೆ ಆಚರಣೆ ಮುಂತಾದ ಆಚರಣೆಗಳಲ್ಲಿ ಈ ದೈವಗಳು ಇರಲೇಬೇಕು ಎನ್ನುವ ಕಡ್ಡಾಯ ನಿಯಮಗಳನ್ನು ಹೊಂದಿವೆ. ಈ ದೈವಗಳಿಲ್ಲದೆ ಆಂಜನೇಯ ಮುಂತಾದ ದೈವಗಳಲ್ಲೂ ಇಂಥ ಸಂಬಂಧಗಳಿವೆ. ಸಮುದಾಯೇತರ ದೈವಗಳು ಎಂದು ಗ್ರಹಿಸಿದಾಗ ಈ ದೈವಗಳ ವೈಶಿಷ್ಟತೆಯನ್ನು, ಧಾರ್ಮಿಕ ಸಂಬಂಧವನ್ನು ಗುರುತಿಸು ವುದನ್ನು ಕೈಬಿಟ್ಟಂತಾಗುತ್ತದೆ. ಇಂತ ಹಲವು ಸಮಸ್ಯೆಗಳು ಈ ಸಮುದಾಯದ ದೈವಗಳನ್ನು ಅಧ್ಯಯನ ಮಾಡುವಾಗ ಎದುರಾಗುತ್ತವೆ.

ಡೊಳ್ಳಿನ ಹಾಡುಗಳು ಪ್ರಮುಖವಾಗಿ ಹಾಲುಮತದ ಕುಲದೈವಗಳನ್ನು ಹಾಡಿ ಹೊಗಳುತ್ತವೆ. ಪ್ರಮುಖವಾಗಿ ಬೀರಪ್ಪ, ಮಾಳಿಂಗರಾಯ, ಬುಳ್ಳಪ್ಪ, ಅಮೋಘಸಿದ್ಧ, ಭೂತಾಳಸಿದ್ಧ, ಇಟ್ಟಪ್ಪ, ಮಾಯವ್ವ ಮತ್ತು ಈ ದೈವಗಳ ಜೊತೆ ಸಾಂಸ್ಕೃತಿಕ, ಚಾರಿತ್ರಿಕ ಸಂಬಂಧವನ್ನು ಇಟ್ಟುಕೊಂಡಿರುವ ದೈವಗಳನ್ನು ಹೆಚ್ಚಾಗಿ ಹಾಡಲಾಗುತ್ತದೆ. ರೇವಣಸಿದ್ಧ, ಸಿದ್ಧರಾಮ, ವೀರಗೊಲ್ಲಾಳ, ಮೈಲಾರಲಿಂಗ ಮಾರ್ಕಾಂಡೇಶ್ವರ, ಬೇಡರ ಕಣ್ಣಪ್ಪ, ಈರಪ್ಪ, ಕಾಮವ್ವ, ಲಕ್ಕಮ್ಮ, ಎಲ್ಲಮ್ಮ, ಕೃಷ್ಣ, ರಾಮ, ಅರ್ಜುನ, ದ್ರೌಪದಿ ಮುಂತಾದ ದೈವಗಳನ್ನು ಕುರಿತ ಬಿಡಿ ಬಿಡಿ ಹಾಡುಗಳು ಸಿಗುತ್ತವೆ. ಈ ದೈವದ ಹಾಡುಗಳನ್ನು ನೆನಕೆಗಳಿಗಾಗಿ, ನೀತಿ-ತತ್ವಗಳಿಗಾಗಿ ಹಾಡುವುದು ಹೆಚ್ಚು.

"ಮುಳ್ಳು ಮಾಯಪ್ಪನ ಮನದೊಳು ತಾ ಮೆಚ್ಚೀ ಮೋಹದ ಮಾತೇಳಿದ ಬೀರಪ್ಪನೊ
ನಿಜರೂಪ ದೇವಬಂದು ನಿತ್ಯವರವ ಕೊಟ್ಯಾ। ಸತ್ಯ ಶರಣಾದ ಮಾಳಪ್ಪನೋ
ಸತ್ಯ ಶರಣಾದ ಮಾಳಪ್ಪ ಕರೆದು ಮತ್ತೇನ ಬೇಡಿದ ಬೀರಪ್ಪನೋ
ಸಿಡಿಯಾನ ಸ್ಥಳದಲಿ ಸೇವೆ ಮಾಡುವಾಗ। ಹುಲಿಹಾಲ ಬೇಡಿದ್ದ ಬೀರಪ್ಪನೋ
ಮಂಡಿ ಕಟ್ಟಿಹಾಲ ಗುಂಡಗಿ ತೊಗೊಂಡು। ಹುಲಿಹಾಲಿಗೋಗಿದ್ದ ಮಾಳಪ್ಪನೋ
ಹುಲಿಹಾಲ ಹೊತಗೊಂಡು ಸಿಡಿಯಾನ ಸ್ಥಳದಲ್ಲಿ ನೇಮದಿಂದ ಬಂದ ಮಾಳಪ್ಪನೋ"[೩೦]

ಹೀಗೆ ಭಕ್ತಿಯಲ್ಲಿ ಮೆರೆದ ವ್ಯಕ್ತಿಗಳ ಹಾಡುಗಳನ್ನು ಬಿಡಿ ಬಿಡಿಯಾಗಿ ಹಾಡಲಾಗುತ್ತದೆ. ಭಕ್ತ ಪ್ರಲ್ಹಾದ, ಭೀಮಾರ್ಜುನ ಗರ್ವಭಂಗ ಮುಂತಾದ ಹಾಡುಗಳು ಈ ನೆಲೆಯಲ್ಲಿ ಈ ಕ್ಷೇತ್ರಕ್ಕೆ ಪ್ರವೇಶ ಪಡೆದಿವೆ.

೩.೩.೫. ಪೌರಾಣಿಕ ಹಾಗೂ ಚಾರಿತ್ರಿಕ ಹಾಡುಗಳು

ಕರ್ನಾಟಕದ ಡೊಳ್ಳಿನ ಹಾಡುಗಳಲ್ಲಿ ಎರಡು ಧಾರೆಗಳಿವೆ. ಒಂದು ಮೌಖಿಕವಾಗಿ ಪರಂಪರೆಯಿಂದ ಬಂದಿರುವಂತಹವು. ಇನ್ನೊಂದು ರಚನೆಕಾರರಿಂದ ರಚಿಸಿ ಹಾಡಿರುವಂತಹವು. ಇವೆರಡು ಧಾರೆಗಳು ಮೌಖಿಕ ನೆಲೆಯಲ್ಲಿ ಸಮಾನವಾಗಿ ಬೆಳೆದುಕೊಂಡು ಬರುತ್ತಿವೆ. ಈ ಹಾಡುಗಳಲ್ಲಿ ಪೌರಾಣಿಕ ಕಲ್ಪನೆ ಮೈಲುಗೈ ಪಡೆದಿದೆ. ಆರಂಭದಲ್ಲಿ ಡೊಳ್ಳಿನ ಹಾಡುಗಳೆಂದರೆ 'ಪೌರಾಣಿಕ ಹಾಡುಗಳೆಂದೇ' ನಂಬಲಾಗಿತ್ತು. ಇಲ್ಲಿ ಶಿವಾನಂದ ಗುಬ್ಬಣ್ಣನವರ ಮಾತನ್ನು ನೆನಪಿಸಿಕೊಳ್ಳಬೇಕು. "ಡೊಳ್ಳಿನ ಹಾಡುಗಳು ಸಾಮಾನ್ಯವಾಗಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಇಲ್ಲವೆ ಘಟನಾತ್ಮಕ ರೂಪಗಳಲ್ಲಿ ರಚಿಸಲ್ಪಟ್ಟಿವೆ. ಆದರೆ ಪೌರಾಣಿಕ ರೂಪದ ಹಾಡುಗಳೇ ಹೆಚ್ಚು. ಪುರಾಣ ಕಥೆಗಳು, ನೀತಿಯ ನುಡಿಗಳು, ಧಾರ್ಮಿಕ ಪುರುಷರ ಜೀವನ ಕುರುಬರಿಗೆ ಅಚ್ಚುಮೆಚ್ಚು. ಪುರಾಣ ಪುಣ್ಯಕಥೆಗಳನ್ನು ಹೇಳಿ ಸದಾಚಾರ ಸಂಪನ್ನರಾಗಿ ಬಾಳಬೇಕೆಂಬುದೇ ಅವರ ಉದ್ದೇಶ. ಅಂತೆಯೇ ಡೊಳ್ಳಿನ ಹಾಡುಗಳನ್ನು 'ಭಕ್ತಿಗೀತ'ಗಳೆಂದು ಕರೆದರೂ ಕರೆಯಬಹುದಾಗಿದೆ".[೪೯] ಸಂಗ್ರಹಕಾರರು ಆರಂಭದಲ್ಲಿ ಪೌರಾಣಿಕ ಹಾಡುಗಳನ್ನು ಹೆಚ್ಚಾಗಿ ಹುಡುಕಿ ಸಂಗ್ರಹಿದರು. ಶಿವಾನಂದ ಗುಬ್ಬಣ್ಣವರ 'ದೇವರ್ ಬಂದಾವ್ ಬನ್ನಿರೇ' ಸಂ.೧ ಸಂಕಲನ ಸಂಪೂರ್ಣ ಪುರಾಣ ಕೇಂದ್ರಿತ ಹಾಡುಗಳಿಂದ ಕೂಡಿದೆ. ಪುರಾಣ ಕೇಂದ್ರಿತ ಹಾಡುಗಳನ್ನು ತರುವ ಉದ್ದೇಶದಿಂದಲೇ ಈ ಸಂಕಲನ ತಂದಿರುವುದಾಗಿ ಸಂಗ್ರಹಕಾರರು ಹೇಳುತ್ತಾರೆ. ಈ ಪರಿಕಲ್ಪನೆ ಹಲವು ಸಂಗ್ರಹಕಾರರಲ್ಲಿ ಕಾಣುತ್ತದೆ. ಹಾಗಾಗಿ ಈಗ ಸಂಗ್ರಹಿತ ಪಠ್ಯಗಳಲ್ಲಿ ಪೌರಾಣಿಕ ಹಾಡುಗಳು ಹೆಚ್ಚಾಗಿವೆ.

ಹಾಲುಮತದ ಸಾಂಸ್ಕೃತಿಕ ವೀರರಾದ ರೇವಣಸಿದ್ಧ, ಬೀರಪ್ಪ, ಮಾಳಿಂಗರಾಯ, ಅಮೋಘಸಿದ್ಧ ಮುಂತಾದವರನ್ನು ಪೌರಾಣಿಕ ವ್ಯಕ್ತಿಗಳೆಂದು ಈ ಸಮುದಾಯ ಗ್ರಹಿಸಿದೆ. ಇವುಗಳಲ್ಲದೆ ನಂಬಿಯಕ್ಕನ ಚರಿತ್ರೆ, ಅರ್ಜುನನ ಚರಿತ್ರೆ, ಮಾರ್ಕಂಡೇಶ್ವರ ಚರಿತ್ರೆ, ಬೇಡರ ಕಣ್ಣಪ್ಪ, ತಿರುನೀಲಕಂಠ, ಗಿರಿಜಾ ಕಲ್ಯಾಣ, ಗಜಾಸುರ, ಭೃಂಗಿ, ಪತಿಭಕ್ತಿ ಅನಾಲದೇವಿ, ಭೀಮಾರ್ಜುನ ಗರ್ವಭಂಗ, ಶಿವಶರಣೆ ನಿಂಬಕ್ಕ, ಜಕ್ಕವ್ವ, ಮಾಯವ್ವ, ಎಕ್ಕವ್ವ, ಎಲ್ಲವ್ವ, ಮರುಳಸಿದ್ಧೇಶ್ವರನ ಪದ ಮುಂತಾದ ಚರಿತ್ರೆಯ ಹಾಡುಗಳನ್ನು ಕಾಣಬಹುದಾಗಿದೆ. ಹಾಲುಮತ ಭಂಡಾರ ಪಂಥದ ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ಹೊರತುಪಡಿಸಿ ಉಳಿದ ಚಾರಿತ್ರಿಕ ಹಾಡುಗಳನ್ನು ಇವರು ಲಿಖಿತ ಪುರಾಣಗಳಿಂದ ತಮಗೆ ಇಷ್ಟವಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ರಚಿಸಿದ್ದೇ ಹೆಚ್ಚು. ರೇವಣಸಿದ್ಧ, ಸಿದ್ಧರಾಮ, ವೀರಗೊಲ್ಲಾಳ, ಭೀಮಾರ್ಜುನ ಗರ್ವಭಂಗ, ಭಕ್ತ ಪ್ರಲ್ಹಾದ, ಮಾಯಿ, ಜಗಜ್ಜನನಿ ಮುಂತಾದ ಹಾಡುಗಳು ಲಿಖಿತ ಪುರಾಣಗಳಿಂದ ಆಯ್ಕೆ ಮಾಡಿಕೊಂಡ ಹಾಡುಗಳು. ಈ ಹಾಡುಗಳ್ನು ತತ್ವ, ನೀತಿ, ಭಕ್ತಿ ಮತ್ತು ವ್ಯಕ್ತಿಗತ ಸಾಧನೆಯನ್ನು ಹೇಳುವುದಕ್ಕೆ ಹೆಚ್ಚಾಗಿ ಬಳಸಿಕೊಂಡರು. ಡೊಳ್ಳಿನ ಹಾಡುಗಳ ಪ್ರದರ್ಶನದಲ್ಲಿ ಈ ಪ್ರಕಾರದ ಹಾಡುಗಳನ್ನು ಹಾಡುವುದಕ್ಕೆ ಸಂದರ್ಭಗಳಿವೆ. ಹೆಣ್ಣು ಹೆಚ್ಚೊ, ಗಂಡು ಹೆಚ್ಚೊ, ಒಳಿತು ಹೆಚ್ಚೊ, ಕೆಡಕು ಹೆಚ್ಚೊ, ಎನ್ನುವ ಸೃಜನಶೀಲ ಗುದ್ದಾಟಗಳ ಸಂದರ್ಭಗಳಲ್ಲಿ ಹೆಚ್ಚಾಗಿ ಬಳಕೆಗೆ ಬಂದವು.

"ಮರ್ತ್ಯಲೋಕದಾಗ ಬಸವಣ್ಣ ಹುಟ್ಟಿದೊಂದು ಚೋದ್ಯ
ಮರ್ತಕ ಬಂದು ಮಣ್ಣಿನ ಮಗನಾಗಿ ಭಕ್ತಿ ಮೆರೆದ ಮೇಲಾ
ಲಕ್ಷ್ಯದ ಮ್ಯಾಲಿ ತೊಂಬತ್ತಾರು ಸಾವಿರ ಮೊದಲ ಮಾಡಿದ ಬಸಯ್ಯನೋ
ಇಷ್ಟು ಜಂಗಮರಿಗೆಲ್ಲ ಉಟ್ಟಮಡಿಯ ತಂದು ಬಿಚ್ಚಿ ಉಡಿಸ್ಯಾನೋ
ಬಸವಯ್ಯನೋ"[೩೨]

"ಹೆಣ್ಣು ಬಳಗದಾಗ ಹೆಚ್ಚಿನ ಗರತಿ ಹೇಳುವೇನೋ
ಮಹಿಮಾ ಧರಣಿಯಾ ಮೇಲೆ ಶಿವಶರಣೆ ಅನಿಸಿದಳು
ಹೇಮಾರೆಡ್ಡಿ ಮಲ್ಲಮ್ಮ"[೩೩]

ಹೀಗೆ ಹನ್ನೆರಡನೆಯ ತಮಾನದ ಶಿವಶರಣರ ಕುರಿತ ಹಾಡುಗಳು ಭಕ್ತಿ ಪುರುಷರ ಮತ್ತು ಪಾತಿವ್ರತವನ್ನು ಮೆರೆದೆ ಮಹಿಳೆಯರ ಹಾಡುಗಳು ಡೊಳ್ಳಿನ ಹಾಡುಗಳಲ್ಲಿವೆ. ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಭಾರತ ದೇಶದ ರಕ್ಷಣೆಗಾಗಿ ಹೋರಾಡಿದ ವ್ಯಕ್ತಿಯ ಹಾಡುಗಳು ಇವೆ.

ಕಿತ್ತೂರ ನಾಡಿನ ಕೀರ್ತಿ ವಳದಿತೊ ಸುತ್ತನಾಡ ತಾನಾ
ಚನ್ನಮ್ಮ ರಾಣಿಗಿ ಬಲಗೈ ಬಂಟಾ ಸಂಗೊಳ್ಳಿ ರಾಯಣ್ಣಾ
ಬ್ರಿಟಿಷರು ಬಂದು ಮುತ್ತಿಗಿ ಹಾಕ್ಯಾರ ಆಯಿತು ಸ್ವಾಧೀನಾ
ಬಂಧಿಖಾನಿ ಒಳಗ ಒದ್ದು ಹಾಕ್ಸಾರೊ ಚನ್ನಮ್ಮ ರಾಣೆನ್ನಾ

ವೈದಿಕ ಧರ್ಮದ ಹಾಗೂ ಲಿಖಿತ ಪುರಾಣಗಳ ಸಾಹಿತ್ಯದ ಪ್ರಭಾವ ಭಾರತದ ಜನಪದದ ಮೇಲೆ ಬೇರೆ ಬೇರೆ ವಿಧಾನಗಳಲ್ಲಿ ಆಗಿದೆ. ಡೊಳ್ಳಿನ ಹಾಡುಗಳು ಇದಕ್ಕೆ ಹೊರತಾಗಿಲ್ಲ. ಇಲ್ಲಿ ಲಿಖಿತ ಪುರಾಣಗಳು ಮೇಲುಗೈ ಪಡೆದಿವೆ. ಆ ವಸ್ತುಗಳ್ನು ಅವರು ಇತಿಹಾಸ ವರ್ತಮಾನಗಳಿಂದಲೂ ಪಡೆದುಕೊಳ್ಳುತ್ತಾರೆ. ಸಮುದಾಯದ ಕಥನಗಳಲ್ಲಿ "ಜಾಗತಿಕವಾದುದನ್ನು ನೆರೆಮನೆಯ ಕಥೆಯಂತೆ ಸ್ಥಳೀಕರಿಸುವುದು ಸಮುದಾಯಗಳ ಸೃಜನಶೀಲತೆಯ ಯಾವತ್ತಿನ ಅಭ್ಯಾಸ. ರಾಮಸೀತೆಯರು ಕುಂತಿ ಪಾಂಡವರು ನಾಡಿನ ಹಳ್ಳಗಳಲ್ಲಿ ಮೈತೊಳೆದು ಗುಡ್ಡಬೆಟ್ಟಗಳಲ್ಲಿ ಅಡಿಗೆ ಮಾಡಿ ಉಂಡಿರುವುದನ್ನು ಕಲ್ಪಿಸಿಕೊಂಡಿರುವ ಸಮುದಾಯಗಳಿವೆ. ಹಸನ-ಹಸನರನ್ನು ಇವ ನಮ್ಮವ ಮಾಡಿಕೊಳ್ಳುವುದು ಕಷ್ಟವಲ್ಲ. ಸ್ಥಳೀಕರಿಸುವ ಈ ಗುಣದಿಂದ ಪುರಾಣಗಳು ಸಂಕರಗೊಳ್ಳುತ್ತವೆ".[೩೪] ಆದರೆ ಇಲ್ಲಿ ಪೌರಾಣಿಕ ವಲಯದಿಂದ ಅದ್ಭುತ ರಮ್ಯ ಪ್ರಪಂಚದಲ್ಲಿ ಹೊರನಿಂತು ಸಾಮಾನ್ಯ ಬದುಕಿಗೆ ಸಮೀಪ ನಂಟನ್ನು ಸಾಧಿಸಿಕೊಂಡಿರುವ ರಚನೆಗಳೇ ಹೆಚ್ಚಿವೆ. ಆ ಕಾರಣಕ್ಕಾಗಿ ಆಕರ್ಷಕ ಘಟನೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆಕರ್ಷಕ ಘಟನೆಗಳಿಗೆ ವಾಸ್ತವತೆಯನ್ನು, ಪ್ರಸ್ತುತ ಸಂದರ್ಭದ ಘಟನೆಗಳನ್ನು ಬೆರೆಸುವ ತಂತ್ರಗಾರಿಕೆ ಗಮನಸೆಳೆಯುತ್ತದೆ. ಆ ಮುಖಾಂತರ ಪುರಾಣಗಳು ಡೊಳ್ಳಿನ ಹಾಡುಗಾರರ ಪ್ರತಿಭೆಯಿಂದ ವಿಶಿಷ್ಟ ರೀತಿಯಲ್ಲಿ ಮರುಹುಟ್ಟು ಪಡೆಯುತ್ತ ಜೀವಂತವಾಗುತ್ತಿವೆ. ಇಂತಹ ಹಾಡುಗಳನ್ನು ಹಾಡುವುದರಿಂದ ಡೊಳ್ಳಿನ ಹಾಡುಗಳು ಕುಲದ ಗಡಿಯನ್ನು ದಾಟಿದವು. ಸಾರ್ವತ್ರೀಕರಣ ವಾದವು. ಜನಪ್ರಿಯವಾದವು ಹಾಗೂ ಬದಕುವ ಅಥವಾ ಜನಸಾಮಾನ್ಯರಲ್ಲಿ ಸದಾ ಜೀವಂತವಾಗಿರುವ ಆಯಾಮವನ್ನು ಪಡೆದುಕೊಂಡವು.

೩.೩.೬. ನೀತಿ ಹಾಡುಗಳು

ಜನಪದ ಸಾಹಿತ್ಯವೂ ಸೇರಿದಂತೆ ಎಲ್ಲ ಘಟ್ಟಗಳ ಸಾಹಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ಜನತೆಯ ನೈತಿಕ ಪುರೋಭಿವೃದ್ಧಿಗೆ ಶ್ರಮಿಸುತ್ತಲೇ ಬಂದಿದೆ. ಡೊಳ್ಳಿನ ಹಾಡುಗಳು ನೀತಿ ಹೇಳುವ ವಿಧಾನ ಭಿನ್ನವಾಗಿದೆ. ಇವುಗಳು ಯಾವುದನ್ನು ನೇರವಾಗಿ ಹೇಳುವುದಿಲ್ಲ. ಹೇಳಬೇಕಾದುದನ್ನು ಘಟನಾ ಪ್ರಧಾನವಾಗಿ ಕಥೆಗಳ ಮೂಲಕವೂ, ಗೇಯಾತ್ಮಕ ಹಾಡುಗಳ ಮೂಲಕವೂ ಪ್ರಸ್ತುತ ಸಂದರ್ಭದಲ್ಲಿ ನಡೆಯುವ ಘಟನೆಗಳೊಂದಿಗೆ ಹೋಲಿಕೆ ಮಾಡಿ ಹೇಳಲಾಗುತ್ತದೆ.

> "ಜಾತ ನೀತಿ ಜಯರಾಮ ಚೋಲೋ
> ನೀತಿಲೇ ನಡೆದರೆ ಮಾರ್ಗ ಚೋಲೋ
> ನೀತಿ ತಪ್ಪಿ ನಡದವನ ಸಂಗತಿ
> ಪ್ರೀತಿಲಿದ್ದ ಬಿಡೋದು ಚೋಲೋ"[೨೫]

ಜಾತಿ ಮತ ಧರ್ಮಗಳನ್ನು ಮೀರಿ ನಿಲ್ಲಬೇಕೆನ್ನುವುದು ಇವರ ವಾದ. ಜಾತಿ ಮತವನ್ನು ಮೀರುವ ಮನಸ್ಸಿನ ಜನರು ಇಲ್ಲಿರುವುದರಿಂದ ಸಮಾಜದಲ್ಲಿ ಭಾವೈಕ್ಯತೆಗೆ ಸ್ಥಾನವಿದೆ. ಇವರು ಮಿತ್ರತ್ವದ ಗುಣಕ್ಕೆ ಬಹಳ ಒತ್ತುಕೊಡುತ್ತಾರೆ. ಮಿತ್ರತ್ವ ನೀತಿಯಿಂದಲೇ ಕೂಡಿರಬೇಕು ಎನ್ನುವುದು ಇವರ ಬದ್ಧತೆ. ನೀತಿ ತಪ್ಪಿದ ಮಿತ್ರತ್ವ ಮಿತ್ರತ್ವವೇ ಅಲ್ಲ. ಅಂಥವರ ಜೊತೆ ಇರುವುದು ಅಪರಾಧ. ಅಂಥವರನ್ನು ಪ್ರೀತಿಯಿಂದಲೇ ಕೈಬಿಟ್ಟು ಬಿಡಬೇಕು. ನೀತಿ ಇದ್ದ ವ್ಯಕ್ತಿಯ ಜೊತೆ ದುಡ್ಡು ಕೊಟ್ಟಾದರು ಸ್ನೇಹ ಬೆಳಸಬೇಕು ಎನ್ನುವ ವಿಧಾನ ಭಿನ್ನವಾದುದು. ಇದು 'ಗುಣ ನೋಡಿ ಗೆಳೆತನ ಮಾಡು' ಎನ್ನುವ ಗಾದೆಯನ್ನು ನೆನಪಿಸುತ್ತದೆ.

> "ಸಾಧು ಸಂತರಿಗೆ ಬುದ್ಧಿವಂತರಿಗೆ ದುಡ್ಡುಕೊಟ್ಟು ಮಾಡಬೇಕ್ರಿ ಗೆಳೆತಾನ
> ನೀಚರ ಪಟಿಂಗರ ಸೋಬತಿ ಮಾಡಿ ಕಳಕ ಬ್ಯಾಡರಿ ನಿಮ್ಮ ಮಾನ"[೨೬]

ಮಿತ್ರರ ಬಳಗದಲ್ಲಿ ನಡೆಯುವ ಸೂಳೆಗಾರಿಕೆ, ಧೂಮಪಾನ, ಮಧ್ಯಪಾನ ಮುಂತಾದ ಚರ್ಚೆಗಳ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತಾರೆ.

> "ಕುಡಿಯುವ ಮಂದಿ ಹೆಚ್ಚೊ ಊರಾಗ
> ನಿಮ್ಮ ದೋಸ್ತಿ ಬಾಳೋ ಅದರಾಗ
> ಹೋಗಿ ಹೊತ್ತೊ ಅಂಗಡ್ಯಾಗ
> ಕುಂತ ಕುಡದೆಲ್ಲೊ ಕೂಲ್ಯಾಗ
> ನಶೆ ಆತೊ ಬಾರಾದಾಗ
> ಕಿಸೆ ಹೊಡದೊ ಸರಕಲದಾಗ"[೨೭]

ಕುಡಿತದಿಂದಾಗುವ ಘಟನೆಗಳನ್ನು ವಿವರವಾಗಿ ಮನಮುಟ್ಟುವಂತೆ ಹೇಳುತ್ತಾರೆ. ದುಷ್ಟ ಚಟಗಳ ಪರಿಣಾಮ, ಪರಸ್ತ್ರೀ ವ್ಯಾಮೋಹ, ಜಿಪುಣತನ, ಅಪ್ರಾಮಾಣಿಕತೆ, ಆತ್ಮವಂಚನೆ, ಕೃತಕ ಪ್ರೀತಿ, ಅಮಾನವೀಯತೆಗಳಂತಹ ವಸ್ತು ವೈವಿಧ್ಯಗಳನ್ನು ಹೇಳುವ ಡೊಳ್ಳಿನ ಹಾಡುಗಳ ಅನುಭವ ಲೋಕ ವಿಶಿಷ್ಟವಾದುದು.

ಡೊಳ್ಳಿನ ಹಾಡುಗಳು ಹೆಣ್ಣಿಗೆ ಹೇಳುವ ನೀತಿಯ ವಿಧಾನ ಸಹ್ಯ ಆದುದೆಲ್ಲವೆನಿಸುತ್ತದೆ. ಇವರು ಆಕೆಯ ಪಾವಿತ್ರತೆಯ ಬಗ್ಗೆ ಹೆಚ್ಚು ಆದ್ಯತೆ ಕೊಟ್ಟಿದ್ದಾರೆ. ಮಹಿಳೆ ಆಸೆ ಬುರುಕಿ, ಇನ್ನೊಬ್ಬರ ಮಾತನ್ನು ಕೇಳುವವಳು ತನ್ನ ಕೆಲಸಗಳಿಗಾಗಿ ಯಾರನ್ನಾದರು ಬಲಿಕೊಡುವುದಕ್ಕೆ ಹಿಂಜರಿಯದವಳು ಎನ್ನುವ ಅನುಮಾನಗಳು ಇವರಲ್ಲಿ ತೀವ್ರವಾಗಿ ಕಾಡಿವೆ. ಈ ಹಾಡುಗಾರರು ಮಹಿಳೆಯರನ್ನು ಅನುಮಾನದಿಂದ ನೋಡಿರುವುದೇ ಹೆಚ್ಚು.

“ಹೆಣ್ಣು ಮಕ್ಕಳಿಗೆಲ್ಲ ನಾನು ಸಣ್ಣವನಾಗಿ ಹೇಳ್ತೀನಿ
ಮುತ್ತಿನಂಥ ಮಾತೊಂದು ಹೇಳತೀನಿ
ನೀತಿ ಮಾರ್ಗ ಮುಂದಿನ ಹಾದಿಗಿ ||ಪ||

ವಯಸ್ಸಿನ ಬೆನ್ನ ಹತ್ತಿ ನೀವು ಬಡಿಯಾರ ಮಾಡಾಕ ಹ್ವಾದರ
ಹೋಗಿ ಬೀಳಿತೀರಿ ತಿರಗದ ಬಾವಿಯೊಳಗ”[೩೮]

“ರಾಮದೇವರ ಹೆಂಡತಿ ತಾನೆ ಸೀತಾದೇವಿ
ಪತಿಲಿಂದ ಪಡದಾಳೊ ಸಂಪತ್ತಾ
ಗಂಡ ಗಂಜದ ಮಿಂಡ ರಂಡ್ಯಾರ
ಹಿಂಡಗಟ್ಟಿ ತಿರುಗುವರೊ ಪೂರಾ”[೩೯]

ಮಹಿಳೆಯಾದವಳು ಪತಿಸೇವೆ, ತ್ಯಾಗಿ ಆಸೆ ಪಡೆದವಳು ಆಗಬೇಕು ಎನ್ನುವುದೇ ಇಲ್ಲಿನ ನೀತಿಯಾಗಿದೆ. ಈ ತತ್ವವನ್ನು ಹೇಳುವುದಕ್ಕಾಗಿಯೇ “ಶಿವಶರಣೆ ನಿಂಬೆಕ್ಕ, ಪತಿರಾಯಿಣಿ ಪದ್ಮಾದೇವಿ”, “ಅನುಲಾಯಿ ಚರಿತ್ರೆ, ನಂಬಿಯಕ್ಕನ ಚರಿತ್ರೆ” ಮುಂತಾದ ಪೌರಾಣಿಕ ಹಾಡುಗಳನ್ನು ಮಾಡಲಾಗಿದೆ. ಈ ಮಾತುಗಳು ಕೇವಲ ಹೆಣ್ಣನ್ನು ಸಂಬೋಧಿಸಿ ಹೇಳಿದ್ದರೂ ಅದು ಕೇವಲ ಹೆಣ್ಣಿಗಾಗಿ ಸೀಮಿತ ವಾದುದಲ್ಲ. ಅದು ಸರ್ವರಿಗೂ ಅನ್ವಯಿಸುತ್ತದೆ.

ಡೊಳ್ಳಿನ ಹಾಡುಗಳಲ್ಲಿ ದೈವಗಳಿಗಿಂತ ಕಲಿಸಿದ ಗುರುವಿಗೆ ಹೆಚ್ಚು ಆದ್ಯತೆ ದೊರಕಿದೆ. ಕಲಿಸಿದ ಗುರುವನ್ನು ಮರೆಯಬಾರದು ಎನ್ನುವುದು ಇವರ ತತ್ವ. ಅಂತಹ ಗುರುವನ್ನು ಮರೆತರೆ, ದೂರಿದರೆ ಒಳಿತಾಗುವುದಿಲ್ಲವೆನ್ನುತ್ತಾರೆ. ‘ಗುರುವಿನ ಗುಲಾಮನಾಗುವ ತನಕ ದೊರೆಯದನ್ನ ಮುಕುತಿ’ ಎನ್ನುವ ಸಿದ್ಧಾಂತಕ್ಕೆ ಬದ್ಧರಾಗುವ ವೈಧಾನಿಕತೆ ಇದು. ಅಲ್ಲದೆ ತಮಗಿಷ್ಟ ಬಂದಂತೆ ಹಾಡುಗಳನ್ನು ಹಾಡುವ ಹಾಡಗಾರರನ್ನು ಇವರು ಸಹಿಸುವುದಿಲ್ಲ.

“ಕತ್ತಿಯಂಗ ಹಾಡಬ್ಯಾಡೊ ಕುಣಿದ್ಯಾಡಿ ಸುಮ್ನೆ ಕೂಗ್ಯಾಡಿ
ಸಿದ್ಧರ ಹಾಡ ಸುದ್ದಾಗಿ ಹಾಡೋ ಮಳ್ಳಕೋಡಿ”[೪೦]
“ಬಾರದ ಮಾತಿಗೆ ಬಡದಾಡ ಬ್ಯಾಡರಿ
ಸರಸವಾಗಿ ಹಾಡುದ ಲೇಸಾ
ಹರುಷದಿಂದ ಹಾರ್‍ಯಾಡಿ ಹಾಡೋನು
ಹಾಡಿದರ ಸಭಾ ಆಗಬೇಕಾ ಸಂತೋಷ
ನಾನೆಂಬ ಅಹಂಕಾರ ಮಾಡಬಾರದಿಲ್ಲಿ
ಅಹಂಕಾರ ಒಳ್ಳೆಯದಲ್ಲ ಸಭೆಯಲ್ಲಿ
ದೈವ ಕುಳಿತಿರಿ ಕೇಳುತಲಿ”[೪೧]

ಕಲೆ ಇರುವುದು ವ್ಯಕ್ತಿಗತ ಸಾಧನೆಗಳನ್ನು ಉಳಿಸಿಕೊಳ್ಳುವುದಕ್ಕೆ ಅಲ್ಲ. ಸಮಾಜಕ್ಕೆ ಜ್ಞಾನವನ್ನು ಕೊಡುವುದಕ್ಕೆ ಎನ್ನುವ ಪ್ರಜ್ಞೆ ಇವರಲ್ಲಿದೆ. ಕಲೆ ಕಲೆಗಾಗಿ ಎನ್ನುವ ತತ್ವಕ್ಕೆ ಬದ್ಧರಾಗುವ ಗುಣವಿದು.

ಇವರಲ್ಲಿ ವ್ಯಕ್ತವಾಗುವ ಲೋಕದ ಬಗೆಗಿನ ಕಾಳಜಿ ಅಪಾರವಾದುದು. ಇದು ಹಾಡುಗಾರನಲ್ಲಿರುವ ಸಾಮಾಜಿಕ ಜವಾಬ್ದಾರಿಯನ್ನು ತಿಳಿಸುತ್ತದೆ. ನೀರಸ ಉಪದೇಶಕ್ಕಿಂತ ಉಪದೇಶಾತ್ಮಕವಾದ ಹಾಡು ಬಹುಬೇಗ ಜನರಿಗೆ ತಲುಪುತ್ತವೆ. ಈ ಹಾಡುಗಳು ಸಮುದಾಯದ ಬದುಕನ್ನು ಒಂದು ಸುಸ್ಥಿತಿಯಲ್ಲಿ ಮುನ್ನಡೆಸಲು ಪ್ರಯತ್ನಿಸುತ್ತಿವೆ.

೩.೩.೨. ಪಂಥಗಳ ಹಾಡುಗಳು

ಡೊಳ್ಳಿನ ಹಾಡುಗಳಲ್ಲಿ 'ವಾದ' ಮತ್ತು 'ಪ್ರತಿವಾದ'ದ ಹಾಡುಗಳಿವೆ. ಪ್ರದರ್ಶನದಲ್ಲಿ ಎರಡು ತಂಡಗಳ ನಡುವೆ ನಡೆಯುವ ಸಂವಾದದಂತೆ ಈ ಹಾಡುಗಳು ಅಭಿವ್ಯಕ್ತಿಗೊಳ್ಳುತ್ತವೆ. ಒಂದು ತಂಡದವರು 'ಹೆಣ್ಣು ಹೆಚ್ಚು' ಎಂದರೆ ಮತ್ತೊಂದು ತಂಡದವರು ಗಂಡು ಹೆಚ್ಚು' ಎನ್ನುತ್ತಾರೆ. ಒಂದು ತಂಡದವರು ಮಾಳಿಂಗರಾಯ, ಬೀರಪ್ಪ ಮುಂತಾದ ಭಂಡಾರ ದೈವಗಳು ಹೆಚ್ಚು ಎಂದರೆ ಮತ್ತೊಂದು ತಂಡದವರು ಅಮೋಘಸಿದ್ಧ ಮುಂತಾದ ದೈವಗಳು ಹೆಚ್ಚು ಎನ್ನುತ್ತಾರೆ. ದೈವಗಳು 'ಹೆಚ್ಚು', 'ಕಮ್ಮಿ' ಎನ್ನುವ ವಾದ 'ಹಾಲುಮತ' ಮತ್ತು 'ಶೀಲವಂತ' ಎನ್ನುವ ಅರ್ಥವನ್ನು ಪಡೆದುಕೊಂಡು ಪ್ರದರ್ಶನಗೊಳ್ಳುತ್ತಿದೆ. ಈ ಎಲ್ಲಾ ವಾದಗಳಿಗೆ ದೈವಗಳ ಚಾರಿತ್ರಿಕ ಕಥನಗಳು ಬಳಕೆ ಆಗುತ್ತಿವೆ. ಇದು ಹರದೇಶಿ-ನಾಗೇಶಿಯ ಸ್ವರೂಪದ್ದು. ಆದರೆ ಹರದೇಶಿ-ನಾಗೇಶಿ ಅಲ್ಲ. ಈ ಸಾಹಿತ್ಯದ ಪ್ರಭಾವದಿಂದ ಬಂದಿರಲೂ ಸಾಧ್ಯವಿದೆ. ಆದರೆ ಖಚಿತವಲ್ಲ. ಹರದೇಶಿ ನಾಗೇಶಿಯಲ್ಲಿ ಹೆಣ್ಣು ಹೆಚ್ಚು ಎಂದು ವಾದ ಮಾಡುವವಳು ಮಹಿಳೆ ಆಗಿದ್ದರೆ, ಗಂಡು ಹೆಚ್ಚು ಎಂದು ವಾದ ಮಾಡುವವಳು ಗಂಡು ಆಗಿರುತ್ತಾನೆ. ಡೊಳ್ಳಿನ ಹಾಡುಗಳಲ್ಲಿ ಈ ಎರಡೂ ಪ್ರಕಾರಗಳನ್ನು 'ಗಂಡಸು' ಹಾಡುತ್ತಾನೆ. ಹರದೇಶಿ ನಾಗೇಶಿಯಲ್ಲಿ ಕುಲಗಳ ಪ್ರತಿಪಾದನೆ ಇಲ್ಲ. ಇಲ್ಲಿ ಕುಲಗಳ ಪ್ರತಿಪಾದನೆ ಇದೆ. ಇತ್ತೀಚೆಗೆ ಡೊಳ್ಳಿನ ಹಾಡುಗಳಿಗೂ ಪ್ರವೇಶ ಪಡೆದಿದೆ. ಆದರೆ ಹೆಣ್ಣು-ಗಂಡು ಹೆಚ್ಚು ಎನ್ನುವ ಹಾಡುಗಳನ್ನು ಮಹಿಳೆಯರು ಹಾಡುವುದು ತುಂಬಾ ಕಡಿಮೆ. ಕೇವಲ ಎರಡು ಮೂರು ತಂಡಗಳ ಮಹಿಳೆಯರು ಈ ತರದ ಹಾಡುಗಳನ್ನು ಹಾಡುತ್ತಿದ್ದಾರೆ. ಇವರು ೪೫ಕ್ಕಿಂತ ಹೆಚ್ಚು ವಯಸ್ಸಿನವರು. ಕೇವಲ ಆದರೆ ಹಿರಿಯ ವಯಸ್ಸಿನ ಹಾಡುಗಾರ್ತಿಯರು ಹಾಡಲು ಈ ತರದ ಹಾಡುಗಳಲ್ಲಿ ಹಾಡುವುದಕ್ಕೆ ಮುಂದಾಗುತ್ತಿದ್ದಾರೆ. ಕಿರಿಯ ಹಾಡುಗಾರ್ತಿಯರು ಒಪ್ಪುವುದಿಲ್ಲ. ಈ ಹಾಡುಗಳನ್ನು 'ಹೆಣ್ಣನ್ನು ತೆಗಳುವ ಉದ್ದೇಶವಿರುವುದರಿಂದ ನಮ್ಮ ಮಕ್ಕಳನ್ನು ಕಳಿಸೊಲ್ಲರಿ' ಎಂದು ಪ್ರಸಿದ್ಧ ಹಾಡುಗಾರ್ತಿಯರಾದ ರೇಣುಕ ಮತ್ತು ಮೀನಾಕ್ಷಿರವರು ತಂದೆ ನಾಗರಾಜರವರು ಹೇಳುತ್ತಾರೆ. ಚಿಕ್ಕಮಕ್ಕಳನ್ನು ಕರೆದುಕೊಂಡು ಸ್ವತಃ ಪುರುಷರು ಹಾಡುವುದಕ್ಕೆ ಇಷ್ಟಪಡುತ್ತಿಲ್ಲ. ಸಂಕನಾಳ್ ಗುರುಲಿಂಗ ಅವರ ಮಾತುಗಳನ್ನು ನೆನಪಿಸಿಕೊಳ್ಳಬೇಕು. "ಇಲ್ಲಿ ಹಾಡೋ ಹೆಣ್ಣುಮಕ್ಕಳು ಸಣ್ಣಾರು ಅದಾರಿ. ಈ ಹಾಡುಗಳು ಅವರ ಮ್ಯಾಲ ಬಾಳ ಪರಿಣಾಮ ಬೀರ್ತದ. ಗಂಡಸು ಹೆಂಗಸಿನ

ಬೈಯುವಾಗ ಹುಡುಗರ, ಕೇಕೆ ಹಾಕ್ತರೀ, ಅವಮಾನ ಮಾಡ್ತಾರಿ. ಹಾಗಾಗಿ ಹಾಡೋದು ಒಳ್ಳೆಯ ದಲ್ಲರೀ" ಎನ್ನುತ್ತಾರೆ. ಆದರೆ ಹಾಲುಮತ ಮತ್ತು ಶೀಲಮತ ಹೆಚ್ಚು ಎನ್ನುವ ಹಾಡುಗಳನ್ನು ಎಲ್ಲಾ ಹಾಡುಗಾರ್ತಿಯರು ಹಾಡುತ್ತಾರೆ.

"ಹಣ್ಣ ಹೆಚ್ಚಂತ ಬಣ್ಣಿಸಿ ಹೇಳಬ್ಯಾಡ
ಮಾನ್‌ಕಮ್ ಶ್ವಾನಿನ ಜಾತಿ | ನಿಮ್ಮ ಶಕ್ತಿ
ಆಗ್ಯಾಳ ಚಿಂಪ್ಯಾಗಿನ ಸೋಪ್ತಿ
ದ್ರೌಪದಿ ಕರ್ಣನ ಮ್ಯಾಲೆ ಮನಸಮಾಡಿ ತಿಳಿದಿಲ್ಲ
ಹೆಂಗಸರ ಮನೋಗತಿ | ಸುಭದ್ರಾಗ ನಾಚಿಕೆ ಎಲ್ಲೈತಿ
ಸನ್ಯಾಸಿ ಅರ್ಜುನನ ಮೋಸ ಮಾಡಿದಾಳ
ಮುಂದ ಕೇಳರಿ ಕೃಷ್ಣನ ಕಥಿ | ರುಕ್ಮಿಣಿ
ಹ್ವಾದಾಳ ಕೃಷ್ಣನ ಬೆನ್ನ ಹತ್ತಿ
ಸೋಳಾ ಸಾವಿರ ಗೋಪಿಕಾ ಸ್ತ್ರೀಯರು ಹ್ವಾದಾರ
ಕೃಷ್ಣನ ಬೆನ್ನ ಹತ್ತಿ | ಹೆಣ್ಣ ಹೆಚ್ಚ ಅಂತ
ಸುಳ್ಳ ನೀ ಪದ ಹಾಕತಿ"[೪೨]

ಎಂದು ಹಾಡಿದಾಗ ಇದಕ್ಕೆ ವಿರುದ್ಧವಾಗಿ ಅರ್ಜುನ, ಕೃಷ್ಣ ಮುಂತಾದ ಪುರುಷರ ನ್ಯೂನತೆಗಳನ್ನು ಗುರುತಿಸುವ ಹಾಡುಗಳು ಗಮನ ಸೆಳೆಯುತ್ತವೆ. ಆ ಮುಖಾಂತರ ಪುರುಷರ ಮತ್ತು ಪುರುಷ ದೈವಗಳ ನ್ಯೂನತೆಗಳನ್ನು ಬಯಲಿಗೆಳೆಯುವದರ ಮುಖಾಂತರ ಕೌಟುಂಬಿಕ ಜೀವನದಲ್ಲಿ ಹೆಣ್ಣು ಶ್ರೇಷ್ಠವೆಂದು ಹೇಳುತ್ತಾರೆ. ಮತ್ತೊಂದು ತಂಡ ಗಂಡನಿಲ್ಲದೇ ಹೇಗೆ ಶ್ರೇಷ್ಠವಾದಳು ಎಂಬ ವಾದ ಮಾಡುತ್ತದೆ. ಈ ವಾದ ಹೀಗೆ ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಾ ಹೋಗುತ್ತದೆ. ದೈವಗಳಿಗೆ ಅನ್ವಯಿಸಿ ಹಾಡುವ ತಂತ್ರ ಗಮನಸೆಳೆಯುತ್ತದೆ. 'ಶಿವನಿಗೆ ದೊಡ್ಡವನ್ಯಾರು' ಎನ್ನುವ ಹಾಡನ್ನು ನೋಡಬಹುದು.

"ಬಸವಣ್ಣನಿಗಿಂತ ಬಲ್ಲಿದನಿಲ್ಲ ಶಿವನಿಗೆ ದೊಡ್ಡವನ್ಯಾರು
ಬಸವಣ್ಣ ನಿನ್ನ ಪಾದದ ಬುಡಕ ಪಾತಾಳ ಗಂಗೊಂದು ಐತೆ
ಬಸವಣ್ಣ ಬಲ್ಲಿದನಲ್ಲ ಶಿವನಿಗಿಂತ ಇನ್ಯಾರಿಲ್ಲ
ಬಸವಣ್ಣ ನಿನ್ನ ಚಿಟಗೊಳ್ಳಾದ ಮ್ಯಾಲೆ ಚಟ್ಟಾಗಿ ರಾಜ ಇದಾನ
ಬಸವಣ್ಣ ನಿನ್ನ ಗಂಗೆದೊಗಲಿನಾಗೆ ಗಂಗವ್ವ ಗೌರವ್ವ ಇದಾರ"[೪೩]

ಶಿವನೆಚ್ಚೋ ಪಾರ್ವತಿ ಹೆಚ್ಚೋ ಎನ್ನುವ ಪರಿಕಲ್ಪನೆಯಿಂದ ಈ ಹಾಡು ಸೃಷ್ಟಿಯಾಗಿದೆ. ಇಂತಹ ಡೊಳ್ಳಿನ ಹಾಡುಗಳಲ್ಲಿ ಹಲವು ಪಂಥಗಳ ಬಳಕೆ ಇದೆ. ಮುಖ್ಯವಾಗಿ ಇಲ್ಲಿ 'ಸಿದ್ಧ' ಹಾಗೂ ಶಾಕ್ತಪಂಥಗಳದ್ದು. ಶಿವ ಶಕ್ತಿಯರ ನಾಟಕೀಯ ಮುಖಾಮುಖಿ ಇದು. ಹೆಣ್ಣು ಹೆಚ್ಚು ಎನ್ನುವುದು 'ಶಾಕ್ತ' ಪಂಥದ್ದು. ಲೌಖಿಕ ವಾದಿಯಾದದು. ಗಂಡು ಹೆಚ್ಚು ಎನ್ನುವುದು 'ಶೈವಸಿದ್ಧ' ಪಂಥದ್ದು. ಶಿವನ ಪರವಾದದು. ಯೋಗಪರವಾದದು. ಮಹಿಳಾ ಸಾಂಸ್ಕೃತಿಕ ವೀರಣೆಯರು ಯೋಗ ಸಿದ್ಧಿಯನ್ನು ವಿರೋಧಿಸುವ ಹಲವು ಡೊಳ್ಳಿನ ಹಾಡುಗಳು ಸಿಗುತ್ತವೆ. ಇವುಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕು.

ಡೊಳ್ಳಿನ ಹಾಡುಗಳನ್ನು ಹೆಚ್ಚಾಗಿ ಪೂಜಾರಿಗಳು ಹಾಡುತ್ತಾರೆ. ಕೆಲವು ಶತಮಾನಗಳಿಂದ ಮುಂಚೆ ಕೇವಲ ಪೂಜಾರಿಗಳು ಮಾತ್ರ ಹಾಡುತ್ತಿದ್ದಾರೆ ಎನ್ನುವ ಅನುಮಾನಗಳು ಬರುತ್ತವೆ. ಖಚಿತವಲ್ಲ. ಇದಕ್ಕೆ ಇನ್ನೂ ಅಧ್ಯಯನಗಳಾಗಬೇಕು. ಈ ಪೂಜಾರಿಗಳು ಬೀರಪ್ಪನ ವಕ್ತಾರರು. ಮಾಳಿಂಗರಾಯನ ಕುಲಕ್ಕೆ ಸೇರಿದವರು. ಸಿರಿಡೋನ ಮತ್ತು ಕೋಣಗನೂರು ಬೀರಪ್ಪನ ಪೂಜಾರಿಗಳಿಂದ 'ದೀಕ್ಷೆ' ತೆಗೆದುಕೊಳ್ಳುತ್ತಾರೆ. ಚಿಕ್ಕಮಂಗಳೂರು, ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿ ಗುರು ರೇವಣಸಿದ್ಧನ ಅನುಯಾಯಿಗಳಾದ ಗುರು ಒಡೆಯರಿಂದ ದೀಕ್ಷೆ ತೆಗೆದುಕೊಳ್ಳುವರು. ಈ ಭಿನ್ನತೆಗಳ ಚರ್ಚೆ ಇಲ್ಲಿ ಅನಾವಶ್ಯಕ. ಶೈವ ಆರಾಧನೆಗಾಗಿ ದೀಕ್ಷೆ ತೆಗೆದುಕೊಳ್ಳುತ್ತಾರೆ ಎನ್ನುವುದು ಪ್ರಮುಖ. ಬೀರಪ್ಪನ ಸೇವೆ ಮಾಡುವುದೇ ಇವರ ಪ್ರಮುಖ ಉದ್ಯೋಗ. ಅಮೋಘಸಿದ್ಧ ಒಡೆಯರು ಇದಕ್ಕೆ ಹೊರತಾಗಿಲ್ಲ. ಇಲ್ಲಿ ಪುರುಷನಿಗೆ ಹೆಚ್ಚು ಅವಕಾಶವಿದೆ. ಹಾಗಾಗಿ 'ಶಿವ' ಹೆಚ್ಚು ಎನ್ನುವ ಹಾಡುಗಳು ಹೆಚ್ಚಾಗಿ ಕಂಡುಬರುತ್ತವೆ. ಜೊತೆಗೆ ಪುರುಷರು ಮಾತ್ರ ಹಾಡುತ್ತಿದ್ದರಿಂದ ಪುರುಷನೇ ಶ್ರೇಷ್ಠ ಎನ್ನುವುದು ಹೆಚ್ಚಾಗಿದೆ. ಇದು ಸಹಜ. ಆದರೆ ಈಗ ಮಹಿಳೆಯರು ಹಾಡುತ್ತಾರಾದರೂ ಪುರುಷರಿಗೆ ಪ್ರತಿರೋಧ ಒಡ್ಡುವ ಹಾಡುಗಳನ್ನು ಹಾಡುತ್ತಿಲ್ಲ.

'ಹಾಲುಮತ', 'ಶೀಲಮತ' ಎನ್ನುವ ಪಂಥಗಳ ವಾದ ಇತ್ತೀಚಿಗೆ ಆರಂಭವಾಗಿದೆ. ಬಂಡವಾಳಶಾಹಿ ವ್ಯವಸ್ಥೆಯ ಪರಿಕಲ್ಪನೆ ಇದು. ಈ ವಾದಗಳ ವಸ್ತು, ಸ್ವರೂಪ, ಮತ್ತು ಶೈಲಿಯ ಚರ್ಚೆಯನ್ನು 'ಆಧುನಿಕತೆ' ಅಧ್ಯಾಯದಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ.

೩.೩.೮. ಸಮಕಾಲೀನ ಹಾಡುಗಳು

ಜಾನಪದವನ್ನು ಸಮಕಾಲೀನಗೊಳಿಸುವುದು ಹೇಗೆ ಎನ್ನುವ ಚಿಂತನೆಗಾಗಿಯೇ 'ಅನ್ವಯಿಕ ಜಾನಪದ'ದಂತಹ ವಿಧಾನಗಳು ಆರಂಭವಾದವು. ನಗರ ಜಾನಪದ, ನವ ಜಾನಪದ ಕಂಪ್ಯೂಟರ್ ಜಾನಪದ ಪರಿಕಲ್ಪನೆಗಳು ಜಾನಪದ ಈಗಲೂ ಜೀವಂತವಾಗಿದೆ, ಸೃಷ್ಟಿಯಾಗುತ್ತಿದೆ ಎನ್ನುವುದನ್ನು ಸಾಬೀತುಪಡಿಸುವುದಕ್ಕಾಗಿಯೇ ಆರಂಭವಾದವು. ಈ ವಿಧಾನಗಳು ಜಾನಪದದ ಪ್ರಸ್ತುತ ಸಂದರ್ಭವನ್ನು ತಿಳಿಯುವುದಕ್ಕಿಂತ ಹೆಚ್ಚಾಗಿ ಆತಂಕದಿಂದ ಸೃಷ್ಟಿಯಾದವು. ಜಾನಪದವನ್ನು ಉಳಿಸಿಕೊಳ್ಳಲು ಕೊಡುವ ವಿದ್ವಾಂಸರ ಸಲಹೆಗಳು ಹೆಚ್ಚಾಗಿ ಆತಂಕದ ಹಿನ್ನೆಲೆಯಲ್ಲಿ ಬಂದಿರುತ್ತವೆ. ವಿದ್ವಾಂಸರ ಸಲಹೆ ಮತ್ತು ಆತಂಕವನ್ನು ಕೇಳಿಕೊಳ್ಳದ ಕಲಾವಿದರು ತಮ್ಮ ಪಾಡಿಗೆ ತಾವು ತಮ್ಮ ಕಾಲಕ್ಕೆ ಬೇಡವಾದುದನ್ನು ಕೈಬಿಟ್ಟು ಬೇಕಾದ್ದನ್ನು ಉಳಿಸಿಕೊಳ್ಳುತ್ತಾರೆ ಮತ್ತು ಸೇರಿಸಿಕೊಳ್ಳುತ್ತಾರೆ. ಇದು ಕಲಾವಿದರಲ್ಲಿ ನಡೆಯುವ ಸಹಜ ಕ್ರಿಯೆ. ಕಳೆದುಕೊಳ್ಳುವ ಆತಂಕದಿಂದ ಮತ್ತು ನಮ್ಮದನ್ನು ಉಳಿಸಿಕೊಳ್ಳಬೇಕು ಎನ್ನುವ ಎಚ್ಚರದಿಂದ ತಯಾರಿಸಿಕೊಂಡಿರುವಂತದಲ್ಲ. ಸಹಜ ಕ್ರಿಯೆಯಿಂದ ಬಂದಿರುವಂತದ್ದು ತನ್ನ ಸುತ್ತಮುತ್ತಲಿನಲ್ಲಿ ನಡೆಯುವ ಘಟನೆಗಳನ್ನು ಸಹಜವಾಗಿ ತನ್ನೊಳಗೆ ಸೇರಿಸಿಕೊಂಡು ಬಿಡುತ್ತದೆ. ಡೊಳ್ಳಿನ ಹಾಡುಗಳಲ್ಲಿ ಈ ವಿಧಾನ ಪ್ರಧಾನವಾಗಿ ಕಂಡುಬರುತ್ತದೆ.

ದಿನಾಂಕ ೨೩.೦೧.೯೫ರಲ್ಲಿ ಬಿಜಾಪುರ ಜಿಲ್ಲೆ ಬೀಳಗಿ ತಾಲೂಕಿನ ಕಂಬರಾಳ್ ಗ್ರಾಮದ ಮುಂದೆ ನಡೆದ 'ದೋಣಿ ದುರಂತ'ದಲ್ಲಿ ಸತ್ತವರ ಘಟನೆಯನ್ನು ತಿಳಿಸುವ ಹಾಡನ್ನು ನೋಡಬಹುದು.

ಸುಳ್ಳಲ್ಲಾ ಮಾತs ಕೇಳಿರಿ ಕುಂತ
ಗಲ್ಲಬಲ್ಲ ಮಾಡಬ್ಯಾಡರಿ ದೈವ
ಕೃಷ್ಣಾನದಿ ದಂಡಿ ಮ್ಯಾಲ ಕಂಬದಾಳ ಊರಾಗ
ಆಗೇತ್ರಿ ಈ ಮಾತ ||ಪ||

ಜಡ್ರಾಮ ಕುಂಟಿಯೊಳಗ ಅಕತಾಡಿ ಮಲ್ಲಪ್ಪ
ಪ್ರಾಣ ಬಿಟ್ಟಾರ್ರಿ ಮಂದಿ ಮಕ್ಕಳಿಗಿ ಹೇಳಿ ಕಳಿಸ್ಯಾರರೀ
ನಡೆಗಡ್ಡಿ ನಿಂಗಾಪೂರ ಚಿನವಾಲ ಮಂದಿ
ನೆರೆದಿತ್ತರಿ ಹೊಳೆಯ ದಂಡಿಗಿ
ಭರಪೂರಿ ಸಂಜೆ ಆರುಘಂಟೆಯಾಗಿತ್ತಿರಿ ||೧||

ಕೃಷ್ಣಾನದಿ ಘಟಪ್ರಭಾ ನದಿ ಕೂಡಿ ಆಡ್ಯಾವರಿ
ಎರಡು ದಂಡಿ ಸೊಸಿ ನಾವ ಆಡಾವರು
ಮುದ್ದಪ್ಪ ವಿಠಲ ನಾವಿಸ್ಯಾಗಿದ್ದವರು
ನಲವತ್ತೈದು ಮಂದಿ ಹಿರೇಮನಸೇರು
ಬ್ಯಾಡೆಂದು ತಿಳಿಸ್ಯಾರರಿ
ಮುದ್ದಪ್ಪ ವಿಠಲ ಹಾಕೊನಂದಾರ ಎಂತ ಹಣೇ ಬರಾರ್ರಿ ||೨||

ಒಟ್ಟು ಮಂದಿನ ನವನ್ಯಾಗ ಹಾಕಿ ತಾವ ಬಿಟ್ಟಾರರಿ
ನವ ನಡುಹೋಳಿಗಿ ಹೋಗಿತ್ತರಿ ತೆರಿ ಹೊಡತಕ
ಜೋಲಿ ಹೊಡದ್ರ ಜನ ಗಾಬರಿಯಾಗಿ ಜೋಲಿಯ ತಿಂದಾರರೀ ||೩||

ಒಬ್ಬರ ಕೊಬ್ಬರು ತೆಕ್ಕಿಮಕ್ಕಿ ಬಿದ್ದಾರ
೨೩.೦೧.೯೫ ಇತ್ತ ಸೋಮವಾರ ಸ್ವರ್ಗ ಕಂಡಾರ ಕುತ್ತ
ಚಿನವಾಲದಾಗ ಸ್ವರ್ಗಕ ಹೋದ್ರ ಹೆಸರು ಸಾರಿ ಹೇಳ್ಯಾವ್ರಿ
ಶ್ಯಾವಕ್ಕೆ ಅಂಗಡಿ ಗಂಡ ಗದ್ದೆಪ್ಪ ಇದ್ದಾನರೀ
ಯಮುನವ್ವ ಹೆಬ್ಬಾಳ ಗಂಡ ಮಾಳಪ್ಪ ಇದ್ದಾನರೀ
ಹೊಳೆಯವ್ವ ಕಿರಸೂರ ಗುಂಡ ಹನುಮಪ್ಪ ಸತಿಪತಿ ಆಗಿದ್ದೀರರಿ[೪೪] ||೪||

ಹೀಗೆ ಹೊಳೆಯಲ್ಲಿ ಮಡಿದ ವ್ಯಕ್ತಿಗಳ ಹೆಸರುಗಳನ್ನು ಮತ್ತು ಸಂಬಂಧಗಳನ್ನು ವಿವರವಾಗಿ ಹಾಡುವುದರ ಮುಖಾಂತರ ಸುದ್ದಿ ತಿಳಿದ ನಂತರ ಪೋಷಕರು; ಸಂಬಂಧಿಕರು ಅನುಭವಿಸಿದ ಯಾತನೆಯನ್ನು ಕಣ್ಣುಂದೆ ಕಟ್ಟಿಕೊಡುತ್ತಾರೆ. ಈ ಹಾಡು ಸಾಮಾಜಿಕ ಕಾಳಜಿಯಿಂದ ಸೃಷ್ಟಿಯಾಗಿದೆ. ಇಂತಹ ಹಾಡುಗಳನ್ನು ಹಾಡುವುದರ ಮುಖಾಂತರ ನೀವು ಇಂತಹ ತಪ್ಪನ್ನು ಮಾಡಬೇಡಿ ಎನ್ನುವ ಎಚ್ಚರವನ್ನು ರವಾನಿಸುತ್ತಾರೆ.

'ಅಲಮಟ್ಟಿ' ಡ್ಯಾಂ ಕಟ್ಟಿದ ನಂತರ ಲಕ್ಷ್ಯಾಂತರ ರೈತರ ಭೂಮಿಗಳು ಮುಳುಗಡೆ ಆದವು. ಅದಕ್ಕಾಗಿ ರೈತರಿಗೆ ಸರಕಾರ ಹಣ ಕೊಟ್ಟಿತು. ಹಣ ಬಂದ ನಂತರ ರೈತರಲ್ಲಾದ ಬದಲಾವಣೆಗಳನ್ನು ಹಾಡುಗಳು ಹೀಗೆ ಕಟ್ಟಿಕೊಡುತ್ತದೆ.

"ಮುಳುಗಡೆ ಅರಬಟಾ ನಡಿತ ನೋಡೋ | ರೊಕ್ಕದ ಚೆಲ್ಲಾಟಾ |
ಚಿಕ್ಕಯ್ಯ ಸ್ವಾಮಿ ಬರೆದಿಟ್ಟಾರ ಹೋಗುದಾತ ಮನಿಮಾರ ಬಿಟಗೊಟ್ಟಾ
ಅಜ್ಜ ಆಯಿ ಆಸ್ತಿಗಳಿಸಿಟ್ರ ರೊಕ್ಕಕೊಟ್ಟಾ | ಕಸಗೊಂತ ಗೋರ್ಮಿಂಟಾ|
ನೋಟ ಬಂದಾವೋ ಕಟಕಟಾ ಎಣಿಕೆ ಮಾಡಿ | ತುಮಕೊಂಡೋ |
ಪಾಕೀಟಾ ಮದಲಿಗಿ ಇತ್ತೋ ಮಂಜರ ಪಾಟಾ | ಅರಬಿ ತೊಗೊಂಡ ಟೆಕಾಟ |
ಟೇಪ್ ಕರಿದಿಗಂತ ಹೊಂಟ ಬ್ರಾಂಡಿ ಅಂಗಡಿ | ಕಂಡಿತ ಮುಕ್ಕಟಾ |
ಬೀರ ಬ್ರಾಂಡಿ ಕುಡದ ಬಂದ ನಿಸ್ಸೆದಾಗ | ತಿರಗತಾನ ತೆಲಿಕೆಟ್ಟಾ |
ಸೂಳ್ಯಾರ ಓಣ್ಯಾಗ ಹೊಂಟ ನಿಸೆದಾಗ | ಒದ್ದ ಕಸಗೊಂಡ್ರೊ ಗಂಟಾ |
ಕಿಸೆ ಕಾಲಿಯಾಗಿ ಮನೀ ಹೋದ ಹೊಡಮಳಿ | ತುಮಕೊಂಡಾ ಪಾಕೀಟಾ |
ಕೊಕ್ಕ ಇದ್ದು ಸಾಕಷ್ಟು ತೆಲಿಯಾಗ ಬಂತೊ | ಆಡುದ ಇಸಪೇಟಾ"[೪೫]|

ಭಾರತದ ರೈತನ ಪಾರಂಪರಿಕ ಆಸ್ತಿಯೆಂದರೆ 'ಭೂಮಿ' (ಹೊಲ-ಗದ್ದೆ). ಅಂತ ಆಸ್ತಿಯನ್ನು ಸರಕಾರ ಹೇಗೆ ಕಸಿದುಕೊಂಡಿತು ಎನ್ನುವುದನ್ನು ಇಲ್ಲಿ ಕಾಣಬಹುದು. ಸರಕಾರ ರೈತರ ಭೂಮಿಗೆ ಪರ್ಯಾಯವಾದ ಆಸ್ತಿಯೆಂದರೆ ಹಣ ಎಂದುಕೊಂಡು ಹಣ ಕೊಡುತ್ತದೆ. ದಿಢೀರನೆ ಹೆಚ್ಚಾಗಿ ಬಂದ ಹಣಹಿಂದ ಹೇಗೆ ಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವ ಮಾರ್ಗಗಳು ಗೊತ್ತಿಲ್ಲದ ರೈತ ಅಪ್ರಜ್ಞಾ ಪೂರ್ವಕವಾಗಿ ಹೇಗೆ ಚಟಗಳಿಗೆ ಬಲಿಯಾಗುತ್ತಾನೆ ಎನ್ನುವ ಚಿತ್ರಣಗಳು ಈ ಹಾಡಿನಲ್ಲಿವೆ. ಆಧುನಿಕತೆಯ ಪ್ರಭಾವ ಮತ್ತು ಸಾಂಪ್ರದಾಯಿಕ ಬದುಕನ್ನು ಕಳೆದುಕೊಂಡ ರೈತನ ತಲ್ಲಣಗಳನ್ನು ಕೇಳುಗರ ಮುಂದಿಡುತ್ತದೆ. ಆ ಮುಖಾಂತರ ಭೂಮಿಯನ್ನು ಕಳೆದುಕೊಳ್ಳದಂತೆ ರೈತರಿಗೆ ಮನವಿ ಸಲ್ಲಿಸುತ್ತದೆ.

ಇವರು ಸಮಾಜದಲ್ಲಿ ನಡೆಯುವ ಅನ್ಯಾಯಗಳನ್ನು ಹಾಡಿನಲ್ಲಿ ತರುತ್ತಾರೆ. ನ್ಯಾಯ ಬೆಲೆ ಅಂಗಡಿಗೆ ಸರಕಾರ ಕೊಡುವ ಸಾಮಗ್ರಿಗಳ ಬಗ್ಗೆ ಮತ್ತು ನ್ಯಾಯಬೆಲೆ ಅಂಗಡಿಗಳ ವ್ಯವಸ್ಥೆಯ ಬಗ್ಗೆ ಹಾಡಿರುವ ಹಾಡು ಗಮನಸೆಳೆಯುತ್ತದೆ.

"ನಾಯಿ ಹಲ್ಲಿನಂತ ಗೋದಿ ಕೊಡ್ತಾರ ಅವನೇನ ಸುಡಬೇಕು
ಕೆಂಪ ಜ್ವಾಳಾ ತಿಂದ ನಾವು ಕೆಲಸಕ ಹೋಗಬೇಕ
ಈಗಿನ ಪಂಚರು ಲಂಚಾತಿಂತಾರ ಇಲ್ಲಿಂದ ದಿಲ್ಲಿತನಕ
ಪಂಚರ ಪರಿಸ್ಥಿತಿ ಮುಂದೆ ಹೇಳ್ತೇವ ಇಲೆಕ್ಷನ್ ಕಾಲಕ"[೪೬]

ಸಮಾಜದ ಕೆಟ್ಟ ವ್ಯವಸ್ಥೆ ಮತ್ತು ತಮ್ಮನ್ನು ಆಳುವ ಪ್ರಭುತ್ವದ ವಿರುದ್ಧ ಎತ್ತಿರುವ ಧ್ವನಿ ಇದು. ಇಲೆಕ್ಷನ್ ಬಂದಾಗ ನೋಡಿಕೊಳ್ಳುತ್ತೇವೆ ಎನ್ನುವುದರ ಮುಖಾಂತರ 'ಪ್ರಭುತ್ವಕ್ಕೆ ಎಚ್ಚರಿಕೆ'ಯನ್ನು ಕೊಡಲಾಗಿದೆ. ವ್ಯವಸ್ಥೆಯನ್ನು ಸರಿಪಡಿಸುವಂತೆ ಮತ್ತು ನಾಯಕರುಗಳು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವಂತೆ ಪರೋಕ್ಷವಾಗಿ ನಿಮಗಷ್ಟೆ ಅಲ್ಲ ನಮಗೂ ಅವಕಾಶ ಬರುತ್ತದೆ ಎನ್ನುವುದರ ಮುಖಾಂತರ ಎಚ್ಚರಿಕೆಯನ್ನು ಕೊಡುತ್ತಾರೆ.

ಈ ಹಾಡುಗಳು ಕೇವಲ ತನ್ನ ಸುತ್ತಮುತ್ತಲಿನ ಘಟನೆಗಳನ್ನು ಅಲ್ಲದೇ ಜಾಗತಿಕ ಘಟನೆಗಳನ್ನು ಹಾಡಿನಲ್ಲಿ ತರುತ್ತಾರೆ.

“ಚೀನಾ ಅಮೇರಿಕ ರಶಿಯಾ ದೇಶಗಳ ಜಗತ್ಯದೊಳು ಮೇಲ
ಕದನಕ ಬಿದ್ದಾರ ಹೆಳಲಿಕ ಬರದಿಲ್ಲೂ ಯ್ಯಾರಿಗುಂಟ ಸೋಲ
ಇಂಗ್ಲೆಂಡ್ ಎಂಬುದು ಬಲಾಢ್ಯ ರಾಷ್ಟ್ರ ಕಡಿಮೆ ಏನು ಇಲ್ಲ
ಹಿಂದೂಸ್ತಾನ ಇದು ನ್ಯಾಯದ ರಾಷ್ಟ್ರ ಗುರುತಾದ ತಮಗೆಲ್ಲಾ”[೮೭]

ಈ ಹಾಡು ಯುದ್ಧದಿಂದಾಗುವ ಪರಿಣಾಮಗಳನ್ನು ಹೇಳುತ್ತದೆ. ಯುದ್ಧಗಳನ್ನು ಮಾಡುವುದು. ರಾಷ್ಟ್ರಗಳ ಕಿಮ್ಮತ್ತಿಗಾಗಿ ಹೊರತು ಮಾನವನ ಅಭಿವೃದ್ಧಿಗಾಗಿ ಅಲ್ಲ ಎನ್ನುವುದು ಇವರ ವಾದ. ಜೊತೆಗೆ ಕಿಮ್ಮತ್ತಿನಿಂದ ಮೆರೆದ ರಾಷ್ಟ್ರ-ವ್ಯಕ್ತಿ ಯಾರು ಈ ಲೋಕದೊಳಗೆ ಉಳಿದಿಲ್ಲ ಎನ್ನುವುದರ ಮುಖಾಂತರ ‘ಅಹಂ’ನ್ನು ಬಿಟ್ಟು ಮಾನವಾಭಿವೃದ್ಧಿಗಾಗಿ ಶ್ರಮಿಸುವಂತೆ ಸಲಹೆ ಕೊಡುತ್ತಾರೆ. ಹೀಗೆ ಹಲವು ಆಯಾಮಗಳಲ್ಲಿ ಡೊಳ್ಳಿನ ಹಾಡುಗಳಲ್ಲಿ ಪ್ರಭುತ್ವವನ್ನು ಪ್ರತಿರೋಧಿಸುತ್ತಾರೆ. ಯುದ್ಧ ವಿರೋಧಿ ನೀತಿ ಇದು. ಅಹಿಂಸೆಯನ್ನು ಪ್ರತಿಪಾದನೆ ಮಾಡುವ ವಿಧಾನ ಇಲ್ಲಿದೆ. ಹಾಗೆಂದು ಕೇವಲ ಪ್ರಭುತ್ವವನ್ನು ಕುರಿತ ವಿರೋಧವಿದು. ಜನಸಾಮಾನ್ಯರ ತಪ್ಪುಗಳನ್ನು ತಿದ್ದುವ ಪ್ರಯತ್ನವೂ ಇದೆ.

“ಓಟು ಹಾಕುವರು ದುಡ್ಡ ಬೇಡತಾರ ಹಿಂದಕೆ ಸರಿಯುವುದಿಲ್ಲ
ಆರಿಸಿ ಬಂದವರಿಗೆ ಅಧಿಕಾರದಾಸೆ ಜನತಾದರೇನವೆಲ್ಲ”[೮೮]

ಡೊಳ್ಳಿನ ಹಾಡುಗಳು ಸಮಾಜದ ವ್ಯವಸ್ಥೆಯ ಆಂತರಿಕ ವಿಮರ್ಶೆಯನ್ನು ಮಾಡುತ್ತವೆ. ಆದರೆ ಸಮಾಜದೊಂದಿಗೆ ಆಳವಾದ ಸಂಬಂಧವನ್ನು ಇಟ್ಟುಕೊಂಡಿರುವಂತೆ ಕಾಣಿಸುವುದಿಲ್ಲ. ಆದರೂ ಸಾಮಾಜಿಕ ಬದ್ಧತೆ ಕಂಡು ಬರುತ್ತದೆ. ಬದ್ಧತೆ ಹೆಚ್ಚಾಗಿ ಕ್ರಾಂತಿಕಾರಿ ಭಾವನೆಯಿಂದ ಕೂಡಿದೆ. ನಟರಾಜ್ ಹುಳಿಯಾರ್ ಅವರು “ಕ್ರಾಂತಿಯ ಸಂಬಂಧವೆಂದರೆ ಹೋರಾಟದ ಹಾಗೂ ವಿರೋಧದ ಸಂಬಂಧ. ಆದರೆ ಆ ವಿರೋಧ ಹುಟ್ಟುವುದು ಕೂಡ ಬೇರೊಂದು ಬಗೆಯ ಸಮಾಜವನ್ನು ನಿರ್ಮಿಸುವ ಉದ್ದೇಶದಿಂದ”[೮೯] ಎನ್ನುತ್ತಾರೆ. ಸಮಕಾಲೀನ ಸಂದರ್ಭದ ಹಾಡುಗಳನ್ನು ಈ ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ.

೩.೩.೯. ಒಗಟಿನ ಹಾಡುಗಳು

ಡೊಳ್ಳಿನ ಹಾಡುಗಳಲ್ಲಿ ಒಗಟಿನ ರೂಪದ ಹಾಡುಗಳು ಜನಾಕರ್ಷಣೆ ಪಡೆದಿವೆ. ಇಲ್ಲಿ ‘ಪ್ರಶ್ನೆಯ ಭಾಗ’ ಮತ್ತು ‘ಉತ್ತರ ಭಾಗ’ ಎನ್ನುವ ಎರಡು ಭಾಗಗಳಿರುತ್ತವೆ. ಸವಾಲ್-ಜವಾಬ್ ಸ್ವರೂಪದವು. ಆದರೆ ಸವಾಲ್-ಜವಾಬ್ ಹಾಡುಗಳಲ್ಲ. ಒಂದು ತಂಡ ಅಥವಾ ಒಬ್ಬ ಕಲಾವಿದ ತನ್ನಲ್ಲಿರುವ ಜ್ಞಾನವನ್ನು ಪ್ರಶ್ನೆ ಮೂಲಕ ಇನ್ನೊಂದು ಮೇಳದವರಿಗೆ ಹಾಕಿ, ಅವರಿಂದ ಉತ್ತರವನ್ನು ನಿರೀಕ್ಷೆ ಮಾಡಲಾಗುತ್ತದೆ. ಈ ಪ್ರಶ್ನೆಗಳಿಗೆ ಒಗಟಿನ ಮಾದರಿ ಬಳಕೆ ಆಗುವುದು ವಿಶೇಷ. ಆದರೆ ಈ ಹಾಡುಗಳು ಪ್ರಮುಖವಲ್ಲ. ಇವುಗಳನ್ನು ಹೆಚ್ಚಾಗಿ ಜಾತ್ರೆ, ಮದುವೆ ಸಮಾರಂಭಗಳಲ್ಲಿ ಹಾಡಲಾಗುತ್ತದೆ. ಒಂದು ಮೇಳದವರು ಒಂದು ಒಗಟ(ಪ್ರಶ್ನೆ)ನ್ನು ಹಾಕುವರು. ಆ ಒಗಟಿಗೆ ಪ್ರತಿಯಾಗಿ ಮತ್ತೊಂದು ಮೇಳದವರು ಒಗಟಿನ ಶೈಲಿಯಲ್ಲಿ ಉತ್ತರವನ್ನು ಹಾಡುವುದರ ಮುಖಾಂತರ ಮತ್ತೊಂದು ಓಗಟನ್ನು ಹಾಕುತ್ತಾರೆ. ಹೀಗೆ ಮೇಳದಿಂದ ಮೇಳಕ್ಕೆ ಒಗಟಿನ ಚರ್ಚೆ ವಾಗ್ವಾದದ ರೂಪದಲ್ಲಿ ನಡೆಯುತ್ತ ಸಾಗುತ್ತದೆ. ಪ್ರಶ್ನೆಗಳ ಸರಮಾಲೆ ಕೇಳುಗರನ್ನು ಚಿಂತನೆಗೆ ಹಚ್ಚುತ್ತವೆ.

ಪ್ರಶ್ನೆಗಳನ್ನು ಹಾಕುವ ಮತ್ತು ಉತ್ತರಗಳನ್ನು ಕಂಡುಕೊಳ್ಳುವುದಕ್ಕೆ ಹುಡುಕಾಡುವ ವಿಧಾನ ಆಕರ್ಷಣೀಯ. ಪ್ರದರ್ಶನದಲ್ಲಿ ವೇದಿಕೆಯಲ್ಲಿರುವ ಮೇಳವನ್ನು ಹೊರತುಪಡಿಸಿ ಉಳಿದ ಮೇಳಗಳು ಪುರಾಣ ಮತ್ತು ಪುಸ್ತಕಗಳನ್ನು ಇಟ್ಟುಕೊಂಡು ಹುಡುಕಾಟ ಮಾಡುತ್ತವೆ. ಯಾವುದನ್ನು ಯಾವ ಶೈಲಿಯಲ್ಲಿ ಹೇಳಬೇಕು ಎನ್ನುವ ಚರ್ಚೆ ಅವರವರ ತಂಡದಲ್ಲಿ ಗುಪ್ತವಾದ ಚರ್ಚೆ ನಡೆಯುತ್ತಿರುತ್ತದೆ. ಇಲ್ಲಿ ಭಾಗವಹಿಸಿದ ಯಾವುದೇ ಮೇಳದವರು ಉತ್ತರವನ್ನು ಹೇಳಬಹುದು. ಯಾವ ತಂಡದವರಿಂದ ಉತ್ತರಿಸಲು ಸಾಧ್ಯವಾಗದಿದ್ದರೇ ಪ್ರಶ್ನೆ ಹಾಕಿದ ತಂಡವೇ ಉತ್ತರವನ್ನು ಹೇಳಿ 'ಜ್ಞಾನವಂತ' ತಂಡ ಎನ್ನುವ ಬಿರುದನ್ನು ಪಡೆಯಬಹುದು.

"ಅಂಡಜ ಪಿಂಡಜ ತತ್ತಿಯ ಪಡೆದಂತೆ
ಪಕ್ಷಿಯ ಕೂನ್ಯಾವದೇಳಣ್ಣಾ |
ತತ್ತೊಡೆದು ನೀರಾತು ನೀರಿಗೆ ಬೇರುಂಟು
ನೀರಿನ ಮಾರ್‍ಯಾವುದ್ಹೇಳಣ್ಣಾ
ಬೈಲಿಗೆ ಬೆಲಿತ್ತು ಬೈಲೊಳಗೇನಿತ್ತು
ಬೀಜಿಲ್ಲದ ಮರ ಯಾವುದ್ಹೇಳಣ್ಣಾ
ಹನ್ನೆರಡು ವಾಲಿಯು ಮುವತ್ತೆರಡು ಕಾಯಿ
ಮರ್‍ತ್ಯಕ ಮರ ಯಾವುದೇಳಣ್ಣಾ"[೫೦]

ಲೋಕಸೃಷ್ಟಿ, ವ್ಯಕ್ತಿಸೃಷ್ಟಿ, ದೈವಸೃಷ್ಟಿ ಮತ್ತು ದೈವಗಳ ಪವಾಡ, ನೀತಿ, ಸಾಹಸ ಮುಂತಾದ ವಸ್ತುವನ್ನು ಆಧರಿಸಿ ಕಥನಗಳು ಬೆಳೆಯುತ್ತಾ ಹೋಗುತ್ತವೆ.

"ಗಂಡರಿಲ್ಲದೆ ಮಕ್ಕಳ ಹಡೆದು ಕೆಡುಕ ನುಡಿದವರುಂಟೇನು
ಏ ಸತ್ತ ಗಂಡನಾ ಪ್ರಾಣವ ಪಡೆದು ಮುತ್ತೈದೆರಾದವರುಂಟೇನು
ಕಂಡಿರಾ ನೀವು ಧರ್ಮರಾ ನೀವು ಕಲಿಯುಗದೊಳಗಿನ ಸುದ್ಧಿಯನ
ಎರಡು ತಲೆಯವರ್‍ಯದರ ಗುರುವೆ ಎರಡು ತಲೆಯವರುಂಟೇನು
ಏ ಎರಡು ತಲೆಯುವರ್‍ಯದರ ಗುರುವೆ ಮೂರು ತಲೆಯವರುಂಟೇನು"[೫೧]

ಹೀಗೆ ಒಂಬತ್ತು ತಲೆಯತನಕ ಪ್ರಶ್ನೆ ಮುಂದುವರೆಯುತ್ತದೆ. ಮತ್ತೆ ಉತ್ತರದ ಮುಖಾಂತರ ಹಾಡು ಹಿಮ್ಮುಖ ಚಲನೆಯನ್ನು ಆರಂಭಿಸುತ್ತದೆ. ಒಂಬತ್ತನೇ ತಲೆಯ ಮಾನವನಿಗೆ 'ವಿಭೀಷಣ', ಎಂಟನೆಯ ತಲೆಯ ಮಾನವನಿಗೆ 'ಕುಂಟಿಪಾಲಕರು' ಹೀಗೆ ಒಂದೊಂದು ಸಂಖ್ಯೆಯನ್ನು ಕಡಿಮೆ ಮಾಡುತ್ತ, ಆ ಸಂಖ್ಯೆಗೆ ವ್ಯಕ್ತಿಗಳನ್ನು ಉದಾಹರಣೆ ಕೊಡುತ್ತ ಬರುತ್ತಾರೆ. ಒಂದನೇ ತಲೆಯವನೆಂದರೆ 'ಕರಿತಲೆ ಮಾನವ'ನೆನ್ನುವಲ್ಲಿಗೆ ಬಂದು ಹಾಡೂ ನಿಲ್ಲುತ್ತದೆ. ಈ ತಲೆಗಳ ಬಳಕೆ ಸಂಕೇತವನ್ನು ವಿಶ್ಲೇಷಿಸಬೇಕು. ಇದು ನವಗುಣಗಳ ವಿಶ್ಲೇಷಣೆ ಇರಲು ಸಾಧ್ಯವಿದೆ. ಏಕೆಂದರೆ ಒಗಟು ಕಟ್ಟುವವನು ಒಂದು ವಸ್ತುವನ್ನು ಆಧಾರವಾಗಿರಿಸಿಕೊಂಡು ತನ್ನ ರೂಪಕ ಸಾಮರ್ಥ್ಯದಿಂದ ಕೆಲವು ಬಾರಿ ಉಪಮಾ ಬಲದಿಂದ ಬಗೆ ಬಗೆಯ ಸುಂದರವಾದ ಶಬ್ದಗಳನ್ನು ಬಳಸಿಕೊಂಡು ವಾಕ್ಚಾತುರ್ಯ ದಿಂದ ಕೆಲವು ಒಗಟುಗಳನ್ನು ಕಟ್ಟಬಹುದು. "ಅದೇನಿದ್ದರೂ ಒಗಟಿನಲ್ಲಿ ಎರಡು ಸದೃಶ

ವಸ್ತುಗಳಿರಲೇಬೇಕು. ಒಂದು ಉಪಮಾನ ಮತ್ತೊಂದು ಉಪಮೇಯ. ಉಪಮಾನದ ಆಧಾರದಿಂದ ಉಪಮೇಯವನ್ನು ಪತ್ತೆ ಮಾಡಬೇಕು ಇಲ್ಲವೇ ರೂಪಕವನ್ನು ಒಡೆದು ಗೂಢಾರ್ಥವನ್ನು ಬಯಲು ಮಾಡಬೇಕು".[೫೨]

ಈ ಒಗಟುಗಳ ಹಾಡುಗಳು ಕಠಿಣವಾಗಿರುತ್ತವೆ ಮತ್ತು ಗೂಡಾರ್ಥವನ್ನು ಹೊಂದಿರುತ್ತವೆ. ಇದನ್ನು ಬಿಡಿಸಿ ಉತ್ತರ ಹೇಳುವವನು ಜ್ಞಾನಿ ಆಗಿರಬೇಕು. ಆತನಿಗೆ ಓದಿನ ಅನುಭವ ಇರಬೇಕು. ಉತ್ತರವನ್ನು ನೀಡದಿದ್ದ ತಂಡಗಳನ್ನು ಪ್ರೇಕ್ಷಕರು ಜ್ಞಾನವಂತ ತಂಡವೆಂದು ಪರಿಗಣನೆಗೆ ತಗೆದು ಕೊಳ್ಳುವುದಿಲ್ಲ. ಉತ್ತರ ನೀಡಿದ ತಂಡಗಳೇ ಸ್ವತಹ ಯಾತನೆಯನ್ನು ಅನುಭವಿಸುತ್ತವೆ. ಉತ್ತರವನ್ನು ಹೇಳದಿದ್ದರೆ ನಮಗೆ ಅವಮಾನ ಆಗುತ್ತದೆ ಎಂದು ಬಿಜ್ಜರಗಿಯ ಸೋಮಲಿಂಗ ಹೇಳುತ್ತಾನೆ. ಹಾಗಾಗಿ ತಂಡಗಳಲ್ಲಿ ಒಂದು ಮೇಳದವರು ಮತ್ತೊಂದು ಮೇಳದವರ ವಿರುದ್ಧ ವಾಗ್ವಾದ ಮಾಡುವು ದಕ್ಕೆ ಒಟ್ಟು ಪ್ರತಿಭೆಯುಳ್ಳ ವಿದ್ಯಾವಂತ ಬೇಕು ಎನ್ನುವ ಧೋರಣೆ ಆರಂಭವಾಗಿದೆ. ಹಾಗಾಗಿ ಪ್ರತಿಯೊಂದು ತಂಡದಲ್ಲಿ ಶಿಕ್ಷಣ ಪಡೆದ ವ್ಯಕ್ತಿ ಇರುತ್ತಾನೆ. ಪ್ರಾಥಮಿಕ ಶಾಲೆಯ ಶಿಕ್ಷಕರು ಮತ್ತು ಬಿ.ಎ. ಓದುತ್ತಿರುವವರು ಹೆಚ್ಚಾಗಿ ಈ ಕಾರ್ಯದಲ್ಲಿ ತೊಡಗಿದ್ದಾರೆ. ಹೊಸದಾಗಿ ರಚಿಸಿದ ಹಾಡು ಗಳು ಹೆಚ್ಚಾಗುತ್ತಿವೆ. ಹೊಸ ಹೊಸ ಪ್ರಶ್ನೆಗಳನ್ನು ಕೇಳಬೇಕು, ನಾವು ಗೆಲ್ಲಬೇಕು ಎನ್ನುವ ಮನಸ್ಥಿತಿ ತಂಡದಲ್ಲಿ ಹೆಚ್ಚುತ್ತಿದೆ. ಒಮ್ಮೊಮ್ಮೆ ಪ್ರಶ್ನೆಗಳು ತನ್ನ ಗಡಿರೇಖೆಯನ್ನು ಮೀರಿ ಬರುತ್ತವೆ. ಉದಾಹರಣೆ ನೆಪೋಲಿಯನ್‌ನ ತಂದೆ ಯಾರು? ಹೀಗೆ ಪ್ರಶ್ನೆಗಳು ಅತಿರೇಕಕ್ಕೆ ಹೋಗಿ ಕಲಾವಿದರ ನಡುವೆ ಸಂಘರ್ಷಗಳಿಗೆ ಅವಕಾಶ ಕಲ್ಪಿಸುತ್ತದೆ. ಮೇಳ ಮೇಳಗಳು ಬಡಿದಾಟದಿಂದ ಪ್ರದರ್ಶನಗಳು ಅರ್ಧಕ್ಕೆ ನಿಂತ ಉದಾಹರಣೆಗಳು ಇವೆ.

ಆದರೂ ಒಗಟಿನ ಹಾಡುಗಳು ಜ್ಞಾನ ಮತ್ತು ನೈತಿಕ ಬೋಧನೆಯನ್ನು ಸುಲಲಿತ ಅಥವಾ ಹಾಸ್ಯದ ರೀತಿಯಲ್ಲಿ ಮಂಡಿಸುತ್ತವೆ. ಆದ್ದರಿಂದ ಈ ಹಾಡುಗಳ ಉದ್ದೇಶ ಮೂಲತಃ ಶೈಕ್ಷಣಿಕವಾದುದು. ಇವು ಬುದ್ಧಿಯನ್ನು ಹರಿತಗೊಳಿಸುತ್ತವೆ. ಸಂಕ್ಷಿಪ್ತ ಹಾಸ್ಯಗುಣ ಮತ್ತು ಪ್ರಾಸಗುಣಗಳು ಈ ಹಾಡುಗಳ ಲಕ್ಷಣಗಳಾಗಿವೆ.

೩.೩.೧೦. 'ಖರೆ' ಹಾಡುಗಳು

ಡೊಳ್ಳಿನ ಹಾಡುಗಳಲ್ಲಿ 'ಖರೆ' ಹಾಡುಗಳು ಆಕರ್ಷಕವಾಗಿವೆ ಮತ್ತು ಅರ್ಥಗರ್ಭಿತವಾಗಿವೆ. ಒಗಟಿನ ರೂಪದ ಪ್ರಶ್ನೆಗೆ ಉತ್ತರವನ್ನು ಹಾಡುವ ಹಾಡುಗಳು ಆಗಿರುವುದಕ್ಕೆ ಸಾಧ್ಯತೆಯಿದೆ. ಹಾಡಿನ ಪ್ರತಿಸಾಲಿನ ಕೊನೆಗೆ 'ಖರೆ' (ಕರೆ) ಅನ್ನುವ ಪದ ಬಳಕೆಯಾಗುವುದರಿಂದ 'ಖರೆ' ಹಾಡು ಗಳೆಂದು ಕರೆಯಲಾಗುತ್ತದೆ. ಒಗಟಿನ ಹಾಡುಗಳ ಪ್ರದರ್ಶನ ನಡೆಯುವಾಗ 'ವಾದ' 'ಪ್ರತಿವಾದ' ನಡೆಯುತ್ತದೆ. ಹೇಳಿದ ಉತ್ತರಗಳಿಗೆ ಅಥವಾ ಕೇಳಿದ ಪ್ರಶ್ನೆಗಳಿಗೆ ಹಲವು ಅರ್ಥಗಳಿರುತ್ತವೆ. ಹಾಗಾಗಿ ಒರೆಗಲ್ಲಿಗೆ ಹಚ್ಚುವುದು ಹೆಚ್ಚು ರೂಢಿ. ಉತ್ತರಗಾರ ನಾನು ಹೇಳುತ್ತಿರುವುದು ಸತ್ಯ ಅನ್ನುವುದನ್ನು ಪ್ರತಿಪಾದನೆ ಮಾಡುವುದಕ್ಕಾಗಿಯೇ 'ಖರೆ' ಅನ್ನುವ ಪದವನ್ನು ಸೇರಿಸಿ ಹಾಡುವ

ಸಂಪ್ರದಾಯ ಬೆಳೆದುಬಂದಿರುವುದಕ್ಕೆ ಸಾಧ್ಯವಿದೆ. ಈ ಹಾಡುಗಳಲ್ಲಿ ಪ್ರತಿ ಸಾಲಿಗೂ ಪ್ರಶ್ನೆಗಳು ಮತ್ತು ಉತ್ತರಗಳಿರುವುದು ಈ ವಾದವನ್ನು ಬೆಂಬಲಿಸುತ್ತವೆ.

ಖರೆ (ಕರೆ) ಅಂದರೆ ಸತ್ಯವಾಗಿದೆ ಎಂದರ್ಥ. 'ಖರೆ' ಅಂತ ಹೇಳುವುದರ ಮುಖಾಂತರ ನಾನು ಹೇಳುವುದು ಸತ್ಯವಾಗಿದೆ. ಅದನ್ನು ಅಲ್ಲಗಳೆಯುವ ಪ್ರಯತ್ನ ಬೇಡ ಅನ್ನುವ ಮಾತನ್ನು ಪರೋಕ್ಷವಾಗಿ ಹೇಳಿರುವುದಕ್ಕೆ ಸಾಧ್ಯವಿದೆ.

'ಖರೆ' ಅನ್ನುವ ಪದದ ಬಳಕೆ ಡೊಳ್ಳಿನ ಹಾಡುಗಳಲ್ಲಿ ಮತ್ತೊಂದು ರೀತಿಯಲ್ಲಿ ಯೋಚಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಶಿಷ್ಟರು ಈ ಹಾಡುಗಳನ್ನು ಅಥವಾ ಹಾಡುಗಾರರನ್ನು 'ಹಾಳ ರಗಳೆ' ಹಾಡುತ್ತೀರೆಂದು ಜರಿದಿರಬೇಕು.

"ಕುರುಬರ್ದ್ನಾಂತ ಅಲ್ಲಗಳೆಯದೆ ಪ್ರೇಮದಿಂದ ಇರಬೇಕ ಚಿತ್ತ
ಯಾತರ ಹಾಡಂತ ಏಳಬ್ಯಾಡರಿ ಸೆರಗ ಒಡ್ಡಿ ಬೇಡುವೆ ನಿಂತಾ
ಹಾಳ ರಗಳೆ ಹಾಡುವುದಿಲ್ಲ ಪುರಾಣದೊಳಗಿನ ಸವಿಮಾತಾ
ಸವಿಮಾತಾ ಸರಸಾಗಿ ಹೇಳತೀವಿ ಹರುಷದಿಂದ ಕೇಳರಿ ಕುಂತ"[೫೩]

ನಾವು ಸತ್ಯವಾದುದನ್ನೇ ಹಾಡುತ್ತೇವೆ ಅನ್ನುವುದನ್ನು ಹೇಳುವುದಕ್ಕೆ 'ಖರೆ' ಅನ್ನುವ ಪದ ಬಳಕೆ ಮಾಡಿ ಹಾಡಿರುವುದಕ್ಕೆ ಸಾಧ್ಯವಿದೆ. ಈ ಪದ ಬಳಕೆಯ ಬಗ್ಗೆ ಇನ್ನೂ ಅಧ್ಯಯನಗಳಾಗಬೇಕು. ಈ ವಾದಗಳು ಅಂತಿಮವಲ್ಲ. ಎರಡನೆಯ ವಾದಕ್ಕಿಂತ ಮೊದಲನೆ ವಾದ ಪದ ಬಳಕೆಗೆ ಹೆಚ್ಚು ಹತ್ತಿರವಾಗಿದೆ.

"ಶಕ್ತಿ ಹೊಟ್ಟೇಲಿ ಶಿವನುಟ್ಟಿದ್ದು ಖರೆ
ವಿಷ್ಣುವಿನ ಮಗ ತಾ ಬ್ರಹ್ಮ ಖರೆ
ತ್ರಿಮೂರ್ತಿಯ ತತ್ತಿಯ ಒಳಗ
ಉತ್ಪನ್ನವಾದುದು ಖರೆ
ಮೊದಲಿಗೆ ಮಾದೇವ್ರು ಮಗಾ ಖರೆ
ಮಗಾ ಹುಟ್ಟಿ ತಾಯಿ ಮದುವೆ ಮಾಡಿಕೊಂಡು
ಮರ್ತ್ಯಲೋಕ ಸಲವಿದ್ದು ಖರೆ"[೫೪]

ಡೊಳ್ಳಿನ ಹಾಡುಗಳು ಜಗತ್ತಿನ ಸೃಷ್ಟಿ ಕಥನಗಳನ್ನು ಮತ್ತು ದೈವಗಳ ಚರಿತ್ರೆಯನ್ನು, ಪೌರಾಣಿಕ ಅಂಶಗಳನ್ನು ಸತ್ಯವೆಂದು ನಂಬುತ್ತವೆ. ತಾವು ನಂಬಿರುವ ಸತ್ಯವನ್ನು ಸತ್ಯವೆಂದು ಪ್ರತಿಪಾದಿಸುತ್ತವೆ. ಈ ಹಾಡುಗಳು ಡೊಳ್ಳಿನ ಹಾಡುಗಾರರ ಅಥವಾ ಹಾಲುಮತ ಸಮುದಾಯದ ಲೋಕದೃಷ್ಟಿಯನ್ನು ಅರಿಯುವುದಕ್ಕೆ ಅನುಕೂಲವಾಗುತ್ತವೆ.

೩.೩.೧೧. ರ್ಯಾಣಗಳು

ಜನಪದ ಕಲೆ ಪ್ರದರ್ಶನದಲ್ಲಿ ಪ್ರೇಕ್ಷಕರಿಗೆ ಆಗುವ ಬೇಸರವನ್ನು ನೀಗಿಸುವುದಕ್ಕೆ ಕಲಾವಿದರು ಅನೇಕ ತಂತ್ರಗಳನ್ನು ರೂಪಿಸಿಕೊಂಡಿರುತ್ತಾರೆ. ಡೊಳ್ಳಿನ ಹಾಡುಗಾರರು ಇದಕ್ಕೆ ಹೊರತಾಗಿಲ್ಲ. ಪ್ರೇಕ್ಷಕರ ಬೇಸರವನ್ನು ಕಳೆಯುವುದಕ್ಕಾಗಿಯೇ ಹಲವು ಪ್ರಕಾರದ ಹಾಡುಗಳನ್ನು ಪ್ರದರ್ಶನದ

ಮಧ್ಯೆ ತರುತ್ತಾರೆ. ಅಂತ ಹಾಡುಗಳಲ್ಲಿ 'ರ್‍ಯಾಣಗಳು' ಪ್ರಮುಖವಾದವು. ರಾಣ್ಯಗಳು ಕನ್ನಡ ಜನಪದ ಸಾಹಿತ್ಯದಲ್ಲಿ ವಿಶಿಷ್ಟವಾದ ಅಸ್ಮಿತೆಯನ್ನು ಹೊಂದಿವೆ. ಈ ಹಾಡುಗಳ ಬಗ್ಗೆ ಹೆಚ್ಚಿನ ಅಧ್ಯಯನಗಳಾಗಿಲ್ಲ, ಸಂಗ್ರಹವಾಗಿಲ್ಲ. 'ದೇವನಂದ ಮಾಲಗತ್ತಿ' ಅವರ 'ರ್‍ಯಾಣಗಳು' ಮತ್ತು 'ಬಸವನಗೌಡ ಪಾಟೀಲ' ಅವರ 'ಹಿಂಗ ಬಿಟ್ರ ದೇಶ ಆಳ್ಯಾಳ' ಕೃತಿಗಳು ಈತನಕ ಸಂಗ್ರಹವಾಗಿರುವ ರ್‍ಯಾಣಗಳ ಸ್ವತಂತ್ರ ಸಂಗ್ರಹಗಳಾಗಿವೆ. ಡೊಳ್ಳಿನ ಹಾಡುಗಳ ಜೊತೆ ಬಿಡಿ ರ್‍ಯಾಣಗಳು ಸಂಗ್ರಹ ವಾಗಿರುವುದು ಸಹ ತುಂಬಾ ಕಡಿಮೆ. ಎಸ್.ಎಫ್. ಜಕಬಾಳ್, ಅರವಿಂದ ಮಾಲಗತ್ತಿ, ವಾಯ್.ಕೆ. ಗುಂಡಕರ್ಜಗಿ, ಕೆ. ವಿರುಪಾಕ್ಷಗೌಡ ಮುಂತಾದವರು ಪರಿಚಯಾತ್ಮಕ ಬರಹಗಳನ್ನು ಬರೆದಿದ್ದಾರೆ.

ರ್‍ಯಾಣದ ಅರ್ಥ ಮತ್ತು ಪರಿಕಲ್ಪನೆ

'ರ್‍ಯಾಣ' ಎಂದರೆ ಡೊಳ್ಳು ವಾದ್ಯವನ್ನು ಕೈಪೆಟ್ಟಿನೊಂದಿಗೆ ನುಡಿಸುತ್ತ ವಿಶಿಷ್ಟವಾದ ಲಯ ದೊಂದಿಗೆ ಹೇಳಿಕೊಂಡು ಹೋಗುವ ಹಾಡು. ಈ ಹಾಡುಗಳನ್ನು ಇಬ್ಬರು ಇಲ್ಲವೇ ನಾಲ್ಕು ಜನರು ಸೇರಿ ಹಾಡುತ್ತಾರೆ. ಇಬ್ಬರು ಹಾಡುವ ವಿಧಾನ ಹೆಚ್ಚು ರೂಢಿಯಲ್ಲಿದೆ. ಮುಖ್ಯಗಾಯಕನನ್ನು 'ರ್‍ಯಾಣಿಗ'ನೆಂದು ಕರೆದರೆ ಹಿಂದೆ ಹಾಡುವನನ್ನು 'ಮರಿರ್‍ಯಾಣಿಗ'ನೆಂದು ಕರೆಯಲಾಗುತ್ತದೆ. ರ್‍ಯಾಣಿಗ ಹಾಡನ್ನು ಹಾಡುತ್ತಾ ಡೊಳ್ಳಿಗೆ ಕೈಪೆಟ್ಟು ಹಾಕುತ್ತಿರುತ್ತಾನೆ. ಮರಿರ್‍ಯಾಣಿಗ ರ್‍ಯಾಣಕ್ಕೆ ಹೂಗುಟ್ಟುತ್ತ ತಾಳ ಹಾಕುತ್ತಿರುತ್ತಾನೆ. ಕೆಲವೊಮ್ಮೆ ಹಾಡಿನ ವಸ್ತುವಿನ ಸಂದರ್ಭಕ್ಕೆ ಅನುಗುಣವಾಗಿ ಹುಲ್ಲುಲ್ಲುಗ್ಯೋ ಹುಲ್ಲುಲ್ಲುಗ್ಯೋ.... ಅಣ್ಣಣ್ಣೊ...... ಅಣ್ಣಣ್ಣೊ..... ಹೌದಪ್ಪ ಹೌದು. ಕಡೆ... ಕಡೆ... ಹೌದಲೇ... ತಮ್ಮ ಹೀಗೆ ಮುಂತಾದ ಪದಗಳ ಬಳಕೆ ಆಗುತ್ತಿವೆ. ಬಳಸುವ ಪದಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ.

ರ್‍ಯಾಣ ಪದದ ಅರ್ಥ ಮತ್ತು ಪರಿಕಲ್ಪನೆ

'ರ್‍ಯಾಣ' ಪದದ ಅರ್ಥವನ್ನು ವಿವಿಧ ವಿದ್ವಾಂಸರು ಭಿನ್ನ ನೆಲೆಯಲ್ಲಿ ಅರ್ಥೈಸಿದ್ದಾರೆ. ಜಕಬಾಳ್ ಅವರು 'ರಾವಣ' ಪದ ಅಪಭ್ರಂಶದಿಂದ 'ರ್‍ಯಾಣ' ಆಗಿದೆ ಎನ್ನುತ್ತಾರೆ. ರಾವಣನ ಭಕ್ತಿಯಂದ ಶಿವನನ್ನು ಒಲಿಸಿಕೊಂಡದ್ದು ಪುರಾಣ ಪ್ರಸಿದ್ಧ ವಿಷಯ. ರಾವಣನ ದಶಕಂಠಗಳಿಂದ ಹೊರಹೊಮ್ಮುವ ನಾದ ಸುಮಧುರವಾಗಿತ್ತು. ಕಿವಿಗೆ ಹಿತಕರವಾಗಿತ್ತು. ಆದ್ದರಿಂದ ರ್‍ಯಾಣ ಹೇಳುವವರು ಎಂದರೆ ಸುಮಧುರವಾಗಿ ಹಾಡುವುದು ಎಂದರ್ಥ ಎನ್ನುವುದರ ಮುಖಾಂತರ ರ್‍ಯಾಣಗಳ ಲಯದಿಂದ ಪರಂಪರೆಯನ್ನು ಹುಡುಕುತ್ತಾರೆ. ಕೆ. ವಿರೂಪಾಕ್ಷ ಗೌಡ ಮತ್ತು ಕೊಟ್ರಪ್ಪ ಮೇಟಿ ಅವರು ಸಂಗ್ರಹಿಸಿರುವ 'ನಡಿಯಪ್ಪ ನಮ್ಮ ನಾಡಿಗೆ' ಡೊಳ್ಳಿನ ಹಾಡುಗಳ ಸಂಕಲನದಲ್ಲಿ ಎರಡು ರ್‍ಯಾಣಗಳನ್ನು ಸಂಗ್ರಹಿಸಿದ್ದಾರೆ. ಇವರು ರ್‍ಯಾಣಗಳನ್ನು 'ಆರೋಹಣದ ಹಾಡು' ಎಂದು ಕರೆದಿರುವುದು ವಿಶೇಷ. ಅರವಿಂದ ಮಾಲಗತ್ತಿ ಅವರು 'ಅರೋಹಣ' ಪದದ ಬಳಕೆ ಜನಪದರ ಬಳಕೆಯಲ್ಲಿ 'ರ್‍ಯಾಣ' ಆಗಿರುವುದಕ್ಕೆ ಸಾಧ್ಯವಿದೆ ಎನ್ನುತ್ತಾರೆ.

ಜನಪದರಲ್ಲಿ ಈ ಕಲೆಯ ಪ್ರಾಚೀನತೆಯನ್ನು ತಿಳಿಸುವ ಅನೇಕ ಕಥನಗಳು ಇವೆ. ಅವುಗಳಲ್ಲಿ ಹೆಚ್ಚು ಜನಪ್ರಿಯ ಆಗಿರುವ ಕಥನವೊಂದು ಹೀಗಿದೆ. "ಕೋಣ ಮಾರಮ್ಮನ ಮೊಮ್ಮಗ. ಸುಳ್ಳು,

ಹೇಳಿ ‘ವೈದಿಕರ’ ಮಾರೆಮ್ಮನನ್ನು ಮದುವೆಯಾದನಷ್ಟೆ. ಕೆಲವು ದಿನಗಳ ನಂತರ ಮಾರಮ್ಮ ಮೊಮ್ಮಗ ಮಾದಿಗನೆಂದು ಮಾರೆಮ್ಮನಿಗೆ ತಿಳಿಯಿತು. ಆಗ ಮಾರೆಮ್ಮ ಕೋಪಿತಳಾದಳು. ಕೊಲ್ಲುವುದಕ್ಕೆ ಮುಂದಾದಳು. ಮಾದಿಗ ಕೋಣದ ಹೊಟ್ಟೆಯನ್ನು ಹೊಕ್ಕ. ಅದನ್ನೇ ಕೊಂದಳು. ಆ ಕೋಣದ ರಕ್ತದಲ್ಲಿ ಹುಟ್ಟಿದವನೇ ರ್‍ಯಾಣಿಗ”.[೫೫]

ಜಕಬಾಳ್ ಅವರು ಗುರುತಿಸಿರುವುದು ಕೇವಲ ರ್‍ಯಾಣಗಳ ಸಂಗೀತದ ಲಯಕ್ಕೆ ಪೂರಕ ವಾಗುತ್ತದೆಯೋ ಹೊರತು ಕಲೆಯ ಪರಿಕಲ್ಪನೆಗೆ ಹೊಂದಾಣಿಕೆ ಆಗುವುದಿಲ್ಲ. ಆದರೆ ಜನಪದರಲ್ಲಿರುವ ಕಥನಕ್ಕೂ ರ್‍ಯಾಣಗಳ ಪರಿಕಲ್ಪನೆಗೂ ತುಂಬಾ ಹತ್ತಿರವಿದೆ. ಇಲ್ಲಿ ಕಾಣಿಸಿಕೊಳ್ಳುವ ಕೋಣದ ಬಲಿ ಮತ್ತು ರಕ್ತದಲ್ಲಿ ಪಡೆಯುವ ಜನ್ಮದ ಪರಿಕಲ್ಪನೆ ಪ್ರಮುಖವಾಗುತ್ತದೆ. ಕೋಣಾಸುರನನ್ನು ಸಂಹಾರ ಮಾಡಿದ ಕಥನಗಳು ಹಾಲುಮತ ಸಮುದಾಯದಲ್ಲಿವೆ. ಈ ಸಂಘರ್ಷಗಳನ್ನು ಮೇತ್ರಿ ಕೆ.ಎಂ. ಅವರು ದನಗಾರ ಮತ್ತು ಕುರಿಗಾರರ ಸಂಘರ್ಷಗಳೆಂದು ಕರೆಯುತ್ತಾರೆ. ಎಸ್.ಎಸ್. ಹಿರೇಮಠ ಅವರು ನೆಲೆನಿಂತ ದನಗಾರರು ಮತ್ತು ಅಲೆಮಾರಿ ದ್ರಾವಿಡ ದನಗಾರರ ಸಂಘರ್ಷವೆಂದು ಕರೆಯುವರು. ಹಾಗೂ ನೆಲೆನಿಂತ ದನಗಾರರು ಹೊಲೆಮಾದಿಗರೆನ್ನುವುದು ಇವರ ವಾದ. ಮಾರೆಮ್ಮನನ್ನು ಕುಲದೈವವನ್ನಾಗಿ ಮಾಡಿಕೊಂಡಿರುವ ಕುಲಗಳು ಹಾಲುಮತ ಸಮುದಾಯದಲ್ಲಿವೆ. ಮಾಯವ್ವನೇ ಮಾರಮ್ಮನಾಗಿ ಆರಾಧನೆಗೊಳ್ಳುತ್ತಿದ್ದಾಳೆ ಎನ್ನುವ ವಾದಗಳು ಕೇಳಿಬರುತ್ತಿವೆ. ಇವರಿಬ್ಬರನ್ನು ‘ಮಾಯೆ’ಯೆಂದು ಕರೆಯುತ್ತಾರೆ. ಇವರಿಬ್ಬರು ಮರದಲ್ಲಿ ಆರಾಧನೆಯಾಗುತ್ತಿರುವ ದೈವಗಳು. ಕುರುಬರು ಆರಾಧಿಸುವ ಮಾರೆಮ್ಮನ ಜಾತ್ರೆಯಲ್ಲಿ ರಾತ್ರಿಯಿಡೀ ಡೊಳ್ಳಿನ ಹಾಡುಗಳನ್ನು ಹಾಡಿ ಹರಕೆಯನ್ನು ತೀರಿಸುತ್ತಾರೆ. ಎಸ್.ಎಸ್. ಹಿರೇಮಠ ಅವರು “ರ್‍ಯಾಣಗಳಲ್ಲಿ ಬೈಯುವ ವಸ್ತುವಿಗೂ ಮತ್ತು ಮಾರಮ್ಮನ ಜಾತ್ರೆಯಲ್ಲಿ ರ್‍ಯಾಣಿಗರು ಹಲಗೆಯ ಅಶ್ಲೀಲ ಪದಗಳಿಗೂ ಸಾಮ್ಯತೆ ಇದೆ ಎನ್ನುತ್ತಾರೆ”.[೫೬] ದನಗಾರ ಮತ್ತು ಕುರಿಗಾರರ ಸಂಘರ್ಷ ಪರಿಕಲ್ಪನೆಯಾಗಿ, ಹೊಲೆಮಾದಿಗರ ಮತ್ತು ಹಾಲುಮತಸ್ಥರ ಸಂಘರ್ಷಗಳ ಅಸ್ಮಿತೆಯ ನೆನಪಿಗಾಗಿ ಚಲಾವಣೆಗೆ ಬಂದಿರುವುದಕ್ಕೆ ಸಾಧ್ಯತೆ ಇದೆ. ಇದನ್ನು ಈಗಾಗಲೇ ಸಂಪೂರ್ಣವಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇನ್ನೂ ಅಧ್ಯಯನಗಳಾಗಬೇಕು. ಈ ವಾದಕ್ಕೆ ಪಂಜಾಬಿನ ಕುರುಬರು ಭಾರತದ ಬ್ರಾಹ್ಮಣರಾದರು ಅನ್ನುವ ಮಾರ್ಕ್ಸ್‌ಮುಲ್ಲರ ಅವರ ಸಂಶೋಧನೆಯ ಅಧ್ಯಯನವನ್ನು ಬಳಸಿಕೊಳ್ಳಬೇಕು (ಈ ವಾದದ ಹೆಚ್ಚಿನ ವಿವರಕ್ಕಾಗಿ ಇಟ್ಟಪ್ಪನನ್ನು ಕುರಿತ ಬರಹವನ್ನು ನೋಡಬಹುದು).

ರ್‍ಯಾಣಗಳ ಸ್ವರೂಪ ಮತ್ತು ಲಕ್ಷಣ

ಹಾಲುಮತಸ್ಥರು ತಮ್ಮ ಆರಾಧ್ಯದೈವಗಳನ್ನು ಕುರಿತ ದೀರ್ಘವಾದ ಡೊಳ್ಳಿನ ಹಾಡುಗಳನ್ನು ಹಾಡುತ್ತಾರೆ. ಆ ಹಾಡುಗಳ ಮಧ್ಯದಲ್ಲಿ ಒಂದೊಂದು ರಸಭರಿತವಾದ ಹಾಸ್ಯಾಸ್ಪದವಾದ ಚಿಕ್ಕ ಹಾಡೊಂದನ್ನು ಹೇಳುತ್ತಾರೆ. ಇಂತಹ ಹಾಡುಗಳನ್ನು ‘ರ್‍ಯಾಣ’ವೆಂದು ಕರೆಯುವರು. ಈ ಹಾಡಿಗೆ ‘ಶಕ್ತಿ ಪ್ರದರ್ಶನದ ಹಾಡು’, ‘ರೋಣ’, ‘ಕೈಪೆಟ್ಟು’, ‘ದಿಡಗ’, ‘ಹುಲ್ಲುಲ್ಲುಗ್ಯೋ’, ‘ಒಗಟಿನ

ಕಥೆ' ಎನ್ನುವ ಹಲವು ಹೆಸರುಗಳು ಪ್ರಾದೇಶಿಕ ಹಿನ್ನಲೆಯಲ್ಲಿ ಬಳಕೆಯಾಗುತ್ತಿವೆ. ಇವುಗಳಲ್ಲಿ 'ರ್‍ವಾಣ' ಎನ್ನುವ ಪದ ಹೆಚ್ಚು ಬಳಕೆಯಲ್ಲಿದೆ.

ರ್‍ವಾಣದ ಲಕ್ಷಣಗಳು

* ರ್‍ವಾಣಗಳನ್ನು ಹಾಡುವ ಪ್ರತ್ಯೇಕ ಮೇಳಗಳಲ್ಲ. ಸುದೀರ್ಘವಾದ ಡೊಳ್ಳಿನ ಹಾಡುಗಳನ್ನು ಹಾಡುವ ಸಂದರ್ಭಗಳಲ್ಲಿ ಮಾತ್ರ ಈ ಹಾಡುಗಳನ್ನು ಹಾಡಲಾಗುತ್ತದೆ.
* ಸ್ಪರ್ಧಾ ಭಾವನೆಯಿಂದ ಆರಂಭವಾಗುತ್ತವೆ.
* ಹಾಡುವವರು ಇಬ್ಬರು ಇಲ್ಲವೆ ನಾಲ್ಕು ಜನರಿರುತ್ತಾರೆ. ಪದ್ಯದ ರ್‍ವಾಣವನ್ನು ಹಾಡುವಾಗ ಇಬ್ಬರು ಇರುವುದು ಹೆಚ್ಚು. ಗದ್ಯ-ಪದ್ಯದ ರ್‍ವಾಣವನ್ನು ಹಾಡುವಾಗ ನಾಲ್ಕು ಜನರಿರುತ್ತಾರೆ.
* ಪಲ್ಲವಿ ಮತ್ತು ಅನುಪಲ್ಲವಿಯಿಂದ ಆರಂಭವಾಗುತ್ತವೆ.
* ಹಾಸ್ಯ ಮತ್ತು ಶೃಂಗಾರ ಗುಣದಿಂದ ಕೂಡಿರುತ್ತವೆ.
* ಕಥೆ ಅಥವಾ ಉಪಕಥೆಯೊಂದಿಗೆ ಅಥವಾ ಘಟನೆ ಮತ್ತು ಉಪಘಟನೆಗಳೊಂದಿಗೆ ಆರಂಭ ವಾಗುತ್ತವೆ. ಈ ಕಥೆಗಳು ಸಂದರ್ಭಕ್ಕೆ ಅನುಗುಣವಾಗಿ ಹಿಗ್ಗುತ್ತವೆ ಮತ್ತು ಕುಗ್ಗುತ್ತವೆ.
* ಪ್ರಾಸ-ಅನುಪ್ರಾಸಗಳಿಂದ ಕೂಡಿರುತ್ತವೆ. ಲಯ ಪ್ರಧಾನವಾಗಿರುತ್ತದೆ. ನಡುನಡುವೆ ಉಪಕಥೆಗಳು, ಪದ್ಯಗಳು ಸೇರಿಕೊಳ್ಳುತ್ತಿರುತ್ತವೆ. ಆದರೆ ಇವಾವೂ ಕಡ್ಡಾಯವಲ್ಲ. ಉಪಕಥೆಗಳು, ಪದ್ಯಗಳು ಬರಬಹುದು ಅಥವಾ ಬರದೆ ಇರಬಹುದು.
* ಸಾಹಿತ್ಯ ಒಗಟಿನ ಸ್ವರೂಪದ್ದು. ಆದರೆ ಸರಳವಾಗಿ ಅರ್ಥವಾಗುವಂತಿರುತ್ತದೆ. ಭಾಷೆ ತುಂಬಾ ಅಶ್ಲೀಲವಾಗಿರುತ್ತದೆ.
* ಹಾಡುಗಾರರು ಒಂದೇ ಸ್ಥಳದಲ್ಲಿ ನಿಲ್ಲದೆ ಪ್ರದರ್ಶನದ ವೇದಿಕೆಯ ಸ್ಥಳದ ಸುತ್ತಾ ತಿರುಗಾಡುತ್ತಿ ರುತ್ತಾರೆ. ಜೊತೆಗೆ ನಟನಾತ್ಮಕ ಹಾವಭಾವಗಳ ಅಭಿವ್ಯಕ್ತಿ ಇರುತ್ತದೆ. ಇದು ಕಲಾವಿದರ ಪ್ರತಿಭೆಯನ್ನು, ಕಲಾ ವೈಧಾನಿಕತೆಯನ್ನು ಅವಲಂಬಿಸಿರುತ್ತದೆ. ಅಭಿನಯವನ್ನು ತರಬಹುದು ಅಥವಾ ತರದೆ ಇರಬಹುದು.

ರ್‍ವಾಣಗಳ ವೈಶಿಷ್ಟ್ಯತೆ

ರ್‍ವಾಣಗಳನ್ನು ಹಾಡುವ ಮುಖ್ಯ ಉದ್ದೇಶ ಪ್ರೇಕ್ಷಕರ ಬೇಸರವನ್ನು ಕಳೆಯುವುದು. ಆ ಕಾರಣಕ್ಕೆ ಹಾಸ್ಯದ ವಸ್ತುಗಳನ್ನು ಹೆಚ್ಚಾಗಿ ಹಾಡಲಾಗುತ್ತದೆ. ಹುಡುಗ-ಹುಡುಗಿಯರ ಪ್ರಣಯ ಪ್ರಸಂಗಗಳನ್ನು ಹಾಸ್ಯದ ವಸ್ತುಗಳನ್ನಾಗಿ ಮಾಡಿಕೊಳ್ಳುತ್ತಿರುವುದು ಹೆಚ್ಚು. ಮುದುಕ ಮುದುಕಿಯರ ಘಟನೆಗಳು, ಊರುಗಳಲ್ಲಿ ನಡೆಯುವ ಘಟನೆಗಳು, ಗಿಡ್ಡ ಮತ್ತು ಎತ್ತರದ ವ್ಯಕ್ತಿಗಳ ನಡುವೆ ನಡೆಯುವ ಘಟನೆಗಳು ಕಥೆಯಲ್ಲಿ ತರುತ್ತಾರೆ. ಇವು ತುಂಬಾ ಅಶ್ಲೀಲವಾಗಿರುತ್ತವೆ.

ಎಲೆ ಕುಂಬಳಕಾಯಿ ಹಂತಾ ಕುಂಡ್ಯಾಕೆ
ಹೆಗ್ಗಣ ಕೆದರಿದ ಮಣ್ಣಿನಂಥ ಮೈಯಾಕೆ
ಕಳ್ಳಿಕಟಗಿಯಂಥಾ ಕೈಯಾಕೆ
ಬೀಸಿ ಬಡಗಿ ಹಂತಾ ಕಾಲಾಕೆ
ರಂಜಣಗಿಯಂತಾ ಹೊಟ್ಯಾಕೆ
ಕಂಜೂರಿಗಿಯಂತಾ ನಡದಾಕೆ
ಎಡೆಯರ ಕಪಾಲಿಯಂತ ಮಲ್ಯಾಕೆ
ಇಜ್ಜೋಡ ಬೀಸುಕಲ್ಲನಂತಾ ಸೊಂಡ್ಯಾಕೆ
ಜಂತಿಕುಂಟಿಯಾ ಹಲ್ಲಿನ್ಯಾಕೆ
ಹರ್‍ವೆಣ್ಣೆ ಬಳಗಿಯಂತಾ ಮೂಗಿನ್ಯಾಕೆ
ಕವಡಿ ಹಳ್ಳಿನಂತಾ ಕಣ್ಣಿನ್ಯಾಕೆ
ಹರಕ ಮರಕದಂತೆ ಕಿವಿಯಾಕೆ
ಹಂಜಬುಟ್ಟಿಯಂತಾ ತಲಿಯಾಕೆ
ನೆಟ್ಟಗ್ಹೇಳೂ ನಿಮ್ಮಕ್ಕನ ಗಲ್ಲಾನ ಗಲ್ಲಸಲಿ ಅಂದಲೆ ಹುಡುಗಾ”[೫೭]

ರ್‍ಯಾಣಗಳು ಕೇವಲ ಹಾಸ್ಯವನ್ನು ಮುಂದಿಡುವುದಿಲ್ಲ. ಏಕಪ್ರತಿಮಾ ವಿಧಾನದಲ್ಲಿಯೇ ಅನೇಕ ಪ್ರತಿಮೆಗಳು ಸೇರಿಕೊಂಡು ಬೆಳೆಯುವಂತೆ ಇಲ್ಲಿಯ ಪ್ರಸಂಗಗಳು ಬೆಳೆಯುತ್ತವೆ. ಬದುಕುವ ವಿಧಾನಗಳನ್ನು, ನೀತಿ, ತತ್ವಗಳನ್ನು ಹೇಳುತ್ತಾರೆ. ಹುಡುಗ-ಹುಡುಗಿಯರ ಪ್ರಣಯ ಪ್ರಸಂಗಗಳನ್ನು ಹೇಳುತ್ತಿರುವಾಗ ಅನೈತಿಕ ಸಂಬಂಧಗಳಿಂದ ಆಗುವ ಪರಿಣಾಮಗಳನ್ನು ಸೂಕ್ಷ್ಮವಾಗಿ ಜನಸಮುದಾಯಕ್ಕೆ ರವಾನಿಸುತ್ತದೆ. ದಯಾನಂದ ಮಾಲಗತ್ತಿ ಅವರು ಸಂಗ್ರಹಿಸಿರುವ ರ್‍ಯಾಣಗಳ ಸಂಕಲನದಲ್ಲಿ ಸಿಗುವ ‘ಹಬ್ಬ ಹುಣ್ಣಿಮೆ ಇಲ್ಲದೆ ಬಂದ ಜೋಕುಮಾರನ ಕಥೆ’ ಹಾಡನ್ನು ನೋಡಬಹುದು. ಇಲ್ಲಿ ಅನೈತಿಕ ಸಂಬಂಧದಿಂದಾದ ಇಬ್ಬರು ಯುವಪ್ರೇಮಿಗಳ ಪರಿಣಾಮದ ಚಿತ್ರಣವಿದೆ.

“ಏ ಗುದ್ದಪ್ಪ ಗುದ್ದು ಅಂದಾಗ ಮಂಚದ ಮ್ಯಾಗ ಎದ್ದು
ಗುದ್ದಾದಾಗ ಜೀವ ಹೋಗಿ ಬಿದ್ದನ ನೋಡ್ಲೆ ಹುಡುಗಾ
ಗುದ್ದದ ಮ್ಯಾಗಂತ್ರದ್ರು ಆಕಿಗಿ ಏನ ಮಾಡಿದ್ರಲೆ ಹುಡುಗಾ
ಒಂದು ಕುಂಡಿಗಿ ಸುಣ್ಣ ಒಂದು ಕುಂಡಿಗಿ ಬಣ್ಣಾ ಹಚ್ಚಿ
ಊರಾಗ ಮೆರವಣಿಗೆ ತಗಿದ್ರಲೇ ಹುಡುಗಾ”[೫೮]

ಹಾಸ್ಯದ ಮುಖಾಂತರ ನೀತಿ ತತ್ವಗಳನ್ನು ಹೇಳುವ ಈ ಹಾಡುಗಳು ಕನ್ನಡ ಜನಪದ ಗೀತೆಗಳಲ್ಲಿ ವಿಶಿಷ್ಟವಾಗಿ ನಿಲ್ಲುತ್ತವೆ. ಸಮಾಜದ ಬಗ್ಗೆ ಡೊಳ್ಳು ಹಾಡುಗಾರರಲ್ಲಿರುವ ಕಾಳಜಿಯನ್ನು ಇಲ್ಲಿ ಅರಿಯಬಹುದು. ಇವುಗಳು ಡೊಳ್ಳಿನ ಹಾಡುಗಳ ಉಪಪ್ರಕಾರಗಳಂತೆ ಕಂಡುಬಂದರೂ ಡೊಳ್ಳಿನ ಹಾಡುಗಳ ಜೊತೆ ತಾತ್ವಿಕ ಸಂಬಂಧವನ್ನು ಇಟ್ಟುಕೊಂಡಿವೆ. ಈ ಹಾಡುಗಳ ಸೈದ್ಧಾಂತಿಕ ಅಧ್ಯಯನ ಮಾಡಬೇಕು. ಆಗ ಡೊಳ್ಳಿನ ಹಾಡುಗಳ ವಿಶಿಷ್ಟ ಚಹರೆಯನ್ನು ಗುರುತಿಸುವುದಕ್ಕೆ ಸಹಾಯವಾಗುತ್ತದೆ.

ವಿವಿಧ ಪ್ರಕಾರದ ಹಾಡುಗಳ ತಾತ್ವಿಕತೆ

ಡೊಳ್ಳಿನ ಹಾಡುಗಳ ಮುಖ್ಯ ಉದ್ದೇಶ ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಅನಾವರಣ ಮಾಡುವುದು. ಹಾಗಾಗಿ ಸಾಂಸ್ಕೃತಿಕ ವೀರರ ಹಾಡುಗಳು ಹೆಚ್ಚಾಗಿ

ಕಂಡು ಬರುತ್ತವೆ. ಉಳಿದಂತೆ ಕಂಡುಬರುವ ಭಿನ್ನ ಪ್ರಕಾರದ ಹಾಡುಗಳು ಪ್ರದರ್ಶನ ವೈಧಾನಿಕತೆಗಾಗಿ ರೂಪಿತವಾದಂತವು. ಜನರಿಗೆ ಭಕ್ತಿ, ನೀತಿ, ತತ್ವ ಮುತಾದ ಜ್ಞಾನಗಳನ್ನು ಕೊಡುವ ವಸ್ತುಗಳ ಹಾಡುಗಳನ್ನು ರೂಢಿಸಿಕೊಂಡಿವೆ. ಸಭಾ ಮಾರ್ಯದೆಯ ಹಾಡುಗಳು, ಸ್ತುತಿ ಪದಗಳು, ನೆನಕೆಯ ಹಾಡುಗಳು ಎಂದು ಗುರುತಿಸುವ ವಿವಿಧ ಪ್ರಕಾರದ ಹಾಡುಗಳು ಪ್ರದರ್ಶನದ ವಿಧಾನ ಮತ್ತು ವೈಧಾನಿಕತೆಗಾಗಿ ಸೃಷ್ಟಿಯಾಗಿವೆ. ನೀತಿ ಹಾಡುಗಳು, ಒಗಟಿನ ಹಾಡುಗಳು ಖರೆ ಹಾಡುಗಳು ರ್‍ವಾಣ ಗಳು ಭಕ್ತಿ ಮತ್ತು ನೀತಿಯನ್ನು ಮುಖ್ಯ ವಸ್ತುವನ್ನಾಗಿಸಿಕೊಂಡು ಭಿನ್ನ ಶೈಲಿಯಲ್ಲಿ ಹೇಳುತ್ತವೆ. ಹರಕೆಯ ಹಾಡುಗಳು ಕಲೆ ಸೃಷ್ಟಿಯ ಸಂಪ್ರದಾಯದ ಹಿನ್ನೆಲೆಯಲ್ಲಿ ಬಳಕೆ ಆಗುತ್ತಿವೆ. ಭಿನ್ನ ಉದ್ದೇಶಗಳನ್ನು ಹೊಂದಿರುವ ಈ ಹಾಡುಗಳು ಕನ್ನಡ ಜನಪದ ಗೀತೆ ಸಾಹಿತ್ಯದ ಕ್ಷೇತ್ರದಲ್ಲಿ ವಿಶೇಷವಾದ ಸ್ಥಾನವನ್ನು ಪಡೆದಿವೆ.

ಅಡಿಟಿಪ್ಪಣಿಗಳು

೧. ವಿರುಪಾಕ್ಷಗೌಡ ಕೆ. ಮತ್ತು ಕೊಟ್ರಪ್ಪ ಮೇಟಿ (ಸಂ), **ನಡಿಯಪ್ಪ ನಮ್ಮ ನಾಡಿಗೆ,** ಪು. ೨೩.

೨. ಜ್ಯೋತಿ ಹೊಸೂರ, **ಡೊಳ್ಳಿನ ಹಾಡುಗಳ ಸಮೀಕ್ಷೆ,** ಪು. ೧೩.

೩. ಎಂ.ಎಂ. ಕರಡಿ ಪಬ್ಲಿಷರ್ಸ್, **ಡೊಳ್ಳಿನ ಪದಗಳು,** ಪು. ೨೬.

೪. **ಶ್ರೀಶೈಲ ಇಂಗಳೇಶ್ವರ,** ಡೊಳ್ಳಿನ ಹಾಡುಗಳು ಭಾಗ-೧೯, **ಪದ್ಮಿನಿ ಕ್ಯಾಸೆಟುಗಳು.**

೫. ಹಾಡುವವರು; ಬಸವರಾಜ ಮಲಶೆಟ್ಟಿ, **ಉತ್ತರ ಕರ್ನಾಟಕದ ಜನಪದ ವಾದ್ಯಗಳು,** ಪು. ೬೬.

೬. ಅದೇ, ಪು. ೬೫.

೭. ಅರ್ಜುನ ಗೋಳಸಂಗಿ, **ಡೊಳ್ಳಿನ ಪದಗಳು,** ಪು. ೧೧.

೮. ಅದೇ, ಪು. ೧೧.

೯. ಹಾಡಿದವರು; **ಶ್ರೀಶೈಲ ಇಂಗಳೇಶ್ವರ ಮತ್ತು ಜಕ್ಕಣ್ಣ ಮಾಸ್ತರ.**

೧೦. **ಜನಪದ ಸಾಹಿತ್ಯ ದರ್ಶನ-೪,** ಪು. ೫೬.

೧೧. ಸುಂಕಾಪುರ ಎಂ.ಎಸ್. (ಸಂ.), ಅರ್ಜುನ ಗೋಳಸಂಗಿ, **ಡೊಳ್ಳಿನ ಪದಗಳು,** ಪು. ೩೮.

೧೨. ಅದೇ, ಪು. ೩೯.

೧೩. ಸುಂಕಾಪುರ ಎಂ.ಎಸ್. (ಸಂ), **ಜೀವನ ಜೋಕಾಲಿ-೬,** ಪು. ೯.

೧೪. ವೀರೇಶ ಶೇ. ಬಡಿಗೇರ, **ಉತ್ತರ ಕರ್ನಾಟದ ಜನಪದ ಗೀತ ಮೇಳಗಳು,** ಪು.೧೯೭.

೧೫. ವೀರಣ್ಣದಂಡೆ (ಸಂ), **ಜನಪದ ಹಾಲುಮತ ಮಹಾಕಾವ್ಯ,** ಪು. ೧.

೧೬. ವೀರೇಶ ಶೇ. ಬಡಿಗೇರ, **ಉತ್ತರ ಕರ್ನಾಟದ ಜನಪದ ಗೀತ ಮೇಳಗಳು,** ಪು. ೧೯೭.

೧೭. ಗದ್ದಿಗೀಮಠ ಬಿ.ಎಸ್., **ಕನ್ನಡ ಜನಪದ ಗೀತೆಗಳು,** ಪು. ೯.

೧೮. ಸುಂಕಾಪುರ ಎಂ.ಎಸ್. (ಸಂ), **ಜೀವನ ಜೋಕಾಲಿ-೬,** ಪು. ೩.

೧೯. ಅದೇ., ಪು. ೫೧.

೨೦. ವೀರೇಶ ಶೇ ಬಡಿಗೇರ, ಉತ್ತರ ಕರ್ನಾಟದ ಜನಪದ ಗೀತ ಮೇಳಗಳು, ಪು. ೧೯೪.

೨೧. ಸುಂಕಾಪುರ ಎಂ.ಎಸ್. (ಸಂ), ಜೀವನ ಜೋಕಾಲಿ-೬ ಡೊಳ್ಳಿನ ಹಾಡುಗಳು, ಪು. ೯.

೨೨. ಹಾಡಿದವರು; ಶ್ರೀಶೈಲ ಇಂಗಳೇಶ್ವರ.

೨೩. ಹಾಡಿದವರು; ಕುಮಾರಿ ರೇಣುಕ ಮತ್ತು ಮೀನಾಕ್ಷಿ, ಮಣ್ಣೂರು.

೨೪. ಕನ್ನಡ ಸಾಹಿತ್ಯ ಪರಿಷತ್, ಸಂಕ್ಷಿಪ್ತ ಕನ್ನಡ ನಿಘಂಟು, ಪು. ೧೩೬೯.

೨೫. ಕುವೆಂಪು ಅಧ್ಯಯನ ಸಂಸ್ಥೆ, ಕನ್ನಡ ವಿಷಯ ವಿಶ್ವಕೋಶ, ಸಂಪುಟ-೨, ಪು. ೧೨೯೮.

೨೬. ಚನ್ನಪ್ಪ ಕಟ್ಟಿ ಮತ್ತು ವಾಡೇದ್ ಆರ್.ಎಸ್. (ಸಂ), ಕುರುಬ ಜನಪದ, ಪು. ೭೮.

೨೭. ಬಸವರಾಜ ಮಲಶೆಟ್ಟಿ (ಸಂ), ವಿಭಾವ, ಪು. ೫೩.

೨೮. ಜ್ಯೋತಿ ಹೊಸೂರ (ಸಂ), ಕಾಲಗತಿ, ಸಂಪುಟ-೧೧, ಪು. ೧೦.

೨೯. ಶಿವಾನಂದ ಗುಬ್ಬಣ್ಣವರ್ (ಸಂ), ದೇವರ್ ಬಂದಾವ್ ಬನ್ನಿರೇ, ಪ್ರಸ್ತಾವನೆ, ಪು. XXV.

೩೦. ವೀರೇಶ ಶೇ ಬಡಿಗೇರ, ಉತ್ತರ ಕರ್ನಾಟದ ಜನಪದ ಗೀತ ಮೇಳಗಳು, ಪು. ೧೯೯.

೩೧. ಅದೇ., ಪು. ೧೯೯.

೩೨. ವಿರುಪಾಕ್ಷಗೌಡ ಕೆ. ಮತ್ತು ಕೊಟ್ರಪ್ಪ ಮೇಟಿ (ಸಂ), ನಡಿಯಪ್ಪ ನಮ್ಮ ನಾಡಿಗೆ, ಪು. ೨೫.

೩೩. ವೀರೇಶ ಶೇ ಬಡಿಗೇರ, ಉತ್ತರ ಕರ್ನಾಟದ ಜನಪದ ಗೀತ ಮೇಳಗಳು, ಪು.೧೯೫-೧೯೭.

೩೪. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪು. ೧೭೧.

೩೫. ಬಸವನಗೌಡ ಪಾಟೀಲ್ (ಸಂ), ತೂಕ ಮಾಡಿ ಹೇಳತೀನಿ ನ್ಯಾಯ, ಪು. ೮೦.

೩೬. ವಿರುಪಾಕ್ಷಗೌಡ ಕೆ. ಮತ್ತು ಕೊಟ್ರಪ್ಪ ಮೇಟಿ (ಸಂ), ನಡಿಯಪ್ಪ ನಮ್ಮ ನಾಡಿಗೆ, ಪು. ೫೦.

೩೭. ಹಾಡಿದವರು; ಸೋಮಲಿಂಗ ಧನಗೊಂಡ ಬಿಜ್ಜರಗಿ.

೩೮. ವೀರೇಶ ಶೇ ಬಡಿಗೇರ, ಉತ್ತರ ಕರ್ನಾಟದ ಜನಪದ ಗೀತ ಮೇಳಗಳು, ಪು. ೨೦೪.

೩೯. ಸುಂಕಾಪುರ ಎಂ.ಎಸ್. (ಸಂ), ಜೀವನ ಜೋಕಾಲಿ ಡೊಳ್ಳಿನ ಹಾಡುಗಳು, ಪು. ೧೪೬.

೪೦. ಹಾಡಿದವರು; ಸೋಮಲಿಂಗ ಧನಗೊಂಡ ಬಿಜ್ಜರಗಿ

೪೧. ಎಂ.ಎಂ. ಕರಡಿ ಬುಕ್ ಸೆಲ್ಲರ್, ಡೊಳ್ಳಿನ ಪದಗಳು, ಪು. ೨೪.

೪೨. ಶಿವಾನಂದ ಶೆಲ್ಲಿಕೇರಿ (ಸಂ), ಕೃಷ್ಣಾತೀರದ ಹಾಡು ಸಂಸ್ಕೃತಿ, ಪು. ೧೧.

೪೩. ರಾಜಪ್ಪ ಟಿ.ಎಸ್. (ಸಂ), ರಾಯಚೂರು ಜಿಲ್ಲೆಯ ಜನಪದ ಗೀತೆಗಳು, ಪು. ೩೬.

೪೪. ವೀರೇಶ ಶೇ ಬಡಿಗೇರ, ಉತ್ತರ ಕರ್ನಾಟದ ಜನಪದ ಗೀತ ಮೇಳಗಳು, ಪು. ೨೦೯.

೪೫. ಶಿವಾನಂದ ಶೆಲ್ಲಿಕೆರೆ (ಸಂ), ಕೃಷ್ಣಾತೀರದ ಹಾಡು ಸಂಸ್ಕೃತಿ, ಪು. ೨೭.

೪೬. ವೀರೇಶ ಶೇ ಬಡಿಗೇರ, ಉತ್ತರ ಕರ್ನಾಟದ ಜನಪದ ಗೀತ ಮೇಳಗಳು, ಪು. ೨೧೧.

೪೭. ಹಾಡಿದವರು; ಶ್ರೀಶೈಲ ಇಂಗಳೇಶ್ವರ.

೪೮. ರಚನೆ : ಶ್ರೀ ಜಕ್ಕಣ್ಣ ಮಾಸ್ತರ್ ಇಂಗಳೇಶ್ವರ.

೪೯. ನಟರಾಜ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪು. ೨೨೭.

೫೦. ಜಕಬಾಳ್ ಎಸ್.ಎಫ್. (ಸಂ), ನುಡಿನಮನ, ಪು. ೧೪೮.

೫೧. ಬಸವರಾಜ ಎನ್ (ಸಂ), ಡೊಳ್ಳಿನ ಹಾಡು, ಪು. ೯೬.

೫೨. ಲಕ್ಕಪ್ಪಗೌಡ ಎಚ್.ಜೆ. (ಪ್ರ.ಸಂ.) ಜಾನಪದ ಕೈಪಿಡಿ, ಪು. ೪೦

೫೩. ಸುಂಕಾಪುರ ಎಂ.ಎಸ್. (ಸಂ), ಜೀವನ ಜೋಕಾಲಿ ಭಾಗ-೬, ಪು. ೭.

೫೪. ಬಸವರಾಜ ಎನ್ (ಸಂ), ಡೊಳ್ಳಿನ ಹಾಡು, ಪು. ೯೩.

೫೫. ಹಿರೇಮಠ ಎಸ್.ಎಸ್., ಜಾತ್ರೆಗಳು, ಪು. ೨೧೫.

೫೬. ಅದೇ., ಪು. ೨೧೭.

೫೭. ದೇವಾನಂದ ಮಾಲಗತ್ತಿ (ಸಂ), ರ್‍ಯಾಣಗಳು, ಪು. ೮.

೫೮. ಅದೇ., ಪು. ೫೧.

• • •

ಅಧ್ಯಾಯ ನಾಲ್ಕು
ಡೊಳ್ಳಿನ ಹಾಡುಗಳಲ್ಲಿ ಸಾಂಸ್ಕೃತಿಕ ವೀರರು

೪.೧. ಬೀರಪ್ಪ

೪.೧.೧. ಪ್ರವೇಶ

೪.೧.೨. ಡೊಳ್ಳಿನ ಹಾಡುಗಳಲ್ಲಿ ಬೀರಪ್ಪನ ಸಾಂಸ್ಕೃತಿಕ ಚರಿತ್ರೆ

೪.೧.೨.೧. ಶೈವ ಆರಾಧನೆಯ ಅರ್ಹತೆಗಾಗಿ ಹಠದಿಂದ ಪಡೆದ ಮಗು

೪.೧.೨.೨. ಬೀರಪ್ಪನ ಜನನ ಮತ್ತು ಆರ್ಥಿಕ ಸಂಘರ್ಷ

೪.೧.೨.೩. ಸಪ್ತಮಾತೃಕೆಯರ ಆರೈಕೆಯಲ್ಲಿ ಬೆಳೆದ ಬೀರಪ್ಪ

೪.೧.೩. ಬೀರಪ್ಪನ ಸಂಘರ್ಷಗಳು

೪.೧.೩.೧. ಬೀರಪ್ಪ; ಶಿಷ್ಯಂದಿರ ಮುಖಾಂತರ ಮಾಡಿಸುವ ಸಂಘರ್ಷ

೪.೧.೩.೨. ಬೀರಪ್ಪನ ಸಂಘರ್ಷಗಳ ತಾತ್ವಿಕತೆ

೪.೧.೪. ಬೀರಪ್ಪನ ಚರಿತ್ರೆಯ ಮೇಲೆ ನಡೆದ ರಾಜಕಾರಣ

೪.೧.೪.೧. ವೀರಪ್ಪನನ್ನು ವೀ(ಈ)ರಪ್ಪನನ್ನಾಗಿ ರೂಪಾಂತರಿಸಿದ ತಾತ್ವಿಕ ರಾಜಕಾರಣ

೪.೧.೪.೧.೧. ವೀರಪ್ಪ-ಈರಪ್ಪ ಕುರುಬರ ಕುಲದೈವ

೪.೧.೪.೧.೨. ರೇವಣಸಿದ್ಧನನ್ನು ಪ್ರಾಚೀನ ದೈವವನ್ನಾಗಿ ಸೃಷ್ಟಿಸಿದರು

೪.೧.೪.೧.೩. ಕರಿಸಿದ್ಧನ ಅಕ್ರಮಣ

೪.೧.೫. ಬೀರಪ್ಪನ ತಾತ್ವಿಕತೆ

೪.೨. ಮಾಳಿಂಗರಾಯ

೪.೨.೧. ಪ್ರವೇಶ

ಪ್ರವೇಶ

ಜಾನಪದ ಅಧ್ಯಯನಗಳು ಜಾಗತಿಕ ಮಟ್ಟದಲ್ಲಿ ತಮ್ಮ ವಿಸ್ತೃತ ರೂಪ ಪಡೆದಿವೆ. ಅದರಲ್ಲೂ ಮಹಾಕಾವ್ಯಗಳ ಅಧ್ಯಯನ ಮಹತ್ವದ ಸ್ಥಾನ ಪಡೆಯುತ್ತಿದೆ. ಇದು ಕೇವಲ ಅಧ್ಯಯನಕಾರರ ದೃಷ್ಟಿಯಿಂದ ಮಹತ್ವವಾಗುತ್ತಿಲ್ಲ. ಇದನ್ನು ಕಟ್ಟಿ ಹಾಡುತ್ತಿರುವ ಶ್ರೀಸಾಮಾನ್ಯರ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಇದಕ್ಕಿರುವ ಪ್ರಮುಖ ಕಾರಣವೆಂದರೆ ಜನಪದ ಮಹಾಕಾವ್ಯದ ಸಂಸ್ಕೃತಿ ನಿಷ್ಠೆ. ಜಾನಪದದ ಇತರ ಪ್ರಕಾರಗಳಿಗೆ ಇಲ್ಲದಷ್ಟು ಸಂಸ್ಕೃತಿಯೊಂದಗಿನ ಸಂಬಂಧ ಈ ಮಹಾಕಾವ್ಯಕ್ಕಿದೆ. ಹಾಗಾಗಿಯೇ ಮಹಾಕಾವ್ಯಗಳನ್ನು ಲೋಕದೃಷ್ಟಿ (ಲೋಕ ಸೃಷ್ಟಿ-ವಿಶ್ವ ಸೃಷ್ಟಿ), ಸಾಂಸ್ಕೃತಿಕ ಅನನ್ಯತೆ, ಸಮುದಾಯಗಳ ಚರಿತ್ರೆ, ರಾಷ್ಟ್ರೀಯತೆ ಮುಂತಾದ ಪಾರಿಭಾಷಿಕ ಪರಿಕಲ್ಪನೆಗಳಿಂದ ಹೆಚ್ಚಾಗಿ ಅಧ್ಯಯನ ಮಾಡಲಾಗಿದೆ. ಇದು ಮಹಾಕಾವ್ಯಕ್ಕೆ ಇರುವ ವಿಶಿಷ್ಟ ಚಹರೆಯೂ ಹೌದು. ಈ ವಿಶಿಷ್ಟತೆಯನ್ನು ಹೊಂದಿರುವುದರಿಂದಲೇ ಅಧ್ಯಯನಕಾರರಿಗೆ ಪ್ರಬಲ ತಾಣವಾಗಿ ಸಮುದಾಯಗಳಿಗೆ ಆತ್ಮಗೌರವದ ಸಂಕೇತವಾಗಿ ಕಾಣಿಸುತ್ತದೆ. "ಇದರಿಂದ ಮಹಾಕಾವ್ಯಗಳನ್ನು ಸೃಜಿಸುವ ಸಮುದಾಯಗಳು ತಮ್ಮ ಜನಾಂಗದ ಚಲನೆಗಳನ್ನು, ಸಾಂಸ್ಕೃತಿಕ ಪಾರಂಪರಿಕ ಚಹರೆಗಳನ್ನು, ಲೋಕದೃಷ್ಟಿಗಳನ್ನು, ವಿಶ್ವವ್ಯಾಪಕತೆ ಎಂಬ ಅಖಂಡ ಪರಿಕಲ್ಪನೆಯಲ್ಲಿ ಒಳಗೊಳ್ಳಲು ತವಕಿಸುತ್ತಿವೆ. ಇವುಗಳ ನಡುವೆ ಅಧ್ಯಯನಕಾರರು ಅವುಗಳನ್ನು ಒಂದು ಪ್ರದೇಶಕ್ಕೆ, ನಮ್ಮದೆನ್ನುವ ಅಭಿಮಾನಕ್ಕೆ ಸಿಕ್ಕಿ ಹಾಕಿಬಿಡುವ ಎಲ್ಲ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಸಮುದಾಯಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಎಚ್ಚರ ಮೂಡಿಸುವ ಹಂಬಲಗಳು, ಒತ್ತಾಸೆಗಳು ಈ ಅಧ್ಯಯನದ ಆಲೋಚನೆಗಳ ಹಿಂದಿವೆಯಾದರೂ, ಈ ಕುರಿತು ಆಲೋಚಿಸುವ ಮನಸ್ಸುಗಳು ಒಮ್ಮೊಮ್ಮೆ ತಮ್ಮ ಸ್ವಹಿತಾಶಕ್ತಿಗೆ, ಈ ಹೊತ್ತಿನ ಜಾತಿ ರಾಜಕಾರಣಕ್ಕೆ ಮತೀಯವಾದ ಉದಾರತನಗಳಿಗೆ ಬಲಿ ಆಗುತ್ತಿವೆ".[೧] ಇದರಿಂದ ಅನೇಕ ತಳಸಮುದಾಯಗಳು ತಮ್ಮ ಬಾಳಿಗೆ ಅನ್ವಯಿಸಿಕೊಂಡು ಜೀವದಂತೆ ಕಾಪಾಡಿಕೊಂಡು ಬಂದಿರುವ ಮಹಾಕಾವ್ಯಗಳು ಈ ಸಮುದಾಯಗಳನ್ನು ಬಿಟ್ಟು, ತಮ್ಮದಲ್ಲದ ಸಮುದಾಯಗಳ ಗುಂಪುಗಳ ಕೈಸೇರುತ್ತಿವೆ. ಇಂತಹ ಸಂಶೋಧನ ವಿಧಾನದಿಂದಲೇ ಈ ಹೊತ್ತು ಮಂಟೇಸ್ವಾಮಿ, ಮಾದೇಶ್ವರಂತಹ ಹೊಲೆಯ ಮಾದಿಗ ಪಂಥಗಳು ಲಿಂಗಾಯತ ಗುಂಪುಗಳಾಗಿ ರೂಪಗೊಂಡಿವೆ; ಅನ್ನುವ ವಾದ ತೀವ್ರವಾಗಿ ಕೇಳಿಬರುತ್ತಲಿದೆ. ಹಾಲುಮತ ಸಮುದಾಯದ ಕಥನಗಳ ಮೇಲೂ; ಡೊಳ್ಳಿನ ಹಾಡುಗಳ ಮೇಲೂ ಇಂತಹ ಪ್ರಭಾವ ಆಗಿದೆ. ತಳಸಮುದಾಯದ ಕಥನಗಳನ್ನು ಇಲ್ಲವಾಗಿಸುವುದು ಮತ್ತು ತಮ್ಮ ಸಂಸ್ಕೃತಿ ಶ್ರೀಮಂತವಾದುದು ಎಂದು ತೋರಿಸುವುದು ಇದರ ಪ್ರಧಾನ ಉದ್ದೇಶ. ಇದು ಆಗಬಾರದು. ಇದರಿಂದ ತಳಸಮುದಾಯಗಳ ಕಥನಗಳು ವಿಸ್ಮೃತಿಗೆ

ಒಳಗಾಗುತ್ತವೆ. ಇದನ್ನು ಪ್ರತಿರೋಧಿಸುವ ಮತ್ತು ವಾಸ್ತವತೆಯ ನೆಲೆಯಲ್ಲಿ ಮಹಾಕಾವ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಜರೂರತೆ ನಮ್ಮ ಮುಂದಿದೆ. ಪ್ರಸ್ತುತ ಅಧ್ಯಯನ 'ಡೊಳ್ಳಿನ ಹಾಡು'ಗಳನ್ನು ಕುರಿತಂತೆ ಸೈದ್ಧಾಂತಿಕ ಅಧ್ಯಯನ ನಡೆಸುವ ಪ್ರಯತ್ನ ಇದಾಗಿದೆ.

ಎರಡು ದಶಕಗಳಿಂದ ಈಚೆಗೆ ಹಾಲುಮತ ಸಮುದಾಯದ ಅಧ್ಯಯನಗಳು ಹೆಚ್ಚಾಗಿ ಆಗುತ್ತಿವೆ. ಅವುಗಳಲ್ಲಿ ಸಾಂಸ್ಕೃತಿಕ ನಾಯಕರನ್ನು ಕುರಿತ ಅಧ್ಯಯನಗಳು ಹೆಚ್ಚು. ಇದಕ್ಕೆ ಹಲವು ಕಾರಣಗಳು ಇವೆ. ಪ್ರಮುಖ ಕಾರಣವೆಂದರೆ ಇವರು ಆರಾಧ್ಯ ದೈವಗಳನ್ನು ಹೆಚ್ಚಾಗಿ ಗೌರವಿಸುವುದು ಮತ್ತು ತಮ್ಮ ಆರಾಧ್ಯ ದೈವದ ಚರಿತ್ರೆಯನ್ನು ತಿಳಿದುಕೊಳ್ಳಬೇಕು ಅನ್ನುವ ಹಂಬಲ ಹೊಂದಿರುವುದು. ಇದರಿಂದ ಸಾಂಸ್ಕೃತಿಕ ವೀರರ ಚರಿತ್ರೆಗೆ ಸಂಬಂಧಿಸಿದ ಪುಸ್ತಕಗಳು, ಸಿಡಿಗಳು, ಕ್ಯಾಸೆಟ್‌ಗಳನ್ನು ಹಣ ಕೊಟ್ಟು ತೆಗೆದುಕೊಳ್ಳುತ್ತಾರೆ; ಓದುತ್ತಾರೆ; ಕೇಳುತ್ತಾರೆ. ಈ ಓದಿನ ತೀವ್ರತೆ ಎಷ್ಟಿದೆ ಅಂದರೆ ಸಾಂಸ್ಕೃತಿಕ ವೀರರ ಹೆಸರಿನ ಕೃತಿಗಳು, ಸಿಡಿಗಳು ಬಂದರೆ ಸಾಕು ತೆಗೆದುಕೊಳ್ಳುವರು. ಕೊಪ್ಪಳದ ಕನ್ನಡ ಪುಸ್ತಕಾಲಯದಲ್ಲಿ ಕೆಲಸ ಮಾಡುತ್ತಿದ್ದ ಪುಸ್ತಕ ವ್ಯಾಪಾರಿ ಹನುಮಂತಪ್ಪ ಅವರು ಹಾಲುಮತ ಸಮುದಾಯದ ಪುಸ್ತಕಗಳು ಖರ್ಚಾದಂತೆ ಬೇರೆ ಸಮುದಾಯದ ಪುಸ್ತಕಗಳು ಖರ್ಚಾಗುವುದಿಲ್ಲವೆಂದು ಹೇಳುತ್ತಿದ್ದರು. ಗುಲಬರ್ಗಾದ ಪುಸ್ತಕ ವ್ಯಾಪಾರಿ ಪ್ರಭಾಕರ್ ಕಾಂತ ಅವರು ಹಾಲುಮತ ಸಮುದಾಯದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಸಮ್ಮೇಳನಗಳಿಗೆ, ಜಾತ್ರೆ-ಉತ್ಸವಗಳಿಗೆ ತಪ್ಪದೇ ಪುಸ್ತಕ ವ್ಯಾಪಾರ ಮಾಡುವುದಕ್ಕೆ ಹೋಗುತ್ತಿದ್ದಾರೆ. 'ಈ ಸಮುದಾಯದಲ್ಲಿ ಓದುವ ಜನರು ಇದ್ದಾರೆ. ತಮ್ಮ ಸಮುದಾಯದ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಾರೆ' ಅನ್ನುವುದು ಈತನ ಅಭಿಪ್ರಾಯ. ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳ ಪುಸ್ತಕ ವ್ಯಾಪಾರಿಗಳು, ಬುಕ್‌ಸ್ಟಾಲ್‌ನವರು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರ ಹೊಸ ಪುಸ್ತಕಗಳು ಪ್ರಕಟವಾದರೆ ಕಳಿಸಿಕೊಡಿ ಎಂದು ಕೇಳುತ್ತಿದ್ದಾರೆ. ನೀವು ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಮಾಡಿ ನಾವು ೨೫೦, ೩೦೦ ಪ್ರತಿಗಳನ್ನು ಮಾರಾಟ ಮಾಡುತ್ತೇವೆ ಎನ್ನುವ ಭರವಸೆ ಕೊಡುತ್ತಿದ್ದಾರೆ. ಇತ್ತೀಚೆಗೆ ಪ್ರಕಟವಾದ 'ಕುರುಬ ಗುರು ಒಡೆಯರು' ಪುಸ್ತಕವನ್ನು ಒಂದೊಂದು ಬುಕ್‌ಸ್ಟಾಲ್‌ನವರು ೧೫೦, ೨೦೦, ೪೦೦ ಪ್ರತಿಗಳನ್ನು ಮಾರಾಟ ಮಾಡಿಕೊಟ್ಟಿದ್ದಾರೆ. ಈಗಾಗಲೇ ಎರಡು ಸಾವಿರದಷ್ಟು ಪ್ರತಿಗಳು ಒಂದು ವರ್ಷದೊಳಗೆ ಮಾರಾಟವಾಗಿವೆ.

ಈ ವಾಸ್ತವತೆಯನ್ನು ಸೂಕ್ಷ್ಮವಾಗಿ ಅರಿತ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಸಮುದಾಯದ ಆಸಕ್ತಿಯನ್ನು ಬಳಸಿಕೊಳ್ಳುತ್ತಿದ್ದಾರೆ. ಇದರಲ್ಲಿ ಆ ಸಮುದಾಯದ ಬರಹಗಾರರು ಹೆಚ್ಚು. ಈ ಸಮುದಾಯದ ಆಸಕ್ತಿಯನ್ನು, ಜನಪ್ರಿಯತೆ ಮತ್ತು ಬಂಡವಾಳ ತರುವ ವಿಧಾನ ಎಂದುಕೊಂಡಿದ್ದಾರೆ. ಹೆಚ್ಚು ಹೆಚ್ಚು ಪುಸ್ತಕಗಳನ್ನು, ಆಡಿಯೋ ವಿಡಿಯೊಗಳ ಸಿಡಿ ಕ್ಯಾಸೆಟ್‌ಗಳನ್ನು ಹೊರತಂದಿದ್ದಾರೆ. ವಿದ್ಯಾನಿಧಿ ಪ್ರಕಾಶನ, ಗದಗ ಇವರು ಹಾಲುಮತ ಪುರಾಣಗಳನ್ನು ಬರೆಸುತ್ತಿದ್ದಾರೆ. ಬರೆಸುವುದು ತಪ್ಪು ಅನ್ನುವುದು ಇಲ್ಲಿನ ಉದ್ದೇಶವಲ್ಲ. ಒಂದೇ ವಸ್ತುವನ್ನು ಆಧರಿಸಿ ಹತ್ತಾರು ಶೀರ್ಷಿಕೆಗಳ

ಹಲವು ಕೃತಿಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿನ ಹೆಚ್ಚು ಕೃತಿಗಳಿಗೆ ಸೈದ್ಧಾಂತಿಕ ಶಿಸ್ತು ಇಲ್ಲ. ಕ್ಷೇತ್ರಕಾರ್ಯದ ಮಾಹಿತಿ ಇಲ್ಲ. ಒಬ್ಬೊಬ್ಬ ಸಾಂಸ್ಕೃತಿಕ ವೀರರನ್ನು ಆಯ್ಕೆ ಮಾಡಿಕೊಂಡಿರುವ ಪಠ್ಯಗಳಿಗೆ ಪೌರಾಣಿಕತೆಯನ್ನು ಸೇರಿಸಿ, ರಮ್ಯಾದ್ಭುತವಾಗಿ ವರ್ಣಿಸಿ ಬರೆಯುತ್ತಿದ್ದಾರೆ. ತಮ್ಮ ಸಮಕಾಲೀನ ಅನೇಕ ಒತ್ತಡಗಳನ್ನು ಬೆರೆಸುತ್ತಿದ್ದಾರೆ. ಇದು ಚರಿತ್ರೆಯ ಕಾಲಕಲ್ಪನೆಯನ್ನು ಮುರಿದು ಹಾಕುತ್ತವೆ. ಮೂಲಪಠ್ಯಗಳನ್ನು ವಿಸ್ಮೃತಿಗೊಳಿಸುತ್ತವೆ. ಈ ರೀತಿ ಆಗಬಾರದು ಅನ್ನುವುದು ಇಲ್ಲಿನ ಉದ್ದೇಶ. ಶ.ಶಿ. ಕುಂಬಾರರವರು ಬರೆದಿರುವ ಹಲವು ಕೃತಿಗಳು ಇದಕ್ಕೆ ಮುಖ್ಯ ಉದಾಹರಣೆ.

ಇದಕ್ಕೆ ಇನ್ನೊಂದೆರಡು ಉದಾಹರಣೇಗಳನ್ನು ಕೊಡಬಹುದು. 'ಒಡೆಯರ್ ಡಿ. ಹೆಗ್ಗಡೆ' ಅವರು ಹಲವು ಪುಸ್ತಕಗಳನ್ನು ತಮ್ಮದೆಯಾದ ಪ್ರಕಾಶನದಿಂದ ಪ್ರಕಟ ಮಾಡಿದ್ದಾರೆ. ಇರುವ ಸದ್ಯ ದೊರಕುವ ಪುಸ್ತಕಗಳಲ್ಲಿನ ವಿಶ್ಲೇಷಣೆಗಳನ್ನು ಆಯ್ಕೆ ಮಾಡಿಕೊಂಡು ಒಂದು ಕಡೆ ಗುಡ್ಡೆ ಹಾಕಿ ತಮ್ಮ ಹೆಸರಿನಲ್ಲಿ ಪುಸ್ತಕಗಳನ್ನು ತರುತ್ತಿದ್ದಾರೆ. ಮಾಹಿತಿ ಆಯ್ಕೆ ಮಾಡಿಕೊಂಡ ಪುಸ್ತಕಗಳ ವಿವರಗಳನ್ನು ಕೊಟ್ಟಿರುತ್ತಾರೆ. ಆದರೆ ಆಯ್ಕೆ ಮಾಡಿಕೊಂಡ ವಿಧಾನಗಳು ಸರಿಯಾಗಿ ಇರುವುದಿಲ್ಲ. ಅವುಗಳಿಗೆ ಒಂದು ಕಡೆ ತಮ್ಮದೆಯಾದ ಅನಿಸಿಕೆಗಳು ಇರುವುದಿಲ್ಲ. ಒಂದು ವಿಷಯಕ್ಕೆ ಸಂಬಂಧಪಟ್ಟ ವಿಷಯವನ್ನು ಕಷ್ಟಪಟ್ಟು ತುರಿಕಿದಂತೆ ಕಾಣಿಸುತ್ತದೆ. ಆ ಕೃತಿಗಳು ಆಯ್ಕೆ ಮಾಡಿಕೊಂಡ ಮಾಹಿತಿಗಳ ಭಾರದಿಂದ ನಳಲುತ್ತಿರುತ್ತದೆ. ಜೊತೆಗೆ ಆರಂಭದಲ್ಲಿ ಕಡಿಮೆ ಬೆಲೆಗೆ ಪುಸ್ತಕಗಳನ್ನು ಕೊಟ್ಟು ಕೆಲವೇ ತಿಂಗಳಲ್ಲಿ ಅವುಗಳ ಬೆಲೆಯನ್ನು ಎರಡು ಪಟ್ಟು ಹೆಚ್ಚಿಸಿದರು. ಅಂದರೆ ಇದರಲ್ಲಿ ವ್ಯಾಪಾರ ಉದ್ದೇಶ ಸ್ಪಷ್ಟವಾಗಿ ಕಾಣಿಸುತ್ತದೆ. 'ಚಂದ್ರಕಾಂತ ಬಿಜ್ಜರಗಿ' ಅವರದು ಹಾಲುಮತ ಸಂಶೋಧನೆ, ಬರವಣಿಗೆ ಮತ್ತು ಹಾಲುಮತ ಧರ್ಮದ ಪ್ರಚಾರತೆಯನ್ನು ಒಂದು ಬಂಡವಾಳವನ್ನಾಗಿ ಮಾಡಿಕೊಂಡಂತೆ ಕಾಣಿಸುತ್ತದೆ. ಕೃತಿಗಳ ರಚನೆಗಾಗಿ ಸಮುದಾಯದವರಿಂದ ಹಣಸಂಗ್ರಹ ಮಾಡುತ್ತಿದ್ದಾರೆ. 'ಕುರುಬ ದರ್ಪಣ' ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಡುತ್ತಾರೆ. ಹಳ್ಳಿ ಹಳ್ಳಿಗೆ ಹೋಗಿ ಧನ ಸಂಗ್ರಹ ಮಾಡುತ್ತಾರೆ. ಹಣ ಕೊಟ್ಟವರಿಗೆ ಕುರುಬದರ್ಪಣ ಪತ್ರಿಕೆಯಲ್ಲಿ ಮತ್ತು ಕೃತಿಗಳಲ್ಲಿ ಫೋಟೋಗಳನ್ನು ಹಾಕಿ ಅಭಿನಂದನೆಗಳನ್ನು ಹೇಳುತ್ತಾರೆ. ಕುರುಬರ ಹೆಜ್ಜೆಗಳು, ಕುರುಬರ ಕುಲಗುರು ರೇವಣಸಿದ್ಧ, ಅಹಲ್ಯಾಬಾಯಿ ಮುಂತಾದ ಕೃತಿಗಳು ಈ ವಿಧಾನದಲ್ಲೇ ಪ್ರಕಟವಾಗಿವೆ. ಈ ಕೃತಿಗಳಿಗೆ ಸಂಗ್ರಹಿಸಿದ ಹಣದ ವಿವರಗಳನ್ನು ಗಮನಿಸಿದರೆ ಓದುಗರಿಗೆ ಕೃತಿಗಳನ್ನು ಉಚಿತವಾಗಿ ಕೊಡಬಹುದು. ಆದರೆ ಇವುಗಳಿಗೆ ತುಂಬಾ ದುಬಾರಿ ಬೆಲೆ ನಿಗದಿಪಡಿಸಲಾಗಿದೆ. ರಿಯಾಯಿತಿ ದರದಲ್ಲೂ ಪುಸ್ತಕಗಳನ್ನು ಕೊಡುವುದಿಲ್ಲ. ಇದರ ಹಿಂದೆ ವ್ಯಾಪಾರದ ಮನೋಭಾವ ಎದ್ದು ಕಾಣುತ್ತದೆ. ಜೊತೆಗೆ ಸಮುದಾಯವನ್ನು ಓಲೈಸುವ ಸಲುವಾಗಿ ಬರೆಯುತ್ತಿರುವಂತೆ ಭಾವುಕವಾಗಿ ಬರೆಯುತ್ತಾರೆ. ಶ.ಶಿ. ಕುಂಬಾರ, ಚಂದ್ರಕಾಂತ ಬಿಜ್ಜರಗಿ ಮತ್ತು ಒಡೆಯರ್ ಡಿ. ಹೆಗ್ಗಡೆಯವರಲ್ಲಿ ಮಾತ್ರವಲ್ಲದೆ ಈ ಸಮುದಾಯದಲ್ಲಿ ಕೆಲಸ ಮಾಡುತ್ತಿರುವ ಹಲವು ವಿದ್ವಾಂಸರಲ್ಲಿ ಈ ಮನೋಧೋರಣೆ ಕಂಡುಬರುತ್ತದೆ. ಈ ಮಾದರಿಗಳು ಯಾಕೆ ಸೃಷ್ಟಿ ಆಗುತ್ತವೆ. ಈ ಸಮುದಾಯವೇ ಈ ಮಾದರಿಯನ್ನು ನಿರೀಕ್ಷೆ ಮಾಡುತ್ತಿದೆಯೇ? ಅನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಮೇಲ್ನೋಟಕ್ಕೆ ವ್ಯಕ್ತಿಗತ ಅಭಿಲಾಷೆಗಳು ಕೆಲಸ ಮಾಡುತ್ತಿರುವಂತೆ ಕಾಣಿಸುತ್ತದೆ.

ಈ ಮೇಲಿನ ವಿವರಗಳೆಲ್ಲವು ಡೊಳ್ಳಿನ ಹಾಡುಗಳ ಆಚೆ ಇರುವ ಅಥವಾ ಸಾಂಸ್ಕೃತಿಕ ವೀರರಿಗೆ ಸಂಬಂಧಿಸದೆ ಇರುವ ಖಾಸಗಿ ಮತ್ತು ವ್ಯಕ್ತಿಗತ ವಿಚಾರಗಳು ಅನ್ನುವಂತೆ ಕಾಣಿಸುತ್ತವೆ. ಹೊರನೋಟಕ್ಕೆ ನೇರ ವಿಷಯಕ್ಕೆ ಸಂಬಂಧವಿಲ್ಲದಂತೆ ಕಾಣಿಸಿದರೂ ಆಂತರಿಕದಲ್ಲಿ ತಾತ್ವಿಕ ಸಂಬಂಧವನ್ನು ಬೆಸೆದುಕೊಂಡಿವೆ. ಸಮುದಾಯದ ಕಥನಗಳ ಮೇಲೆ ಓದುಗರ ಮತ್ತು ಡೊಳ್ಳಿನ ಹಾಡುಗಳ ಮೇಲೆ ನೇರ ಪರಿಣಾಮ ಬೀರುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಡೊಳ್ಳಿನ ಹಾಡುಗಳ ಅಭಿವ್ಯಕ್ತಿ ಲಿಖಿತ ಕೃತಿಗಳ ಆಸರೆಯನ್ನು ಬಯಸುತ್ತಿದೆ. ಡೊಳ್ಳಿನ ಹಾಡುಗಳನ್ನು ಹಾಡುವ ಹಾಡುಗಾರರಲ್ಲಿ ಮತ್ತು ಕೇಳುಗರಲ್ಲಿ ಬರವಣಿಗೆ ಆಧಾರ ಇರಬೇಕು ಎನ್ನುವ ಮನಸ್ಥಿತಿಯನ್ನು ಹೊಂದಿದ್ದಾರೆ. ಹಾಡುಗಳ ರಚನೆಕಾರರು ಪುರಾಣದೊಳಗೆ, ಲಿಖಿತ ಕೃತಿಗಳಲ್ಲಿ ಇರುವ ಮಾಹಿತಿಯನ್ನು ಹಾಡುಗಳಲ್ಲಿ, ಸಂಭಾಷಣೆಗಳಲ್ಲಿ ತರುತ್ತಾರೆ. ವಾದ-ಪ್ರತಿವಾದಗಳಲ್ಲಿ ಲಿಖಿತ ಪುರಾಣಗಳ ಸನ್ನಿವೇಶಗಳ ಉಲ್ಲೇಖಿತ ಚರ್ಚೆ ಹೆಚ್ಚಾಗಿ ನಡೆಯುತ್ತಿದೆ. ಈ ವಿಧಾನಕ್ಕಾಗಿ ರಸಪ್ರಶ್ನೆ ಮಾದರಿಯ ಹಾಲುಮತ ಪುರಾಣಗಳ ಪ್ರಶ್ನಾವಳಿಗಳ ರೂಪದ ಹಲವು ಕೃತಿಗಳು ಬಂದಿವೆ. ಅವುಗಳಲ್ಲಿ ಲಿಖಿತ ಪುರಾಣಗಳ ವಸ್ತು ಮತ್ತು ಪೌರಾಣಿಕ ಕಲ್ಪನೆ ಪ್ರಧಾನ ಧಾರೆಯಲ್ಲಿ ಕಾಣಿಸಿಕೊಂಡಿದೆ. ಈ ಪ್ರಶ್ನಾವಳಿಗಳನ್ನು ಆಧರಿಸಿ ಪ್ರದರ್ಶನಗಳನ್ನು ಕೊಡುತ್ತಾರೆ. ಇದರಿಂದ ಡೊಳ್ಳಿನ ಹಾಡುಗಳ ವಾಸ್ತವ ನೆಲೆ ಕಣ್ಮರೆ ಆಗುತ್ತಿದೆ. ಚಾರಿತ್ರಿಕ ಪಠ್ಯಗಳ ಮೇಲೆ ಹಲವು ಪರಿಣಾಮಗಳು ಆಗುತ್ತಿವೆ. ಮುಖ್ಯ ಪಠ್ಯಗಳು ವಿಸ್ಮೃತಿ ಆಗುತ್ತಿವೆ. ಈ ವಿಸ್ಮೃತಿ ತನ್ನಿಂದ ತಾನೇ ಆಗುವಂತಹದಲ್ಲ. ವ್ಯಕ್ತಿಗತ ಸಾಧನೆಗಳಿಗಾಗಿ, ಲಾಭಗಳಿಗಾಗಿ, ಉದ್ದೇಶಪೂರಿತವಾಗಿ ಮಾಡುತ್ತಿರುವುದು. ಇಂತಹ ಪರಿಣಾಮಗಳನ್ನು ತಿಳಿಸಿಕೊಡುವ ಮತ್ತು ಚಾರಿತ್ರಿಕ ಪಠ್ಯಗಳನ್ನು ಉಳಿಸುವ ಜರೂರತೆ ಇವತ್ತಿನ ಅಧ್ಯಯನಕಾರರ ಮುಂದಿದೆ. ಪ್ರಸ್ತುತ ಅಧ್ಯಯನವು ಈ ಉದ್ದೇಶವನ್ನು ಹೊಂದಿದೆ.

ಈವರೆಗೂ ಹಾಲುಮತ ಸಾಂಸ್ಕೃತಿಕ ವೀರರ ಸಮಗ್ರ ಅಧ್ಯಯನ ಆಗಿಲ್ಲ. ಕೇವಲ ಪರಿಚಯಾತ್ಮಕ ಬಿಡಿ ಬಿಡಿ ಬರಹಗಳು ಬಂದಿವೆ. ಈ ಬರಹಗಳು ಉತ್ತರ ಕರ್ನಾಟಕದಲ್ಲಿ ಸಿಗುವ ಮಾಹಿತಿಗಳನ್ನು ಪ್ರಧಾನವಾಗಿಟ್ಟುಕೊಂಡಿವೆ. ಅದರಲ್ಲಿ ಡೊಳ್ಳಿನ ಹಾಡುಗಳು ಮತ್ತು ಹಾಲುಮತ ಪುರಾಣಗಳ ಪಠ್ಯಗಳಿಗೆ ಸೀಮಿತವಾದಂತೆ ಕಾಣಿಸುತ್ತವೆ. ದಕ್ಷಿಣ ಕರ್ನಾಟಕದ ಮಾಹಿತಿ ಇಲ್ಲವೇ ಇಲ್ಲವೆನ್ನುವಷ್ಟು ಮಾತ್ರ ಬಳಕೆ ಆಗಿದೆ. ಜೊತೆಗೆ ಈ ಸಂಸ್ಕೃತಿಯಲ್ಲಿ ಕಂಡುಬರುವ ಸಾಂಸ್ಕೃತಿಕ ವೀರರನ್ನು ಸಮಗ್ರ ಹಾಲುಮತ ಧರ್ಮದ ಪರಿಕಲ್ಪನೆಯಲ್ಲಿ ಗ್ರಹಿಸಲಾಗಿದೆ. ಇವರ ಗ್ರಹಿಕೆಯಂತೆ ಈ ಸಾಂಸ್ಕೃತಿಕ ವೀರರು ಇಲ್ಲ. ಅವರು ಹಲವು ಪಂಥಗಳನ್ನು ಪ್ರತಿನಿಧಿಸುತ್ತಾರೆ. ಆ ಪಂಥಗಳನ್ನು ಗುರುತಿಸಲಾಗಿಲ್ಲ. ಅಂದರೆ ಈ ಸಂಸ್ಕೃತಿಯಲ್ಲಿ ಭಂಡಾರ ಪಂಥದ ಸಾಂಸ್ಕೃತಿಕ ನಾಯಕರು ಇದ್ದಾರೆ. ವಿಭೂತಿ ಪಂಥದ ಸಾಂಸ್ಕೃತಿಕ ನಾಯಕರು ಇದ್ದಾರೆ. ಈ ಎರಡು ಪಂಥಗಳ ಸಂಯುಕ್ತ ಸಂಸ್ಕೃತಿಯ ಸಾಂಸ್ಕೃತಿಕ ನಾಯಕರು ಇದ್ದಾರೆ. ಆಯಾ ಪಂಥದ ನಾಯಕರು ತಾವು ಅನುಸರಿಸುತ್ತಿದ್ದ ಪಂಥವನ್ನು ಪ್ರತಿಪಾದನೆ ಮಾಡುವುದಕ್ಕೆ ಹೋರಾಟ ಮಾಡಿದ್ದಾರೆ. ಆ ಸಂದರ್ಭಗಳಲ್ಲಿ ಈ ಎರಡು ಪಂಥದ ನಾಯಕರುಗಳ ನಡುವೆ ಸಂಘರ್ಷಗಳಾಗಿವೆ. ಈ ಸಂಘರ್ಷಗಳು ವ್ಯಕ್ತಿಗತ ಸಂಘರ್ಷಗಳಾಗಿರದೆ

ಕುಲ ಸಂಘರ್ಷಗಳಂತೆ, ಆಂತರಿಕ ಧಾರ್ಮಿಕ ಸಂಘರ್ಷಗಳಂತೆ ಕಂಡುಬರುತ್ತವೆ. ಈ ಸಂಘರ್ಷಗಳ ಮುಕ್ತಾಯ ಗಮನ ಸೆಳೆಯುತ್ತದೆ. ಇವು ದ್ವೇಷ, ಅಪಮಾನಗಳಿಂದ ಕೊನೆಗೊಳ್ಳುವುದಿಲ್ಲ. ಗೆಳೆತನದ ಪರಿಕಲ್ಪನೆಯಲ್ಲಿ ಮತ್ತು ಬದುಕನ್ನು ಕಟ್ಟಿಕೊಳ್ಳುವ ವೈಧಾನಿಕತೆಯಲ್ಲಿ ಕೊನೆಗೊಳ್ಳುತ್ತವೆ. ಕುಲಗಳೇತರ ಸಾಂಸ್ಕೃತಿಕ ನಾಯಕರ ಧಾರ್ಮಿಕ ಸಂಘರ್ಷಗಳು ಇದಕ್ಕೆ ವಿರುದ್ಧವಾದ ವಿಧಾನದಲ್ಲಿ ಮುಕ್ತಾಯ ವಾಗುತ್ತವೆ. ಇಲ್ಲಿರಬಹುದಾದ ರಾಜಕಾರಣವೇನು? ಅನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳುವುದರ ಮುಖಾಂತರ ಅಧ್ಯಯನ ಆರಂಭಿಸಬೇಕಾಗಿದೆ.

ಈ ಸಮುದಾಯದ ಸಾಂಸ್ಕೃತಿಕ ನಾಯಕರೆಲ್ಲರೂ ಒಂದು ಕಾಲಘಟ್ಟಕ್ಕೆ ಸೇರಿದವರಲ್ಲ. ಬೇಟೆ, ಪಶುಪಾಲನೆ, ಕೃಷಿ ಸಂಸ್ಕೃತಿಯ ಕಾಲಘಟ್ಟದಲ್ಲಿ ಬದುಕಿದವರು. ಇವರೆಲ್ಲರು ಅನುಸರಿಸುತ್ತಿದ್ದ ಹಾಲುಮತ ಧರ್ಮ ಮತ್ತು ಹಾಲುಮತ ಧರ್ಮದ ಧಾರ್ಮಿಕ ವಿಧಾನ ಬೇರೆ ಬೇರೆ. ಆಯಾ ಸಾಂಸ್ಕೃತಿಕ ವೀರರ ಧರ್ಮ ಮತ್ತು ಅನುಸರಿಸುತ್ತಿದ್ದ ಧಾರ್ಮಿಕ ವಿಧಾನಗಳನ್ನು ಚಾರಿತ್ರಿಕ ಕಥನಗಳಿಂದ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಈ ವಿಧಾನಕ್ಕೆ ಡೊಳ್ಳಿನ ಹಾಡುಗಳು ಮತ್ತು ‘ಕಂತೆಸೇವೆ’, ‘ತೋಪುಜಾತ್ರೆ’, ‘ದೊಡ್ಡದೇವರ ಜಾತ್ರೆ’, ‘ತೆಂಗಿನ ಪವಾಡ ಜಾತ್ರೆ’, ‘ಅಮೋಘಸಿದ್ಧನ ಪಲ್ಲಕ್ಕಿ ಹೊಳೆಗೆ ಹೋಗುವ ಆಚರಣೆ’ ಮುಂತಾದ ಸಂದರ್ಭಗಳಲ್ಲಿ ಹಾಡುವ ಜನಪದ ಗೀತೆಗಳು ಮತ್ತು ಆಚರಣೆಯ ವಿವರಗಳು ಹೆಚ್ಚು ಸಹಾಯಕವಾಗಬಲ್ಲವು. “ಏಕೆಂದರೆ ಒಂದು ಸಮುದಾಯದಲ್ಲಿ ಅದರ ಸಾಕ್ಷಿ ಪ್ರಜ್ಞೆಯಂತೆ ಕಾಣಿಸಿಕೊಳ್ಳುವ ಒಬ್ಬ ಸಾಂಸ್ಕೃತಿಕ ನಾಯಕನ ಹುಟ್ಟು ಆ ಸಮುದಾಯದ ಒಳಗೆ ಒಂದು ವೈಚಾರಿಕ ಆವರಣವನ್ನು ಸೃಷ್ಟಿಸುತ್ತದೆ. ಆ ಮೂಲಕ ಪ್ರಭುತ್ವವು ಹುಟ್ಟುಹಾಕಿದ ಬೌದ್ಧಿಕ ಶೂನ್ಯತೆಯನ್ನು ಸ್ಫೋಟಿಸಲು ಯತ್ನಿಸುತ್ತದೆ. ಈ ವೈಚಾರಿಕ ಆವರಣವನ್ನು ಸೃಷ್ಟಿಸುವ ನಾಯಕ ಆ ಸಮುದಾಯದ ಒಟ್ಟು ಆಶೋತ್ತರಗಳ ಪ್ರತಿರೂಪ. ಅವನು ಇಡೀಯಾಗಿ ಆಯಾ ಸಮುದಾಯಗಳ ಕನಸುಗಳ ಬಲಿಷ್ಠ ಸಂಕೇತ. ಲೌಕಿಕ ಜಗತ್ತಿನ ಆಚೆಗೆ ಈ ಸಮುದಾಯಗಳು ತವಕಿಸುವ ಸೃಷ್ಟಿ ಜಗತ್ತಿನ ಅಧಿಪತಿ. ಅವನು ಅಧೀನಗೊಂಡ ಎಲ್ಲ ಸಮುದಾಯಗಳ ಅಂತಸತ್ವಗಳ ಪ್ರತಿರೋಧದಂತೆ ಈ ನಾಯಕರು ಗೋಚರಿಸುತ್ತಾರೆ. ನಮ್ಮ ಪರಂಪರೆಯ ಎಲ್ಲ ಬಗೆಯ ಸ್ಥಾವರ ಸಂಸ್ಥೆಗಳಿಗೆ ಪ್ರತಿಧ್ವನಿಯಾಗಿ ನಿಲ್ಲಬಲ್ಲ ಅನುಭಾವಿ ನಾಯಕರಿವರು”.[೨] ಇವರಿಗೂ ಮತ್ತು ಆ ಸಮುದಾಯದ ಉತ್ಪಾದನಾ ವ್ಯವಸ್ಥೆಗೂ ಅದರ ಆರ್ಥಿಕ ಸ್ಥಿತಿಗತಿಗಳಿಗೂ ಸಂಬಂಧವಿದೆ. ನಮ್ಮ ಸಮುದಾಯದೊಳಗೆ ರಾಜಕೀಯಾರ್ಥಿಕ ಕಾರಣಗಳಿಂದ ಇವರ ಮಹತ್ವ ಇನ್ನೂ ಹೆಚ್ಚಿದೆ. ಹಾಗಾಗಿ ಈ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಸಾಂಸ್ಕೃತಿಕ ವೀರರ ಜೀವನದ ಸುತ್ತಲು ಇರುವ ಪವಾಡ ಮತ್ತು ಆಚರಣೆಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವ ಆ ಪರಿಸರದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಹಿನ್ನೆಲೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಬೇಕಾಗಿದೆ. ಈ ವಿಧಾನಕ್ಕಾಗಿ ಕ್ಷೇತ್ರಕಾರ್ಯದ ಮುಖಾಂತರ ಈ ವೀರರಿಗೆ ಸಂಬಂಧಿಸಿದ ಐತಿಹ್ಯ, ಪುರಾಣ, ಸ್ಥಳನಾಮಗಳು, ಜನಪದಗೀತೆಗಳು, ಆರಾಧನ ವಿಧಾನಗಳು ಪೂಜಾವಿಧಾನಗಳು, ಜಾತ್ರೆ-ಉತ್ಸವಗಳ ವಿವರಗಳ ಜೊತೆಗೆ ಶಾಸನಗಳನ್ನು ಸಂಗ್ರಹಿಸಿ ಡೊಳ್ಳಿನ ಹಾಡುಗಳೊಂದಿಗೆ ತೌಲನಿಕ ಅಧ್ಯಯನ ಮಾಡಲಾಗಿದೆ.

ಸಾಂಸ್ಕೃತಿಕ ವೀರರ ವಿವರಣಾತ್ಮಕ ಅಧ್ಯಯನಕ್ಕಾಗಿ, ಬೀರಪ್ಪ, ಮಾಳಿಂಗರಾಯ, ಬುಳ್ಳಪ್ಪ, ರೇವಣಸಿದ್ಧ, ಅಮೋಘಸಿದ್ಧ, ಇಟ್ಟಪ್ಪ, ಮತ್ತು ಮಾಯವ್ವರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಇವರನ್ನು ಮುಖ್ಯವಾಗಿ ಇಟ್ಟುಕೊಂಡು ಉಳಿದ ನಾಯಕರ ಸಾಂಸ್ಕೃತಿಕ ಚರಿತ್ರೆಯನ್ನು ಸಾಂದರ್ಭಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಆದರೆ ಡೊಳ್ಳಿನ ಹಾಡುಗಳಲ್ಲಿ ಚಿತ್ರಣಗೊಂಡಿರುವ ಸಾಂಸ್ಕೃತಿಕ ನಾಯಕರ ಚಾರಿತ್ರಿಕತೆಗೆ ಪ್ರಧಾನ ಆದ್ಯತೆ ಕೊಡಲಾಗಿದೆ. ಈ ಅಧ್ಯಯನದಲ್ಲಿ ಡೊಳ್ಳಿನ ಹಾಡುಗಳನ್ನು ಪ್ರಥಮ ಆಕರಗಳೆಂದು ಇತರ ಆಕರಗಳನ್ನು ದ್ವಿತೀಯ ಆಕರಗಳೆಂದು ತಿಳಿದು ಬಳಸಿಕೊಳ್ಳಲಾಗಿದೆ. ಇದು ಅಧ್ಯಯನದ ವಸ್ತು ವಿಷಯಕ್ಕೆ ಬದ್ಧವಾಗುವ ವೈಧಾನಿಕತೆಯು ಹೌದು.

೪.೧. ಬೀರಪ್ಪ

೪.೧.೧. ಪ್ರವೇಶ

ಬೀರಪ್ಪ ಹಾಲುಮತ ಸಮುದಾಯದ ಆರಾಧ್ಯದೈವ; ಕುಲದೈವ; ಸಾಂಸ್ಕೃತಿಕವೀರ. ಭಾರತದಲ್ಲಿ ಹಲವು ಸಮುದಾಯಗಳಲ್ಲಿ ಹಲವು ನಾಮಗಳಿಂದ ಆರಾಧನೆಗೆ ಒಳಗಾಗುತ್ತಿರುವ ದೈವ ನೀತ. ಆದರೆ ಕರ್ನಾಟಕದಲ್ಲಿ ಸಿಗುವಷ್ಟು ಬೀರಪ್ಪನ ಚಾರಿತ್ರಿಕ, ಸಾಂಸ್ಕೃತಿಕ ಚರಿತ್ರೆಗಳು ಬೇರೆ ರಾಜ್ಯದಲ್ಲಿ ಸಿಗುವುದಿಲ್ಲ; ಭಿನ್ನ ನೆಲೆಯಲ್ಲಿ ಆರಾಧನೆಗೆ ಒಳಗಾಗುವುದಿಲ್ಲ. ಕರ್ನಾಟಕದಲ್ಲಿ ಬೀರಲಿಂಗ, ಬೀರಲಿಂಗೇಶ್ವರ, ಬೀರೋಬಾ, ಕರಿಸಿದ್ಧ, ಕರೇಸಿದ್ಧ, ಮುರಸಿದ್ಧ, ಭೈರವ ಸಿದ್ಧೇಶ್ವರ, ಸಣ್ಣದೇವರು ಶಿವ ಸಿದ್ಧೇಶ್ವರ, ಮಾಯಕಾರಮಿಂಡ, ಚುಂಚ ಮುಂತಾದ ಹೆಸರುಗಳು ಬಳಕೆಯಾಗುತ್ತಿವೆ. ಪ್ರತಿಯೊಂದು ಹೆಸರಿನ ಬಳಕೆಯ ಹಿಂದೆ ಬೀರಪ್ಪನ ಸಾಂಸ್ಕೃತಿಕ ಸ್ಥಿತ್ಯಂತರದ ಚರಿತ್ರೆ ಅಡಕವಾಗಿದೆ. ಉದಾಹರಣೆಗೆ ೧. ಈಗಿನ ಜಮಖಂಡಿ ತಾಲೂಕು ಕೋಣಗನೂರು ಗ್ರಾಮದಲ್ಲಿ ಕೋಣಾಸುರನನ್ನು ಸಂಹಾರ ಮಾಡುವುದಕ್ಕೆ ಕರಿಸಿದ್ಧನ ಅವತಾರ ತಾಳಿದ. ೨. ಹಾಲುಮತದ ಸಾಂಸ್ಕೃತಿಕ ವೀರನಾದ ಇಟ್ಟಪ್ಪ (ವಿಠಲ)ನಿಗೆ ಗುರುದರ್ಶನ ಕೊಡುವುದಕ್ಕೆ ಈಗಿನ ಅಥಣಿ ತಾಲೂಕು ಮುರಗುಂಡಿ ಗ್ರಾಮದಲ್ಲಿ 'ಮುರಸಿದ್ಧ'ನ ಅವತಾರ ತಾಳಿದ. ೩. "ಬೀರಪ್ಪ ಉದ್ದನೆಯ ಮೂಗನ್ನು ಹೊಂದಿದ ಕಾರಣಕ್ಕೆ 'ಚುಂಚ' ಎನ್ನುವ ಹೆಸರನ್ನು ಪಡೆದುಕೊಂಡ"[೩] ೪. ಉಗ್ರ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ ಕಾರಣಕ್ಕೆ 'ಶಿವಸಿದ್ಧ'ನೆನಿಸಿಕೊಂಡ. ೫. ಬೀರಪ್ಪನ ಸಂಸ್ಕೃತ ರೂಪ "ಭೈರವ" ಎನ್ನುವುದು ಶಂಬಾರವರ ವಾದ. ಇವುಗಳಲ್ಲದೆ ಬೀರ>ವೀರ-ಈರ>ಪೀರನಾದ ಅನ್ನುವ ರೂಪಾಂತರದ ಕಥನಗಳು ಇವೆ. ಈ ನಾಮಗಳು ಆರಾಧಕರ ಐಡೆಂಟಿಟಿಯ ಕಾರಣಗಳಿಂದ ಸೃಷ್ಟಿಯಾದಂತವು. ಆದರೆ ನಮ್ಮ ಹಿರಿಯ ಸಂಶೋಧಕರು ಈ ಹೆಸರುಗಳ ಹಿಂದೆ ಇರುವ ರಾಜಕಾರಣವನ್ನಾಗಲಿ, ಸಾಂಸ್ಕೃತಿಕ ಪಲ್ಲಟಗಳನ್ನಾಗಲಿ ಅಥವಾ ಈ ಎಲ್ಲಾ ಹೆಸರುಗಳು ಬೀರಪ್ಪನಿಗೆ ಬಳಕೆಯಾಗುವ ಹೆಸರುಗಳು ಎನ್ನುವ ಸಾಂಸ್ಕೃತಿಕ ಚರಿತ್ರೆಯನ್ನಾಗಲಿ ಸರಿಯಾಗಿ ಗ್ರಹಿಸಲಿಲ್ಲ. ಈಗಲೂ ಕೆಲವು ವಿದ್ವಾಂಸರು ಇವರೆಲ್ಲರು ಬೇರೆ ಬೇರೆ ಎಂದು ಗ್ರಹಿಸಿ ಆಯಾ ದೈವಗಳ ಸಾಂಸ್ಕೃತಿಕ ಚರಿತ್ರೆಯನ್ನು ದಾಖಲಿಸುತ್ತಿದ್ದಾರೆ. ಹಾಗಾಗಿ ಬೀರಪ್ಪನ ಸಾಂಸ್ಕೃತಿಕ ಪಲ್ಲಟಗಳ ಹಿಂದೆ ಇರುವ ರಾಜಕಾರಣವನ್ನು ಸರಿಯಾಗಿ ಗುರುತಿಸುವುದಕ್ಕೂ ಹಾಗೂ ಬೀರಪ್ಪನ ಸಮಗ್ರವಾದ ಚರಿತ್ರೆಯನ್ನು ಕಟ್ಟುವುದಕ್ಕೂ ಸಾಧ್ಯವಾಗಲಿಲ್ಲ. ಪ್ರಸ್ತುತ ಅಧ್ಯಯನದಲ್ಲಿ

ಇವರೆಲ್ಲ ಒಂದೇ ಎಂದು ಗ್ರಹಿಸಲಾಗಿದೆ. ಆ ಹೆಸರುಗಳ ಸೃಷ್ಟಿಯನ್ನು ಹೇಳುವ ಕಥನಗಳನ್ನು ಮತ್ತು ಚರಿತ್ರೆಯ ಆಯಾಮಗಳನ್ನು ಬಳಸಿಕೊಳ್ಳಲಾಗಿದೆ.

ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಬೀರದೇವರ ದೇವಾಲಯಗಳು ಇವೆ. ಗೌಳಿಗರು, ಯರವರು, ಜೇನುಕುರುಬರು, ಕಾಡುಕುರುಬರು, ಮ್ಯಾಸಬೇಡರು, ಯಾದವರು, ಒಕ್ಕಲಿಗರು, ಗೊಲ್ಲರು, ಗೊಂಡರು, ವೀರಶೈವರು ಮುಂತಾದ ದ್ರಾವಿಡ ಪಶುಪಾಲನ ಸಮುದಾಯಗಳು ಈ ದೈವಗಳನ್ನು ಆರಾಧನೆ ಮಾಡುತ್ತಿವೆ. ಕುಲದೈವವನ್ನಾಗಿ ಮಾಡಿಕೊಂಡಿವೆ. ದೇವಾಲಯಗಳನ್ನು ಕಟ್ಟಿಕೊಂಡಿವೆ. ತಮ್ಮ ಮಕ್ಕಳಿಗಳಿಗೆ ಈ ದೈವದ ಹೆಸರನ್ನು ಇಡುತ್ತಿದ್ದಾರೆ. ಆಚರಣೆ- ಉತ್ಸವಗಳನ್ನು ಮಾಡುತ್ತಿದ್ದಾರೆ. ಈತ ಸಮುದಾಯಗಳು ಪಶುಪಾಲನೆಯಿಂದ, ಕೃಷಿ ಸಂಸ್ಕೃತಿಗೆ ಬಂದ ಉಚ್ಛಾಯ ಸ್ಥಿತಿಯಲ್ಲಿ ಬೀರಪ್ಪ ಬದುಕಿರಬೇಕು. ಮಾನವ ವಲಸೆಯನ್ನು ಪ್ರಧಾನವಾಗಿ ನದಿ ಮೂಲಗಳಿಂದ ಆರಂಭಿಸಿರುವುದನ್ನು ನಾವು ಪ್ರಾಕೃತಿಕ ಮತ್ತು ಭೌಗೋಳಿಕ ಸ್ವರೂಪದಿಂದ ತಿಳಿಯಬಹುದು. ಒಂದೊಂದು ಗ್ರಾಮದಲ್ಲಿ ಎರಡು-ಮೂರು ಬೀರದೇವರ ದೇವಾಲಯ ಗಳಿರುವುದು ಇದಕ್ಕೆ ಪೂರಕವಾಗಿ ನಿಲ್ಲುತ್ತದೆ. ಉದಾಹರಣೆಗೆ. ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲೂಕು, ತಾಳಿಕಟ್ಟೆ ಗ್ರಾಮದಲ್ಲಿ ಮೂರು ಬೀರದೇವರ ದೇವಾಲಯಗಳಿವೆ. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ಹೊಸಹಳ್ಳಿ ಗ್ರಾಮದಲ್ಲಿ ಮೂರು ಬೀರದೇವರ ದೇವಾಲಯಗಳಿವೆ ಹಾಗೂ ತರೀಕೆರೆ ತಾಲೂಕು ಶಿವನಿ ಗ್ರಾಮದಲ್ಲಿ ಮೂರು ಬೀರದೇವರ ದೇವಾಲಯಗಳು ಇರುವುದನ್ನು ಕಾಣಬಹುದು. ಹೀಗೆ ಕರ್ನಾಟಕದ ಹಲವು ಗ್ರಾಮಗಳಲ್ಲಿ ಮೂರು ಬೀರದೇವರ ದೇವಾಲಯಗಳು ಸಿಗುತ್ತವೆ. ಎರಡೆರಡು ಬೀರದೇವರ ದೇವಾಲಯಗಳು ಇರುವ ಗ್ರಾಮಗಳು ಹೆಚ್ಚಾಗಿ ಸಿಗುತ್ತವೆ. ಈ ದೇವಾಲಯಗಳು ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು, ಹಾಲುಮತ ಸಮುದಾಯದ ಧಾರ್ಮಿಕ ಚರಿತ್ರೆಯನ್ನು ಅನಾವರಣ ಮಾಡುತ್ತವೆ. ಅಂದರೆ ಆ ದೇವಾಲಯಗಳ ಸ್ಥಳಗಳು ನೆಲೆಸಿರುವುದು ಮುಖ್ಯ. ಒಂದು ದೇವಾಲಯ ಹಳ್ಳದ, ಕೆರೆ, ನದಿಯ ದಡದಲ್ಲಿ ಇರುತ್ತದೆ. ಇದು ಪ್ರಾಚೀನ; ಹಿರಿಯ ದೇವಾಲಯ. ಆಚರಣೆಗಳಲ್ಲಿ ಈ ದೇವಾಲಯಕ್ಕೆ, ದೈವಕ್ಕೆ ಮೊದಲ ಆದ್ಯತೆ. ಎರಡನೆಯ ದೇವಾಲಯ ಗ್ರಾಮದ ಹೊರಗಡೆ ಇರುವ ಎತ್ತರದ ಪ್ರದೇಶದಲ್ಲಿ, ಗುಡ್ಡ-ಬೆಟ್ಟಗಳಲ್ಲಿ ಇರುತ್ತದೆ. ಈ ದೇವಾಲಯಕ್ಕೆ 'ಮಲ್ಡಿಬೀರಲಿಂಗ' ಎಂದು ಹೆಸರು. ಹಳ್ಳದ, ಕೆರೆಯ ದಡದಲ್ಲಿರುವ ಬೀರ ದೇವಾಲಯಕ್ಕೆ ಇರುವಷ್ಟೇ ಆದ್ಯತೆ ಇದಕ್ಕಿದೆ. ಆದರೂ ಆಚರಣೆಗಳ ಸಂದರ್ಭದಲ್ಲಿ ದ್ವಿತೀಯ ಸ್ಥಾನ. ಕೆಲವು ಗ್ರಾಮಗಳಲ್ಲಿ ಒಂದು ಬಾರಿ ಹಳ್ಳದ ಬೀರಲಿಂಗನ ಜಾತ್ರೆ ಮಾಡಿದರೆ ಮತ್ತೊಂದು ಬಾರಿ ಮಲ್ಡಿ ಬೀರಲಿಂಗನ ಜಾತ್ರೆಯನ್ನು ಮಾಡುತ್ತಾರೆ. ಮೂರನೆಯ ದೇವಾಲಯ ಗ್ರಾಮದ ನಡುವೆ ಇರುತ್ತದೆ. ದಿನನಿತ್ಯದ ಪೂಜೆಗಳು ಈ ಸ್ಥಳದಲ್ಲಿ ನಡೆಯುತ್ತವೆ. ಗ್ರಾಮದಲ್ಲಿರುವ ಬೀರದೇವರ ಜಾತ್ರೆಯನ್ನು ಮಾಡುವಾಗಲೂ ಮೊದಲ ಪೂಜೆ ಗ್ರಾಮದ ಹೊರಗಡೆ ಇರುವ ದೇವರುಗಳ ಪೂಜೆ ಆಗಬೇಕು. ಹೊರಗಡೆ ಇರುವ ಬೀರದೇವರುಗಳು 'ಹಿರಿಯ ದೇವರು' ಅನ್ನುವುದು ಗ್ರಾಮಸ್ಥರ ನಂಬಿಕೆ. ಇದರಿಂದ ಹಾಲುಮತಸ್ಥರು ಆರಂಭದಲ್ಲಿ ಬೆಟ್ಟ, ನದಿ ವಾಸಿಯಾಗಿದ್ದರು ನಂತರದಲ್ಲಿ ಕೃಷಿ-ಪಶುಪಾಲನೆ ಮಾಡುವಾಗ ನದಿ ಮೂಲಕ್ಕೆ ಹೋದರು. ಈ ಎರಡು ಹಂತದ ನಂತರ ನೆಲೆ ನಿಂತಾಗ

ಗ್ರಾಮದಲ್ಲಿರುವ ದೇವಾಲಯಗಳನ್ನು ಕಟ್ಟಿಕೊಂಡರು ಅನ್ನುವ ಚರಿತ್ರೆಯನ್ನು ತಿಳಿದುಕೊಳ್ಳಬಹುದು. ಶಂಬಾರವರು ಹಾಲುಮತ ಸಂಸ್ಕೃತಿಯನ್ನು ನದಿ ಮೂಲದಿಂದ ಗುರುತಿಸುತ್ತಾರೆ. ಬೀರಪ್ಪನ ದೇವಾಲಯಗಳ ಚರಿತ್ರೆ ಇದಕ್ಕೆ ಹೊರತಾಗಿಲ್ಲ. ಆ ದೇವಾಲಯಗಳಲ್ಲಿ ನಡೆಯುವ ಆಚರಣೆಗಳನ್ನು, ಸ್ವರೂಪ ಮತ್ತು ಲಕ್ಷಣಗಳನ್ನು ಬೀರಪ್ಪನ ಚರಿತ್ರೆಯನ್ನು ಗ್ರಹಿಸುವುದಕ್ಕೆ ಇರುವ ಪ್ರಮುಖ ಆಕರಗಳೆಂದು ಗ್ರಹಿಸಲಾಗಿದೆ.

ಕಾಡುಗೊಲ್ಲರು (ಗಣೆಯವರು) ಬೀರಪ್ಪನ ಜೀವನ ಚರಿತ್ರೆಯನ್ನು ಅನಾವರಣ ಮಾಡಲು ಜನಪದ ಗೀತೆಗಳನ್ನು ಹಾಡುತ್ತಾರೆ. ತುಮಕೂರು, ಮೈಸೂರು, ಕೋಲಾರ, ಚಿಕ್ಕಮಂಗಳೂರು, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ 'ಕಂತೆಸೇವೆ', 'ತೋಪುಜಾತ್ರೆ', ತೆಂಗಿನಕಾಯಿ ಪವಾಡ, (ದೊಡ್ಡದೇವರ ಜಾತ್ರೆ) ಹಾಗೂ ಉತ್ಸವ-ಪವಾಡಗಳ ಆಚರಣೆಯ ಸಂದರ್ಭದಲ್ಲಿ 'ಕಥನ ಗೀತೆ'ಗಳನ್ನು ಹಾಡಲಾಗುತ್ತದೆ. ಬೀರಪ್ಪನನ್ನು ಕುರಿತ ಲಾವಣಿಗಳಿವೆ, ಶಾಸನಗಳಿವೆ. ಬಸವಣ್ಣ ಮುಂತಾದ ವೀರಶೈವ ಧರ್ಮ ಅನುಯಾಯಿಗಳ ಕೆಂಗಣ್ಣಿಗೆ ಗುರಿಯಾಗಿ 'ಕ್ಷುದ್ರದೈವ'ನೆಂದು ಅವಹೇಳನಕ್ಕೆ ಒಳಗಾದ ಚಿತ್ರಣಗಳಿವೆ. ಜಾತ್ರೆ-ಉತ್ಸವಗಳು ನಡೆಯುತ್ತವೆ. ಸುಮಾರು ನಾಲ್ಕೈದು ರಾತ್ರಿಗಳ ಕಾಲ ಸತತವಾಗಿ ಹಾಡುವ ದೀರ್ಘವಾದ ಡೊಳ್ಳಿನ ಹಾಡುಗಳಿವೆ. ಆದರೆ ಈತನನ್ನು ಕುರಿತು ಸೈದ್ಧಾಂತಿಕವಾದ ಅಧ್ಯಯನಗಳು ಆಗಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಡೊಳ್ಳಿನ ಹಾಡುಗಳನ್ನು ಮುಖ್ಯವಾಗಿಟ್ಟುಕೊಂಡು ಮೇಲೆ ಹೇಳಿದ ಆಕರಗಳನ್ನು ಬಳಸಿಕೊಂಡು ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಚರ್ಚಿಸಲಾಗಿದೆ.

೪.೧.೨. ಡೊಳ್ಳಿನ ಹಾಡುಗಳಲ್ಲಿ ಬೀರಪ್ಪನ ಸಾಂಸ್ಕೃತಿಕ ಚರಿತ್ರೆ

ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣ ಮಾಡುವ ಡೊಳ್ಳಿನ ಹಾಡುಗಳು ಯಥೇಚ್ಛವಾಗಿ ಸಿಗುತ್ತವೆ. ಈಗಾಗಲೇ 'ಜನಪದ ಹಾಲುಮತ ಮಹಾಕಾವ್ಯ', 'ಮಾಳಿಂಗರಾಯನ ಕಾವ್ಯ' ಮತ್ತು ಬಿಡಿ ಹಾಡುಗಳು ಸಂಗ್ರಹವಾಗಿವೆ. ಬುಳ್ಳಪ್ಪನ ಕಾವ್ಯ, ಇಟ್ಟಪ್ಪ(ವಿಠಲ)ನ ಕಾವ್ಯ, ಅಮೋಘಸಿದ್ಧನ ಕಾವ್ಯ ಮುಂತಾದ ಮಹಾಕಾವ್ಯಗಳನ್ನು ಗಾಯಕರು ಹಾಡುತ್ತಾರೆ. ಈ ಕಾವ್ಯಗಳು ಇನ್ನೂ ಸಂಗ್ರಹವಾಗಿಲ್ಲ. ಇವುಗಳಲ್ಲಿ ಬೀರಪ್ಪನ ಭಿನ್ನ ವ್ಯಕ್ತಿತ್ವದ ವಿವರಗಳು ಬರುತ್ತವೆ. ಅಧ್ಯಯನಕ್ಕಾಗಿ ಗಾಯಕರಿಂದ ಕೆಲವು ಬಿಡಿ ಹಾಡುಗಳನ್ನು ಮತ್ತು ಕಥಾಸಾರವನ್ನು ಸಂಗ್ರಹಿಸಿಕೊಂಡು ಬರಲಾಗಿದೆ. ಈ ಎಲ್ಲಾ ಹಾಡುಗಳ ಸಂಯುಕ್ತ ಕಥಾಸಾರ ಹೀಗಿದೆ.

೪.೧.೨.೧ ಶೈವ ಆರಾಧನೆಯ ಅರ್ಹತೆಗಾಗಿ ಹಠದಿಂದ ಪಡೆದ ಮಗು

ಜನಪದ ಸಾಂಸ್ಕೃತಿಕ ವೀರರ ಜನ್ಮಗಳ ಹಿಂದೆ ಬೇರೆ ಬೇರೆ ರಾಜಕಾರಣಗಳು ಅಡಕವಾಗಿವೆ. ಬೀರಪ್ಪ ಜನ್ಮತಾಳಲು ಇಂತಹ ಹಲವು ರಾಜಕಾರಣಗಳು ಕಾರಣವಾಗಿವೆಯೆಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಆರಂಭದಲ್ಲಿ ಶೈವ ಆರಾಧನೆಯ ಅವಕಾಶದ ಸಂಘರ್ಷ ಪ್ರಮುಖವಾಗಿ ಕಂಡುಬರುತ್ತದೆ. ಬೀರಪ್ಪನ ತಂದೆ ಬಾಳಭರ್ಮ ಕಾಳಿನಾರಾಯಣನ ಮನೆಯಲ್ಲಿ ಶಿವನನ್ನು ಪೂಜಿಸುವ ಕೆಲಸ ಮಾಡುತ್ತಿರುತ್ತಾನೆ. ಈತನ ನಿಷ್ಠೆ, ಭಕ್ತಿಗೆ ಮೆಚ್ಚಿದ ಶಿವ ಕಾಳಿನಾರಾಯಣನನ್ನು ತಿರಸ್ಕಾರ ಮಾಡುವುದಕ್ಕೆ ಮುಂದಾಗುತ್ತಾನೆ. ಈ ಕಾಯಕವನ್ನು ಕಳೆದುಕೊಳ್ಳದ ಮತ್ತು ಅವಮಾನವನ್ನು ಸಹಿಸಿಕೊಳ್ಳದ

ಕಾಳಿನಾರಾಯಣ ಶಿವನಿಗೆ-ನೀನೆಂತ ದೈವ, ಸಂತಾನ ರಹಿತವಾದ ವ್ಯಕ್ತಿಯಿಂದ ಪೂಜೆ; ಸೇವೆ ಮಾಡಿಸಿಕೊಳ್ಳುತ್ತಿರುವೆಯಲ್ಲ ಎಂದು ಹೀಯಾಳಿಸುತ್ತಾನೆ. ಈ ಮಾತುಗಳಿಂದ ನೊಂದ ಶಿವ ಬಾಳಭರ್ಮ ನನ್ನು ತಿರಸ್ಕಾರ ಮಾಡಿ, ಕಾಳಿನಾರಾಯಣನನ್ನು ನೇಮಕ ಮಾಡಿಕೊಳ್ಳುತ್ತಾನೆ. ಈ ಅವಮಾನದಿಂದ ಮುಕ್ತರಾಗಬೇಕು ಮತ್ತು ಶೈವ ಆರಾಧನೆಯ ಅವಕಾಶ ಪಡೆದುಕೊಳ್ಳಬೇಕು ಎನ್ನುವ ಬಾಳ ಭರ್ಮನ ಛಲ ಮಗುವನ್ನು ಪಡೆಯುವುದಕ್ಕೆ ಉತ್ತೇಜಿಸುತ್ತದೆ. ಆಗ ಭರ್ಮ ಮಗುವನ್ನು ಪಡೆಯುವ ವಿಧಾನಕ್ಕೆ ಮುಂದಾಗುತ್ತಾನೆ. ಬಾಳಭರ್ಮರು ಬೀರಪ್ಪನನ್ನು ಪಡೆದ ರೀತಿ ಗಮನ ಸೆಳೆಯುತ್ತದೆ. ಪತಿ ಶೈವ ಆರಾಧನೆಯ ಅವಕಾಶ ಕಳೆದುಕೊಂಡ ಸುದ್ದಿ ತಿಳಿದ ಪತ್ನಿ ಸೂರಮ್ಮ ವಿಚಲಿತಳಾಗುತ್ತಾಳೆ, ಕೋಪಿತಳಾಗುತ್ತಾಳೆ. ಸೂರಮ್ಮಳ ಕೋಪವನ್ನು ಡೊಳ್ಳಿನ ಹಾಡುಗಳು ಸೊಗಸಾಗಿ ಕಟ್ಟಿಕೊಡುತ್ತವೆ.

> "ಉರದ ಬೆಂಕಿನಾದಳೆ ತೆಲಿವಂದು ಖೆಂಡನಾದಳೆ
> ಒಡಹುಟ್ಟಿದಣ್ಣನಲ್ಲೇಳೆ ಹೆಂತ ಮಾತನಾಡ್ಯಾನ"[೪]

ಇದರಿಂದ ಮಗುವನ್ನು ಪಡಯಲೇಬೇಕು ಎನ್ನುವ ಹಠಕ್ಕೆ ಬೀಳುತ್ತಾಳೆ. ಶಿವನ ಹತ್ತಿರ ಹೋಗಿ ಮಕ್ಕಳ ಭಾಗ್ಯ ಕೊಡುವಂತೆ ಬೇಡುತ್ತಾಳೆ, ಅಂಗಲಾಚುತ್ತಾಳೆ, ಹಠ ಮಾಡುತ್ತಾಳೆ. ಶಿವ ನಿನಗೆ ಸಂತಾನ ಭಾಗ್ಯವಿಲ್ಲವೆಂದರೂ ಕೇಳುವುದಿಲ್ಲ. ಕೋಪಿತಳಾಗುತ್ತಾಳೆ. ಉಗ್ರರೂಪ ತಾಳಿ ಶಿವನನ್ನು ಒಲಿಸಿಕೊಳ್ಳುವುದಕ್ಕೆ 'ಅಲಗ' ಆಟ ಆಡುತ್ತಾಳೆ. ಹಾಲುಮತ ಸಂಸ್ಕೃತಿಯಲ್ಲಿ ಅಲಗ ಹಾಕಿಕೊಳ್ಳುವ ಅಥವಾ ಅಲಗ ಆಟ ಆಡುವ ವಿಧಾನ ಶಿವನನ್ನು ಒಲಿಸಿಕೊಳ್ಳುವ ಆಚರಣೆಯಾಗಿ ಈಗಲೂ ಪ್ರಚಲಿತ ದಲ್ಲಿದೆ. ಚಿಕ್ಕಮಂಗಳೂರು, ಚಿತ್ರದುರ್ಗ, ಹಾಸನ ಜಿಲ್ಲೆಗಳಲ್ಲಿ ನಡೆಯುವ ತೋಪುಜಾತ್ರೆಗಳಲ್ಲಿ ಮತ್ತು ಕೋಲಾರದಲ್ಲಿ ನಡೆಯುವ ದೊಡ್ಡದೇವರ ಜಾತ್ರೆಗಳಲ್ಲಿ ಈ ಆಚರಣೆ ಪ್ರಮುಖವಾಗಿ ಕಂಡುಬರುತ್ತದೆ.

> "ಸಂಜಿಗ ಹುಟ್ಟಿದರಲ್ಲಪ್ಪ ಮುಂಜಾಲಿ ಸಾಯಲಿ ಅಂದಾಳ
> ಮುಂಜಾಲಿ ಹುಟ್ಟಿದರಲ್ಲಪ್ಪ ಸಂಜಿಗ ಸಾಯಲಿ ಅಂದಾಳ"[೫]

ಆದರೆ ನನಗೆ ಮಗು ಬೇಕೇ ಬೇಕು ಎಂದು ಹಠ ಹಿಡಿಯುತ್ತಾಳೆ. ಇದೇ ತರಹದ ಹಠ ಹಲವು ದ್ರಾವಿಡ ಪಶುಪಾಲನ ಸಾಂಸ್ಕೃತಿಕ ವೀರಣಿಯರಲ್ಲಿ ಕಂಡುಬರುತ್ತದೆ. ಯಲ್ಲಮ್ಮ ಶಿವನಿಂದ 'ಪರುಶರಾಮ'ನನ್ನು ಪಡೆಯುವಾಗ ಇದೇ ತರದ ಮಾತುಗಳನ್ನು ಆಡುತ್ತಾಳೆ. ಈ ಮಹಿಳೆಯರಿಗೆ ಮಗು ಮುಖ್ಯ ಅಲ್ಲ, ತಮ್ಮ ಜೀವವೂ ಮುಖ್ಯ ಅಲ್ಲ. ಅವಮಾನದಿಂದ ಮುಕ್ತವಾಗಬೇಕು ಎನ್ನುವುದು ಪ್ರಮುಖವಾಗಿ ಕಂಡುಬರುತ್ತದೆ. ಅವಮಾನ ಎನ್ನುವುದು ಇವರಲ್ಲಿ ತಮ್ಮ ಜೀವ ಮತ್ತು ತಮ್ಮ ಮಗುವಿನ ಜೀವಕ್ಕಿಂತಲೂ ಭಯನಕವಾಗಿ ಕಾಡಿಸಿದೆ. ಅದರಿಂದ ಮುಕ್ತರಾಗುವುದಕ್ಕೆ ಹಂಬಲಿಸಿದ್ದಾರೆ. ದ್ರಾವಿಡ ಪಶುಪಾಲನ ಮಹಿಳೆಯರು ಹಠಯೋಗಿಗಳು ಬಯಸಿದ್ದನನ್ನು ಪಡೆಯುವ ಛಲಗಾರ್ತಿಯರು. ಸೂರಮ್ಮ ಇದಕ್ಕೆ ಹೊರತಾಗಿಲ್ಲ. ಒಂಟಿಗಾಲ ಮೇಲೆ ನಿಂತು ಉಗ್ರ ತಪಸ್ಸು ಮಾಡುತ್ತಾಳೆ. ಜೀವ ಭಯವಿಲ್ಲದೆ ಅಲಗದಾಟ ಆಡುತ್ತಾಳೆ. ಸೂರಮ್ಮನ ಹಠಕ್ಕೆ ಹೆದರಿದ ಶಿವ ನಾನೇ ನಿನ್ನ ಗರ್ಭದೊಳಗೆ ಜನ್ಮತಾಳುವೆ ಎನ್ನುವ ಭರವಸೆ ಕೊಡುತ್ತಾನೆ.

"ನಿನ್ನ ಗರ್ಭದೊಳಗೇನೆ ನಾನೇ ಬರುತೀನಿ ಅಂದಾನ
ಸೂರ್ಯ ಚಂದ್ರರ ಇರುವರಿಗೆ ನೆಲವಂದು ಗಂಗಿ ಹರಿವರಿಗ
ನೆಲವಂದು ಗಂಗಿ ಹರಿಯುವತನಕ ಸಾವಿಲ್ಲ ಕೆಡಿಲ್ಲೇನ
ಮೂರ ವರ್ಣದವನೇನ ಮೂರ ಹೆಸರಿನವನೇನ
ಹಣೆಯ ಬೆವರನಲ್ಲೇಳ ಹಣೆಯ ಬೆವರ ನಾದವ
ಪರಮೇಸೂರ ಹಣೆಯ ಬೆವರ ಲಿಂಗ ಬೀರಪ್ಪ ದೇವರ"[೬]

ಶಿವ ಹಣೆಯ ಬೇವರ ಹನಿಯಾಗಿ ಸೂರಮ್ಮನ ಹೊಟ್ಟೆಯಲ್ಲಿ ಬೀರಪ್ಪನಾಗಿ ಹುಟ್ಟುತ್ತಾನೆ.

ಬೀರಪ್ಪನ ಜನ್ಮವನ್ನು ಹೇಳುವ ಅನೇಕ ಭಿನ್ನ ಪಠ್ಯಗಳು ಸಿಗುತ್ತವೆ. ಲಿಖಿತ ಪಠ್ಯಗಳಲ್ಲಿ ಈತನ ಜನ್ಮವನ್ನು ಪೌರಾಣೀಕರಿಸಲಾಗಿದೆ. "ಪರಮೇಶ್ವರನಿಗೆ ಪಟ್ಟ ಕಟ್ಟುವ ಕಾಲದಲ್ಲಿ ಗುಗ್ಗುಳ ಹೋಮ ಮಾಡುತ್ತಿರುವಾಗ ಬೀರಪ್ಪ ಆ ಹೋಮದಲ್ಲಿ ಹುಟ್ಟಿದನು. ಸಮುದ್ರದಲ್ಲಿ ಹುಟ್ಟಿ ಸಮುದ್ರ ದಿಂದ ಒಡುವೆಗಳನ್ನು ತೆಗೆದುಕೊಡುವ ಕಾಯಕ ಮಾಡುತ್ತಿದ್ದವನು. ಸಮುದ್ರದ ದಡದಲ್ಲಿ ಕುಳಿತು ಸಕಲ ಪ್ರಾಣಿಗಳಿಗೆ ಆಹಾರವನ್ನು ಬೀರುತ್ತಿದ್ದವನು. ಆ ಕಾರಣಕ್ಕೆ ಈತನನ್ನು ಬೀರಪ್ಪನೆಂದು ಕರೆದರು ಹಾಗೂ ಬೀರಪ್ಪನನ್ನು ಚಾಮರಾಯನ ಮಗನೆಂದು, ಆತ ತನ್ನ ಕೂಸಿನಿಂದ 'ಮಾಯಾಖೆಟ'ವನ್ನು ನಾಶ ಮಾಡುವ ಕನಸ್ಸನ್ನು ಕಂಡ. ಈ ಕನಸು ಈಡೇರಿದರೆ ಈ ಮಗು ಬೀರತನದ (ವೀರತನದ) ಮಗು ಆಗುತ್ತದೆ. ಹಾಗಾಗಿ ಈತನನ್ನು ಬೀರ ಎಂದು ಕರೆದ."[೭] ಎಂದು ಹೇಳುವುದರ ಮುಖಾಂತರ ಬೀರಪ್ಪನೆನ್ನುವ ಹೆಸರಿನೊಂದಿಗೆ ಬೀರಪ್ಪನನ್ನು ಅರ್ಥೈಸುವ ಕಾರ್ಯ ನಡೆದಿದೆ.

೪.೧.೨.೨. ಬೀರಪ್ಪನ ಜನನ ಮತ್ತು ಆರ್ಥಿಕ ಸಂಘರ್ಷ

ಹಿಂದೆ ಹೇಳಿದಂತೆ ಭರ್ಮಪ್ಪ ಸೂರಮ್ಮ ದಂಪತಿಗಳು ಶೈವ ಆರಾಧನೆಯ ಅರ್ಹತೆಗಾಗಿ ಶಿವನಿಂದ ಬೀರಪ್ಪನನ್ನು ಪಡೆಯುತ್ತಾರೆ. ಇಲ್ಲಿ ಬೀರಪ್ಪನ ಹುಟ್ಟು ಭರ್ಮಪ್ಪನ ಮನೆತನಕ್ಕೆ ಸಂದ ಧಾರ್ಮಿಕ ಜಯದಂತೆ ಕಾಣಿಸುತ್ತದೆ. ಇಲ್ಲಿನ ಶೈವ ಆರಾಧನೆಯ ಸಂಘರ್ಷ ಕುತೂಹಲದ ಹಾದಿಯನ್ನು ಹಿಡಿಯುತ್ತದೆ. ಧಾರ್ಮಿಕ ಸಂಘರ್ಷ ಆರ್ಥಿಕ ಸಂಘರ್ಷದತ್ತ ಮುಖ ಮಾಡುತ್ತದೆ. ಸೂರಮ್ಮನಿಗೆ ಮಕ್ಕಳಾಗುವುದರಿಂದ ತನ್ನ ಆಸ್ತಿಯನ್ನು ಕಳೆದುಕೊಳ್ಳಬೇಕು ಎನ್ನುವ ಆತಂಕ ಕಾಳಿನಾರಾಯಣನಲ್ಲಿ ಆರಂಭವಾಗುತ್ತದೆ. "ಮಾತೃಪ್ರಧಾನ ವ್ಯವಸ್ಥೆಯಲ್ಲಿ ಯಾವಾಗಲೂ ಹಿಂದಿನ ರಾಜನ ತಂಗಿಯ ಮಗನೇ ಹೊಸ ರಾಜನಾಗಿ ಪಟ್ಟಕ್ಕೆ ಬರಬೇಕಾಗಿತ್ತು".[೮] ಆ ಕಾರಣಕ್ಕೆ ಬೀರಪ್ಪನನ್ನು ಕಾಳಿನಾರಾಯಣ ತಾಯಿಯ ಗರ್ಭದಲ್ಲಿರುವಾಗಲೇ ಸಾಯಿಸುವುದಕ್ಕೆ ಪ್ರಯತ್ನಪಡುತ್ತಾನೆ. ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಾನೆ.

"ನಮ್ಮ ತಂಗಿ ಅಲ್ಲೇಳ ಬಂಜಿನಾಗಲಿಬೇಕಯ್ಯ
ಬಂಜಿನಾಗಲಿಬೇಕಪ್ಪ ಗೊಡ್ಡಿನಾಗಲಿಬೇಕಯ್ಯ
ನಮ್ಮ ತಂಗಿ ಹೊಟ್ಟೇಲಿ ಹೆಣ್ಣು ಹುಟ್ಟಲಿಬಾರದ
ಹೆಣ್ಣು ಹುಟ್ಟಲಿಬಾರದ ಗಂಡು ಹುಟ್ಟಲಿಬಾರದ
ಗಂಡು ಹುಟ್ಟದರೆಲ್ಲೇಳ ನನ್ನ ಹೆಣ್ಣಿಗೆ ಮೂಲನಾದವ

ನಿನ್ನ ತಂಗಿ ಹೊಟ್ಟೇಲಿ ಹೆಣ್ಣು ಹುಟ್ಟಲಿ ಬಾರದ
ಹೆಣ್ಣು ಹುಟ್ಟಿದರಲ್ಲೇಳೆ ಗಂಡಿಗೆ ಮೂಲನಾದವ
ನಮ್ಮ ತಂಗಿ ನೋಡವ್ವ ಬಂಜಿ ಆಗಲಿಬೇಕವ್ವ"[೫]

ಸೂರಮ್ಮನ ಹೊಟ್ಟೆಯಲ್ಲಿ ಯಾವುದೇ ಮಗು ಜನ್ಮತಾಳಬಾರದು ಎನ್ನುವುದು ಕಾಳಿನಾರಾಯಣನ ಉದ್ದೇಶ. ಆಸ್ತಿಗಾಗಿ ತನ್ನ ತಂಗಿಯನ್ನು ಸಂಪೂರ್ಣವಾಗಿ ಬಂಜೆಯನ್ನಾಗಿಸುವ ನಿರ್ಧಾರಕ್ಕೆ ಬಂದು ಬಿಡುತ್ತಾನೆ. ಪುರುಷ ಪ್ರಧಾನ ವ್ಯವಸ್ಥೆ ಆಸ್ತಿಗಾಗಿ ಮಹಿಳಾ ಪ್ರಧಾನ ವ್ಯವಸ್ಥೆಯನ್ನು ಅಥವಾ ಮಹಿಳೆಯನ್ನು ಹೇಗೆ ತುಳಿಯುವುದಕ್ಕೆ ಪ್ರಯತ್ನ ಪಡುತ್ತಿತ್ತು ಅನ್ನುವುದಕ್ಕೆ ಬಹುದೊಡ್ಡ ಉದಾಹರಣೆ ಇದು.

ಆದರೆ ಬೀರಪ್ಪ ಕಾಳಿನಾರಾಯಣನ ಉದ್ದೇಶಗಳು ಈಡೇರಿಕೆಯಾಗುವುದಕ್ಕೆ ಬಿಡುವುದಿಲ್ಲ. ಆತ ತಾಯಿಯ ಹೊಟ್ಟೆಯಲ್ಲಿದ್ದುಕೊಂಡೇ ಕಾಳಿನಾರಾಯಣನ ಯೋಜನೆಗಳನ್ನು ವಿಫಲಗೊಳಿಸುತ್ತಾನೆ. ಸೂರಮ್ಮನನ್ನು ಬಂಜೆಯನ್ನಾಗಿಸುವುದಕ್ಕೆ ಬಯಕೆ ಬುತ್ತಿಯ ನೆಪದಲ್ಲಿ ವಿಷದ ಬುತ್ತಿ ಕಳಿಸಿದಾಗ ಮಾವನ ಕುತಂತ್ರವನ್ನು ಬೀರಪ್ಪ ತಾಯಿಗೆ ತಿಳಿಸಿ ಸಾವಿನಿಂದ ಪಾರುಮಾಡುತ್ತಾನೆ. ಹೆರಿಗೆ ಸಂದರ್ಭ ದಲ್ಲಿ ಸೂಲಗಿತ್ತಿಯರಿಗೆ ಹುಟ್ಟುವ ಕೂಸನ್ನು ಕತ್ತು ಹಿಚಗಿ ಹಾಕುವಂತೆ ಹೇಳಿ, ಆ ಉಕ್ಕಿನ ಉಗುರು, ಮೂಲಿ ಕುಂಚಿಗೆ ಕೊಟ್ಟು ಕಳಿಸುತ್ತಾನೆ. ಈ ತಂತ್ರವನ್ನು ಅರಿತ ಬೀರಪ್ಪ ತಾಯಿಯ ಗರ್ಭದಿಂದ ಹೊರಗಡೆ ಬರುತ್ತಿರುವಂತೆ ಸೂಲಗಿತ್ತಿಯರನ್ನು ಹೊಡೆದು ಓಡಿಸುತ್ತಾನೆ. ತಾಯಿಗೆ ಎಚ್ಚರವಾಗುವ ಸಮಯಕ್ಕಾಗಲೇ ಪಕ್ಕದಲ್ಲಿ ನಗುವ ಕೂಸಾಗಿ ಮಲಗುತ್ತಾನೆ. ಕೂಸಿನ ಅಲೌಕಿಕ ಕ್ಷಣಗಳನ್ನು ಜನಪದ ಹಾಲುಮತ ಮಹಾಕಾವ್ಯ ಹೀಗೆ ವರ್ಣಿಸುತ್ತದೆ.

"ಹೊನ್ನ ಚಕ್ಕರ ಸುಳಿಯವನೆ ಬೆಳ್ಳಿ ಮುಖವನಿದ್ದವನೇ
ಅಂಗಾಲ ಪದಮ ಇದ್ದವನೊ ಹೊನ್ನ ವಸ್ತರದವನೇನೋ
ಬೆಳ್ಳಿಮುಖದವನಿದ್ದಾನೆ ಬಂಗಾರ ಚಂಡಕಿದವನೇನ
ಮುಂದಿನ ಮುರಗಿ ಸುಳಿಯೇನ ಕಣ್ಣಾಗ ದೇವಿಯ ಮಣಿಯೇನ
ಅಸಲ ಮಾರಿನಿದ್ದಾವೊ ಮುಖದೋಳು ಚಿನ್ನ ಇದ್ದಾವೊ
ನಕ್ಕರ ಮುತ್ತ ಉದರ್ಯಾವೊ ಅತ್ತರ ಹವಳ ಉದರ್ಯಾವೊ
ಗಾಡಿಕಾರನ ಗಂಡನೋ ಮೋಡಿಕಾರನ ಮಿಂಡನೋ"[೬]

ಬೀರಪ್ಪ ಜನ್ಮತಾಳಿದರೂ ಕಾಳಿನಾರಾಯಣ ಕೂಸನ್ನು ಸಾಯಿಸುವ ತಂತ್ರವನ್ನು ಕೈಬಿಡುವುದಿಲ್ಲ. ತಂಗಿಯ ಮನೆಗೆ ಬಂದು ತಾಳಿಪಟ್ಟಿ ಹೊತ್ತಿಗೆ ತೆಗೆದು ಈ ಕೂಸಿನಿಂದ ತಾಯಿ ತಂದೆಗೆ, ಸೋದರ ಮಾವನಿಗೆ ಭೂಮಿ ಸೀಮೆಗೆ ಕೇಡೆಂದು ಭವಿಷ್ಯ ಹೇಳುತ್ತಾನೆ. ಈ ಮಾತು ಆಸ್ತಿಯ ಸಂಘರ್ಷವನ್ನು ಹೇಳುತ್ತದೆ. ಕಾಳಿನಾರಾಯಣನ ಆತಂಕದ ಮಾತಿದು. ಇದನ್ನು ನಂಬಿದ ಸೂರಮ್ಮ ಪರಿಹಾರವೇನು ಎಂದು ಕೇಳುತ್ತಾಳೆ. ಈ ಕೂಸನ್ನು ಅಡವಿಯಲ್ಲಿ ಬಿಟ್ಟು ಬರಬೇಕೆಂದು ಅಜ್ಞಾಪಿಸುತ್ತಾನೆ. ಸೂರಮ್ಮ ಇದಕ್ಕೆ ಯಾವ ಪ್ರತಿರೋಧವನ್ನು ಮಾಡದೆ ಒಪ್ಪುತ್ತಾಳೆ. ಆಗ ಕಾಳಿನಾರಾಯಣ ನಾಲ್ಕು ಜನ ಪೈಲ್ವಾನರನ್ನು ಕರೆಯಿಸಿ ಕೂಸನ್ನು ಅರಣ್ಯದಲ್ಲಿ ಕೊಲ್ಲಬೇಕು. ಆ ರುಂಡವನ್ನು ನನಗೆ ತಂದು

ತೋರಿಸಬೇಕೆಂದು ಹೇಳುತ್ತಾನೆ. ಈ ಮಾತುಗಳನ್ನು ಒಪ್ಪಿಕೊಂಡ ಪೈಲ್ವಾನರು ತೊಟ್ಟಿಲನ್ನು ಹೊತ್ತುಕೊಂಡು ಕಾಡಿಗೆ ಹೋಗುತ್ತಾರೆ. ನಾಲ್ಕು ಜನ ಪೈಲ್ವಾನರು ಒಂದು ಸ್ಥಳದಲ್ಲಿ ಊಟಕ್ಕೆ ಕುಳಿತು ಕೊಳ್ಳುತ್ತಾರೆ. ಅವರು ಹೊಟ್ಟೆ ತುಂಬ ಊಟ ಮಾಡಿದರೂ ತೆಗೆದುಕೊಂಡು ಹೋದ ಬುತ್ತಿ ನೀರು ಕಡಿಮೆ ಆಗಲಿಲ್ಲ. ಈ ಅನ್ನದ ಋಣಕ್ಕೆ ಬಿದ್ದ ಮತ್ತು ಇದೆಲ್ಲ ಕೂಸಿನ ಮಹಿಮೆ ಎಂದು ತಿಳಿದ ಪೈಲ್ವಾನರು ಈ ಕೂಸನ್ನು ಕೊಲೆ ಮಾಡಿ ಪಾಪ ಕಟ್ಟಿಕೊಳ್ಳುವ ಬದಲು ತೊಟ್ಟಿಲನ್ನು "ಕಂಚಿನಾಲದ ಮರ"ಕ್ಕೆ ಕಟ್ಟುತ್ತಾರೆ. 'ರಕ್ತಹೊನ್ನಿನಗಿಡ' ಕಡಿದು ರುಂಡದ ಆಕಾರ ತಯಾರಿಸಿ ಕಾಳಿನಾರಾಯಣನಿಗೆ ತಂದು ತೋರಿಸುತ್ತಾರೆ. ಪೀಡೆ ತೊಲಗಿತೆಂದು ಕಾಳಿನಾರಾಯಣ ಖುಷಿ ಪಡುತ್ತಾನೆ. ಬೀರಪ್ಪನನ್ನು ಕಾಡಿನಲ್ಲಿ ಬಿಟ್ಟು ಬರುವ ಭಿನ್ನ ಪಠ್ಯಗಳು ನಮಗೆ ಸಿಗುತ್ತವೆ. ಕೆಲವು ಪಠ್ಯಗಳಲ್ಲಿ ಪೈಲ್ವಾನರು ತಮ್ಮಷ್ಟಕ್ಕೆ ತಾವು ರಕ್ತಕಾರಿಕೊಂಡು ಸಾಯುತ್ತಾರೆ. ಇನ್ನೂ ಕೆಲವು ಪಠ್ಯಗಳಲ್ಲಿ ಕೂಸಿಗೆ ಶರಣಾಗಿ ನಮಸ್ಕಾರ ಅರ್ಪಿಸಿ ಬರುತ್ತಾರೆ. ಕಾಡು ಸೇರಿದ ಕೂಸನ್ನು ಶಿವ ಪಾರ್ವತಿಯರು ಬಂದು ಬೀರಪ್ಪನ ಜೋಪಾನದ ಮತ್ತು ಕಾವಲಿನ ವ್ಯವಸ್ಥೆ ಮಾಡುತ್ತಾರೆ.

೪.೧.೨.೩. ಸಪ್ತಮಾತೃಕೆಯರ ಆರೈಕೆಯಲ್ಲಿ ಬೆಳೆದ ಬೀರಪ್ಪ

'ಹೆವಲಿ ಹಳ್ಳ'ದ ದಡದಲ್ಲಿರುವ 'ಕಂಚಿನಾಲ'ದ ಮರದಲ್ಲಿ ಶಿವ-ಪಾರ್ವತಿಯರ ಆರೈಕೆಯಲ್ಲಿ ಬೆಳೆಯುತ್ತಿದ್ದ ಬೀರಪ್ಪ ಕುರಿಗಳನ್ನು ಕಾಯುತ್ತ ಬಂದ ಅಕ್ಕವ್ವ-ಮಾಯವ್ವರೆಂಬ ಸಹೋದರಿಯರ ಕಣ್ಣಿಗೆ ಕಾಣಿಸಿಕೊಳ್ಳುತ್ತಾನೆ. ಈ ಇಬ್ಬರು ಸಹೋದರಿಯರು ಕೂಸನ್ನು ಪಡೆಯುವುದಕ್ಕೆ ಮುಂದಾಗುತ್ತಾರೆ. ಮೊದಲು ಅಕ್ಕವ್ವ ಗಿಡ ಏರಲೂ ಮುಂದಾಗುತ್ತಾಳೆ. ಇರುವೆಗಳು ಗಿಡ ಹತ್ತುವುದಕ್ಕೆ ಬಿಡುವುದಿಲ್ಲ. ನಂತರ ಮಾಯವ್ವ ಹತ್ತುವುದಕ್ಕೆ ಮುಂದಾದಾಗ ಇರುವೆಗಳು, ಕೋಗಿಲೆಗಳು, ನಾಗರ ಹಾವುಗಳು ದಾರಿ ಬಿಡುತ್ತವೆ. ಮಾಯವ್ವ ತೊಟ್ಟಿಲನ್ನು ಬಿಚ್ಚಿ ಇಳಿಸುತ್ತಾಳೆ. ಇಬ್ಬರಲ್ಲಿ ಕೂಸು ಯಾರಿಗೆ ಅನ್ನುವ ಪ್ರಶ್ನೆ ಎದುರಾಗುತ್ತದೆ. 'ಮಡಿಯಿಂದ ತೊಟ್ಟಿಲನ್ನು ಸುತ್ತು ಹಾಕುವಾಗ ಯಾರ ಎದೆಯಲ್ಲಿ ಹಾಲು ಚಿಮ್ಮುವವೋ ಅವರಿಗೆ ಕೂಸು' ಎನ್ನುವ ಮಾತಿನಂತೆ ಮೊದಲು ಅಕ್ಕವ್ವ ತೊಟ್ಟಿಲನ್ನು ಸುತ್ತುತ್ತಾಳೆ. ಈಕೆಯ ದೇಹದಲ್ಲಿ ಯಾವುದೇ ಬದಲಾವಣೆಗಳು ಕಾಣುವುದಿಲ್ಲ. ಮಾಯವ್ವ ಸುತ್ತುತ್ತಾಳೆ ಆಕೆಯ ಎದಿ-ಬದಿಗಳು ಚಿಗಿತು ಬಾಣಂತಿ ರೂಪ ಪಡೆಯುತ್ತವೆ. ಆಗ "ಮನಕೆ ಮಗನಾಗಿ ಜನಕೆ ತಮ್ಮನಾಗಿ" ಕೂಸನ್ನು ಸಲುಹುವ ಜವಾಬ್ದಾರಿಯನ್ನು ಮಾಯವ್ವ ಹೊರುತ್ತಾಳೆ. ಇಲ್ಲಿ ತಾಯಿಯನ್ನು ಪರೀಕ್ಷಿಸುವ ವಿಧಾನ ಗಮನಸೆಳೆಯುತ್ತದೆ. ಬೀರಪ್ಪ ಮಾಯವ್ವನ ಕೈಗೆ ದೊರಕುವ ಭಿನ್ನಪಠ್ಯಗಳು ಸಿಗುತ್ತವೆ. ಕೆಲವು ಹಾಡುಗಳಲ್ಲಿ ಐದು ಜನ ಅಕ್ಕ-ತಂಗಿಯರು ಮರದ ಕೆಳಗೆ ಉಡಿಯೊಡ್ಡಿ ಶಿವನ ಸ್ಮರಣೆ ಮಾಡುತ್ತ ನಿಲ್ಲುವುದು. ಆಗ ಕೂಸು ಯಾರ ಉಡಿಯಲ್ಲಿ ಬೀಳುತ್ತದೆ. ಅವರು ಸಾಕಬೇಕು ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಅಲ್ಲಿಯು ಸಹ ಕೂಸು ಮಾಯವ್ವನ ಉಡಿಯಲ್ಲಿ ಬೀಳುತ್ತದೆ.

> "ಶಿವನನು ಸ್ತುತಿಸುತ ಐದು ಮಂದಿಯು
> ಉಡಿಯೊಡ್ಡಿ ನಿಂತಾರಿನ್ನು

ಬೇಗ ಶಿವನು ಬಂದು ಆ ಕೂಸು ತೋಗೊಂಡು
ಮಾಯವ್ವನ ಉಡಲೋಳು ಹಾಕಿದನು’’[೧೧]

ಹೀಗೆ ಮರದಲ್ಲಿದ್ದ ಕೂಸು ಮಾಯವ್ವನ ಕೈಸೇರುತ್ತದೆ. “ಸೂರಮ್ಮದೇವಿಯಿಂದ ಬೀರಪ್ಪನನ್ನು ದೂರ ಮಾಡಿದರೂ ಅವನಂತೆಯೇ ಕೂಸಿರುವಾಗಲೇ ನೀರಿಗೆ ಬಿಟ್ಟ ಮಗು ಮಾಯವ್ವ ಇನ್ನೊಬ್ಬರಲ್ಲಿ ಬೆಳೆದ ಪರದೇಶಿ ಕೂಸು. ಹೀಗೆ ಇಬ್ಬರು ಪರದೇಶಿಗಳನ್ನು ಒಂದೆಡೆ ಒಂದು ಅನೋನ್ಯವಾದ ಸಂಬಂಧದಲ್ಲಿ ಬೆಸೆಯುವ ಕೆಲಸವನ್ನು ಈ ಕಾವ್ಯ ಬೆಸೆಯುತ್ತದೆ.[೨]

ಬೀರಪ್ಪ ಮಾಯವ್ವನಿಗೆ ದೊರೆತ ನಂತರ ಸಪ್ತಮಾತೃಕೆಯರ ಆರೈಕೆಯಲ್ಲಿ ಪ್ರೀತಿಯಿಂದ ಬೆಳೆಯುತ್ತಾನೆ. ಮಾಯವ್ವ ತನ್ನ ವೃತ್ತಿಯಾದ ಕುರಿಗಳನ್ನು ಕಾಯುವ ಕಾಯಕವನ್ನು ಕಲಿಸಿಕೊಡುತ್ತಾಳೆ. ಇದರಿಂದ ಬೀರಪ್ಪ ಮನೆತನದ ವೃತ್ತಿ ಬದಲಾಗುತ್ತದೆ. ಈತನ ಪೂರ್ವಜರು ‘ಕಿಲಾರ’(ದನಗಳು)ಗಳನ್ನು ಕಾಯುವ ಮನೆತನಕ್ಕೆ ಸೇರಿದವರು. ಬೀರಪ್ಪ ಮಾಯವ್ವನಿಂದ ಕುರಿಕಾಯುವ ವೃತ್ತಿಯನ್ನು ಕಲಿತು ಕೊಳ್ಳುತ್ತಾನೆ. ಈತನ ಶಿಷ್ಯ ಪರಂಪರೆಯವರು ಸಹ ಕುರಿಗಳನ್ನು ಕಾಯುವ ಕಾಯಕವನ್ನು ಮಾಡುತ್ತಾರೆ. ಕುರಿಗಾರರು, ದನಗಾರರ ಜೊತೆ ಕುರಿಗಳನ್ನು ಮೇಯಿಸುವುದಕ್ಕೆ ಭೂಮಿಗಾಗಿ ಸಂಘರ್ಷ ಮಾಡುತ್ತಾರೆ. ಬೀರಪ್ಪನು ದನಗಾರರನ್ನು ಕೊಂದು ತಾನು ಮತ್ತು ತನ್ನ ಅಕ್ಕ ಮಾಯವ್ವನ ಅಸ್ತಿತ್ವನ್ನು ಕಟ್ಟಿಕೊಳ್ಳುತ್ತಾನೆ. ಅವುಗಳನ್ನು ಬೀರಪ್ಪನ ಸಂಘರ್ಷಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಬೀರಪ್ಪ ಅಕ್ಕ ಮಾಯವ್ವನ ಸಹಾಯ ಪಡೆದು ಮಾವ ಕಾಳಿನಾರಾಯಣನ ಮಗಳನ್ನು ಮದುವೆ ಮಾಡಿಕೊಳ್ಳುವುದರ ಮುಖಾಂತರ ಆಸ್ತಿಯನ್ನು ಕಬಳಿಸಿಕೊಳ್ಳುತ್ತಾನೆ. ಮತ್ತೆ ತಂದೆ-ತಾಯಿಯನ್ನು ಸೇರುತ್ತಾನೆ. ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೆ ಕಾಳಿನಾರಾಯಣನ ಯೋಜನೆಗಳನ್ನು ವಿಮುಖಗೊಳಿಸು ತ್ತಾನೆ. ಶಿಷ್ಯರನ್ನು ಪಡೆದು ಅಲೆಮಾರಿಯಾಗಿ ಕುರಿಗಳನ್ನು ಕಾಯುತ್ತಾ ಹಲವು ಪಶುಪಾಲಕರನ್ನು ಸೋಲಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತಾರ ಮಾಡಿಕೊಳ್ಳುತ್ತಾನೆ.

೪.೧.೩. ಬೀರಪ್ಪನ ಸಂಘರ್ಷಗಳು

ಬೀರಪ್ಪ ಗರ್ಭಾವಸ್ಥೆ, ಶೈಶಾವಸ್ಥೆ ಬಾಲ್ಯ ಯೌವ್ವನ ವಯಸ್ಕ ಮತ್ತು ಮುಪ್ಪಿನ-ಹಂತಗಳಲ್ಲಿ ಹಲವು ಹೋರಾಟಗಳನ್ನು ಮಾಡಿದ ಚಿತ್ರಣಗಳು ಸಿಗುತ್ತವೆ. ಪ್ರತಿಯೊಂದು ಹಂತದ ಹೋರಾಟಗಳು ಭಿನ್ನವಾದ ಉದ್ದೇಶಗಳನ್ನು ಹೊಂದಿವೆ. ಗರ್ಭಾವಸ್ಥೆ, ಶೈಶಾವಾಸ್ಥೆಯ ಹೋರಾಟಗಳು ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುವುದಕ್ಕೆ ಮಾಡಿರುವ ಹೋರಾಟಗಳಾಗಿವೆ. ಈ ಹಂತದಲ್ಲಿ ಬೀರಪ್ಪ (ಕೂಸು) ಪ್ರಜ್ಞಾಪೂರ್ವಕ ವ್ಯಕ್ತಿಯಾಗಿ ಕಾಣಿಸುತ್ತಾನೆ. ವಯಸ್ಸಿಗೆ ಮೀರಿದ ಹೋರಾಟಗಳನ್ನು ಮಾಡುತ್ತಾನೆ. ಆ ಹೋರಾಟಗಳು ಕಲ್ಪನಾತೀತವಾಗಿ ಕಾಣಿಸುತ್ತವೆ. ಇದನ್ನರಿತ ಕಲಾವಿದರು ಸೂರಮ್ಮ ಹೊಟ್ಟೆಯಲ್ಲಿ ಶಿವನೇ ಬೀರಪ್ಪನ ರೂಪ ತಾಳಿದ್ದಾನೆ ಎಂದು ಹೇಳುವುದರ ಮುಖಾಂತರ ಕಲ್ಪನೆಯನ್ನು ಹೊಡೆದು ಹಾಕುವುದಕ್ಕೆ ಪ್ರಯತ್ನಪಡುತ್ತಾರೆ. ಕಥೆಯಲ್ಲಿ ವಾಸ್ತವತೆಯನ್ನು ತರುವುದಕ್ಕೆ ಪ್ರಯತ್ನ

ಪಡುತ್ತಾರೆ. ಬಾಲ್ಯದ ಹೋರಾಟಗಳು ಇದಕ್ಕಿಂತ ಭಿನ್ನ. ಇಲ್ಲಿನ ಹೋರಾಟಗಳು ಬೀರಪ್ಪನ ಶಕ್ತಿಯನ್ನು ಗೊತ್ತುಪಡಿಸುವುದಕ್ಕೆ ಮಾಡಿದ ಹೋರಾಟಗಳಾಗಿವೆ.

ಇಲ್ಲಿ ಬೀರಪ್ಪ ಅಸ್ತಿತ್ವವನ್ನು ಕಟ್ಟಿಕೊಳ್ಳುವುದಕ್ಕೆ ಆರಂಭಿಸುತ್ತಾನೆ. ವಯಸ್ಕ ಹಂತದಲ್ಲಿ ಒಂದು ಹಂತವನ್ನು ತಲುಪುತ್ತದೆ. ಮುಪ್ಪಿನಲ್ಲಿ ಮಾಡುವ ಹೋರಾಟಗಳ ಸ್ವರೂಪ ಬೇರೆ. ಯಜಮಾನಿಕೆಯ ಸ್ವರೂಪವನ್ನು ಹೊಂದಿವೆ. ಈ ಹೋರಾಟಗಳಲ್ಲಿ ಬೀರಪ್ಪ ನೇರವಾಗಿ ಭಾಗಿ ಆಗುವುದಿಲ್ಲ. ಕೇವಲ ಬಾಹ್ಯ ಬೆಂಬಲಿಗನಾಗಿ ನಿಂತುಕೊಳ್ಳುತ್ತಾನೆ. ತನ್ನ ಮನದಾಳದ ಬೇಡಿಕೆಗಳನ್ನು ಶಿಷ್ಯಂದಿರ ಮುಂದೆ ಇಡುವುದರ ಮುಖಾಂತರ ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುತ್ತಾನೆ. ಹೀಗೆ ಹಲವು ಹಂತಗಳಲ್ಲಿ ಬೀರಪ್ಪ ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುವುದಕ್ಕೆ ಹಲವು ಪ್ರದೇಶದ ನಾಯಕರ ಜೊತೆ ಸಂಘರ್ಷ ಮಾಡಿದ್ದಾನೆ. ಆ ಎಲ್ಲಾ ಸಂಘರ್ಷಗಳನ್ನು ಇಲ್ಲಿ ಚರ್ಚಿಸುವುದಿಲ್ಲ. ಕೆಲವು ಸಂಘರ್ಷಗಳ ಮುಖಾಂತರ ಆತನ ಸಂಘರ್ಷಗಳ ತಾತ್ವಿಕತೆಯನ್ನು ಗುರುತಿಸಲಾಗಿದೆ.

ಬೀರಪ್ಪ 'ಕೆಂಬಾವಿ' ಎನ್ನುವ ಪ್ರದೇಶದಲ್ಲಿ ಮಕ್ಕಳೊಂದಿಗೆ ಚಂಡಿನಾಟ ಆಡುತ್ತಿರುವಾಗ ಆಕಸ್ಮಾತಾಗಿ ಚಂಡು ಕೆಂಬಾವಿಯಲ್ಲಿ ಬೀಳುತ್ತದೆ. ನೀರಿಗೆ ಬಂದ ಜಂಗಮರಣ್ಣ (ಜಂಗಮ) ಚಂಡು ತೆಗೆದುಕೊಳ್ಳುತ್ತಾನೆ. ಬೀರಪ್ಪ ಅದು ನನ್ನ ದೇವರ ಚಂಡು ಕೊಡಿ ಎಂದು ಕೇಳುತ್ತಾನೆ, ಅಂಗಲಾಚುತ್ತಾನೆ. ಜಂಗಮ ಚಂಡು ಕೊಡುವುದಿಲ್ಲ. ಬದಲಾಗಿ

"ಉಂಡ ಬಾಯಿನ ತೊಳೆಯದ ಕುರುಬಗ ಮುತ್ತಿನ
ಚಂಡು ಉಂಟೆನೋ"[೧೩]

ಎಂದು ಅವಮಾನ ಮಾಡುತ್ತಾನೆ. ಈ ವಸ್ತುವನ್ನು ಆಧರಿಸಿದ ಭಿನ್ನ ಪಠ್ಯಗಳ ಡೊಳ್ಳಿನ ಹಾಡುಗಳು ಸಿಗುತ್ತವೆ. 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ಬೀರಪ್ಪ ಎಸೆದ ಚಂಡು 'ಶೆಟ್ಟಿಸಾಹುಕಾರ' ಮತ್ತು ಆತನ ಮಗನಿಗೆ ಬಡಿಯುತ್ತದೆ. ಅವರಿಬ್ಬರು ಸಾಯುತ್ತಾರೆ. ಹಂಜಗಿಮಠರವರು ಸಂಪಾದಿಸಿರುವ 'ಡೊಳ್ಳಿನ ಹಾಡುಗಳು' ಕೃತಿಯಲ್ಲಿ ಜಂಗಮ ಬೀರಪ್ಪನನ್ನು "ಹುಚ್ಚಗುರುಬ ಮಳ್ಳಗುರುಬ ದೇವರಿಗೆ ಚಂಡ ಉಂಟೇನ"[೧೪] ಎಂದು ಅವಮಾನ ಮಾಡುತ್ತಾನೆ. ಜಂಗಮನ ಮಾತಿಗೆ ಬೀರಪ್ಪ ಪ್ರತಿರೋಧ ಮಾಡುವ ವಿಧಾನ ಗಮನಸೆಳೆಯುತ್ತದೆ. ಇದಕ್ಕೆ ಬೀರಪ್ಪ ನೇರವಾಗಿ ತಕ್ಷಣವೇ ಪ್ರತಿರೋಧ ಒಡ್ಡುವುದಿಲ್ಲ. ಜಂಗಮ ಆ ಘಟನೆಯನ್ನು ಮರೆಯುವಂತೆ ಮೂರು-ನಾಲ್ಕು ದಿನಗಳ ಕಾಲ ಬಿಡುತ್ತಾನೆ. ನಂತರ ಆತನ ದನ-ಕರು-ಕುರಿ ಮಕ್ಕಳು, ಸೊಸೆಯಂದಿರ ಆರೋಗ್ಯ ಹಾಳುಮಾಡುತ್ತಾನೆ. ಬೀರಪ್ಪ ಜಂಗಮನಿಗೆ ಕೊಟ್ಟಿರುವ ಹಿಂಸೆಯನ್ನು ಡೊಳ್ಳಿನ ಹಾಡುಗಳು ಹೀಗೆ ಕಟ್ಟಿಕೊಡುತ್ತವೆ.

"ಏಕ ಚಾಡಿಯಾ ಜಂಗಮರಣ್ಣಗ ಏಳುಮಂದಿ ಗಂಡುಮಕ್ಕಳೋ
ಏಳು ಮಂದಿ ಗಂಡುಮಕ್ಕಳವರು ಹಗಲೇ ಇಳಿಗಣ್ಣ ಹೋಗ್ಯಾವು
ಏಕಚಾಡಿಯ ಜಂಗಮರಣ್ಣಗ ಯೇಳು ಮಂದಿ ಸೊಸ್ತೇರ
ಏಳು ಮಂದಿ ಸೊಸ್ತೆರಿರುವರು ಶೂಲೆದ್ದ ಕುಣಿದಾಡಿದರು
ಶೂಲೆದ್ದ ಕುಣಿದಾಡಿದರಿವರು ಬತ್ತಲ ಬಸವಂತನಾಡಿದರ"[೧೫]

ಬೀರಪ್ಪ ಜಂಗಮನ ವಿರುದ್ಧ ಮಾಡಿದ ಸೂಕ್ಷ್ಮ ಪ್ರತಿರೋಧವಿದು. ಮಕ್ಕಳ ಆರೋಗ್ಯ ಮತ್ತು ಆಸ್ತಿಯನ್ನು ನಾಶ ಮಾಡುವುದರ ಮುಖಾಂತರ ತನ್ನ ಹತ್ತಿರ ಬರುವಂತೆ ಮಾಡುವ ತಂತ್ರವಿದು. ಹಲವು ಜನಪದ ಸಾಂಸ್ಕೃತಿಕ ನಾಯಕರು ಶತ್ರುಗಳನ್ನು ಸದೆ ಬಡಿಯುವುದಕ್ಕೆ ಇದೇ ತರಹದ ತಂತ್ರಗಳನ್ನು ಮಾಡಿರುವ ಚಿತ್ರಣಗಳು ಸಿಗುತ್ತವೆ. ಬೀರಪ್ಪನ ತಂತ್ರಗಾರಿಕೆಯನ್ನು ಅರಿತ ಜಂಗಮರಣ್ಣ, ಬೀರಪ್ಪನನ್ನ ಹುಡುಕಿಕೊಂಡು ಬಂದು ಚಂಡು ಕೊಡುತ್ತಾನೆ. ಜನಪದ ಹಾಲುಮತ ಕಾವ್ಯದಲ್ಲಿ ಜಂಗಮರಣ್ಣನಿಗೆ ಆಗುವ ನಷ್ಟಗಳ ಬಗ್ಗೆ ಬೀರಪ್ಪ ಕೊರವಂಜಿ ಮುಖಾಂತರ ತನ್ನದೇ ತಂತ್ರವಿದು ಎಂದು ಹೇಳಿಸುತ್ತಾನೆ. ಬೀರಪ್ಪ ಅಂಬುವನ್ನು ಏರಿ ಬಿಲ್ಲು ಬಾಣಗಳನ್ನು ಹಿಡಿದು ಯುದ್ಧ ಮಾಡುತ್ತಾನೆ. ಬೀರಪ್ಪನ ಶಕ್ತಿಯನ್ನು ಅರಿತ ಜಂಗಮರಣ್ಣ ಚೆಂಡನ್ನು ವಾಪಾಸು ಕೊಡುತ್ತಾನೆ. 'ಪಲ್ಲಕ್ಕಿ' ಮತ್ತು 'ಸಂಕದ ಪೇರಿ'ಯನ್ನು ಅರ್ಪಿಸಿ ಒಕ್ಕಲಾಗಿ ಬಿಡುತ್ತಾನೆ. ಮೇಲಿನ ಮೂರು ಪಠ್ಯಗಳ ಪರಿಕಲ್ಪನೆ ಭಿನ್ನವಾಗಿದ್ದರೂ ವಸ್ತು ಒಂದೆಯಾಗಿದೆ. ಇಲ್ಲಿ ಬೀರಪ್ಪ ಪ್ರಭುತ್ವದ ವಿರುದ್ಧ, ಯಜಮಾನಿಕೆಯ ವಿರುದ್ಧ ಹೋರಾಟ ಮಾಡಿದ್ದಾನೆ. ಅಂದರೆ ಪ್ರಭುತ್ವವನ್ನು ಹೊಡೆದು ಹಾಕುವುದರ ಮುಖಾಂತರ ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಧೋರಣೆ ಇದು.

ಬೀರಪ್ಪನ ಸಂಘರ್ಷಗಳಲ್ಲಿ ಗಮನಸೆಳೆಯುವ ಮತ್ತು ಹೆಚ್ಚು ಜನಪ್ರಿಯ ಆಗಿರುವ ಸಂಘರ್ಷಗಳೆಂದರೆ ಈಗಿನ ಅಥಣಿ, ಚಿಂಚಲಿ, ಕೋಣಗನೂರು ಪ್ರದೇಶಗಳ ಸುತ್ತಮುತ್ತ ಕುರಿಗಾರಿಕೆಗಾಗಿ ಮಾಡಿದ ಸಂಘರ್ಷಗಳು. ಮಾಯವ್ವ ಬೀರಪ್ಪನ ಜೊತೆಗೂಡಿ ಕುರಿಗಾರಿಕೆಗಾಗಿ 'ಹೇವಲಿ ಹಳ್ಳ'ದಿಂದ ದಕ್ಷಿಣ ದೇಶಗಳತ್ತ ವಲಸೆ ಬರುತ್ತಾಳೆ. ಕೋಣಗನೂರು, ಚಿಂಚಲಿ ಪ್ರದೇಶಗಳಲ್ಲಿ ಪಶುಪಾಲನೆ ಮಾಡುತ್ತ ನೆಲೆಸಿದ್ದ ಭಗನಾಥ, ಕೋಣಾಸುರ ಮತ್ತು ವನದೇವತೆ ಎನ್ನುವ ಸದಸ್ಯರನ್ನೊಳಗೊಂಡ ಕುಟುಂಬ ಎದುರುಗೊಳ್ಳುತ್ತದೆ. ಇದು ಪಶುಪಾಲನೆಗೆ ಯೋಗ್ಯವಾದ ಭೂಮಿ ಆಗಿತ್ತು. ಈಗಲೂ ಕುರಿಗಾರಿಕೆಗೆ ಹೆಚ್ಚು ಸೂಕ್ತವಾದ ಭೂಮಿ ಇದಾಗಿದೆ ಎಂದು ಭೌಗೋಳಿಕ ತಜ್ಞರು ಹೇಳುತ್ತಾರೆ. ಇದನ್ನು ಅರಿತ ಮಾಯವ್ವ ಬೀರಪ್ಪ ಈ ಪ್ರದೇಶದಲ್ಲಿ ನೆಲೆ ನಿಲ್ಲಲು ನಿರ್ಧರಿಸಿದಂತೆ ಕಾಣಿಸುತ್ತದೆ. ಇದಕ್ಕೆ ಆ ವೇಳೆಗಾಗಲೇ ನೆಲೆನಿಂತ ಕೋಣಾಸುರರ ಕುಟುಂಬ (ದನಗಾರರು) ಪ್ರತಿರೋಧ ಒಡ್ಡಿದ್ದಾರೆ. ಬೀರಪ್ಪ ಮಾಯವ್ವ ಇವರನ್ನು ಸಂಹಾರ ಮಾಡಿ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡರು. ಡಾ. ಕೆ.ಎಂ. ಮೇತ್ರಿ ಅವರು ಈ ಸಂಘರ್ಷದ ಉದ್ದೇಶವನ್ನು ಸರಿಯಾಗಿ ಗುರುತಿಸಿ ದನಗಾರರು ಮತ್ತು ಕುರಿಗಾರರ ಸಂಘರ್ಷವೆಂದು ಕರೆಯುತ್ತಾರೆ. ಈ ಎರಡು ಕುಟುಂಬಗಳ ನಡುವೆ ಸಂಘರ್ಷ ಆರಂಭ ವಾಗುವ ವಿಧಾನ ಗಮನ ಸೆಳೆಯುತ್ತದೆ. ಭಗನಾಥ ಮಾಯವ್ವನನ್ನು ಅತ್ಯಾಚಾರ ಮಾಡುವುದಕ್ಕೆ ಪ್ರಯತ್ನ ಪಡುತ್ತಾನೆ. ಇದನ್ನು ನೋಡಿದ ಬೀರಪ್ಪ ಭಗನಾಥನನ್ನು ಸಂಹಾರ ಮಾಡುತ್ತಾನೆ.

"ಅಕ್ಕನ ಮಗ್ಗಲದೊಳಗೇನೆ ಸಿಡಿದಾ ನಿಂದ್ರುತಾನೇನ
ಸಿಡಿದಾ ನಿಂದ್ರುತಾನೇನ ತಮ್ಮ ಮಾಯದಾಟ ನಡಸ್ಯಾನ
ಪಾತಾಳದೊಳಗ ಇವನ ಪಾದೇನೆ ಕೈಲಾಸದೊಳಗ ಇವನ ಕಳಸೇನ

ವಾಯಿ ಗಂಗಾಳ ಹಚ್ಚಿದನಯ್ಯ ಪಂಚಡಂಕಿ ಹೊಡಿದನಯ್ಯ
ಪಂಚಡಂಕಿ ಹೊಡಿದನಯ್ಯ ಶಿರವ ಹಾರಿ ಬಿದ್ದಾವ
ಬಾಗಿಯ ಭಗನಾಥನಯ್ಯ ಶಿರವ ಹಾರಿ ಬಿದ್ದಾವ" [೧೬]

'ಭಗನಾಥ'ನನ್ನು ಸಂಹಾರ ಮಾಡಿದ ನಂತರ 'ಕೋಣಾಸುರ'ನನ್ನು ಸಂಹಾರ ಮಾಡುವುದಕ್ಕೆ ಕೋಣಾಗನೂರಿಗೆ ಹೋಗುತ್ತಾರೆ. ಅಲ್ಲಿ ಬೀರಪ್ಪ ಕರಿಯಸಿದ್ಧ(ಕರೆಸಿದ್ಧ)ನ ರೂಪ ತಾಳಿ ಕೋಣಾಸುರನನ್ನು ಸಂಹಾರ ಮಾಡುತ್ತಾನೆ.

"ಕರಿಯಾ ದೇವರಲ್ಲಪ್ಪ ಧೈತ್ಯ ಕ್ಯಾಣೇಸೂರಗ
ಕ್ಯಾಣೇಸೂರನ ವಧವ ಮಾಡ್ಯಾನ ಕರಿಯದೇವರು ಅನಸ್ವಾನ
ತುಂಡು ಬಿದ್ದಲ್ಲಲ್ಲೇಳ ಮುಂಡಗನೂರ ಅನಸೇನ
ಮುಂಡಿಯ ಬಿದ್ದಲ್ಲಲ್ಲೇಳ ಮುಂಡಗನೂರ ಅನಸೇನ
ಕ್ಯಾಣೇಸೂರ ಧೈತನ ತಲಿಯಾ ಗದ್ದುಗಿ ಆಗುತಾವೇನ
ಗದ್ದಗಿ ಮ್ಯಾಲೋ ತಮ್ಮ ಲಿಂಗಬೀರಣ್ಣ ದೇವರ
ಲಿಂಗ ಬೀರಣ್ಣ ದೇವರ ಕರಿಯಾ ದೇವರು ಅನಸ್ವಾನ" [೧೭]

ಕೋಣಾಸುರನನ್ನು ಸಂಹಾರ ಮಾಡಿದರೆಂದು ಹೇಳುವ ಸ್ಥಳಗಳು ಕೋಣಗನೂರಿನಲ್ಲಿ ಸಿಗುತ್ತವೆ. ಆ ಸ್ಥಳಗಳಲ್ಲಿ ಕುರಿಬಲಿ ಕೊಡುವ ಆಚರಣೆ ನಡೆಯುತ್ತದೆ. ಇವುಗಳಲ್ಲದೆ ಕರಿಸಿದ್ಧ ಕೋಣಾಸುರನನ್ನು ಸಂಹಾರ ಮಾಡಿದಾಗ ರುಂಡ ಬಿದ್ದ ಸ್ಥಳವನ್ನು 'ಮುಂಡಗನೂರು', ಮಾಂಸ ಮತ್ತು ದೇಹದ ಇತರ ಅಂಗಾಂಗಳು ಬಿದ್ದ ಸ್ಥಳವನ್ನು 'ಅಲಖನೂರು' ಎಂದು ಕರೆಯುವ ಸ್ಥಳನಾಮಗಳ ಕಥನಗಳು ಸಿಗುತ್ತವೆ. ಮುಂಡಗನೂರು, ಅಲಖನೂರು ಮತ್ತು ಕೋಣಗನೂರು ಗ್ರಾಮಗಳಲ್ಲಿ ಕರಿಸಿದ್ಧನ ಪ್ರಾಚೀನವಾದ ದೇವಾಲಯಗಳು ಇವೆ. ಈ ದೇವಾಲಯಗಳು ನೂರಾರು ಎಕರೆ ಭೂಮಿಯನ್ನು ಹೊಂದಿವೆ. ರಾಜ ಮನೆತನಗಳಂತೆ ಆಳ್ವಿಕೆ ಮಾಡಿದ ಲಕ್ಷಣಗಳು ಕಾಣಿಸುತ್ತವೆ. ಈ ಮೂರು ಸ್ಥಳಗಳಲ್ಲಿ ಕೋಣಗನೂರು ಪ್ರಾಚೀನವಾದ ಸ್ಥಳವೆಂದು ಹೇಳಲಾಗುತ್ತದೆ. ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರದಲ್ಲಿರುವ ಕರಿಸಿದ್ಧ ದೇವಾಲಯಗಳ ಪೂಜಾರಿಗಳು ನಮ್ಮ ಮೂಲಸ್ಥಳ ಕೋಣಗನೂರು ಎಂದು ಹೇಳುತ್ತಾರೆ. 'ಸಿಡಿಯಾಣ' ಪ್ರದೇಶದಿಂದ ವಲಸೆ ಬಂದ 'ಬೀರಪ್ಪ' ಕೋಣಗನೂರನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತ ಮಾಡಿದ್ದಾನೆ. ಕೋಣಗನೂರಲ್ಲಿ ನೆಲೆಸಿದ ನಂತರ ಬೀರಪ್ಪ ಮತ್ತು ಮಾಳಿಂಗರಾಯರ (ಗುರು-ಶಿಷ್ಯರ) ಸಂಬಂಧ ಭಿನ್ನರೂಪ ತಾಳುತ್ತದೆ. "ಮಾಳಿಂಗರಾಯ ಹುಲಿಜಂತಿ ಗ್ರಾಮದಿಂದ ಪ್ರತಿದಿನ ಕೋಣಗನೂರಿಗೆ ಬಂದು ಪೂಜೆ ಮಾಡುವುದಕ್ಕೆ ಪಡುತ್ತಿದ್ದ ತೊಂದರೆಯನ್ನು ಅರಿತ ಕರಿಸಿದ್ಧ ಮಾಳಿಂಗರಾಯನ ಸಾಕುಮಗ ಬುಳ್ಳಪ್ಪನನ್ನು ನೇಮಿಸುತ್ತಾನೆ. ಬುಳ್ಳಪ್ಪ ಕೋಣಗನೂರಿನಲ್ಲಿದ್ದುಕೊಂಡು ಹಲವು ಕೃಷಿ-ದನಗರ-ನೆಲೆನಿಂತ ಕುಟುಂಬಗಳ ಜೊತೆ ಸಂಘರ್ಷಕ್ಕೆ ಇಳಿಯುತ್ತಾನೆ; ಗೆಲ್ಲುತ್ತಾನೆ. ಸಿಂದಗಿಯ ಏಕದಂಡಿಗಿ ಪದುಮಣ್ಣನನ್ನು ಸೋಲಿಸುವ ಚಿತ್ರಣ ಪ್ರಮುಖವಾಗಿದೆ. ಈ ಕಥನ ಬೀರಪ್ಪ ಸಿಡಿಯಾಣವನ್ನು ಬಿಟ್ಟು, ಕೋಣಗನೂರಿನಲ್ಲಿ ನೆಲೆಸಿದ ಎನ್ನುವುದನ್ನು ಹೇಳುತ್ತದೆ. ಸೋಲ್ಲಾಪುರ,

ಕೊಲ್ಲಾಪುರ ಪ್ರದೇಶಗಳಿಂದ ವಲಸೆ ಬಂದ ಬೀರಪ್ಪ ಕೋಣಗನೂರಿನಲ್ಲಿ ನೆಲೆಸಿದ. ಪಶುಪಾಲಕರ ರಕ್ಷಣೆಗಾಗಿ ಹೋರಾಟ ಮಾಡಿದ. ಈತನ ಸಹಾಯವನ್ನು ಪಡೆದ ಪಶುಪಾಲಕರು ಆರಾಧ್ಯ ದೈವಾಗಿ ಸ್ವೀಕರಿಸಿ ಈಗಿನ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ವಿಸ್ತರಿಸಿದರು.

ಕೋಣಾಸುರನನ್ನು ಸಂಹಾರ ಮಾಡಿದ ನಂತರ ಬೀರಪ್ಪ-ಮಾಯವ್ವರು ಚಿಂಚಲಿ ಪ್ರದೇಶದಲ್ಲಿ ನೆಲೆಸಿದ್ದ ಕೋಣಾಸುರನ ಸಹೋದರಿ ವನದೇವತೆಯನ್ನು ಸಂಹಾರ ಮಾಡುತ್ತಾರೆ. ಇವರನ್ನು ಸಂಹಾರ ಮಾಡಿದ ನಂತರ ಮಾಯವ್ವ 'ಚಿಂಚಲಿ' ಪ್ರದೇಶದಲ್ಲಿ ಉಳಿದುಕೊಳ್ಳುತ್ತಾಳೆ. ಬೀರಪ್ಪ ಕೋಣಗನೂರಿನಲ್ಲಿ ನೆಲೆಸುತ್ತಾನೆ. ಅಂದರೆ ಕೋಣಾಸುರ, ಭಗನಾಥ ಮತ್ತು ವನದೇವತೆ ಸುತ್ತಮುತ್ತಲಿನ ಒಂದೊಂದು ಪ್ರದೇಶದಲ್ಲಿ ನೆಲಸಿ ದನಗಾರಿಕೆಯನ್ನು ಮಾಡುತ್ತಿದ್ದ ಸ್ಥಳೀಯ ನೆಲಸುಗಾರ ಕುಟುಂಬಗಳು ಆಗಿದ್ದವು. ಆ ಕುಟುಂಬಗಳನ್ನು ಸಂಹಾರ ಮಾಡಿ ಬೀರಪ್ಪ-ಮಾಯವ್ವರು ತಮ್ಮ ಅಸ್ತಿತ್ವವನ್ನು ಕಟ್ಟಿಕೊಳ್ಳುತ್ತಾರೆ. ಈ ಸಂಘರ್ಷ ಕುರಿಗಾರರು, ದನಗಾರರ ಮೇಲೆ ಮಾಡಿದ ಸಂಘರ್ಷವಾಗಿ, ಅಲೆಮಾರಿಗಳು ಸ್ಥಳೀಯರ; ನೆಲೆ ನಿಂತವರ ಮೇಲೆ ಮಾಡಿದ ಸಂಘರ್ಷವಾಗಿ ಕಂಡುಬರುತ್ತದೆ.

೪.೧.೩.೧. ಶಿಷ್ಯರ ಮುಖಾಂತರ ಮಾಡಿಸುವ ಸಂಘರ್ಷ

ಬೀರಪ್ಪನ ಶಿಷ್ಯ ಬಳಗದವರಲ್ಲಿ 'ಮಾಳಿಂಗರಾಯ' ಮತ್ತು 'ಬುಳ್ಳಪ್ಪ' ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಬೀರಪ್ಪ ಈ ಇಬ್ಬರೂ ಶಿಷ್ಯರನ್ನು ಬಳಸಿಕೊಂಡು ಹಲವಾರು ತನ್ನ ಬಯಕೆಗಳನ್ನು ಈಡೇರಿಸಿಕೊಂಡಿದ್ದಾನೆ. ಮಾಳಿಂಗರಾಯನಲ್ಲಿ ಬೇಡಿಕೆಯನ್ನು ಇಟ್ಟು ಪೂರೈಸಿಕೊಂಡ ಬೇಡಿಕೆ ಹೀಗಿದೆ.

> "ಗಾಂಜಿಕೋರ ನಮ್ಮದೇವರ ಗಾರುಡಿಗ ವಿದ್ಯಾ ಬೀರಣ್ಣ
> ಕಾಡಬಾರದು ಕಾಡ್ಯಾನೆ ಬೇಡಬಾರದು ಬೇಡ್ಯಾನೆ
> ಕರಗೊಳು ಕುಡಿಯಲಿ ಬಾರದ ಎಂಜಲು ಆಗಲಿ ಬಾರದ
> ಏ ನಮ್ಮ ಗುರುವ ಬೀರಮ್ನ ಹುಲಿಗಿಣ್ಣ ಬೇಡ್ಯಾನ
> ಊಟಕ ಹುಲಿಗಿಣ್ಣ ಬೆಡ್ಯಾನ ಆಟಕ ಹುಲಿಮರಿಯೇನ"[೨೮]

ಈ ಕಥನ ವಸ್ತು ಬೀರಪ್ಪ-ಮಾಳಿಂಗರಾಯನ ಚರಿತ್ರೆಯಲ್ಲಿ ಹೆಚ್ಚು ಜನಪ್ರಿಯವಾಗಿದೆ. ಹಲವು ಚಾರಿತ್ರಿಕ ಅಂಶಗಳನ್ನು ಸೃಷ್ಟಿಸಿದೆ. 'ಹುಲಿಜಂತಿ' ಗ್ರಾಮಕ್ಕೆ ಮೊದಲು ಇದ್ದ 'ಜಾಗೃತಪುರ' ಮತ್ತು 'ಜತ್ತಿ ನಾರಾಯಣಪುರ' ಅನ್ನುವ ಹೆಸರನ್ನು ವಿಸ್ಮೃತಿಗೊಳಿಸಿ ಹುಲಿಜಂತಿ ಅನ್ನುವ ಹೆಸರನ್ನು ಖಾಯಂಗೊಳಿಸಿಕೊಂಡಿದೆ. ಈ ಬೇಡಿಕೆಯಲ್ಲಿ ಬೀರಪ್ಪನ ಮನದಾಳದ ಧೋರಣೆ ಇದೆ. ಹುಲಿಹಾಲು, ಮರಿಯನ್ನು ಹಿಡುದು ತರುವುದು ಬೀರಪ್ಪನ ಆಸೆಯೇ ಹೊರತು ಮಾಳಪ್ಪನ ಆಸೆ ಅಲ್ಲ. ಇಲ್ಲಿ ಹುಲಿ ರೂಪಕವಾಗಿ, ವ್ಯಕ್ತಿ ಸಂಕೇತವಾಗಿ ಬಳಕೆಯಾಗಿರುವುದಕ್ಕೆ ಸಾಧ್ಯವಿದೆ. ಅಂದರೆ ಹುಲಿ ಕಾಡಿನಲ್ಲಿ ಬದುಕುವ ಪ್ರಾಣಿ, ಕಾಡಿನ ರಾಜ, ಬೇಟೆಯ ಸಂಸ್ಕೃತಿಯ ಪ್ರತೀಕ. ಬೇಟೆ ಸಂಸ್ಕೃತಿಯು ನಾಯಕನ ಪ್ರತೀಕ. ಹಾಗಾಗಿ ಕಥನಕಾರರು ಬೇಟೆ ಸಂಸ್ಕೃತಿಯ ನಾಯಕನನ್ನು ಹೇಳುವುದಕ್ಕೆ ಹುಲಿಯನ್ನು ರೂಪಕವಾಗಿ ಬಳಸಿಕೊಂಡಿರುವುದಕ್ಕೆ ಸಾಧ್ಯವಿದೆ. ಏಕೆಂದರೆ ಬೀರಪ್ಪ ಮಾಳಪ್ಪರಿಗೆ ತಾವು ಕೈಗೊಳ್ಳುತ್ತಿದ್ದ

ಪಶುಪಾಲನೆಯನ್ನು ಯಶಸ್ವಿಗೊಳಿಸಿಕೊಳ್ಳಬೇಕಾಗಿತ್ತು. ಇದಕ್ಕೆ ಕಾಡಿನಲ್ಲಿ ವಾಸವಾಗಿದ್ದ ಬೇಟೆ (ಬ್ಯಾಡ) ಸಂಸ್ಕೃತಿಯವರು ಪದೇ ಪದೇ ಅಡ್ಡಿಯನ್ನುಂಟು ಮಾಡುತ್ತಿದ್ದರು. ಇದರಿಂದ ಮುಕ್ತಿ ಪಡೆಯಬೇಕಾದ ಒತ್ತಡವಿತ್ತು. ಆ ಕಾರಣಕ್ಕೆ ಬೀರಪ್ಪ ಮಾಳಿಂಗರಾಯನಲ್ಲಿ 'ಹುಲಿ ಹಾಲು ಮತ್ತು ಹುಲಿಮರಿ'ಯನ್ನು ಬೇಡುತ್ತಾನೆ. ಈ ಬೇಡಿಕೆಯಲ್ಲಿ ಎಚ್ಚರದ ಧ್ವನಿ ಇದೆ. ಸಂಘರ್ಷ ಮಾಡುವ ಅಥವಾ ಸಂಹಾರ ಮಾಡುವ ಧೋರಣೆ ಇಲ್ಲ. ಅದರ ಬದಲು ಪಳಗಿಸುವ ತಂತ್ರಗಾರಿಕೆ ಇದೆ. ಆ ಪಳಗಿಸುವಿಕೆ ಪ್ರಭುತ್ವದ ಮನೋಸ್ಥಿತಿಯದಲ್ಲ. ಶಾಂತಿ ಸೌಹಾರ್ದಯುತ ಮನೋಭಾವದ್ದು. ಆ ಕಾರಣಕ್ಕೆ ಜೀವಂತವಾಗಿ ಹಿಡಿದು ತರುವುದಕ್ಕೆ ಹೇಳುತ್ತಾನೆ. ಮಾಳಿಂಗರಾಯ ಜೀವಂತವಾಗಿ ಹಿಡಿದು ತಂದ ಹುಲಿಮರಿಗಳ ಜೊತೆ 'ಚದುರಂಗ'ದಾಟ ಆಡುತ್ತಾನೆ. ವೇದವನ್ನು ಓದಿಸುತ್ತಾನೆ.

> "ಹುಲಿಯ ಬಾಯಿಲೇs
> ವೇದ ಓದಿಸೀs
> ತೋರಿಸಿದ ಅಪ್ಪು ಜನಕೋs"[೧೯]

ಅಕ್ಷರ ದೀಕ್ಷೆ ನೀಡುವುದರ ಮುಖಾಂತರ ಜೀವನದಲ್ಲಿ ಬದಲಾವಣೆ ತರುವ ಪ್ರಯತ್ನ ಮಾಡುತ್ತಾನೆ. ಬೇಟೆ ಸಂಸ್ಕೃತಿಯ ಜನಕ್ಕೆ ಮಾನವೀಯ ಮೌಲ್ಯಗಳನ್ನು ಬೆಳೆಸುವುದರ ಜೊತೆಗೆ 'ಪಶು ಸಂಪತ್ತ'ನ್ನು ಉಳಿಸಿಕೊಳ್ಳುವ ತಂತ್ರಗಾರಿಕೆ ಇದು. ಶತ್ರುಗಳನ್ನು ಶಾಶ್ವತವಾಗಿ ಬದಲಾಯಿಸುವ ಯತ್ನವಿದು. ಬೀರಪ್ಪ ಈ ಗುಣಗಳನ್ನು ಹೊಂದಿರುವುದರಿಂದಲೇ ಯಶಸ್ವಿಯಾಗಿ; ಪಶುಪಾಲನ ಸಂಸ್ಕೃತಿಯಲ್ಲಿ ವಿಶಿಷ್ಟ ಚಹರೆಯನ್ನು ಹೊಂದಿದ ನಾಯಕನಾಗಿ ಕಾಣಿಸುತ್ತಾನೆ.

೪.೧.೩.೨. ಬೀರಪ್ಪನ ಸಂಘರ್ಷಗಳ ತಾತ್ವಿಕತೆ

ಬೀರಪ್ಪ ಕುರಿಗಾರಿಕೆಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾನೆ. ತನಗೆ ಎದುರಾದ ದನಗಾರರನ್ನು ಸಂಹಾರ ಮಾಡಿ ತನ್ನ ಅಸ್ತಿತ್ವವನ್ನು ಕಟ್ಟಿಕೊಂಡಿದ್ದಾನೆ. ಇದು ದನಗಾರರ ಕುರಿಗಾರರ ಸಂಘರ್ಷ. ಸ್ಥಳೀಯರಾಗಿ ನೆಲೆನಿಂತವರ ಮತ್ತು ಅಲೆಮಾರಿಗಳ ಸಂಘರ್ಷ. ಬೀರಪ್ಪನ ಕಾಲಘಟ್ಟಕ್ಕಾಗಲೇ ನೆಲೆನಿಂತವರು ದನಗಾರಿಕೆ ಮತ್ತು ಕುಮ್ರಿ ಬೇಸಾಯ ಮಾಡುತ್ತಿದ್ದರು. ಹಾಗಾಗಿ ಬೀರಪ್ಪ ಸಂಹಾರವಾದವರು ಅಥವಾ ಬೀರಪ್ಪನ ಜೊತೆ ಸಂಘರ್ಷ ಮಾಡಿದವರು 'ದ್ರಾವಿಡ ಅಲೆಮಾರಿ (ವಲಸೆ) ದನಗಾರರು' ಅಲ್ಲ. ನೆಲೆನಿಂತ ಸ್ಥಳೀಯ ದನಗಾರರು. ಬೀರಪ್ಪ ಸ್ಥಳೀಯ ದನಗಾರರ ನಾಯಕರನ್ನು ಸಂಹಾರ ಮಾಡಿದ ನಂತರ ಉಳಿದವರನ್ನು ತನ್ನ ಒಕ್ಕಲನನ್ನಾಗಿ ಮಾಡಿಕೊಳ್ಳುತ್ತಾನೆ. ಈತನ ಸಂಘರ್ಷಗಳೆಲ್ಲವು ಪಶುಪಾಲನೆಯನ್ನು ಯಶಸ್ವಿ ಮಾಡುವುದಕ್ಕೆ ಮತ್ತು ಶೈವ ಆರಾಧನೆಯನ್ನು ಗಟ್ಟಿಗೊಳಿಸುವುದಕ್ಕೆ ಮಾಡಿದ ಸಂಘರ್ಷಗಳಾಗಿವೆ.

೪.೧.೪. ಬೀರಪ್ಪನ ಚರಿತ್ರೆಯ ಮೇಲೆ ನಡೆದ ರಾಜಕಾರಣ

ಬೀರಪ್ಪ ಪಶುಪಾಲಕರ ಸಾಂಸ್ಕೃತಿಕ ನಾಯಕ. ಶೈವ ಆರಾಧಕ. ಶೈವ ಧರ್ಮದ ಪ್ರತಿಪಾದಕ. ಕ್ಷುದ್ರದೈವಗಳ ನಾಯಕ. ಈ ವ್ಯಕ್ತಿ ಚರಿತ್ರೆಯ ಕಥನಗಳ ಮೇಲೆ ಹಲವು ಧರ್ಮಗಳು ಪ್ರಯೋಗ ಮಾಡಿ ತಮ್ಮ ಧರ್ಮದ ಸಾಂಸ್ಕೃತಿಕ ಅನನ್ಯತೆಗೆ ತಕ್ಕಂತೆ ರೂಪಾಂತರಿಸಿಕೊಂಡಿವೆ.

೪.೧.೪.೧. ಬೀರಪ್ಪನನ್ನು ವೀ(ಈ)ರಪ್ಪನನ್ನಾಗಿ ರೂಪಾಂತರಿಸಿದ ತಾತ್ವಿಕ ರಾಜಕಾರಣ

ಬೀರಪ್ಪ, ಈರಪ್ಪ-ವೀರಪ್ಪ-ವೀರಭದ್ರ ಮತ್ತು ಪೀರನಾದನೆನ್ನುವ ಜನಪ್ರಿಯ ಕಥನಗಳು ಸಿಗುತ್ತವೆ. ಎಂ.ಎಂ. ಕಲಬುರ್ಗಿ ಅವರು ಬೀರಪ್ಪನನ್ನೇ ವೀರಪ್ಪನನ್ನಾಗಿ ಮಾಡಲಾಗಿದೆ. ಹಂಪೆಯ ವಿರೂಪಾಕ್ಷ ದೇವಾಲಯ ಮೂಲತಃ ಬೀರಪ್ಪ ದೇವಾಲಯ. ಕಾಲಾಂತರದಲ್ಲಿ ಇರುವ ಬೀರಪ್ಪನನ್ನೇ ವಿರುಪಾಕ್ಷನನ್ನಾಗಿ ರೂಪಾಂತರಿಸಲಾಯಿತು ಎನ್ನುತ್ತಾರೆ. ಡಾ. ವೀರೇಶ ಬಡಿಗೇರ್ ಅವರು "ಪ್ರಬಲವಾದ ಧಾರ್ಮಿಕ ಶಕ್ತಿಗಳು ಮುಗ್ಧ ಕುರುಬರ ಮನಸ್ಸನ್ನು ಬಳಸಿಕೊಂಡು ಬೀರಪ್ಪನನ್ನು ವೀರಭದ್ರನ ಅವತಾರವೆಂದು ರೂಪಿಸಿದರು ಎನ್ನುತ್ತಾರೆ".[೨೦] ಡೊಳ್ಳಿನ ಹಾಡುಗಳ ವೀರನೇ ಬೀರನಾದನೆನ್ನುವ ಕಥನವನ್ನು ಹೇಳುತ್ತವೆ.

"ವೀರಶೈವರಿಗೆ ವೀರನಾಗಿ ತೋರ್‍ಯಾನು ತಾನು ಪರಶಿವನು
ಧರಿಯೊಳಗೆ ವೀರಸುತನಾದ ಬೀರನು ತಾನಾದ ಪೀರನಾದ ಮುಸಲ್ಮಾನರಿಗೆ
ಕುರುಬರ ಕುಲವನ್ನು ನಿರ್ಮಿಸಿ ಡೊಳ್ಳನು ಕರದಿನ್ನು ಕೊಟ್ಟಾನು ಅವರೊಳಗೆ"[೨೧]

"ಬಿಲ್ಲಾಸೂರ ದೈತ್ಯಗೆ ಕೊಂದ ಕಾರಣಾ ನೀನು
ಭೂಲೋಕಕ ಹೋಗಿ ಜನಿಸಬೇಕ ಅಂದಾನೋ
ಭೂಲೋಕದೊಳಗ ನೀರ ವೀರದೇವರಾಗಿ
ಹಾಲುಮತದ ದೇವನಾಗಿ ಮೆರಿ ಅಂದಾನೋ"[೨೨]

ಈ ಹಾಡುಗಳು ಬೀರಪ್ಪನ ಬಗ್ಗೆ ಬಂದ ಲಿಖಿತ ಕೃತಿಗಳನ್ನು ಆಧರಿಸಿ ರಚನೆ ಆಗಿರುವುದಕ್ಕೆ ಸಾಧ್ಯತೆ ಇದೆ.

ಬೀರಪ್ಪನನ್ನು ವೀರಪ್ಪನನ್ನಾಗಿಸಿದ ಕಥನಗಳ ಹಿನ್ನೆಲೆಯಲ್ಲಿ ಹಿಂದೆ ಹಾಲುಮತ ಮತ್ತು 'ವೀರಶೈವ' (ಲಿಂಗಯತ) ಧರ್ಮಗಳ ಸಂಘರ್ಷವಿದೆ. ಬೀರಪ್ಪನನ್ನು ಭಂಡಾರ ಪಂಥದಿಂದ ವಿಸ್ಮೃತಿಗೊಳಿಸುವ ಮತ್ತು ವೀರಶೈವ ಧರ್ಮಕ್ಕೆ ಪರಿವರ್ತಿಸುವ ಬೌದ್ಧಿಕತೆಯೂ ಇದೆ. ಏಕೆಂದರೆ ವೀರಶೈವ ಧರ್ಮ ಪ್ರಚಲಿತಕ್ಕೆ ಬರುವ ವೇಳೆಗಾಗಲೇ ಭಂಡಾರ ಆರಾಧನೆ ಜನಪ್ರಿಯವಾಗಿತ್ತು. ಬೀರಪ್ಪ ಭಂಡಾರ ಪಂಥದ ಆರಾಧನೆಯ ಪ್ರಧಾನ ನಾಯಕನಾಗಿದ್ದ. ಈತನ ಶಿಷ್ಯ ಪರಂಪರೆ ಭಂಡಾರ ಪಂಥವನ್ನು ತೀವ್ರವಾಗಿ ಪ್ರತಿಪಾದನೆ ಮಾಡುತ್ತಿತ್ತು. ಲಿಂಗರಹಿತ ಶೈವ ಆರಾಧನೆಯನ್ನು ಜಾರಿಗೆ ತಂದಿತ್ತು. ಈ ತತ್ವವನ್ನು ಅನುಸರಿಸುವ ಜನಸಮುದಾಯ ಹೆಚ್ಚಾಗಿತ್ತು. ಆಗ ತಾನೆ ಆರಂಭಿಸಿದ ವೀರಶೈವ ಧರ್ಮವನ್ನು (ವಿಭೂತಿ ಪಂಥವನ್ನು-ಲಿಂಗ ಆರಾಧನೆಯ ಶೈವಧರ್ಮವನ್ನು) ಪ್ರಧಾನ ಧಾರೆಗೆ ತರಬೇಕಾದ ಒತ್ತಡ ಆ ಧರ್ಮದ ನಾಯಕರಲ್ಲಿತ್ತು. ಆ ಕಾರಣಕ್ಕೆ ಜನಸಮುದಾಯಗಳನ್ನು ತಮ್ಮ ಧರ್ಮದ ಹತ್ತಿರ ಸೆಳೆದುಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಹೊಸ ದೈವಗಳನ್ನು ಸೃಷ್ಟಿಸಿಕೊಳ್ಳುವುದೂ ಕಷ್ಟವಾಗಿತ್ತು. ಆದ್ದರಿಂದ ಮೈಲಾರಲಿಂಗನನ್ನು ಮಲ್ಲಯ್ಯನನ್ನಾಗಿ (ಮಲ್ಲಿಕಾರ್ಜುನನನ್ನಾಗಿ) ಬೀರಪ್ಪನನ್ನು ವೀರಪ್ಪನನ್ನಾಗಿ ಪರಿವರ್ತನೆ ಮಾಡಿಕೊಂಡು ಆರಾಧನೆ ಮಾಡುವುದಕ್ಕೆ ಆರಂಭಿಸಿದರು. ಆ ಸಂದರ್ಭದಲ್ಲಿ ವೀರಪ್ಪನಿಂದ ಬೀರಪ್ಪನ ಸೃಷ್ಟಿಯಾಯಿತು ಎನ್ನುವ ಸಾಂಸ್ಕೃತಿಕ ಕಥನಗಳನ್ನು, ಚಾರಿತ್ರಿಕ ಕಥನಗಳು ಸೃಷ್ಟಿಸಿದರು.

೪.೧.೪.೧.೧. ವೀರಪ್ಪ-ಈರಪ್ಪ ಕುರುಬರ ಕುಲದೈವ

ವೀರಪ್ಪ(ಈರಪ್ಪ)ನನ್ನು ಕುಲದೈವಗಳನ್ನಾಗಿ ಮಾಡಿಕೊಂಡ ಕೆಲವು ಕುಲಗಳು ಕುರುಬ ಸಮುದಾಯದಲ್ಲಿವೆ. ನಂಜನಗೂಡು ತಾಲೂಕು ಕಳಲೆ ಗ್ರಾಮದ ವೀರಪ್ಪ (ಕತ್ರಿ ವೀರಪ್ಪ) ಕಳಲೆ ಮತ್ತು ಸುತ್ತಮುತ್ತಲಿನ ಗ್ರಾಮಗಳ ಕುರುಬರ ಕುಲದೈವ. ಈ ದೇವಾಲಯವು ಕುರುಬರ ಆಡಳಿತ ವ್ಯವಸ್ಥೆಯಲ್ಲಿದೆ. ಈ ದೇವಾಲಯದ ಸ್ಥಳವನ್ನು 'ಕುರುಬಕುಲ' ಹುಟ್ಟಿದ ಸ್ಥಳವೆಂದು ಹೇಳುತ್ತಾರೆ. ಸಾಂಸ್ಕೃತಿಕ ಕಥನಗಳೂ ಸಿಗುತ್ತವೆ. ಆ ಗ್ರಾಮದ ರೇವಣಸಿದ್ಧ, ಸಿದ್ಧೇಶ್ವರ, ಬೊಮ್ಮದೇವರು (ಬ್ರಹ್ಮ-ಬೀರಪ್ಪನ ತಂದೆ) ಸಪ್ತಮಾಳಮ್ಮ (ಮೈಲಾರಲಿಂಗನ ಹೆಂಡತಿ) ಮುಂತಾದ ಹಾಲುಮತ ಸಮುದಾಯದ ಆರಾಧ್ಯ ದೈವಗಳ ಆಚರಣೆಗಳಲ್ಲಿ ವೀರಪ್ಪ ದೈವ ಪ್ರಧಾನ ಪಾತ್ರವಹಿಸುತ್ತದೆ. ವೀರಪ್ಪ ದೈವ ಬರದಿದ್ದರೆ ಈ ದೈವಗಳ ಜಾತ್ರೆಗಳು ನಡೆಯುವುದಿಲ್ಲವೆಂದು ಗ್ರಾಮಸ್ಥರು ಹೇಳುತ್ತಾರೆ. ಇದು ಕುಲದ ಹಿರೇದೈವವಾಗಿದ್ದು ಹಾಗಾಗಿ ಎಲ್ಲಾ ದೈವಗಳ ಆಚರಣೆಗಳಲ್ಲಿ ಈ ದೈವ ಇರಲೇಬೇಕು ಅನ್ನುವುದು ಹಿರಿಯರ ನಂಬಿಕೆ.

೪.೧.೪.೨. ರೇವಣಸಿದ್ಧನನ್ನು ಪ್ರಾಚೀನ ದೈವವನ್ನಾಗಿ ಸೃಷ್ಟಿಸಿದರು

ರೇವಣಸಿದ್ಧ ಹಾಲುಮತ ಸಮುದಾಯದ ಸಾಂಸ್ಕೃತಿಕ ನಾಯಕ. 'ವಿಭೂತಿ ಪಂಥ'ದೊಂದಿಗೆ ಗುರುತಿಸಿಕೊಂಡು, ಹಾಲುಮತ ಸಮುದಾಯಕ್ಕೆ 'ವಿಭೂತಿ ಪಂಥ'ದ ದೀಕ್ಷೆ ನೀಡಿದ ಸಾಂಸ್ಕೃತಿಕ ನಾಯಕ. ಹಾಲುಮತ ಸಮುದಾಯದಲ್ಲಿ ವಿಭೂತಿ ಪಂಥವನ್ನು ಮತ್ತು ಲಿಂಗಾರಾಧನೆಯನ್ನು ಪ್ರಚಾರಕ್ಕೆ ತರುವುದಕ್ಕೆ ಕುರುಬ ಗುರು ಒಡೆಯರನ್ನು ಸೃಷ್ಟಿಸಿದ. ಈತ ಬೀರದೇವರಿಗೂ ಲಿಂಗದೀಕ್ಷೆ ನೀಡಿದನೆಂದು ಹೇಳುವ ಸಾಂಸ್ಕೃತಿಕ ಕಥನಗಳು ಸಿಗುತ್ತವೆ. ಇಲ್ಲಿ ಡೊಳ್ಳಿನ ಹಾಡನ್ನು ನೋಡಬಹುದು.

"ಬೀರ ದೇವರಿಗೆ ಲಿಂಗ ಕಟ್ಟಿದಂವ ನೀನೆ
ವೀರ ಹಾಲುಮತಕೆ ಗುರುವಾದವ ನೀನೆ
ವೀರತಪ್ಪ ದೈವ ತತ್ವಕ ನೀನೆ
ಹರ ಹರಿ ಮುನಿಗಳಿಗೆ ಗುರುವಾದವಾ ರೇವಣಸಿದ್ಧ ನೀನೆ"[೨೬]

ಈ ವಸ್ತುವನ್ನು ಪ್ರಧಾನವಾಗಿಟ್ಟುಕೊಂಡ ವೀರಶೈವ ಧರ್ಮ ರೇವಣಸಿದ್ಧನನ್ನು ತಮ್ಮ ಕುಲದೈವವನ್ನಾಗಿ ಮಾಡಿಕೊಂಡಿತು. ಪ್ರಾಚೀನ ದೈವವನ್ನಾಗಿ ರೂಪಿಸುವುದಕ್ಕೆ ಆರಂಭಿಸಿತು. ಈ ಹಿನ್ನೆಲೆಯಲ್ಲಿ ಬೀರಪ್ಪ, ರೇವಣಸಿದ್ಧನ ವರಪುತ್ರನೆಂದು ಹೇಳುವ ಕೃತಿಗಳು ರಚನೆಯಾದವು. ಈ ರೂಪಾಂತರದ ಯಶಸ್ಸು ಕೇವಲ ಲಿಂಗಾಯತ ಧರ್ಮದಿಂದ ಆಗಲಿಲ್ಲ. ಹಾಲುಮತ ಧರ್ಮದಲ್ಲಿದ್ದ ಕೆಲವು ಕುಲಗಳು ಈ ವಿಧಾನಕ್ಕೆ ಕೈ ಜೋಡಿಸಿದವು. ರೇವಣಸಿದ್ಧ ಒಡೆಯರು ಈ ಕಾರ್ಯದ ಪ್ರಧಾನ ಜವಾಬ್ದಾರಿಯನ್ನು ಹೊತ್ತಿರುವಂತೆ ಕಾಣಿಸುತ್ತದೆ. ಒಡೆಯರು ರೇವಣಸಿದ್ಧನ ಆರಾಧಕರು, ಪ್ರಚಾರಕರು. ರೇವಣಸಿದ್ಧನಿಂದಲೇ 'ಲಿಂಗದೀಕ್ಷೆ' ಪಡೆದುಕೊಂಡು ವಿಭೂತಿ ಪಂಥಕ್ಕೆ ಪರಿವರ್ತನೆ ಆದವರು. ಕುರುಬರಿಗೆ ಕುಲಗುರುಗಳಾಗಿ ಕಾರ್ಯನಿರ್ವಹಿಸಲು ಆರಂಭಿಸಿದವರು. ಜೊತೆಗೆ ಆಗ ತಾನೇ ಆರಂಭವಾದ ತಮ್ಮ 'ಗುರುಕುಲ'ವನ್ನು ಅಂದರೆ ರೇವಣಸಿದ್ಧನ ಪಂಥವನ್ನು ಗಟ್ಟಿಗೊಳಿಸಿಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಈ ಕಾರ್ಯಕ್ಕೆ ಭಂಡಾರ ಆರಾಧನೆ ಅಡ್ಡಿಯನ್ನುಂಟು ಮಾಡಿರುವ ಸಾಧ್ಯತೆ ಇದೆ. ಅದನ್ನು ವಿಸ್ಮೃತಿಗೊಳಿಸದೆ ತಮ್ಮ

ಆರಾಧನ ವಿಧಾನವನ್ನು ಪ್ರಧಾನಧಾರೆಗೆ ತಂದುಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ಈ ವಾಸ್ತವವನ್ನು ಒಡೆಯರು ಅರಿತುಕೊಂಡಿದ್ದರು. ಹಾಗಾಗಿ ತಮ್ಮ ತತ್ತ್ವವನ್ನು ಪ್ರಧಾನ ಧಾರೆಗೆ ತರುವುದಕ್ಕೆ ಒಡೆಯರು ಲಿಂಗಾಯತ ಧರ್ಮದೊಂದಿಗೆ ಕೈಜೋಡಿಸಿದರು. ಒಡೆಯರ ಜೊತೆ ಲಿಂಗಾಯತ ಧರ್ಮಕ್ಕೆ ಪರಿವರ್ತನೆ ಆದ "ಲಿಂಗಾಯತ ಕುರುಬರು" ಮತ್ತು ಸಿದ್ಧರಾಮನ ಕುಲದವರು ಅಥವಾ ಆರಾಧಕ ವರ್ಗಗಳು ಈ ಕಾರ್ಯಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಇವರೆಲ್ಲರ ಪ್ರಧಾನ ಉದ್ದೇಶ ತಮ್ಮ ಕುಲದೈವಗಳನ್ನು ಮುಂಚೂಣಿಯಲ್ಲಿ ತರುವುದಾಗಿತ್ತು. ಒಡೆಯರಲ್ಲಿ ತಮ್ಮ ಆರಾಧ್ಯ ದೈವ ರೇವಣಸಿದ್ಧನ ಧರ್ಮವನ್ನು ಪ್ರಚಾರಕ್ಕೆ ತರುವ ಉದ್ದೇಶವಿತ್ತು. ರೇವಣಸಿದ್ಧನ ಲಿಂಗದೀಕ್ಷೆಯ ತಾತ್ವಿಕತೆ; ಲಿಂಗ ಧರ್ಮದ ಪ್ರತಿಪಾದನೆ ಭಿನ್ನವಾಗಿತ್ತು ಮತ್ತು ಇವತ್ತಿನ ಲಿಂಗಾಯತ ಧರ್ಮದಂತಿರಲಿಲ್ಲ.

ಜೊತೆಗೆ ಲಿಂಗಾಯತ ಧರ್ಮಕ್ಕೆ ಪರಿವರ್ತನೆಯಾದ ಹಾಲುಮತಸ್ಥರಿಗೆ ಲಿಂಗಾಯತ ಧರ್ಮದಲ್ಲಿ ತಮ್ಮದೇ ಯಾದ ಆರಾಧ್ಯ ದೈವ ಇರಲಿಲ್ಲ. ಅಲ್ಲದೇ ತಾವು ಆರಾಧಿಸಿಕೊಂಡು ಬಂದ ಪಾರಂಪರಿಕ ದೈವವನ್ನು ಕೈ ಬಿಡುವುದಕ್ಕೂ ಸಿದ್ಧವಿರಲಿಲ್ಲ. ಇರುವ ಸ್ಥಿತಿಯಲ್ಲಿ ರೇವಣಸಿದ್ಧನನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಇರಲಿಲ್ಲವೆನ್ನುವಂತೆ ಕಂಡುಬರುತ್ತದೆ. ಆದರೆ ತಮ್ಮ ಪಾರಂಪರಿಕ ಧರ್ಮದವರೇ ಆದ 'ಗುರುಒಡೆಯರ'ನ್ನು ನಾಯಕರನ್ನಾಗಿ ಮಾಡಿಕೊಂಡರು. ವಿಭೂತಿ ಪಂಥಕ್ಕೆ ಬೆಂಬಲವಾಗಿ ನಿಂತರು. ಈ ಅವಕಾಶವನ್ನು ಬಳಸಿಕೊಂಡ ಲಿಂಗಾಯತ ಧರ್ಮ ಬೀರಪ್ಪನನ್ನು ವೀರನನ್ನಾಗಿ ರೂಪಾಂತರಿಸಿ ಲಿಂಗದೀಕ್ಷೆ ನೀಡಿತು. ಹಾಲುಮತ ಸಮುದಾಯ ಬೀರಪ್ಪನನ್ನು ವೀರಪ್ಪ-ಈರಪ್ಪನೆಂದು ರೂಪಾಂತರದ ಹಿನ್ನೆಲೆಯಲ್ಲಿ ಒಪ್ಪಿಕೊಂಡು ಆರಾಧನೆ ಮಾಡಿಕೊಂಡು ಬಂದಿತು. ಈಗಲೂ 'ಕುರುಬ ಲಿಂಗಾಯತರು' ವೀ(ಬೀ)ರಪ್ಪನನ್ನು ಕುಲದೈವವನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿದ್ದಾರೆ. ಆದರೆ ಬೀರಪ್ಪನನ್ನು ಪಾರಂಪರಿಕ ಚಹರೆಯಿಂದ ಬಿಡಿಸಿಕೊಂಡು "ನವವೀ(ಬೀ)ರಪ್ಪ"ನನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಪಂಚಾಚಾರ್ಯರು ರೇವಣಸಿದ್ಧನ ಸಂಸ್ಕೃತಿಯ ಪಾರಂಪರಿಕ ಅಸ್ಮಿತೆಯನ್ನು ವಿಸ್ಮೃತಿಗೊಳಿಸಿ ನವರೇವಣಸಿದ್ಧನನ್ನು ಕಟ್ಟಿಕೊಂಡರು. ಮೂರ್ತಿ ಸ್ವರೂಪದ ಬದಲಾವಣೆ ತರುವಲ್ಲಿ ತುಂಬಾ ಯಶಸ್ವಿಯಾದರು. ವೀರಪ್ಪನ ವಿಷಯದಲ್ಲಿ ಇದು ಸಾಧ್ಯವಾಗಲಿಲ್ಲ. ಬೀರಪ್ಪನನ್ನು ಪಾರಂಪರಿಕ ಅಸ್ಮಿತೆಯಿಂದ ಬಿಡಿಸುವುದಕ್ಕೆ 'ಕುರುಬ ಲಿಂಗಾಯತರು' ಸಹಮತ ಕೊಟ್ಟಿರುವಂತೆ ಕಾಣಿಸಿಲ್ಲ. ಬದಲಾಯಿಸಿದರೆ ಅಥವಾ ಹೊಸದಾದ ರೂಪವನ್ನು ಕೊಟ್ಟರೆ ಕುರುಬ ಲಿಂಗಾಯತರು ಮತ್ತು ಪರಿವರ್ತಿತ ಪಶುಪಾಲಕ ಸಮುದಾಯಗಳು ಒಪ್ಪಿಕೊಳ್ಳದೆ ಇರಬಹುದು ಅಥವಾ ಪ್ರತಿರೋಧ ಮಾಡಬಹುದು ಎನ್ನುವ ಆತಂಕ ಲಿಂಗಾಯತ ಧರ್ಮಕ್ಕೆ ಕಾಡಿರಬೇಕು. ಏಕೆಂದರೆ ಹನ್ನೆರಡು-ಹದಿಮೂರನೇ ಶತಮಾನದಲ್ಲಿ 'ರಾಮಾನುಜಾಚಾರ್ಯರು' ಆಂಧ್ರ ಪ್ರದೇಶದಲ್ಲಿ "ಇಟ್ಟಪ್ಪ"ನನ್ನು "ವಿಠಲ"ನನ್ನಾಗಿ ವೈಷ್ಣವ ಧರ್ಮಕ್ಕೆ ಪರಿವರ್ತನೆ ಮಾಡಿದಾಗ ಸ್ಥಳೀಯ ಹಲವು ಶೈವ(ಪಶುಪಾಲನ ಸಮುದಾಯಗಳು)ರಿಂದ ಪ್ರತಿರೋಧಗಳು ಆದವು. ರಾಜರತ್ತಿರ ದೂರುಗಳು ದಾಖಲಾದವು. ಸ್ವತಃ ರಾಜ ಮಹಾರಾಜರು ಜಗಳ ಪರಿಹರಿಸುವ ಹಂತಕ್ಕೆ ಬಂದಿದ್ದವು. ಆದರೆ ರಾಜರ ತೀರ್ಮಾನಗಳು ವೈಷ್ಣವ ಧರ್ಮಗಳ ಕಡೆಗಿದ್ದವು.[೨೮] ಇಲ್ಲಿ ತೀರ್ಮಾನವಾದ ರಾಜಕಾರಣ ಬೇರೆ. ಜಗಳದ ಸ್ವರೂಪ ನಮಗೆ ಮುಖ್ಯ. ಈ ತರಹದ ಆತಂಕದಿಂದ ಮತ್ತು ವೀ(ಬೀ)ರಪ್ಪನ ಸ್ವರೂಪ

ಇದೆ ಎಂದು ಲಿಂಗಾಯತ ಧರ್ಮಕ್ಕೆ ಪರಿವರ್ತನೆಯಾದ ಪಶುಪಾಲನ ಸಮುದಾಯಗಳು ಮತ್ತು ಲಿಂಗಾಯತರು ಒಪ್ಪಿಕೊಂಡಿದ್ದರಿಂದ ಪಾರಂಪರಿಕ ಅಸ್ಮಿತೆಗಳು ಉಳಿದುಕೊಂಡಿರುವುದಕ್ಕೆ ಸಾಧ್ಯತೆವಿದೆ.

೪.೧.೪.೩. ಕರಿಸಿದ್ಧನ ಅಕ್ರಮಣ

ಡೊಳ್ಳಿನ ಹಾಡುಗಳಿಂದ ಮತ್ತು ಕರೆಸಿದ್ಧನ ಚಾರಿತ್ರಿಕ ಕಥನಗಳಿಂದ ಬೀರಪ್ಪನ ಮತ್ತೊಂದು ಹೆಸರು 'ಕರೆಸಿದ್ಧ' ಎಂದು 'ಕೊನಾಸುರ'ನ ಸಂಹಾರ ಮಾಡುವುದಕ್ಕೆ ಕರಿಸಿದ್ಧನ ರೂಪ ತಾಳಿದನೆಂದು ಡೊಳ್ಳಿನ ಹಾಡುಗಳು ತಿಳಿಸುತ್ತವೆ. ಕೋಗನೂರು, ಮುಂಡಗನೂರು, ಅಲಖನೂರು ಮತ್ತು ಚಿಂಚಲಿ ಪ್ರದೇಶಗಳ ಸುತ್ತಮುತ್ತ ಈ ಹೆಸರು ಹೆಚ್ಚು ಜನಪ್ರಿಯವಾಗಿದೆ. ಕರ್ನಾಟಕದಲ್ಲಿ ಮುಂಡಗನೂರು, ಕೋಣಗನೂರು, ಅಲಖನೂರು, ಸಂಗ್ರೇಶಕೊಪ್ಪ (ಸೌದತ್ತಿ ತಾ.) ಕುಮಟ (ಬಿಜಾಪುರ ತಾ.) ರಾಮಗಿರಿ (ಹೊಳಲ್‌ಕೆರೆ ತಾ.) ಕೆಲ್ಲೋಡು (ಹೊಸದುರ್ಗ ತಾ.) ಹೊನ್ನಾವಳ್ಳಿ (ತಿಪಟೂರು ತಾ.) ಇನ್ನೂ ಮುಂತಾದ ಕಡೆ ಕರಿಸಿದ್ಧ ದೇವಾಲಯಗಳಿವೆ. ರಾಮಗಿರಿ ಮತ್ತು ಹೊನ್ನಾವಳ್ಳಿ ದೇವಾಲಯಗಳನ್ನು ಲಿಂಗಾಯತರು ಪೂಜೆ ಮಾಡುತ್ತಿರುವುದನ್ನು ಹೊರತುಪಡಿಸಿದರೆ ಉಳಿದೆಡೆಯಲ್ಲ ಹಾಲುಮತಸ್ಥರು ಅರ್ಚಕರಾಗಿದ್ದಾರೆ. ಈಗ ಲಿಂಗಾಯತರು ಪೂಜಿಸುವ ಎರಡು ಗ್ರಾಮಗಳಲ್ಲೂ ಕೆಲವು ದಶಕಗಳ ಹಿಂದೆ ಹಾಲುಮತಸ್ಥರು ಪೂಜಾರಿಗಳಾಗಿದ್ದರು. ಈಗ ಲಿಂಗಾಯತರು ಪೂಜಾರಿಗಳಾಗಿದ್ದಾರೆ. ದೇವಾಲಯದ ಹಕ್ಕನ್ನು ಹೊಂದಿದ್ದಾರೆ. ಲಿಂಗಾಯತರು ಹಾಲುಮತಸ್ಥರನ್ನು ಪೂಜೆಯ ಹಕ್ಕಿನಿಂದ ತೆಗೆದು ಹಾಕಿ ತಾವು ಪೂಜೆಯ ಹಕ್ಕನ್ನು ಪಡೆದಿರುವ ಸಾಧ್ಯತೆ ಇದೆ. ತಿಪಟೂರು ತಾ., ಹೊನ್ನಾವಳ್ಳಿ ದೇವಾಲಯದ ಅರ್ಚಕರಾಗಿದ್ದಂತಹ ಕುರುಬ ಗುರು ಒಡೆಯರನ್ನು ಕರಿಸಿದ್ಧ ದೇವಾಲಯದಿಂದ ಓಡಿಸಿರುವ ಕಥನಗಳು ಸಿಗುತ್ತವೆ. "ಕರಿಸಿದ್ಧ ದೇವಾಲಯದ ಆವರಣದಲ್ಲಿರುವ ಹುಣಸೆ ಮರಗಳಲ್ಲಿ ಇದ್ದಕ್ಕಿದ್ದಂತೆ ರಾಕ್ಷಸರು ಸೃಷ್ಟಿಯಾಗಿ, ಒಡೆಯರಿಗೆ ಹಿಂಸೆ ಕೊಡುವುದಕ್ಕೆ ಆರಂಭಿಸಿದರು. ದಿನ ದಿನಕ್ಕೆ ಈ ರಾಕ್ಷಸರ ಕಾಟ ಹೆಚ್ಚಾಯಿತು. ಈ ಹಿಂಸೆ ತಾಳಲಾರದೆ ರಾಮಗಿರಿಗೆ ಓಡಿಬಂದೆವು."[೨೫] ಹೊಳಲ್‌ಕೆರೆ ತಾ., ರಾಮಗಿರಿಯಲ್ಲಿ ಕರಿಸಿದ್ಧ ದೇವರನ್ನು ಲಿಂಗಾಯತರು ಪೂಜೆ ಮಾಡುತ್ತಿದ್ದಾರೆ. ಕರಿಸಿದ್ಧ ವೀರಭದ್ರನ ಮತ್ತೊಂದು ಅವತಾರವೆಂದು ಈ ಪೂಜಾರಿಗಳು ಹೇಳುತ್ತಾರೆ. ಲಿಂಗಾಯಿತರನ್ನು ಹೊರತುಪಡಿಸಿ ಉಳಿದ ಸಮುದಾಯದವರಿಗೆ ಗರ್ಭಗುಡಿ ಪ್ರವೇಶ ನಿಷೇಧವಿದೆ. ಸುಮಾರು ೨೦ ವರ್ಷದ ಕೆಳಗೆ ಕುರುಬ ಗುರು ಒಡೆಯರು ಅರ್ಚಕರಾಗಿದ್ದರು. ಅರ್ಚಕರಾಗಿದ್ದ ಒಡೆಯರ ಮನೆ ಮತ್ತು ಕುಟುಂಬ ಗ್ರಾಮದಲ್ಲಿದೆ. ಕರಿಸಿದ್ಧ ದೇವಸ್ಥಾನಕ್ಕೆ ಹೋಗುವ ಮುಂಚೆ, ಅಂದರೆ ಗುಡ್ಡದ ಕೆಳಗಡೆ ಒಡೆಯರ ಮನೆ ಇದೆ. ಕರಿಸಿದ್ಧನ ದರ್ಶನಕ್ಕೆ ಬಂದ ಭಕ್ತರು ಈ ಒಡೆಯರ ಆರ್ಶೀವಾದ ತೆಗೆದುಕೊಂಡು ದೇವಾಲಯಕ್ಕೆ ಹೋಗುತ್ತಾರೆ. ಈ ಕರಿಸಿದ್ಧನಿಗೆ ತಾಳಿಕಟ್ಟೆ ಬೀರಪ್ಪ ಗುರುಗಳಂತೆ. ಗುರು ಬೀರಪ್ಪನನ್ನು ಭೇಟಿ ಆಗುವ ಆಚರಣೆ ಈಗಲೂ ರೂಢಿಯಲ್ಲಿದೆ. ಆಚರಣೆಗಳ ಸಂದರ್ಭದಲ್ಲಿ ತಾಳಿಕಟ್ಟೆ ಬೀರಪ್ಪನನ್ನು ಕಂಡರೆ ಕರಿಸಿದ್ಧನಿಗೆ ಎಲ್ಲಿಲ್ಲದ ಖುಷಿಯಂತೆ. ಗುರು ಸಿಕ್ಕ ಸಂತೋಷದಲ್ಲಿ ಕುಣಿದು ಕುಣಿದು ಆರ್ಶೀವಾದ ತೆಗೆದುಕೊಳ್ಳುವ ವಿಧಾನದ ಅನುಕರಣೆಯ ಆಚರಣೆ ರೂಢಿಯಲ್ಲಿದೆ. ಈ ದೈವಕ್ಕೆ ಹಾಲುಮತಸ್ಥರು ಹೆಚ್ಚು ಭಕ್ತರಿದ್ದಾರೆ. ನಮ್ಮ ಕುಲದೇವರು ಅನ್ನುವುದು ಇವರ ವಾದ. ಆದರೆ ಲಿಂಗಾಯತರು (ಅರ್ಚಕರು) ವೀರಭದ್ರ ದೇವರು ಎಂದು ಹೇಳುವ ಸಂಪ್ರದಾಯವನ್ನು

ಆರಂಭಿಸಿದ್ದಾರೆ. ದೇವಾಲಯದ ಹೊರಭಾಗದಲ್ಲಿ ಕರಿಸಿದ್ಧನ ದೇವಾಲಯಕ್ಕೆ ಅಂಟಿಕೊಂಡು ವೀರಭದ್ರ ದೇವಾಲಯವಿದೆ. ಇದು ನಂತರದ ಕಾಲಮಾನದಲ್ಲಿ ನಿರ್ಮಾಣ ಆಗಿದೆ. ಈ ವೀರಭದ್ರನಿಗೆ ಮೂಲ ಗುಡಿಯಲ್ಲಿರುವ ಕರಿಸಿದ್ಧದೈವ ಹಿರಿಯಣ್ಣನೆಂದು ಭಕ್ತರು ಹೇಳುತ್ತಾರೆ.

ಕರಿಸಿದ್ಧ ದೇವಾಲಯಗಳನ್ನು ಪೂಜೆಗಾಗಿ ಅಕ್ರಮಣ ಮಾಡಿಕೊಂಡ ದೇವಾಲಯಗಳ ಹಿಂದೆ ಇಂತಹ ಹಲವು ಕಥನಗಳಿವೆ. ಈ ಸಾಂಸ್ಕೃತಿಕ ಕಥನಗಳಿಂದ ಈ ದೇವಾಲಯಗಳಲ್ಲಿ ಆಗಿರುವ ಧಾರ್ಮಿಕ ಸಂಘರ್ಷಗಳನ್ನು, ಸಾಂಸ್ಕೃತಿಕ ಪಲ್ಲಟಗಳನ್ನು ತಿಳಿದುಕೊಳ್ಳಬೇಕಾಗಿದೆ. ಈ ಕಥನಗಳನ್ನು, ಆಚರಣೆ-ಸಂಪ್ರದಾಯಗಳನ್ನು ಡೊಳ್ಳಿನ ಹಾಡುಗಳೊಂದಿಗೆ ತೌಲನಿಕವಾಗಿ ನೋಡುವ ಜರೂರು ಇದೆ.

೪.೧.೫. ಬೀರಪ್ಪನ ತಾತ್ವಿಕತೆ

ಭಾರತದಲ್ಲಿ ಬೀರಪ್ಪನ ಬಗ್ಗೆ ಸಿಗುವಷ್ಟು ಗೊಂದಲದ ಸಾಂಸ್ಕೃತಿಕ ಚರಿತ್ರೆ ಬೇರೆ ಯಾವ ಸಾಂಸ್ಕೃತಿಕ ನಾಯಕನ ಬಗ್ಗೆಯೂ ಸಿಗುವುದಿಲ್ಲ. ಈತ ಕರ್ನಾಟಕದಲ್ಲಿ ಭಿನ್ನ ಹೆಸರುಗಳಿಂದ ಆರಾಧನೆಗೆ ಒಳಗಾಗುತ್ತಿದ್ದಾನೆ. ಈತನಿಗೆ ಎಷ್ಟು ಹೆಸರುಗಳು ಇವೆಯೋ ಅಷ್ಟು ಚಾರಿತ್ರಿಕ ಕಥನಗಳು ಸಿಗುತ್ತವೆ. ಬೀರಪ್ಪ ಮತ್ತು ಬೀರಲಿಂಗ ಅನ್ನುವ ಹೆಸರುಗಳು ಕರ್ನಾಟಕದಾದ್ಯಂತ ಸಾರ್ವತ್ರಿಕವಾಗಿ ಕೇಳಿಬರುತ್ತವೆ. ಅಥಣಿ, ಗೋಕಾಕ, ಕೊಲ್ಲಾಪುರ ತಾಲ್ಲೂಕುಗಳಲ್ಲಿ 'ಮುರಸಿದ್ಧ' ಅನ್ನುವ ಹೆಸರು ಹೆಚ್ಚು ಬಳಕೆಯಲ್ಲಿದೆ. ಇಟ್ಟಪ್ಪ(ವಿಠಲ)ನ ಜೊತೆ ಸಂಯುಕ್ತಗೊಂಡು ಆರಾಧನೆಗೆ ಒಳಗಾಗುತ್ತಿದ್ದಾನೆ. ಬೀಳಗಿ, ಗೋಕಾಕ್, ಜಮಖಂಡಿ ಸುತ್ತಮುತ್ತ ತಾಲ್ಲೂಕುಗಳಲ್ಲಿ ಕರಿಸಿದ್ಧ ಅನ್ನುವ ಹೆಸರು ಬಳಕೆ ಯಲ್ಲಿದೆ. ಈ ಪ್ರದೇಶಗಳಲ್ಲಿ ಮಾಯವ್ವನ ಜೊತೆ ಸಂಯುಕ್ತಗೊಂಡ ವಿವರಗಳು ಸಿಗುತ್ತವೆ. ಬಿಜಾಪುರ, ಬೆಳಗಾಂ, ಸೊಲ್ಲಾಪುರ ಜಿಲ್ಲೆಗಳಲ್ಲಿ ಬೈರೋಬಾ, ಸಿಡಿಯಾಣಸಿದ್ಧ, ಮಾಯಕಾರಮಿಂಡ, ಶಿವಸಿದ್ಧ ಅನ್ನುವ ಹೆಸರುಗಳು ಬಳಕೆಯಲ್ಲಿವೆ. ಡೊಳ್ಳಿನ ಹಾಡುಗಳಲ್ಲಿ ಈ ಹೆಸರುಗಳನ್ನು ಹೆಚ್ಚಾಗಿ ಬಳಕೆ ಮಾಡುತ್ತವೆ. ಇಲ್ಲಿ ಮಾಳಿಂಗರಾಯನ ಜೊತೆ ಸಂಯುಕ್ತಗೊಂಡಿದ್ದಾನೆ. ಈ ಮೇಲೆ ಹೇಳಿದ ಸ್ಥಳಗಳಲ್ಲಿ ಬೀರಪ್ಪ ಅಲೆದಾಡಿದ, ಸಂಘರ್ಷ ಮಾಡಿದ, ಶಿಷ್ಯರ ಜೊತೆ ಕೂಡಿದ್ದ ಅನ್ನುವ ಚಾರಿತ್ರಿಕ ಕಥನಗಳು ಸಿಗುತ್ತವೆ. ಚಿತ್ರದುರ್ಗ, ತುಮಕೂರು, ಚಿಕ್ಕಮಂಗಳೂರು, ಕೋಲಾರ, ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಹಾಗೂ ತಮಿಳುನಾಡು, ಕೇರಳ, ಕರ್ನಾಟಕ ಗಡಿನಾಡುಗಳಲ್ಲಿ ಬೀರೇಶ್ವರ, ದೊಡ್ಡದೇವರು, ಚಿಕ್ಕದೇವರು, ಸಿದ್ಧೇಶ್ವರ, ಭೈರವ, ಚುಂಚ, ಕುದುರೆ ಬೀರಪ್ಪ, ಕರಿಸಿದ್ಧ ಮುಂತಾದ ಹೆಸರುಗಳು ಪ್ರಚಲಿತದಲ್ಲಿವೆ. ಭೈರವ, ಚುಂಚ ಮತ್ತು ಕುದುರೆ ಬೀರಪ್ಪನೆಂದು ಕರೆಯುವ 'ಬೀರಪ್ಪ' ಹಾಲುಮತ ಸಮುದಾಯದ 'ಬೀರಪ್ಪನ ಜೊತೆ ಸಂಬಂಧವಿಲ್ಲದಂತೆ ಆರಾಧನೆಗೆ ಒಳಗಾಗುತ್ತಿದ್ದಾನೆ. ಈ ಹೆಸರಿನ ಬೀರಪ್ಪನಿಗೆ ಒಕ್ಕಲಿಗರು ಹೆಚ್ಚು ಭಕ್ತರಿದ್ದಾರೆ. ಪಶುಪಾಲನ ಸಮುದಾಯಗಳು ಕುಲದೈವವನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿವೆ. ಉಳಿದ ಹೆಸರಿನ ಬೀರದೇವರುಗಳು ಸಂಯುಕ್ತಗೊಂಡು ಆಚರಣೆ-ಆರಾಧನೆಗೊಳಗಾಗುತ್ತಿದ್ದರೂ ಸಿದ್ದೇಶ ಬೇರೆ ಕರಿಸಿದ್ಧ ಬೇರೆ, ಬೀರಪ್ಪ ಬೇರೆ ಎನ್ನುವುದು ಜನರ ನಂಬಿಕೆ. ಬೀರಪ್ಪ=ಸಿದ್ದೇಶ್ವರ; ಕರಿಸಿದ್ಧ =ಸಿದ್ದೇಶ್ವರ; ಸಿದ್ದೇಶ್ವರ=ಭೈರವ; ಸಿದ್ಧಪ್ಪ=ಬೀರಪ್ಪ ಮುಂತಾದ ಹೆಸರಿನ ಒಂದೇ ದೈವವನ್ನು ಒಂದೇ ಗದ್ದುಗೆಯ ಮೇಲೆ ಆರಾಧನೆ ಮಾಡುತ್ತಾರೆ. ಇವರನ್ನು ಅಣ್ಣತಮ್ಮಂದಿರೆಂದು ಜನರು ನಂಬುತ್ತಾರೆ. ಹೊಸದುರ್ಗ

ತಾಲೂಕು ಕೆಲ್ಲೂಡು ಗ್ರಾಮದಲ್ಲಿ ಕರಿಸಿದ್ದೇಶ್ವರ ದೇವಾಲಯದ ಗದ್ದುಗೆಯ ಮೇಲೆ ಕರಿಸಿದ್ಧ ಮತ್ತು ಸಿದ್ದೇಶ್ವರ ಮೂರ್ತಿಗಳನ್ನು ಇಟ್ಟು ಆರಾಧನೆ ಮಾಡುತ್ತಿದ್ದಾರೆ. "ಇವರಿಬ್ಬರು ಅಣ್ಣ-ತಮ್ಮಂದಿರು ಅನ್ನುವುದು ಗ್ರಾಮಸ್ಥರ ಅನಿಸಿಕೆ. ಈ ಎರಡು ದೈವಗಳಲ್ಲಿ ಸಿದ್ಧೇಶ್ವರನಿಗೆ ಮೊದಲ ಆದ್ಯತೆ. ಸಿದ್ಧೇಶ್ವರ "ದೊಡ್ಡದೇವರು (ಹಿರಿಯ ದೈವ) ಆ ಕಾರಣಕ್ಕೆ ಮೊದಲ ಪೂಜೆ ಆತನಿಗೆ ಸಲ್ಲಬೇಕು ಅನ್ನುವುದು ಇವರ ವಾದ".[೨೬] ಕೋಲಾರದ 'ಕುರುಬರ ಪೇಟೆ'ಯಲ್ಲಿ ನಡೆಯುವ 'ದೊಡ್ಡದೇವರ ಜಾತ್ರೆ' (ತೆಂಗಿನ ಕಾಯಿಯ ಪವಾಡ ಜಾತ್ರೆ)ಯ ಸಂದರ್ಭದಲ್ಲಿ 'ಸಿದ್ಧೇಶ್ವರ' ಮತ್ತು 'ಬೀರಪ್ಪ' ದೈವಗಳನ್ನು ಒಂದೇ ಸ್ಥಳದಲ್ಲಿ (ಕೆರೆಯ ದಡ) ಪೂಜಿಸುತ್ತಾರೆ. ಈ ಎರಡು ದೈವಗಳು ಅಣ್ಣ-ತಮ್ಮಂದಿರು ಎಂದು ಕರೆಯುತ್ತಾರೆ. ಆದರೆ ಈ ಎರಡು ದೈವಗಳನ್ನು ಕುಲದೈವವನ್ನಾಗಿ ಮಾಡಿಕೊಂಡ ಕುಲಗಳು ಬೇರೆ ಬೇರೆ. ಈ ಎರಡು ದೈವಗಳನ್ನು ಕುಲದೈವವನ್ನಾಗಿ ಮಾಡಿಕೊಂಡ ಕುಲಗಳು ಬೇರೆ ಬೇರೆ. ಕುಲ(ಗೋತ್ರ)ದವರನ್ನು ಅಣ್ಣ-ತಮ್ಮಂದಿರು ಎಂದು ಕರೆಯಲಾಗುತ್ತದೆ. ಈ ಎಲ್ಲಾ ಹೆಸರುಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡು ಬೀರಪ್ಪನ ಚರಿತ್ರೆಯನ್ನು ಹೇಳಿರುವ ಡೊಳ್ಳಿನ ಹಾಡುಗಳು ಸಿಗುತ್ತವೆ. ಬಸವನಗೌಡ ಪಾಟೀಲ ಅವರು ಸಂಪಾದನೆ ಮಾಡಿರುವ "ತೂಕ ಮಾಡಿ ಹೇಳತ್ತೀನಿ ನ್ಯಾಯ" ಎನ್ನುವ ಸಂಪಾದನ ಕೃತಿಯಲ್ಲಿ 'ಬೀರೇಶ್ವರ ಚರಿತ್ರೆ' ಅನ್ನುವ ಹಾಡಿನಲ್ಲಿ ಬೀರಪ್ಪನಿಗೆ ಮೇಲಿನ ಹೆಸರುಗಳು ಬಳಕೆ ಆಗಿವೆ. ಆದರೆ, ವಿದ್ವಾಂಸರು ಈ ಎಲ್ಲಾ ಹೆಸರುಗಳನ್ನು ಬೀರಪ್ಪನಿಗಿರುವ ಹೆಸರುಗಳು ಎಂದು ಗ್ರಹಿಸಲಿಲ್ಲ. ಕರಿಸಿದ್ಧ ಬೇರೆ, ಸಿದ್ಧೇಶ್ವರ ಬೇರೆ, ಭೈರವ ಬೇರೆ, ಬೀರಪ್ಪ ಬೇರೆ ಎಂದು ಗ್ರಹಿಸಿದರು ಮತ್ತು ಅಧ್ಯಯನಗಳನ್ನು ಮಾಡಿದರು. ಹಾಗಾಗಿ ಬೀರಪ್ಪನ ಸಮಗ್ರ ಚರಿತ್ರೆಯನ್ನು ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲ ಹಾಗೂ ಬೀರಪ್ಪನನ್ನು ಆರಾಧಿಸುವ ವರ್ಗಗಳಲ್ಲಾದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು; ಸಾಂಸ್ಕೃತಿಕ ಪಲ್ಲಟಗಳನ್ನು ಮತ್ತು ಬೀರಪ್ಪನನ್ನು ಆರಾಧಿಸುವ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಗುರುತಿಸುವುದಕ್ಕೆ ಆಗಲಿಲ್ಲ.

ವಚನಕಾರರು ಬೀರಪ್ಪನನ್ನು ಕ್ಷುದ್ರದೈವನೆಂದು ಹೀಯಾಳಿಸಿದ್ದಾರೆ. "ಆದರೆ ಪಶುಪಾಲಕರಿಗೆ, ಕುರುಬರಿಗೆ ಕ್ಷುದ್ರದೈವನಲ್ಲ, ಸರ್ವಶಕ್ತನೂ, ಸರ್ವಜ್ಞನೂ, ಸರ್ವಾಂತರ್ಯಾಮಿಯೂ ಆದ ಭಗವಂತನೇ ಅವನು, ಲೋಕದ ಸ್ಥಿತಿಗತಿಗಳಿಗೆ ಅವನೇ ಕಾರಣ, ಲೋಕರಕ್ಷಣೆಯೂ ಅವನ ಹೊಣೆ. ತಮ್ಮೆಲ್ಲ ಸುಖ-ಸಂಪತ್ತುಗಳಿಗೆ ಕಾರಣನಾದ ರೋಗರುಜಿನ, ದಾರಿದ್ರ್ಯಾದಿ ವಿಪತ್ತುಗಳಿಂದ ರಕ್ಷಿಸಬಲ್ಲ ಸರ್ವೇಶ".[೨೭]

"ಮಳೆಯನ್ನು ಕಾಲಕ್ಕೆ ಬೀರಪ್ಪ
ಊರ ಒಳಗೆ ನೀ ಬೆಳೆಸೊ ಬೀರಪ್ಪ
ದನ ಕರು ಕುರಿ ಆಡು ಬೀರಪ್ಪ
ನೀ ಮನವಿಟ್ಟು ಹೆಚ್ಚಿಸೋ ಬೀರಪ್ಪ"[೨೮]

ಡೊಳ್ಳಿನ ಹಾಡುಗಳಲ್ಲಿ ಈ ಪರಿಕಲ್ಪನೆ ಇದೆ. ಬಡವರು, ಸತ್ತ ವ್ಯಕ್ತಿಗಳನ್ನು ಬದುಕಿಸಿದ ಚಿತ್ರಣವನ್ನು ಕೊಡುತ್ತವೆ. ಈತನನ್ನು ಮಳೆಯ ದೈವನೆಂದು ಕರೆಯಲಾಗುತ್ತದೆ. ಮಳೆ ಬರುವ ಸಂದರ್ಭವನ್ನು ಹೇಳುವಲ್ಲಿ ಶಿವ-ಪಾರ್ವತಿಯರನ್ನು ಸೋಲಿಸಿದನೆನ್ನುವ ಕಥನಗಳು ಸಿಗುತ್ತವೆ".[೨೯] ಕರ್ನಾಟಕ, ಮಹಾರಾಷ್ಟ್ರ ಗಡಿನಾಡಿನ ಬೀರದೇವರ ದೇವಾಲಯಗಳಲ್ಲಿ ಬೀರದೇವರ ಸೇವಕರಾದ "ಪೂಜಾರಿಗಳು" ಮಳೆ-ಬೆಳೆಗೆ

ಸಂಬಂಧಿಸಿದ ಹೇಳಿಕೆಗಳನ್ನು ಹೇಳುತ್ತಾರೆ. ಈ ಹೇಳಿಕೆಗಳನ್ನು 'ಸಿದ್ಧಾಟಿಕೆ'ಗಳು ಎಂದು ಕರೆಯಲಾಗುತ್ತದೆ. ಈ ಭಾಗದಲ್ಲಿ ಬೀರಪ್ಪನನ್ನು ಪಶುಪಾಲಕ(ಕುರಿಗಾರ)ನೆಂದು ಕರೆಯುವ ರೂಢಿ ಹೆಚ್ಚಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಕೃಷಿಕ-ಪಶುಪಾಲಕ ದೈವನೆಂದು ಕರೆಯುವರು. ಕೃಷಿ ಮತ್ತು ಪಶುಪಾಲನೆಯನ್ನು ಮಾಡುತ್ತಿರುವ ಸಮುದಾಯಗಳು ಈತನನ್ನು ಕುಲದೈವ; ಆರಾಧ್ಯದೈವವನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿವೆ. ಆದರೆ ಈಗ ಕುರುಬರ ದೈವ(ಹಾಲುಮತದ ದೈವ)ವೆಂದು ಸೀಮಿತವಾಗುತ್ತಿದ್ದಾನೆ ಮತ್ತು ಹೆಚ್ಚು ಜನಪ್ರಿಯವಾಗುತ್ತಿದ್ದಾನೆ. ಇದರ ಹಿಂದೆ ಹಾಲುಮತಸ್ಥರ ಒತ್ತಾಸೆ ಸೂಕ್ಷ್ಮವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಆಗಬಾರದು. ಈ ವಿಧಾನ ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯ ವಿಸ್ಮೃತಿಯೇ ಸರಿ.

೪.೨. ಮಾಳಿಂಗರಾಯ

೪.೨.೧. ಪ್ರವೇಶ

ಮಾಳಿಂಗರಾಯ ಉತ್ತರ ಕರ್ನಾಟಕದ ಜಾನಪದ ಅನುಭಾವಿ ಕಾವ್ಯದ ನಾಯಕ. ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರ. ಬಹಳ ಸ್ಥೂಲಾರ್ಥದಲ್ಲಿ ಹೇಳುವುದಾದರೆ ಈತ ಚಾರಿತ್ರಿಕ ವ್ಯಕ್ತಿ. ಬೀರಪ್ಪನ ಅಗ್ರಗಣ್ಯ ಶಿಷ್ಯ. ಶೈವ ಆರಾಧಕ. ಭಂಡಾರ ಪಂಥದ ಪ್ರತಿಪಾದಕ. ಈ ವ್ಯಕ್ತಿ ಜೀವನದ ವಿವರಗಳಿಗೆ ಸಂಬಂಧಿಸಿದಂತೆ ಯಾವುದೇ ಚಾರಿತ್ರಿಕ ಲಿಖಿತ ಆಧಾರಗಳು ಸಿಗುವುದಿಲ್ಲ. ಮೌಖಿಕ ಆಕರಗಳು ಅಧಿಕ ಪ್ರಮಾಣದಲ್ಲಿ ಸಿಗುತ್ತವೆ. ಇದರಲ್ಲಿ ಡೊಳ್ಳಿನ ಹಾಡುಗಳು ಹೆಚ್ಚು. ಈಗಾಗಲೇ ಈ ವ್ಯಕ್ತಿಗೆ ಸಂಬಂಧಿಸಿದಂತೆ ಡೊಳ್ಳಿನ ಹಾಡುಗಳ ಎರಡು ಮಹಾಕಾವ್ಯಗಳು ಸಂಗ್ರಹಗೊಂಡಿವೆ. ಒಂದು (ಸ್ವತಂತ್ರ ಮಹಾಕಾವ್ಯ) ಮಾಳಿಂಗರಾಯನ ಕಾವ್ಯ. ಮತ್ತೊಂದು (ಪೂರಕ ಮಹಾಕಾವ್ಯ) ಜನಪದ ಹಾಲುಮತ ಮಹಾಕಾವ್ಯ. ಇತರ ಡೊಳ್ಳಿನ ಹಾಡುಗಳ ಸಂಕಲನದಲ್ಲಿ ಬಿಡಿಹಾಡುಗಳು ಪ್ರಕಟವಾಗಿವೆ. ಇವತ್ತು ಡೊಳ್ಳಿನ ಹಾಡುಗಳ ಕಲಾವಿದರು ಸ್ಪರ್ಧೆಗಾಗಿ ಈತನ ವ್ಯಕ್ತಿ ಜೀವನದ ಘಟನೆಯ ಕಥನಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಕ್ಯಾಸೆಟ್ ಮತ್ತು ಸಿ.ಡಿ.ಗಳು ಬಂದಿವೆ. ಸುಮಾರು ಎರಡುನೂರ ಐವತ್ತಕ್ಕೂ ಹೆಚ್ಚು ಡೊಳ್ಳಿನ ಸಂಘಗಳು ಈ ವ್ಯಕ್ತಿ ಹೆಸರಿನಲ್ಲಿವೆ. ಈ ಸಂಘಗಳು ಮಾಳಿಂಗರಾಯನೇ ಶ್ರೇಷ್ಠ ಸಾಂಸ್ಕೃತಿಕ ವೀರನೆಂದು ಪ್ರತಿಪಾದಿಸುತ್ತವೆ. ಕರ್ನಾಟಕ-ಮಹಾರಾಷ್ಟ್ರ-ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಈತನ ಮತ್ತು ಈತನ ವಂಶಸ್ಥರ ದೈವಿಕ ನೆಲೆಗಳಿವೆ. ಆ ಸ್ಥಳಗಳಲ್ಲಿ ಜೀವನದ ವಿವಿಧ ಆಯಾಮಗಳನ್ನು ಹೇಳುವ ಕಥನಗಳು ಸಿಗುತ್ತವೆ. ಜಾತ್ರೆ-ಆಚರಣೆಗಳು ನಡೆಯುತ್ತಲಿವೆ. ಈ ದೈವಗಳಿಗೆಲ್ಲ ಮೂಲಸ್ಥಳ ಹುಲಿಜಂತಿ ಗ್ರಾಮ. ಇದು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆ ಮಂಗಳವೇಡಾ ತಾಲ್ಲೂಕಿನಲ್ಲಿದೆ. ಗ್ರಾಮಕ್ಕೆ ಊರ ಸುತ್ತ ಕೋಟೆ ಇದೆ. ಕೋಟೆಗೆ ಎರಡು ಪ್ರವೇಶ ದ್ವಾರಗಳಿವೆ. ಈ ಬಾಗಿಲುಗಳಿಗೆ ಹುಲಿಮುಖದ ಅಗಿಸಿ ಎಂದು ಹೆಸರು. ಎರಡೂ ಕೋಟೆ ಬಾಗಿಲುಗಳ ತೋಳಗಳಲ್ಲಿ ಹುಲಿಯ ಚಿತ್ರಗಳಿವೆ. ಕೋಟೆಗೆ ಅಂಟಿಕೊಂಡು ಒಂದು ದೊಡ್ಡ ಹಳ್ಳವಿದೆ. "ಈ ಹಳ್ಳಕ್ಕೆ 'ಹಾಲಹಳ್ಳ', 'ಮಾಳಿಂಗರಾಯನ ಹಳ್ಳ', 'ತೀರ್ಥನದಿ' ಎಂಬ ಹೆಸರುಗಳಿವೆ. ಈ ಹಳ್ಳದ ಉಗಮ ಸ್ಥಾನದಿಂದ ಭೀಮ ನದಿ ಕೂಡುವ ಸ್ಥಳದ ಅಕ್ಕಪಕ್ಕ ದಡಗಳಲ್ಲಿ

ಹಾಲುಮತದವರೇ ಹೆಚ್ಚಾಗಿ ವಾಸಿಸುತ್ತಾರೆ".[೧೦] ಈ ಗ್ರಾಮದ ಒಂದು ಕಿಲೋಮೀಟರ್ ದೂರದಲ್ಲಿ ಮೂಲ ಸಮಾಧಿಯನ್ನೊಳಗೊಂಡ ಮಾಳಿಂಗರಾಯನ ಗದ್ದುಗೆಯಿದೆ. ಈ ಸ್ಥಳಕ್ಕೆ 'ಬೊಬ್ಬಲಿವನ' ಎಂದು ಹೆಸರು. ಆ ಗದ್ದುಗೆಯ ಮೇಲೆ ಸಪ್ತಕಳಸಗಳುಳ್ಳ ಪ್ರಾಚೀನ ದೇವಾಲಯವಿದೆ. ಗರ್ಭಗುಡಿಯ ಬಾಗಿಲಿನ ಮೇಲೆ ಹುಲಿಯ ಚಿತ್ರಗಳಿವೆ. ಸಮಾಧಿಯ ಪಕ್ಕಕ್ಕೆ ಬಸವಣ್ಣ ಮತ್ತು ವಿಠಲನ ದೇವಾಲಯವಿದೆ. ಈ ಸ್ಥಳ ಹಾಲುಮತಸ್ಥರಿಗೆ ಪವಿತ್ರ ಸ್ಥಳ. ಹುಲಿಜಂತಿ ಗ್ರಾಮದಲ್ಲಿ ನೂರ ಐವತ್ತಕ್ಕೂ ಹೆಚ್ಚು ಮಾಳಿಂಗರಾಯನ ವಂಶಸ್ಥರ ಮನೆಗಳಿವೆ. ಆ ಎಲ್ಲಾ ಮನೆಯವರು ಮಾಳಿಂಗರಾಯನ ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಲ್ಲಿ ಯಾರಾದರೂ ಮರಣ ಹೊಂದಿದರೆ ಮಾಳಿಂಗ ರಾಯನ ಸಮಾಧಿಯ ಆವರಣದಲ್ಲಿ ಸಂಸ್ಕಾರ ಮಾಡುತ್ತಾರೆ. ಆ ಸ್ಥಳದಲ್ಲಿ ಸುಮಾರು ಎರಡುನೂರ ಐವತ್ತಕ್ಕೂ ಹೆಚ್ಚು ಪೂಜಾರಿಗಳ ಸಮಾಧಿಗಳಿವೆ. ಸಮಾಧಿಯ ಸ್ಥಳದಿಂದ ಸುಮಾರು ನಾಲ್ಕು ಕಿಲೋ ಮೀಟರ್ ದೂರದಲ್ಲಿ ಮಾಳಿಂಗರಾಯ ಕುರಿಗಳನ್ನು ಮತ್ತು ಮರಿಗಳನ್ನು ನಿಲ್ಲಿಸುತ್ತಿದ್ದ (ಕುರಿಹಟ್ಟಿ-ಮರಿಹಟ್ಟಿ) ಸ್ಥಳಗಳಿವೆ. ಮಾಳಿಂಗರಾಯನ ಜಾತ್ರೆಗೆ ಬಂದವರು ಈ ಎರಡು ಸ್ಥಳಗಳಿಗೆ ಬಂದು ಹೋಗುತ್ತಾರೆ. ಕುರಿಹಟ್ಟಿ-ಮರಿಹಟ್ಟಿಗೆ ಬಂದ ಭಕ್ತರು ಈ ಸ್ಥಳದ ನೆಲ ಅಗೆದು ಕುರಿಹಿಕ್ಕಿ ಹುಡುಕುವ ಪರಿಕಲ್ಪನೆ ರೂಢಿಯಲ್ಲಿದೆ. ಮಾಳಿಂಗರಾಯ ಕಾಯ್ದ ಕುರಿಗಳ ಹಿಕ್ಕಿ ಸಿಗುತ್ತವೆ ಅನ್ನುವ ನಂಬಿಕೆ. ಕುರಿ ಹಿಕ್ಕಿ ಸಿಕ್ಕರೆ ಲಕ್ಷ್ಮಿ ಸಿಕ್ಕ ಹಾಗೆ ಎಂದು ಖುಷಿಯಿಂದ ತಮ್ಮ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಜಗುಲಿಯ ಮೇಲೆ ಇಟ್ಟು ಪೂಜೆ ಮಾಡುತ್ತಾರೆ.

ಮಾಳಿಂಗರಾಯ ಯಾವ ಶತಮಾನಕ್ಕೆ ಸೇರಿದವನು ಎನ್ನುವುದರ ಬಗ್ಗೆ ಖಚಿತ ಆಧಾರಗಳು ಸಿಗುವುದಿಲ್ಲ. ಕೇವಲ ಊಹೆ ಮಾಡುವುದಕ್ಕೆ ಸಾಧ್ಯ. ಜೆ.ಎಸ್. ವಡಗಾವಿ ಅವರು ಈತನ ಕಾಲ ಹತ್ತನೇ ಶತಮಾನವೆನ್ನುತ್ತಾರೆ. ಜ್ಯೋತಿ ಹೊಸೂರ ಅವರು ಹದಿನೈದನೆ ಶತಮಾನವೆಂದು ಹೇಳುತ್ತಾರೆ. ಈ ವಾದಕ್ಕೆ ಮಾಳಿಂಗರಾಯ ಬಸವಣ್ಣನ ಏಳನೇ ಅವತಾರ ಪುರುಷ ಎಂದು ಸಂವೇದನೆಗೊಂಡಿರುವ ಪೌರಾಣಿಕ ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಹೊಸೂರ ಅವರ ವಾದ ಸರಿ ಹೊಂದುವುದಿಲ್ಲ. ಮಾಳಿಂಗರಾಯ ಹನ್ನೆರಡು-ಹದಿಮೂರನೇ ಶತಮಾನದಲ್ಲಿ ಬದುಕಿರುವುದಕ್ಕೆ ಸಾಧ್ಯವಿದೆ. ಏಕೆಂದರೆ ಈತನ ಪೂರ್ವಜರು (ತಂದೆ ಮತ್ತು ಅಜ್ಜಂದಿರು) ಗೋರಖನಾಥ ಮತ್ತು ಸೋನಾರಸಿದ್ಧನ ಜೊತೆ ಸಂಬಂಧವಿಟ್ಟುಕೊಂಡಿದ್ದರು. ಮಾಳಿಂಗರಾಯ ಗೋರಖನಾಥನಿಂದ ವಿದ್ಯೆ ಕಲಿಯುತ್ತಾನೆ. ಅಮೋಘಸಿದ್ಧನ ಜೊತೆ ಸಂಘರ್ಷ ಮಾಡಿದ್ದಾನೆ. ಗೋರಖನಾಥ ಮತ್ತು ಅಮೋಘಸಿದ್ಧರ ಕಾಲ ಹನ್ನೆರಡು-ಹದಿಮೂರನೇ ಶತಮಾನ. ಹಾಗಾಗಿ ಮಾಳಿಂಗರಾಯನ ಕಾಲ ಇವರ ಕಾಲಕ್ಕೆ ಹತ್ತಿರ ಆಗುತ್ತದೆ. ಅಲ್ಲದೇ ಇಲ್ಲಿ ಬಸವಣ್ಣನ ಅವತಾರವೆಂದರೆ 'ಗೂಳಿ' (ಬಸವ). ವಚನಕಾರ ಬಸವಣ್ಣನಲ್ಲ. ಡೊಳ್ಳಿನ ಹಾಡುಗಳು ಇದನ್ನು ಸ್ಪಷ್ಟಪಡಿಸುತ್ತವೆ.

೪.೨.೨. ಮಾಳಿಂಗರಾಯನ ಪೂರ್ವಜರ ಬದುಕಿನ ಆಯಾಮಗಳು

ಮಾಳಿಂಗರಾಯನ ತಂದೆ ಸ್ವಾಮಿರಾಯ. ತಾಯಿ ಕನಾಬಾಯಿ. ಸ್ವಾಮಿರಾಯನ ಸಹೋದರ ತುಕ್ಕಪ್ಪರಾಯ. ಇವರಿಬ್ಬರ ಮಕ್ಕಳು ಜಕ್ಕಪ್ಪ ಮತ್ತು ಮಾಳಪ್ಪ. ಈ ವಂಶದಲ್ಲಿ ಇಬ್ಬಿಬ್ಬರು ಜೋಡಿಯಾಗಿ ಹುಟ್ಟಿ ಜೋಡಿಯಾಗಿಯೇ ಬೆಳೆದಿರುವುದು ವಿಶೇಷ.

"ಹಾಲಕರಾಯ ಪಾಲಕರಾಯ ಅವರು ಜೋಡಿಬ್ಬರು ಅಣ್ಣ ತಮ್ಮದೇರಾ
ಪಾಲಕರಾಯನ ಹೊಟ್ಟಿಲೆಪ್ಪ ಜೋಡಿಬ್ಬರು ಗಂಡಸ ಮಕ್ಕಳ
ಸೋರಿಕರಾಯನಲ್ಲಪ್ಪ ಭೀಮರಾಯನಿದ್ದಾರೆ
ಇವರ ಒಬ್ಬರ ಹೊಟ್ಟಿಲೆಪ್ಪ ಅಲ್ಲಿ ಇಬ್ಬರು ಮಕ್ಕಳಾದರೆ
ಜೋತಿಕರಾಯ ದೀಪಕರಾಯ ಜೋಡಿಬ್ಬರ ಮಕ್ಕಳ
ಇವರ ಹೊಟ್ಟಿಲಿ ಅಲ್ಲೇನಪ್ಪ ಕರಿಯಗೌಡನಿದ್ದಾನೆ
ಕರಿಯಗೌಡ ಕೆಂಪಗೌಡ ಜೋಡಿಬ್ಬರು ಮಕ್ಕಳು ಆದಾರೆ
ಕೆಂಪೆಗೌಡನ ಹೊಟ್ಟೇಲಿ ಸ್ವಾಮರಾಯ ಹುಟ್ಯಾನೆ
ಸ್ವಾಮಿರಾಯ ತುಕ್ಕಪ್ಪರಾಯ ಜೋಡಿಬ್ಬರು ಅಣ್ಣ ತಮ್ಮದೇರಾ"[೩೧]

ಸ್ವಾಮಿರಾಯ ಮತ್ತು ತುಕ್ಕಪ್ಪರಾಯ ಪಾಳೆಗಾರರಾಗಿದ್ದರು. 'ತೇರಾಮತಿ' ಮತ್ತು 'ಬಾರಾಮತಿ' ಪ್ರದೇಶಗಳನ್ನು ಆಳ್ವಿಕೆ ಮಾಡುತ್ತಿದ್ದರು. ಬಾರಾಮತಿ, ತೇರಾಮತಿ ಪ್ರದೇಶಗಳು ಹನ್ನೆರಡು-ಹನ್ನೆರಡು ಗ್ರಾಮಗಳ ಆಡಳಿತ ಕೇಂದ್ರವಾಗಿದ್ದವು. ಗುರು ಗೋರಖನಾಥನ ಕರಪತ್ರದ ಬೇಡಿಕೆಯ ಮೇರೆಗೆ ಈ ಪ್ರದೇಶಗಳ ಆಡಳಿತವನ್ನು ಬಿಟ್ಟು 'ಕಿಲಾರಿ'ಗಳನ್ನು ಕಾಯುವುದಕ್ಕೆ ಆರಂಭಿಸಿದವರು. ಅಲೆಮಾರಿಗಳಾದವರು. ಪಶುಪಾಲನೆಯೇ ನಮ್ಮ ಗುರುಸೇವೆ ಎಂದು ನಂಬಿದ್ದವರು.

"ಗುರುವಿನ ಕಿಲ್ಹಾರ ಈಗ ನಮ್ಮಂತೇಕs
ಮರುಗತಾವ ನೋಡ ತಮ್ಮಾ ಹೊಟ್ಟಾಗಿ ಇಲ್ಲದಕs
ಅಷ್ಟ ಐಶ್ವರಿ ಬೇಕೋ ಯಾತಕs
ಕಿಲ್ಲಾರ ಸಲುವಾಗಿ ನಾವು ಊರ ಬಿಡಬೇಕs
ತುಕ್ಕಪ್ಪ ಹೇಳ್ಯಾನ ಸೋಮರಾಯನ ಬಲ್ಲೇಕs
ನಿಷ್ಟುರಾಗಿ ಹೊಂಟಾರ ಕಿಲ್ಲಾರ ಮೇಸುದಕs"[೩೨]

ಪಶುಪಾಲಕರು ತಮಗೆ ದೊರೆತ ದೊರೆತನವನ್ನು ಬಿಟ್ಟು ಪಶುಪಾಲನೆಯನ್ನು ಆಯ್ಕೆಮಾಡಿಕೊಂಡ ಉದಾಹರಣೆಗಳು ನಮಗೆ ಸಾಕಷ್ಟು ಸಿಗುತ್ತವೆ. ಆ ಕಾಲಕ್ಕೆ ಪಶುಪಾಲನೆ ಅನ್ನುವುದು ದೊರೆತನಕ್ಕಿಂತಲೂ ಶ್ರೇಷ್ಟ ವೃತ್ತಿ ಆಗಿತ್ತು. ಪ್ರಾಚೀನ ಭಾರತದಲ್ಲಿ ಋಷಿಗಳು ಮತ್ತು ರಾಜರು ಸಹ ಪಶುಪಾಲಕರಾಗಿದ್ದರು. ರಾಜ ಎಷ್ಟು ಹಸುಗಳನ್ನು ಸಾಕಿದ್ದಾನೆ ಅನ್ನುವುದರ ಮೇಲೆ ಆತನ ಆರ್ಥಿಕ ಸಂಪತ್ತು ಮತ್ತು ಸಾಮಾಜಿಕ ಸ್ಥಾನಮಾನಗಳು ನಿರ್ಧಾರ ಆಗುತ್ತಿದ್ದವು. "ದಕ್ಷಿಣ ಆಫ್ರಿಕದಲ್ಲಿ ಪಶುಗಳು ಅಂತಸ್ತು ಮತ್ತು ಶ್ರೀಮಂತಿಕೆಯ ಪ್ರತೀಕವೆಂದು ತಿಳಿದುಕೊಂಡಿದ್ದರು. ಆ ಕಾರಣಕ್ಕೆ ಅವರು ಆಹಾರಕ್ಕಾಗಿ ಪಶುಗಳನ್ನು ಕೊಲ್ಲುತ್ತಿರಲಿಲ್ಲ".[೩೩] ಹಾಲುಮತಸ್ಥರಲ್ಲಿ ಮಾಂಸಹಾರ ಸೇವಿಸಬಾರದು, ಕುರಿಗಳನ್ನು ಕೊಲ್ಲಬಾರದು ಅನ್ನುವ ನಂಬಿಕೆ ಇದೆ. ೧೯೧೮ರಲ್ಲಿ ಸಂಕೇಶ್ವರದಲ್ಲಿ ನಡೆದ ಹಾಲುಮತ ಸಮ್ಮೇಳನದಲ್ಲಿ ಹೆಚ್ಚಾನು ಹೆಚ್ಚು ಭಾಷಣಕಾರರು ಈ ಮಾತನ್ನು ಒತ್ತಿ ಒತ್ತಿ ಹೇಳಿದ್ದಾರೆ. ಉತ್ತರ ಕರ್ನಾಟಕ (ಬಿಜಾಪುರ, ಬೆಳಗಾಂ, ಧಾರವಾಡ, ಕೊಪ್ಪಳ, ಬಾಗಲಕೋಟೆ) ಬಹುತೇಕ ಹಾಲುಮತಸ್ಥರಲ್ಲಿ ಮಾಂಸಹಾರ ಸೇವನೆ ಇಲ್ಲ. ಕೆಲವು ವಾರದ ದಿನಗಳಲ್ಲಿ ಮಾಂಸಹಾರವನ್ನು ತಿನ್ನುವುದೇ ಇಲ್ಲ. ಹೆಚ್ಚು ಹಾಲುಮತದ ದೈವಗಳಿಗೆ ಪ್ರಾಣಿಬಲಿ ಆಚರಣೆಗಳಿಲ್ಲ. ಕೆಲವರು ಇವರಲ್ಲಿನ ಮಾಂಸಹಾರ ನಿಷೇಧ ಲಿಂಗಾಯತ ಧರ್ಮದ ಪ್ರಭಾವ ಎಂದು ವಾದಿಸುತ್ತಿದ್ದಾರೆ. ಈ ವಾದ ಸರಿಯೆನಿಸಿದರೂ

ಜೊತೆಗೆ ಆರ್ಥಿಕತೆಯ ಅಭಿವೃದ್ಧಿಗಾಗಿ ಈ ಕ್ರಮವನ್ನು ತಮ್ಮಷ್ಟಕ್ಕೆ ತಾವು ಕೈಗೊಂಡಿರುವ ಪ್ರಾಚೀನ ಪದ್ಧತಿ. ಈ ಪರಿಕಲ್ಪನೆ ಹಲವು ಪಶುಪಾಲಕ ಸಮುದಾಯಗಳಲ್ಲಿದೆ.

"ಅಮೇರಿಕ ಸರ್ಕಾರ ದನಗಳ ಹಿತವೇ ಜನಗಳ ಹಿತವೆಂದು ನಂಬಿದೆ. ಅಲ್ಲಿನ ಜನ ಇವತ್ತು ಆಕಳುಗಳೆಂದರೆ ಬ್ಯಾಂಕಿನಲ್ಲಿಟ್ಟ ಠೇವಣಿ ಅಂದುಕೊಳ್ಳುತ್ತಾರೆ. ಅಲ್ಲಿನ ಹಾಲಿನ ವ್ಯಾಪಾರಿಗಳು ಕೋಟ್ಯಾಧಿಪತಿಗಳಾಗಿದ್ದಾರೆ. ಇವತ್ತು ೧೦೦ಕ್ಕೆ ೫೫ರಷ್ಟು ಭೂಮಿ ಹುಲ್ಲುಗಾವಲಾಗಿದೆ. ಆಸ್ಟ್ರೇಲಿಯದಲ್ಲಿ ೫೦ ರಿಂದ ೧೦೦೦ ಎಕರೆಗಳವರೆಗೂ ಗೋಕ್ಷೇತ್ರಗಳುಂಟು"[೨೪] ಮೈಸೂರು ಅರಸ ಚಿಕ್ಕದೇವರಾಜ ಒಡೆಯರು ಗೋವುಗಳಿಗಾಗಿಯೇ ಅನೇಕ ಕಡೆ ಹುಲ್ಲುಗಾವಲುಗಳನ್ನು ನಿರ್ಮಿಸಿದ್ದರು. ಹುಲ್ಲುಗಾವಲು ಪ್ರದೇಶಗಳಿಗಾಗಿ ಹಲವು ಬುಡಕಟ್ಟು ಸಮುದಾಯಗಳಲ್ಲಿ ಸಂಘರ್ಷಗಳಾಗಿವೆ. ಪಶುಗಳನ್ನು ಕದಿಯುವ ಪರಿಕಲ್ಪನೆ ರೂಢಿಯಲ್ಲಿತ್ತು. ಗೋಸಂರಕ್ಷಣೆ ಮಾಡುವುದು ಸಾಮಾಜಿಕ ಗೌರವ ಆಗಿತ್ತು. ಪಶುಸಂರಕ್ಷಣೆ ಮಾಡಿದವರಿಗೆ ಅನೇಕ ಗೌರವಯುತ ಸ್ಥಾನಮಾನಗಳನ್ನು ಕೊಟ್ಟ ಕಥನಗಳು ನಮ್ಮಲ್ಲಿವೆ. ಮಹಾಭಾರತದಿಂದ ಹಿಡಿದು ಹಲವು ಬುಡಕಟ್ಟು ಸಮುದಾಯಗಳ ಕಥನಗಳು ಉದಾಹರಣೆಯಾಗಿ ಸಿಗುತ್ತವೆ. ಸಾಂತೈಮರ್ ಅವರು "ಪಶುಗಳನ್ನು ಶತ್ರುಗಳಿಂದ ಸಂರಕ್ಷಣೆ ಮಾಡುವ ಕಾರಣಕ್ಕಾಗಿಯೇ ರಾಜಮನೆತನಗಳ ಉದಯಕ್ಕೆ ಕಾರಣವಾಗಿರಬಹುದೆಂಬ ಅನುಮಾನ ವ್ಯಕ್ತಪಡಿಸುತ್ತಾರೆ".[೨೫] ಇದರಿಂದ ಪಶುಪಾಲನೆ ಪ್ರಮುಖ ಆರ್ಥಿಕ ಸಂಪತ್ತು ಆಗಿತ್ತು. ಸ್ವಾಮಿರಾಯ ಮತ್ತು ತುಕ್ಕಪ್ಪರಾಯ ಸ್ವ-ಆಸಕ್ತಿಯಿಂದ 'ಕಿಲಾರಿ' ಸಾಕಾಣಿಕೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಇಂಥ ಕಾರಣಗಳು ಮುಖ್ಯವಾಗಿರಬೇಕು.

ಸ್ವಾಮಿರಾಯ ಮತ್ತು ತುಕ್ಕಪ್ಪರಾಯ ತಮ್ಮ ಅಲೆಮಾರಿತನದಲ್ಲಿ ನಾಥ, ಜೋಗಿ ಮತ್ತು ಸಿದ್ಧರ ಜೊತೆ ಸಂಬಂಧ ಬೆಳೆಸಿಕೊಂಡರು. ಪಶುಪಾಲಕರ ಜೊತೆ ಜೊತೆಯಲ್ಲಿ ನಾಥ, ಜೋಗಿ ಮತ್ತು ಸಿದ್ಧರು ಅಲೆದಾಡಿದ್ದಾರೆ. ಪಶುಪಾಲಕರಿಗೂ ಮತ್ತು ಇವರುಗಳಿಗೆ ಕೊಡುಕೊಳ್ಳುವಿಕೆಯ ಸಂಬಂಧಗಳಿದ್ದವು. ಇವರ ನಡುವೆ ಯಾವುದಾದರೂ ಒಂದು ಒಪ್ಪಂದ ಆಗಿರಬೇಕು. ಅದು ಆರ್ಥಿಕತೆಗೆ ಸಂಬಂಧಿಸಿದ್ದಿರಬಹುದು. ಧರ್ಮಕ್ಕೆ ಸಂಬಂಧಿಸಿದ್ದಾಗಿರಬಹುದು. ಏಕೆಂದರೆ ಸ್ವಾಮಿರಾಯ ಮತ್ತು ತುಕ್ಕಪ್ಪರಾಯರಿಗೆ ಸೊನರಸಿದ್ಧ 'ಗಾರುಡಿಗ' ವಿದ್ಯೆ ಕಲಿಸಿಕೊಡುತ್ತಾನೆ. ಗೋರಖನಾಥ ಬಿಲ್ಲು ವಿದ್ಯೆ ಕಲಿಸಿಕೊಡುತ್ತಾನೆ. ತಮ್ಮನ್ನು ರಕ್ಷಿಸಿಕೊಳ್ಳಿರೆಂದು ಗೋರಖನಾಥ ಆಯುಧಗಳನ್ನು ಕೊಡುತ್ತಾನೆ.

"ಗುರುವ ಗೋರಖನಾಥ ರುಂಡಮಾಲಿ ಕೊಟ್ಟಿದ್ದ
ಹೊನ್ನ ಕಠಾರಿ ಕೊಟ್ಟಿದ್ದ ರನ್ನದ ಚೂರಿ ಕೊಟ್ಟಿದ್ದ
ಗುರುವ ಗೋರಖನಾಥನೆ ಸರ್ವಸಾಮನ ಕೊಟ್ಟಾನೆ"[೨೬]

ಇದರ ಜೊತೆಗೆ ವೈದ್ಯಕೀಯ ಜ್ಞಾನವನ್ನು ಕಲಿಸಿಕೊಡುತ್ತಾರೆ. ಸಿದ್ಧ-ನಾಥರ ದೇವಾಲಯಗಳ ಜೊತೆಗೆ ಪಶುಪಾಲಕರ ದೈವಗಳಿವೆ. ಭೈರವನಾಥ ಆರಾಧಕರಿಗೂ ಮತ್ತು ಹಾಲುಮತಸ್ಥರಿಗೂ ಭಾನುವಾರ ಪವಿತ್ರ. ಬೀರಪ್ಪನೇ ಭೈರವ ಅನ್ನುವ ವಾದಗಳಿವೆ. "ಕುರುಬರು ಶಿವನ ಭಕ್ತರು. ವೀರ ನಾಯಕರು. ಆದಕಾರಣ ಇವರಿಗೆ ಬೀರನಲ್ಲಿ ಭಕ್ತಿ. ಈ ಬೀರನೇ ಸಂಸ್ಕೃತ ರೂಪತಾಳಿ 'ಭೈರವೇಶ್ವರ'ನಾಗಿರಬೇಕು.

ಭೈರವನು ಕ್ಷೇತ್ರಪಾಲಕ ದೇವತೆಯಂತೆ; ಸರಿ. ಇವನು ಊರ ಕಾವಲುಗಾರ. ಆದುದರಿಂದಲೇ ಊರ ಹಳಬ ಕುರುಬ"[೩೭] ಬೀರಪ್ಪ ಹಾಲುಮತದವರ ಆರಾಧ್ಯ ದೈವ. ಸ್ವಾಮಿರಾಯ ತುಕ್ಕಪ್ಪರಾಯರು ಬೀರಪ್ಪನ ಭಕ್ತರಾಗಿದ್ದರು. ಸ್ವಾಮಿರಾಯ ಬೇಡರಿಂದ ಹತನಾಗುವ ಸಂದರ್ಭಕ್ಕಿಂತ ಮುಂಚೆ ತುಕ್ಕಪ್ಪರಾಯ ಮತ್ತು ಜಕ್ಕಪ್ಪ, ಮಾಳಪ್ಪರಲ್ಲಿ "ಏಳುನೂರು ಮಂದಿ ಬೇಡರನ್ನು ಕೊಂದು ಬೀರಪ್ಪನ ಸೇವೆ ಮಾಡುವುದಾದರೆ ನನ್ನ ದೇಹಕ್ಕೆ ನಾಟಿರುವ ಬಾಣವನ್ನು ಹಿಕ್ಕುಹಾಕಿರಿ"[೩೮] ಎಂದು ಹೇಳುತ್ತಾನೆ. ಸ್ವಾಮಿರಾಯನ ಕೊನೆಯ ಆಸೆಯಲ್ಲಿ ಬ್ಯಾಡರನ್ನು ಕೊಲ್ಲುವುದು ಎಷ್ಟು ಮುಖ್ಯವೋ ಬೀರಪ್ಪನ ಸೇವೆ ಮಾಡುವುದು ಅಷ್ಟೇ ಮುಖ್ಯವಾಗಿತ್ತು.

ಆದರೆ ಇವರು ಪಾರಂಪರಿಕವಾಗಿ ಮಾತೃ ಆರಾಧಕರು. ಮನೆತನದ ದೇವತೆ ಇಚೇರಿ ಮಲಕವ್ವ. ತಮ್ಮ ಪಶುಪಾಲನೆಯ ಅಲೆಮಾರಿತನದಲ್ಲಿ ಆ ದೇವತೆಯನ್ನು ಬುಟ್ಟಿಯಲ್ಲಿ ಹಾಕಿಕೊಂಡು ಹೋಗುತ್ತಿದ್ದರು.

"ಇಚೇರಿಯ ಮಲಕವ್ವನೆ ಮನೆಯ ದೇವರಿದ್ದಾಳೆ
ಗೋಪಾಳ ಪುಟ್ಟಿ ಒಳಗೇನೆ ಇಚೇರಿಯ ಮಲಕವ್ವನೆ
ಇಚೇರಿಯ ಮಲಕವ್ವನೆ ಗೋಪಾಳ ಪುಟ್ಟಿ ಒಳಗೇನ
ಭವುಳಿ ನಾಡಾದ ಗೌಳೇರು ತಲಿಮ್ಯಾಲ ಹೊರವುತಾರೇನ"[೩೯]

ಅಲೆಮಾರಿ ಕುರುಬರಲ್ಲಿ ತಮ್ಮ ಆರಾಧ್ಯ ದೈವಗಳನ್ನು ಬುಟ್ಟಿಯಲ್ಲಿ ಹಾಕಿಕೊಂಡು ತಿರುಗುವ ಪರಿಕಲ್ಪನೆ ಇವತ್ತೂ ರೂಢಿಯಲ್ಲಿದೆ. ಎಲ್ಲಿ ಕುರಿಗಳನ್ನು ನಿಲ್ಲಿಸುತ್ತಾರೋ ಅಲ್ಲಿ ಆ ದೈವಗಳನ್ನಿಟ್ಟು ಪೂಜೆ ಮಾಡುತ್ತಾರೆ. "ಕಂಬಳಿ" ಗದ್ದುಗೆಯನ್ನು ಮಾಡಿ ದೇವರುಗಳನ್ನು ಇಡುತ್ತಾರೆ. ಬುಟ್ಟಿಯಲ್ಲಿ ಯಲ್ಲಮ್ಮ, ಮಾಯವ್ವ ಮುಂತಾದ ಹೆಣ್ಣು ದೇವತೆಗಳು ಮತ್ತು ಮಾಳಿಂಗರಾಯ, ಬೀರಪ್ಪ ಅಮೋಘಸಿದ್ಧ ಮುಂತಾದ ಪುರುಷ ದೈವಗಳು ಇರುತ್ತವೆ. ಇತ್ತೀಚೆಗೆ 'ಬಾಳುಮಾಮ' ಫೋಟೋ ಆ ದೈವಗಳ ಜೊತೆಗೆ ಹೆಚ್ಚಾಗಿ ಸೇರಿಕೊಳ್ಳುತ್ತಿದೆ. ರೇವಣಸಿದ್ಧ ಇವರಲ್ಲಿ ಕಡಿಮೆ. ಬೆಳಗಾವಿಯಿಂದ ಬಳ್ಳಾರಿ ಪ್ರದೇಶಕ್ಕೆ ಕುರಿಗಾರಿಕೆಗಾಗಿ ವಲಸೆ ಬಂದಿರುವ 'ಅಪ್ಪಣ್ಣ ಸಾಂದಲಗ' ಅವರ ಮನೆತನದ ದೈವದ ಬುಟ್ಟಿಯಲ್ಲಿ ಹಾಲುಮತದ ದೈವಗಳ ಜೊತೆಗೆ ನಾಥರ ಫೋಟೋಗಳಿದ್ದವು. ಈ ದೈವಗಳನ್ನು ನೀವೇಕೆ ಆರಾಧನೆ ಮಾಡುತ್ತೀರಾ ಎಂದು ಕೇಳಿದಾಗ "ಇವು ನಮ್ಮ ಮನೆ ದೇವರು ಗಳು. ನಮ್ಮ ಹಿರಿಯ ತಲೆಮಾರಿನವರು ಪೂಜೆ ಮಾಡುತ್ತಿದ್ದರು ನಾವು ಮಾಡುತ್ತೇವೆ"[೪೦] ಎಂದು ಹೇಳಿದ. ಮಾಳಿಂಗರಾಯ (ಹುಲಿಜಂತಿ) ಬೀರಪ್ಪ (ಸಿರಿಡೋಣ) ಜಾತ್ರೆಗಳಲ್ಲಿ ನಾಥರ ಫೋಟೋಗಳನ್ನು ಮಾರಾಟ ಮಾಡುತ್ತಾರೆ. ತಾಳಿಕೋಟೆ ಕದನದಲ್ಲಿ ವಿಜಯನಗರದ ಅರಸರು ಸೋತಾಗ ಉತ್ತರ ಕರ್ನಾಟಕದ ಹಾಲುಮತಸ್ಥರು ದಕ್ಷಿಣ ಕರ್ನಾಟಕದ ಕಡೆ ವಲಸೆ ಹೋದರು. ಹೆಚ್ಚು ಜನ ಹಾಲುಮತಸ್ಥರು ವಲಸೆ ಹೋಗುವುದಕ್ಕೆ ಮೈಸೂರು ಸಾಮ್ರಾಜ್ಯದ ಸ್ಥಾಪನೆ ಕಾರಣವಾಗಿರಬೇಕು. ಆ ಕಡೆ ವಲಸೆ ಹೋಗುವಾಗ ತಮ್ಮ ದೈವಗಳನ್ನು ಬುಟ್ಟಿಯಲ್ಲಿ ಹಾಕಿಕೊಂಡು ಹೋದರು. ಚಿಕ್ಕಮಂಗಳೂರು ಜಿಲ್ಲೆ ಕಡೂರು ತಾಲೂಕು, ಶಿವನಿ ಗ್ರಾಮದ ರೇವಣಸಿದ್ಧ ದೇವಾಲಯಕ್ಕೆ ಇಂಥ

ಕಥೆಯಿದೆ. ಆ ದೇವಾಲಯದ ಒಡೆಯರನ್ನು ಭೇಟಿ ಆದಾಗ ಆ ದೈವ ನೆಲೆಗೊಂಡ ಕಥನವನ್ನು ಹೀಗೆ ಹೇಳಿದರು. "ನಮ್ಮ ಮೂಲ ಬಿಜಾಪುರ. ನಮ್ಮ ಹಿರಿಯರು ಮುಸ್ಲಿಂರ ಹಿಂಸೆ ತಾಳಲಾರದೆ ರೇವಣಸಿದ್ಧನನ್ನು ಬುಟ್ಟಿಯಲ್ಲಿ ಹಾಕಿಕೊಂಡು ಓಡಿ ಬಂದರಂತೆ"[೪೧] ಅನ್ನುವ ತಮ್ಮ ವಲಸೆಯ ಕಥೆಯನ್ನು ಹೇಳುತ್ತಾರೆ.

ಅಲೆಮಾರಿ ಕುರುಬರು ತಮ್ಮ 'ಕುರಿದಡ್ಡಿ'ಗಳಲ್ಲಿ ದೀಪಾವಳಿಯ ಅಮವಾಸ್ಯೆಯ ದಿನ 'ಲಕ್ಷ್ಮಿ ಪೂಜೆ' ಆಚರಣೆ ಜೊತೆಗೆ 'ಹಾಲು ಬಿಂದಿಗೆ' ಆಚರಣೆ ಮಾಡುತ್ತಾರೆ. ಈ ಆಚರಣೆ ಸ್ವಾಮಿರಾಯ ಮತ್ತು ತುಕ್ಕಪ್ಪರಾಯರು ಇಚೇರಿಯ ಮಲಕವ್ವನನ್ನು ಆರಾಧನೆ ಮಾಡುತ್ತಿದ್ದ ರೀತಿಯನ್ನು ನೆನಪಿಸುತ್ತದೆ. ಅಂದರೆ ಸ್ವಲ್ಪ 'ಕುರಿಯ ಕುಳ್ಳು'ಗಳನ್ನು ದುಂಡಗೆ ಹಾಕಿ, ಬೆಂಕಿ ಹಚ್ಚಿ ಅದರ ಮೇಲೆ ಅರ್ಧಬಿಂದಿಗೆಯಷ್ಟು ಕುರಿಹಾಲು ಹಾಕಿಡುತ್ತಾರೆ (ಬಿಂದಿಗೆ ಸಮತಟ್ಟಾಗಿರುವಂತೆ ಕಾಪಾಡುತ್ತಾರೆ). ಬಿಸಿಯಾಗಿ ಯಾವ ಜಾಗಕ್ಕೆ ಉಕ್ಕುತ್ತದೆ ಆ ಕಡೆ ಮಳೆ-ಬೆಳೆ ಹೆಚ್ಚು ಅಂತ ನಂಬುತ್ತಾರೆ. ಆ ದಿಕ್ಕಿನ ಕಡೆ ವಲಸೆ ಹೋಗುತ್ತಾರೆ. ಈ ಪರಿಕಲ್ಪನೆ ಹಾಲುಮತದ ಪುರುಷ ದೈವಗಳಲ್ಲಿ ರೂಢಿಯಲ್ಲಿದೆ. ಹುಲಿಜಂತಿಯಲ್ಲಿ ದೀಪಾವಳಿ ಅಮಾವಾಸ್ಯೆಯ ದಿನ ಮಾಳಿಂಗರಾಯ ಸಮಾಧಿಯ ಮೇಲೆ ನಡೆಯುವ ಮುಂಡಾಸ ಆಚರಣೆಯಲ್ಲಿ ಯಾವ ಕಡೆ ಮುಂಡಾಸ ಹೆಚ್ಚು ಬಿದ್ದಿರುತ್ತದೋ ಆ ಕಡೆ ಮಳೆ-ಬೆಳೆ ಹೆಚ್ಚು ಅಂತ ನಂಬುತ್ತಾರೆ. ಹಡಗಲಿಯ ಮೈಲಾರದೇವರ ಗೊರವಪ್ಪ ಕಾರ್ಣಿಕ ಹೇಳಿ ಯಾವ ಕಡೆ ಬೀಳುತ್ತಾನೋ ಆ ಕಡೆ ಮಳೆ-ಬೆಳೆ ಹೆಚ್ಚು ಅನ್ನುವ ನಂಬಿಕೆ. ಇಂತಹ ನಂಬಿಕೆಯ ಆಚರಣೆಗಳು ಹಲವು ಪಶುಪಾಲಕರಲ್ಲಿ ರೂಢಿಯಲ್ಲಿವೆ. ಕಾರಹುಣ್ಣಿಮೆಯ ದಿವಸ ನಡೆಯುವ "ಪಶುಗಳ ಓಟದ" (ಕರಿ ಹರಿಯುವ ಆಚರಣೆ) ಆಚರಣೆ ಇದೇ ತರದ್ದು. ಇಲ್ಲಿ ಯಾವ ಬಣ್ಣದ ಎತ್ತು ಮುಂದೆ ಓಡಿ ಬಂದಿರುತ್ತದೋ ಆ ಬಣ್ಣದ ಭೂಮಿ ಹೆಚ್ಚು ಬೆಳೆಯುತ್ತದೆ ಅನ್ನುವ ನಂಬಿಕೆ. ಈ ನಂಬಿಕೆಯ ಹಿಂದೆ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಪೂರ್ವಯೋಜನೆ ಇದೆ. ತುಕ್ಕಪ್ಪರಾಯ ಮತ್ತು ಸ್ವಾಮಿರಾಯರಿಗೆ ಇಚೇರಿಯ ಮಲಕವ್ವ ಮಾರ್ಗ ತೋರಿಸುವ ದೇವತೆ ಆಗಿದ್ದಳು.

"ಕೂಗ್ಯಾಡಿ ಸಕಣ ಹೇಳವ್ವ ಮಳಿಯ ಕೀಲ ಹೇಳವ್ವ
ಮಳಿಯ ಕೀಲ ಹೇಳವ್ವ ಬೆಳಿಯ ಕೀಲ ಹೇಳವ್ವ
ಬಡುವಗ ಭಾಗ್ಯ ಹೇಳವ್ವ ಮುಂದಿನ ಸುದ್ದಿ ಹೇಳವ್ವ
ಬಡುವಗ ಭಾಗ್ಯ ಹೇಳವ್ವ ಕೂಗ್ಯಾಡಿ ಸಕಣ ಹೇಳವ್ವ"[೪೨]

ಇವತ್ತು ಹಾಲುಮತದ ಪುರುಷ ದೈವಗಳಲ್ಲಿ ಮಳೆ ಬೆಳೆ ಸಂಬಂಧಿಸಿದ, ದಿಕ್ಕು ತೋರಿಸುವ ಆಚರಣೆಗಳು ನಡೆಯುತ್ತಿವೆ. ಈ ಪರಿಕಲ್ಪನೆ ಇಚೇರಿ ಮಲಕವ್ವ(ಮಾತೃಆರಾಧನೆ)ನಿಂದ ಬಂದಿರಬೇಕು. ಈ ಸಮುದಾಯ ಮಾತೃಪ್ರಧಾನತೆಯಿಂದ ಪಿತೃಪ್ರಧಾನತೆಗೆ ರೂಪಾಂತರವಾದಾಗ ಈ ಆಚರಣೆಗಳು ಮಾತೃದೈವದಿಂದ ಪಿತೃದೈವಕ್ಕೆ ರೂಪಾಂತರವಾದವು.

ತುಕ್ಕಪ್ಪರಾಯರ ಮನೆತನವನ್ನು ಕಾಪಾಡುವ ಮುಖ್ಯದೇವತೆ ಮಲಕವ್ವ ಆಗಿದ್ದಳು. ತುಕ್ಕಪ್ಪರಾಯನ ಹೆಂಡತಿ "ಕಾಮವ್ವ"ನನ್ನು ಸಿದ್ಧರು ಮತ್ತು ಜೋಗಿಗಳು ಪರೀಕ್ಷೆ ಮಾಡುವುದಕ್ಕೆ ಬಂದಾಗ ಮಲಕವ್ವ ಕಾಮವ್ವನ ದೇಹದಲ್ಲಿ ಸೇರಿ ಸಿದ್ಧರಿಗೆ ಊಟ ನೀಡುತ್ತಾಳೆ. ಕಾಮವ್ವ ಮಾಡಿದ್ದ ಸ್ವಲ್ಪ ಅಡಿಗೆಯಲ್ಲಿ ಸಾವಿರಾರು ಸಿದ್ಧರನ್ನು ಜೋಗಿಗಳನ್ನು ತೃಪ್ತಿಗೊಳಿಸುತ್ತಾಳೆ. ಕಾಮವ್ವನನ್ನು ಕಷ್ಟದಿಂದ ಪಾರುಮಾಡುತ್ತಾಳೆ. ಇದು ಮಾತೃಆರಾಧನೆ ದೈವಗಳು ಪುರುಷ ದೈವಕ್ಕೆ ಪ್ರತಿಸ್ಪರ್ಧಿ ಮಾಡುತ್ತಿದ್ದ ತಾಂತ್ರಿಕತೆಯಂತೆ ಕಾಣಿಸುತ್ತದೆ.

ಡೊಳ್ಳಿನ ಹಾಡುಗಳಲ್ಲಿ ಪ್ರತಿಬಿಂಬಿತವಾಗಿರುವ ಮಲಕವ್ವ ನರಬಲಿ ದೇವತೆ. ಭಂಡಾರದ ದೇವತೆ. ಸ್ವಾಮಿರಾಯ ತುಕ್ಕಪ್ಪರಾಯರು ಈಕೆಯ ಉಪಚಾರವನ್ನು ಮರೆತಾಗ ಇವರ ಪಶುಗಳಿಗೆ ಹಿಂಸೆ ಕೊಡುತ್ತಾಳೆ. ತಪ್ಪಿಗಾಗಿ 'ನರಬಲಿ' ಕೊಡುವಂತೆ ಬೇಡುತ್ತಾಳೆ. ಇವರು ತಮ್ಮ ಪಶುಸಂಪತ್ತನ್ನು ಸಂರಕ್ಷಿಸಿಕೊಳ್ಳುವ ಸಲುವಾಗಿ 'ಗಾಣಿಗರ ಮಲ್ಲಯ್ಯ'ನನ್ನು ಬಲಿಕೊಡುತ್ತಾರೆ. 'ಮಲ್ಲಯ್ಯ'ನನ್ನು ಬಲಿಕೊಟ್ಟಿರುವ ಸೂಕ್ಷ್ಮತೆಯನ್ನು ತಿಳಿಸಿದ ಕೃಷಿಕರ ಶ್ಯಾಮರಾಯ ತುಕ್ಕಪ್ಪರಾಯನನ್ನು ಪ್ರಶ್ನಿಸುತ್ತಾಳೆ. ಶ್ಯಾಮರಾಯ ಪ್ರಶ್ನೆ ಮಾಡಿದಕ್ಕಾಗಿ ಅವನನ್ನು ಬೆನ್ನು ಹತ್ತಿ ಆತನ ಏಳುನೂರ ಕಿಲಾರಿಗಳನ್ನು ಹಿಂಸಿಸುತ್ತಾಳೆ. ಆಕಾಶದಿಂದ ಪಾರ್ವತಿಯನ್ನು ಭೂಮಿಗೆ ಕರೆಯಿಸಿ ಕೊರವಂಜಿಯಾಗಿ ಕಾರ್ಯನಿರ್ವಹಿಸುವಂತೆ ಹೇಳುತ್ತಾಳೆ. ತನ್ನ ಪರವಾಗಿ ಶ್ಯಾಮರಾಯನ ಹತ್ತಿರ ಶಕುನ ಹೇಳುವಂತೆ ಮಾಡುತ್ತಾಳೆ. ಇಚೇರಿ ಮಲಕವ್ವ ಬಂದಳೆಂದು, ಆಕೆಗೆ ಎಳೆಮಗು ಆಹಾರಬೇಕೆಂದು ಹೇಳಿಸುತ್ತಾಳೆ. ಇದನ್ನು ಕೇಳಿದ ಶ್ಯಾಮರಾಯ ತಾಮಟಗೇರಿ ಹೆಣ್ಣುಮಗಳ ಮಗುವನ್ನು ಬಲಿಕೊಡುತ್ತಾನೆ. ಕೂಸು ಕಣ್ಮರೆಯಾದ ಕಾರಣ ತಾಯಿ ರೋದಿಸುತ್ತಾಳೆ. ಶ್ಯಾಮರಾಯ ಕದ್ದೊಯ್ದ ಅನ್ನುವ ಮುದುಕಿಯ ಮಾಹಿತಿಯ ಮೇರೆಗೆ ಜನರು ಶ್ಯಾಮರಾಯನ ಮನೆಗೆ ಬಂದು ನೋಡುತ್ತಾರೆ. ಆಗ

"ಊರ ಮಂದಿನಲ್ಲೀಳ ರೈತರು ಒಂದು ಆಗ್ಯಾರೆ
ಬಿಲ್ಲಾಳ ಶ್ಯಾಮರಾಯಗ ರಂಪ ಮಾಡಾಕ ಬಂದಾರ
ಒಳ್ಳೆದ ಒಳ್ಳೆದಂದಾರೆ ಮನಿಯಾಕ ಹೋಗ್ಯಾರಂದಾರ
ತಾಮುಟಗ್ಯಾರ ಮುದುಕಿಗೆ ನಂಬ್ಯಾರೆ ಮನಿಯಾಗ ಹೋಗುತಾರೆ
ರಂಗದೊಳಗೆ ತೆಲಿಯೇನ ಮ್ಯಾಲಬೆಳ್ಳಿ ಮುತ್ತೇನ
ಬೆಳ್ಳಿ ಮುತ್ತ ನೂಡ್ಯಾರ ಮೂರು ತಿಂಗಳ ಠಗರೇನ
ಕೊಂಬಿನ ಠಗರೆ ಮುರಿಯೇನ ತಲೆಯ ನೋಡುತಾರೇನ"[೪೩]

ಟಗರಿನ ತಲೆಯನ್ನು ನೋಡಿದ ಊರ ಜನರು ವಾಪಸಾಗುತ್ತಾರೆ. ಅಲೆಮಾರಿ ಕುರುಬರು, ಕುರಿಗಾರರು ತಮ್ಮ ಕುರಿಗಳಿಗೆ 'ಅಮ್ಮ', 'ಕಾಲುಬಾಯಿ' ಮುಂತಾದ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಾಗ "ಅಮ್ಮನಿಗಾಗಿ" ಪ್ರಾಣಿಬಲಿ ಕೊಟ್ಟು 'ಚರಗ' ಮಾಡುವ ಆಚರಣೆ ರೂಢಿಯಲ್ಲಿದೆ. 'ನರಬಲಿ' 'ಪ್ರಾಣಿಬಲಿ' ರೂಪದಲ್ಲಿ ರೂಪಾಂತರವಾಗಿ ಇವತ್ತು ಚಾಲ್ತಿಯಲ್ಲಿದೆ. ಶ್ಯಾಮರಾಯನ ಮನೆಯಲ್ಲಿ ಮಗುವಿನ ತಲೆ ಪ್ರಾಣಿ ತಲೆಯಾಗಿ ಕಾಣುವುದು ರೂಪಾಂತರದ ಪ್ರತೀಕ. ಬಳ್ಳಾರಿ, ದಾವಣಗೆರೆ,

ಕೊಪ್ಪಳ, ಬಿಜಾಪುರ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಪಶುಗಳಿಗೆ 'ಸೋಂಕುರೋಗ' ಬಂದಾಗ ಗ್ರಾಮದವರೆಲ್ಲ ಒಟ್ಟಿಗೆ ಸೇರಿ ಅಮ್ಮನನ್ನು ಮಾಡಿ ಕಳಿಸುವ ಸಂಪ್ರದಾಯವಿದೆ. ಇವು ಪಶುಪಾಲಕರ ಮಾತೃ ಆರಾಧನೆಯ ಪರಿಕಲ್ಪನೆಗಳು. 'ಅಮ್ಮ' ಪಶುಪಾಲಕರನ್ನು ಕಾಪಾಡುವ ದೇವತೆಯಾಗಿ ಕಾಣಿಸುತ್ತಾಳೆ. ತುಕ್ಕಪ್ಪರಾಯ ಮತ್ತು ಸ್ವಾಮಿರಾಯರಲ್ಲಿ ಇಂತಹ ಹಲವು ಪರಿಕಲ್ಪನೆಗಳು ದಟ್ಟವಾಗಿ ರೂಢಿಯಲ್ಲಿದ್ದವು.

೪.೨.೨.೧. ತುಕ್ಕಪ್ಪರಾಯ ಮತ್ತು ಸ್ವಾಮಿರಾಯರ ಸಂಘರ್ಷಗಳು

ಪ್ರಮುಖವಾಗಿ ತುಕ್ಕಪ್ಪರಾಯ ಮತ್ತು ಸ್ವಾಮಿರಾಯ ಬೇಡ ಸಮುದಾಯದ ಜೊತೆ ಹೋರಾಟ ಮಾಡಿರುವ ಉಲ್ಲೇಖಗಳು ಸಿಗುತ್ತವೆ. ಬೇಡರ ಹಿಂಸೆಯನ್ನು ತಾಳಲಾರದೆ ಪದೇ ಪದೇ ಸ್ಥಳಗಳನ್ನು ಬದಲಾಯಿಸುತ್ತಿದ್ದರು. ಜಕ್ಕಪ್ಪ ಮಾಳಿಂಗರಾಯನನ್ನು ಬೇಡರ ಕಣ್ಣಿಗೆ ಬೀಳದಂತೆ ಬಚ್ಚಿಟ್ಟು ಬೆಳೆಸುತ್ತಿದ್ದರು. ನಾಥ ಮತ್ತು ಸಿದ್ಧರಲ್ಲಿ ತಮ್ಮ ಪಶುಗಳನ್ನು ಬೇಡರಿಂದ ಸಂರಕ್ಷಣೆ ಮಾಡುವಂತೆ ಅಂಗಲಾಚುತ್ತಿದ್ದ ಸೂಕ್ಷ್ಮತೆಗಳು ಡೊಳ್ಳಿನ ಹಾಡುಗಳಲ್ಲಿ ಬರುತ್ತವೆ. ತುಕ್ಕಪ್ಪರಾಯ ಬೇಡರಿಂದ ಹತನಾದ ನಂತರ ಸ್ವಾಮಿರಾಯನ ಆತಂಕ ಇನ್ನು ಹೆಚ್ಚಾಗಿ ಕಾಡಿದೆ. ತುಕ್ಕಪ್ಪ-ಮಾಳಿಂಗರಾಯರನ್ನು ಬ್ಯಾಡ ಸಮುದಾಯದವರ ವಿರುದ್ಧ ಹೋರಾಟಕ್ಕೆ ಅಣಿಯಾಗುವಂತೆ ಬೆಳೆಸಿರುವ ಪ್ರಕ್ರಿಯೆಗಳು ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ಕೆಲವು ಕಥೆಗಳು ಸಿಗುತ್ತವೆ. ಜಕ್ಕಪ್ಪ ಮತ್ತು ಮಾಳಪ್ಪ ಚಿಕ್ಕಮಕ್ಕಳಿರುವಾಗ ತಂದೆ ಸ್ವಾಮಿರಾಯ 'ನಮ್ಮ ಶತ್ರುಗಳಾದ ಏಳುನೂರು ಬೇಡರನ್ನು ಯಾರು ಸಂಹಾರ ಮಾಡ್ತೀರಿ' ಅಂತ ಕೇಳುತ್ತಾನೆ. ಜಕ್ಕಪ್ಪ 'ನಿಮ್ಮಿಂದಾಗದ ಕೆಲಸ ನಮ್ಮಿಂದ ಹೇಗೆ ಸಾಧ್ಯ' ಅನ್ನುವ ಆತಂಕದ ಮಾತುಗಳನ್ನಾಡುತ್ತಾನೆ. ಮಾಳಪ್ಪ 'ನಮ್ಮನ್ನು ಕಾಡುವ ಬೇಡರ ತಲೆಗಳನ್ನು ತಂದು ನಿಮ್ಮ ಪಾದದಡಿ ಹಾಕುತ್ತೇನೆ' ಅನ್ನುವ ಛಲದ ಮಾತುಗಳನ್ನಾಡುತ್ತಾನೆ. ಆಗ ಸ್ವಾಮಿರಾಯ ಮಾಳಪ್ಪನನ್ನು ಹತ್ತಿರ ಕರೆದುಕೊಂಡು ಜಕ್ಕಪ್ಪನನ್ನು ಮನೆಯಿಂದ ಹೊರದೂಡಿದ. ಹೊರದೂಡುವ ಸಂದರ್ಭದಲ್ಲಿ ನೀನು ಅಸಮರ್ಥತೆಯ ಮಾತುಗಳನ್ನಾಡಿದೀಯ. ನೀನು ನನ್ನ ದೃಷ್ಟಿಯಲ್ಲಿ ಶಕ್ತಿಹೀನ, ಛಲರಹಿತ ವ್ಯಕ್ತಿ. ನಿನ್ನಂತಹವರು ನನ್ನ ಹತ್ತಿರ ಬದುಕುವುದಕ್ಕೆ ಅನರ್ಹರು. ಇನ್ನೆಂದೂ ನೀನು ನನಗೆ ಕಾಣಿಸಿಕೊಳ್ಳಬೇಡ. ನಿನ್ನ ದರುಶನ ನನಗೆ ಬೇಡ. ನನ್ನ ದರುಶನ ನಿನಗೆ ಬೇಡ ಎಂದು ಹೇಳುತ್ತಾನೆ. ಆ ಕಾರಣಕ್ಕಾಗಿ ಇವತ್ತು ಜಕ್ಕಪ್ಪನ ದೇವಾಲಯ ಹೊಳೆಯ ಆಚೆ ಇದೆ ಅನ್ನುವುದು ಭಕ್ತರ ನಂಬಿಕೆ. ಇವತ್ತಿಗೂ ಜಕ್ಕಪ್ಪ-ಮಾಳಪ್ಪನಿಗೆ ಹುಲಿಜಂತಿಯಲ್ಲಿ ದರುಶನ ಇಲ್ಲ. ದೀಪಾವಳಿ ಅಮಾವಾಸ್ಯೆಯ ದಿವಸ ಹುಲಿಜಂತಿಯಲ್ಲಿ ನಡೆಯುವ ಮಾಳಿಂಗರಾಯನ ಜಾತ್ರೆಗೆ ಗುರು ಬೀರಪ್ಪನ ಸಾಕುಮಗ ಬುಳ್ಳಪ್ಪ, ಬೀರಪ್ಪನ ತಂಗಿ ಶೀಲವಂತೆ, ಸಿರಿಡೋನ ಮತ್ತು ಜೀರಂಕಲಗಿ ಬೀರಪ್ಪ, ಹುನೂರಿನ ಬೀರಪ್ಪ, ಉಟಗಿ ಬರಮಲಿಂಗ ಸೂನ್ಯಳ ವಿಠಲ ದೈವಗಳ ಪಲ್ಲಕ್ಕಿಗಳು ಆಗಮವಾಗುತ್ತವೆ. ಜಕ್ಕಪ್ಪನ ಪಲ್ಲಕ್ಕಿ ಆಗಮನ ಆಗದೆ ಇರುವುದು ಮೇಲಿನ ಜಕ್ಕಪ್ಪನ ಕಥನಕ್ಕೆ ಪೂರಕವಾಗಿ ನಿಲ್ಲುತ್ತದೆ. ಆದರೆ ಜಕ್ಕಪ್ಪ-ಮಾಳಪ್ಪ ಇಬ್ಬರು ಸೇರಿ ಹೋರಾಟ ಮಾಡಿರುವ ಅಂಶಗಳು ಡೊಳ್ಳಿನ ಹಾಡುಗಳಲ್ಲಿವೆ. ಬೇಡರನ್ನು ಇಬ್ಬರು ಸೇರಿ ಸಂಹಾರ ಮಾಡಿ ಸಂತೋಷವನ್ನು

ಹಂಚಿಕೊಂಡ ಆಚರಣೆಗಳಿವೆ. “ಉಮದಿ ಗ್ರಾಮದಲ್ಲಿ ಜಕ್ಕಪ್ಪ-ಮಾಳಪ್ಪ ಬೇಡರ ಗುಂಪನ್ನು ಚೆಂಡಾಡಿ ರುಂಡಗಳನ್ನು ರಾಶಿ ಹಾಕಿ ಚಕ್ರಕಟ್ಟೆಯನ್ನು ಕಟ್ಟಿದರು” ಅನ್ನುವ ಕಥನವನ್ನು ಹೇಳುತ್ತಾರೆ. ಆ ಚಕ್ರಕಟ್ಟೆಯನ್ನು ಉಮದಿ ಗ್ರಾಮದಲ್ಲಿ ಈಗಲೂ ತೋರಿಸುತ್ತಾರೆ. ಜಕ್ಕಪ್ಪ ಬಾಲ್ಯದಲ್ಲಿ ತಂದೆಯ ವಿರೋಧಕ್ಕೆ ಒಳಗಾಗಿ ಅನಂತರ ಶಕ್ತಿಶಾಲಿ ಆಗಿರಬೇಕು. ಮಾಳಿಂಗರಾಯನೊಂದಿಗೆ ಸೇರಿ ಹೋರಾಟ ಮಾಡಿರಬೇಕು. ಅದೇನೇ ಇದ್ದರೂ ಈ ಕಥನ ಹಲವು ಸೂಕ್ಷ್ಮತೆಗಳನ್ನು ಹೊರಹಾಕುತ್ತದೆ. ತಂದೆ ಸ್ವಾಮಿರಾಯ ಇದ್ದ ಬಿಕ್ಕಟ್ಟಿನ ಸಂದರ್ಭ ಮತ್ತು ಆತ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಇದ್ದ ಸವಾಲುಗಳನ್ನು ತಿಳಿಸುತ್ತದೆ. ಏಕೆಂದರೆ ಸ್ವಾಮಿರಾಯ ಹೆತ್ತ ಮಗನನ್ನೇ ತಿರಸ್ಕಾರ ಮಾಡಿ ತನ್ನಿಂದ ದೂರ ಇಡುವ ಧೋರಣೆಯ ಬದುಕಿನ ಹಿಂದಿನ ಅನಿವಾರ್ಯತೆಯನ್ನು ಅರಿಯಬೇಕಿದೆ. ಬ್ಯಾಡ (ಬೇಡ) ಸಮುದಾಯ ಮಾಳಿಂಗರಾಯನ ಪೂರ್ವಜರನ್ನು ಘಾಸಿಗೊಳಿಸಿತ್ತು. ಈ ಮನೆತನದ ಹಿತ ಶತ್ರುಗಳಾಗಿ ಸೃಷ್ಟಿಯಾಗಿತ್ತು. ಅದನ್ನು ಪರಿಹರಿಸಿಕೊಳ್ಳುವ ಅಥವಾ ಗೆಲ್ಲುವ ಸವಾಲು ಜಕ್ಕಪ್ಪ-ಮಾಳಪ್ಪರ ಮೇಲೆ ಇತ್ತು.

ಸ್ವಾಮಿರಾಯನ ಗಮನ ಸೆಳೆಯುವ ಹೋರಾಟವೆಂದರೆ ದೆಹಲಿಯ ಸುಲ್ತಾನರನ್ನು ಸೋಲಿಸುವುದು. “ಸ್ವಾಮಿರಾಯ ದೆಹಲಿ ಸುಲ್ತಾನರ ಜೊತೆ ಯುದ್ಧ ಮಾಡುವ ರಾಜ್ಯ ಮುಖ್ಯ ಕೇಂದ್ರವಾಗಿದ್ದ ದೆಹಲಿ ಅಲ್ಲ. ಹುಲಿಜಂತಿ (ಬಿಜಾಪುರ-ಬೆಳಗಾಂ) ಸುತ್ತಮುತ್ತಲಿನ ಪ್ರದೇಶ ಆಗಿರುವುದಕ್ಕೆ ಸಾಧ್ಯತೆಯಿದೆ”.[೪೪] ಈ ಯುದ್ಧವನ್ನು ಬಾರಾಮತಿ ಮತ್ತು ತೇರಾಮತಿ ಪ್ರದೇಶಗಳನ್ನು ಪಡೆಯುವುದಕ್ಕೆ ಹೋರಾಟ ಮಾಡಿರಬಹುದು. ಏಕೆಂದರೆ ಸ್ವಾಮಿರಾಯ ಮತ್ತು ತುಕ್ಕಪ್ಪರಾಯ ಪಶುಪಾಲನೆಗಾಗಿ ಸುಲ್ತಾನರ ಆಡಳಿತಕ್ಕೆ ಒಳಪಟ್ಟಿರುವುದಕ್ಕೆ ಸಾಧ್ಯತೆ ಇದೆ. “ಸರಕಾರಿ ದಾಖಲೆಗಳ ಪ್ರಕಾರ ಕ್ರಿ.ಶ. ೧೬೩೭ರಲ್ಲಿ ಬಾರಾಮತಿ ಶಹಜಿಯ ಆಡಳಿತಕ್ಕೆ ಒಳಪಟ್ಟಿತ್ತು”. ಈ ರೀತಿಯಾಗಿ ಸ್ವಾಮಿರಾಯನ ಕಾಲದಲ್ಲಿ ಸುಲ್ತಾನರ ಆಡಳಿತಕ್ಕೆ ಒಳಗಾಗಿರಬೇಕು. ಹಾಗಾಗಿ ಆ ಪ್ರದೇಶವನ್ನು ಪಡೆಯುವುದಕ್ಕೆ ಹೋರಾಟ ಮಾಡಿರುವ ಸಾಧ್ಯತೆಗಳಿವೆ. ‘ಮಾಳಿಂಗರಾಯ’ನು ಸಹ ಅಮೋಘಸಿದ್ಧನ ಜೊತೆ ಈ ಪ್ರದೇಶಗಳನ್ನು ಪಡೆಯುವುದಕ್ಕೆ ಹೋರಾಟ ಮಾಡಿದಂತಿದೆ.

> “ಡಿಳ್ಳಿ ಸುಲ್ತಾನ ಪುರದಾಗೆ ಬಿಲ್ಲಾಳ ಶ್ಯಾಮರಾಯನ
> ಬಲ್ಲಾಳ ಶಾಮರಾಯನೇ ತಾಯೇನು ಹೇಳುತಾನೇನ
> ಹರವೂರೆಂಬ ಕೆರಿಯಮ್ಯಾಲ ಡೇರ್‍ಯಾ ಹೊಡಿಯುತಾನೇನ
> ಪಗಡಿ ಆಟ ನಡೆದಾವೊ ಎಂಟಮಂದಿ ಕೂಡ್ತಾರ”[೪೫]

ದೆಹಲಿ ಸುಲ್ತಾನ ಎಂಟು ಮಂದಿ ಸುಲ್ತಾನರ ಜೊತೆ ಸ್ವಾಮಿರಾಯ ಪಗಡೆ ಆಡುತ್ತಾನೆ. ತನ್ನಲ್ಲಿರುವ ಕಾವಿ, ಜೋಳಿಗೆ ಮತ್ತು ತನ್ನನ್ನು ಒತ್ತಿಡುತ್ತಾನೆ. ಆಟದಲ್ಲಿ ಸ್ವಾಮಿರಾಯ ಗೆದ್ದು ಆ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ತೆಗೆದುಕೊಂಡು ಬರುತ್ತಾನೆ. ಇಲ್ಲಿ ಪಗಡೆ ಆಡುವ ಸನ್ನಿವೇಶ ಮಹಾಭಾರತದಲ್ಲಿ ದುರ್ಯೋಧನ ಮತ್ತು ಧರ್ಮರಾಯರು ಪಗಡೆ ಆಡುವ ಆಟವನ್ನು ನೆನಪಿಸುತ್ತದೆ.

ಸ್ವಾಮಿರಾಯ ಮತ್ತು ತುಕ್ಕಪ್ಪರಾಯರು ಮಾಡಿರುವ ಸಂಘರ್ಷಗಳು ಮಾಳಪ್ಪನ ಬೆಳವಣಿಗೆಯ ಮೇಲೆ ತುಂಬಾ ಪರಿಣಾಮಗಳನ್ನುಂಟು ಮಾಡಿದವು. ಜಕ್ಕಪ್ಪ-ಮಾಳಿಂಗರಾಯ ತಂದೆಯರಿಗೆ ಎದುರಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಇವರಿಬ್ಬರ ಹೋರಾಟಗಳು ಆ ಸಮಸ್ಯೆಗಳ ಪರಿಹಾರಕ್ಕಾಗಿಯೇ ಮಾಡಿರುವ ಹೋರಾಟಗಳಂತೆ ಕಾಣಿಸುತ್ತವೆ.

೪.೨.೩. ಮಾಳಿಂಗರಾಯನ ಹುಟ್ಟು ಮತ್ತು ಬೆಳವಣಿಗೆ

ಜನಪದ ಸಾಂಸ್ಕೃತಿಕ ನಾಯಕರು ಅಯೋನಿಜರಾಗಿ ಹುಟ್ಟುತ್ತಾರೆ. ಇದು ಜನಪದ ಗಾಯಕರು ಕಟ್ಟಿಕೊಂಡ ಪರಿಕಲ್ಪನೆ. ಈ ಪರಿಕಲ್ಪನೆಯನ್ನು ಕಟ್ಟಿಕೊಳ್ಳುವುದಕ್ಕೆ ಹಲವಾರು ಕಾರಣಗಳಿವೆ. ಅದರ ಚರ್ಚೆ ಇಲ್ಲಿ ಅಸಮಂಜಸ. ಮಾಳಿಂಗರಾಯ ಸಹ ಅಯೋನಿಜನಾಗಿ ಹುಟ್ಟಿದನು. ಡೊಳ್ಳಿನ ಹಾಡುಗಳು ಈತನ ಹುಟ್ಟನ್ನು ಹೀಗೆ ಹೇಳುತ್ತವೆ. ತುಕ್ಕಪ್ಪರಾಯ ಮತ್ತು ಸ್ವಾಮಿರಾಯ ಸಂತಾನವಿಲ್ಲದ ಕಾರಣಕ್ಕೆ ಜನರಿಂದ ದೈವಗಳಿಂದ ಬಂಜೆತನದ ಅಪವಾದಕ್ಕೆ ಒಳಗಾಗುತ್ತಾರೆ. ಪುರುಷರು ಬಂಜೆತನಕ್ಕಾಗಿ ಅವಮಾನಿತರಾಗುವುದು ಹಾಲುಮತ ಸಂಸ್ಕೃತಿಯ ವೈಶಿಷ್ಟ್ಯ. ಇದೇ ರೀತಿಯ ಅವಮಾನ ಬೀರಪ್ಪನ ತಂದೆ ಬರಮಪ್ಪನು ಅನುಭವಿಸುತ್ತಾನೆ. ಶಿವನ ಪೂಜೆಯ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ತುಕ್ಕಪ್ಪರಾಯ ಬಂಜೆತನದಿಂದ ಮುಕ್ತವಾಗುವುದಕ್ಕೆ 'ಬಲ್ಲಾಳ ಗುಡ್ಡ'ದಲ್ಲಿ ಹನ್ನೆರಡು ವರ್ಷಗಳ ಕಾಲ ತಪಸ್ಸು ಮಾಡುತ್ತಾನೆ. ಶಿವನಲ್ಲಿ ಮಗು (ಸಂತಾನ)ವನ್ನು ಕೊಡುವಂತೆ ಅಂಗಲಾಚುತ್ತಾನೆ. ಪುರುಷರು ಬಂಜೆತನದ ಅಪವಾದದಿಂದ ಮುಕ್ತರಾಗುವುದಕ್ಕೆ ಪ್ರಯತ್ನಪಡುವುದು ಹಲವು ಬುಡಕಟ್ಟು; ಪಶುಪಾಲಕ ಸಮುದಾಯಗಳ ಕಥನಗಳಲ್ಲಿ ಕಂಡುಬರುತ್ತದೆ. ಲಂಬಾಣಿ ಸಮುದಾಯದ ಬುಡಕಟ್ಟು (ಪಶುಪಾಲಕ) ಸಾಂಸ್ಕೃತಿಕ ವೀರ ಸೇವಾಲಾಲ್‌ನ ತಂದೆ ಭೀಮನಾಯ್ಕ ಈ ತರಹದ ಅವಮಾನಕ್ಕೆ ಒಳಗಾಗುತ್ತಾನೆ. ಅವಮಾನದ ನಿವಾರಣೆಯ ಪ್ರತಿಫಲವಾಗಿ ಸೇವಾಲಾಲ್ ಹುಟ್ಟುತ್ತಾನೆ. ರೇಣುಕ (ಯಲ್ಲಮ್ಮ) ಪರುಶುರಾಮನನ್ನು ಶಿವನಿಂದ ಪಡೆಯುವುದು ಅವಮಾನದ ನಿವಾರಣೆಗಾಗಿ. ಪಶುಪಾಲಕರು; ದ್ರಾವಿಡರು ಬಂಜೆತನದ ಅಪವಾದವನ್ನು ಪುರುಷ-ಮಹಿಳೆಯರು ಸಮಾನವಾಗಿ ಸ್ವೀಕಾರ ಮಾಡುತ್ತಿದ್ದರು. ಒಬ್ಬರ ಮೇಲೆ ಮತ್ತೊಬ್ಬರು ಅಪವಾದಿಸುವ ಗುಣ ಇವರಲ್ಲಿ ಇರಲಿಲ್ಲ. ಮಹಿಳೆಯರಿಗಿಂತ ಪುರುಷರೇ ಹೆಚ್ಚು ಆತಂಕಕ್ಕೆ ಒಳಗಾಗುತಿದ್ದರು. ತುಕ್ಕಪ್ಪರಾಯನ ತಪಸ್ಸಿಗೆ ಮೆಚ್ಚಿದ ಶಿವ ಎರಡು ಹರಳುಗಳನ್ನು ಕೊಟ್ಟು ಹೋಗುತ್ತಾನೆ.

> "ಮಾದೇವನ ಕೊಳ್ಳಗ ಅಲ್ಲೇನ ಮಾಣಿಕದ ಹರಳ ತಗಾದ
> ಪಾರ್ವತಿ ಕೊಳ್ಳಾಗ ಅಲ್ಲೇನ ಜಂಬುನೀಲದ ಮಣಿಯೇನ
> ಸಂಜೆ ಮಾಡಿ ಅಲ್ಲೇನೆ ಹುಟ್ಟಸ್ವಾಮರಿ ಆಕಳ
> ಎರಡು ಮಣಿಗೆ ಅಲ್ಲೇಳೆ ಮಂತರ ಮಾಡುತಾನೇನೆ
> ಎರಡು ಮಣಿಯ ಒಯ್ಯರೆ ದೇವರ ಜಗಲಿ ಮ್ಯಾಲೇನ್"[೬]

ಶಿವನ ಆದೇಶದಂತೆ ಕಾನವ್ವ ಮತ್ತು ಅಮೃತಬಾಯಿ ಜಗುಲಿಯ ಮೇಲೆ 'ಹರಳು'ಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಆಗ "ಜಪಮಣಿಯಿಂದ ಜಗನ್ನಾತಂದುವತಾರಃ ಜಕ್ಕಪ್ಪರಾಯರನು ಅಯ್ಯೋ...

[illegible]

[illegible]

[illegible]

[illegible]

[illegible]

ಮಾಣಿಕ ಮಣಿಯಿಂದ ಬಸವನ ಅವತಾರ ಮಾಳಪ್ಪಂದು ಆಯ್ತೋ"[೪೭] 'ಮಾಣಿಕ್ಯ' ಬೆಳಕಿನ ಸಂಕೇತ. ಕತ್ತಲನ್ನು ಹೊಡೆದೊಡಿಸುವುದಕ್ಕೆ ಹುಟ್ಟಿದವನು ಅನ್ನುವ ಪರಿಕಲ್ಪನೆಯನ್ನು ಹೇಳವುದಕ್ಕೆ ಕಲಾವಿದ ಈ ವೈಧಾನಿಕತೆಯನ್ನು ಬಳಸಿರಬೇಕು.

ಮಾಳಪ್ಪ ಬಾಲ್ಯದಿಂದಲೇ ವೀರನಾಗಿ ಬೆಳೆದವನು. ಬಾಲ್ಯದಲ್ಲಿ ಜನರನ್ನು ಕಷ್ಟದಿಂದ ಪಾರುಮಾಡುವುದು, ಸತ್ತಮೀನುಗಳಿಗೆ ಮರುಜೀವ ಬರಿಸುವುದು, ನಾಗರಹಾವಿನೊಂದಿಗೆ ಸ್ನೇಹದಿಂದ ಆಟ ಆಡುವುದು, ಹಾವನ್ನೆ ನಾಗಬೆತ್ತವಾಗಿ ಕೈಯಲ್ಲಿ ಹಿಡಿದುಕೊಳ್ಳುವುದು, ಮಳೆ-ಬೆಳೆಯ ವಿಚಾರಗಳನ್ನು, ಕಾಲಜ್ಞಾನವನ್ನು ಹೇಳುವುದು ಮುಂತಾದ ಸಂಕೇತಗಳು ಈತನ ವೀರತ್ವವನ್ನು ಪ್ರತಿಬಿಂಬಿಸುತ್ತವೆ. ಹಾಗೂ ನಾಥ ಮತ್ತು ಸಿದ್ಧಪಂಥದ ಪ್ರಭಾವವನ್ನು ಹೇಳುತ್ತವೆ. ಮಾಳಪ್ಪ ಚಿಕ್ಕಂದಿನಿಂದಲೇ ನಾಥ; ಸಿದ್ಧರ ಆಶ್ರಯದಲ್ಲಿ ಬೆಳೆದವನು. ಪಶುಪಾಲನೆ ಮಾಡುತ್ತ ನಾಥ ಮತ್ತು ಸಿದ್ಧರ ಜೊತೆಯಲ್ಲಿ ಅಲೆಮಾರಿಯಾಗಿ ಅಲೆದಂಥವನು. ಈ ಅಲೆಮಾರಿತನ ಮತ್ತು ಪಶುಪಾಲನೆ ಈತನ ಬಾಲ್ಯಜೀವನವನ್ನು ಅನೇಕ ಬಿಕ್ಕಟ್ಟುಗಳಲ್ಲಿ ಸಿಲುಕಿಸಿದೆ. ತಂದೆ ತುಕ್ಕಪ್ಪರಾಯನಿಗಂತೂ ಬೇಡ ಸಮುದಾಯವನ್ನು ನಾಶಪಡಿಸುವುದಕ್ಕೆ ಅಥವಾ ಬೇಡರಿಂದ ಪಶುಪಾಲನೆಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೆ; ಪಶುಪಾಲನೆಯನ್ನು ವೃದ್ಧಿಮಾಡುವುದಕ್ಕೆ ಇರುವ ಏಕೈಕ ಅಸ್ತ್ರದಂತೆ ಮಾಳಪ್ಪ ಕಂಡಿದ್ದಾನೆ. ಮಾಳಿಂಗರಾಯನ ಆರಂಭಿಕ ಸಂಘರ್ಷ; ಗುದ್ದಾಟಗಳು ತಂದೆಯ (ಬೇಡರಿಂದ ಸತ್ತ ಚಿಕ್ಕಪ್ಪ ಸ್ವಾಮಿರಾಯನ) ಆಸೆಯಂತೆ ಕಾಣಿಸುತ್ತವೆ. ಆದರೆ ಬಾಲ್ಯದಲ್ಲಿ ಬೀರಪ್ಪನ ಶಿಷ್ಯನಾಗಿ ಕಾರ್ಯನಿರ್ವಹಿಸಿದ ಬಗ್ಗೆಯಾಗಲಿ, ಅಥವಾ ಸಂಬಂಧ ಇಟ್ಟುಕೊಂಡಿರುವುದರ ಲಕ್ಷಣಗಳಾಗಲಿ ಕಾಣಿಸುವುದಲ್ಲ. ಮೇಲೆ ಹೇಳಿದಂತೆ ಬಾಲ್ಯಜೀವನವನ್ನು ಸಿದ್ಧ; ನಾಥರ ಸಂಬಂಧದ ಜೊತೆಗೆ ಪಶುಪಾಲನೆ ಮಾಡುತ್ತ ಅಲೆಮಾರಿಯಾಗಿ ಕಳೆದ. ಹಾಗಾಗಿ ಈ ಎರಡೂ ಪಂಥಗಳ ಪ್ರಭಾವ ಈತನ ವ್ಯಕ್ತಿತ್ವದ ಮೇಲೆ ಸಾಕಷ್ಟು ಆಯಿತು. ಈ ಪಂಥಗಳ ಜ್ಞಾನ ಇದ್ದ ಕಾರಣ ಸಿದ್ಧರನ್ನು ಸರಳವಾಗಿ ಸೋಲಿಸುತ್ತಾನೆ.

೪.೨.೪. ಮಾಳಿಂಗರಾಯನ ಸಂಘರ್ಷಗಳು

ಮಾಳಿಂಗರಾಯ ಹಲವಾರು ಪಂಥಗಳ ಜೊತೆ ಸಂಘರ್ಷ ಮಾಡಿದ್ದಾನೆ. ಬೇಡ ಸಮುದಾಯ ಮತ್ತು ಸಿದ್ಧಪಂಥದ ಜೊತೆಗೆ ಸಂಘರ್ಷ ಮಾಡಿರುವ ಅಂಶಗಳು ಪ್ರಧಾನ ಧಾರೆಯಲ್ಲಿ ಬಿಂಬಿತವಾಗುತ್ತವೆ. ಇವುಗಳ ಜೊತೆಗೆ ಇಷ್ಟಲಿಂಗ ಆರಾಧಕರೊಂದಿಗೆ ಮತ್ತು 'ಕೃಷಿ'ಕರೊಂದಿಗೆ ಸಂಘರ್ಷ ಮಾಡಿರುವ ಆಯಾಮಗಳು ಡೊಳ್ಳಿನ ಹಾಡುಗಳಲ್ಲಿ ಕಾಣಿಸುತ್ತವೆ. ಬೀರಪ್ಪ ಮಾಳಿಂಗರಾಯನಲ್ಲಿ ಊಟಕ್ಕೆ, ಹುಲಿಹಾಲು ಆಟಕ್ಕೆ ಹುಲಿಮರಿಯನ್ನು ಬೇಡುವುದು, ಮಾಳಿಂಗರಾಯ ಆ ಆಸೆಯನ್ನು ಪೂರೈಸುವುದು ಮಾಳಪ್ಪನ ಜೀವನ ಚರಿತ್ರೆಯ ಕಥನಗಳಲ್ಲಿ ಹೆಚ್ಚು ಜನಪ್ರಿಯ ಆಗಿರುವ ಕಥೆ. ಹುಲಿಯ ಜೊತೆ ಹಲವಾರು ಜನಪದ ಸಾಂಸ್ಕೃತಿಕ ನಾಯಕರು ಗುರುತಿಸಿಕೊಂಡಿದ್ದಾರೆ. ಮಲೆಮಾದೇಶ್ವರ, ಸೂಫಿಗಳು, ಗಾದ್ರಿಪಾಲಕನಾಯಕ, ಗೋಣಿಬಸಪ್ಪ ಮುಂತಾದವರು. ಮಾದೇಶ್ವರ ಮತ್ತು ಸೂಫಿಗಳು ಹುಲಿಯನ್ನೇ

ರುತ್ತಾರೆ. ಗೋಣಿಬಸಪ್ಪ ಹುಲಿಗಳನ್ನು ಹೂಡಿ ನೇಗಿಲು ಹೊಡೆಯುತ್ತಾನೆ. ಇವರಲ್ಲಿ ಪ್ರಭುತ್ವವನ್ನು ಏರಿನಿಲ್ಲುವ ಮತ್ತು ಶಕ್ತಿಯನ್ನು ಪ್ರದರ್ಶಿಸುವ ಪರಿಕಲ್ಪನೆಯಲ್ಲಿ ಬಳಕೆಯಾಗಿದೆ. ಇದೇ ರೀತಿ ಮಾಳಪ್ಪನಲ್ಲೂ ಶಕ್ತಿಯ ಸಂಕೇತವಾಗಿ ಬಳಕೆ ಆಗಿರುವ ಸಾಧ್ಯತೆಯಿದೆ. ಏಕೆಂದರೆ ಇದು ಬೀರಪ್ಪನ ಬೇಡಿಕೆ. ಮಾಳಿಂಗರಾಯನ ಆಸೆಯಲ್ಲ. ಇದಲ್ಲದೆ ಪಶುಪಾಲಕರಲ್ಲಿ ಸೌಹಾರ್ದ ನೆಲೆಯಲ್ಲಿ ಬಳಕೆ ಆಗಿರುವುದಕ್ಕೆ ಸಾಧ್ಯವಿದೆ. ಗಾದ್ರಿಪಾಲನಾಯಕ "ಹುಲಿಗಳಿಗೆ ಶರನಾಗಿ ದನಕರುಗಳನ್ನು ಬೇಟೆಯಾಡ ಬಾರದೆಂದು ಬೇಡಿಕೊಳ್ಳುತ್ತಾನೆ" ಇದರ ಉದ್ದೇಶ ಪಶು ಸಂಪತ್ತನ್ನು ಉಳಿಸಿಕೊಳ್ಳುವ ಪ್ರಕ್ರಿಯೆ ಆಗಿದೆ. ಇಂತಹ ಪ್ರಯತ್ನ ಮಾಳಪ್ಪ ಮತ್ತು ಬೀರಪ್ಪನಲ್ಲೂ ನಡೆದಿದೆ. ಇವರಿಬ್ಬರಲ್ಲಿರುವ ಪ್ರಕ್ರಿಯೆ ಗಾದ್ರಿಪಾಲನಾಯಕನಿಗಿಂತಲೂ ತಾಂತ್ರಿಕವಾದದ್ದು.

> "ಗಾಂಜಿಕೋರ ನಮ್ಮದೇವರ ಗಾರುಡುಗಿ ವಿದ್ಯಾ ಬೀರಣ್ಣ
> ಕಾಡಬಾರದು ಕಾಡ್ಯಾನೆ ಬೇಡಬಾರದು ಬೇಡ್ಯಾನೆ
> ಕರಗೊಳು ಕುಡಿಯಲಿಬಾರದ ಎಂಜಲು ಆಗಲಿಬಾರದ
> ಏ ನಮ್ಮ ಗುರುವ ಬೀರಣ್ಣ ಹುಲಿಗಿಣ್ಣ ಬೇಡ್ಯಾನ
> ಊಟಕ ಹುಲಿಗಿಣ್ಣ ಬೇಡ್ಯಾನ ಆಟಕ ಹುಲಿಮರಿಯೇನ"[೪೮]

ಈ ಕಥನದ ವಸ್ತು ಹಲವು ಚಾರಿತ್ರಿಕ ಅಂಶಗಳನ್ನು ಸೃಷ್ಟಿಸಿತು. ಹುಲಿಜಂತಿ ಗ್ರಾಮಕ್ಕೆ ಮೊದಲು ಇದ್ದ 'ಜಾಗೃತಪುರ' ಮತ್ತು 'ಜತ್ತಿ ನಾರಾಯಣಪುರ' ಅನ್ನುವ ಹೆಸರನ್ನು ಕಿತ್ತುಹಾಕಿತು. ಜುಲಿಜಂತಿ ಅನ್ನುವ ಹೆಸರನ್ನು ಭದ್ರಗೊಳಿಸಿಕೊಂಡಿತು. ಹುಲಿ ಮಾಳಿಂಗರಾಯನನ ಸಂಕೇತ ಆಯ್ತು. ಇವತ್ತು ಎಲ್ಲೆಲ್ಲಿ ಮಾಳಿಂಗರಾಯನ ದೇವಾಲಯಗಳು ಇವೆಯೋ ಅಲ್ಲಿ ಹುಲಿ ಚಿತ್ರಗಳನ್ನು ಕಾಣಬಹುದು. ಹಾಲುಮತ ಧರ್ಮದಲ್ಲಿ ಹುಲಿ ಅಂದರೆ 'ಮಾಳಪ್ಪ' ಮಾಳಪ್ಪ ಅಂದರೆ ಹುಲಿ ಅನ್ನುವ ಅಸ್ಮಿತೆಯನ್ನು ಪಡೆದುಕೊಂಡಿತು. ಈ ಚಾರಿತ್ರಿಕ ಕಥನದ ಹಿಂದಿನ ಧೋರಣೆಯನ್ನು; ಆ ಪಠ್ಯದೊಳಗೆ ಬಚ್ಚಿಟ್ಟುಕೊಂಡಿರುವ ವಸ್ತುವನ್ನು ಸೂಕ್ಷ್ಮವಾಗಿ ಅರಿಯಬೇಕಾಗಿದೆ. ಏಕೆಂದರೆ ಜನಪದ ಸಾಹಿತ್ಯ ಹೇಳಬೇಕಾದುದನ್ನು ನೇರವಾಗಿ ಹೇಳುವುದಿಲ್ಲ. ಹೇಳಬೇಕಾದ ವಸ್ತುವನ್ನು ರೂಪಕಗಳ ಹಿನ್ನೆಲೆಯಲ್ಲಿ ಬಚ್ಚಿಟ್ಟುಕಂಡು ಅನಾವರಣ ಮಾಡುತ್ತದೆ. ಹುಲಿ ಅನ್ನುವುದು ರೂಪಕವಾಗಿ ವ್ಯಕ್ತಿ ಸಾಂಕೇತಿಕವಾಗಿ ಬಳಕೆಯಾಗಿದೆ. ಏಕೆಂದರೆ ಹುಲಿ ಕಾಡಿನಲ್ಲಿ ಬದುಕುವ ಪ್ರಾಣಿ. ಕಾಡಿನ ರಾಜ. ಬೇಟೆ ಸಂಸ್ಕೃತಿಯ ಪ್ರತೀಕ. ಹಾಗಾಗಿ ಬೇಟೆ ಸಂಸ್ಕೃತಿಯ ನಾಯಕನ ಚಿತ್ರಣವನ್ನು ಹೇಳುವುದಕ್ಕೆ ಸಾಂಕೇತಿಕವಾಗಿ ಬಳಸಿಕೊಂಡಿರುವ ಸಾಧ್ಯತೆ ಇದೆ. ಬೀರಪ್ಪ ಹುಲಿಮರಿಯೊಂದಿಗೆ 'ಚದುರಂಗ'ದ ಆಟವನ್ನು ಆಡುವುದು, ಮಾಳಿಂಗರಾಯ ಹುಲಿಗೆ ವೇದವನ್ನು ಓದಿಸುವುದು ವ್ಯಕ್ತಿಯ ಸಂಕೇತವಾಗಿ ಗ್ರಹಿಸುವುದಕ್ಕೆ ಸಾಕಷ್ಟು ಅವಕಾಶ ಕಲ್ಪಿಸುತ್ತದೆ.

> "ಹುಲಿಯ ಬಾಯಿಲೇs
> ವೇದ ಓದಿಸೀs
> ತೋರಿದ ಅಷ್ಟು ಜನಕೋs"[೪೯]

ಬೀರಪ್ಪ, ಮಾಳಿಂಗರಾಯರಿಗೆ ತಾವು ಕೈಗೊಳ್ಳುತಿದ್ದ ಪಶುಪಾಲನ ವೃತ್ತಿಯನ್ನು ಯಶಸ್ವಿಗೊಳಿಸಿ ಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಇದಕ್ಕೆ ಬೇಟೆ (ಬ್ಯಾಡ) ಸಂಸ್ಕೃತಿಯವರು ಅಡ್ಡಿಯಾಗುತ್ತಿದ್ದರು.

ಈ ಬೇಡರು ಮಾಳಿಂಗರಾಯ ಮತ್ತು ಬೀರಪ್ಪನ ಸಂಬಂಧ ಗಟ್ಟಿಗೊಳ್ಳುವ ಸಮಯಕ್ಕಾಗಲೇ ಮಾಳಪ್ಪನ ಮನೆತನದವರಿಗೆ ಸಾಕಷ್ಟು ಹಿಂಸೆ ಕೊಟ್ಟಿದ್ದರು. ಹಲವು ಕಿಲಾರಿಗಳನ್ನು ಕೊಂದಿದ್ದರು; ಆಕ್ರಮಣ ಮಾಡಿಕೊಂಡಿದ್ದರು. ಸ್ವಾಮಿರಾಯನ ಸಹೋದರನಾದ ತುಕ್ಕಪ್ಪರಾಯನನ್ನು ಕೊಂದಿದ್ದರು. ಇವರ ಹಿಂಸೆಯನ್ನು ತಾಳಲಾರದೆ ಸ್ವಾಮಿರಾಯ ಪದೇಪದೇ ಸ್ಥಳಗಳನ್ನು ಬದಲಾಯಿಸುತ್ತಿದ್ದ. ಮಕ್ಕಳಾದ ಜಕ್ಕಪ್ಪ ಮತ್ತು ಮಾಳಪ್ಪನನ್ನು ಗುಪ್ತವಾದ ಸ್ಥಳಗಳಲ್ಲಿ ಬಚ್ಚಿಟ್ಟು ಸಾಕುತ್ತಿದ್ದ. ಬೇಡರಿಂದ ಮುಕ್ತರಾಗಿ ಜೀವನ ಮಾಡುವುದಕ್ಕೆ ಹಂಬಲಿಸುತ್ತಿದ್ದ. ನಾಥ ಮತ್ತು ಸಿದ್ಧರ ಸಹಾಯ ತಗೆದುಕೊಳ್ಳುತ್ತಿದ್ದ: ಇವರಲ್ಲಿ ಪಶುಸಂಪತ್ತನ್ನು ಉಳಿಸಿಕೊಡುವಂತೆ ಅಂಗಲಾಚುತ್ತಿದ್ದ. ಸ್ವಾಮಿರಾಯನಿಗೆ ಪಶುಪಾಲನೆ ಉತ್ಪಾದನೆಯಾಗಿತ್ತು. ಜೊತೆಗೆ ಪ್ರಾಣಿಗಳೊಂದಿಗೆ ಆತ್ಮೀಯವಾದ ಸಂಬಂಧವನ್ನು ಬೆಳೆಸಿಕೊಳ್ಳಬೇಕಾಗಿತ್ತು. ಹಾಗಾಗಿ ಪ್ರಾಣಿಗಳ ಸಂರಕ್ಷಣೆಗೆ ಆರ್ಥಿಕ ಬೆಳವಣಿಗೆಗೂ ನಮ್ಮ ಸಾಂಸ್ಕೃತಿಕ ನಾಯಕರಿಗೂ ಸಂಬಂಧವಿದೆ. ನಮ್ಮ ಸಮುದಾಯದೊಳಗೆ ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದ ಇದರ ಮಹತ್ವ ಇನ್ನೂ ಹೆಚ್ಚಿದೆ. ಹಾಗಾಗಿ ಜನಪದ ಸಾಂಸ್ಕೃತಿಕ ವೀರರು ತಮ್ಮ ಜೀವನಾವಧಿಯ ಉದ್ದಕ್ಕೂ ತಮ್ಮ ಸಮುದಾಯಕ್ಕೆ ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಸ್ವಾವಲಂಬನೆಗಾಗಿ ಹೆಚ್ಚು ಶ್ರಮಿಸುತ್ತಾರೆ. ಕೇವಲ ಪ್ರಾಣಿಗಳ ಉತ್ಪಾದನಾ ಕ್ರಮಕ್ಕಾಗಿ ಮಾತ್ರ ಶ್ರಮಿಸಲಿಲ್ಲ. ಪ್ರಾಣಿ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲವನ್ನು ಪರಿಸರದ ಸಮತೋಲನದಲ್ಲಿ ಸಂಯೋಗಿಸುವುದಕ್ಕೆ ಶ್ರಮಿಸಿದರು. ಆ ಕಾರಣಕ್ಕಾಗಿ ತಮ್ಮ ಸಾಕುಪ್ರಾಣಿಗಳಿಗೆ ಅಪಾಯವಾದಾಗ ತಡೆದುಕೊಳ್ಳುತ್ತಿರಲಿಲ್ಲ. ಹಿಂಸೆಗೊಳಿಸಿದವರ ವಿರುದ್ಧ ಹೋರಾಟ ಮಾಡುತ್ತಿದ್ದರು. ಬೀರಪ್ಪ ಈ ಚಿಂತನೆಯ ದಾರಿಯವನು. ಆ ಕಾರಣಕ್ಕಾಗಿ ಬೇಟೆ ಸಂಸ್ಕೃತಿಯ ಪ್ರತೀಕವಾದ ಹುಲಿಯ ಹಾಲನ್ನು ಬೇಡುತ್ತಾನೆ. 'ಹಾಲು' (ಬಿಳಿ) ಹಾಲುಮತ ಸಂಸ್ಕೃತಿಯ ಅಸ್ಮಿತೆಯ ಪ್ರತೀಕ. ಆದು ಶಾಂತಿಯ ಸಂಕೇತವೂ ಹೌದು. ಬೀರಪ್ಪನ ಬೇಡಿಕೆಯಲ್ಲಿ ಶಾಂತಿ ಸೌಹಾರ್ದತೆ ಭಾವನೆ ಇದೆ. ಇದು ಕೇವಲ ಬೀರಪ್ಪನ ಬೇಡಿಕೆ ಅಲ್ಲ. ಆ ಸಂದರ್ಭದ ಪಶುಪಾಲನ ಸಮುದಾಯದ ಬೇಡಿಕೆಯೂ ಆಗಿತ್ತು.

ಬೀರಪ್ಪ ಮಾಳಿಂಗರಾಯನಲ್ಲಿ ಇಟ್ಟಿರುವ ಬೇಡಿಕೆಯಲ್ಲಿ ತುಂಬಾ ಎಚ್ಚರದ ಧ್ವನಿಯಿದೆ. ಅದು ಸಂಘರ್ಷ ಮಾಡುವ ಸಂಹಾರ ಮಾಡುವ ಧೋರಣೆಯಲ್ಲ. ಹೊರನೋಟಕ್ಕೆ ಪಳಗಿಸುವ ಧೋರಣೆಯಂತೆ ಕಾಣಿಸುತ್ತದೆ; ಪಳಗಿಸುವಿಕೆಯೂ ಇದೆ. ಆದರೆ ಪಳಗಿಸುವಿಕೆ ಪ್ರಭುತ್ವದ ಧೋರಣೆಯದಲ್ಲ. ನಾಶ ಮಾಡುವ ಧೋರಣೆಯದಲ್ಲ. ಮಾನವೀಯತೆಯಿಂದ ಕೂಡಿರುವಂತದ್ದು. ತನ್ನಂತೆ ಇತರರನ್ನು ರೂಪಿಸಬೇಕು ಅನ್ನುವ ಮನಸ್ಥಿತಿಯದ್ದು. ಆ ಕಾರಣಕ್ಕಾಗಿ ಮಾಳಿಂಗರಾಯನಲ್ಲಿ ಸಂಹಾರ ಮಾಡಿ ಬಾ ಅಂತ ಹೇಳುವುದಿಲ್ಲ. ಜೀವಂತವಾಗಿ ಹಿಡಿದುಕೊಂಡು ಬಾ ಅಂತ ಹೇಳುತ್ತಾನೆ. ಮಾಳಿಂಗರಾಯ ತನ್ನ ಹತ್ತಿರ ಹಿಡಿದು ತಂದಾಗ ಆ ಪ್ರಾಣಿಯನ್ನು ತನ್ನವರಂತೆ ಕಾಣುತ್ತಾನೆ. ಹುಲಿಮರಿಗಳ ಜೊತೆ ಆಟ ಆಡುತ್ತಾನೆ. ಆಟ ಆಡುವುದು ಮತ್ತು ಕಲಿಸುವ ವಿಧಾನ 'ತಾರತಮ್ಯ ಭಾವನೆ'ಯನ್ನು ಹೊಡೆದು ಹಾಕುವ ವೈಧಾನಿಕತೆಯಾಗಿ ಇಲ್ಲಿ ಕಂಡುಬರುತ್ತದೆ. ಆದರೆ ತುಕ್ಕಪ್ಪರಾಯ ಮತ್ತು ಸ್ವಾಮಿರಾಯರು

ಈ ಧೋರಣೆಯವರಲ್ಲ. ನಮ್ಮ ಶತ್ರುಗಳಾದ ಬ್ಯಾಡರನ್ನು ಯಾರು ಕೊಲ್ಲುತ್ತೀರಿ ಎಂದು ತಮ್ಮ ಮಕ್ಕಳನ್ನು ಕೇಳುತ್ತಾರೆ.

ಮಾಳಿಂಗರಾಯ ಬೀರಪ್ಪನ ಚಿಂತನೆಗಿಂತ ಮುಂದುವರೆದ ವ್ಯಕ್ತಿಯಾಗಿ ಕಾಣಿಸುತ್ತಾನೆ. ಹುಲಿಯ ಕ್ರೂರತನವನ್ನು ಬದಲಾಯಿಸುವುದಕ್ಕೆ ಪ್ರಯತ್ನ ಪಡುತ್ತಾನೆ. ಆ ಕಾರಣಕ್ಕೆ ವೇದವನ್ನು ಓದಿಸುತ್ತಾನೆ. ಇದು ಜ್ಞಾನ ಕೊಡುವುದರ ಪರಿಕಲ್ಪನೆ. ಅಕ್ಷರ ಸಂಸ್ಕೃತಿಯ ಮೂಲಕ ಅವರ ಜೀವನ ವಿಧಾನದಲ್ಲಿ ಒಂದು ದೊಡ್ಡ ಬದಲಾವಣೆ ತರುವ ಪ್ರಯತ್ನ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಅನ್ನುವಂತೆ ಕಾಡಿನ ಸಂಸ್ಕೃತಿಯಿಂದ, ಬೇಟೆಯಾಡಿ ಜೀವ ಹಿಂಸೆ ಮಾಡುವ ಪದ್ಧತಿಯಿಂದ ಹೊರತರುತ್ತಾನೆ. ಈ ಕಾರ್ಯದ ಹಿಂದೆ ಮಾನವೀಯ ಮೌಲ್ಯವನ್ನು ಸಾರುವುದರ ಜೊತೆಗೆ "ಪಶುಸಂಪತ್ತ"ನ್ನು ಉಳಿಸಿಕೊಳ್ಳುವ ರಾಜಕಾರಣವಿದೆ. ಇವರ ಮನೆತನಕ್ಕೆ 'ಪಶು' ದೊಡ್ಡ ಆಸ್ತಿ. ಕಿಲಾರಿಗಳಾಗಿಯೇ ಸ್ವಾಮಿರಾಯ ತುಕ್ಕಪ್ಪರಾಯ ಬಾರಾಮತಿ ಮಲೆ ತೇರಾಮತಿ ಪ್ರದೇಶಗಳ ಆಡಳಿತವನ್ನು ಬಿಟ್ಟುಬಂದರು. ತುಕ್ಕಪ್ಪ ರಾಯನನ್ನು ಗುರು ಸೋನಾರಸಿದ್ಧ ಪಶುಗಳನ್ನು ಬಿಟ್ಟು ಮನೆಗೆ ಬಾ ಎಂದು ಕರೆದಾಗ ಮನೆಗೆ ಹೋಗುವುದಕ್ಕೆ ಮಾತನ್ನು ನಿರಾಕರಿಸುತ್ತಾನೆ. ಈ ನಿವಾರಣೆಯ ಹಿಂದೆ ಗುರುವಿಗಿಂತ ಪಶುಸಂಪತ್ತು ದೊಡ್ಡದು ಅನ್ನುವ ಧೋರಣೆಯಿದೆ.

ಮಾಳಪ್ಪ ಬಿಜ್ಜರಗಿ ಗ್ರಾಮದ ಕೃಷಿಕ ಸಮುದಾಯದ ವೆಂಕಣ್ಣಗೌಡ ಮತ್ತು ಸಿಂದಗಿ ನಾಡಿನ ಪದ್ಮಗೊಂಡನ ಜೊತೆ ಪಶುಗಳ ಸಂರಕ್ಷಣೆಗಾಗಿ ಹೋರಾಟ ಮಾಡುತ್ತಾನೆ. ಬಿಜ್ಜರಗಿ ವೆಂಕಣ್ಣಗೌಡ ಕೃಷಿ ಸಮುದಾಯದ ವ್ಯಕ್ತಿ. ಈತ ಕೃಷಿಗಾಗಿ ಭೂಮಿಯನ್ನು ಆಕ್ರಮಣ ಮಾಡಿಕೊಂಡಿರಬೇಕು. ಕುರಿಗಾರಿಕೆಗೆ ಅಡ್ಡಿಯನ್ನುಂಟು ಮಾಡಿರಬೇಕು. ಆ ಕಾರಣಕ್ಕಾಗಿ ಮಾಳಿಂಗರಾಯ ವೆಂಕಣ್ಣಗೌಡ ಬೆಳೆದ ಬೆಳೆಗೆ ಕುರಿಗಳನ್ನು ಬಿಟ್ಟು ಮೇಯಿಸುತ್ತಾನೆ. ಸಂಘರ್ಷದ ನಂತರ ಹುಟ್ಟುವ ಮೊದಲ ಮಗನನ್ನು "ಮಠ"ಕ್ಕೆ ಸಾಕುಮಗನಾಗಿ ಬಿಡಬೇಕೆಂದು ಹೇಳುತ್ತಾನೆ.

> "ಸಿದ್ಧ ಮಾಳಪ್ಪ ಸುದ್ದಾಗಿ ಹೇಳತಾನಾ ವೆಂಕಣ್ಣಗೌಡಗ
> ಜಳಾಜಳಾ ಬುಳ್ಳನೆಂಬ ಸಿದ್ಧ ಹುಟ್ಟಿ ಬರುತ್ತಾನೆ ನಿನ್ನೊಳ
> ಮದಲ ಹುಟ್ಟುವ ಮಗನ ಮಠಕ್ಕೆ
> ಬಿಡಬೇಕೆಂದು ಹೇಳಿಕೊಟ್ಟೊ ಫಲಗಳಾಗಿ"[೨೦]

ಮಾಳಪ್ಪನಲ್ಲಿ 'ಒಕ್ಕಲು' ಮತ್ತು 'ಶಿಶುಮಕ್ಕಳ'ನ್ನು ಪಡೆಯುವ ವಿಧಾನವಿದೆ. 'ಒಕ್ಕಲು' ಅನ್ನುವ ಪದವೇ 'ಕೃಷಿ ಸಮಾಜ'ವನ್ನು ಪ್ರತಿನಿಧಿಸುವ ಪದ. ಬಿಜ್ಜರಗಿಯ ವೆಂಕಣ್ಣಗೌಡ ಕೃಷಿಕನಾಗಿದ್ದ. 'ಇಷ್ಟಲಿಂಗ' ಆರಾಧಕ ಮನೆತನಕ್ಕೆ ಸೇರಿದ್ದ. ಬಿಜಾಪುರ ಸುತ್ತಮುತ್ತಲಿನ ಪ್ರದೇಶ ಇಷ್ಟಲಿಂಗ ಆರಾಧನೆಯ ಪ್ರಧಾನ ಕೇಂದ್ರವಾಗಿತ್ತು. ಮಾಳಪ್ಪನ ಕಾಲದಲ್ಲಿ ಇಷ್ಟಲಿಂಗ ಆರಾಧನೆ ಅಷ್ಟೊಂದು ತೀವ್ರವಾಗಿ ಜನಪದ ಸಮುದಾಯಕ್ಕೆ ತಟ್ಟಿದಂತೆ ಕಾಣಿಸುವುದಿಲ್ಲ. ಆಗತಾನೆ ತನ್ನ ಅಸ್ಮಿತೆಯನ್ನು ಭದ್ರಗೊಳಿಸಿಕೊಳ್ಳುತ್ತಿತ್ತು. ಮಾಳಿಂಗರಾಯ ಅದನ್ನು ಹೊಡೆದುಹಾಕುತ್ತಾನೆ. ಶೈವ ಭಂಡಾರ ಪಂಥದ

ಆರಾಧಕರಾಗುವಂತೆ ಮಾಡುತ್ತಾನೆ. ವೆಂಕಣ್ಣಗೌಡನನ್ನು ಸೆದೆಬಡಿಯುವುದಕ್ಕಾಗಿಯೇ ಆತನ ಆರ್ಥಿಕ ಸಂಪನ್ಮೂಲವಾದ 'ಬೆಳೆ'ಯನ್ನು ಹಾಳು ಮಾಡುತ್ತಾನೆ. ಪಶುಪಾಲಕರು 'ಕೃಷಿಕರ' ಮೇಲೆ ಪ್ರಭುತ್ವ ಸಾಧಿಸುವ ತಂತ್ರವಿದು. ಮಾದಪ್ಪ, ಮೈಲಾರಲಿಂಗರು ಸಹ ಇಂತಹ ತಂತ್ರಗಳನ್ನು ಮಾಡುತ್ತಾರೆ.

ಹುಲಿ ಅನ್ನುವುದು ಇವತ್ತಿನ ಜಾಗತೀಕರಣದಂತಹ; ಯಜಮಾನಿಕೆಯಂತಹ ಶಕ್ತಿಯಾಗಿ ಕಾಣಿಸುತ್ತದೆ. ಅಂತಹ ಭಯಂಕರ ಶಕ್ತಿಯನ್ನು ಹೇಗೆ ಗೆಲ್ಲಬಹುದು ಅನ್ನುವುದನ್ನು ಮಾಳಿಂಗರಾಯ ಗೆದ್ದು ತೋರಿಸಿದಂತಿದೆ.

ಮಾಳಿಂಗರಾಯ ಅಮೋಘಸಿದ್ಧನ ಜೊತೆ ಮಾಡಿರುವ ಸಂಘರ್ಷ ಕುತೂಹಲಕರವಾದದ್ದು. ಅಮೋಘಸಿದ್ಧನ ಸ್ಥಳ ಅರಕೇರಿ. ಸಿದ್ಧ ಪುರುಷರಲ್ಲಿ ಈತನದು ದೊಡ್ಡ ಹೆಸರು. ಸಿದ್ಧಿಗಳ ನಾಯಕ ಆಗಿದ್ದ. "ಸಿದ್ಧರ ಸಿದ್ಧ" ಅನ್ನುವ ಬಿರುದು ಈತನಿಗಿದೆ. ಈತ ಶಿವನಲ್ಲಿ ನಾನೇ ಶ್ರೇಷ್ಠ ಶೈವ ಆರಾಧಕ ಅಂತ ಸಾರುತ್ತಿದ್ದ. ಈ ಸೊಕ್ಕನ್ನು ಮುರಿಯಬೇಕು ಅನ್ನುವುದು ಬೀರಪ್ಪನ ಆಸೆ. ಆ ಕಾರಣಕ್ಕಾಗಿ ಬೀರಪ್ಪ ಅಮೋಘಸಿದ್ಧನಲ್ಲಿದ್ದ ಅಜಾನುವೃಕ್ಷದ ಹೂವು ಬೇಕೆಂದು ಮಾಳಪ್ಪನಲ್ಲಿ ಬೇಡಿಕೆ ಇಡುತ್ತಾನೆ. ಈ ಬೇಡಿಕೆ ಅಮೋಘಸಿದ್ಧನ ಜೊತೆ ಸಂಘರ್ಷ ಮಾಡುವುದಕ್ಕೆ ಮಾಳಿಂಗರಾಯನನ್ನು ಅಣಿಗೊಳಿಸುವ ತಂತ್ರವಷ್ಟೆ. ಗುರುವಿನ ಬೇಡಿಕೆಯನ್ನು ಈಡೇರಿಸಬೇಕು ಅನ್ನುವ ಉದ್ದೇಶಕ್ಕೆ ಮಾಳಪ್ಪ ಅಮೋಘಸಿದ್ಧನ ಜೊತೆ ಸಂಘರ್ಷ ಮಾಡುತ್ತಾನೆ.

ಅಮೋಘಸಿದ್ಧ ಮತ್ತು ಮಾಳಪ್ಪರ ಸಂಘರ್ಷಕ್ಕೆ ಬಳಕೆಯಾಗುವ ಪವಾಡದ ವಸ್ತುಗಳು ತುಂಬಾ ಆಕರ್ಷಣೀಯವಾದವು. ಇವರಿಬ್ಬರ ನಡುವೆ ಮಳೆ ತರಿಸುವ ಮತ್ತು ಪಶುಗಳನ್ನು ತಮ್ಮ ಹತ್ತಿರ ಕರೆದುಕೊಳ್ಳುವ ಪವಾಡಗಳು ನಡೆಯುತ್ತವೆ.

"ಎತ್ತು ತಿರುವಲ್ಲಿಬೇಕಯ್ಯ ಹಿಂದಕ್ಕೆ ಹೊಳ್ಳಲಿಬೇಕಯ್ಯ
ಬಾರೊ ಬಾರೋ ಎಯೆಪ್ಪ ನನ್ನ ಎತ್ತುನಲ್ಲೇಳ
ನಿನ್ನ ಎತ್ತುನಲ್ಲಪ್ಪ ನೀನೇ ತಿರುವಲಿಬೇಕಯ್ಯ
ಒಳ್ಳೆದು ಒಳ್ಳೆದು ಅಂದಾನ ಯೋಗಿ ಅಮ್ಮುಗಿಸಿದ್ಧನ
ಮುಂದಕ ಸರಿದು ನಿಂತಾನೆ ಎತ್ತಿನ ಕೈಮಾಡಿ ಕರದಾನ
ಎತ್ತಿನ ಕೈಮಾಡಿ ಕರೆದಿದ್ದ ಹಿಂದಕ್ಕ ಬರುವುತಾವೇನ"[೫೧]

ಇವರಿಬ್ಬರು ಪಶುಪಾಲನ ಸಾಂಸ್ಕೃತಿಕ ನಾಯಕರು ಆಗಿರುವುದರಿಂದ ಪಶುಗಳೇ ಸಂಘರ್ಷಕ್ಕೆ ವಸ್ತುವಾಗಿವೆ. ಇದರಲ್ಲಿ ಅಮೋಘಸಿದ್ಧ ಸೋಲುತ್ತಾನೆ. ಯಾರು ಪಶುಗಳ ಜೊತೆ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿರುತ್ತಾರೋ ಅವರು ಗೆಲ್ಲುತ್ತಾರೆ ಅನ್ನುವುದು ಮಾಳಿಂಗರಾಯ ವಿಜಯ ತಿಳಿಸಿಕೊಡುತ್ತದೆ. ಸೋತ ನಂತರ ಅಮೋಘಸಿದ್ಧ ಐದು ಕುರಿಗಳನ್ನು ಬೇಡುವುದು ಆಕರ್ಷಣೀಯ.

"ಐದು ಬೀಜ ಮರಿ ಅಮೋಘಸಿದ್ಧ
ಮಾಳಪ್ಪ ಬೇಡ್ಯಾರಾ
ಐದು ಮರಿಗಳ ಸಿದ್ಧ ಮಾಳಿಂಗರಾಯ
ಕೊಟ್ಟಲ್ಲಿ ಕಳುಹ್ಯಾರಾ"[೫೨]

ಅಮೋಘಸಿದ್ಧನಿಗೆ ಕುರಿಕಾಯುವ ವೃತ್ತಿಯನ್ನು ಕೈಗೊಳ್ಳಬೇಕು ಅನ್ನುವ ಉದ್ದೇಶವಿದೆ. ಆ ಕಾರಣಕ್ಕಾಗಿ ಮಾಳಿಂಗರಾಯನಲ್ಲಿ ಐದು ಬೀಜದ ಕುರಿಗಳನ್ನು ಬೇಡುತ್ತಾನೆ. ಈ ಬೇಡಿಕೆಯನ್ನು ಮಾಳಿಂಗರಾಯ ತಿರಸ್ಕಾರ ಮಾಡದೆ 'ನಾನು ಐದು ಕುಡತೀನಿ ಅಣ್ಣನ ಬಲ್ಲ್ಯಾಹೋಗಯ್ಯ' ಎಂದು ಹೇಳಿ ಕಳುಹಿಸುತ್ತಾನೆ. ಬದುಕನ್ನು ಕಟ್ಟಿಕೊಳ್ಳಬೇಕು ಅನ್ನುವ ಹಂಬಲ ಇದ್ದವರಿಗೆ ಮಾಳಿಂಗರಾಯ ಸಹಾಯ ಮಾಡುತ್ತಿದ್ದ. ಈತ ಕೇವಲ ಸಿದ್ಧಿಯಿತೆ ಸಿದ್ಧಾಟಿಕೆಯಿಂದ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಅನ್ನುವ ತತ್ವವನ್ನು ನಂಬಿದವನು. ಅಮೋಘಸಿದ್ಧನಿಗೆ ಐದು ಕುರಿಗಳನ್ನು ಕೊಡುವುದರ ಮುಖಾಂತರ ಆತನಿಗೆ ತಿಳಿಸಿದವನು. ಆ ತಿಳುವಳಿಕೆಯನ್ನು ತನ್ನ ಕುಟಂಬದವರಿಗೂ ಹೇಳುತ್ತಿದ್ದ.

ಸಿದ್ಧಿ ಚಮತ್ಕಾರ ಮಾಡುವುದರಲ್ಲಿ
ಸುಖವಿಲ್ಲ ಎಳ್ಳಷ್ಟು ಅಂದಾನಾ"[೫೩]

೪.೨.೪.೧. ಮಾಳಿಂಗರಾಯ ಬೀರಪ್ಪನ ಪೂಜಾರಿ

ಕರ್ನಾಟಕದ ಹಾಲುಮತ ಸಮುದಾಯದಲ್ಲಿ 'ಪೂಜಾರಿಕೆ' ಕುಲಕ್ಕೆ ಸೇರಿದ ಮನೆತನಗಳಿವೆ. ಈ ಪೂಜಾರಿ ಮನೆತನದವರ ವೃತ್ತಿ ಬೀರಪ್ಪನ ದೇವಾಲಯಗಳನ್ನು ಪೂಜೆ ಮಾಡುವುದು. ದಕ್ಷಿಣ ಕರ್ನಾಟಕದ ಹಲವು ಗ್ರಾಮಗಳಲ್ಲಿ ಪೂಜಾರಿಗಳ ಮನೆಗಳು ಬೀರಪ್ಪನ ದೇವಾಲಯದ ಪಕ್ಕದಲ್ಲಿವೆ. ಬೀರಪ್ಪನ ಗರ್ಭಗುಡಿಯ ಒಳಗೆ ಈ ಪೂಜಾರಿಗಳಿಗೆ ಮಾತ್ರ ಪ್ರವೇಶ. ಮೀಸಲು, ಸೂತಕ, ಉತ್ಸವ ಮತ್ತು ತೋಪುಜಾತ್ರೆ ಮುಂತಾದ ವಿಶೇಷ ಪೂಜೆಗಳಲ್ಲಿ ಪೂಜಾರರ ಪಾತ್ರ ಹಿರಿದಾಗಿರುತ್ತದೆ. ಹುಲಿಜಂತಿ ಗ್ರಾಮದಲ್ಲಿರುವ ಮಾಳಿಂಗರಾಯನ ವಂಶಸ್ಥರ ಸುಮಾರು ನೂರವೈತ್ತು ಮನೆಗಳು 'ಪೂಜಾರಿಕೆ' ಕುಲಕ್ಕೆ ಸೇರಿದಂಥವು. ಮಾಳಪ್ಪನು ಸಹ ಬೀರಪ್ಪನ ಪೂಜಾರಿ ಆಗಿದ್ದ.

"ಮಾನವರಲ್ಲಿ ಮನಿಗೇನೆ ಶಿವನೂರಲ್ಲಿ ಶಿವಗೇನೆ
ಸಿಡಿಯಾಣ ದೇವರ ಪೂಜಾರೆ ಶಿವಗೇನಿ ಮಾಳಿಂಗರಾಯನ
ತಂದೇಳ ಶ್ಯಾಮರಾಯನೆ ತಾಯೇಳ ಕಾನವ್ವನೆ"[೫೪]

ಹುಲಿಜಂತಿ ಗ್ರಾಮದಲ್ಲಿರುವ ಕೆಲವು 'ಪೂಜಾರಿಕೆ' ಮನೆತನದವರು 'ಒಡೆಯರು' ಎಂದು ಹೇಳಿಕೊಳ್ಳುತ್ತಿದ್ದಾರೆ. ಇವತ್ತು ತಮ್ಮ ಹೆಸರುಗಳ ಮುಂದೆ ಒಡೆಯರ್ ಅಂತ ಸೇರಿಸಿಕೊಳ್ಳುತ್ತಿದ್ದಾರೆ. ಮಾಳಿಂಗರಾಯ ಮಹಾಕಾವ್ಯವನ್ನು ಹಾಡಿದ 'ಶ್ರೀ ಅಡಿವೆಪ್ಪ ಒಡೆಯರು' ಅವರು 'ಪೂಜಾರಿಕೆ' ಮನೆತನಕ್ಕೆ ಸೇರಿದವರು. 'ಒಡೆಯರು' ಎಂದು ಸೇರಿಸಿಕೊಂಡಿದ್ದಾರೆ. ಇದು ಅಮೋಘಸಿದ್ಧ ಪಂಥದ ಡೊಳ್ಳಿನ ಹಾಡುಗಾರರಿಗೆ ವಾದ ಪ್ರತಿವಾದಕ್ಕೆ ವಸ್ತುವಾಗಿದೆ. ಹಾಗೇ ಸೇರಿಸಿಕೊಂಡಿರುವುದು ಅಪಮೌಲ್ಯ ಅನ್ನುವ ರೀತಿಯಲ್ಲಿ ವಾದ-ವಿವಾದ ನಡೆಯುತ್ತಿದೆ. ಚಿತ್ರದುರ್ಗ, ತುಮಕೂರು, ಹಾಸನ, ಮಂಡ್ಯ, ಮೈಸೂರು ಮತ್ತು ಚಿಕ್ಕಮಂಗಳೂರು ಜಿಲ್ಲೆಗಳಲ್ಲಿರುವ 'ಪೂಜಾರಿಕೆ' ಕುಲದವರಲ್ಲಿ ಒಡೆಯರಾಗಬೇಕೆಂಬ ಹಂಬಲವಿಲ್ಲ. ಈ ಭಾಗದವರಿಗೆ ಮಾಳಿಂಗರಾಯನ ಜೊತೆ ಆರಾಧನೆಯ ಸಂಬಂಧಗಳಿಲ್ಲ. ಪೂಜಾರಿಕೆ ಮನೆತನದವರಿಗೂ ಮತ್ತು ಹುಲಿಜಂತಿ ಗ್ರಾಮದ ಪೂಜಾರಿಕೆ ಮನೆತನದ ವರಿಗೂ ಯಾವುದೇ ಪಾರಂಪರಿಕ ಸಂಬಂಧಗಳು ಉಳಿದಿಲ್ಲ.

೪.೨.೫. ಬಂಡವಾಳಶಾಹಿ ಅಭಿವ್ಯಕ್ತಿ ವಸ್ತುವಾಗಿ ಮಾಳಿಂಗರಾಯ

ಒಂದು ಜನಪದ ದೈವದ ಜೊತೆ ಮತ್ತೊಂದು ದೈವ ಇಟ್ಟುಕೊಂಡಿದ್ದ ಸಂಬಂಧಗಳನ್ನು ಇವತ್ತು ಬಂಡವಾಳಶಾಹಿ ವ್ಯವಸ್ಥೆ ಹೊಡೆದು ಹಾಕುತ್ತಿದೆ. ಅವಿಭಕ್ತ ಕುಟುಂಬಗಳನ್ನು ವಿಭಕ್ತ ಕುಟುಂಬಗಳನ್ನಾಗಿ ರೂಪಿಸುತ್ತಿವೆ. ಹಾಲುಮತದ ದೈವಗಳ ಮೇಲೆ ಈ ಪರಿಣಾಮ ಇತರ ಸಮುದಾಯ ದೈವಗಳಿಗಿಂತ ಹೆಚ್ಚಾಗಿದೆ. ಈ ಸೃಷ್ಟಿಯ ಪ್ರಧಾನವಾದ ಕಾರ್ಯಕರ್ತರು ಡೊಳ್ಳಿನ ಹಾಡುಗಾರರು. ಡೊಳ್ಳಿನ ಹಾಡುಗಳನ್ನು ಹಾಡುವ ತಂಡಗಳಲ್ಲಿ ಎರಡು ಪಂಥಗಳಿವೆ. ಒಂದು ಅಮೋಘಸಿದ್ಧ ಪಂಥ ಮತ್ತೊಂದು ಮಾಳಿಂಗರಾಯನ ಪಂಥ. ಆ ಪಂಥದವರು ಆಯಾ ಆರಾಧಕನ ಹೆಸರುಗಳಲ್ಲಿ ತಂಡಗಳನ್ನು ಕಟ್ಟಿಕೊಂಡಿದ್ದಾರೆ. ಮಾಳಿಂಗರಾಯನ ಪಂಥದವರು ಮಾಳಿಂಗರಾಯನೇ ಶ್ರೇಷ್ಠವೆಂದು, ಅಮೋಘಸಿದ್ಧ ಶ್ರೇಷ್ಟವಲ್ಲವೆಂದು, ಮಾಳಿಂಗರಾಯನಿಗಿಂತ ಸಣ್ಣವನೆಂದೂ ಆತನ ಪವಾಡಗಳು ಕೇವಲ ಕಲ್ಪಿತವಾದವುಗಳೆಂದು ಹಾಡುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಅಮೋಘಸಿದ್ಧನ ಪಂಥದವರು ಹಾಡುತ್ತಾರೆ.

ಇಲ್ಲಿ ಸಿದ್ಧ ಮತ್ತು ಶೈವ ಪಂಥಗಳ, ಭಂಡಾರ ಮತ್ತು ವಿಭೂತಿ ಪಂಥಗಳ, ಮಾಂಸಹಾರ ಮತ್ತು ಸಸ್ಯಾಹಾರಿ ಸಮುದಾಯಗಳ (ಉಪಸಮುದಾಯಗಳ) ಮುಖಾಮುಖಿ ಕಾಣಿಸುತ್ತದೆ. ಆದರೆ ಇದು ವಾಸ್ತವವಾದುದಲ್ಲ, ನಾಟಕೀಯವಾದದ್ದು. ಹಣಗಳಿಕೆಗಾಗಿಯೇ ಹೊಡೆದಾಡುವ ವೈಧಾನಿಕತೆಗಾಗಿ ಹುಸಿ ಸತ್ಯಗಳನ್ನು ಸೃಷ್ಟಿಸಿ ಹಾಡುವಂಥದ್ದು ಉದ್ದೇಶಪೂರಿತವಾದದು. ಸಮಷ್ಟಿ ನೆಲೆಯದಲ್ಲ, ವ್ಯಕ್ತಿ ನೆಲೆಯದ್ದು. ಕೇವಲ ಆಧುನಿಕ ಸಮೂಹ ಸಂವಹನ ಮಾಧ್ಯಮಗಳ Contextಗಾಗಿಯೇ ಸೃಷ್ಟಿಯಾದದ್ದು. ಹಾಗೆಂದು ಇದು ಕೇಳುಗರ ಮೇಲೆ ಪರಿಣಾಮ ಬೀರುವುದಿಲ್ಲ, ಗಂಭೀರವಾದುದಲ್ಲ ಎಂದರ್ಥವಲ್ಲ. ಈಗಾಗಲೇ ಹಲವು ಪರಿಣಾಮಗಳನ್ನು ಸೃಷ್ಟಿಸಿದೆ. ಸಾಂಸ್ಕೃತಿಕ ವೀರರ ಸುತ್ತ ಹೆಣೆದುಕೊಂಡಿದ್ದ ಚರಿತ್ರೆಯನ್ನು ಹೊಡೆದು ಹಾಕಿದೆ. ಭಂಡಾರ ಪಂಥದ ದೈವವನ್ನು ಆರಾಧಿಸುವ ಮತ್ತು ಸಿದ್ಧ ವಿಭೂತಿ ಪಂಥವನ್ನು ಆರಾಧಿಸುವ ಹಾಲುಮತ ಜನಸಮುದಾಯಗಳು ಬೇರೆ ಬೇರೆ ಅನ್ನುವ ವರ್ಗೀಕರಣವನ್ನು ಸೃಷ್ಟಿಸಿದೆ. ಈ ಪರಿಭಾಷೆಯನ್ನು ಇವತ್ತು ಡೊಳ್ಳುಹಾಡುಗಳ ಕಲಾವಿದರು ಮತ್ತು ಕೇಳುಗರು ಪರೋಕ್ಷವಾಗಿ ಒಪ್ಪಿಕೊಂಡಂತಿದೆ. ವರ್ಗೀಕರಣದ ನೆಲೆಯಲ್ಲಿ ಹಾಡುಗಳನ್ನು ಹಾಡುತ್ತಿದ್ದಾರೆ. ಎರಡು ಪಂಥಗಳು, ಎರಡು ಗುಂಪಿನ ನಾಯಕರು ಹಾಲುಮತ ಧರ್ಮವನ್ನು ಬೆಳೆಸಿದ್ದಾರೆ. ಸಮೀಕರಣವಾಗಿ ಬದುಕಿದ್ದಾರೆ. ಮಾಳಿಂಗರಾಯನ ಮನೆತನದವರು 'ಸಿದ್ಧಪಂಥ'ದ ನಾಯಕರುಗಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದರು. ಸಿದ್ಧರಿಂದ ಗುರುದೀಕ್ಷೆ ಪಡೆಯುತ್ತಿದ್ದರು. ಸ್ವತಃ ಸಿದ್ಧರಾಗುತ್ತಿದ್ದರು. ಮಾಳಿಂಗರಾಯನ ಮೊಮ್ಮಗ ಬರಗಾಲಸಿದ್ಧ. ಈತನು ಸಿದ್ಧಪಂಥದಲ್ಲಿ ಹೆಸರು ಮಾಡಿದವನು. ಸ್ವತಃ ಮಾಳಿಂಗರಾಯನೇ ಸಿದ್ಧನಾಗಿದ್ದ. ಆ ಕಾರಣಕ್ಕೆ ಸಿದ್ಧಮಾಳಪ್ಪನಾಗಿ ಡೊಳ್ಳಿನ ಹಾಡುಗಳಲ್ಲಿ ಪ್ರತಿಬಿಂಬಿತನಾಗುತ್ತಾನೆ. ಸಿದ್ಧ ತಾಣಗಳ ಜೊತೆ ಸಂಬಂಧವಿಟ್ಟುಕೊಂಡಿದ್ದ. ಅದು ಕೇವಲ ಸಂಘರ್ಷದ ಸಂಬಂಧವಲ್ಲ. ತಾತ್ವಿಕತೆಯ ಸಂಬಂಧ. ಅಮೋಘಸಿದ್ಧ, ಅಮಲಸಿದ್ಧ ಮುಂತಾದವರ ಜೊತೆ ಸಂಘರ್ಷ ಮಾಡಿರುವುದು ಅವರು ಅನುಸರಿಸುತ್ತಿದ್ದ ಪಂಥವನ್ನು ಹೊಡೆದು ಹಾಕುವುದಕ್ಕಾಗಿಯೇ

ಅಲ್ಲ. ತನ್ನ ವ್ಯಾಪ್ತಿ ವಿಸ್ತಾರಕ್ಕಾಗಿ. ಆದರೆ ಕೇವಲ ಸಿದ್ಧಪಂಥದಲ್ಲಿಯೇ (ಸಿದ್ಧಿಯತೆಯಲ್ಲಿಯೇ) ಜೀವನ ಕಳೆಯುವುದು ವ್ಯರ್ಥ ಅನ್ನುವ ಧೋರಣೆಯನ್ನು ಹೊಂದಿದ್ದ. ಆದರೆ ಸಿದ್ಧಪಂಥವನ್ನಾಗಲಿ, ಸಿದ್ಧಪಂಥವನ್ನು ಅನುಸರಿಸುತ್ತಿದ್ದ ವ್ಯಕ್ತಿಗಳನ್ನಾಗಲಿ ವಿರೋಧಿಸಲಿಲ್ಲ. ಇದಾವುದನ್ನು ಈ ಕಲಾವಿದರು ಹೇಳುತ್ತಿಲ್ಲ. ಇವತ್ತು ಡೊಳ್ಳುಹಾಡುಗಳಲ್ಲಿ 'ಸಿದ್ಧಪಂಥ' ಪ್ರಧಾನವಾದ ವಸ್ತು ಆಗುತ್ತಿಲ್ಲ. ಬದಲಾಗಿ ವಿಭೂತಿ ಆರಾಧನೆ ಪ್ರಧಾನವಾದ ವಸ್ತುವಾಗುತ್ತಿದೆ. ಆದರೆ ವಿಭೂತಿ ಪಂಥವನ್ನು ನೇರವಾಗಿ ಪ್ರತಿಬಂಬಿಸದೆ ಸಿದ್ಧಪಂಥವನ್ನು ಪ್ರತಿಬಿಂಬಿಸುತ್ತಿದ್ದಾರೆ. ಇದಕ್ಕೆ ಅಮೋಘಸಿದ್ಧನ ಪಂಥದವರು ವಿಭೂತಿ ಆರಾಧಕರಾಗಿರುವುದು ಕಾರಣವಾಗಿದೆ. ಇವರ ಜೊತೆಗೆ ಲಿಂಗಾಯತರು ಸೇರಿಕೊಳ್ಳುತ್ತಿದ್ದಾರೆ. ಕೆಲವು ಲಿಂಗಾಯತರು ಅಮೋಘಸಿದ್ಧನ ಶಿಷ್ಯರಾಗಿರುವುದು ಇದಕ್ಕೆ ಕಾರಣ. ಲಿಂಗಾಯತ ಡೊಳ್ಳು ಹಾಡುಗಳ ಕಲಾವಿದರು ಅಮೋಘಸಿದ್ಧನ ಪಂಥಕ್ಕೆ ಸೇರಿಕೊಳ್ಳುತ್ತಿದ್ದಾರೆ. ವಿಭೂತಿಯನ್ನು ಬಲಪಡಿಸಬೇಕು ಎನ್ನುವ ಹಂಬಲ ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಿವೆ. ಇದಕ್ಕೆ ಅವಕಾಶ ಕಲ್ಪಿಸಬಾರದು ಅನ್ನುವ ಛಲ ಮಾಳಿಂಗರಾಯನ ಪಂಥದವರದು. ಈ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕವಾಗಿ ವರ್ಗೀಕರಣ ನಡೆಯುತ್ತಿದೆ. "ಮಾಳಿಂಗರಾಯ ನಮ್ಮಾಂವ ಅಮೋಘಸಿದ್ಧ ನಿಮ್ಮಾಂವ" ಅನ್ನುವ ಶೀರ್ಷಿಕೆಗಳ ಕ್ಯಾಸೆಟ್‌ಗಳು ಬಂದಿವೆ.

> "ನಂಬಿಗಿ ಇಲ್ಲೋ ನಮ್ಮ ದೇವರ ಮ್ಯಾಗ | ನಿಂದೆ ಆಡತೀದಿ
> ಹಾಡಿನ ಒಳಗ ಏನಂತ ಹೇಳಲಿ ನಿಮಗೆ | ಹಂದಿ
> ಆಗುತೀರಿ ಮುಂದಿನ ಜಲ್ಮದಾಗ"[೫೫]

ದೈವಗಳ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ. ದೈವಗಳನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಇತರ ದೈವಗಳೊಂದಿಗಿನ ಸಂಬಂಧಗಳನ್ನು ಹೊಡೆದು ಹಾಕುತ್ತಾರೆ. ಹಾಗಾಗಿ ಮಾಳಿಂಗರಾಯನನ್ನು ಭಂಡಾರ ಪಂಥದ ದೈವವಾಗಿ, ಕೆಲವು ಗೋತ್ರಗಳ, ಕುಲಗಳ ಆರಾಧನಾ ದೈವವಾಗಿ ರೂಪಿಸುತ್ತಿದ್ದಾರೆ. ಹಾಗಾಗಿ ಮಾಳಿಂಗರಾಯ ಏಕರೂಪಿ ದೈವವಾಗಿ ಉಳಿದಿಲ್ಲ.

೪.೨.೬. ಮಾಳಿಂಗರಾಯನ ತಾತ್ವಿಕತೆ

> "ಮಾಳಿಂಗರಾಯನ ಹಾಲಿನ ಬಿಂದಿಗ್ಯೆತಿ ಹಾಲುಮತದಾಗ ಮೇಲವನು
> ಹಾಲುಮತದಾಗ ಮೇಲವನು ಅದು ಯಾವ ಜಾಗದಾಗ್ಯೆತವನು
> ಕ್ಯಾಣಗನೊರೆಂಬ ಉರಂದಿನೋ ಕರಿಸಿದ್ಧನ ಪಾಳೆಯೊಂದಿನೋ
> ಆ ಬಿಂದಗಿಯ ಗಗನಕ ಹಾರಿಸುವನು ಮೇಲೆ ಬಿಟ್ಟ ಅಂತರಲಿ ನಿಂದ್ರುಸುವನು
> ಸೀಗೆ ಹುಣ್ಣಿಮೆ ಸಿರಿ ಬೆಳದಿಂಗಳ ಹಾಲಿನಬ್ಬ ಮಾಳಪ್ಪ ಹಾಕಿದನೊ
> ಹಾಲಿನಬ್ಬ ಮಾಳಪ್ಪ ಹಾಕಿದನೊ ಸಿದ್ಧರ ದಂಡ ಉಣಿಸಿದನೋ
> ಮುವತ್ಮೂರು ಕೋಟಿಸಿದ್ಧರೊಳಗ ಭಕ್ತಿವಂತನವ ಮಾಳಪ್ಪನೋ
> ಅವನು ಕೊಟ್ಯಾನುಕೋಟಿ ಪುಣ್ಯದವನೋ ಶಿವ ಶಿಖರಕೆ ಮುಂಡಾಸ ಸುತ್ತಿದವನೊ
> ಕ್ಯಾಡ ಬಬ್ಬುಲಿ ಗುಡ್ಡದೊಳಗ ಭಂಡಾರ ದಟ್ಟಿ ಹಾಕಿದವನೋ
> ಅಲ್ಲಿ ಏಳುನೂರು ಕುರಿಗಳೂ ಹಿಂಡಿದನೋ
> ರಾತ್ರಿ ಬ್ಯಾಸಗಿ ಮಳೆಗಾಲ ನಿದ್ದಿ ನೀರಡಕೆ ಅರಿಯದವನೋ
> ಗಂಡು ತೋಳಿನ ಮಿಂಡನ ಕರದ ಹಿಂಡ ತೋಳ ಗಂಡ ಬಾರದವನೋ
> ಹಾಲುಬಾನವ ನೀಡಿದವನೋ ಅವ ಹಿಂಡ ಕಾಯಲು ಹೇಳದ

ಸಿದ್ಧರೊಳಗ ಶಿವಗೇನಿ ಅವನು ಮಾನವರೊಳಗ ಮನೆಗೇನಿನವನು
ಎಳೆಮರಿಸಂಗಟ ಮಾತನಾಡಿದವನೋ ಆರ್ತ ತೀರ್ಥದಾಗ ಕರಿಯ ಮಲ್ಲಿಗೆ ಹೂವ ತಂದವನೊ
ತನ್ನ ಗುರುವಿಗೆ ಮುಟ್ಟಿಸಿದ ಗುಣವನಂತನೊ ಕರಿದೇವರ ಕದನೆಕ್ಕಿದ್ದನೋ"[೫೧]

ಮಾಳಿಂಗರಾಯ ಕರಿಯದೇವರ (ಬೀರಪ್ಪ-ಕರಿಯದೇವರು<ಕರೇದೇವರು) ಶಿಷ್ಯ, ಪೂಜಾರಿ ಮಾಳಿಂಗ ರಾಯನ ಆರಂಭಿಕ ಕಾಲದ ಕಾರ್ಯಚಟುವಟಿಕೆಗಳನ್ನು ಹೊರತುಪಡಿಸಿ ಉಳಿದ ಕಾರ್ಯಚಟುವಟಿಕೆಗಳು ಬೀರಪ್ಪನ ಆಸೆಗೆ ಅನುಗುಣವಾಗಿ ಪೂರೈಕೆಯಾದಂತವು. ಆರಂಭಿಕ ಕಾಲದ ಚಟುವಟಿಕೆಗಳು ತಂದೆ ತುಕ್ಕಪ್ಪರಾಯನ ಆಸೆಯನ್ನು ಪೂರೈಸುವುದಕ್ಕಾಗಿ ಸೀಮಿತವಾದಂತವು. ನಂತರದ ಕಾರ್ಯಗಳು ಬೀರಪ್ಪನ ಆಸೆಗೆ ಅನುಗುಣವಾಗಿ ನಡೆದಂತವು. ಈ ಕಾರ್ಯಗಳ ಹಿಂದೆ ಮಾಳಪ್ಪನ ವೈಯಕ್ತಿಕ ಉದ್ದೇಶ ಇದ್ದಂತೆ ಕಾಣಿಸುವುದಿಲ್ಲ. ಗುರು ಸೇವೆಯೇ ತನ್ನ ಜೀವನ ಅಂದುಕೊಂಡವನು. ಮಾಳಿಂಗ ರಾಯನ ತಂದೆ-ತಾಯಿಗಳು ಈ ಪರಿಕಲ್ಪನೆಯಲ್ಲಿಯೇ ಬದುಕಿದಂತವರು. ಗುರು ಸೇವೆ ಮಾಡುವುದಕ್ಕೆ ಸಾಮ್ರಾಜ್ಯಗಳ ಆಡಳಿತವನ್ನು ಬಿಟ್ಟು ಬಂದವರು. ಪಶುಪಾಲನೆ ವೃತ್ತಿಯನ್ನು ಕೈಗೊಂಡವರು. ಆದರೆ ಮಾಳಪ್ಪ ಗುರು ಬೀರಪ್ಪನಗಿಂತ ಹೆಚ್ಚು ಜನಪ್ರಿಯ. ಈತನ ಸಾಹಸಕ್ಕೆ ಮೆಚ್ಚಿ ಗುರು ತನ್ನ ಗದ್ದುಗೆಯಲ್ಲಿ ಸಮಪಾಲು ಬಿಟ್ಟಕೊಟ್ಟ. ನನ್ನಂತೆ ನೀನು ಜನಪ್ರಿಯ ಆಗು ಅಂತ ಹೇಳಿದನೆಂದು ಹೇಳುವ ಡೊಳ್ಳಿನ ಹಾಡುಗಳಿವೆ. ಗ್ರಾಮದ ಬೀರದೇವಾಲಯದಲ್ಲಿ ಗುರುಶಿಷ್ಯರು ಇರುವ ಗದ್ದುಗೆ ಇದೆ. ಮಾಳಪ್ಪನ ನಿಷ್ಠುರತೆಯನ್ನು ಮೆಚ್ಚಿ ಬೀರಪ್ಪ ತನ್ನ ಅರ್ಧ ಗದ್ದುಗೆಯನ್ನು ಬಿಟ್ಟುಕೊಟ್ಟ ಅನ್ನುವ ಕಥೆಗಳು ಇಲ್ಲಿ ಪ್ರಚಲಿತದಲ್ಲಿವೆ.

ಮಾಳಿಂಗರಾಯ ನಾಥಪಂಥದ ಪ್ರಭಾವಕ್ಕೆ ಒಳಗಾಗಿ, ಕ್ರಮೇಣ ಸಿದ್ಧಪಂಥವಾಗುವ ಸಂಕ್ರಮಣ ಅವಸ್ಥೆಯ ರೂಪದಲ್ಲಿ ಬದುಕಿ ಕೊನೆಗೆ ಶೈವನಾಗಿದ್ದಾನೆ. ಬೀರಪ್ಪನ ಪೂಜೆಯ ಆಯ್ಕೆ ಶೈವ ಆರಾಧನೆಯ ಆಯ್ಕೆ. ಭಂಡಾರ ಆರಾಧಕ. ಭಂಡಾರ ಆರಾಧನೆಯಲ್ಲಿ ಅಪಾರ ಶ್ರದ್ಧೆಯುಳ್ಳವನು. ಭಂಡಾರ ಪಂಥವನ್ನು ಸಮರ್ಥವಾಗಿ ಮಂಡಿಸುವ ಪರಿಣಿತಿ ಹೊಂದಿದ್ದ. ಎದುರಾಳಿಗಳು ಎಷ್ಟೇ ಶಕ್ತಿಶಾಲಿ ಆಗಿದ್ದರೂ ಅವರನ್ನು ಭಂಡಾರದಿಂದ ಸೋಲಿಸಿಬಿಡುತ್ತಿದ್ದ. "ಭಂಡಾರ ಉಗ್ಗಿ ಗೆಲ್ಲುವ ಪ್ರಸಂಗದಂಥ ಅಂಶಗಳು ದ್ರಾವಿಡರ ತಾಂತ್ರಿಕ ಪಂಥ ನಂತರದ ನಾಥ ಪಂಥಗಳ ಸಂಬಂಧದ ಸೂಚನೆಗಳು". ಭಂಡಾರವೇ ಈತನ ಜೀವಾಳವಾಗಿತ್ತು. ಡೊಳ್ಳಿನ ಹಾಡುಗಳಲ್ಲಿ ಮಾಳಪ್ಪನನ್ನು "ಭಂಡಾರದ ಒಡೆಯ" ಎಂದು ಕರೆಯುತ್ತಾರೆ. ಈ ವ್ಯಕ್ತಿ ಜೀವನಕ್ಕೆ ಸಂಬಂಧಿಸಿದ ಡೊಳ್ಳಿನ ಹಾಡುಗಳ ಕ್ಯಾಸೆಟ್‌ಗಳು ಭಂಡಾರದ ಒಡೆಯ ಅನ್ನುವ ಶೀರ್ಷಿಕೆಯಲ್ಲಿ ಬಂದಿವೆ. ದೀಪಾವಳಿಯಲ್ಲಿ ನಡೆಯುವ ಜಾತ್ರೆಯಲ್ಲಿ 'ಭಂಡಾರ' ಮತ್ತು 'ಕುರಿಉಣ್ಣೆ' ಅರ್ಪಿಸುವ ಆಚರಣೆ ರೂಢಿಯಲ್ಲಿದೆ. ಈ ಜಾತ್ರೆಯಲ್ಲಿ ಭಕ್ತಾದಿಗಳು ಸುಮಾರು ೧೦೦ ಕ್ವಿಂಟಾಲ್‌ಗಿಂತ ಹೆಚ್ಚು ಭಂಡಾರ ಅರ್ಪಿಸಿ ಸಂಭ್ರಮಿಸುತ್ತಾರೆ. "ಭಂಡಾರ, ಅರಿಶಿನ, ತಂಗಡಿ ಹೊನ್ನರಿಕೆ ಗಿಡ ಇವೆಲ್ಲ ಔಷಧಿ ಗುಣಗಳ ಅಪರೂಪದ ವಸ್ತುಗಳು. ವೈದ್ಯಕೀಯತೆ ವಿಪರೀತ ಕೊರತೆಯಿದ್ದ ಹಿಂದಿನ ಕಾಲದಲ್ಲಿ ಅರಿಶಿನದಂತೆ ಔಷಧಿ ಗುಣಗಳಿರುವ ವಸ್ತುವನ್ನು ಕಂಡುಕೊಂಡು ಜನ ಸಂಭ್ರಮಿಸುವುದು ಸಹಜವೇ. ಹಾಗಾಗಿ ಭಂಡಾರದ ಪ್ರಾಶಸ್ತ್ಯ ಹೆಚ್ಚು ಕಂಡುಬರುತ್ತದೆ."[೫೨] ಈತನ ಕಾಲದಲ್ಲಿ ಭಂಡಾರ ಹೆಚ್ಚು ಜನಪ್ರಿಯ

ಆಗಿತ್ತು. ಮಾಳಿಂಗರಾಯನ ಕಾಲದಲ್ಲಿ ನಂತರ ಭಂಡಾರದ ಜನಪ್ರಿಯತೆ ಕುಗ್ಗಿತು. ಮಾಳಿಂಗರಾಯ ನಂತರ ಬಂದ ಪಶುಪಾಲಕ, ಹಾಲುಮತದ ಸಾಂಸ್ಕೃತಿಕ ನಾಯಕರು 'ವಿಭೂತಿ' ಪಂಥಕ್ಕೆ ಸಂಸ್ಕೃತೀ ಕರಣವಾದದ್ದು ಹಿನ್ನಡೆಗೆ ಪ್ರಧಾನ ಕಾರಣ. ಆದರೆ ವಿಭೂತಿ ಪಂಥವನ್ನು ಹಾಲುಮತ ಸಮುದಾಯ ಅಷ್ಟಾಗಿ ಸ್ವೀಕಾರ ಮಾಡಿದಂತೆ ಕಾಣಿಸುವುದಿಲ್ಲ. ವಿಭೂತಿ ಪಂಥವನ್ನು ಪ್ರತಿಪಾದಿಸುವುದಕ್ಕೆ ಪ್ರಯತ್ನಪಟ್ಟ ಹಾಲುಮತದ ಸಾಂಸ್ಕೃತಿಕ ನಾಯಕರೆಲ್ಲರು ಇವತ್ತು ಇವೆರಡು ಪಂಥಗಳ ಸಂಕರಶೀಲ ಸಂಸ್ಕೃತಿಯ ನಾಯಕರಾಗಿ ರೂಪಿತವಾಗಿದ್ದಾರೆ. ವಿಭೂತಿ ಮತ್ತು ಭಂಡಾರಗಳೆರಡೂ ಇವರ ಆಚರಣೆಗಳಲ್ಲಿ ಜೀವಂತವಾಗಿವೆ. ಆದರೆ ಮಾಳಿಂಗರಾಯನ ಆಚರಣೆಗಳಲ್ಲಿ ಈ ಪರಿಕಲ್ಪನೆ ಕಂಡುಬರುವುದಿಲ್ಲ.

ಪಶುಪಾಲನ ಹಂತದ ಬೇಟೆ ಹಾಗೂ ಕೃಷಿ ಸಂಸ್ಕೃತಿಗಳ ಕೊಂಡಿಯಾಗಿ ಮಾಳಿಂಗರಾಯ ಕಂಡುಬರುತ್ತಾನೆ. ಪಶುಗಳನ್ನು ಕೇವಲ ಆರ್ಥಿಕ ಸಂಪನ್ಮೂಲವೆಂದು ಗ್ರಹಿಸಲಿಲ್ಲ. ಮಾನವ ಹಾಗೂ ಪಶುಗಳನ್ನು ಪರಿಸರದ ಸಮತೋಲನದಲ್ಲಿ ಬೆಸೆದ. ಆದರೆ ಇತರ ಹಾಲುಮತದ ಸಾಂಸ್ಕೃತಿಕ ನಾಯಕರಂತೆ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಪ್ರದೇಶಗಳಲ್ಲಿ ವಿಸ್ತರಣೆ ಆಗಲಿಲ್ಲ. ಕೇವಲ ಈ ಮೂರು ರಾಜ್ಯಗಳ ಗಡಿಭಾಗಗಳಲ್ಲಿ ಮಾತ್ರ ಜೀವಂತವಾದ.

೪.೩. ರೇವಣಸಿದ್ಧ

೪.೩.೧. ಪ್ರವೇಶ

'ಹಾಲುಮತ' ಮತ್ತು 'ಲಿಂಗಾಯತ' ಸಮುದಾಯಗಳೆರಡು ರೇವಣಸಿದ್ಧನನ್ನು ತಮ್ಮ ಸಮುದಾಯದ ಅನನ್ಯತೆಯ ವ್ಯಕ್ತಿಯನ್ನಾಗಿಸಿಕೊಳ್ಳುವುದಕ್ಕೆ ಹೋರಾಟ ಮಾಡುತ್ತಲಿವೆ. ಈ ಹೋರಾಟ ಇವತ್ತಿನದಲ್ಲ. ರೇವಣಸಿದ್ಧ ಬದುಕಿದ ಕಾಲಘಟ್ಟದಿಂದಲೂ ನಡೆದುಕೊಂಡು ಬಂದಿದೆ. ಇದರ ಸ್ವರೂಪ ಇವತ್ತು ತೀವ್ರವಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಐಡೆಂಟಿಟಿ ಕ್ರೈಸಿಸ್ ಸಮುದಾಯ ಗಳನ್ನು ಒತ್ತಡಕ್ಕೆ ಸಿಲುಕಿಸುತ್ತಿದೆ. ಹಾಗಾಗಿ ಈ ಎರಡು ಸಮುದಾಯಗಳಿಗೆ ರೇವಣಸಿದ್ಧನನ್ನು ಕೇಂದ್ರವಾಗಿಟ್ಟುಕೊಂಡು ಕಟ್ಟಿಕೊಂಡಿರುವ ಚಾರಿತ್ರಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವುದು ಮುಖ್ಯವಾಗಿದೆ. ಈಗಾಗಲೇ ತಮ್ಮ ತಮ್ಮ ಸಮುದಾಯದ ಪರಂಪರೆಗೆ ತಕ್ಕಂತೆ ರೇವಣಸಿದ್ಧನ ಜೀವನ ಚರಿತ್ರೆಯನ್ನು ರೂಪಿಸಿಕೊಂಡಿವೆ. ಲಿಂಗಾಯತ ಸಮುದಾಯ ತಮ್ಮ ಸಮುದಾಯದ ವ್ಯಕ್ತಿಯೆಂದು ಜನಪ್ರಿಯಗೊಳಿಸಿದೆ. ಆತನೇ ನಮ್ಮ ಸಮುದಾಯದ ಮೂಲವ್ಯಕ್ತಿ, ಆತನಿಂದಲೇ ನಾವು ಹುಟ್ಟು ಪಡೆದಿದ್ದೇವೆ, ಅಂತ ಹೇಳುವುದರ ಮುಖಾಂತರ ರೇವಣಸಿದ್ಧನ ಇತಿಹಾಸವನ್ನು ಬದುಕಿನ ಕಾಲಘಟ್ಟಕ್ಕಿಂತ ಸಾವಿರಾರು ವರ್ಷಗಳಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗಿದೆ. ಈ ಹಿನ್ನೆಲೆಯಲ್ಲಿಯೇ "ಪಂಚಾಚಾರ್ಯರ ರೇವಣಸಿದ್ಧನ ಕಾಲ ಕ್ರಿ.ಪೂ. ಅಂತ ಹೇಳಿರುವುದು"[೫೯] ಈ ವ್ಯಕ್ತಿಯ ಹೆಸರಿನಲ್ಲಿ ಮಠ ಮಂದಿರ ಗಳನ್ನು ಕಟ್ಟಿಕೊಂಡಿದ್ದಾರೆ. ಕೆಲವು ಮಠಗಳನ್ನು ಅನ್ಯ ಸಮುದಾಯದವರಿಂದ ಅಕ್ರಮವಾಗಿ ಕಿತ್ತುಕೊಂಡು ತಮ್ಮ ಹತೋಟಿಯಟ್ಟುಕೊಂಡಿದೆ. ಈಗಲೂ ಈ ಪ್ರಕ್ರಿಯೆಯನ್ನು ಮುಂದುವರಿಸಿದೆ.

ಈ ಕಾರ್ಯಕ್ಕಾಗಿ ಅನೇಕ ತಂತ್ರಗಳನ್ನು ರೂಪಿಸುತ್ತಿದೆ. ಈ ಮಾರ್ಗಕ್ಕೆ ಪೂಜಾರಿಕೆ ಬಹಳ ಉಪಯೋಗ ಆಗುತ್ತಲಿದೆ. ಆಚರಣೆ, ಉತ್ಸವಗಳನ್ನು ಮಾಡುತ್ತಿದ್ದಾರೆ. ಹಲವಾರು ಧಾರ್ಮಿಕ ಕೃತಿಗಳನ್ನು ರಚಿಸಿಕೊಂಡಿದ್ದಾರೆ. 'ರೇಣುಕ ಜಯಂತಿ' ಮುಂತಾದ ಸಂದರ್ಭಗಳಲ್ಲಿ ತಿಂಗಳಗಟ್ಟಲೇ ಹಾಲುಮತ ಪುರಾಣವನ್ನು ಪ್ರವಚನ ಮಾಡುತ್ತಾರೆ. ಕೆಲವೊಂದು ಮಠಗಳಲ್ಲಿ ಪ್ರತಿದಿನ ಈ ಪ್ರಕ್ರಿಯೆ ನಡೆಯುತ್ತದೆ. ಮಕ್ಕಳುಗಳಿಗೆ ರೇವಣಸಿದ್ಧನ ಹೆಸರನ್ನು ಇಡುತ್ತಾರೆ. ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆ. ಆ ಹೆಸರನ್ನು ಬಳಸಿಕೊಂಡು ರಾಜಕೀಯವಾಗಿ ಒಕ್ಕಟ್ಟಾಗುತ್ತಿದ್ದಾರೆ. ಇವುಗಳೆಲ್ಲವುದರ ಮುಖಾಂತರ ತಮಗೂ ಮತ್ತು ರೇವಣಸಿದ್ಧನಿಗೂ ಪ್ರಾಚೀನವಾದ ಸಂಬಂಧವಿದೆಯೆಂದು ಅಭಿಮಾನ ವ್ಯಕ್ತಪಡಿಸುತ್ತಿದ್ದಾರೆ. ಈ ವಿಧಾನ ಕೇವಲ ಲಿಂಗಾಯತ ಸಮುದಾಯದಲ್ಲಿ ಮಾತ್ರವಿಲ್ಲ. ಹಾಲುಮತ ಸಮುದಾಯದಲ್ಲೂ ಇದೆ. ಕುರಿಗಳು ಮತ್ತು ನಾವು ಹುಟ್ಟಿದ್ದು ರೇವಣಸಿದ್ಧನಿಂದಲೇ ಅಂತ ಹೇಳುತ್ತಾರೆ. ಆ ಮುಖಾಂತರ ರೇವಣಸಿದ್ಧನ ಕಾಲವನ್ನು ಭೂಲೋಕ ಹುಟ್ಟಿದ ಸಂದರ್ಭಕ್ಕೆ; ಹಿಂದಕ್ಕೆ ತೆಗೆದುಕೊಂಡು ಹೋಗುತ್ತಾರೆ.

"ಧರಣಿ ಒಳಗ ಒಂದು ಗವಿಯನು ಮಾಡಿ
ಅದರೊಳಗೆ ಕುರಿಹಿಂಡು ಹಾಕಿದ್ದಾನೋ
ಭರದಿಂದಾ ಕಂಟಿಯಾ ತಂದು ಬಾಗಿಲ ಮುಚ್ಚಿ
ಗಿರಿಜ ಬಂದು ಮೂಗುತಿ ಗುರ್ತು ಇಟ್ಟಿದ್ದಾಳೋ
ಮುತ್ತು ಆಲದ ಮರಾ ಬೆಳಸಿದ್ದಾನೋ
ಗಿರಿಜರಮಣಾ ಕರಿಗೊರಳ ಶಂಖರಾ ಧರಣಿ ಒಳಗ
ಕುರಿಹಿಂಡ ಇಟ್ಟಿದಾನೋ"[೫೯]

ಇತ್ತೀಚೆಗೆ ಹಾಲುಮತ ಸಮುದಾಯ ಲಿಂಗಾಯತ ಸಮುದಾಯ ರೇವಣಸಿದ್ಧನನ್ನು ಜೀವಂತಗೊಳಿಸಿರುವ ವಿಧಾನಗಳನ್ನು ಕೈಬಿಟ್ಟು ಜನನದ ಬಗ್ಗೆ ಕಟ್ಟಿಕೊಂಡಿರುವ ಕಥನಗಳನ್ನು ಸೈದ್ಧಾಂತಿಕವಾಗಿ ಪ್ರಶ್ನೆ ಮಾಡುವುದಕ್ಕೆ ಆರಂಭಿಸಿದೆ. ಇದರ ಹಿಂದಿನ ಉದ್ದೇಶ ವಾಸ್ತವವನ್ನು ಕಂಡುಕೊಳ್ಳುವುದು ಹಾಗೂ ಕೃತಕತೆಯನ್ನು ಎತ್ತಿಹಿಡಿಯುವುದು. ಈ ರೀತಿಯ ಕೆಲಸಗಳನ್ನು ಮಾಡುವುದರ ಮುಖಾಂತರ ಆ ಸಮುದಾಯದಲ್ಲಿರುವ ಅವಾಸ್ತವಿಕ ಆಧಾರಗಳನ್ನು ಅಲ್ಲಗಳೆಯುತ್ತಿದೆ. ಅವುಗಳೆಲ್ಲವು ಪ್ರಜ್ಞಾಪೂರ್ವಕವಾಗಿ ಕಟ್ಟಿಕೊಂಡಿರುವಂಥವುಗಳೇ ಹೊರತು ವಾಸ್ತವದಿಂದ ಕೂಡಿರುವಂಥವುಗಳಲ್ಲ ಅಥವಾ ಸಹಜವಾಗಿ ಬಂದಂಥವುಗಳಲ್ಲ ಅಂತ ಹೇಳುತ್ತಲಿದೆ. ಆ ಕಾರ್ಯದ ಉದ್ದೇಶವೆಂದರೆ ವಾಸ್ತವದಿಂದ ಕೂಡಿರುವ ಆಧಾರಗಳನ್ನು ಮಂಡಿಸುವಂತೆ ಪ್ರಚೋದಿಸುವುದು. ಈ ಪ್ರಶ್ನೆಗಳ ಹಿಂದಿನ ಧೋರಣೆಯನ್ನು ಅಥವಾ ಹಾಲುಮತ ಸಮುದಾಯದ ಪ್ರಜ್ಞಾಪೂರ್ವಕ ಎಚ್ಚರವನ್ನು ಸೂಕ್ಷ್ಮವಾಗಿ ಅರಿತ ಲಿಂಗಾಯತ ಸಮುದಾಯ ಜಾಗೃತವಾಯಿತು. ಹಾಲುಮತ ಸಮುದಾಯ ಕೇಳುವ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರಗಳೇ ಇಲ್ಲ ಅನ್ನುವ ವಾಸ್ತವವನ್ನು ಕಂಡುಕೊಂಡಿತು. ಹಾಗೂ ಈಗಾಗಲೇ ಶತ ಶತಮಾನಗಳಿಂದ ಕಷ್ಟಪಟ್ಟು ಕಟ್ಟಿಕೊಂಡು ಬಂದಿರುವ ಚರಿತ್ರೆಯನ್ನು ಕಳೆದುಕೊಳ್ಳಬೇಕು, ಪರಂಪರೆ ಇಲ್ಲದಂತವರಾಗ

ಬೇಕು, ಅಕ್ರಮವಾದ ಚರಿತ್ರೆಯನ್ನು ಹೊಂದಿದವರು ಅನ್ನುವ ಅಪವಾದವನ್ನು ಹೊತ್ತುಕೊಳ್ಳಬೇಕು ಎನ್ನುವ ಭಯವನ್ನು ನೆನಪಿಸಿಕೊಂಡಿದೆ. ಈ ಅಪವಾದವನ್ನು ಎದುರಿಸುವುದಕ್ಕೆ ಅಥವಾ ಅದರಿಂದ ಮುಕ್ತವಾಗುವುದಕ್ಕೆ ಹಲವು ಪ್ರಯತ್ನಗಳನ್ನು ಮಾಡುತ್ತಿದೆ. ಆ ಕಾರಣಕ್ಕಾಗಿಯೇ ಹೊಸ ಹೊಸ ಪರಿಕಲ್ಪನೆಗಳನ್ನು ಹುಟ್ಟುಹಾಕಿತು. ರೇವಣಸಿದ್ಧ ಒಬ್ಬನಲ್ಲ ಇಬ್ಬರು ಅನ್ನುವ ದಂತಕಥೆಯನ್ನು ಸೃಷ್ಟಿಸಿತು. ಆ ಇಬ್ಬರಲ್ಲಿ ಒಬ್ಬನು ವೀರಶೈವ ರೇವಣಸಿದ್ಧ. ಮತ್ತೊಬ್ಬನು ಹಾಲುಮತದ ರೇವಣಸಿದ್ಧ. ಇವರಿಬ್ಬರು ಬೇರೆ ಬೇರೆ, ಹಾಗೂ ಬೇರೆ ಬೇರೆ ಕಾಲಘಟ್ಟದಲ್ಲಿ ಬದುಕಿದಂಥವರು ಅನ್ನುವ ವಾದವನ್ನು ಮಂಡಿಸಿತು. ಈ ವಾದವನ್ನು ಮಂಡಿಸಿರುವ ಆಯಾಮದ ಹಿಂದೆ ಪ್ರಜ್ಞಾಪೂರ್ವಕ ವಾದ ಎಚ್ಚರವಿದೆ. ಅಂದರೆ ನಮ್ಮ ರೇವಣಸಿದ್ಧನೇ ಮೊದಲಿಗೆ ಅನ್ನುವುದರಲ್ಲಿ ರಾಜಕಾರಣವಿದೆ; ನಮ್ಮನ್ನು ನಾವು ಕಳೆದುಕೊಳ್ಳುವುದಿಲ್ಲ ಅನ್ನುವ ನಂಬಿಕೆಯಿದೆ. ಏಕೆಂದರೆ ಈ ವಿವಾದದ ನೆರಳಿನಲ್ಲಿ ಚರ್ಚೆ ಆಗುತ್ತಿರುವ ಎರಡನೇ ರೇವಣಸಿದ್ಧ ಇಲ್ಲ. ಲಿಂಗಾಯತ ಸಮುದಾಯ ಹೇಳುವ ಎರಡನೇ ರೇವಣಸಿದ್ಧನನ್ನು ಒಪ್ಪಿಕೊಂಡು ಹಾಲುಮತ ಸಮುದಾಯ ಹುಡುಕಾಟ ಆರಂಭ ಮಾಡಿದರೆ ಸಿಗುವುದೇ ಇಲ್ಲ. ಹುಡುಕಿ ತನ್ನಷ್ಟಕ್ಕೆ ತಾನು ಮೌನವಾಗಬೇಕು. ನಮ್ಮ ರೇವಣಸಿದ್ಧ ಇಲ್ಲ. ನಾವು ಕಟ್ಟಿಕೊಂಡ ರೇವಣಸಿದ್ಧನ ಚರಿತ್ರೆ ಸುಳ್ಳು ಅಂತ ತನ್ನ ಸೋಲನ್ನು ಒಪ್ಪಿಕೊಳ್ಳಬೇಕು. ಹಾಗೂ ಈಗ ಮಾಡುತ್ತಿರುವ ಪ್ರತಿರೋಧವನ್ನು ಕೈಬಿಡಬೇಕು. ಅಂತಹ ಸೂಕ್ಷ್ಮ ರಾಜಕಾರಣ ಈ ಕಥನದ ಸೃಷ್ಟಿಯೊಳಗೆ ಇದೆ. ಈ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಹಾಲುಮತ ಸಮುದಾಯ ಸಿದ್ಧವಿಲ್ಲ; ರೇವಣಸಿದ್ಧರು ಇಬ್ಬರು ಅನ್ನುವ ರಾಜಕಾರಣ ವಾದವನ್ನು ಸಂಶೋಧಕರು ತಳ್ಳಿಹಾಕಿದ್ದಾರೆ. "ರೇವಣಸಿದ್ಧ ಅನ್ನುವ ವ್ಯಕ್ತಿ ಇದ್ದುದ್ದೇ ಒಬ್ಬವನು. ಆತನನ್ನು 'ಆಚಾರ್ಯ'ನನ್ನಾಗಿ ರೂಪಿಸಲಾಗಿದೆ"[೬೦] ಅನ್ನುವ ತಾತ್ವಿಕ ಸತ್ಯವನ್ನು ಮಂಡಿಸಿದರು. ಈ ಸತ್ಯದಿಂದ ರೇವಣಸಿದ್ಧ ಲಿಂಗಾಯತ ಧರ್ಮದಿಂದ ಸೈದ್ಧಾಂತಿಕ ನೆಲೆಯಲ್ಲಿ ಸೂಕ್ಷ್ಮವಾಗಿ ದೂರವಾಗುತ್ತಿದ್ದಾನೆ.

೪.೩.೨. ರೇವಣಸಿದ್ಧನ ಜನನದ ಬಗ್ಗೆ ಇರುವ ಗೊಂದಲಗಳು

ರೇವಣಸಿದ್ಧನ ಬಗ್ಗೆ ಮಾಹಿತಿ ನೀಡುವ ಪ್ರಧಾನವಾದ ಪ್ರಾಚೀನ ಆಕರವೆಂದರೆ ಹರಿಹರನ "ರೇವಣಸಿದ್ಧೇಶ್ವರದೇವರ ರಗಳೆ". ಇದರಲ್ಲಿ "ಕೊಲ್ಲಿಪಾಕಿ ಸೋಮಲಿಂಗ" ಲಿಂಗದಲ್ಲಿ ಜನಿಸಿದನೆಂದು ಹೇಳಲಾಗಿದೆ.

"ಅದೇ ಕಂಥೆಯದೆ ವದನವದೆ ವಜ್ರಕುಂಡಲಂ
ಅದೇ ವಕ್ಷವದೆ ಹಸ್ತವದೆ ಹಿಡಿದ ಲಾಕುಳಂ
ಅದೇ ಕೋವಣಂ ನೋಡೆನುತ್ತಮಿರಲುದಿಸಿದಂ
ಸದಮೆಳಿನಪ್ಪ ಶಿವಲಿಂಗ ಹುಟ್ಟಿದಂ"[೬೧]

"ಕಂತೆಯ ಕಮನೀಯ ರೂಪಂ
ವಜ್ರಕುಂಡಲದ ವಜ್ರಧರಂ
ಲಾಕುಳದ ಲೋಕೈಕ ಬಂಧು

ಮೆಟ್ಟಿರ್ದ ಪಾವುಗೆಯ ಕಟ್ಟದಿಕಂ
ಕೋವಣದ ಭಾವುಕಂ"[೬೨]

ಎಂದು ಆ ಸಂದರ್ಭವನ್ನು ವರ್ಣಿಸಿದ್ದಾನೆ. ಈ ರೂಪಕ ಹುಟ್ಟಿನ ಸಂದರ್ಭವಲ್ಲದೆ 'ದೀಕ್ಷಾ' ಸಂದರ್ಭವನ್ನು ಪ್ರತಿನಿಧಿಸುತ್ತದೆ. ಏಕೆಂದರೆ "ಯಾವುದಾದರೂ ಒಬ್ಬ ವ್ಯಕ್ತಿಗೆ ಹುಟ್ಟುವಾಗಲೇ ಕಂತೆ (ಕಂಬಳಿ), ವಜ್ರಕುಂಡಲ (ಕಿವಿಯ ಆಭರಣ) ಇರಲು ಸಾಧ್ಯವೇ. ಅಲ್ಲದೇ ದೇವಸ್ಥಾನದ ತುಂಬ ಜನ ಕಿಕ್ಕಿರಿದಿದ್ದರು. ವಾದ್ಯಗಳು ಮೊಳಗುತ್ತಿದ್ದವು ಅನ್ನುವ ಅಂಶಗಳಿವೆ. ಹಾಗಾಗಿ ಅದು ಸಂಸ್ಕಾರ ಕ್ರಿಯೆ, ಸಮಾರಂಭ ಆಗಿರಬೇಕು. ಅದನ್ನೇ ನಂಬಿದ ಮೌಢ್ಯಾಧಿಪತಿಗಳು ಅದೇ ತರಹದ ಭಾವಚಿತ್ರ ಗಳನ್ನು ಮುದ್ರಿಸಿ ಭಕ್ತಾದಿಗಳಿಗೆ ಮಾರಾಟ ಮಾಡ್ತಾ ಇದ್ದಾರೆ. ಇದು ಮೌಢ್ಯತೆಯ ಪ್ರತೀಕ. ಇಪ್ಪತ್ತೊಂದನೆಯ ಶತಮಾನದಲ್ಲಿ ಇಂತಹ ಮೌಢ್ಯತೆಯನ್ನು ಮತ್ತೆಲ್ಲಿ ಕಾಣಲಾರೆವು. ಅದು ಇರಲಿ ಸ್ಥಾವರ ಲಿಂಗದಲ್ಲಿ ವ್ಯಕ್ತಿ ಹುಟ್ಟುವುದಕ್ಕೆ ಸಾಧ್ಯವೇ? ಅದೇ ಸಂದರ್ಭದಲ್ಲಿ ಅಧಿಕ ಜನಸಂಖ್ಯೆ ನೆರೆಯಲು ಹೇಗೆ ಸಾಧ್ಯ? ಆ ಜನರಿಗೆ ಸುದ್ದಿ ಮುಟ್ಟಿದ್ದು ಹೇಗೆ? ನಿಮ್ಮನ್ನು ಉದ್ಧಾರ ಮಾಡುವ ವ್ಯಕ್ತಿ ಬರುತ್ತಿದ್ದಾನೆಂದು ಶಿವ ಡಂಗುರ ಸಾರಿದ್ದನೇ? ನಿಜಕ್ಕೂ ಆಶ್ಚರ್ಯ. 'ಕೋಣ ಇಯಿತು ಎಂದರೆ ಕೊಟ್ಟಿಗೆ ಕಟ್ಟು' ಎನ್ನುವಂಥ ಜನ ಮಾತ್ರ ರೇವಣಸಿದ್ಧ ಸ್ಥಾವರಲಿಂಗದಲ್ಲಿ ಹುಟ್ಟಿದ ಎಂದು ನಂಬುತ್ತಾರೆ".[೬೩] ಇದು ರಮ್ಯಾದ್ಭುತ ವರ್ಣನೆ ಮಾತ್ರ.

ರೇವಣಸಿದ್ಧನ ಜನ್ಮದ ಸಂದರ್ಭದ ಕಥನವನ್ನು ನೋಡಿದರೆ ಅದು 'ದೀಕ್ಷಾ' ಸಂದರ್ಭ ಅನ್ನುವುದನ್ನು ಒಪ್ಪಿಕೊಳ್ಳಬಹುದು. ಏಕೆಂದರೆ ಲಿಂಗಾಯತ ಸಂಸ್ಕೃತಿಯಲ್ಲಿ ಯಾವುದಾದರೂ ವ್ಯಕ್ತಿಗೆ "ದೇವಾಲಯದಲ್ಲಿ ಲಿಂಗಧಾರಣೆ ಅಥವಾ ಸಂಸ್ಕಾರವಾದರೆ ಆ ದೇವಾಲಯದ ಲಿಂಗದಲ್ಲಿ ಹುಟ್ಟಿದರೆಂದು ತಿಳಿಯಲಾಗುತ್ತದೆ. ಅಲ್ಲದೇ ದೇವಾಲಯದಲ್ಲಿ ಲಿಂಗಧಾರಣೆ ಅಥವಾ ಸಂಸ್ಕಾರವಾಗಿದ್ದರೂ; ಗುರುವಿನಿಂದ ದೀಕ್ಷೆಯಾಗಿದ್ದರೂ ಗುರುವನ್ನೇ ಲಿಂಗವೆಂದು ಭಾವಿಸಿ ಆ ಲಿಂಗದಲ್ಲಿ ಹುಟ್ಟಿದನೆಂದು ತಿಳಿಯಲಾಗುತ್ತದೆ".[೬೪] ಆ ಕಾರಣಕ್ಕೆ 'ಲಿಂಗೋದ್ಭವ' ಅನ್ನುವುದು ಲಿಂಗಾಯತರು ಪಾವಿತ್ರ್ಯಕ್ಕೆ ಮತ್ತು ಭಕ್ತಿಗಾಗಿ ರೂಢಿಸಿಕೊಂಡು ಬಂದಿರುವ ಸಾಂಕೇತಿಕ ಭಾವನೆ ಹೊರತು ಸ್ಥಾವರಲಿಂಗದಲ್ಲಿ ಹುಟ್ಟಿದವರು ಅನ್ನುವ ಅಭಿಪ್ರಾಯ ಅಲ್ಲ.

ಈ ಸಮಾರಂಭದ ಹಿನ್ನೆಲೆಯನ್ನು ನೋಡಿದರೆ ರೇವಣಸಿದ್ಧ ಒಂದು ಪಂಥದಿಂದ ಇನ್ನೊಂದು ಪಂಥಕ್ಕೆ ಪರಿವರ್ತನೆ ಆಗಿರುವುದಕ್ಕೆ ಸಾಧ್ಯತೆಯಿದೆ. ಹಾಗಾದರೆ ಅವನು ಇದ್ದ ಮೂಲಪಂಥ ಯಾವುದು? ಅನ್ನುವುದು ಇಲ್ಲಿನ ಪ್ರಶ್ನೆ. ಮೂಲದ ಬಗ್ಗೆ ಸ್ವಲ್ಪ ಗೊಂದಲಗಳಿವೆ. ಕೆಲವು ಪಠ್ಯಗಳು ಶೈವದ ಆರಂಭಿಕ ಜೀವನಗಳನ್ನು ಹೇಳುತ್ತವೆ. ಮತ್ತೆ ಕೆಲವು ಪಠ್ಯಗಳು ನಾಥ ಪಂಥದ ಆರಂಭಿಕ ಜೀವನಗಳನ್ನು ಹೇಳುತ್ತವೆ. ಈ ದ್ವಂದ್ವದ ಪಠ್ಯಗಳನ್ನು ಲಾಭವಾಗಿ ಬಳಸಿಕೊಂಡ ಲಿಂಗಾಯತ ಸಮುದಾಯ 'ಶೈವ' ಪಂಥದಿಂದ 'ವೀರಶೈವ' (ಲಿಂಗಾಯತ) ಪಂಥಕ್ಕೆ ರೂಪಾಂತರವಾದ ಎಂದು ಹೇಳುತ್ತದೆ. ಇದಕ್ಕೆ ಖಚಿತವಾದ ಆಧಾರಗಳಿಲ್ಲ. ಮತ್ತೊಂದು ಕಡೆ "ನಾಥಪಂಥದಿಂದ ಶೈವ

ಸಿದ್ಧಾಂತಕ್ಕೆ ಬಂದ"[೮] ಅನ್ನುವ ವಾದವೂ ಇದೆ. ಇದು ಸತ್ಯ. ನವನಾಥ ಚರಿತ್ರೆ ರೇವಣಸಿದ್ಧ ನಾಥಪರಂಪರೆಯಲ್ಲಿ ಇದ್ದುದರ ಬಗ್ಗೆ ಹೇಳುತ್ತವೆ. ಬ್ರಾಹ್ಮಣ ವಾತಾವರಣದಲ್ಲಿ ರಚಿತವಾದ 'ಶ್ರೀ ಹಾಲಸಿದ್ಧ ಪಂಚಪದಿ' ಇದೇ ವಾದವನ್ನು ಮಂಡಿಸುತ್ತದೆ. ಅಲ್ಲದೇ ಹಾಲುಮತ ಸಾಂಸ್ಕೃತಿಕ ನಾಯಕರಿಗೂ 'ನಾಥಪಂಥ'ದ ನಾಯಕರಿಗೂ ಗಾಢವಾದ ಸಂಬಂಧವಿತ್ತು. ಈ ಎರಡು ಪಂಥದವರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಜೊತೆ ಜೊತೆಯಲ್ಲಿ ತಿರುಗಾಡಿದ್ದಾರೆ. ಹೀಗೆ ಜೊತೆ ಜೊತೆಯಲ್ಲಿ ತಿರುಗಾಡಿರುವುದರ ಹಿಂದಿನ ಧೋರಣೆಯನ್ನು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಇವರಿಬ್ಬರ ಸಂಚಾರದ ಹಿಂದೆ ಆರ್ಥಿಕತೆಗೆ ಸಂಬಂಧಿಸಿದ ಸೂಕ್ಷ್ಮ ಆಯಾಮಗಳಿವೆ, ಒಪ್ಪಂದಗಳಿವೆ. ಹಾಗಾಗಿ ಇವೆರಡು ಪಂಥಗಳು ಸೌಹಾರ್ದಯುತ ನೆಲೆಯಲ್ಲಿ ಬದುಕಿವೆ. ಅಲ್ಲದೇ ಹಾಲುಮತದ ಸಾಂಸ್ಕೃತಿಕ ನಾಯಕರು ನಾಥರನ್ನು 'ಗುರು'ಗಳೆಂದು ಸ್ವೀಕಾರ ಮಾಡಿದ್ದಾರೆ. ಅವರ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ. ಗೋರಖನಾಥನ 'ಕಿಲಾರಿ'ಗಳನ್ನು ತುಕ್ಕಪ್ಪರಾಯ ಮತ್ತು ಸ್ವಾಮಿರಾಯರು ಕಾಯುತ್ತಾರೆ. ಇವರಿಬ್ಬರು ಗೋರಖನಾಥನಲ್ಲಿ ವಿದ್ಯೆ ಕಲಿಯುತ್ತಾರೆ. ಗೋರಖನಾಥ ಇವರನ್ನು ದೆಹಲಿಯ ಸುಲ್ತಾನರ ವಿರುದ್ಧ ಹೋರಾಟ ಮಾಡುವುದಕ್ಕೆ ಅಣಿಗೊಳಿಸುತ್ತಾನೆ. ಜಕ್ಕಪ್ಪ, ಮಾಳಪ್ಪರೂ ಸಹ ಗೋರಖನಾಥನಲ್ಲಿ ವಿದ್ಯೆ ಕಲಿಯುತ್ತಾರೆ. ಹೀಗೆ ಹಲವು ರೀತಿಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಆದರೆ ಹಾಲುಮತದವರು ನಾಥ ಸಂಪ್ರದಾಯ ದವರೂ ಅಲ್ಲ. ಅಥವಾ ಇವರು ಅನುಸರಿಸುತ್ತಿದ್ದ ಶೈವ, ಶೈವಸಿದ್ಧಪಂಥ ಮತ್ತು ನಾಥಪಂಥವೂ ಅಲ್ಲ. ಆದರೆ ಬದುಕಿನ ಅನಿವಾರ್ಯತೆಗಾಗಿ ನಾಥ ಪಂಥದವರೊಂದಿಗೆ ಸಂಬಂಧವಿಟ್ಟುಕೊಂಡಿದ್ದರು.

ಶಾಸನಗಳು ವಚನಗಳು ಹರಿಹರ ಸೃಷ್ಟಿಸಿದ ಜನ್ಮದ ಪರಿಕಲ್ಪನೆಯನ್ನು ಪುನರುಕ್ತಿ ಮಾಡಿದವು. ನಾಗಲಾಂಬಿಕೆ ತನ್ನ ವಚನದಲ್ಲಿ

"ಅಂಗದಿಂದುದಯವಾದಾತ ಮಡಿವಾಳಯ್ಯ
ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ
ಭಸ್ಮದಿಂದುಯಯವಾದಾತ ಸಿದ್ಧರಾಮಯ್ಯ
ಪಾದೋದಕದಿಂದ ಉದಯವಾದಳು ಅಕ್ಕಮಹಾದೇವಿ"[೬೫]

ಎಂದಿದ್ದಾಳೆ. ಜನಪದಿಗರು ತಮ್ಮ ಸಾಂಸ್ಕೃತಿಕ ವೀರರ ಹುಟ್ಟು ಕಿವಿ, ಭುಜ, ಬೆನ್ನು ಮುಂತಾದ ಸ್ಥಳಗಳಲ್ಲಿ ಆಯಿತೆಂದು ಹೇಳುತ್ತಾರೆ. ಇದರ ಹಿಂದಿನ ಉದ್ದೇಶ 'ಯೋನಿ'ಯಲ್ಲಿ ಹುಟ್ಟಿದ ಅನ್ನುವ ಅಪವಿತ್ರತೆಯನ್ನು ಮೀರುವುದು. ವಚನ ಸಾಹಿತ್ಯದಲ್ಲಿ, ಲಿಂಗಾಯತ ಸಾಹಿತ್ಯದಲ್ಲಿ ಲಿಂಗ, ಭಸ್ಮ ಮುಂತಾದವುಗಳಲ್ಲಿ ಜನನ ಆಯಿತೆಂದು ಹೇಳಿರುವುದು ಸಹ ಪಾವಿತ್ರತೆಯನ್ನು ಪ್ರತಿಬಿಂಬಿಸುವುದಕ್ಕಾಗಿ. ಇಲ್ಲಿ ಜನಪದಿಗರ ಮತ್ತು ವಚನಗಳ ಉದ್ದೇಶ ಒಂದೇ ಆಗಿದೆ. ಹಾಗಾಗಿ ಈಗ ಕಲ್ಪಿಸಿಕೊಂಡ ಹುಟ್ಟುಗಳ ವಿಧಾನಗಳು ಪವಿತ್ರತೆಯನ್ನು ಪ್ರತಿಬಿಂಬಿಸುವುದಕ್ಕಾಗಿ ಕಲ್ಪಿಸಿಕೊಂಡ ವೈಧಾನಿಕತೆಯೇ ವಿನಹ ವಾಸ್ತವ ಅಲ್ಲ.

'ಡೊಳ್ಳಿನ ಹಾಡುಗಳು' ಮತ್ತು 'ಹಾಲುಮತ ಪುರಾಣಗಳು' ಹರಿಹರನ ಕಲ್ಪನೆಯನ್ನು ತನ್ನೊಳಗೆ ತೆಗೆದುಕೊಂಡು ಅನಾವರಣ ಮಾಡಿದವು; ಪುನರುಕ್ತಿ ಮಾಡಿದವು.

"ಸರಸವಾದ ಸಾರಾಂಶ ಹೇಳತೀವಿ ಹರುಷದಿಂದ ಕೇಳಿರಿ ಕುಂತಾ
ರೇವಣಸಿದ್ಧನು ಹುಟ್ಟಿಬಂದ ಮ್ಯಾಲಾ ಸೃಷ್ಟಿಯಲ್ಲಿ ಆತೋ ಉದ್ಧಾರಣಾ
'ಕೊಲ್ಲಿಪಾಕಿ ಸೋಮಲಿಂಗ' ಪೀಠದಲ್ಲಿ ಹುಟ್ಟಿದವರಿವಾರಾ
ಆದ ಇತಿಹಾಸ ಓದಿ ಕೇಳಿ ಶಾಂತಿ ಆತ ನಮ್ಮ ಮನ"[೬೬]

ಈ ತರಹದ ಪರಿಕಲ್ಪನಾತ್ಮಕ ಹಾಡುಗಳು ರಚನೆ ಮಾಡಿ ಹಾಡುವ ವಿಧಾನ ಹುಟ್ಟಿಕೊಂಡ ನಂತರ ಸೃಷ್ಟಿ ಆದವು. ಏಕೆಂದರೆ ಈ ಹಾಡಿನಲ್ಲಿ ಓದಿನ ಕಲ್ಪನೆ ಇದೆ. ಹಾಗೆಂದು ಜಾನಪದರಲ್ಲಿ ಓದಿನ ಕಲ್ಪನೆ ಇಲ್ಲ ಎಂದರ್ಥವಲ್ಲ. ಸಾಕಷ್ಟು ಜನಪದ ಗೀತೆಗಳು ಓದುವುದಕ್ಕೆ ಪ್ರಚೋದನೆ ನೀಡುವಂತಹ ಹಾಡುಗಳಿವೆ. ಓದುವಂತೆ ಒತ್ತಾಯ ಮಾಡುತ್ತವೆ. ಆದರೆ ಇಲ್ಲಿರುವ ಓದಿನ ಕಲ್ಪನೆ ಬೇರೆಯಾಗಿದೆ. ಲಿಖಿತ ಪುರಾಣಗಳನ್ನು ಆಧರಿಸಿ ಅಭಿವ್ಯಕ್ತಿ ಮಾಡುವ ಕಲ್ಪನೆಯದಾಗಿದೆ. ಡೊಳ್ಳಿನ ಹಾಡುಗಳಲ್ಲಿ ಈ ಪರಂಪರೆ ಇವತ್ತಿನದಲ್ಲ. ಸುಮಾರು ದಶಕಗಳಿಂದಲೂ ನಡೆದುಕೊಂಡು ಬಂದಿವೆ.

"ಗುರು ಹಿರಿಯರಿಗೆ ಶರಣು ಮಾಡುವೆನು ಕುರುಣದಿಂದ ಕೇಳಿರಿ ಕುಂತಾ
ಮರಣರಹಿತ ಮಹಾದೇವನ ಭಜಿಸುತ ಹೇಳುವೆ ಮುಂದಿನ ವೃತ್ತಾಂತ
ಚರಣ ಪ್ರಾಸ ಗಣ ವರ್ಣ ಕೂಡಿದರ ಕವಿತೆ ಆಗುವುದು ರಸಭರಿತ
ಕವಿತೆ ಆಗುವುದು ರಸಭರಿತಾ ವಿದ್ವಾನರಾಗುವರು ಸನಮಂತಾ
ಕುರುಬರ್ನಾರಂತ ಅಲ್ಲಗಳೆಯದೆ ಪ್ರೇಮದಿಂದ ಇರಬೇಕ ಚಿತ್ತ
ಯಾತರ ಹಾಡಂತ ಏಳಬ್ಯಾಡರಿ ಸೆರಗ ಒಡ್ಡಿ ಬೇಡುವೆ ನಿಂತಾ
ಹಾಳರಗಳಿ ಹಾಡುವುದಿಲ್ಲ ಪುರಾಣದೊಳಗಿನ ಸವಿಮಾತಾ
ಸವಿಮಾತಾ ಸರಸಾಗಿ ಹೇಳುತೀನಿ ಹರುಷದಿಂದ ಕೇಳಿರಿ ಕುಂತಾ"[೬೭]

ಈ ಹಾಡುಗಳಲ್ಲಿ ವ್ಯಕ್ತವಾಗಿರುವ ಪುರಾಣ ಮೌಖಿಕ ಪುರಾಣವಾಗಿರದೆ ಲಿಖಿತ ಪುರಾಣವಾಗಿದೆ. ಆ ಲಿಖಿತ ಪುರಾಣವನ್ನು ಆಧಾರವನ್ನಾಗಿಟ್ಟುಕೊಂಡು ಹಾಡ್ತಾ ಇದ್ದೇವೆ ಅನ್ನುವುದು ಕಲಾವಿದರ ನುಡಿ.[೬೮] ಈ ವಿಧಾನ ಹಿಂದಿನ ದಿನಗಳಿಗಿಂತಲೂ ಇವತ್ತು ತೀವ್ರಸ್ವರೂಪ ಪಡೆಯುತ್ತಿದೆ. ಅಭಿವ್ಯಕ್ತಿಗಾಗಿ ಸಂಪೂರ್ಣವಾಗಿ ಲಿಖಿತ ಪುರಾಣಗಳನ್ನು ಅವಲಂಬಿಸಲಾಗುತ್ತಿದೆ. ಇದಕ್ಕೆ ಇತ್ತೀಚೆಗೆ ಪ್ರಕಟವಾದ 'ಬೀರೇಶ್ವರ ಮಾಳಿಂಗರಾಯರ ಡೊಳ್ಳಿನ ಪದಗಳು' ಉದಾಹರಣೆ. ಇದರಲ್ಲಿ ನಲವತ್ನಾಲ್ಕು ಹಾಡುಗಳಿವೆ. ಇವು 'ಚನ್ನಬಸವಶಾಸ್ತ್ರಿ' ಅವರ 'ಹಾಲುಮತ ಪುರಾಣ'ವನ್ನು ಆಧರಿಸಿ ರಚನೆಗೊಂಡಂಥವು. ಹಾಗಾಗಿ ಹೊಸತನವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಇವತ್ತು ಸಮುದಾಯದ ಲಿಖಿತ ಪುರಾಣಗಳನ್ನಷ್ಟೇ ಅಲ್ಲದೆ 'ಅಷ್ಟ ಪುರಾಣ'ಗಳನ್ನು ಕೇಂದ್ರೀಕರಿಸಿ ರಚನೆ ಮಾಡಿ ಹಾಡುತ್ತಿದ್ದಾರೆ. ಈ ರಚನೆಗಳಲ್ಲಿ, ವಚನಗಳ, ಸ್ವರವಚನಗಳು, ತತ್ವಪದಗಳು, ಕೀರ್ತನೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇವತ್ತು ಪ್ರತಿಯೊಂದು ಹಾಡಿನ ತಂಡದಲ್ಲಿ ಒಬ್ಬ ಬರಹಗಾರ ಇದ್ದಾನೆ. ಬರಹಗಾರರು ಇರದಿದ್ದರೆ ಅದು ತಂಡವೇ ಅಲ್ಲ ಅಥವಾ ಆ ತಂಡಕ್ಕೆ ಅಸ್ತಿತ್ವ ಇಲ್ಲ ಅನ್ನುವ ರೀತಿ ಆಗುತ್ತಿದೆ. ಇವರಿಗಾಗಿ

ರಚನೆ ಮಾಡಿರುವ ಹಾಡುಗಳಿಗೂ ಮೌಖಿಕವಾಗಿ ಹರಿದು ಬಂದಿರುವ ಹಾಡುಗಳಿಗೂ ಯಾವುದೇ ವ್ಯತ್ಯಾಸಗಳು ಇಲ್ಲ, ತಾರತಮ್ಯ ಭಾವನೆಯೂ ಇಲ್ಲ. ಹಾಗಾಗಿ ರೇವಣಸಿದ್ಧನ ಹುಟ್ಟಿನ ಬಗ್ಗೆ ಯಾರೋ ರಚನೆ ಮಾಡಿರುವ ಹಾಡನ್ನು ತನ್ನದೆಂದು ಒಪ್ಪಿಕೊಂಡು ಪ್ರಕಟ ಮಾಡುತ್ತಿದೆ.

"ಹಾಲುಮತದ ಮುದ್ದುಗೊಂಡ ಮತ್ತು ಮುದ್ದವ್ವ ದಂಪತಿಗಳಿಗೆ ಏಳು ಜನ ಮಕ್ಕಳು. ಕೊನೆಯವನು ಉಂಡಾಡ ಪದ್ಮಗೊಂಡ ಅಥವಾ ಉಂಡಾಡ ಪದ್ಮಣ್ಣ. ಈ ಉಂಡಾಡ ಪದ್ಮಗೊಂಡನ ಮೊದಲ ಹೆಂಡತಿ ಜಿಂಕಾದೇವಿ. ಇವರಿಗೆ ಐದು ಜನ ಮಕ್ಕಳು. ೧. ಜಗ್ಗುಲಿ ಮುತ್ತಯ್ಯ ೨. ಸಹಾಯ ಮುತ್ತಯ್ಯ ೩. ಸೋಹ ಮುತ್ತಯ್ಯ ೪. ಶಾಂತಿಮಯ ಮುತ್ತಯ್ಯ ೫ ದೇವರಾಜ. ನಾಲ್ಕನೆಯ ಮಗನಾದ ಶಾಂತಿಮಯ ಮುತ್ತಯ್ಯನಿಗೆ ಹುಟ್ಟಿದನವೇ ರೇವಣಸಿದ್ಧ. ತಾಯಿ ಮಹಾದೇವಿ"[೫೯] ಅನ್ನುವುದನ್ನು ಸದ್ಯಕ್ಕೆ ಒಪ್ಪಿಕೊಳ್ಳಬಹುದು.

೪.೩.೩. ರೇವಣಸಿದ್ಧ ಮಠಗಳ ಒಡೆತನ ಮತ್ತು ಧಾರ್ಮಿಕ ಸಂಬಂಧ

ಮಠಗಳು ಆಯಾ ಸಮುದಾಯದ ಅಸ್ಮಿತೆಯ ಕೇಂದ್ರಗಳು. ಆ ಮಠಗಳು ಆ ಸಮುದಾಯದಲ್ಲಿ ಸಾಧನೆಗೈದ ವ್ಯಕ್ತಿಯ ಹೆಸರಿನಲ್ಲಿ ರೂಪ ತಾಳಿರುತ್ತವೆ. "ಕಾನೂನಿನ ವ್ಯವಹಾರಗಳಲ್ಲಿ ಮಠವೆಂದರೆ ಆತ್ಮವಿದ್ಯೆಯಲ್ಲಿ ಸಾಧನೆ ಗಳಿಸಿದ ಒಬ್ಬ ಮಹಾವ್ಯಕ್ತಿಯ ಹಿರಿತನದಲ್ಲಿ ನಡೆಯುವ ಸಂಸ್ಥೆ".[೬೦] ಆ ಸಂಸ್ಥೆಯ ಮುಖಾಂತರ ಆ ವ್ಯಕ್ತಿ ಆ ಸಮುದಾಯದ ಧರ್ಮದ ಆಳ್ವಿಕೆ ಮಾಡುತ್ತಿರುತ್ತಾನೆ. ಇದನ್ನು ಆ ಸಮುದಾಯಗಳೇ ಸೃಷ್ಟಿಸಿಕೊಂಡಿರುತ್ತವೆ. ಇದರ ಹಿಂದಿನ ಧೋರಣೆ ಆ ಸಮುದಾಯ ಅನುಸರಿಸುವ ಪಂಥವನ್ನು ಜೀವಂತಗೊಳಿಸುವುದು. ಏಕೆಂದರೆ ಮಠಗಳು "ಕೇವಲ ಪೂಜಾಪಂಥಗಳನ್ನು ಆಶ್ರಯಿಸಿ ಬೆಳೆಯಲಿಲ್ಲ. ಕೆಲವು ವಿಶಿಷ್ಟವಾದ ಮತ ಪ್ರತಿಪಾದನೆಯಿಂದ ರೂಪಗೊಂಡವು. ಜಾತಿಗಳ ನಿರ್ಮಾಣದ ಶಕ್ತಿಗಳಾಗಿ ಆ ಸಮುದಾಯದ ಧರ್ಮ ನಿಬಂಧನೆಗಾಗಿ ಅಸ್ತಿತ್ವಕ್ಕೆ ಬಂದವು".[೬೧] ರೇವಣಸಿದ್ಧ ಮಠಗಳು ಇದಕ್ಕೆ ಹೊರತಾಗಿಲ್ಲ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ, ತಮಿಳುನಾಡು ಮತ್ತು ಗೋವಾ ರಾಜ್ಯಗಳಲ್ಲಿ ರೇವಣಸಿದ್ಧ ಮಠಗಳಿವೆ. ಕೆಲವು ಮಠಗಳ ಸ್ಥಳಗಳಲ್ಲಿ ರೇವಣಸಿದ್ಧ ನೆಲೆಸಿದ್ದ; ತಪಸ್ಸು ಮಾಡಿದ್ದ; ರಾಕ್ಷಕರ ಸಂಹಾರ ಮಾಡಿದ್ದ; ಪವಾಡಗಳನ್ನು ಮಾಡಿದ್ದ ಅನ್ನುವ ಮಿಥ್‌ಗಳಿವೆ. ಕರ್ನಾಟಕದಲ್ಲಿ ಈ ಮಠಗಳ ಪೂಜೆಯ ಹಕ್ಕು ಮೂರು ಸಮುದಾಯಗಳಿಗೆ ಇದೆ. ಹಾಗೆಂದ ತಕ್ಷಣ ಇತರ ಸಮುದಾಯಗಳು ಪೂಜೆ ಮಾಡುತ್ತಿಲ್ಲ ಎಂದರ್ಥವಲ್ಲ. ಆದರೆ ಪ್ರಧಾನವಾಗಿಲ್ಲ ಹಾಗೂ ಪಾರಂಪರಿಕ ಧಾರ್ಮಿಕ ಸಂಬಂಧವನ್ನು ಹೊಂದಿಲ್ಲ. ಇತರ ಸಮುದಾಯಗಳು ಕೇವಲ ಪೂಜೆಯ ಹಕ್ಕಿನ ಸಂಬಂಧ ಮಾತ್ರ ಹೊಂದಿದ್ದಾರೆ. ಹಾಲುಮತ ಲಿಂಗಾಯತ ಮತ್ತು ಗಾಣಿಗ ಸಮುದಾಯಗಳು ಧಾರ್ಮಿಕ ಹಿನ್ನೆಲೆಯನ್ನು ಹೊಂದಿವೆ.

ಹಾಲುಮತ ಸಮುದಾಯದಲ್ಲಿ ರೇವಣಸಿದ್ಧನ ಪಾತ್ರವನ್ನು ಪ್ರತಿಬಿಂಬಿಸುವ ಕಥನಗಳು ಇವೆ. ಹಾಲುಮತಸ್ಥರು ಕಲ್ಯಾಣದಲ್ಲಿ ದೇವರಿಗೆ ಬಲಿಕೊಟ್ಟ ಕುರಿಯನ್ನು 'ಹಾಲಕಂಬಿ'ಗೆ ಕಟ್ಟಿಕೊಂಡು

ಹೊತ್ತು ತಂದರು. ಇದನ್ನು ಸಹಿಸದ ಪುರಜನರು ಬಿಜ್ಜಳನಿಗೆ ದೂರು ಕೊಟ್ಟರು. ಈ ದೂರನ್ನು ಆಧಾರವಾಗಿಟ್ಟುಕೊಂಡು ಬಿಜ್ಜಳರಾಜ ಕುರುಬರನ್ನು ಸಾಮ್ರಾಜ್ಯದಿಂದ ಹೊರಹಾಕಿದ, ಸಾಮ್ರಾಜ್ಯದೊಳಗೆ ಪ್ರವೇಶಿಸದಂತೆ ಬಹಿಷ್ಕಾರ ಹೇರಿದ. ಈ ಬಹಿಷ್ಕಾರ ಅನ್ಯಾಯವಾದದ್ದು ಏಕಮುಖವಾದದ್ದು. ಇದರ ಮುಖಾಂತರ ನಮ್ಮ ಕುಲಕ್ಕೆ ಅವಮಾನ ಮಾಡ್ತ ಇದ್ದಿರಾ. ಈ ತೀರ್ಪಿಗೆ ನಾವು ತಲೆಬಾಗುವುದಿಲ್ಲ. ನೀವು ಬಹಿಷ್ಕಾರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಅಲ್ಲಿಯವರೆಗೂ ನಾವು ನಮ್ಮ ಹೋರಾಟ ಮಾಡುತ್ತೇವೆ ಎಂದು ಮರುಳಮಂಕ ಹಠವಿಡಿದು 'ಸರೂರು' ಗ್ರಾಮದ 'ತೂಗುಡ್ಡ'ದಲ್ಲಿ ಉಗ್ರವಾದ ತಪಸ್ಸು ಕೈಗೊಂಡ ಅನ್ನುವ ಧಾರ್ಮಿಕ ಕಥನಗಳು ಹಾಲುಮತ ಧರ್ಮದಲ್ಲಿವೆ.[೨೨] ರೇವಣಸಿದ್ಧ ಈ ತಪಸ್ಸನ್ನು ಬೆಂಬಲಿಸಿದ. ಸುತ್ತಮುತ್ತಲೂ ನೆಲೆಸಿದ್ದ ಹಾಲುಮತಸ್ಥರು ಒಗ್ಗಟ್ಟಿನಿಂದ ತಪಸ್ಸನ್ನು ಬೆಂಬಲಿಸುವಂತೆ ಹೇಳಿದ. ಹಾಲುಮತ ಸಮುದಾಯದ ಲಕ್ಷಾಂತರ ಜನರು ಮರುಳಮಂಕನ ತಪಸ್ಸನ್ನು ಬೆಂಬಲಿಸಿದರು. ರಕ್ಷಣೆ ಕೊಡುವುದಕ್ಕೆ ಅಲ್ಲಿಯೇ ನೆಲೆಸಿದರು. ಈ ಜನಕ್ಕೆ ಉಪಯೋಗ ಆಗಲೆಂದು ಉಳಿದ ಜನರು ಆಹಾರ ಸಾಮಗ್ರಿಗಳನ್ನು ತಮ್ಮ ಸಾಮರ್ಥ್ಯಕ್ಕೆ ಅನುಗಣವಾಗಿ ಬುಟ್ಟಿಯಲ್ಲಿ ಹಾಕಿಕೊಂಡು ಗುಂಪು ಗುಂಪಾಗಿ ಹೋಗಿ ಕೊಟ್ಟು ಬರುತ್ತಿದ್ದರು. ಈ ಹೋರಾಟದ ಸವಿನೆನಪಿಗಾಗಿ, ಹಾಲುಮತ ಸಮುದಾಯದ "ತೋಪುಜಾತ್ರೆ"ಯಲ್ಲಿ ಬುಕ್ಕಿ (ಪುಟ್ಟಿ) ಅರ್ಪಿಸುವ ಆಚರಣೆಯನ್ನು ಮಾಡುತ್ತಾರೆ.[೨೩] ಇದರಲ್ಲಿ ಆಯಾ ಕುಲಗಳು ಸೇರಿ ಬುಟ್ಟಿಯಲ್ಲಿ ಅಕ್ಕಿ, ಬೆಲ್ಲ, ಬೇಳೆ, ಬಾಳೆಹಣ್ಣು ಗಳನ್ನು ಹಾಕಿಕೊಂಡು ಸಾಲು ಸಾಲಾಗಿ ಹೋಗಿ ಬೀರಪ್ಪನ ದೇವಾಲಯದಲ್ಲಿ ಅರ್ಪಿಸಿ ಬರುತ್ತಾರೆ. ಈ ಆಚರಣೆಯ ಮುಂದಾಳತ್ವವನ್ನು ರೇವಣಸಿದ್ಧ ಒಡೆಯರು ವಹಿಸಿಕೊಂಡಿರುತ್ತಾರೆ. ಆ ಮುಂದಾಳತ್ವವು ಅವತ್ತು ರೇವಣಸಿದ್ಧ ಕಾರ್ಯನಿರ್ವಹಿಸಿದರ ಪ್ರತೀಕದಂತೆ ಕಂಡುಬರುತ್ತದೆ.

ಅಲ್ಲದೇ ಕಲ್ಯಾಣದಲ್ಲಿ ಹಾಲುಮತಸ್ಥರು ಗೆದ್ದ ನಂತರ ರೇವಣಸಿದ್ಧ ಬಸವಣ್ಣನ ಸಮ್ಮುಖದಲ್ಲಿ ಲಿಂಗದೀಕ್ಷೆ ಕೊಟ್ಟು ನೀವು "ಕುರುಬ ಕುಲಕ್ಕೆ ಕುಲಗುರುಗಳಾಗಿ ಹಾಲುಮತ ಧರ್ಮವನ್ನು ಕಾಪಾಡಿ" ಎಂದು ಹಾರೈಸಿದ. "ಅವತ್ತಿನಿಂದಲೇ ನಾವು ಕುಲಗುರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ" ಎಂದು ಒಡೆಯರು ಹೇಳಿಕೊಳ್ಳುತ್ತಾರೆ.

"ರೇವಣಸಿದ್ಧರ ಬೋಧನೆಯಿಂದ ಸರ್ವಜನರಿಗೆಲ್ಲ ಸನ್ಮಾನಾ
ಮೋಕ್ಷ ಕಾರಮಕ ಯೋಗ್ಯವಾದ ಗುರುದೀಕ್ಷ ಹೊಂದಿದಾರ ಸಂಪೂರ್ಣ
ಸಂಚಾರ ಮಾಡುತ ಸಾಗಿ ಮುಂದೆ ಬಂದು ಸರೂರಕ್ಕೆ ಹಾಕ್ಯಾರ ಠಾಣಾ
ಸರೂರ ಗ್ರಾಮದ ಶಾಂತಮುತ್ತಯ್ಯ ಕೊಟ್ಟಾರ ಶಿವಲಿಂಗ ದೀಕ್ಷೆಯನು"[೨೪]

ಕಲ್ಯಾಣದಲ್ಲಿ ತಗರ ಪವಾಡ ಮಾಡಿರುವ ಭಿನ್ನ ಪಠ್ಯಗಳು ಸಿಗುತ್ತವೆ. 'ತಗರ ಪವಾಡ' ಪಠ್ಯಗಳಲ್ಲಿ ಮರುಳಮಂಕ ತಪಸ್ಸು ಮಾಡಿದರೆ 'ಸಿದ್ಧಮಂಕ ಚರಿತೆ' ಪಠ್ಯದಲ್ಲಿ ಸಿದ್ಧರಾಮ ತಗರ ಪವಾಡ ಮಾಡಿದ್ದಾನೆ. 'ಸಿದ್ಧ ಸಿರಿ' ಪಠ್ಯದಲ್ಲಿ ಅಮೋಘಸಿದ್ಧ ತಗರ ಪವಾಡ ಮಾಡಿದ್ದಾನೆ. ಈ ರೀತಿಯ ಭಿನ್ನಪಠ್ಯಗಳು ಆಯಾ ಸಾಂಸ್ಕೃತಿಕ ವೀರನನ್ನು ಕೇಂದ್ರೀಕರಿಸಿ ಹಾಡುವ 'ಕುಲ'ದವರಿಂದ ಹುಟ್ಟಿರಬೇಕು.

ಏಕೆಂದರೆ ಹಾಲುಮತ ಸಮುದಾಯದಲ್ಲಿ ಸಿದ್ಧರಾಮ, ಅಮೋಘಸಿದ್ಧ, ರೇವಣಸಿದ್ಧ ಮತ್ತು ಬೀರಪ್ಪನನ್ನು ಆರಾಧಿಸುವ ಕುಲಗಳಿವೆ. ಪಂಗಡಗಳಿವೆ. ಆಯಾ ಕುಲಗಳು ಪ್ರತಿಯೊಬ್ಬ ಸಾಂಸ್ಕೃತಿಕ ವೀರನನ್ನು ಕುಲದೈವ, ಮನೆದೈವ, ಆರಾಧ್ಯ ದೈವವನ್ನಾಗಿ ಮಾಡಿಕೊಂಡಿವೆ. ನಮ್ಮ ಕುಲದೈವ ಶ್ರೇಷ್ಠ ಅಂತ ತೋರಿಸುವುದಕ್ಕೆ ಆಯಾ ಕುಲಗಳು 'ತಗರ ಪವಾಡದ ಘಟನೆ'ಯನ್ನು ಅನ್ವಯ ಮಾಡಿಕೊಂಡಿವೆ. ಜನಪದ ಗೀತೆಗಳು ರೇವಣಸಿದ್ಧನನ್ನು ಕೇಂದ್ರವಾಗಿಟ್ಟುಕೊಂಡು ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ ಅನಾವರಣಗೊಳಿಸುವ ವಸ್ತು ಚಿತ್ರಣಕ್ಕಿಂತ ಭಿನ್ನವಾದ ಪಠ್ಯವನ್ನು ಹೇಳುತ್ತವೆ. ಈ ಎರಡು ಪಠ್ಯಗಳನ್ನು ಮುಂದುವರೆಸುತ್ತವೆ. ಅಂದರೆ ಈ ಎರಡೂ ಪಠ್ಯಗಳು ಲಿಂಗಾಯತ ಸಂಸ್ಕೃತಿಯ ಪ್ರಭಾವಲಯದಲ್ಲಿ ಕುರುಬರು ಸಂಸ್ಕೃತೀಕರಣಕ್ಕೆ ಒಳಗಾದರು ಅನ್ನುವುದನ್ನು ಹೇಳಿ ಮುಕ್ತಾಯವಾಗಿ ಬಿಡುತ್ತವೆ. ಲಿಂಗದೀಕ್ಷೆಯ ನಂತರ ಎರಡೂ ಸಮುದಾಯದಲ್ಲಿ ಸಂಘರ್ಷಗಳನ್ನು ಕುರಿತು ಹೇಳುವುದಿಲ್ಲ. ಏಕೆಂದರೆ ಲಿಂಗಾಯತರು ಲಿಂಗದೀಕ್ಷೆಯ ನಂತರ ಹಾಲುಮತದವರನ್ನು ಲಿಂಗಾಯತ ಧರ್ಮದಲ್ಲಿ ಸೇರಿಸಿಕೊಂಡಿಲ್ಲ ಅಥವಾ ನೇರವಾಗಿ ಸೇರಿಸಿಕೊಳ್ಳಲು ಪ್ರತಿರೋಧ ಉಂಟು ಮಾಡಿದ್ದಾರೆ.

"ಕುರಿಯನೆ ತಿನ್ನುವರು ಮರಿಹಾಲ ಕುಡಿಯುವರು
ಏನೊಂದು ಪಡೆದೆ ಘನಗುರುವೇ
ಕುರಿಯನೇ ತಿನ್ನಾಲಿ ಮರಿಹಾಲ ಕುಡಿಯಲಿ
ಶಿಷ್ಯರನು ನಾನು ಪಡೆದೇನೂ"[೬೫]

ಹಾಲುಮತದವರನ್ನು "ಹೊಲಸು ಸಂಸ್ಕೃತಿ"ಯವರೆಂದು ಹೀಯಾಳಿಸಿದ್ದಾರೆ. ರೇವಣಸಿದ್ಧನಲ್ಲಿ ಇಷ್ಟಲಿಂಗ ಆರಾಧನೆ ಅಥವಾ ವಿಭೂತಿ ಆರಾಧನೆಯನ್ನು ಕೈಬಿಡುವಂತೆ ಕೇಳಿಕೊಂಡಿದ್ದಾರೆ. ಇದಕ್ಕೆ ರೇವಣಸಿದ್ಧ ಸಹಕರಿಸಿಲ್ಲ. ಲಿಂಗಾಯತರಿಗೆ ವಿರೋಧವಾಗಿ ಹಾಲುಮತದವರನ್ನು ಹಠದಿಂದ ಶಿಷ್ಯರನ್ನಾಗಿಸಿಕೊಂಡಿದ್ದಾನೆ.

"ಊರು ಪಡೆಯಲಿಲ್ಲ ಒಕ್ಕಲು ಪಡೆಯಲಿಲ್ಲ
ಹೀನ ಗುರುಬರ ಪಡೆದಲ್ಲೊ
ಸೀಮೆ ಪಡೆಯಲಿಲ್ಲ ಭೂಮಿ ಪಡೆಯಲಿಲ್ಲ
ಜಿಟ್ಟು ಗುರುಬರ ಪಡೆದಲ್ಲೊ"[೬೬]

ಇಂತಹ ಹಲವು ಕಥನಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಹಾಲುಮತ ಸಮುದಾಯ ರೇವಣಸಿದ್ಧ ತಮ್ಮವನೆಂದು ಹೇಳಿಕೊಳ್ಳುತ್ತದೆ.

ಕರ್ನಾಟಕದಲ್ಲಿ ೨೦೦ಕ್ಕೂ ಹೆಚ್ಚು ರೇವಣಸಿದ್ಧ ಮಠಗಳ ಪೂಜಾರಿಕೆಯ ಹಕ್ಕನ್ನು ಹಾಲುಮತದವರು ಹೊಂದಿದ್ದಾರೆ. ಈ ಮಠಗಳಿಗೆಲ್ಲ 'ಸರೂರ' ಗ್ರಾಮದ ರೇವಣಸಿದ್ಧ ಮಠವೇ ಮೂಲ ಮಠ. ಸರೂರು ಗ್ರಾಮದಿಂದ ಹಕ್ಕು ಪಡೆದ ತಾಮ್ರ ಮುದ್ರೆಗಳು ಇವೆ.[೬೭] ಆ ತಾಮ್ರ ಬಿಲ್ಲೆಗಳ ಮೇಲೆ ಸರೂರು ಗ್ರಾಮ ಹಾಗೂ ಶಾಂತಮುತ್ತಯ್ಯ, ರೇವಣಸಿದ್ಧನ ಹೆಸರುಗಳಿವೆ.

ಲಿಂಗಾಯತ ಸಮುದಾಯ ರೇವಣಸಿದ್ಧನೇ ನಮ್ಮ ಸಮುದಾಯದ ಮೂಲವ್ಯಕ್ತಿ. ನಮಗಾಗಿ ವೀರಶೈವ ಧರ್ಮ ಸ್ಥಾಪಿಸಿದ, ಬೆಳೆಸಿದ. ಆ ಕಾರಣಕ್ಕೆ ಮಂಗಳವಾಡದಲ್ಲಿ ಗಾಣದ ಕಲ್ಲಸೆಟ್ಟಿ ಎನ್ನುವಾತನ ಮನೆಯಲ್ಲಿ ಗಾಣ ಒಡೆದ, ಅವನ ಮನೆತನವನ್ನು ಶ್ರೀಮಂತಗೊಳಿಸಿದ ಅನ್ನುವ ಕಥನಗಳನ್ನು ಇಟ್ಟುಕೊಂಡು ನಮ್ಮವನೆಂದು ಹೇಳಿಕೊಳ್ಳುತ್ತಿದೆ. ಕೆಲವು ಕಡೆ ರೇವಣಸಿದ್ಧ ಮಠಗಳನ್ನು ಬ್ರಾಹ್ಮಣರು ಪೂಜೆ ಮಾಡುತ್ತಿದ್ದಾರೆ. ಇವರು ಪರಂಪರೆಯಿಂದ ಈ ಸಂಪ್ರದಾಯದ ಮಠಗಳನ್ನು ಪೂಜೆ ಮಾಡಿಕೊಂಡು ಬಂದವರಲ್ಲ. ಕೆಲವು ಕಡೆ ಒಡೆಯರು ಇವರನ್ನು ತಿಂಗಳಗೂಲಿಯಂತೆ ನೇಮಕ ಮಾಡಿಕೊಂಡಿದ್ದಾರೆ. ಇನ್ನೂ ಕೆಲವು ಕಡೆ ಮಠದ ಆಡಳಿತದ ಹೊಂದಾಣಿಕೆಯ ವಿಷಯದಲ್ಲಿ ಹಾಲುಮತಸ್ಥರಿಗೂ ಮತ್ತು ಒಡೆಯರಿಗೂ ಭಿನ್ನಾಭಿಪ್ರಾಯವಾಗಿ ಹಾಲುಮತಸ್ಥರೇ ಒಡೆಯರನ್ನು ಮಠದ ಪೂಜೆಯ ಹಕ್ಕಿನಿಂದ ಕಿತ್ತುಹಾಕಿ, ಆ ಜಾಗಕ್ಕೆ ಬ್ರಾಹ್ಮಣರನ್ನು ತಂದಿದ್ದಾರೆ.[೨೮] ಆದರೆ ಒಡೆಯರಿಗೆ ಇದ್ದ ಹಕ್ಕುಗಳನ್ನು ಬ್ರಾಹ್ಮಣರಿಗೆ ಕೊಟ್ಟಿಲ್ಲ.

ಹಾಗಾಗಿ ರೇವಣಸಿದ್ಧನನ್ನು ಐತಿಹಾಸಿಕವಾಗಿ ಕಾಪಾಡಿಕೊಂಡು ಬಂದ; ಜನಪ್ರಿಯಗೊಳಿಸಿದ ಕೀರ್ತಿ ಲಿಂಗಾಯತ (ಗಾಣಿಗ- ಲಿಂಗಾಯತ) ಮತ್ತು ಹಾಲುಮತ ಸಮುದಾಯಗಳಿಗೆ ಸೇರುತ್ತದೆ. ಕರ್ನಾಟಕದಲ್ಲಿ ಹಾಲುಮತ ಸಮುದಾಯ ಹೆಚ್ಚು ಮಠಗಳನ್ನು ಹೊಂದಿದೆ. ಲಿಂಗಾಯತ ಸಮುದಾಯ ಬೆರಳೆಣಿಕೆಯಷ್ಟು ಮಠಗಳನ್ನು ಮಾತ್ರ ಹೊಂದಿದೆ. ಅದರಲ್ಲಿರುವ ಕೆಲವು ಮಠಗಳನ್ನು ಹಾಲಮತ ಸಮುದಾಯದಿಂದ ಅಕ್ರಮವಾಗಿ ವಶಪಡಿಸಿಕೊಂಡಿದೆ ಅನ್ನುವ ಆಪಾದನೆಯೂ ಇದೆ. ಪಂಚಪೀಠಗಳಲ್ಲಿ ಒಂದಾದ 'ಬಾಳೆಹೊನ್ನೂರು' ಮಠಕ್ಕೆ ಇಂತಹ ಆಪಾದನೆ ದಟ್ಟವಾಗಿದೆ.

೪.೩.೩.೧. ರೇವಣಸಿದ್ಧ ದೇವಾಲಯಗಳ ಭೌತಿಕ ಸ್ವರೂಪ ಮತ್ತು ಸಾಂಸ್ಕೃತಿಕ ಸಂಬಂಧ

ಒಂದು ದೈವ; ಧರ್ಮ, ಪಂಥವನ್ನು ಗ್ರಹಿಸುವುದಕ್ಕೆ ಆ ದೇವಾಲಯದ ವಾತಾವರಣ ಸಹಾಯಕ್ಕೆ ಬರುತ್ತದೆ. ಆ ದೈವದ ಸುತ್ತಮುತ್ತ ನೆಲೆಸಿರುವ ಜನಸಮುದಾಯ ಮತ್ತು ಇತರ ದೈವಗಳು, ಅವುಗಳ ಸಂಬಂಧಗಳು ಬಹಳ ಮುಖ್ಯವಾಗುತ್ತವೆ. ತನ್ನ ಪಾರಂಪರಿಕ ವಾಸ್ತವತೆಯ ಅಸ್ಮಿತೆಗಳನ್ನು ತನ್ನ ಅಂತರಂಗದಲ್ಲಿ ಬಚ್ಚಿಟ್ಟುಕೊಂಡು ಸೂಕ್ಷ್ಮವಾಗಿ ಅನಾವರಣ ಮಾಡುತ್ತಿರುತ್ತವೆ. ಆ ಸೂಕ್ಷ್ಮ ಪಠ್ಯಗಳನ್ನು ಇಲ್ಲಿ ಪ್ರಧಾನಧಾರೆಯ ಆಕರಗಳೆಂದು ಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ರೇವಣಸಿದ್ಧ ದೇವಾಲಯದ ಸುತ್ತಮುತ್ತಲಿನ ವಾತಾವರಣವು ಹಾಲುಮತ ಸಂಸ್ಕೃತಿಯ; ಪಶುಪಾಲನ ಸಂಸ್ಕೃತಿಯ; ದ್ರಾವಿಡ ಸಂಸ್ಕೃತಿಯ; ಮಾತೃಪ್ರಧಾನ ಸಂಸ್ಕೃತಿಯ; ಶೈವ ಆರಾಧನೆ ಸಂಸ್ಕೃತಿಯ ದಟ್ಟ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಈ ದೇವಾಲಯದ ಸುತ್ತ, ಎದುರುಗಡೆ, ಪಕ್ಕಕ್ಕೆ 'ಸ್ತ್ರೀದೈವ' ದೇವಾಲಯವಿರುತ್ತದೆ. ಪಕ್ಕದಲ್ಲಿ ಸ್ತ್ರೀ ದೈವವೇ ಇಲ್ಲದೇ ಇರುವ ರೇವಣಸಿದ್ಧ ದೇವಾಲಯ ಸಿಗುವುದು ಅಪರೂಪ. ಸ್ತ್ರೀ ದೈವದ ಅರ್ಚಕರು, ಭಕ್ತರು, ಆರಾಧಕರು, ಶಿಷ್ಯರು, ಆ ದೇವಾಲಯದ ಹಕ್ಕು ಹೊಂದಿದವರು ಹಾಲುಮತಸ್ಥರಾಗಿರುತ್ತಾರೆ. ಕೆಲವು ಕಡೆ ಬೇರೆ ತಳಸಮುದಾಯದವರು ಅರ್ಚಕರಾಗಿದ್ದಾರೆ. ಇದು ತುಂಬಾ ಕಡಿಮೆ. ಹಾಲುಮತಸ್ಥರೇ ಹೆಚ್ಚು. ಈ ದೇವಾಲಯದ ಸುತ್ತ

ಯಲ್ಲಮ್ಮ, ಓರಗಲ್ಲಮ್ಮ, ದುರುಗಮ್ಮ (ಬಳ್ಳಾರಿ), ಹೊಸೂರಮ್ಮ, ಕೋಟೆ ಕರಿಯಮ್ಮ, ಮಾಯವ್ವ, ಚೌಡಮ್ಮ ದೇವಾಲಯಗಳಿವೆ.

ಚಳ್ಳಕೆರೆ, ಹಿರಿಯೂರು, ಶಿರಾ ತಾಲ್ಲೂಕುಗಳಲ್ಲಿ ಮಾಯಮ್ಮನ ದೇವಾಲಯ ಪ್ರಧಾನವಾಗಿವೆ. ಉಳಿದಂತೆ ಯಲ್ಲಮ್ಮ ಮತ್ತು ಓರಗಲ್ಲಮ್ಮ ಕಾಣಿಸುತ್ತಾಳೆ. "ಮಾರೆಮ್ಮ ಪಶುಪಾಲಕ ವಲಸೆಗಾರರ ದೇವತೆ. ಈ ದೇವತೆಯ ಶಿಲಾಮೂರ್ತಿಗಳು ಶಿವಲಿಂಗದಂತಿವೆ. ಜೊತೆಗೆ ತ್ರಿಶೂಲ, ಡಮರು, ಪಾನಪಾತ್ರೆ, ಖಡ್ಗಗಳು ಇರುತ್ತವೆ".[೭೯] ಮಾಯವ್ವ ಹಾಲುಮತಸ್ಥರು ಆರಾಧಿಸುವ ಸಪ್ತಮಾತೃಕೆಯರಲ್ಲಿ ಮೊದಲಿನವಳು. ಬೀರಪ್ಪನ ಸಾಕು ತಾಯಿ. ಬೀರಪ್ಪನಿಗೆ ಕುರಿಕಾಯುವುದನ್ನು ಕಲಿಸಿದಾಕೆ. ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕು ಚಿಂಚಲಿ ಗ್ರಾಮದ "ಮಾಯವ್ವನನ್ನು ಪೂಜೆ ಮಾಡುವವರು ಹಾಲುಮತಸ್ಥರು ಮತ್ತು ಲಿಂಗಾಯತರು".[೮೦] ಯಲ್ಲಮ್ಮ; ಓರಗಲ್ಲಮ್ಮ ಹಾಲುಮತದವರ ಕುಲದೇವತೆ ಅನ್ನುವುದು ಶಂಬಾ ಜೋಶಿಯವರ ವಾದ. ಈ ಓರಗಲ್ಲಮ್ಮ ದೇವಾಲಯಗಳ ಮೇಲೆ "ಟಗರ ಕಾಳಗ, ಕುದುರೆ, ಕುದುರೆಯ ಮೇಲೆ ಸವಾರಿ ಮಾಡುವ, ಯೋನಿ ಆರಾಧನೆಯ ಉಬ್ಬು ಚಿತ್ರಗಳು ಇವೆ".[೮೧] ಈ ಚಿತ್ರಗಳೆಲ್ಲ "ಪಶುಪಾಲಕ ಕುರುಬ ಸಂಸ್ಕೃತಿಯ ಪ್ರಾಚೀನತೆಯನ್ನು ತಿಳಿಸುತ್ತವೆ".[೮೨]

೪.೩.೪. ಹಾಲುಮತದ ಸ್ತ್ರೀ ಆರಾಧ್ಯ ಸ್ತ್ರೀದೈವಗಳು ಮತ್ತು ರೇವಣಸಿದ್ಧನ ಆಚರಣಾತ್ಮಕ ಸಂಬಂಧಗಳು

ರೇವಣಸಿದ್ಧನಿಗೂ ಮತ್ತು ಆತನ ದೇವಾಲಯ ಸುತ್ತ ಇರುವ ಸ್ತ್ರೀದೈವಗಳಿಗೂ ಪರಸ್ಪರ ಬಿಡಿಸಲಾರದಷ್ಟು ಸಂಬಂಧ ಬೆಸೆದುಕೊಂಡಿದೆ. ಆ ಸ್ತ್ರೀದೈವಗಳನ್ನು ಹಾಲುಮತ ಸಮುದಾಯದ ಒಂದೊಂದು ಗೋತ್ರದವರು ಪೂಜೆ ಮಾಡುತ್ತಿದ್ದಾರೆ. ಆಯಾ ಬೆಡಗಿನವರಿಗೆ ಆಯಾ ದೈವವೆ ಕುಲದೈವ. ಈ ವಿಧಾನವನ್ನು ಕೆಲವು ಗ್ರಾಮಗಳ ಹಿನ್ನೆಲೆಯಲ್ಲಿ ನೋಡಬಹುದು. ಶಿರಾ ತಾಲ್ಲೂಕು 'ಪಟ್ಟನಾಯಕನಹಳ್ಳಿ' ಗ್ರಾಮದಲ್ಲಿರುವ ಯಲ್ಲಮ್ಮ (ಏಕನಾಥೇಶ್ವರಿ) 'ಸತ್ಯನ್' ಗೋತ್ರದವರು "ಹೊಸೂರಮ್ಮ"ನನ್ನು "ಹಾಲನ್" ಗೋತ್ರದವರು ಪೂಜೆ ಮಾಡುತ್ತಾರೆ. ಹೊಸದುರ್ಗ ತಾಲ್ಲೂಕು ಬಾಗೂರು ಗ್ರಾಮದಲ್ಲಿ ಹಾಲುಮತಸ್ಥರಿಗೆ ಸಂಬಂಧಿಸಿದ ಐದು ಸ್ತ್ರೀದೈವಗಳಿವೆ ಮೂರು ರೇವಣಸಿದ್ಧ ದೇವಾಲಯ ಆವರಣದಲ್ಲಿವೆ. ಮತ್ತೆರಡು ಹಾಲುಮತಸ್ಥರ ಓಣಿಯಲ್ಲಿವೆ. ಓರಗಲ್ಲಮ್ಮನನ್ನು 'ಆರ್ಯ' ಗೋತ್ರದವರು, ಉಚ್ಚಂಗಿ ಯಲ್ಲಮ್ಮನನ್ನು 'ಪರಶಲು' ಗೋತ್ರದವರು, ಲಕ್ಕಮ್ಮ (ವನಿತೆಮ್ಮ)ನನ್ನು 'ಹಾಲನ್' ಗೋತ್ರದವರು, ಕೊಲ್ಲಾಪುರದ ಯಲ್ಲಮ್ಮನನ್ನು 'ಬೆಳ್ಳಿ' ಗೋತ್ರದವರು, ಮತ್ತೊಂದು ಕೊಲ್ಲಾಪುರದ ಯಲ್ಲಮ್ಮನನ್ನು 'ಪರಶಲು' ಗೋತ್ರದವರು (ಕೊಲ್ಲಾಪುರದ ಯಲ್ಲಮ್ಮ ದೇವಾಲಯಗಳು ಎರಡು ಇವೆ) ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಕರ್ನಾಟಕದ ತುಂಬಾ ಹಾಲುಮತದವರು ರೇವಣಸಿದ್ಧ ದೇವಾಲಯದಲ್ಲಿರುವ ಸ್ತ್ರೀ ದೈವಗಳನ್ನು ಪೂಜೆ ಮಾಡುತ್ತಿದ್ದಾರೆ. ಆದರೆ ಒಂದೇ ಗೋತ್ರದವರು ಎಲ್ಲಾ ಕಡೆ ಒಂದೇ ದೈವವನ್ನು ಪೂಜಿಸುವುದಿಲ್ಲ. ಬೇರೆ ಬೇರೆ ಗೋತ್ರದವರು ಬೇರೆ ಬೇರೆ ದೇವತೆಯನ್ನು ಪೂಜಿಸುತ್ತಾರೆ. ಉದಾ. ಹಿರಿಯೂರು ತಾಲ್ಲೂಕು 'ಮಸಕಲು' ಗ್ರಾಮದಲ್ಲಿ ಲಕ್ಕಮ್ಮನ ಆರಾಧಕರು 'ಮಲ್ಲಿಗೆ ಕುರುಬರು' ಕಡೂರು ಕೆರೆಸಂತೆ ಗ್ರಾಮದ ಲಕ್ಕಮ್ಮನ ಆರಾಧಕರು 'ಚೌಡಿಕೆ' ಗೋತ್ರದವರು.

ಹಾಲುಮತದ ಸಮುದಾಯದ 'ಚೌಡಿಕೆ' ಮನೆತನದವರು ವಿಶಿಷ್ಟವಾದ ಸಾಂಸ್ಕೃತಿಕ ಸಂಬಂಧವನ್ನು ಹೊಂದಿದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲಿ 'ಮಾವುರದ ಯಲ್ಲಮ್ಮ' ದೈವವಿದೆ. ಈಕೆ ಹಾಲುಮತಸ್ಥರ ಆರಾಧ್ಯ ದೇವತೆ. ಈಕೆ ಚೌಡಿಕೆ ಗೋತ್ರದವರಿಗೆ ಕುಲದೇವತೆಯಾಗಿದ್ದಾಳೆ. ಈ ಚೌಡಿಕೆ ಮನೆತನದವರು ಜೋಗಪ್ಪ ಜೋಗತಿಯರಾಗುತ್ತಾರೆ.[೮೩] ಇವರು ಸೌದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದ ಯಲ್ಲಮ್ಮನ ಭಕ್ತರು. ಈಗಲೂ ವರ್ಷಕ್ಕೊಮ್ಮೆ ಮತ್ತು ವಿಶೇಷ ಆಚರಣೆಗಳ ಸಂದರ್ಭದಲ್ಲಿ ಸೌದತ್ತಿಗೆ ಬಂದು ಹೋಗುತ್ತಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು 'ಕಂದಿಕೆರೆ' ಮತ್ತು ಚಳ್ಳಕೆರೆ ತಾಲ್ಲೂಕು ಹರತಿಕೋಟೆ ಮುಂತಾದ ಗ್ರಾಮಗಳಲ್ಲಿ 'ಚೌಡಿಕೆ' ಮನೆತನದವರು ಇದ್ದಾರೆ. ಇವರೆಲ್ಲರೂ ಸೌದತ್ತಿಯ ಸುತ್ತಮುತ್ತಲಿನ ಪ್ರದೇಶದಿಂದ ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದ ಭಾಗಕ್ಕೆ ಹಲವು ಹಾಲುಮತ ಸಮುದಾಯಗಳು ವಲಸೆ ಹೋಗಿದ್ದಾವೆ. 'ಶಿವನಿ' ಗ್ರಾಮದ ರೇವಣಸಿದ್ಧ ಒಡೆಯರು "ನಾವು ಬಿಜಾಪುರದ ಭಾಗದವರು. ಮುಸ್ಲಿಂರ ದಾಳಿಯನ್ನು ತಾಳಲಾರದೆ ನಮ್ಮ ದೇವರನ್ನು 'ಗೂಡೆ'ಯಲ್ಲಿ (ಪುಟ್ಟಿಯಲ್ಲಿ) ಹಾಕಿಕೊಂಡು ಓಡಿಬಂದು ಇಲ್ಲಿ ನೆಲೆಸಿದೆವು"[೮೪] ಎಂದು ಹೇಳುತ್ತಾರೆ. ಹೊಳಲಕೆರೆ ತಾಲ್ಲೂಕು ತಾಳಿಕಟ್ಟೆ ಗ್ರಾಮದವರು "ನಾವು ತಾಳಿಕೋಟೆ ಕದನದಲ್ಲಿ ಸೋತ ನಂತರ ಈ ಗ್ರಾಮಕ್ಕೆ ಬಂದೆವು. ಆ ಕಾರಣ ಕ್ಕಾಗಿ ನಮ್ಮ ಗ್ರಾಮಕ್ಕೆ ತಾಳಿಕಟ್ಟೆ ಎಂಬ ಹೆಸರು ಬಂದಿದೆ"[೮೫] ಎಂದು ಹೇಳುತ್ತಾರೆ. ಒಟ್ಟಾರೆಯಾಗಿ ಹಲವು ಕಾರಣಗಳಿಂದ ಉತ್ತರ ಕರ್ನಾಟಕದ ಕುರುಬರು ದಕ್ಷಿಣ ಕರ್ನಾಟಕಕ್ಕೆ ವಲಸೆ ಹೋಗಿರುವುದು ಕಂಡುಬರುತ್ತದೆ.

ನಂಜನಗೂಡು ತಾಲ್ಲೂಕು 'ಕಳಲೆ' ಗ್ರಾಮದ ಹಾಲುಮತ ಸಮುದಾಯದ ಬೀದಿಯಲ್ಲಿ ಸಪ್ತಮಾಳಮ್ಮ, ಕೊಳ್ಳಿ ಮಾಲೆಮ್ಮ, ಚೌರದ ಮಾಲೆಮ್ಮ, ಕಡೆ ಮಾಲೆಮ್ಮ, ಕಾರನಾಳ ಮಾಲೆಮ್ಮ, ಚಿಕ್ಕಮಾಲೆಮ್ಮ, ಪಿರಿಯಪಟ್ಟಣದ ಚಿಕ್ಕಮ್ಮ, ಮಲಿಯಮ್ಮ ಮತ್ತು ಓರಗಲ್ಲಮ್ಮ ಎನ್ನುವರ 'ನವ' ಸ್ತ್ರೀ ದೈವಗಳಿವೆ. ಈ ಎಲ್ಲಾ ದೈವಗಳನ್ನು ಹಾಲುಮತ ಸಮುದಾಯದ ವಿವಿಧ ಗೋತ್ರದವರು ಪೂಜೆ ಮಾಡುತ್ತಾರೆ. ರೇವಣಸಿದ್ಧನ "ರಂಗ ಹಬ್ಬ"ದಲ್ಲಿ ಈ ಎಲ್ಲಾ ದೈವಗಳು ಕಡ್ಡಾಯವಾಗಿ ಭಾಗಿಯಾಗುತ್ತವೆ. ಯಾವುದಾದರು ಒಂದು ದೈವ ಬರದಿದ್ದರೆ, ರೇವಣಸಿದ್ಧನ ಉತ್ಸವ ಪಲ್ಲಕ್ಕಿ ಮೇಲೆ ಏಳುವುದೇ ಇಲ್ಲ ಅನ್ನುವ ನಂಬಿಕೆ ಇದೆ. ಈ ಆಚರಣೆಯಲ್ಲಿ ಸಪ್ತಮಾಳಮ್ಮ ಪ್ರಮುಖ ಪಾತ್ರ ವಹಿಸುತ್ತಾಳೆ. ಈ ಗ್ರಾಮದಲ್ಲಿ ಎರಡು ವರ್ಷಕ್ಕೊಮ್ಮೆ ಸಪ್ತಮಾಳಮ್ಮ ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಮೂರು ತಿಂಗಳ 'ಗಬ್ಬದ ಕುರಿ' ಹೊಟ್ಟೆಯನ್ನು ಸೀಳಿ "ಮರಿಗರ್ಭದ ಚೀಲ"ವನ್ನು ಕಾಣಿಕೆಯಾಗಿ ಸಪ್ತಮಾಳಮ್ಮನಿಗೆ ಅರ್ಪಿಸುವ ಆಚರಣೆ ರೂಢಿಯಲ್ಲಿದೆ. ಇದು ರೇವಣಸಿದ್ಧ ತನ್ನ ಪತ್ನಿ "ಸುಂದರನಾಚಿ"ಯ ಗರ್ಭದಿಂದ 'ರುದ್ರಮುನಿ'ಯ ಮೂರು ತಿಂಗಳ ಪಿಂಡವನ್ನು ತೆಗೆದು ಹೊರನೆಲದಲ್ಲಿ ಹುಗಿದ ಪರಿಕಲ್ಪನೆಯಿಂದ ಹುಟ್ಟಿಕೊಂಡಿರುವಂತಹದ್ದು. ಈ ಆಚರಣೆ ಹಾಲುಮತಸ್ಥರಲ್ಲಿ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿರಬೇಕು. ಅಲ್ಲದೆ ರೇವಣಸಿದ್ಧನಿಗೆ ನಡೆಸುವ ಆಚರಣೆ ಇದಾಗಿರಬೇಕು. ಏಕೆಂದರೆ ರೇವಣಸಿದ್ಧನಿಗೂ ಮತ್ತು ಈ ಆಚರಣೆಯ ವಿಶಿಷ್ಟತೆಗೂ ಆಂತರಿಕ ಸಂಬಂಧವಿದೆ. ರೇವಣಸಿದ್ಧನನ್ನು ಲಿಂಗಾಯತೀಕರಣಗೊಳಿಸಿದ ನಂತರ ಈ ಬಲಿ ಆಚರಣೆ

ಸಪ್ತಮಾಳಮ್ಮನಿಗೆ ರೂಪಾಂತರವಾಗಿರಬೇಕು. ಏಳು ದಿನಗಳ ಜಾತ್ರೆಯಲ್ಲಿ ಭಿನ್ನ ಆಚರಣೆಗಳು ನಡೆಯುತ್ತವೆ. ಈ ಎಲ್ಲಾ ಆಚರಣೆಗಳು ರೇವಣಸಿದ್ಧನ ಸಮ್ಮುಖದಲ್ಲಿ ನಡೆಯುತ್ತವೆ.

೪.೩.೪.೧. ತೋಪುಜಾತ್ರೆ

ದಕ್ಷಿಣ ಕರ್ನಾಟಕದ ಹಲವು ಬೀರದೇವರ ದೇವಾಲಯಗಳಲ್ಲಿ ತೋಪುಜಾತ್ರೆ ನಡೆಯುತ್ತದೆ. ಈ ಜಾತ್ರೆ ಏಳು ದಿನಗಳ ಕಾಲ ನಡೆಯುತ್ತದೆ. ಆ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದ ಗುಡಿಕಟ್ಟು ದೈವಗಳು ಮತ್ತು ಭಕ್ತರು ಬಂದಿರುತ್ತಾರೆ. ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು 'ಹಿರೇನೆಲ್ಲೂರು' ಗ್ರಾಮದಲ್ಲಿ ನಡೆದ ತೋಪುಜಾತ್ರೆಯನ್ನು ಆಧಾರವನ್ನಾಗಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಹನ್ನೆರಡು ಗುಡಿಕಟ್ಟುಗಳು ಜಾತ್ರೆಗಾಗಿ ಆಗಮಿಸಿದ್ದವು. ಈ ಎಲ್ಲಾ ಗುಡಿಕಟ್ಟು ಗಳಿಗೆ 'ಹಿರೆಗುಡಿಕಟ್ಟು' ಹಿರೆನಲ್ಲೂರು. ಈ ಹನ್ನೆರಡು ಗುಡಿಕಟ್ಟುಗಳ ವ್ಯಾಪ್ತಿಯಲ್ಲಿ ಎಂಬತ್ತಕ್ಕೂ ಹೆಚ್ಚು ಹಳ್ಳಿಗಳು ಸೇರುತ್ತವೆ. ಆ ಎಲ್ಲಾ ಗುಡಿಕಟ್ಟುಗಳಿಗೆ, ಹಳ್ಳಿಗಳ ಹಾಲುಮತಸ್ಥರಿಗೆ "ಅಸಂದಿ ಮಹಾಸಂಸ್ಥಾನದ ರೇವಣಸಿದ್ಧ"ನೇ ನಾಯಕ. ನಂತರದ ಆಚರಣಾತ್ಮಕ ಸ್ಥಾನ ಕೆರೆಸಂತೆ ಲಕ್ಕಮ್ಮಳಿಗೆ ಸಲ್ಲುತ್ತದೆ. ಲಕ್ಷ್ಮಿಪೂಜೆ (ಲಕ್ಕಮ್ಮಳೇ ಲಕ್ಷ್ಮಿ), ಕಾಚಿಬೀರ ಸೇವೆ, ಕೆಂಡಾರ್ಚಣೆ, ಅಲಗಸೇವೆ, ಪಟ್ಟಕಟ್ಟುವಿಕೆ, ಗೂಡೆ ಅರ್ಪಿಸುವ ಆಚರಣೆ ಮುಂತಾದ ಆಚರಣೆಗಳು ನಡೆಯುತ್ತವೆ. ಈ ಆಚರಣೆ ಗಳಲ್ಲಿ ಲಕ್ಕಮ್ಮ ಪ್ರಧಾನ ಪಾತ್ರ ವಹಿಸುತ್ತಾಳೆ. ಈ ಸಂದರ್ಭದಲ್ಲಿ ಭಂಡಾರ ಬಳಕೆ ಪ್ರಧಾನವಾಗಿ ಆಗುತ್ತದೆ. ಭಂಡಾರ ಹಾರಿಸುವವರು ಲಕ್ಕಮ್ಮನ ಶಿಷ್ಯರಾದ 'ಗೊರವರು'. ಬೀರಪ್ಪನ ಶಿಷ್ಯರಾದ 'ಈರಗಾರರಿಗೆ' ಗೊರವಯ್ಯಗಳು ಮೈಮೇಲೆ ಭಂಡಾರ ಹಾಕದಿದ್ದರೆ ಮೈಯಲ್ಲಿ ಬೀರಪ್ಪ ಬರುವುದಿಲ್ಲ. ಅಂದರೆ ಈರಗಾರರ ಆಚರಣೆಯ ಮುಖಾಂತರ ಬೀರಪ್ಪ ಜೀವಂತಿಕೆಯ ರೂಪ ತಾಳುವುದೇ ಇಲ್ಲ. ಅಲಗ ಸೇವೆ ಮತ್ತು ಕಾಚಿಬೀರಸೇವೆ ನಡೆಯುವುದಿಲ್ಲ. ಬೀರಪ್ಪನ ಶಿಷ್ಯರಾದ ಈರಗಾರರನ್ನು ಹುರಿದಂಬಿಸುವವರು ಗೊರವಯ್ಯಗಳು. ಇದಕ್ಕೆ ರೇವಣಸಿದ್ಧ ಒಡೆಯರುಗಳೂ ಕೈಜೋಡಿಸುತ್ತಾರೆ. ಈರಗಾರರನ್ನು ಮೈದುಂಬಿಸುತ್ತಾರೆ. ಮೈದುಂಬಿದ ಈರಗಾರರು ಕಾಚಿಬೀರ ಸೇವೆ ಮಾಡುತ್ತಿರುತ್ತಾರೆ. ಅಂದರೆ ಹಾಲುಮತಸ್ಥರು ಬೀರಪ್ಪನ ದೇವಸ್ಥಾನದ ಸುತ್ತ ಕುರಿಗಳನ್ನು ಬಿಡುತ್ತಾರೆ. ಆ ಕುರಿಗಳನ್ನು ಈರಗಾರರು ಜೀವಂತವಾಗಿ ಕುತ್ತಿಗೆಗೆ ಕಚ್ಚಿ ಕಚ್ಚಿ ರಕ್ತ ಕುಡಿಯುತ್ತಾರೆ. ಈ ತರಹದ ಆಚರಣೆ ಹಲವು ತಳಸಮುದಾಯಗಳಲ್ಲಿ ರೂಢಿಯಲ್ಲಿದೆ. ಬೇಡ ಸಮುದಾಯದ ಪೋತರಾಜ ಈರಗಾರರ ಸಂಪ್ರದಾಯದ ವಿಧಾನಕ್ಕೆ ಸೇರುತ್ತಾರೆ. ಈ ಎರಡು ಸಮುದಾಯಗಳು ಗಾವು ಜಿಗಿಯುವ ಆಚರಣೆಗೆ ಮತ್ತು ಕಾಚಿಬೀರ ಸೇವೆಯನ್ನು ಪ್ರತಿಬಿಂಬಿಸುತ್ತವೆ. ಈರಗಾರರು ಕುರಿಗಳನ್ನು ಕಚ್ಚಿ ತಿನ್ನುವ ದೃಶ್ಯ ಹಸಿದ ತೋಳಗಳ ಹಿಂಡು ಕುರಿಹಿಂಡಿಗೆ ಹೊಕ್ಕು ತಿನ್ನುತ್ತಿವೆ ಅನ್ನುವಂತೆ ಕಾಣಿಸುತ್ತದೆ. ರಕ್ತ ಕುಡಿಯುವಾಗ ಭಕ್ತಾದಿಗಳು ಉಘೇ ಉಘೇ ಅಂತ ಕೇಕೆ ಹಾಕುತ್ತ ಭಂಡಾರ ಹಾರಿಸುತ್ತಾರೆ.

ಈ ಆಚರಣೆಗೆ ಐತಿಹಾಸಿಕ ಹಿನ್ನೆಲೆಯಿದೆ. ಹಾಲುಮತದ ಸಾಂಸ್ಕೃತಿಕ ವೀರನಾದ ಪದ್ಮಗೊಂಡ ಅನಿವಾರ್ಯವಾಗಿ (ಅನಿವಾರ್ಯತೆಯಲ್ಲಿ ಶಿವ ಪಾರ್ವತಿಯರ ಕಾಣಿಕೆ ಇದೆ) ಸಿಕ್ಕ ಕುರಿಗಳನ್ನು ಕಾಯುತ್ತ ಅಡವಿ ಸೇರುತ್ತಾನೆ. ಆ ಒಂಟಿತನದಲ್ಲಿ ರಾಕ್ಷಸಿಯ ಮಗಳು ಪರಿಚಯವಾಗುತ್ತಾಳೆ.

ಆತ್ಮೀಯ ಸಂಬಂಧ ಬೆಳೆಯುತ್ತದೆ. ವಿವಾಹ ಆಗಬೇಕೆಂದು ನಿರ್ಧಾರ ಮಾಡುತ್ತಾರೆ. ಆಗ ತಾಯಿ ರಾಕ್ಷಸಿ ಅಡ್ಡಬರಬಹುದೆಂದು ಮೋಸದಿಂದ, ಪದ್ಮಗೊಂಡ ಮತ್ತು ರಾಕ್ಷಸಿ ಸೇರಿ ಮಾಂತ್ರಿಕ ಶಕ್ತಿಯಿಂದ ಕೊಲ್ಲುತ್ತಾರೆ. ಇದನ್ನರಿತ ತಾಯಿ ರಾಕ್ಷಸಿ ಸಾಯುವ ಮುಂಚೆ ಕೋಪದಿಂದ "ಎಲೋ ನರನೇ ನೀವಿಬ್ಬರು ಒಂದಾಗಿ ಸೇರಿ ನನ್ನನ್ನು ಈ ರೀತಿ ಮೋಸಗೊಳಿಸಿದರಲ್ಲವೇ? ಆಗಲಿ ನಾನು ಮುಂದಿನ ಜನ್ಮದಲ್ಲಿ ತೋಳವಾಗಿ ಹುಟ್ಟಿ ನಿನ್ನ ಕುರಿವಿಂಡನ್ನು ನಾಶ ಮಾಡುವೆನು"[೮೧] ಎಂದು ಧ್ವನಿಗೈದು ಜೀವ ಬಿಡುತ್ತಾಳೆ. ಈ ಪರಿಕಲ್ಪನೆ ಹಾಲುಮತ ಪುರಾಣಗಳಲ್ಲಿ ಉಕ್ತಗೊಂಡಿದೆ.

> "ರಕ್ಕಸಿ ಪ್ರಾಣವ ಬಿಡುವ ಸಮಯದೊಳು
> ಒಕ್ಕಣಿಸಿದಳು ವಾಕ್ಯದಲಿ
> ಗಕ್ಕನೇ ಕುರಿಯ ಹಿಂಡಿಗೆ ನಾನು ತೋಳವಾಗಿ
> ಶಿಕ್ಷೆ ಮಾಡದೆ ಬಿಡೆನೆನುತ
> ಏಳು ಕೊಪ್ಪರಿಗೆಯ ಕೂಳು ತಿನ್ನುವವಳು
> ತೋಳವಾಗಿ ಜನಿಸಿದಳು
> ಏಳುತ ಬೀಳುತ ಕುರಿಗಳ ತಿನ್ನುತ
> ಕಾಳ ರಕ್ಕಸಿಯು ಮೆರೆದಾಳು"[೮೨]

ಹೀಗೆ ಸಾಂಸ್ಕೃತಿಕ ಸಂಬಂಧವುಳ್ಳ ಆಚರಣೆ ಪೂರೈಕೆ ಆಗುತ್ತಿದ್ದಂತೆ 'ಒಡೆಯರು', 'ಪೂಜಾರಿ'ಗಳು ಬೀರ ದೇವಾಲಯದ ಆವರಣದ ಸುತ್ತ ಸಂತೋಷಭರಿತವಾಗಿ ನರ್ತನ ಮಾಡುತ್ತಿರುತ್ತಾರೆ. ಕಾಚಿಬೀರ ಸೇವೆ ಮಾಡಿ ಸುಸ್ತಾದ ಈರಗಾರರನ್ನು ಆಶೀರ್ವದಿಸಿ ಎಚ್ಚರ ಗೊಳಿಸುತ್ತಾರೆ.

೪.೩.೪.೨. ಕಂಥೆಸೇವೆ

ಕಂಥೆ ಎಂದರೆ 'ಕಂಬಳಿ' ಎಂದಾರ್ಥ. ಕಂಬಳಿ ಹಾಲುಮತಸ್ಥರಿಗೆ ಪೂಜ್ಯನೀಯ ವಸ್ತು. ಇವರು ಕಂಬಳಿ ಇಲ್ಲದೆ ಯಾವುದೇ ಆಚರಣೆಗಳನ್ನು ಮಾಡುವುದಿಲ್ಲ. ಕಂಥೆಯನ್ನು ಕಿಟೆಲ್ ಅವರು "ಹೆಣಿಗೆಯಿಂದ ಮಾಡಿದ ವಸ್ತ್ರ. ಶೈವ ಸನ್ಯಾಸಿಗಳು ಧರಿಸುವ ವಸ್ತ್ರ"[೮೩] ಎಂದು ಕರೆದಿದ್ದಾರೆ. ಇಂಥ ಪವಿತ್ರವಾದ ವಸ್ತ್ರವನ್ನು ಅಥವಾ ಕಂಬಳಿಯನ್ನು ರೇವಣಸಿದ್ಧ ಅಥವಾ ಸಿದ್ಧರಾಮನಿಗೆ ಅರ್ಪಿಸುವ ಆಚರಣೆಯೇ ಕಂಥೆಸೇವೆ.

ಕಂಥೆ ಸೇವೆ ಆಚರಣೆ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ರೇವಣಸಿದ್ಧ/ ಸಿದ್ಧರಾಮನ ಮೂರ್ತಿಗಳನ್ನು ಕೂಡಿಸಿರುವ ಕಂಬಳಿ ಭಿನ್ನವಾದಾಗ ಈ ಆಚರಣೆ ನಡೆಯುತ್ತದೆ.

> "ಹನ್ನೆರಡು ವರ್ಷಿನ ಕಂತೇನ ಗಂಜಿ ಮಾಡಲಿ ಬೇಕಯ್ಯ
> ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
> ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ"[೮೪]

ಹೀಗೆ ಹೊಸ ಕಂಥೆಯನ್ನು ಅರ್ಪಿಸುವ ಅಥವಾ ಕಂಥೆಯನ್ನು ಬದಲಾಯಿಸುವ ಆಚರಣೆಯೇ ಕಂಥೆ ಸೇವೆ. ಈ ಆಚರಣೆಯಲ್ಲಿ ಹಾಲುಮತದ ಗುಡಿಕಟ್ಟುಗಳ ದೈವಗಳು ಸೇರುತ್ತವೆ. ಇದರಲ್ಲಿ ಏಳು

ಗುಡಿಕಟ್ಟು ದೈವಗಳು ಇರುತ್ತವೆ. ಕೆಲವು ದೇವಾಲಯದ ಗುಡಿಕಟ್ಟುಗಳಲ್ಲಿ ಕೇವಲ ರೇವಣಸಿದ್ಧ ದೈವಗಳು ಮಾತ್ರ ಇವೆ. ಇನ್ನೂ ಕೆಲವು ಗುಡಿಕಟ್ಟುಗಳಲ್ಲಿ ಹಾಲುಮತದ ಆರಾಧ್ಯ ದೈವಗಳು ಇವೆ. ಉದಾಹರಣೆಗೆ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಯಳನಾಡು ಗ್ರಾಮದಲ್ಲಿ ರೇವಣಸಿದ್ಧ ದೇವಾಲಯದ ಗುಡಿಕಟ್ಟು ಈಗಿದೆ.

೧. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಯಳನಾಡು ಗ್ರಾಮದ ರೇವಣಸಿದ್ಧ

೨. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಸಂಗಾಪುರ ಗ್ರಾಮದ ರೇವಣಸಿದ್ಧ

೩. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಮರಾಠಿ ಪಾಳ್ಯ ಗ್ರಾಮದ ರೇವಣಸಿದ್ಧ

೪. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಭಟ್ಟರಹಳ್ಳಿ ಗ್ರಾಮದ ರೇವಣಸಿದ್ಧ

೫. ಚಿಕ್ಕನಾಯಕನಹಳ್ಳಿ ತಾಲ್ಲೂಕು, ದಿಂಕನಹಳ್ಳಿ ಗ್ರಾಮದ ರೇವಣಸಿದ್ಧ

೬. ಹೊಸದುರ್ಗ ತಾಲ್ಲೂಕು, ಕಂಚಿಪುರ ಗ್ರಾಮದ ರೇವಣಸಿದ್ಧ

೭. ಅರಸಿಕೆರೆ ತಾಲ್ಲೂಕು, ಕರಡಿಹಳ್ಳಿ ಗ್ರಾಮದ ರೇವಣಸಿದ್ಧ ದೈವಗಳು.

ಆ ದೈವಗಳ ಜೊತೆಗೆ ಗ್ರಾಮದ ಬೀರಪ್ಪ, ಕರಿಯಮ್ಮ, ಮೈಲಾರಲಿಂಗ ಮುಂತಾದ ದೈವಗಳು ಸೇರುತ್ತವೆ. ಬೀರಪ್ಪ ಮತ್ತು ಕರಿಯಮ್ಮ ಗುಡಿಕಟ್ಟು ವ್ಯವಸ್ಥೆಯೊಳಗೆ ಸೇರುತ್ತವೆ. ಮೈಲಾರಲಿಂಗ ಉಳಿದ ಗ್ರಾಮ ದೈವಗಳು ಸೇರುವುದಿಲ್ಲ. ಈ ಗ್ರಾಮ ದೈವಗಳು ಸಮುದಾಯದ ದೈವ ಅನ್ನುವ ಕಾರಣಕ್ಕೆ ಭಾಗಿಯಾಗುತ್ತವೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು 'ಶಿವನಿ' ಗ್ರಾಮದ ರೇವಣಸಿದ್ಧ ದೈವದ ಕಂತೆಸೇವೆ ಆಚರಣೆಗೆ ಬರುವ, ಗುಡಿಕಟ್ಟು ಆಡಳಿತಕ್ಕೆ ಒಳಪಡುವ ಗುಡಿಕಟ್ಟು ದೈವಗಳು.

೧. ಹೊಳಲಕೆರೆ ತಾಲ್ಲೂಕು, ತಾಳೆಕಟ್ಟೆ ಗ್ರಾಮದ ಬೀರಪ್ಪ

೨. ತರೀಕೆರೆ ತಾಲ್ಲೂಕು, ಸೊಲ್ಲಾಪುರ ಗ್ರಾಮದ ಸಿದ್ಧರಾಮ

೩. ತರೀಕೆರೆ ತಾಲ್ಲೂಕು, ಹೊಸೂರು ಗ್ರಾಮದ ಬೀರಪ್ಪ

೪. ತರೀಕೆರೆ ತಾಲ್ಲೂಕು, ಮುಗುಳಿ ಗ್ರಾಮದ ಬೀರಪ್ಪ

೫. ತರೀಕೆರೆ ತಾಲ್ಲೂಕು, ಗಡಿಹಳ್ಳಿ ಗ್ರಾಮದ ಬಸವಣ್ಣ

೬. ತರೀಕೆರೆ ತಾಲ್ಲೂಕು, ಅನುನಳ್ಳಿ ಗ್ರಾಮದ ಬೀರಪ್ಪ

೭. ತರೀಕೆರೆ ತಾಲ್ಲೂಕು, ಶಿವನಿ ಗ್ರಾಮದ ರೇವಣಸಿದ್ಧ ಬೀರಪ್ಪ ಮತ್ತು ಕರಿಯಮ್ಮ ದೈವಗಳು.

ಹೀಗೆ ಗುಡಿಕಟ್ಟು ಅನ್ನುವ ವ್ಯವಸ್ಥೆಯೊಳಗೆ ಹಾಲುಮತದ ದೈವಗಳೊಂದಿಗೆ ರೇವಣಸಿದ್ಧ ಸಂಕರಶೀಲ ವಾಗಿವೆ. ಆ ಆಚರಣೆಯನ್ನು ಕುರಿತು ಡೊಳ್ಳಿನ ಹಾಡುಗಳು ಸಿಗುತ್ತವೆ.

"ಕಂಬಳೆಪ್ಪ ಕಂಬಳ್ಯೊ ಸಣ್ಣ ನೂಲಿನ ಕಂಬಳೊ
ಸಣ್ಣ ನೂಲಿನ ಕಂಬಳ್ಯೊ ಇದು ಯಾರಿಗೊಪ್ಪವ ಕಂಬಳೊ
ಯಾರಿಗೊಪ್ಪ ಕಂಬಳೊ ನಮ್ಮ ಸ್ವಾಮಿಗೊಪ್ಪುವ ಕಂಬಳೊ
ಸ್ವಾಮಿಗೊಪ್ಪುವ ಕಂಬಳೆಪ್ಪ ಮರದ ಕೊಪ್ಪಿ ಮಾಡಿಟ್ವಾನ
ಮುರದ ಕೊಪ್ಪಿ ಮಾಡಿಟ್ವಾನಪ್ಪ ಮುಂದಕ ಸಾಗಿ ಬಂದಾನ
ಮುಂದಕ ಸಾಗಿ ಬದಾನಪ್ಪ ಗೌಳೇರಣ್ಣನ ಕಂಡಾನ
ಗೌಳೇರಣ್ಣ ಗೌಳೇರ ತಮ್ಮ ಹಾಲಿನ ದಾನ ಮಾಡಂದಾನ
ಕಟ್ಟಿದ ಕರಗಳ ಕಣ್ಣಿಯ ಹೊಡೆದು ತಂಬಿಗೆ ನೊರೆಹಾಲ ಕರದಾನ
ತಂಬಿಗೆ ನೊರೆ ಹಾಲು ಕರದಾನಪ್ಪ ಸ್ವಾಮಿಗೆ ಸಲಿಸುತ ಕೊಟ್ವಾನ
ಕರಕುಡದ್ಹಾಲು ಎಂಜಲವೆಂದು ಮುಂದಕ ಸಾಗಿ ಹೋದಾನ
ಮುಂದಕ ಸಾಗಿ ಹೋದನಪ್ಪ ಕುರುಬರಣ್ಣನ ಕಂಡಾನ
ಕುರುಬರಣ್ಣ ಕುರುಬರ ತಮ್ಮ ಹಾಲಿನ ದಾನ ಮಾಡಂದಾನ
ಮುಚ್ಚಿದ ಮರಿಗಳು ಮುಚ್ಚಿದಂಗ್ಯೆದಾವ ಬಿಂದಿಗೆ ನೊರೆಹಾಲ ಕರದಾನ
ಬಿಂದಿಗೆ ನೊರೆಹಾಲು ಕರದಾನಪ್ಪ ಸ್ವಾಮಿಗೆ ಸಲಿಸುತ ಕೊಟ್ವಾನ
ಇವ ನನ್ನ ಮೀಸಲ ಹಾಲವೆಂದು ಮೂರು ಬೊಗಸಿ ಸಲಿಸ್ಯಾನ
ಮೂರು ಬೊಗಸಿ ಸೇಲಿಸ್ಯಾನಪ್ಪ ಮುಂದಕ ಸಾಗಿ ಹೋಗ್ಯಾನ
ಅವಕಾವ ಗುರುಹಿರಿಯರ ನಮ್ಮ ಗುರುವ ನೀವು ಕಂಡಿರೆ
ಅಂಡಗೊಂಗಡಿ ಸರಗಿನ ಬೆತ್ತ ಸದರ ಕಂಬಿನ ಹಚ್ಚಡ
ಬಟ್ಟನ್ನ ಮಾರಿ ಬಗರಿಯ ಗಡ್ಡ ನೆಟ್ಟನ ಮೂಗಿನ ಚಲುವನ
ನೆಟ್ಟನ್ನ ಮೂಗಿನ ಚಲುವನ ನಮ್ಮ ಹಡಗಲಿ ಹಾಲು ಸ್ವಾಮೇಳು
ಹಾಕ ಚಾರ ಉಲ್ಲಾಸ ಪಾವುಡ ದೇಶದ ಮ್ಯಾಲೆ ನಮ್ಮ ಮೆರವಣಿಗೆ"[೨೦]

ಈ ಹಾಡು ಹಡಗಲಿ 'ಹಾಲಸಿದ್ಧ'ನನ್ನು ಕುರಿತು ಹಾಡಿರುವಂತದ್ದು. ಹಾಲಸಿದ್ಧ ಅನ್ನುವುದು ರೇವಣಸಿದ್ಧನಿಗೆ ಇರುವ ಮತ್ತೊಂದು ಹೆಸರು. ರೇವಣಸಿದ್ಧನನ್ನು ಮಹಾರಾಷ್ಟ್ರ ಕರ್ನಾಟಕ ಗಡಿಭಾಗ ದಲ್ಲಿ ಹಾಲಸಿದ್ಧನೆಂದು ಕರೆಯುತ್ತಾರೆ. ಕೊಲ್ಹಾಪುರ ಜಿಲ್ಲೆ ಶಿರೋಳ ತಾಲ್ಲೂಕಿನ ಪಸರವಾಡ ಅಪ್ಪಾಚಿವಾಡಿಯಲ್ಲಿ 'ಹಾಲಸಿದ್ಧ' ದೇವಾಲಯವಿದೆ. ಈ ಹೆಸರಿನಲ್ಲಿರುವ ಅಪ್ಪಾ ಎಂಬ ಪದದ ಕಾರಣವಾಗಿಯೇ ಆ ಸ್ಥಾನಕ್ಕೆ ಅಪ್ಪಾಚಿವಾಡಿ ಎಂದು ಕರೆದಿರುವುದು. ಅಪ್ಪಾಚಿವಾಡಿ ಎಂಬುದರ ಅರ್ಥ 'ಹಾಲಸಿದ್ದೇಶನ ವಾಡಿ'. ಹಾಲಸಿದ್ಧ ಎಂದರೆ ದುಗ್ಧ ಸಂಪ್ರದಾಯದಲ್ಲಿದ್ದ ಸಿದ್ಧ. ಅರ್ಥಾತ್ ಪಶುಪಾಲಕ ಸಮಾಜದಲ್ಲಿದ್ದ ಸಿದ್ಧ. ಮುಖ್ಯವಾಗಿ ಇದು ಧನಗರ್ (ಕುರುಬ) ಸಮಾಜದ ಮುಖ್ಯ ಶ್ರದ್ಧಾ ನೆಲೆ. ಇದು ರೇವಣಸಿದ್ಧ ಜೀವಂತವಾಗಿ ಸಮಾಧಿಯಾಗಿರುವ ನೆಲೆಯೂ ಹೌದು.

ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ 'ಹಾಲಸಿದ್ಧ' ದೇವಾಲಯಗಳು ಇವೆ. ಗದಗ ಜಿಲ್ಲೆ ಡಂಬಳ ಗ್ರಾಮದ ಹಾಲುಮತ ಸಮುದಾಯದವರ ಓಣಿಯಲ್ಲಿ 'ಹಾಲಸಿದ್ಧಪ್ಪ'ನ ದೇವಾಲಯವಿದೆ. ಅಲ್ಲಿನ ಹಾಲುಮತದವರ ಆರಾಧ್ಯ ದೈವ, ಹಿರೇದೈವ. ಈ ದೇವಾಲಯವನ್ನು ಇವತ್ತು ಅಮೋಘಸಿದ್ಧ

ಪರಂಪರೆಗೆ ಸೇರಿದ ಒಡೆಯರು ಪೂಜೆ ಮಾಡುತ್ತಿದ್ದಾರೆ. ಇವರು ಹುಲ್ಲೂರು ಅಮೋಘಸಿದ್ಧ ಮಠಕ್ಕೆ ಸೇರಿದ ಶಿಷ್ಯ ಮನೆತನದವರು. ಅಮೋಘಸಿದ್ಧ ಮನೆತನದವರು ರೇವಣಸಿದ್ಧನನ್ನು ಪೂಜಿಸುವುದಿಲ್ಲ. ರೇವಣಸಿದ್ಧ ಮನೆತನದವರು ಮತ್ತು ಅಮೋಘಸಿದ್ಧ ಮನೆತನದವರು ರಕ್ತ ಸಂಬಂಧದಲ್ಲಿ ಬೀಗರುಗಳು. ಇವರು ಕರ್ನಾಟಕದ ಕೆಲವು ಸ್ಥಳಗಳಲ್ಲಿ ಅನಿವಾರ್ಯ ಅನ್ನುವಂತೆ ಕಂಡುಬರುತ್ತಾರೆ. ಬಿಜಾಪುರ ಜಿಲ್ಲೆ 'ಕುಮಠೆ' ಗ್ರಾಮದಲ್ಲಿ ಅಮೋಘಸಿದ್ಧ ಮನೆತನದವರು ಅರ್ಚಕರಾಗಿದ್ದಾರೆ. ಆ ಡಂಬಳ ಗ್ರಾಮದಲ್ಲಿ ಒಡೆಯರು ಇಲ್ಲದ ಕಾರಣ; ಹಾಲುಸಿದ್ಧ ಎನ್ನುವ ಹೆಸರಿರುವ ಕಾರಣ; ಹುಲ್ಲೂರು ಗ್ರಾಮಕ್ಕೆ ಹತ್ತಿರ ಇರುವ ಕಾರಣ ಹುಲ್ಲೂರು ಮಠದವರೇ ಉಸ್ತುವಾರಿ ವಹಿಸಿಕೊಂಡು ಶಿಷ್ಯರನ್ನು ಕಳಿಸಿರಬೇಕು. ಈ ವಿಧಾನದ ಬಗ್ಗೆ ಇನ್ನೂ ಅಧ್ಯಯನ ಆಗಬೇಕು.

ಮಹಾರಾಷ್ಟ್ರ ಕರ್ನಾಟಕದ ಹಲವು ಗಡಿಭಾಗಗಳಲ್ಲಿ ಹಾಲುಮತಸ್ಥರಲ್ಲದೆ ಇತರ ಸಮುದಾಯ ಗಳು 'ಹಾಲಸಿದ್ಧಪ್ಪ' ಅನ್ನುವ ಹೆಸರಿನಲ್ಲಿ ರೇವಣಸಿದ್ಧನನ್ನು ಆರಾಧಿಸುತ್ತಾರೆ. ಅಲ್ಲದೆ ಬ್ರಾಹ್ಮಣ, ಜೈನ, ಮುಸ್ಲಿಂ ಸಮುದಾಯದವರೂ ಆರಾಧಿಸುತ್ತಾರೆ. ಅಪ್ಪಾಚಿವಾಡಿಯ ರೇವಣಸಿದ್ಧ ಉತ್ಸವ ಸಂದರ್ಭದಲ್ಲಿ ರೇವಣಸಿದ್ಧನ ಪಲ್ಲಕ್ಕಿ ಎತ್ತುವ ಹಕ್ಕು ಜೈನ ಸಮುದಾಯಕ್ಕೆ ಸೇರಿದೆ. "ಬ್ರಾಹ್ಮಣ ವಾತಾವರಣದಲ್ಲಿ ರಚಿಸಲಾಗಿರುವ 'ಶ್ರೀ ಹಾಲಸಿದ್ಧ ಪಂಚಪದಿ'ಯಲ್ಲಿ ರೇವಣಸಿದ್ಧನನ್ನು ನಾಥಪಂಥೀಯ 'ರೇವನಾಥ'ನೆಂದು; ಈ ದೈವದ ಅರ್ಚಕರು ಧನಗರ್ (ಕುರುಬರು) ಎಂದು ಹೇಳಲಾಗಿದೆ.

> "ನಾಮವು ನಿನಗೆ ಹಲಸಿದ್ಧ ಕೊಟ್ಟಿಹರು ಭಕುತರು
> ತಾಣವ ನಿನೆಗ ಭಕುತ ಶಿಂದೆಯು ಕೊಟ್ಟಿಹನು
> ಪ್ರೇಮಮಯಿ ಭಕುತ ಧನಗರರು ಪೂಜಕರಾಗಿಹರು"[೮೧]

ಹೀಗೆ ಬ್ರಾಹ್ಮಣ ಸಮುದಾಯದಲ್ಲಿ ರೇವಣಸಿದ್ಧ 'ಹಾಲಸಿದ್ಧ' ಎಂಬ ಹೆಸರಿನಲ್ಲಿ ಆರಾಧನೆಗೊಳ ಪಡುತ್ತಿದ್ದಾನೆ. ಆತನಿಗೆ ಅರ್ಪಿಸುವ 'ಕಂಥೆಸೇವೆ' ಹಾಲುಮತಸ್ಥರು ತಮ್ಮ ಆರಾಧ್ಯ ದೈವಗಳೊಂದಿಗೆ ಸೇರಿ ಆಚರಿಸುವ ಗೌರವಯುತ ಧಾರ್ಮಿಕ ಆಚರಣೆಯಾಗಿದೆ.

೪.೩.೪.೨.೧. ಲಿಂಗಾಯತ ದೈವಗಳಲ್ಲಿ ಕಂಥೆಸೇವೆ

ಲಿಂಗಾಯುತ ಸಮುದಾಯ ಆರಾಧನೆ ಮಾಡುತ್ತಿರುವ 'ಸಿದ್ಧರಾಮ' ದೈವಕ್ಕೂ ಕಂಥೆಸೇವೆ ಆಚರಣೆ ನಡೆಯುತ್ತದೆ. ೧೪-೧೫ನೇ ಶತಮಾನಗಳಿಗಿಂತ ಮುಂಚೆ ಇಟ್ಟಪ್ಪ (ವಿಠ್ಠಲ) ವೆಂಕಟೇಶ ದೈವಗಳಿಗೆ ಈ ಆಚರಣೆಯನ್ನು ಮಾಡಲಾಗುತ್ತಿತ್ತು. ಹಿಂದೆ ಹೇಳಿದಂತೆ ಈ ಆಚರಣೆ ಉತ್ತರ ಕರ್ನಾಟಕದಲ್ಲಿ ಇಲ್ಲ. ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಪ್ರಚಲಿತದಲ್ಲಿದೆ. ಇದನ್ನು ತರೀಕೇರೆ ತಾಲ್ಲೂಕು ಸೊಲ್ಲಾಪುರ ಗ್ರಾಮದ ಸಿದ್ಧರಾಮ ದೇವಾಲಯ ಮತ್ತು ಯಳನಾಡು ಗ್ರಾಮದ ಸಿದ್ಧರಾಮ ದೈವಗಳನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡಬಹುದು. ಈ ಎರಡು ದೈವಗಳನ್ನು ಪೂಜೆ ಮಾಡುತ್ತಿರುವವರು ಲಿಂಗಾಯತರು. ಇಲ್ಲಿ ಸಿದ್ಧರಾಮ ಲಿಂಗಾಯತರ ಆರಾಧ್ಯದೈವವೂ, ಕುಲದೈವವೂ, ಮನೆದೈವವೂ ಆಗಿದೆ. ಅದರಂತೆ ಹಾಲುಮತಸ್ಥರಿಗೂ ಸಹ ಕುಲದೈವವಾಗಿದೆ. ಆದರೆ ದೇವಾಲಯದ ಹಕ್ಕುಗಳು ಲಿಂಗಾಯತರಿಗೆ ಮಾತ್ರ ಇವೆ.

ಕಂಥೆ ಸೇವೆ ಮಾಡುವ ಆಚರಣಾತ್ಮಕ ಸಂದರ್ಭ ಬಹಳ ಮುಖ್ಯವಾದದ್ದು. ಏಳು ಗುಡಿಗಟ್ಟು ದೈವಗಳು ರೇವಣಸಿದ್ಧನ 'ಸಿದ್ಧರಾಮನ ಕಂಥೆ ಆಚರಣೆ'ಗೂ ಸೇರುತ್ತವೆ. ಇಲ್ಲಿ ಸೇರುವ ದೈವಗಳೆಲ್ಲ ಹಾಲುಮತಸ್ಥರ ಆರಾಧ್ಯ ದೈವಗಳೂ, ಕುಲದೈವಗಳೂ ಆಗಿವೆ. ಪ್ರಧಾನವಾಗಿ ಬೀರಪ್ಪ, ರೇವಣಸಿದ್ಧ ಮತ್ತು ಓರಗಲ್ಲಮ್ಮ ದೈವಗಳು ಸೇರುತ್ತವೆ. ಈ ದೈವಗಳಲ್ಲಿ ಒಂದು ದೈವ ಬರದಿದ್ದರೂ ಆಚರಣೆ ನಡೆಯುವುದಿಲ್ಲ. ರೇವಣಸಿದ್ಧನಂತೂ ಕಡ್ಡಾಯವಾಗಿ ಇರಲೇಬೇಕು. ಆತನೇ ನಾಯಕ. ಯಳನಾಡು ಗ್ರಾಮದ ಸಿದ್ಧರಾಮನ ಕಂಥೆಸೇವೆ ಆಚರಣೆಯ ಸಂದರ್ಭದಲ್ಲಿ ಶ್ರೀರಾಂಪುರ ಗ್ರಾಮದ ರೇವಣಸಿದ್ಧ ದೈವ ಆಗಮನ ಆಗುತ್ತದೆ. ಶ್ರೀರಾಂಪುರ ಯಳನಾಡು ಗ್ರಾಮಕ್ಕೆ ಏಳುಗುಡಿಕಟ್ಟು ದೈವಗಳಲ್ಲಿ ಒಂದು. ಯಳನಾಡು ಗ್ರಾಮಕ್ಕೆ ಮೂಲಮಠ. ಒಮ್ಮೆ ಸಿದ್ಧರಾಮನ ಕಂಥೆಸೇವೆ ಆಚರಣೆ ಸಂದರ್ಭದಲ್ಲಿ ಯಳನಾಡು ಗ್ರಾಮಕ್ಕೆ ದೇವರನ್ನು ತರಲು ಶ್ರೀರಾಂಪುರ ಗ್ರಾಮದವರು ನಿರಾಕರಿಸದರಂತೆ. ಶ್ರೀರಾಂಪುರದ ದೈವ ಇರಲೇಬೇಕು ಅನ್ನುವುದು ಕಡ್ಡಾಯ. ಈ ಜಾತ್ರೆಯ ನಿಯಮ. ಹಾಗಾಗಿ ಯಳನಾಡು ಗ್ರಾಮದವರು ಶ್ರೀರಾಂಪುರದಲ್ಲಿರುವ ರೇವಣಸಿದ್ಧನ ಮೂರ್ತಿಯನ್ನು ರಾತ್ರೋರಾತ್ರಿ ಕದ್ದು ತಂದು ಆಚರಣೆಯನ್ನು ಮುಗಿಸಿದರಂತೆ. ಮತ್ತೆ ಆ ಮೂರ್ತಿಯನ್ನು ವಾಪಸ್ಸು ಕೊಡಲಿಲ್ಲ. ಈಗಲೂ ಶ್ರೀರಾಮಪುರ ಗ್ರಾಮದಲ್ಲಿ ಒಂದು ರೇವಣಸಿದ್ಧ ಮೂರ್ತಿ ಇದೆ. ಯಳನಾಡು ಗ್ರಾಮದಲ್ಲಿ ಮೂರು ರೇವಣಸಿದ್ಧ ಮೂರ್ತಿಗಳಿವೆ. ಅದರಲ್ಲಿ ಎರಡು ಗ್ರಾಮಸ್ಥರು ಮಾಡಿಸಿರುವುದು, ಮತ್ತೊಂದು ಕದ್ದು ತಂದಿರುವುದು.[೬೨] ದೈವವನ್ನು ಕದ್ದು ತಂದಾದರೂ ತಮ್ಮ ಆಚರಣೆಯನ್ನು ಪೂರೈಸಿಕೊಳ್ಳುವಷ್ಟು ಧಾರ್ಮಿಕ ಸಂಬಂಧ ಬೆಸೆದುಕೊಂಡಿದೆ.

ಸೊಲ್ಲಾಪುರ ಗ್ರಾಮದ ಕಂಥೆ ಆಚರಣೆಯಲ್ಲಿ ಸೊಲ್ಲಾಪುರ, ಮುಗುಳಿ, ಗಡಿಹಳ್ಳಿ, ಹುನೂರು, ಶಿವನಿ, ಅಜ್ಜಂಪುರ ಮತ್ತು ತಾಳಿಕಟ್ಟೆ ಗ್ರಾಮಗಳ ಬೀರದೇವರು ಭಾಗಿಯಾಗುತ್ತವೆ. ಕಂಥೆ ನೇಯುವವರು ಮುಗುಳಿ ಗ್ರಾಮಕ್ಕೆ ಸೇರಿದ ಬೀರಪ್ಪನ ಶಿಷ್ಯರು. ಕಂಥೆಗಾಗಿ ಬಳಕೆ ಮಾಡಿಕೊಂಡು ಕುರಿಮರಿಗಳನ್ನು 'ಹರಿಯಪ್ಪ' ದೈವಕ್ಕೆ ಬಲಿಕೊಡುತ್ತಾರೆ. ಆ ಮರಿಗಳ ಮಾಂಸವನ್ನು ಹರಿಯಪ್ಪನ ಶಿಷ್ಯ ಮನೆತನದವರಾದ ಹಾಲುಮತಸ್ಥರು ತಿನ್ನಬೇಕು ಅಥವಾ ಆ ಮಾಂಸದ ಹಕ್ಕು ಆ ಮನೆತನಕ್ಕೆ ಸೇರಿದೆ. ಇಲ್ಲಿ ಹರಿಯಪ್ಪ ಸಿದ್ಧರಾಮನ ಶಿಷ್ಯ. ಕರ್ನಾಟಕದಾದ್ಯಂತ ಹರಿಯಪ್ಪ ದೇವಾಲಯಗಳಿವೆ. ಆ ದೇವಾಲಯಗಳ ಅರ್ಚಕರು ಮತ್ತು ಆರಾಧಕರು ಹಾಲುಮತಸ್ಥರಾಗಿದ್ದಾರೆ. ಕೆಲವು ಸ್ಥಳಗಳಲ್ಲಿ ಹರಿಯಪ್ಪ ರೇವಣಸಿದ್ಧನ ಶಿಷ್ಯ ಅಂತ ಹೇಳುತ್ತಾರೆ. ಮತ್ತೆ ಕೆಲವು ಕಡೆ ಬೀರಪ್ಪನ ಶಿಷ್ಯನೆಂದು ಹೇಳುತ್ತಾರೆ. ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಹಕ್ಕನಿಗೆ ಹರಿಯಪ್ಪ ಎಂಬ ಹೆಸರಿತ್ತು ಅನ್ನುವ ವಾದಗಳಿವೆ. "ಹಕ್ಕ ರೇವಣಸಿದ್ಧನ ಆರಾಧಕನಾಗಿದ್ದು, ರೇವಣಸಿದ್ಧ ಒಮ್ಮೆ ಹಕ್ಕನ ಕನಸಿನಲ್ಲಿ ಬಂದು ವಿಜಯನಗರ ಸ್ಥಾಪನೆ ಮಾಡುವುದಕ್ಕೆ ಹೇಳಿ ಆರ್ಶೀವಾದ ಮಾಡಿ ಹೋದ ಅನ್ನುವ ಕಥೆಗಳು ಸಿಗುತ್ತವೆ".[೬೩] ಆ ಹಕ್ಕನನ್ನೇ ಹರಿಯಪ್ಪನೆಂದು ಕರೆದುಕೊಳ್ಳಲಾಗುತ್ತಿದೆ. ಹಕ್ಕನಿಗೆ ಹರಿಯಪ್ಪ ಅನ್ನುವ ಮತ್ತೊಂದು ಹೆಸರು ಇದೆ ಅನ್ನುವುದು ಶಾಸನಗಳಿಂದ ತಿಳಿದುಬರುತ್ತದೆ.

೪.೩.೫. ರೇವಣಸಿದ್ಧನೇ ದೊಡ್ಡದೇವರು

ರೇವಣಸಿದ್ಧನನ್ನು ದೊಡ್ಡದೇವರೆಂದು ಕರೆಯುತ್ತಾರೆ. ಹಾಲುಮತ ಸಂಸ್ಕೃತಿಯಲ್ಲಿ ಈತನಿಗೆ ಹಿರಿಯ ಸ್ಥಾನ. ಬೀರಪ್ಪನ ಹುಟ್ಟು ಮತ್ತು ಕುರಿಗಳ ಹುಟ್ಟು ಈತನಿಂದಲೇ ಆಯಿತು ಅನ್ನುವಷ್ಟರ ಮಟ್ಟಿಗೆ ಇವರು ಕಥೆಗಳನ್ನು ಕಟ್ಟಿಕೊಂಡಿದ್ದಾರೆ. ರೇವಣಸಿದ್ಧನಿಗಿಂತಲೂ ಬೀರಪ್ಪ ದೈವವೇ ಮೂಲ. ಆದರೂ ಬೀರಪ್ಪನನ್ನು ಹಿರಿಯ ಅಥವಾ ದೊಡ್ಡದೇವರೆಂದು ಒಪ್ಪಿಕೊಳ್ಳುವುದಿಲ್ಲ. ರೇವಣಸಿದ್ಧ ಅಷ್ಟೊಂದು ಮಾನ್ಯತೆ ಪಡೆದಿದ್ದಾನೆ. ತುಮಕೂರು, ಕೋಲಾರ, ಮೈಸೂರು, ಚಿತ್ರದುರ್ಗ ಪ್ರದೇಶಗಳಲ್ಲಿ ದೊಡ್ಡಯ್ಯ-ಚಿಕ್ಕಯ್ಯ ಅನ್ನುವ ದೇವಾಲಯಗಳಿವೆ. ಚಿಕ್ಕಯ್ಯನೆಂದರೆ ರೇವಣಸಿದ್ಧನ ಮಗ 'ರುದ್ರಮುನಿ'. ಚಳ್ಳಕೆರೆ ತಾಲ್ಲೂಕು ಹರತಿಕೋಟೆ ಗ್ರಾಮದಲ್ಲಿ 'ದೊಡ್ಡದೇವರ' ಜಾತ್ರೆ ಮಾಡುತ್ತಾರೆ. ಈ ಜಾತ್ರೆ ಹನ್ನೆರಡು ವರ್ಷಕ್ಕೊಮ್ಮೆ ನಡೆಯುತ್ತದೆ. ಹರತಿಕೋಟೆ ರೇವಣಸಿದ್ಧನಿಗೆ ಸಂಬಂಧಿಸಿದ ಗುಡಿಕಟ್ಟು ದೈವಗಳು ಬರುತ್ತವೆ, ಸಂಬಂಧಿಸಿದ ಹಳ್ಳಿಗಳ ಭಕ್ತರು, ಶಿಷ್ಯರು ಬರುತ್ತಾರೆ.

ಈ ಜಾತ್ರೆಯನ್ನು ಆರಂಭಿಸುವುದಕ್ಕಿಂತ ಮುಂಚೆ ಹಂಪೆಯಲ್ಲಿರುವ ಬೀರದೇವರ ಅಪ್ಪಣೆ ಪಡೆದುಕೊಳ್ಳುತ್ತಾರೆ. ಜಾತ್ರೆ ಆರಂಭಿಸುವ ಒಂದು ಎರಡು ದಿನ ಮುಂಚೆ ಆ ದೈವದ ಪೂಜಾರಿ, ಈರಗಾರ, ದಳವಾಯಿ, ಕೊಲ್ಕಾರ, ಹಿರೇಕುರುಬ ಮತ್ತು ಗುಡಿಗೌಡ್ರು ಯಜಮಾನರು ಸೇರಿ ಹಂಪೆಗೆ ಬಂದು ಹೊಳೆಪೂಜೆ ಮಾಡಿ, ಹೊಳೆಯಲ್ಲಿನ ಏಳು ಸಣ್ಣ ಕಲ್ಲುಗಳು ಮತ್ತು ನೀರನ್ನು (ತೀರ್ಥ) ತೆಗೆದುಕೊಳ್ಳುತ್ತಾರೆ. ಇವನ್ನು ಹಂಪೆ ಬೀರಪ್ಪನ ದೇವಾಲಯದಲ್ಲಿ ಪೂಜೆಮಾಡಿ ಜಾತ್ರೆಯನ್ನು ಚೆನ್ನಾಗಿ ನಡೆಸಿಕೊಡುವಂತೆ ಬೇಡಿಕೊಂಡು ತಮ್ಮೂರಿಗೆ ತೆಗೆದುಕೊಂಡು ಬರುತ್ತಾರೆ. ತಂದ ತೀರ್ಥ ದಿಂದ ದೈವಗಳನ್ನು ಪೂಜೆ ಮಾಡಿ ಜಾತ್ರೆ ಆರಂಭಿಸುತ್ತಾರೆ.

ಈ ಸಂಪ್ರದಾಯ ವಿಜಯನಗರದ ಅರಸರಾದ ಸಂಗಮರ ಕಾಲಘಟ್ಟಕ್ಕಿಂತ ಮುಂಚಿತವಾಗಿ ಬೆಳೆದು ಬಂದಿರಬೇಕು. ಸಂಗಮರ ಕಾಲಘಟ್ಟದಲ್ಲಿ ಬೀರಪ್ಪ ದೇವಾಲಯ ಹಾಲುಮತ ಸಮುದಾಯದವರ ಸಮಸ್ಯೆಗಳ ಪರಿಹಾರ ಕೇಂದ್ರವಾಗಿತ್ತು. ಹಾಲುಮತ ಮತ್ತು ಇತರ ಸಮುದಾಯದವರ ನಡುವಿನ ಸಮಸ್ಯೆಗಳನ್ನು ಬಗೆಬಹರಿಸಿದ ವಿವರಗಳಿರುವ ಶಾಸನಗಳು ಸಿಗುತ್ತವೆ.[೯೪] ದಕ್ಷಿಣ ಕರ್ನಾಟಕ ಮತ್ತು ಆಂಧ್ರಪ್ರದೇಶದ ಕಡೆಗೆ ರೇವಣಸಿದ್ಧ ಮಠಗಳು ವಿಜಯನಗರದ ಅರಸರ (ಸಂಗಮ) ಮುಖಾಂತರ ವಿಸ್ತರಣೆ ಆದವು. ಚಳ್ಳಕೆರೆ ತಾಲ್ಲೂಕು ದೊಡ್ಡೇರಿ, ದಾವಣಗೆರೆ ತಾಲ್ಲೂಕು ಹೊನ್ನಾಳ್ಳಿ, ರಾಯದುರ್ಗ ತಾಲ್ಲೂಕು ಓಬಳಾಪುರಂ ಮುಂತಾದ ರೇವಣಸಿದ್ಧ ಮಠದವರು, ನಾವು ಹಂಪೆಯಿಂದ ಬಂದವರೆಂದು ಹೇಳುತ್ತಾರೆ. ಹರತಿಕೋಟೆ, ಹಿರಿಯೂರು, ಸೊಲ್ಲಾಪುರ ಮತ್ತು ಕಡದರಹಳ್ಳಿಗಳ ಮಠಗಳಿಗೆ ದೊಡ್ಡೇರಿಯೇ ಮೂಲಮಠವಾಗಿದೆ. ದೊಡ್ಡೇರಿ ಮಠದಲ್ಲಿ ವಿಜಯನಗರದ ಅರಸರು ಕೊಟ್ಟ ಪತ್ರಗಳು ಇವೆ. ಹಂಪಿ ಸಾಮ್ರಾಜ್ಯದಲ್ಲಿ ಘಟಿಸಿದ ವೈಷ್ಣವ, ಶೈವ ಮತ್ತು ಮುಸ್ಲಿಂ ಧರ್ಮದ ಸಂಘರ್ಷ, ದಾಳಿಗಳ ಪರಿಣಾಮ ಈ ಗ್ರಾಮದ ಮೇಲೆ ಆಯಿತು. "ಅವತ್ತು ಮುಸ್ಲಿಂರ ದಾಳಿಯಿಂದ ಗ್ರಾಮದಲ್ಲಿದ್ದ ಹಾಲುಮತಸ್ಥರು ಊರು ಬಿಟ್ಟು ಪಕ್ಕದ ಗ್ರಾಮಗಳಿಗೆ ಓಡಿಹೋದರು. ಇವತ್ತಿಗೂ ಆ ಗ್ರಾಮದಲ್ಲಿ ಒಂದು ಕುರುಬರ ಮನೆಗಳಿಲ್ಲ. ಈಗಿರುವ ಲಿಂಗಾಯತರ ಮನೆಗಳೇ

ಹಿಂದಿನ ಕುರುಬರ ಮನೆಗಳು ಅನ್ನುವ ವಾದವು ಇದೆ. ಹಿಂದೆ ೧೫೦ ಒಡೆಯರ ಮನೆಗಳು, ೮೦೦ ಕುರುಬರ ಮನೆಗಳು ಇದ್ದವು".[೯೫] ಅವರು ಇವತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಆ ಗ್ರಾಮಗಳಲ್ಲಿ ಇವರನ್ನು 'ದೊಡ್ಡೇರಿ'ಯವರೆಂದು ಕರೆಯುತ್ತಾರೆ. ಈಗಲೂ ಮಠಕ್ಕೆ ಬರುತ್ತಾರೆ. ರೇವಣಸಿದ್ಧ ಮಠದ ಆಸ್ತಿಯಲ್ಲಿ ಮುಸ್ಲಿಂ ಸಮುದಾಯದವರ ಮಸೀದಿ ಇದೆ. ಆ ಗ್ರಾಮದ ಹಾಲುಮತ ಪ್ರಾಚೀನ ದೈವಗಳೆಲ್ಲ ನಾಶವಾಗಿವೆ. ಬೀರಪ್ಪನ ಪ್ರಾಚೀನ ಬೃಹತ್ ಮೂರ್ತಿ ಇತ್ತೀಚೆಗೆ ಆ ಗ್ರಾಮದ ಕೆರೆಯಲ್ಲಿ ಸಿಕ್ಕಿದೆ. ದೇವಾಲಯ ಎಲ್ಲಿದೆ ಅನ್ನುವುದು ತಿಳಿದುಬಂದಿಲ್ಲ. ಬೇಡ ಕೆರೆಯಲ್ಲಿ ಬೀರದೇವರ ದೇವಾಲಯ ಇತ್ತು ಅನ್ನುವುದು ಹಿರಿಯರ ಅಭಿಪ್ರಾಯ.

೪.೩.೬. ರೇವಣಸಿದ್ಧ ಗಂಗಿಮಾಳಮ್ಮನ ಸಂಹಾರಕ

ಬಿಜಾಪುರ ಜಿಲ್ಲೆ ಹೊರ್ತಿ ಗ್ರಾಮಕ್ಕೆ ಇದ್ದ ಹಿಂದಿನ ಹೆಸರು 'ಸಿದ್ಧಾಪುರ'. ಸಿದ್ಧಿಗಳು ಸಾಧನೆಗೈದ ಸ್ಥಳವಾಗಿರುವುದರಿಂದ ಸಿದ್ಧಾಪುರ ಎಂದು ಹೆಸರು ಬಂದಿದೆ. ಆ ಸಿದ್ದಿಗಳು ತಪಸ್ಸು ಗೈಯುತ್ತಿದ್ದಾಗ ಇವರಿಗೆ ಗಂಗಿಮಾಳಮ್ಮ ಪ್ರತಿದಿನ ಬಂದು ತೊಂದರೆ ಕೊಡುತ್ತಿದ್ದಳಂತೆ. ತಪಸ್ಸನ್ನು ಭಂಗಗೊಳಿಸುತ್ತಿದ್ದಳಂತೆ. ಆಗ ಈ ಸಿದ್ದಿಗಳು ಇಂಗಳೇಶ್ವರ ಗ್ರಾಮದಲ್ಲಿ (ಬಸವನ ಬಾಗೇವಾಡಿ ತಾಲೂಕಿನ) ತಪಸ್ಸು ಮಾಡುತ್ತಿದ್ದ ರೇವಣಸಿದ್ಧನಲ್ಲಿ ನಮ್ಮನ್ನು ಪಾರುಮಾಡುವಂತೆ ಬೇಡಿಕೊಂಡರಂತೆ. ಆಗ ರೇವಣಸಿದ್ಧ ಸಿದ್ಧಾಪುರಕ್ಕೆ ಬಂದು, "ಆದಿ ಮಾಯೆಯ ವಿಷದ ಸ್ತನವನ್ನು ಕೊಯ್ದು ರಕ್ತವನ್ನು ಹೀರಿ ಮಾಯೆಯ ಗರ್ವಹರಣ ಮಾಡಿದನಂತೆ"[೯೬] ಅನ್ನುವ ಕಥನಗಳು ಇವೆ. 'ಮಲ್ಲಯ್ಯ' ಈಕೆಯ ಸಂಹಾರಕ್ಕೆ ಸಹಕಾರ ಮಾಡಿದ ಅನ್ನುವ ಕಥನಗಳು ಸಿಗುತ್ತವೆ.

ಈ ಗ್ರಾಮದಲ್ಲಿರುವ ರೇವಣಸಿದ್ಧ ಮಲ್ಲಿಕಾರ್ಜುನ ಬೀರಪ್ಪ ಮತ್ತು ಮಾಳಮ್ಮ ದೇವಾಲಯಗಳ ನಡುವೆ ಒಂದಕ್ಕೊಂದು ಆಚರಣಾತ್ಮಕ ಸಂಬಂಧ ಬೆಸೆದುಕೊಂಡಿವೆ. ಮಲ್ಲಿಕಾರ್ಜುನ ರೇವಣಸಿದ್ಧ ಲಿಂಗಾಯತರ ಆರಾಧ್ಯದೈವಗಳು ಮತ್ತು ಕುಲದೈವಗಳಾದರೆ ಬೀರಪ್ಪ ಮತ್ತು ಮಾಳಮ್ಮ ಹಾಲುಮತದ ಕುಲದೈವಗಳಾಗಿವೆ. ಇಲ್ಲಿ ರೇವಣಸಿದ್ಧನ ಗುರು ಮಲ್ಲಿಕಾರ್ಜುನ. ಮೊದಲನೆ ಪೂಜೆ ಮಲ್ಲಿಕಾರ್ಜುನನಿಗೆ. ಈ ರೇವಣಸಿದ್ಧ ಮತ್ತು ಮಲ್ಲಿಕಾರ್ಜುನ ಪಲ್ಲಕ್ಕಿಗಳು ಉತ್ಸವ ಸಂದರ್ಭದಲ್ಲಿ ಮಾಳಮ್ಮನನ್ನು ಭೇಟಿ ಆಗುತ್ತವೆ. ಮಾಳಮ್ಮನ ದೇವಾಲಯದ ಪಕ್ಕದಲ್ಲಿ ಎರಡು ಹಾಳುಬಿದ್ದ ದೇವಾಲಯಗಳಿವೆ. ಅವು ರೇವಣಸಿದ್ಧ ಮತ್ತು ಮಲ್ಲಿಕಾರ್ಜುನ ದೇವಾಲಯಗಳಾಗಿರುವುದಕ್ಕೆ ಸಾಧ್ಯತೆ ಇದೆ. ಈಗೆ ಮಾಳಮ್ಮನನ್ನು ಭೇಟಿಯಾಗುವುದು ಮತ್ತು ಹಾಳುಬಿದ್ದ ದೇವಾಲಯಗಳಿರುವುದು ಅನುಮಾನಕ್ಕೆ ಆಸ್ಪದ ಕೊಡುತ್ತದೆ. ಈ ಎರಡು ದೈವಗಳ ದೇವಾಲಯಗಳನ್ನು ಲಿಂಗಾಯತರು ವಿಭೂತಿಪಂಥ ದವರು ಪ್ರತ್ಯೇಕಗೊಳಿಸಿಕೊಡಿರಬೇಕು. ಭಂಡಾರ ಪಂಥದ ದೈವವಾದ ಮಾಳಮ್ಮನನ್ನು ಗುಡ್ಡದ ಮೇಲೆ ಕೈಬಿಟ್ಟಿರಬೇಕು. ಭಂಡಾರ ಪಂಥವನ್ನು ದಮನಿಸುವ ಕಾರಣಕ್ಕಾಗಿ ಈ ತರಹದ ಕಥೆಗಳನ್ನು ಹುಟ್ಟುಹಾಕಿರಬೇಕು. ಏಕೆಂದರೆ ರೇವಣಸಿದ್ಧ ಮಲ್ಲಯ್ಯನ ಆರಾಧಕನಾಗಿದ್ದು, ಮಾಳಮ್ಮ ಮಲ್ಲಯ್ಯನ ಹೆಂಡತಿಯಾಗಿದ್ದಾಳೆ. ಅಲ್ಲದೆ ಹಾಲುಮತ ಸಮುದಾಯವು ಆರಾಧಿಸುವ ಸಪ್ತಮಾತೃಕೆಯರಲ್ಲಿ ಇವಳೂ ಒಬ್ಬರು. ಕೆಲವು ಕಡೆ ರೇವಣಸಿದ್ಧನ ಜವಾಬ್ದಾರಿಗಳನ್ನು ಮಾಳಮ್ಮನೇ ಹೊತ್ತುಕೊಂಡಿದ್ದಾಳೆ.

ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿ ಸಪ್ತಮಾಳಮ್ಮಳಾಗಿ ರೇವಣಸಿದ್ಧನು ತೆಗೆದುಕೊಳ್ಳಬೇಕಾದ ಗಡ್ಡದ ಮರಿಗರ್ಭವನ್ನು ಈಕೆಯೇ ತೆಗೆದುಕೊಳ್ಳುತ್ತಾಳೆ. ಹಾಗಾಗಿ ಭಂಡಾರ ಮತ್ತು ವಿಭೂತಿ ಪಂಥದ ಸಂಘರ್ಷದ ಕಾಲಘಟ್ಟದಲ್ಲಿ ಭಂಡಾರ ಪಂಥದಿಂದ ದೈವಗಳನ್ನು ಬಿಡಿಸಿಕೊಳ್ಳುವಾಗ ಈ ಕಥನಗಳು ಹುಟ್ಟಿಕೊಂಡಿರಬೇಕು.

೪.೩.೭. ರೇವಣಸಿದ್ಧನ ತಾತ್ವಿಕ ಆಯಾಮಗಳು

ರೇವಣಸಿದ್ಧನೊಬ್ಬ ವಿವಾದಿತ ಸಾಂಸ್ಕೃತಿಕ ವೀರ. ಈತನನ್ನು ಹಲವು ಸಮುದಾಯಗಳು ಕುಲದೈವವನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿವೆ. ಅವುಗಳಲ್ಲಿ ಹಾಲುಮತ ಮತ್ತು ಲಿಂಗಾಯತ ಸಮುದಾಯಗಳು ಪ್ರಧಾನ ಧಾರೆಯಲ್ಲಿವೆ. ಈ ಎರಡೂ ಸಮುದಾಯಗಳಲ್ಲಿ ರೇವಣಸಿದ್ಧನ ಚಾರಿತ್ರಿಕ ಹಿನ್ನೆಲೆಯನ್ನು ಅನಾವರಣ ಮಾಡುವ ಅನೇಕ ಕಥನಗಳು ಚಾಲ್ತಿಯಲ್ಲಿವೆ. ಈ ಕಥನಗಳು ರೇವಣಸಿದ್ಧ ಮೂಲತಃ ಪಶುಪಾಲಕ ಕುಲಕ್ಕೆ ಸೇರಿದ ವ್ಯಕ್ತಿಯೆಂದು ಹೇಳುತ್ತವೆ. ಪಶುಪಾಲಕರಾದ ಕುರುಬ ಕುಲದಲ್ಲಿ ಈ ವ್ಯಕ್ತಿಯ ವಂಶಾವಳಿ ಸಿಗುತ್ತವೆ. ಈ ವಂಶಾವಳಿಯ ಪ್ರಕಾರ ಇವತ್ತಿನ "ಎಣ್ಣೆಕಂಕಣ" ಕುರುಬ ಕುಲಕ್ಕೆ ಸೇರಿದ ವ್ಯಕ್ತಿ. ಈತನ ಚಾರಿತ್ರಿಕ ಅಂಶಗಳನ್ನು ಪ್ರತಿಬಿಂಬಿಸುವ ಆಕರಗಳಲ್ಲಿ "ಎಣ್ಣೆಸಂಸ್ಕೃತಿ"ಯೊಂದಿಗೆ ಗಾಢವಾದ ಸಂಬಂಧ ಹೊಂದಿದ ಚಿತ್ರಣಗಳು ಈಗಲೂ ಜೀವಂತವಾಗಿವೆ. ಕುರುಬ(ಹಾಲುಮತ)ಸಂಸ್ಕೃತಿಯನ್ನು ಸಂಸ್ಕೃತೀಕರಣಗೊಳಿಸುವುದಕ್ಕೆ ಹಂಬಲಿಸಿದ ಹಾಲುಮತ ಸಂಸ್ಕೃತಿಯಲ್ಲಿದ್ದ ಸಾವಂತಲ ಕುಲವನ್ನು 'ಒಡೆಯ'ರೆಂದು ರೂಪಿಸುವುದರ ಮುಖಾಂತರ 'ಪ್ರತಿಸಂಸ್ಕೃತಿ'ಯನ್ನು ಹುಟ್ಟುಹಾಕಿದ. ಆ 'ಪ್ರತಿಸಂಸ್ಕೃತಿ' ರೇವಣಸಿದ್ಧನ ಕಾಲದ ನಂತರದಲ್ಲಿ ಬದಲಾವಣೆಗೊಂಡು ಪಾರಂಪರಿಕ ಸಂಸ್ಕೃತಿಯೊಂದಿಗೆ ಸಂಕರಶೀಲಗೊಂಡಿತು. ಆದರೆ ಹುಟ್ಟುಹಾಕಿದ ಪ್ರತಿಸಂಸ್ಕೃತಿ ಹಲವು ದೈವಗಳನ್ನು ಲಿಂಗಧಾರಿಗಳನ್ನಾಗಿ ಮಾಡಿತು. ರೇವಣಸಿದ್ಧನೂ ಲಿಂಗದೈವವೆಂದೇ ಹಾಲುಮತ ಸಂಸ್ಕೃತಿಯಲ್ಲಿ ಆರಾಧನೆಗೆ ಒಳಗಾಗುತ್ತಿದ್ದಾನೆ. ಆದರೆ ಈತ ಲಿಂಗಾಯತ ಸಮುದಾಯದ ವ್ಯಕ್ತಿ ಅಲ್ಲ.

೪.೪. ಅಮೋಘಸಿದ್ಧ

೪.೪.೧. ಪ್ರವೇಶ

ಹಾಲುಮತದ ಸಾಂಸ್ಕೃತಿಕ ವೀರರಲ್ಲಿ ಎರಡು ಪಂಗಡಗಳಿವೆ. ಪ್ರಸ್ತುತ ಅಧ್ಯಯನದಲ್ಲಿ ಈ ಎರಡು ಪಂಗಡಗಳನ್ನು 'ವಿಭೂತಿ ಪಂಥ'ದ ಸಾಂಸ್ಕೃತಿಕ ನಾಯಕರು ಮತ್ತು 'ಭಂಡಾರ ಪಂಥ' ಸಾಂಸ್ಕೃತಿಕ ನಾಯಕರೆಂದು ವರ್ಗೀಕರಿಸಿಕೊಳ್ಳಲಾಗಿದೆ. ಇವತ್ತು ಈ ಎರಡು ಸಂಸ್ಕೃತಿಯ ಸಾಂಸ್ಕೃತಿಕ ನಾಯಕರನ್ನು ಜೀವಂತಗೊಳಿಸುವ ಪ್ರಧಾನಧಾರೆಯ ವಕ್ತೃಗಳೆಂದರೆ ಒಡೆಯರು. ಒಡೆಯರು 'ಕುರುಬರ ಕುಲಗುರು'ಗಳಾಗಿದ್ದಾರೆ. "ಈ ಗುರು ವರ್ಗದಲ್ಲಿ ಮೂರು ವರ್ಗಗಳಿವೆ. ಒಂದು, ರೇವಣಸಿದ್ಧ ಸಂಪ್ರದಾಯದ ಒಡೆಯರು. ಇವರನ್ನು 'ಶಾಂತ ಒಡೆಯ'ರೆಂದು ಕರೆಯುತ್ತಾರೆ. ಎರಡು, 'ಸಿದ್ಧರಾಮ ಒಡೆಯರು'. ಇವರನ್ನು 'ಮಂಕ ಒಡೆಯ'ರೆಂದು ಕರೆಯುತ್ತಾರೆ. ಮೂರು, 'ಅಮೋಘಸಿದ್ಧ ಒಡೆಯರು'. ಇವರನ್ನು 'ಗುರುವಿನ್' ಎಂದು ಕರೆಯುತ್ತಾರೆ".[೯೭] ಈ ಮೂರು ವರ್ಗದ ಒಡೆಯರು

ಬೇರೆ ಬೇರೆ ಕುಲಕ್ಕೆ ಸೇರಿದವರು. ರೇವಣಸಿದ್ಧ ಮತ್ತು ಸಿದ್ಧರಾಮ ಸಂಪ್ರದಾಯದ ಒಡೆಯರುಗಳು ಬಾಹ್ಯವಾಗಿ ಬೇರೆ ಬೇರೆಯಾಗಿ ಕಂಡುಬಂದರೂ ಆಂತರಿಕದಲ್ಲಿ ಸಾಂಸ್ಕೃತಿಕ ಸಂಬಂಧವನ್ನು ಬೆಸೆದುಕೊಂಡಿದ್ದಾರೆ. ಈ ಎರಡು ಸಂಪ್ರದಾಯಗಳು ಏಕಕಾಲದಲ್ಲಿ ಒಂದೇ ವೇದಿಕೆಯಲ್ಲಿ ಜನ್ಮತಾಳಿವೆ. ಇವು ಜನ್ಮತಾಳಿದ ಉದ್ದೇಶವನ್ನು ತಿಳಿಸುವ ಅನೇಕ ಚಾರಿತ್ರಿಕ ಕಥನಗಳು ನಮಗೆ ಸಿಗುತ್ತವೆ. ಆಕರಗಳಲ್ಲಿ ತಗರ ಪವಾಡ, ಸಿದ್ಧಮಂಕ ಚರಿತೆ ಪ್ರಮುಖವಾದವು. ಚಿತ್ರದುರ್ಗ, ಹೊಸದುರ್ಗ, ತಿಪಟೂರು, ಅರಸೀಕೆರೆ, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕಡೂರು ಮತ್ತು ಶಿರಾ ತಾಲ್ಲೂಕುಗಳಲ್ಲಿ 'ತಗರ ಪವಾಡ' ಮತ್ತು 'ಸಿದ್ಧಮಂಕ ಚರಿತೆ'ಯ ಕಥನವನ್ನಾಧರಿಸಿದ ಜನಪದ ಗೀತೆಗಳನ್ನು 'ಕಂತೆಸೇವೆ'ಯ ಆಚರಣೆಯ ಸಂದರ್ಭದಲ್ಲಿ ಮಹಿಳೆಯರು ಹಾಡುತ್ತಾರೆ. ತಗರ ಪವಾಡದ ಕಥನವನ್ನು ಹಾಡುವುದಕ್ಕಾಗಿಯೇ 'ತಗರ ಜೋಗಿ' ಎನ್ನುವ ವೃತ್ತಿ ವರ್ಗವಿದೆ. ಇವರು ಚಿತ್ರದುರ್ಗ, ಚಳ್ಳಕೆರೆ ಮತ್ತು ಹಿರಿಯೂರು ಭಾಗದಲ್ಲಿ ಪ್ರಮುಖವಾಗಿ ಕಂಡುಬರುತ್ತಾರೆ. ಮಠಗಳಿಗೆ ಕೊಟ್ಟ ಹಕ್ಕು ಪತ್ರಗಳಲ್ಲಿ ಆಯಾ ಸಾಂಸ್ಕೃತಿಕ ವೀರರ ಹೆಸರು ಕಡ್ಡಾಯವಾಗಿ ನಮೂದಿಸಲಾಗಿದೆ. ರೇವಣಸಿದ್ಧ ಒಡೆಯರು ನಾವು ಶಾಂತಮುತ್ತಯ್ಯ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಸಿದ್ಧರಾಮ ಒಡೆಯರು ನಮ್ಮ ಮೂಲಪುರುಷ ಮಂಕಸಿದ್ಧ. ನಾವು ಮಂಕ ಒಡೆಯರು. ಸಿದ್ಧರಾಮನ ವಂಶಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ.

ಅದೇ ರೀತಿ ಅಮೋಘಸಿದ್ಧ ಒಡೆಯರು ನಾವು ಅಮೋಘಸಿದ್ಧ ಸಂಪ್ರದಾಯಕ್ಕೆ ಸೇರಿದವರು. ನಮ್ಮ ಮೂಲಪುರುಷ ಅಮೋಘಸಿದ್ಧನೆಂದು ಹೇಳುತ್ತಾರೆ. ರೇವಣಸಿದ್ಧ ಮತ್ತು ಸಿದ್ಧರಾಮ ಪಂಥದಲ್ಲಿ 'ವಿಭೂತಿ ಸಂಸ್ಕೃತಿ' ಜಾರಿಯಲ್ಲಿದೆ. ಅಮೋಘಸಿದ್ಧ ಪಂಥದಲ್ಲಿ 'ಭಂಡಾರ ಸಂಸ್ಕೃತಿ' ಜಾರಿಯಲ್ಲಿದೆ. ಇವತ್ತು ಅಮೋಘಸಿದ್ಧ ಮತ್ತು ಆತನ ವಂಶಸ್ಥರ ಕೆಲವು ಮಠಗಳಲ್ಲಿ ಮತ್ತು ದೇವಾಲಯಗಳ ಆಚರಣೆಗಳಲ್ಲಿ ವಿಭೂತಿ ಸಂಸ್ಕೃತಿ ಕಂಡುಬರುತ್ತಿದೆ. ಇದು ಇತ್ತೀಚಿಗೆ ಆದ ಬದಲಾವಣೆ. ಒಡೆಯರು ಲಿಂಗಧಾರಿಗಳು, ಲಿಂಗವಂತರಾಗಿ ಕಾಣಬೇಕು ಅನ್ನುವ ಸಾಮಾಜಿಕ ನೋಟಕ್ಕೆ ಒಳಗಾಗುತ್ತಿದ್ದಾರೆ. ಹಾಗಾಗಿ ಇವರಲ್ಲಿ ಸಂಸ್ಕೃತೀಕರಣಕ್ಕೆ ಒಳಗಾಗುತ್ತಿರುವುದು ಕಂಡುಬರುತ್ತದೆ. ಒಡೆಯರು ಸಂಸ್ಕೃತೀಕರಣಕ್ಕೆ ಒಳಗಾದಂತೆ ತಮ್ಮ ಆರಾಧ್ಯ ದೈವಗಳನ್ನು, ತಾವು ಪೂಜಿಸುವ ದೈವಗಳನ್ನು ಸಂಸ್ಕೃತೀಕರಣಗೊಳಿಸುತ್ತಿದ್ದಾರೆ. ಈ ಪದ್ಧತಿ ಪ್ರಾಚೀನವಾದುದ್ದಲ್ಲ. ಇವರು ಆರಂಭಿಕ ಕಾಲದಿಂದಲೂ ಭಂಡಾರ ಸಂಸ್ಕೃತಿಯನ್ನೇ ಅಪ್ಪಿಕೊಂಡು ಬೆಳೆಸಿಕೊಂಡು ಬಂದವರು. ಈ ವೈಧಾನಿಕತೆ ರೇವಣಸಿದ್ಧ, ಸಿದ್ಧರಾಮ ಪಂಥಕ್ಕೆ ವಿರೋಧವಾಗಿ ಅಂದರೆ ವಿಭೂತಿ ಸಂಸ್ಕೃತಿಗೆ ವಿರೋಧವಾಗಿ ಕಟ್ಟಿಕೊಂಡ ಪಂಥದಂತೆ ಕಂಡುಬರುತ್ತದೆ. ಆರಂಭಿಕ ಕಾಲದಲ್ಲಿ ವಿಭೂತಿ ಸಂಸ್ಕೃತಿಯ ಒಡೆಯರನ್ನು ಹಾಲುಮತದವರು ಒಪ್ಪಿಕೊಂಡಂತೆ ಕಾಣಿಸಿಲ್ಲ. ಅಥವಾ ವಿಭೂತಿ ಸಂಸ್ಕೃತಿಯನ್ನು ಒಪ್ಪಿಕೊಳ್ಳದ ಅಮೋಘಸಿದ್ಧ ಭಂಡಾರ ಸಂಸ್ಕೃತಿಯ ಒಡೆಯರನ್ನು ಹುಟ್ಟುಹಾಕಿರಬೇಕು. ಹಾಗಾಗಿ ಅಮೋಘಸಿದ್ಧ ಸಂಪ್ರದಾಯ ಪ್ರತ್ಯೇಕವಾಗಿ ಬೆಳೆದುಕೊಂಡು ಬಂದಿದೆ. ಆದರೆ ಇವತ್ತು ಈ ಮೂರು ಪಂಥಗಳು ಸಂಕರಶೀಲಗೊಂಡಿವೆ. ಒಂದಕ್ಕೊಂದು ಸಾಂಸ್ಕೃತಿಕ ಸಂಬಂಧದಲ್ಲಿ ಬೆಸೆದುಕೊಂಡಿವೆ. ಈ ಪಂಥಗಳ ಮೂಲ ಇವತ್ತಿನಂತಿರದೆ. ಪ್ರತ್ಯೇಕ ಪ್ರತ್ಯೇಕವಾಗಿವು. ಹಾಗಾಗಿ ಈ ಮೂರು ಪಂಥಗಳ ಹಿಂದಿನ

ಧೋರಣೆಯನ್ನು ಅಧ್ಯಯನ ಮಾಡಬೇಕು. ಆಗ ಅಮೋಘಸಿದ್ಧ, ರೇವಣಸಿದ್ಧ, ಸಿದ್ಧರಾಮ ಮುಂತಾದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಹಾಗೂ ಒಡೆಯರ ಹುಟ್ಟಿನ ರಾಜಕೀಯ ಹಿನ್ನೆಲೆಯನ್ನು ಅರಿಯಬಹುದು.

ಅಮೋಘಸಿದ್ಧ ಹಾಲುಮತದ ಸಾಂಸ್ಕೃತಿಕ ನಾಯಕರಲ್ಲಿ ಒಬ್ಬ. ಶಿವನ ವರಪುತ್ರ. ಶೈವ ಆರಾಧಕ. ಶೈವಸಿದ್ಧ ಪಂಥಕ್ಕೆ ಸೇರಿದ ಸಾಂಸ್ಕೃತಿಕ ನಾಯಕ. ಸೋಮಲಿಂಗ ಈತನ ಗುರು. ಬಹಳ ಸ್ಥೂಲಾರ್ಥದಲ್ಲಿ ೧೨-೧೩ನೇ ಶತಮಾನದಲ್ಲಿದ್ದ ಐತಿಹಾಸಿಕ ವ್ಯಕ್ತಿ. ಈತ 'ಸಿದ್ಧಸೋಮನಾಥ'ನೆನ್ನುವ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾನೆ. ಅಮಕಸಿದ್ಧ, ಅಮ್ಮುಗಿಸಿದ್ಧ, ಅಮೋಗಿಸಿದ್ಧ, ಅಮೋಗಿದೇವ, ಅಮಗೊಂಡ ಮುಂತಾದ ಹೆಸರುಗಳಿಂದ ಜನಪದಿಗರಲ್ಲಿ ಜೀವಂತವಾಗಿದ್ದಾನೆ. ಬಿಜಾಪುರ ಜಿಲ್ಲೆ 'ಮುಮ್ಮಟ್ಟಿಗಿರಿ' ಈತನ ಕಾರ್ಯಕ್ಷೇತ್ರವಾಗಿತ್ತು. ಮುಮ್ಮಟ್ಟಗಿರಿ ಮೂರು ಮಡ್ಡಿಗಳನ್ನು ಹೊಂದಿರುವ ಕಾರಣಕ್ಕೆ ಈ ಹೆಸರು ಬಂದಿತು. ಸುಮಾರು ೪-೫ ಕಿ.ಮೀ. ಅಂತರದಲ್ಲಿ ಅರಕೇರಿ, ಜಾಲಗೇರಿ ಮತ್ತು ಸಿದ್ದಾಪುರ ಎನ್ನುವ ಮೂರು ಮಡ್ಡಿಗಳು ಇವೆ. ಈ ಮೂರು ಮಡ್ಡಿಗಳಲ್ಲಿ ಅರಕೇರಿ ಹೆಚ್ಚು ಜನಪ್ರಿಯ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಈತನ ವಂಶಸ್ಥರ ಮತ್ತು ಶಿಷ್ಯ ಬಳಗದವರ, ಭಕ್ತವರ್ಗದವರ ಮಠಗಳು ಇವೆ. ಕೆಲವು ಕಡೆ ಸಮಾಧಿಗಳಿವೆ. ದೇವಾಲಯ ಮತ್ತು ಸಮಾಧಿಗಳ ಸಂಖ್ಯೆ ಸಾವಿರ ಸಂಖ್ಯೆಯನ್ನು ಮಿರುತ್ತದೆ. ಈತನದು ದೊಡ್ಡವಂಶ. ಈತನ ವಂಶ ನೂರಾ ಒಂದು ಏಳುನೂರ ಒಂದಾಗಿ, ಏಳುನೂರು ಒಂದು ಸಾವಿರದ ಒಂದಾಗಿ, ಸಾವಿರದ ಒಂದು ಸಾವಿರದ ಏಳುನೂರಾಗಿ, ಸಾವಿರದ ಏಳುನೂರು ನವಕೋಟಿಯಾಗಿ ಬೆಳೆಯಿತು ಅನ್ನುವ ಕಥನಗಳು ಇವೆ. ಈ ಕಥನಕ್ಕೆ ಪ್ರತಿಯಾಗಿ ಆರಂಭಿಕ ಹಂತದ ನೂರ ಒಂದು ವಂಶಸ್ಥರ ದೇವಾಲಯಗಳು; ಸಮಾಧಿಗಳು ಸಿಗುತ್ತವೆ. ಈ ಎಲ್ಲಾ ಮಠಗಳಿಗೆ ಅರಕೇರಿ ಮೂಲಮಠ. ವಿವಿಧ ಸಂದರ್ಭಗಳಲ್ಲಿ ಹಲವು ಕಡೆ ನೆಲೆಸಿರುವ ದೈವಗಳು ಅರಕೇರಿಗೆ ಬಂದು ಹೋಗುತ್ತವೆ. ಪ್ರತಿವರ್ಷ 'ಛಟ್ಟಿ ಅಮವಾಸ್ಯೆ'ಯಲ್ಲಿ ನಡೆಯುವ ಪಲ್ಲಕ್ಕಿ ಉತ್ಸವಕ್ಕೆ ತಪ್ಪದೆ ಭೇಟಿ ನೀಡುವ ಸಂಪ್ರದಾಯವಿದೆ. ಈ ದೇವಾಲಯಗಳಲ್ಲಿ ಅಮೋಘಸಿದ್ಧ ಒಡೆಯರು ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ಮಠಗಳಲ್ಲಿ ರೇವಣಸಿದ್ಧ (ಶಾಂತ) ಒಡೆಯರ್ ಅರ್ಚಕರಾಗಿದ್ದಾರೆ.[೮] ಆ ಸ್ಥಳಗಳಲ್ಲಿ ಆಚರಣೆ, ಉತ್ಸವ, ಜಾತ್ರೆಗಳು ನಡೆಯುತ್ತವೆ. ಅಮೋಘಸಿದ್ಧ ಮತ್ತು ಆತನ ಶಿಷ್ಯ ಪರಂಪರೆಯ ವ್ಯಕ್ತಿಗಳ ಬಗ್ಗೆ, ಆಚರಣೆಗಳ ಬಗ್ಗೆ ಜನಪದ ಗೀತೆಗಳು, ಲಾವಣಿಗಳು, ಹಂತಿಪದಗಳು, ಭಜನೆ ಪದಗಳು ಮತ್ತು ಡೊಳ್ಳಿನ ಹಾಡುಗಳು ಸಿಗುತ್ತವೆ. ಈ ವ್ಯಕ್ತಿಯನ್ನು ಕುರಿತು ಡೊಳ್ಳಿನ ಹಾಡುಗಳನ್ನು ಹತ್ತಾರು ರಾತ್ರಿ ಹಾಡುತ್ತಾರೆ. ಆ ಎಲ್ಲಾ ಹಾಡುಗಳನ್ನು ಸಂಗ್ರಹಿಸಿದರೆ ಒಂದು ಬೃಹತ್ ಮಹಾಕಾವ್ಯ ಸಂಪುಟ ಆಗುತ್ತದೆ. ಈ ಹಾಡುಗಳು ಇನ್ನೂ ಸಂಗ್ರಹವಾಗಿಲ್ಲ. ಕೇವಲ ಬಿಡಿಹಾಡುಗಳು ಸಂಗ್ರಹವಾಗಿವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಧ್ಯಯನಕ್ಕಾಗಿ ಕೆಲವು ಹಾಡುಗಳನ್ನು ಸಂಗ್ರಹಿಸಲಾಗಿದೆ. ಕ್ಯಾಸೆಟ್, ಸಿಡಿಯಲ್ಲಿ ಕೆಲವು ಹಾಡುಗಳು ಬಿತ್ತರಗೊಂಡಿವೆ. ಆ ಎಲ್ಲಾ ಹಾಡುಗಳನ್ನು ಬಳಸಿಕೊಂಡು ಇತರ ಅಭಿವ್ಯಕ್ತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡಲಾಗಿದೆ.

೪.೪.೨. ಅಮೋಘಸಿದ್ಧ ಲೋಕವನ್ನು ಪರಿಚಯ ಮಾಡಿಕೊಂಡ ಬಗೆ

ಜನಪದ ಸಾಂಸ್ಕೃತಿಕ ವೀರರು ಬೇರೆ ಬೇರೆ ಕಾರಣಗಳಿಗಾಗಿ ಜನ್ಮತಾಳಿದರು ಅನ್ನುವ ಕಥನಗಳಲ್ಲಿ ಅಮೋಘಸಿದ್ಧನ ಹುಟ್ಟು ನಿಗೂಢವಾಗಿದೆ. ತಂದೆ ತಾಯಿ ಸ್ಥಳಗಳ ಬಗ್ಗೆ ಮಾಹಿತಿ ಇಲ್ಲ. ಶ್ರೀಶೈಲದಿಂದ ಬಂದು ಮುಮ್ಮಟ್ಟಿಗಿರಿಯಲ್ಲಿ ನೆಲೆಸಿದನೆಂದು ಹೇಳುವ ಕಥನಗಳು ಸಿಗುತ್ತವೆ ಯಾದರೂ. ಸ್ಪಷ್ಟವಾದ ಮಾಹಿತಿ ಇಲ್ಲ. ಆದರೆ ಒಂದು ನಿರ್ದಿಷ್ಟವಾದ ಉದ್ದೇಶದ ಈಡೇರಿಕೆಗಾಗಿ ಭೂಲೋಕಕ್ಕೆ ಬಂದನೆಂದು ಹೇಳುವ ಡೊಳ್ಳಿನ ಹಾಡುಗಳು ಇವೆ. ಇಲ್ಲಿ ಲೋಕವೆಂದರೆ ಜಗತ್ತು ಅಲ್ಲ. ಮುಮ್ಮಟಗಿರಿಯ ಸುತ್ತಮುತ್ತಲಿನ ಪ್ರದೇಶ. ಲೋಕಕ್ಕೆ ಪ್ರವೇಶವಾದ ಬೇರೆ ಬೇರೆ ಉದ್ದೇಶ ಗಳ ಭಿನ್ನ ಪಠ್ಯಗಳು ನಮಗೆ ಸಿಗುತ್ತವೆ. ಅಮೋಘಸಿದ್ಧ ಈ ಲೋಕಕ್ಕೆ ಬರುವುದಕ್ಕಿಂತ ಮುಂಚೆ ಕೈಲಾಸದಲ್ಲಿದ್ದ. ಅಲ್ಲಿ ಆರು ಜನ್ಮಗಳನ್ನು ಶಿವನ ಆರಾಧನೆಯಲ್ಲಿ ಕಳೆದ. ಈತನ ಭಕ್ತಿಗೆ ಮೆಚ್ಚಿದ ಶಿವ ಏಳನೇ ಜನ್ಮಕ್ಕೆ ನೀನು 'ಭೂಲೋಕದ ಉದ್ಧಾರ'ಕ್ಕಾಗಿ ಹೋಗಬೇಕು ಅನ್ನುವ ಹಂಬಲವನ್ನು ವ್ಯಕ್ತಪಡಿಸಿದ. ಇದಕ್ಕೆ ಒಪ್ಪಿಕೊಂಡ ಅಮೋಘಸಿದ್ಧ ಕೆಲವು ಬೇಡಿಕೆಗಳನ್ನು ಇಟ್ಟ.

“ಬಾರೋ ಬಾರೋ ಶಂಕರ ಬೇಡಿದ ಕುಡಬೇಕಂದಾನ
ವರವಿನ ಕಂಬಳಿ ಬೇಡ್ಯಾನ ಪರಸದ ಗುಂಟ ಬೇಡ್ಯಾನ
ಬಡವಗ ಭಾಗ್ಯ ಬೇಡ್ಯಾನ ಬಂಜಿಗೆ ಮಕ್ಕಳ ಬೇಡ್ಯಾನ
ಮಳಿಯ ಕೀಳಿ ಬೀಡ್ಯಾನ ಬೆಳಿಯ ಕೀಲ ಬೇಡ್ಯಾನ
ಹಿಂದಿನ ಸುದ್ದಿ ಬೇಡಿದ್ದ ಪರಸದ ಗಂಟ ಬೇಡಿದ್ದ
ಯೋಗಿ ಅಮ್ಮುಗಿಸಿದ್ದನೆ ಮತ್ತೇನು ಬೇಡುತಾನೇನೆ
ಮತ್ತೇನು ಬೇಡುತಾನೇನ ನಂದಿಯ ಬೇಡುತಾನೇನ
ಉಂಡ ಊಟ ಹೇಳಲ್ಲ ಕಂಡ ಕನಸ ಹೇಳಲ್ಲ
ಮುಂದಿನ ಸುದ್ಧಿ ಹೇಳಯ್ಯ ಹಿಂದಿನ ಸುದ್ಧಿ ಹೇಳಯ್ಯ
ಸಿದ್ಧರಿಗೆ ಹೇಳಲಿಬೇಕಯ್ಯ ಶಿವನುಡಿ ಹೇಳಲಿ ಬೇಕಯ್ಯ”[೯೯]

ಶಿವನ ಹತ್ತಿರ ಇಡುವ ಬೇಡಿಕೆಗಳ ಪಟ್ಟಿ ದೊಡ್ಡದಿದೆ. ಈ ಬೇಡಿಕೆಯ ವಿಸ್ತಾರವನ್ನು ಹೇಳುವ ಡೊಳ್ಳಿನ ಹಾಡುಗಳು ಸಾಕಷ್ಟಿವೆ. ಸೋಲ್ಲಾಪುರ ತಾಲ್ಲೂಕು 'ಹತ್ತೂರು' ಗ್ರಾಮದ 'ಹಿರಕೂರ್ ಧನಗೊಂಡ' ಅವರು ಅಮೋಘಸಿದ್ಧ ಕಾವ್ಯವನ್ನು ಹಾಡುತ್ತಾರೆ. ಇವರಾಡುವ ಕಾವ್ಯ ಹೆಚ್ಚು ದೀರ್ಘ ವಾಗಿದೆ. ಇದರಲ್ಲಿ ಅಮೋಘಸಿದ್ಧನ ವ್ಯಕ್ತಿತ್ವದ ಭಿನ್ನ ಆಯಾಮಗಳು ಸಿಗುತ್ತವೆ. ಈ ಕಾವ್ಯದಲ್ಲಿ ಅಮೋಘಸಿದ್ಧ ಶಿವನತ್ತಿರ ಇಡುವ ಬೇಡಿಕೆಯ ಪಟ್ಟಿ ವಿಸ್ತಾರ ಮತ್ತು ಭಿನ್ನ. ಹೋಮದ ಕಂಬಳಿ, ನೇಮದ ಬೆತ್ತ, ಭೂತಾಳಸಿದ್ಧ ಮುಂತಾದ ವಸ್ತುಗಳ ಜೊತೆಗೆ ಅಮೋಘಸಿದ್ಧನ ವಂಶಸ್ಥರಾದ ಅವಧೂತ ಸಿದ್ಧ, ಸೋಮಯ್ಯ, ಕಣ್ಣಪ್ಪ ಮುಂತಾದವರ ಜನ್ಮಗಳನ್ನು ಬೇಡುತ್ತಾನೆ.[೧೦೦]

“ಬ್ರಹ್ಮ ಅವತಾರಂದಾರೇ ಶಂಬು ಸೂಲತಲಿ ಮಾದಣ್ಣ
ವಿಷ್ಣು ಅವತಾರಂದಾರೇ ತೀರೋಡದ ಮಂಗರಾಯನೋ

ರುದ್ರರ ಅವತಾರಂದಾರೇ ಕರಣೆ ಮಲಕಾರಿಸಿದ್ಧನೋ
ವೀರಭದ್ರನವತಾರ ಅವಧಾರಿ ಅವಧೂತಸಿದ್ಧನೋ
ಗಜಮುಖನ ಅವಧಾರಿ ಆಚಾರಿಗೌಡ ಸೋಮಯ್ಯ
ಶೇಷವತಾರಂದಾರೇ ಜ್ಯೋತಿ ಕಣ್ಣಪ್ಪ ಒಡಿಯನೋ
ಮೂರು ನಾಲ್ಕು ಅವತಾರ ಏಳು ಅವತಾರ ಬೇಡ್ಯಾನ"[೧೧೦]

ಇಂತಹ ಹಲವು ಬೇಡಿಕೆಗಳನ್ನು ಪಡೆದುಕೊಂಡು ಗುರು ಸೋಮಲಿಂಗನೊಂದಿಗೆ ಮುಮ್ಮಟ್ಟಿಗುಡ್ಡಕ್ಕೆ ಬಂದು ನೆಲೆಸಿದ. 'ಮಾಳಿಂಗರಾಯನ ಕಾವ್ಯ' ಮತ್ತು 'ಜನಪದ ಹಾಲುಮತ ಕಾವ್ಯ'ದಲ್ಲಿ ಅಮೋಘ ಸಿದ್ಧ ಭೂಲೋಕಕ್ಕೆ ಬಂದ ಕಾರಣವನ್ನು ಬೇರೆ ರೀತಿಯಲ್ಲಿ ಹೇಳುತ್ತವೆ. ಅಮೋಘಸಿದ್ಧ ಮಾಳಿಂಗ ರಾಯನ ಶಿವನ ಆರಾಧನೆಯ ಪ್ರಮಾಣವನ್ನು ಪರೀಕ್ಷಿಸುವುದಕ್ಕೆ ಬರುತ್ತಾನೆ. ಬಂದು ಮಾಳಿಂಗರಾಯನಿಗೆ ಕೆಲವು ಪರೀಕ್ಷೆಗಳನ್ನು ಒಡ್ಡುತ್ತಾನೆ. ಆ ಪರೀಕ್ಷೆಗಳಲ್ಲಿ ಮಾಳಿಂಗರಾಯ ಗೆಲ್ಲುತ್ತಾನೆ. ನಂತರ ಮಾಳಿಂಗರಾಯ ಅಮೋಘಸಿದ್ಧನಿಗೆ ಕೆಲವು ಪರೀಕ್ಷೆಗಳನ್ನು ಒಡ್ಡುತ್ತಾನೆ. ಈತ ಆ ಪರೀಕ್ಷೆಗಳನ್ನು ಗೆಲ್ಲುವುದಿಲ್ಲ. ಸೋತು ನೀನೇ ಶ್ರೇಷ್ಠ ಶಿವನಾರಧಕನೆಂದು ಹೇಳಿ ಹೋಗುತ್ತಾನೆ. ಧನಗೊಂಡರವರು ಹಾಡುವ ಕಾವ್ಯವಾಗಿದೆ. ಈ ಎರಡು ವಸ್ತುಗಳಿಗಿಂತ ಭಿನ್ನ ಹಾಲುಮತದವರು. ಶಿವನ ಆರಾಧನೆಯನ್ನು ಮರೆತಿರುತ್ತಾರೆ. ಇದನ್ನು ಅರಿತ ಶಿವ ಅವರಲ್ಲಿ ಮತ್ತೆ ತನ್ನ ಆರಾಧನೆಯಲ್ಲಿ ರೂಢಿಸಲು ಶಿವ ಅಮೋಘಸಿದ್ಧನನ್ನು ಕಳಿಸುತ್ತಾನೆ.

"ಬಾರೋ ಬಾರೋ ನಂದಿವಾನ ಮೂರು ಲೋಕದ ವಳಗೆನೆ
ಮೂರು ಲೋಕದ ವಳಗೇನೊ ಕರಿತಲೆ ಮಾನವರೆಂಬುವರು
ಕರಿತಲೆ ಮಾನವರೆಂಬುವರು ಹಾಲುಮತದರಿದ್ದಾರೆ
ಹಾಲುಮತದನವಂಬವರು ನಮ್ಮ ನಾಮ ನೋಡಿರಿ
ನನ್ನ ನಾಮ ನೋಡಪ್ಪ ಮರೆತ ನಡದಾರಂದಾನ
ನೀನೆ ಹೋಗಲಿ ಬೇಕಪ್ಪ ಉದ್ಧಾರ ಮಾಡಲಿ ಬೇಕಲ್ಲಿ
ದೇವರು ಪರಮೇಶೂರನೂ ಹಿಂಗೊಂದು ಲಾಲಿಸಿ ನುಡದಾನೊ"[೧೧೧]

ಹಾಲುಮತ ಸಮುದಾಯದಲ್ಲಿ ಶೈವಾರಾಧನೆ ವಿಮುಖವಾಗುವ ಸಂದರ್ಭದಲ್ಲಿ ಅಮೋಘಸಿದ್ಧ ಕಾಣಿಸಿ ಕೊಂಡಿರಬೇಕು. ಅಥವಾ ಅಮೋಘಸಿದ್ಧನ ಕಾಲಕ್ಕಾಗಲೇ ಹಾಲುಮತ ಸಂಸ್ಕೃತಿಯಲ್ಲಿ ಶೈವರಾಧನೆ ಕಣ್ಮರೆಯಾಗಿರಬೇಕು. ಶೈವರಾಧನೆಯನ್ನು ರೂಢಿಗೆ ತರಲು ಅಮೋಘಸಿದ್ಧ ಹೋರಾಟ ಮಾಡಿರಬೇಕು. ತನ್ನದೇ ಆದ 'ಗುರು ಒಡೆಯರು' ವರ್ಗವನ್ನು ಹುಟ್ಟು ಹಾಕಿರುವುದು ಇದಕ್ಕೆ ಪೂರಕವಾಗಿ ನಿಲ್ಲುತ್ತದೆ. ಈತ ಕೈಗೊಂಡ ಕೆಲಸಗಳೆಲ್ಲವು ಶೈವ ಆರಾಧನೆಯನ್ನು ಪ್ರತಿಪಾದನೆ ಮಾಡಿವೆಯೆ ಹೊರತು ಆರ್ಥಿಕ ಅಭಿವೃದ್ಧಿಯನ್ನಾಗಲಿ ಮತ್ತು ಆಡಂಬರತೆಯನ್ನಾಗಲಿ ನಿರೀಕ್ಷೆ ಮಾಡಿಲ್ಲ. ಈತ ಆಡಂಬರತೆವನ್ನು ವಿರೋಧ ಮಾಡಿದ ಉದಾಹರಣೆಗಳು ಸಿಗುತ್ತವೆ. ಭಕ್ತರು ನಿನ್ನ ಹೆಸರಿನಲ್ಲಿ ಹಬ್ಬ ಮಾಡುವುದಕ್ಕೆ 'ರಥ' ನಿರ್ಮಾಣ ಮಾಡುತ್ತೇವೆ ಎಂದು ಕೇಳಿದಾಗ ಬೇಡವೆಂದು ವಿರೋಧ ಮಾಡುತ್ತಾನೆ. ಇವತ್ತಿಗೂ ಈ ದೈವಕ್ಕೆ ಮತ್ತು ಈ 'ವಂಶಸ್ಥ' ದೈವಗಳಿಗೆ ತೇರುಗಳಿಲ್ಲ. ಬೀಳಗಿ

ತಾಲ್ಲೂಕು 'ನಾಗರಾಳ' ಗ್ರಾಮದ ಅಮೋಘಸಿದ್ಧ ದೈವಕ್ಕೆ ಮಾತ್ರ ತೇರು ಇರುವುದು ಕುತೂಹಲವನ್ನು ಹುಟ್ಟಿಸುತ್ತದೆ. ಅಮೋಘಸಿದ್ಧ ತಾನು ಗೆದ್ದ ಆಸ್ತಿಗಳನ್ನು ತಳಸಮುದಾಯದವರಿಗೆ ಹಂಚಿಬಿಡುತ್ತಿದ್ದ. ಆ ಮುಖಾಂತರ ತನ್ನ ಮಠದ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಿದ್ದ. ತನ್ನ ವಂಶಸ್ಥರಿಗೆ ಮತ್ತು ಶಿಷ್ಯರಿಗೆ 'ಆಸ್ತಿಯನ್ನು ಕೂಡಿ ಹಾಕುವ ಆಸೆ ಮಾಡಬಾರದು. ಪಕ್ಷಪಾತವಿಲ್ಲದೆ ನ್ಯಾಯ ನೀತಿ ಧರ್ಮದಿಂದ ನಡೆದುಕೊಳ್ಳಬೇಕು'.[೧೦೩] ನಿಮ್ಮ ನಡತೆ ಭಕ್ತರನ್ನು ಕಾಪಾಡುವುದೇ ಹೊರತು ನಿಮ್ಮನ್ನು ರಕ್ಷಣೆ ಮಾಡಿಕೊಳ್ಳುವುದಲ್ಲವೆಂದು ಬೋಧನೆ ಮಾಡುತ್ತಿದ್ದ. ಹಾಗಾಗಿ ಶಿಷ್ಯ ಮತ್ತು ವಂಶಸ್ಥರಲ್ಲಿ ಈ ಗುಣ ಸಹಜವಾಗಿ ಬೆಳೆದು ಹೋಗಿತ್ತು.

ಅಮೋಘಸಿದ್ಧನ ಮೂರನೆ ಮಗನಾದ 'ಸೋಮಣ್ಣ ಮುತ್ಯಾ' ಮೈಲಾರ ಹಟ್ಟಿಯಲ್ಲಿ "ಸಿದ್ಧನಗೌಡ ಮತ್ತು ಮುದ್ದಗೌಡರನ್ನು ಸೋಲಿಸಿದಾಗ 'ಇಪ್ಪತ್ತೈದು ಚಾವರ' ಭೂಮಿ ಸಿಗುತ್ತದೆ. ಆ ಭೂಮಿಯನ್ನು ಸೋಮಣ್ಣ ಮುತ್ಯಾ, ಮುಲ್ಲಾ, ಕುಂಬಾರ, ಬಡಿಗ, ಹಡಪದ, ಕುಲಕರ್ಣಿ, ವಾಲಿಕಾರ ಮುಂತಾದವರಿಗೆ ಹಂಚಿದ್ದ".[೧೦೪] "ಭೂತಾಳಸಿದ್ಧ ಜೈನಾಪುರದಲ್ಲಿ ಗೆದ್ದ ಆಸ್ತಿಯನ್ನು ಹಾಗೂ ಗೌಡಕಿಯನ್ನು ಜೈನಿಗೆ ಬಿಟ್ಟುಬರುತ್ತಾನೆ".[೧೦೫] ಇದರಿಂದ ಅಮೋಘಸಿದ್ಧ ಮತ್ತು ಆತನ ಬಳಗದವರು ಆಸ್ತಿಗಾಗಿ ಹೋರಾಟ ಮಾಡದೆ. ಶೈವರಾಧನೆಯನ್ನು ಬಲಪಡಿಸುವುದಕ್ಕಾಗಿ ಹೋರಾಟ ಮಾಡಿದ್ದಾರೆಂದು ತಿಳಿಯುತ್ತದೆ. ಹಾಗಾಗಿ ಅಮೋಘಸಿದ್ಧ ಶೈವರಾಧನೆಯನ್ನು ಪ್ರತಿಪಾದನೆ ಮಾಡುವುದಕ್ಕೆ ಮುಮ್ಮಟ್ಟಿಗುಡ್ಡದಲ್ಲಿ ನೆಲೆಸಿದ್ದ. ಮುಮ್ಮಟ್ಟಿಗುಡ್ಡವನ್ನು ತನ್ನ ಆಡಳಿತದ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಪಶುಪಾಲಕರಲ್ಲಿ ಕಣ್ಮರೆಯಾಗುತ್ತಾ ಶೈವಧರ್ಮವನ್ನು ಪ್ರತಿಪಾದನೆ ಮಾಡಿದ.

೪.೪.೨.೧. ಅಮೋಘಸಿದ್ಧ ಮತ್ತು ಪಾರ್ವತಿಯ ಸಂಘರ್ಷ

ಇತರೆ ಜನಪದ ಸಾಂಸ್ಕೃತಿಕ ವೀರರ ಬಾಲ್ಯ ಜೀವನಕ್ಕೆ ಅಮೋಘಸಿದ್ಧನ ಬಾಲ್ಯ ಜೀವನವನ್ನು ಹೋಲಿಸಿದರೆ ಭಿನ್ನವಾಗಿರುವುದು ಕಾಣುತ್ತದೆ. ಬಾಲ್ಯ ಜೀವನವನ್ನು ಪ್ರತಿಬಿಂಬಿಸುವ ಕಥನಗಳು ಮಾತೃಪ್ರಧಾನ ಮತ್ತು ಪಿತೃಪ್ರಧಾನ ಸಂಸ್ಕೃತಿಗಳ ಸಂಘರ್ಷಗಳನ್ನು ಹೇಳುತ್ತವೆ. ಅಮೋಘಸಿದ್ಧ ಚಿಕ್ಕವನಿರುವಾಗ ಶಿವನ ಆರಾಧನೆಯಲ್ಲಿ ತೊಡಗಿರುತ್ತಾನೆ. ಸಿದ್ಧಿಯನ್ನು ಪಡೆಯುವುದಕ್ಕೆ ಹಂಬಲಿಸುತ್ತಿರುತ್ತಾನೆ. ಇದನ್ನು ನೋಡಿದ ಪಾರ್ವತಿ ಅಮೋಘಸಿದ್ಧನ ಹತ್ತಿರ ಹೋಗಿ "ಮಗು ನಿನಗೆ ನಾನು ಇಷ್ಟೋನೋ ಅಥವಾ ಶಿವ ಇಷ್ಟನೋ" ಎಂದು ಕೇಳುತ್ತಾಳೆ. ಈ ಪ್ರಶ್ನೆಗೆ ಅಮೋಘಸಿದ್ಧ ನನಗೆ ಶಿವ ಇಷ್ಟವೆಂದು, ಆತನನ್ನು ಆರಾಧಿಸಿದರೆ ಸಿದ್ಧಿಯನ್ನು ಪಡೆಯಬಹುದೆಂದು ಉತ್ತರಿಸುತ್ತಾನೆ. ಈ ಮಾತನ್ನು ಕೇಳಿದ ಪಾರ್ವತಿ ಕೋಪಿತಳಾಗುತ್ತಾಳೆ. ಶೈವರಾಧನೆ ಮಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ಮಾನಸಿಕವಾಗಿ ಹಿಂಸೆ ಕೊಡುತ್ತಾಳೆ. ಹಲವಾರು ಸವಾಲುಗಳನ್ನು ಹಾಕುತ್ತಾಳೆ. ಕಠಿಣವಾದ ಪೂಜೆಯ ಬೇಡಿಕೆಗಳನ್ನು ಇಡುತ್ತಾಳೆ. 'ಹುಳ ಮುಟ್ಟಲಾರದ ಹೂವು. ಕಪ್ಪೆ ಮುಟ್ಟಲಾರದ ಸಿತಾಳ' ತಂದು ನನ್ನನ್ನು ಪೂಜಿಸಬೇಕೆಂದು ಹೇಳುತ್ತಾಳೆ. ಇದಕ್ಕೆ ಒಪ್ಪಿದ ಅಮೋಘಸಿದ್ಧ ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗದಂತೆ ತಡೆಯುತ್ತಾಳೆ. ಪಾರ್ವತಿಯ ಯೋಚನೆಯನ್ನು ಅರಿತ ಶಿವ ಅಮೋಘಸಿದ್ಧನಿಗೆ

ಬೆಂಬಲಕ್ಕೆ ನಿಲ್ಲುತ್ತಾನೆ. ಪಾರ್ವತಿ ಹಾಕಿದ ಸವಾಲುಗಳನ್ನು ಅಮೋಘಸಿದ್ಧ ಗೆಲ್ಲುವಂತೆ ಮಾಡುತ್ತಾನೆ. ಅಮೋಘಸಿದ್ಧ ಯಶಸ್ವಿಯಾದಾಗ ಪಾರ್ವತಿ ಕೋಪಿತಳಾಗುತ್ತಾಳೆ. ಇದನ್ನು ನೋಡಿದ ಶಿವ ದೂರದಲ್ಲಿ ಕುಳಿತು ನಗುತ್ತಾನೆ.

"ಅಮೋಘಸಿದ್ಧ ಅರಿವಿಲೆ ದುಡಿದ ಶಿವನ ಅಂತೇಕ
ಪಾರ್ವತಿದೇವಿ ಕಾಡಬಾರ್‍ದು ಕಾಡ್ಯಾಳ ಮನಸು ನೋಡಾಕ
ತಾಯಿ ಬೇಡಿದ ಕಂದ ನಿಡ್ಯಾನ ಶಿವ ಷಣ್ಮುಖ"[೧೦೬]

ಇಲ್ಲಿನ ಶಿವ ಪಾರ್ವತಿಯರ ಪಾತ್ರಗಳು ಮಾತೃಪ್ರಧಾನ ಮತ್ತು ಪಿತೃಪ್ರಧಾನ ಸಂಸ್ಕೃತಿಯ ನಾಯಕರ ಪಾತ್ರಗಳಾಗಿ ಕಾಣಿಸಿಕೊಂಡಿವೆ. ಅಮೋಘಸಿದ್ಧ ಮತ್ತು ಪಾರ್ವತಿಯ ಸಂಘರ್ಷ ಎರಡು ಸಂಸ್ಕೃತಿಗಳ ಸಂಘರ್ಷವಾಗಿ ಕಾಣಿಸಿಕೊಳ್ಳುತ್ತದೆ. ಪಾರ್ವತಿಗೆ ತನ್ನತನ ಕಳೆದು ಹೋಗುತ್ತಿದೆ ಅನ್ನುವ ಆತಂಕ ಮತ್ತು ಉಳಿಸಿಕೊಳ್ಳಬೇಕು ಎನ್ನುವ ಹಠವಿದೆ. ಹಾಗಾಗಿ ಅಮೋಘಸಿದ್ಧನ ಮೇಲೆ ಹಲವು ಪ್ರಯೋಗಗಳನ್ನು ಒಡ್ಡುತ್ತಾಳೆ. ಈ ಸವಾಲುಗಳನ್ನೆಲ್ಲಾ ಅಮೋಘಸಿದ್ಧ ಗೆಲ್ಲುತ್ತಾನೆ. ಬಾಹ್ಯವಾಗಿ ಅಮೋಘಸಿದ್ಧ ಗೆದ್ದಂತೆ ಕಂಡುಬಂದರೂ ಆಂತರಿಕದಲ್ಲಿ ಶಿವ ಗೆದ್ದಿದ್ದಾನೆ. ಹಾಗಾಗಿ ಈ ಗೆಲುವನ್ನು ಪಿತೃಪ್ರಧಾನ ಸಂಸ್ಕೃತಿಯ ಗೆಲವು, ಶೈವಾರಾಧನೆಯ ಗೆಲುವು, ಶೈವಸಿದ್ಧಪಂಥದ ಗೆಲವು ಎಂದು ಕರೆಯಬಹುದು. ಪಶುಪಾಲಕರು ಮಾತೃಪ್ರಧಾನ ಸಂಸ್ಕೃತಿಯಿಂದ ಪಿತೃಪ್ರಧಾನ ಸಂಸ್ಕೃತಿಯಾಗಿ ರೂಪಗೊಳ್ಳುವ ಆರಂಭಿಕ ಕಾಲಘಟ್ಟದಲ್ಲಿ ಅಮೋಘಸಿದ್ಧ ಕಾಣಿಸಿಕೊಂಡಿರಬೇಕು.

೪.೪.೩. 'ಭೂತಾಳಸಿದ್ಧ'ನೊಂದಿಗೆ ತಾತ್ವಿಕ ಸಂಬಂಧ

ಗುರು-ಶಿಷ್ಯರ ಪರಿಕಲ್ಪನೆ ಪ್ರಾಚೀನ ಕಾಲದಿಂದಲೂ ಚಲಾವಣೆಯಲ್ಲಿದೆ. ಜನಪದ ಸಾಂಸ್ಕೃತಿಕ ವೀರರು ತಮ್ಮ ತತ್ವವನ್ನು ಪ್ರತಿಪಾದನೆ ಮಾಡಲು ಶಿಷ್ಯರನ್ನು ಪಡೆದುಕೊಳ್ಳುತ್ತಿದ್ದರು. ಆ ಶಿಷ್ಯರು ಕೇವಲ ಶಿಷ್ಯರಾಗಿರುತ್ತಿರಲಿಲ್ಲ. 'ಸಾಕುಮಗ'ನೆಂದೂ 'ಗುರುವಿನ ಮಗ'ನೆಂದು ಕರೆದುಕೊಳ್ಳುತ್ತಿದ್ದರು. ಸಾಂಸ್ಕೃತಿಕ ವೀರರಿಗೆ ಮಕ್ಕಳಾಗುವುದಕ್ಕಿಂತ ಮುಂಚೆ 'ಶಿಷ್ಯತ್ವ' ಪಡೆದುಕೊಳ್ಳುತ್ತಿದ್ದರು ಅನ್ನುವುದು ಹೆಚ್ಚಾಗಿ ಕಂಡುಬರುತ್ತದೆ. ಅಮೋಘಸಿದ್ಧ ಇದಕ್ಕೆ ಹೊರತಾಗಿಲ್ಲ. ತನಗೆ ಮಕ್ಕಳು ಹುಟ್ಟುವುದಕ್ಕಿಂತ ಮುಂಚೆ ನಾಲ್ಕು ಶಿಷ್ಯರನ್ನು ಪಡೆದುಕೊಂಡಿದ್ದ.

೧. ಮಹಾಸಿದ್ಧ

೨. ಮಂಗರಾಯ

೩. ಮಲಕಾರಸಿದ್ಧ

೪. ಭೂತಾಳಸಿದ್ಧ

ಜನಪದಿಗರು ಭೂತಾಳಸಿದ್ಧನನ್ನು ಮಾತ್ರ ಶಿಷ್ಯನೆಂದು ಉಳಿದ ಮೂರು ಜನರನ್ನು 'ಪುಣ್ಯದ ಮಕ್ಕಳೆ'ಂದು ಕರೆಯುತ್ತಾರೆ. ಪುಣ್ಯದ ಮಕ್ಕಳೆಂದರೆ 'ಪಡೆದ ಮಕ್ಕಳು' ಎಂದರ್ಥ. ಪಡೆದ ಮಕ್ಕಳು

ಎಂದರೆ 'ಶಿಷ್ಯ'ರು ಎಂದರ್ಥ. ನಾಲ್ಕು ಜನ ಶಿಷ್ಯರಲ್ಲಿ ಭೂತಾಳಸಿದ್ಧ ಮೊದಲನೇ ಮತ್ತು ಅಗ್ರಗಣ್ಯ ಶಿಷ್ಯ ಎನಿಸಿದ್ದಾನೆ.

ಅಮೋಘಸಿದ್ಧನ ಸಾಧನೆಯ ಹಿಂದೆ ಭೂತಾಳಸಿದ್ಧನ ಬಲವಾದ ಶ್ರಮವಿದೆಯೆಂದು ಡೊಳ್ಳಿನ ಹಾಡುಗಳು ಹೇಳುತ್ತವೆ. 'ಸಿದ್ಧಸಿರಿ' ಕೃತಿಯಲ್ಲಿ ಈ ಚಿತ್ರಣವಿದೆ. ಈ ಎರಡು ದೈವದ ದೇವಾಲಯಗಳು ಮತ್ತು ಆಚರಣೆಗಳು ಡೊಳ್ಳಿನ ಹಾಡುಗಳ ಪರಿಕಲ್ಪನೆಯನ್ನು ಅನಾವರಣ ಮಾಡುತ್ತವೆ. ಎಲ್ಲಿ ಅಮೋಘಸಿದ್ಧ ದೇವಾಲಯವಿರುತ್ತದೆಯೋ ಅಲ್ಲಿ 'ಭೂತಾಳಸಿದ್ಧ'ನ ದೇವಾಲಯವಿರುತ್ತದೆ. ಎಲ್ಲಿ ಅಮೋಘಸಿದ್ಧ ಮತ್ತು ಆತನ ವಂಶಸ್ಥರು ಆರಾಧನೆಗೆ ಒಳಗಾಗುತ್ತಿದ್ದಾರೋ ಅಲ್ಲಿ ಭೂತಾಳಸಿದ್ಧನೂ ಆರಾಧನೆಗೆ ಒಳಗಾಗುತ್ತಿದ್ದಾನೆ. ಅಂದರೆ ಅಮೋಘಸಿದ್ಧನ ದೇವಾಲಯದ ಹತ್ತಿರವಲ್ಲದೆ ಆತನ ಬಳಗದವರೆಂದು ಕರೆಯುವ ವ್ಯಕ್ತಿಗಳ ದೈವಗಳ ತಾಣಗಳಲ್ಲೂ ಭೂತಾಳಸಿದ್ಧ ಆರಾಧನೆಗೆ ಒಳಗಾಗುತ್ತಿದ್ದಾನೆ. ಉದಾಹರಣೆ ಬಿಜ್ಜರಗಿಯ 'ಸೋಮಲಿಂಗ' ದೈವದ ಜೊತೆಗೆ, ಸೊಲ್ಲಾಪುರ ತಾಲ್ಲೂಕು ಹತ್ತೂರು ಗ್ರಾಮದ 'ಬಣಸಿದ್ಧ' ದೈವದೊಂದಿಗೆ, ಬಿಜಾಪುರ ತಾಲ್ಲೂಕು ಅರಕೇರಿ ಮತ್ತು ಬಾದಾಮಿ ತಾಲ್ಲೂಕು ಹಿರೇಕುಂಬಿ ಗ್ರಾಮಗಳಲ್ಲಿ ಅಮೋಘಸಿದ್ಧ ದೈವದೊಂದಿಗೆ ಭೂತಾಳಸಿದ್ಧ ಆರಾಧನೆಗೆ ಒಳಗಾಗುತ್ತಿದ್ದಾನೆ. ಹೊಸದುರ್ಗ ತಾಲ್ಲೂಕು ಬಾಗೂರು ಗ್ರಾಮದ 'ಒರಗಲಮ್ಮ' ದೇವತೆಯೊಂದಿಗೆ ಈತನ ಆರಾಧನೆ ಮಾಡುತ್ತಿರುವುದು ವಿಶೇಷ. ದಕ್ಷಿಣ ಕರ್ನಾಟಕದಲ್ಲಿ ಈ ದೈವದ ಪರಿಚಯವಾಗಲಿ, ಅಮೋಘಸಿದ್ಧ ದೈವದ ಪರಿಚಯವಾಗಲಿ ಇಲ್ಲ. ಹಾಗಾಗಿ ಭೂತಾಳಸಿದ್ಧನ ಆರಾಧನೆ ಗಮನಸೆಳೆಯುತ್ತದೆ.

ಈ ಎಲ್ಲಾ ಸ್ಥಳಗಳಲ್ಲಿ ಭೂತಳಸಿದ್ಧನ ಮೂರ್ತಿ ದೇವಾಲಯದ ಹೊರಗಡೆ ಇದೆ. ಹತ್ತೂರ ಗ್ರಾಮದಲ್ಲಿ ಬಣಸಿದ್ಧ ದೇವಾಲಯದ ಹಿಂದಿನ ಭಾಗದಲ್ಲಿದೆ. ಅರಕೇರಿಯಲ್ಲಿ ಮತ್ತು ಮಾಯ ಮಕಣಾಪುರ ಗ್ರಾಮಗಳಲ್ಲಿ ಮಾದಿಗ (ಹರಿಜನ) ಸಮುದಾಯದವರು ಪೂಜೆ ಮಾಡುತ್ತಾರೆ. ಅಮೋಘ ಸಿದ್ಧ ಮುಮ್ಮಟ್ಟಿ ಗುಡ್ಡಕ್ಕೆ ಬರುವುದಕ್ಕಿಂತ ಮುಂಚೆ ಭೂತಾಳಸಿದ್ಧ ಆ ಭಾಗದಲ್ಲಿ ಗಟ್ಟಿಯಾಗಿ ನೆಲೆಸಿರಬೇಕು. ಅಮೋಘಸಿದ್ಧನ ಶಿಷ್ಯನಾಗಿರುವುದಕ್ಕಿಂತ ಮುಂಚೆ ತಳಸಮುದಾಯದ, ಬುಡಕಟ್ಟು ಸಮುದಾಯಗಳ ನಾಯಕನಾಗಿದ್ದನೆನ್ನುವ ಚಿತ್ರಣಗಳು ಸಿಗುತ್ತವೆ. ಡೊಳ್ಳಿನ ಹಾಡುಗಳಲ್ಲಿ ಬಡವರ ಕಷ್ಟಗಳನ್ನು ಪರಿಹಾರ ಮಾಡುವ ವ್ಯಕ್ತಿಯಾಗಿ ಭೂತಾಳಸಿದ್ಧ ನಿರೂಪಿತಗೊಂಡಿದ್ದಾನೆ.

"ಕೆಂಗರಗಣ್ಣ ಗುಂಗರ ಮೀಸಿ ನುಂಗುವಂಥಾ ಭಾಳ ಅವತಾರೊ
ನುಂಗುವಂಥಾ ಬಾಳ ಅವತಾರನಂದರ ಬೈಲ ಭೂತಾಳಸಿದ್ಧನೊ
ಬೈಲ ಭೂತಾಳಸಿದ್ಧ ಬಾ ನನ್ನ ಬಡವರ ಅರ್ಜಿ ಬಂದಾವೊ"[೧೦೭]

ಅಮೋಘಸಿದ್ಧ ಭೂತಾಳಸಿದ್ಧನನ್ನು ಸೋಲಿಸುವುದರ ಮುಖಾಂತರ ಮಾಯಾ ಮಕಣಾಪುರ ಗ್ರಾಮದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿರಬೇಕು. ಏಕೆಂದರೆ ಕಾವ್ಯಗಳ ಪ್ರಕಾರ ಅಥವಾ ಪುರಾಣಗಳ ಪ್ರಕಾರ ಅಮೋಘಸಿದ್ಧ ಮೊದಲು ಕಾಣಿಸಿಕೊಳ್ಳುವುದು ಮಕಣಾಪುರ ಗ್ರಾಮದಲ್ಲಿ. ಮಕಣಾಪುರ

ಗ್ರಾಮದಲ್ಲಿ ಇವರಿಬ್ಬರು ಸಂಘರ್ಷ ಮಾಡಿದ ಕಥನಗಳು, ಆಚರಣೆಗಳು ಇವತ್ತಿಗೂ ರೂಪದಲ್ಲಿ ಬಿಂಬಿತವಾಗುತ್ತಿವೆ. ಯುಗಾದಿ ಅಮವಾಸ್ಯೆಯ ದಿವಸ ಕೆರೆಯಲ್ಲಿ ರಥವನ್ನು ಎಬ್ಬಿಸುವ ಆಚರಣೆ ಸಂಘರ್ಷದ ಅಂಶವನ್ನು ಸ್ಪಷ್ಟವಾಗಿ ಹೇಳುತ್ತದೆ. ಅಲ್ಲದೇ ಭೂತಾಳಸಿದ್ಧ ಅಮೋಘಸಿದ್ಧನ ಪ್ರಥಮ ಶಿಷ್ಯನಾಗಿದ್ದರೂ ಈ ಸಂಘರ್ಷ ಅಮೋಘಸಿದ್ಧನ ಪ್ರಥಮ ಸಂಘರ್ಷವೂ ಹೌದು. ಈ ಇಬ್ಬರು ನಾಯಕರನ್ನು ಕುರಿತ ಡೊಳ್ಳಿನ ಹಾಡುಗಳು, ಜನಪದ ಗೀತೆಗಳು ಮತ್ತು ಆಚರಣೆಗಳನ್ನು ಸಂಗ್ರಹಿಸ ಬೇಕು. ಇವುಗಳನ್ನು ಆಧಾರವಾಗಿಟ್ಟುಕೊಂಡು ಸೈದ್ಧಾಂತಿಕವಾಗಿ ಅಧ್ಯಯನ ಮಾಡಬೇಕು. ಆಗ ಸ್ಪಷ್ಟವಾದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವುದಕ್ಕೆ ಸಾಧ್ಯ. ಆದರೆ ಭೂತಾಳಸಿದ್ಧ ಅಮೋಘಸಿದ್ಧನಿಗೆ ಬೇಕಾದ ಅತಿಮುಖ್ಯ ಶಿಷ್ಯರಲ್ಲಿ ಒಬ್ಬ ವ್ಯಕ್ತಿ ಆಗಿದ್ದ ಅನ್ನುವುದು ಚಾರಿತ್ರಿಕ ಆಧಾರಗಳಿಂದ ತಿಳಿದು ಬರುತ್ತದೆ. ಆ ಕಾರಣಕ್ಕೆ ತಾನು ಭೂಲೋಕದಲ್ಲಿ ತನ್ನ ಅಸ್ಮಿತೆಯನ್ನು ಕಟ್ಟಿಕೊಳ್ಳುವುದಕ್ಕೆ ಶಿವನಲ್ಲಿ ಬೇಡುವ ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಭೂತಾಳಸಿದ್ಧ ಕಾಣಿಸಿಕೊಳ್ಳುತ್ತಾನೆ.

"ನಂದಿನ ಬೇಡುತಾನೇನ ಭೂತಾಳಸಿದ್ಧನ ಬೇಡ್ಯಾನ"[೧೦೮]

ಭೂತಾಳಸಿದ್ಧ ಅಮೋಘಸಿದ್ಧನ ಪ್ರಮುಖ ಶಿಷ್ಯ. ಈತ ಕೇವಲ ಶಿಷ್ಯನಾಗಿರಲಿಲ್ಲ. ಮನೆಯ ಮಗನಾಗಿ ಕಾರ್ಯನಿರ್ವಹಿಸಿದ. ತನ್ನ ಗುರು, ಸಾಕು ತಂದೆಗೆ ಮತ್ತು ಆತನ ವಂಶಸ್ಥರಿಗೆ ಎದುರಾದ ವರನ್ನು ಸೋಲಿಸುತ್ತಿದ್ದ. ತನ್ನ ಗುರುವಿನ ವಂಶ ಮತ್ತು ಶಿಷ್ಯವರ್ಗ ಸಂಕಷ್ಟದಲ್ಲಿದ್ದಾಗ ಆ ಸ್ಥಳಕ್ಕೆ ಹೋಗಿ ಅವರನ್ನು ಸಂಕಷ್ಟದಿಂದ ಪಾರು ಮಾಡುತ್ತಿದ್ದನೆನ್ನುವ ಕಥನಗಳು ಇವೆ. 'ಮೈಲಾರಹಟ್ಟಿ' ಯನ್ನು 'ಬಿವರಗಿ' ಪರಿವರ್ತನೆ ಮಾಡಿದ ಅಮೋಘಸಿದ್ಧ ವಂಶದವರ ಐತಿಹ್ಯದಲ್ಲಿ ಈತನ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ. ಇಂತಹ ಹಲವಾರು ಸ್ಥಳೀಯ ಕಥನಗಳು ಅಮೋಘಸಿದ್ಧ ಮತ್ತು ಭೂತಾಳಸಿದ್ಧರ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣ ಮಾಡುತ್ತಿವೆ.

೪.೪.೪. ಮಾಳಿಂಗರಾಯನೊಂದಿಗೆ ಸಂಘರ್ಷ

ಅಮೋಘಸಿದ್ಧ ಮತ್ತು ಮಾಳಿಂಗರಾಯ ಹಾಲುಮತದ ಸಾಂಸ್ಕೃತಿಕ ನಾಯಕರು. ಪಶುಪಾಲಕರು. ಶೈವ ಆರಾಧಕರು. ಭಂಡಾರ ಪಂಥದ ನಾಯಕರು. ಒಂದೇ ಕಾಲಘಟ್ಟದಲ್ಲಿ ಒಂದೇ ಪ್ರದೇಶದಲ್ಲಿ ಪಶುಪಾಲನೆ ಮಾಡಿದವರು. ಹೆಚ್ಚಾಗಿ 'ಭೀಮಾ'ನದಿಯನ್ನು ಆಶ್ರಯಿಸಿದ ಈ ಇಬ್ಬರು ನಾಯಕರು ಕಾಣಿಸಿಕೊಳ್ಳುವ ಪ್ರದೇಶಗಳು ಭೌಗೋಳಿಕವಾಗಿ ಪಶುಪಾಲನೆಗೆ ಯೋಗ್ಯವಾದದ್ದು ಆಗಿವೆ. ಈ ಪ್ರದೇಶಗಳು ದೀರ್ಘಕಾಲದ ಪಶುಪಾಲನೆಯನ್ನು ನೆನಪಿಸುತ್ತವೆ. ಹಲವಾರು ಪಶುಪಾಲಕ ಸಾಂಸ್ಕೃತಿಕ ನಾಯಕರು ಇಲ್ಲಿ ಜನ್ಮತಾಳಿದ್ದಾರೆ. ವಿವಿಧ ಪ್ರದೇಶಗಳ ಕಡೆಗೆ ವಲಸೆ ಹೋಗಿದ್ದಾರೆ. ಆದರೆ ಇವರಿಬ್ಬರು 'ಏಕವೃತ್ತಿ ಪಶುಪಾಲನ' ನಾಯಕರಲ್ಲ. ಅಮೋಘಸಿದ್ಧ 'ದನಗಾರಿಕೆ'ಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದರೆ. ಮಾಳಿಂಗರಾಯ 'ಕುರಿಗಾರಿಕೆ'ಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದ. ಇವತ್ತು ಅಮೋಘಸಿದ್ಧನಿಗೆ ದನಗಾರರು ಹೆಚ್ಚು ಭಕ್ತರಿದ್ದರೆ, ಮಾಳಿಂಗರಾಯನಿಗೆ ಕುರಿಗಾರರು ಹೆಚ್ಚು ಭಕ್ತರಿದ್ದಾರೆ. ಈ ಸಾಂಸ್ಕೃತಿಕ ನಾಯಕರು ಕಾಲಕ್ಕಿಂತ ಪೂರ್ವದಲ್ಲಿ ಪಶುಪಾಲನೆಯಲ್ಲಿ

'ಕುರಿಗಾರಿಕೆ' ಮತ್ತು 'ದನಗಾರಿಕೆ' ಎಂಬ ಎರಡು ಪ್ರಭೇದಗಳಾಗಿದ್ದವು. ಅಲ್ಲಲ್ಲಿ ಹಟ್ಟಿಗಳನ್ನು ಹಾಕಿಕೊಂಡು ಪಶುಪಾಲನೆ ಮಾಡುತ್ತಿದ್ದರು. ಇವತ್ತಿಗೂ ಚಿತ್ರದುರ್ಗ, ಚಳ್ಳಕೆರೆ ಭಾಗದಲ್ಲಿ ದನಗಾರ ಮತ್ತು ಕುರಿಗಾರ ಹಟ್ಟಿಗಳು ಪಕ್ಕ ಪಕ್ಕದಲ್ಲಿ ಇವೆ. ಇವರು ಮೇವುಗಳಿಗಾಗಿ ತಾವು ಬದುಕುತ್ತಿದ್ದ ಹತ್ತಿರದ ಪ್ರದೇಶಗಳಿಗೆ ಚೌಕಟ್ಟು ಹಾಕಿಕೊಳ್ಳುತ್ತಿದ್ದರು. ಜುಂಜಪ್ಪ ಕಾವ್ಯದಲ್ಲಿ ದನಗಳ ಹುಲ್ಲುಗಾಗಿಯೇ ಪ್ರದೇಶಗಳಿಗೆ ಬೇಲಿ ಹಾಕಿಕೊಳ್ಳುತ್ತಿದ್ದರೆನ್ನುವ ಚಿತ್ರಣಗಳು ಸಿಗುತ್ತವೆ. ಬೀರಪ್ಪ ಕೋಣಾಸುರನನ್ನು ಸಂಹಾರ ಮಾಡುವುದು ಕುರಿಗಾರ ದನಗಾರರ ಮೇಲೆ ಮಾಡಿದ ದಾಳಿಯಂತೆ ಕಾಣಿಸುತ್ತದೆ. ಮಾಳಿಂಗರಾಯ ಮೂಲತಃ ದನಗಾರ ಕುಟುಂಬಕ್ಕೆ ಸೇರಿದ ವ್ಯಕ್ತಿ. ಈತನ ತಂದೆ ತಾಯಿಗಳು ದನಗಾರಿಕೆಗಾಗಿಯೇ ರಾಜ ಮನೆತನವನ್ನು ತೊರೆದು ಬಂದಿದ್ದರು. ಈತ ಬೀರಪ್ಪ ಶಿಷ್ಯನಾದ ನಂತರ ಕುರಿಗಾರನಾದ ಅನ್ನುವ ಉಲ್ಲೇಖ ಡೊಳ್ಳಿನ ಹಾಡುಗಳಲ್ಲಿದೆ.

ಡೊಳ್ಳಿನ ಹಾಡುಗಳು ಅಮೋಘಸಿದ್ಧ ಮತ್ತು ಮಾಳಿಂಗರಾಯರು ಸಂಘರ್ಷ ಮಾಡಿರುವುದನ್ನು ಹೇಳುತ್ತವೆ. ಆದರೆ ಈ ಸಂಘರ್ಷವನ್ನು ದನಗಾರ ಮತ್ತು ಕುರಿಗಾರರ ಸಂಘರ್ಷವೆಂದಾಗಲೀ, ಅಧಿಕಾರ ವಿಸ್ತರಣೆಗಾಗಿ, ಪ್ರದೇಶದ ವಿಸ್ತರಣೆಗಾಗಿ ನಡೆದ ಸಂರ್ಘಷವೆಂದಾಗಲೀ ಹೇಳುವುದಿಲ್ಲ. ಸಂಘರ್ಷದ ಆರಂಭ ಮತ್ತು ಅಂತ್ಯಗಳೆರಡು ಕುತೂಹಲ ಹುಟ್ಟಿಸುತ್ತವೆ. ಅಮೋಘಸಿದ್ಧ ಶಿವನ ಹತ್ತಿರ ನಾನೇ ನಿನ್ನ ಶ್ರೇಷ್ಠ ಆರಾಧಕ ಎನ್ನುತ್ತಾನೆ. ಶಿವ ಈ ಮಾತನ್ನು ಒಪ್ಪುವುದಿಲ್ಲ. ನಿನಗಿಂತ ಶ್ರೇಷ್ಠ ಆರಾಧಕ ಭೂಲೋಕದಲ್ಲಿ ಮಾಳಿಂಗರಾಯನಿದ್ದಾನೆ ಎನ್ನುತ್ತಾನೆ. ಇದಕ್ಕೆ ಅಮೋಘಸಿದ್ಧ ಕೋಪಿತನಾಗುತ್ತಾನೆ. ಏಕಾಏಕಿ ಮಾಳಿಂಗರಾಯನ ಪರೀಕ್ಷೆಗಾಗಿ ಭೂಮಿಗೆ ಬಂದುಬಿಡುತ್ತಾನೆ. ಯುದ್ಧ ವನ್ನು ಸಾರಿ ಬಿಡುತ್ತಾನೆ. ಇಬ್ಬರ ನಡುವೆ ಹಲವು ಪವಾಡಗಳು ನಡೆಯುತ್ತವೆ. ಅದರಲ್ಲಿ 'ಮಳೆ ಕರೆಯುವುದು' ಮತ್ತು 'ದನಗಳನ್ನು ತಮ್ಮ ಹತ್ತಿರ ಕರೆದುಕೊಳ್ಳುವುದು' ಪ್ರಮುಖವಾದವು.

> "ಎತ್ತು ತಿರುವಲ್ಲಿಬೇಕಯ್ಯ ಹಿಂದಕ್ಕೆ ಹೊಳ್ಳಲಿಬೇಕಯ್ಯ
> ಬಾರೋ ಬಾರೋ ಏಯಪ್ಪ ನನ್ನ ಎತ್ತುನಲ್ಲೇಳ
> ನಿನ್ನ ಎತ್ತು ನಲ್ಲಪ್ಪ ನೀನೆ ತಿರುವಲಿಬೇಕಯ್ಯ"[೧೦೯]

> "ಬಂದ ಮಳೆಯ ಮಾಳಪ್ಪ ಹಿಂದಕ ಹೋಗುತಾವೇನ
> ಬಾರೋ ಬಾರೋ ಮಾಳಪ್ಪ ನೀನೆ ಮಳೆಯ ಕರಿಯಪ್ಪ
> ನೀನೆ ಕರಿಯಲಿಬೇಕಪ್ಪ ಮಳಿಯ ತರುವಲಿ ಬೇಕಯ್ಯ"[೧೧೦]

ಈ ಎರಡು ಪವಾಡಗಳಲ್ಲಿ ಅಮೋಘಸಿದ್ಧ ಸೋಲುತ್ತಾನೆ. ಶಿವ ಹೇಳಿದಂತೆ ನನಗಿಂತ ಶ್ರೇಷ್ಠ ಪವಾಡ ಪುರುಷ, ಶೈವ ಆರಾಧಕ ನೀನೇ ಎಂದು ಅಮೋಘಸಿದ್ಧ ಹೇಳುತ್ತಾನೆ. ಸೋತ ನಂತರ ಐದು ಬೀಜದ ಕುರಿಗಳನ್ನು ಕೊಡಬೇಕೆಂದು ಮಾಳಿಂಗರಾಯನಿಗೆ ಮನವಿ ಸಲ್ಲಿಸುತ್ತಾನೆ. ಇದಕ್ಕೆ ಮಾಳಿಂಗರಾಯ ಒಪ್ಪಿಕೊಳ್ಳುತ್ತಾನೆ.

> "ನನಗ ನೋಡೋ ಮಾಳಪ್ಪ ಐದ ಮರಿಯ ಅಂದಾನ
> ಐದ ಕುರಿಯನಲ್ಲಪ್ಪ ಬೀಜದ ಮರಿಯ ಕೊಡಬೇಕ

ಪುನ್ನುಳ್ಳಗೌಡ ಪೂಜಾರೆ ಒಳ್ಳೆದ್ದು ಒಳ್ಳೇದಂದಾನೆ
ಐದು ಕುರಿಗೋಳಲ್ಲಪ್ಪ ಬೀಜದ ಮರಿಗೋಳು ಕೊಟ್ಟೇನ
ನಾನು ಐದ ಕೊಡತೀನಿ ಅಣ್ಣನ ಬಲ್ಲಾಕ ಹೋಗಯ್ಯ
ಏಣಗಿ ಊರ ಒಳಗೇನೆ ಅಣ್ಣ ಜಕ್ಕರಾಯ ಇರತಾನ
ಅಣ್ಣ ಜಕ್ಕರಾಯಿನಲ್ಲೇಳ ಅವನು ಐದ ಕೊಟ್ಟಾರ
ಅವನು ಐದು ಕೊಟ್ಟಾರೆ ಹತ್ತನಾದವಂದಾನ
ಹತ್ತು ಮರಿಗೊಳಾದರ ಯಾಳ್ಯಾಗೋಳು ಬಹಳಾದವ
ಬದುಕು ಮಾಡಿದಿ ಅಂದಾನೆ ಬಾಳುವೆ ಮಾಡಿದಿ ಅಂದಾನ್"[೧೧೧]

ಮಾಳಪ್ಪ ಮಾತಿನಂತೆ ಅಮೋಘಸಿದ್ಧ ಜಕ್ಕಣ್ಣನ ಹತ್ತಿರ ಹೋಗುತ್ತಾನೆ. ಅಲ್ಲಿ ಜಕ್ಕಣ್ಣ ಐದು ಕುರಿಗಳನ್ನು ಕೊಡುತ್ತಾನೆ. ಕುರಿಗಳನ್ನು ಹೊಡೆದುಕೊಂಡು ಬರಬೇಕು ಅನ್ನುವ ಸಮಯಕ್ಕೆ ಕತ್ತಲಾಗುತ್ತದೆ. ಆ ರಾತ್ರಿ ಅಲ್ಲೇ ಉಳಿಯುತ್ತಾನೆ. ಕುರಿಗಳು ರಾತ್ರೋ ರಾತ್ರಿ ಹಟ್ಟಿಯಲ್ಲಿ ಸತ್ತು ಹೋಗುತ್ತವೆ. ಬೆಳಗ್ಗೆ ಎದ್ದು ನೋಡಿದ ಅಮೋಘಸಿದ್ಧ ಕುರಿಗಳನ್ನು ಎಬ್ಬಿಸುವಂತೆ ಜಕ್ಕಪ್ಪನಲ್ಲಿ ಮನವಿ ಮಾಡುತ್ತಾನೆ. ಜಕ್ಕಪ್ಪ ಎಬ್ಬಿಸಿ ಕೊಡುವ ಪ್ರಯತ್ನ ಮಾಡುವುದಿಲ್ಲ. ಅಮೋಘಸಿದ್ಧನು ಸಹ ಸ್ವ-ಆಸಕ್ತಿ ತೋರುವುದಿಲ್ಲ. ಬಿಟ್ಟು ತನ್ನ ಮನೆಗೆ ತಾನು ಬರುತ್ತಾನೆ.

ಶೈವ ಆರಾಧನೆಯ ಪರೀಕ್ಷೆಯೊಂದಿಗೆ ಆರಂಭವಾದ ಇವರ ಸಂಘರ್ಷ ಬದುಕನ್ನು ಕಟ್ಟಿಕೊಳ್ಳುವ ಹಂಬಲದೊಂದಿಗೆ ಮುಕ್ತಾಯವಾಗುತ್ತದೆ. ಅಮೋಘಸಿದ್ಧ ಕುರಿಗಳನ್ನು ಬೇಡುವುದು ವಿಶೇಷ. ಇದು ಕುರಿಗಾರಿಕೆಯ ವೃತ್ತಿಯತ್ತ ತುಡಿಯುವ ಹಂಬಲವಾಗಿ ಕಾಣಿಸುತ್ತದೆ. ಈ ಹಂಬಲಕ್ಕೆ ಜಕ್ಕಪ್ಪ ಸಹಕಾರ ನೀಡದಿರುವುದರಂದ ಇಲ್ಲಿ ಕಾವ್ಯ ತಿರುವು ಪಡೆಯುತ್ತದೆ. ಅಮೋಘಸಿದ್ಧನ ಆಸೆ ಮತ್ತು ವೃತ್ತಿಜೀವನ ಬದಲಾಗುತ್ತದೆ. ಜೊತೆಗೆ ಅಮೋಘಸಿದ್ಧ ಸ್ವ-ಆಸಕ್ತಿ ತೋರದಿರುವುದು ಕುತೂಹಲ. ಕುರಿಗಾರಿಕೆಯಲ್ಲಿ ಆಸಕ್ತಿ ಇಲ್ಲದಿರುವುದು ಅಥವಾ ಮಾಳಪ್ಪ ಮತ್ತು ಜಕ್ಕಪ್ಪನಲ್ಲಿ ಅಂಗಲಾಚದಿರುವ ಮನಸ್ಥಿತಿಯನ್ನು ತೋರಿಸುತ್ತದೆ. ಒಟ್ಟಾರೆಯಾಗಿ ಇವರಿಬ್ಬರ ಮುಖಾಮುಖಿ ಶೈವ ಆರಾಧಕರ ಆಂತರಿಕ ಧರ್ಮ ಸಂಘರ್ಷವಾಗಿ, ಪಶುಪಾಲಕರ ವೃತ್ತಿ ಸಂಘರ್ಷವಾಗಿ ಕಾಣಿಸಿಕೊಳುತ್ತದೆ.

೪.೪.೫. ಶೈವಸಿದ್ಧ ಸಾಂಸ್ಕೃತಿಕ ವೀರರ ನಾಯಕ

ಅಮೋಘಸಿದ್ಧನ ವಂಶ ದೊಡ್ಡದು. 'ಕೋಳಿ ಕೂಗಿದಲ್ಲೆಲ್ಲ ಅಮೋಘಸಿದ್ಧನ ಗುಡಿಗಳಿವೆ' ಎಂಬ ಗಾದೆ ಜನಪದಿಗರಲ್ಲಿದೆ. ಇದು ಅಮೋಘಸಿದ್ಧನ ಜನಪ್ರಿಯತೆಯನ್ನು ಆರಾಧಿಸುವ ಜನರ ವೈಶಿಷ್ಟತೆಯನ್ನು ತಿಳಿಸುತ್ತದೆ. ಈತನ ವಂಶ ನೂರ ಒಂದರಿಂದ ಕೋಟಿಯಾಗಿ ಬೆಳೆದ ಅನ್ನುವ ಕಥನಗಳು ಇವೆ. ಇಲ್ಲಿ 'ವಂಶ' ಅನ್ನುವ ಪದ ಭಿನ್ನವಾಗಿ ಬಳಕೆಯಾಗಿದೆ. ಕೇವಲ ಕುಟುಂಬದ ಸದಸ್ಯರು ಅನ್ನುವುದಕ್ಕಿಂತ ವಿಸ್ತಾರವಾದದ್ದು. ಇದರಲ್ಲಿ ಶಿಸುಮಕ್ಕಳು, ಒಕ್ಕಲುಮಕ್ಕಳು, ಸಾಕುಮಕ್ಕಳು, ಧರ್ಮದ ಮಕ್ಕಳು, ಪುಣ್ಯದ ಮಕ್ಕಳು, ವಂಶಸ್ಥರು, ಸೇವಕವರ್ಗ ಮುಂತಾದವರು ಸೇರಿಕೊಂಡಿದ್ದಾರೆ. ಇವತ್ತು ಆರಂಭಿಕ ಕಾಲಘಟ್ಟದ ನೂರ ಒಂದು ವಂಶಸ್ಥರ ದೇವಾಲಯಗಳು ಕರ್ನಾಟಕ, ಆಂಧ್ರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿವೆ ಎಂದು ಡೊಳ್ಳಿನ ಹಾಡುಗಳ ಕಲಾವಿದರು ಹೇಳುತ್ತಾರೆ. ಕ್ಷೇತ್ರ

ಕಾರ್ಯದ ಸಂದರ್ಭದಲ್ಲಿ ಕರ್ನಾಟಕದಲ್ಲೂ ೨೫ಕ್ಕೂ ಹೆಚ್ಚು ದೈವಗಳ ಸ್ಥಳಗಳು ಸಿಕ್ಕಿವೆ. ಇದರಲ್ಲಿ ಕೆಲವು ಅಮೋಘಸಿದ್ಧನ ವಂಶಸ್ಥರ ಸಮಾಧಿಗಳು ಸೇರಿವೆ. ಈ ಎಲ್ಲಾ ದೈವಗಳಿಗೆ ಅರಕೇರಿ ಮೂಲ ಸ್ಥಳವಾಗಿದೆ. ವಿವಿಧ ಆಚರಣೆಗಳ ಸಂದರ್ಭದಲ್ಲಿ ಆ ಎಲ್ಲಾ ದೈವಗಳ ಪಲ್ಲಕ್ಕಿಗಳು ಮುಮ್ಮಟ್ಟಿಗುಡ್ಡಕ್ಕೆ ಬಂದು ಹೋಗುತ್ತವೆ. 'ಛಟ್ಟಿ ಅಮವಾಸ್ಯೆ'ಯ ದಿನ ನಡೆಯುವ 'ಪಲ್ಲಕ್ಕಿ ಉತ್ಸವ'ಕ್ಕೆ ತಪ್ಪದೇ ಬರುತ್ತವೆ. ಪಲ್ಲಕ್ಕಿಗಳು ಒಂದು ಕಡೆ ಸೇರುವುದಕ್ಕೆ 'ಭೇಟಿಯಾಗುವ ಆಚರಣೆ' ಎಂದು ಹೆಸರು. ಅರಕೇರಿಗೆ ಸೇರುವ ಮೂಲ ಉದ್ದೇಶ ಅಮೋಘಸಿದ್ಧನನ್ನು ಭೇಟಿ ಆಗುವುದು, ಆರ್ಶೀವಾದ ಪಡೆದುಕೊಳ್ಳುವುದು.

ಭೇಟಿಯಾಗುವ ಆಚರಣೆಗೆ ಸುಮಾರು ೧೫೦ಕ್ಕೂ ಹೆಚ್ಚು ಪಲ್ಲಕ್ಕಿಗಳು ಅರಕೇರಿಯಲ್ಲಿ ಸೇರುತ್ತವೆ. ಹಿಂದೆ ೨೫೦ಕ್ಕೂ ಹೆಚ್ಚು ದೈವಗಳ ಪಲ್ಲಕ್ಕಿಗಳು ಸೇರುತ್ತಿದ್ದವಂತೆ. ಗುಡ್ಡಕ್ಕೆ ಬರುವ ದೈವಗಳಿಗೆ ನಿರ್ದಿಷ್ಟವಾದ ತಾಣಗಳಿವೆ. ಮುಮ್ಮಟ್ಟಿ ಗುಡ್ಡದ ಕೆಳಗಡೆ ಇರುವ ಬಯಲು ಜಾಗ ಈ ಆಚರಣೆಗೆ ವೇದಿಕೆ ಆಗುತ್ತದೆ. ನೆರೆದ ಪಲ್ಲಕ್ಕಿಗಳು ಅಮೋಘಸಿದ್ಧನ ಆರ್ಶೀವಾದ ತಗೆದುಕೊಳ್ಳುತ್ತವೆ. ಕೆಲವು ಪಲ್ಲಕ್ಕಿಗಳು ಆರ್ಶೀವಾದ ಪಡೆದುಕೊಳ್ಳುತ್ತಿರುವಾಗ ಉಳಿದ ಪಲ್ಲಕ್ಕಿಗಳು ನರ್ತನ ಮಾಡುತ್ತ ಒಂದಕ್ಕೊಂದು ಅಪ್ಪಿಕೊಳ್ಳುತ್ತಿರುತ್ತವೆ. ಇದರಲ್ಲಿ ಹೆಣ್ಣು ದೈವ, ಗಂಡು ದೈವ ಲಿಂಗದ ದೈವ, ಲಿಂಗೇತರ ದೈವ ಎನ್ನುವ ಬೇದಭಾವಗಳಿಲ್ಲದೆ ಸಮ್ಮಿಲನವಾಗುತ್ತವೆ. ಅಂದರೆ ಪಲ್ಲಕ್ಕಿ ಹೊತ್ತವರು ಹಲಗೆಯ ನಾದಕ್ಕೆ ಕುಣಿಯುತ್ತಾ, ಕುಣಿಯುತ್ತಾ ಎಂಟು, ಹತ್ತು-ಹನ್ನೆರಡು ಪಲ್ಲಕ್ಕಿಗಳನ್ನು ಒಟ್ಟಿಗೆ ಸೇರಿಸುತ್ತಾರೆ. ಇದು ಒಬ್ಬರಿಗೊಬ್ಬರು, ಗುಂಪಿನವರು ಸೇರಿ ಅಪ್ಪಿಕೊಂಡಂತೆ ಕಾಣಿಸುತ್ತದೆ. ಸುಮಾರು ಮೂರು ತಾಸುಗಳಿಗೂ ಹೆಚ್ಚು ಸಮಯ ನಡೆಯುವ ಈ ಆಚರಣೆಯನ್ನು ನೋಡುವುದಕ್ಕೆ ಲಕ್ಷಾಂತರ ಜನರು ಸೇರಿರುತ್ತಾರೆ.

"ಛಟ್ಟಿ ಜಾತ್ರೆಗೆ ನಾವು ಹೋಗುವುದು ಗಟ್ಟಿ
ಹುಳ್ಳಿನುಚ್ಚು ಚಜ್ಜಿರೊಟ್ಟಿ ಶೇಂಗಾ ಹಿಂಡಿ ಕುಟ್ಟಿ
ಮೂರು ದಿವಸ ಮುತ್ತ್ಯಾನ ಜಾತ್ರೆಗೆ ಜನ ಬರ್‍ತಾರ
ನೋಡಾ ಕೋಟ್ಯಾನು ಕೋಟಿ"[೧೧೩]

ಜಾತ್ರೆಗೆ ಬಂದ ಆವರಣದ ಸುತ್ತ ಕೋಟೆಯಂತೆ ನಿಂತು ಉಘೇ ಉಘೇ ಎಂದು ಘೋಷಣೆ ಕೂಗುತ್ತಾ ಭಂಡಾರ, ಉತ್ತುತ್ತಿ, ಕುರಿಹುಣ್ಣೆ ಎಸೆಯುತ್ತಾರೆ. ಕ್ಷಣಾರ್ಧದಲ್ಲಿ ಆವರಣವೆಲ್ಲ ಭಂಡಾರಮಯವಾಗಿ ಬಿಡುತ್ತದೆ. ಸುಮಾರು ನಾಲ್ಕು ಟನ್ ಭಂಡಾರ ಖರ್ಚಾಗುತ್ತದೆ ಎಂದು ಸ್ಥಳೀಯರು ಮತ್ತು ಭಂಡಾರ ವ್ಯಾಪಾರಿಗಳು ಹೇಳುತ್ತಾರೆ. ಸೇರಿದ ಜನರೆಲ್ಲರು ಭಂಡಾರಮಯವಾಗಿ ರುತ್ತಾರೆ. ಉಗ್ಗಿದ ಭಂಡಾರದ ಕಣಗಳು ಆಕಾಶದಲ್ಲಿ ಹಾರಾಡುತ್ತಿರುತ್ತವೆ. ಇದನ್ನು ಕಂಡ ಭಕ್ತರು ನಾವು ಹಾರಿಸಿದ ಭಂಡಾರ ಶಿವನ ಹತ್ತಿರ ಹೋಗುತ್ತದೆ ಎಂದು ಭಾವ ತನ್ಮಯರಾಗಿ ಕೈಮುಗಿಯುತ್ತಾರೆ.

ಪಲ್ಲಕ್ಕಿಗಳು ಸೇರುವ ಈ ಆಚರಣೆಗೆ ಸಾಂಸ್ಕೃತಿಕ ಹಿನ್ನೆಲೆಯಿದೆ. ಶೈವ ಆರಾಧನೆಯ ವಿಸ್ತರಣೆಯ ಸ್ವರೂಪವಿದೆ. ಅಂದರೆ ಅಮೋಘಸಿದ್ಧ ಶೈವ ಆರಾಧನೆಯ ಪ್ರಚಾರಕ್ಕಾಗಿ, ಪ್ರತಿಪಾದನೆಗಾಗಿ

ತನ್ನ ವಂಶಸ್ಥರನ್ನು ವಿವಿಧ ಪ್ರದೇಶಗಳಿಗೆ ಕಳುಹಿಸಿಕೊಡುತ್ತಿದ್ದ. ಅಮೋಘಸಿದ್ಧನ ವಂಶ ಹೇಗೆ ಬೆಳವಣಿಗೆಯಾಗಿದೆಯೋ ಆಗೆ ಮಠಗಳು ವಿಸ್ತರಣೆ ಆಗಿರುವ ಚಿತ್ರಣಗಳು ಸಿಗುತ್ತವೆ. ಬೇರೆ ಬೇರೆ ಸ್ಥಳಗಳಿಗೆ ಶಿಷ್ಯಂದಿರನ್ನು ಕಳುಹಿಸಿಕೊಡುವಾಗ ಛಟ್ಟಿ ಅಮವಾಸ್ಯೆಯ ದಿವಸ ತನ್ನನ್ನು ಭೇಟಿ ಆಗುವುದಕ್ಕೆ ಬನ್ನಿರೆಂದು ಹೇಳಿ ಕಳುಹಿಸುತ್ತಿದ್ದ.

"ಮಾದಣ್ಣ ಹೊಂಟಾನ ಮೇಲನಾಡಿಗಿ ತಮ್ಮಂದಿರನ್ನು ನೋಡಲಿಲ್ಲ ತಿರುಗಿ
ಛಟ್ಟಿ ಜಾತ್ರೆಗೆ ಬರುತೀನಂದೊ ತಂದಿ ಬೆಟ್ಟಗಿ ಸಿದ್ಧ ತಂದಿ ಬೆಟ್ಟಗಿ"[೧೧೩]

ಅಮೋಘಸಿದ್ಧ ಛಟ್ಟಿ ಅಮವಾಸ್ಯೆಯ ದಿನವನ್ನು ಶೈವರಾಧನೆಯ ಧಾರ್ಮಿಕ ಚರ್ಚೆಗೆ ವೇದಿಕೆಯನ್ನು ಮಾಡಿಕೊಂಡಿರಬೇಕು. ಆ ಕಾರಣಕ್ಕೆ ತನ್ನ 'ವಂಶಸ್ಥ'ರನ್ನು ಅವತ್ತಿನ ದಿವಸ ಕರೆಯಿಸುತ್ತಿದ್ದಂತೆ ಕಾಣಿಸುತ್ತದೆ. ಬೇರೆ ಬೇರೆ ಪ್ರದೇಶದ ಸಿದ್ಧರು ಬಹಳ ದಿನಕ್ಕೆ ಒಂದೆಡೆ ಸೇರಿದ ಖುಷಿಗಾಗಿ ಕುಣಿದು ಕುಪ್ಪಳಿಸಿ ಸಂತೋಷದಿಂದ ಅಪ್ಪಿಕೊಂಡು ನಲಿದಾಡಿರಬೇಕು. ತಾವು ಆರಾಧಿಸುತ್ತಿದ್ದ ಭಂಡಾರವನ್ನು ಮೈಮೇಲೆ ಎರಚಿಕೊಂಡು ಸಂತೋಷದಿಂದ ಕುಣಿದಾಡಿರಬೇಕು. ಆ ನೆನಪಿಗಾಗಿ ಇವತ್ತು ಪಲ್ಲಕ್ಕಿಗಳು ಅಪ್ಪಿಕೊಳ್ಳುವ ಮತ್ತು ಭಂಡಾರ ಎರಚುವ ಸಂಪ್ರದಾಯ ಬೆಳೆದಿರಬೇಕು. ಇಂತಹ ಪಾರಂಪರಿಕ ಅಸ್ಮಿತೆಯನ್ನು ಹೊಂದಿರುವ ಈ ಆಚರಣೆ ಗಡಿನಾಡಗಳ ಸೌಹಾರ್ದತೆಯನ್ನು ಬೆಳೆಸುತ್ತಿದೆ. ಆಂಧ್ರದ ದೈವ, ಕರ್ನಾಟಕದ ದೈವ, ಮಹಾರಾಷ್ಟ್ರದ ದೈವ ಎನ್ನುವ ಪ್ರಾದೇಶಿಕ, ಭಾಷಿಕ ಭೇದವನ್ನು ಮರೆತು ಒಂದು ದೈವ ಮತ್ತೊಂದು ದೈವವನ್ನು ಅಪ್ಪಿಕೊಳ್ಳುತ್ತವೆ. ಸಂಕರಗೊಳ್ಳುತ್ತವೆ. ಈ ದೈವಗಳೊಂದಿಗೆ ಜನರು ಸಂಕರಶೀಲವಾಗುತ್ತಾರೆ. ಇವತ್ತು ಪ್ರಾದೇಶಿಕ ಬೇದಗಳಿಗಾಗಿ ಕಚ್ಚಾಡುವ ಜನರಿಗೆ ಸಾಮರಸ್ಯದ ಬದುಕಿ ಎಂದು ಸುದ್ದಿ ರವಾನಿಸುತ್ತವೆ. ಇಂತಹ ಸೌಹಾರ್ದದ ಆಚರಣೆಗಳು ಹಲವು ಕಡೆ ಈತನ ಮತ್ತು ಈತನ ವಂಶಸ್ಥರ ಹೆಸರಿನಲ್ಲಿ ಮೂರು ರಾಜ್ಯಗಳ ಅನೇಕ ಸ್ಥಳಗಳಲ್ಲಿ ನಡೆಯುತ್ತಿವೆ. ಆ ಮೂಲಕ ಅಮೋಘಸಿದ್ಧ ಮತ್ತೆ ಮತ್ತೆ ಜೀವಂತಗೊಳ್ಳುತ್ತಿರುತ್ತಾನೆ.

೪.೪.೬. ಅಮೋಘಸಿದ್ಧನ ತಾತ್ವಿಕತೆ

ಕರ್ನಾಟಕ ಹಲವು ಸ್ಥಳಗಳಲ್ಲಿ ಅಮೋಘಸಿದ್ಧನ ದೇವಾಲಯಗಳಿವೆ. ಆ ಸ್ಥಳಗಳಲ್ಲಿ ವಿಭಿನ್ನ ಆಚರಣೆಗಳು ನಡೆಯುತ್ತವೆ. ಈ ಆಚರಣೆಗಳ ಲೋಕ ವೈವಿಧ್ಯ ಆಶ್ಚರ್ಯಕರವಾಗಿದೆ. ಅಮೋಘಸಿದ್ಧನ ಪಲ್ಲಕ್ಕಿ 'ಹೊಳೆಪೂಜೆ', 'ಶಿಶುಮಕ್ಕಳ ಬೇಟಿ' ಮುಂತಾದ ಆಚರಣೆಗಳಿಗೆ ತನ್ನ ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುವ ಪದ್ಧತಿ ಇದೆ. ಹೋಗುವಾಗ ದಾರಿಯುದ್ದಕ್ಕೂ ಹಲವು ದೈವಗಳು ಭೇಟಿ ಆಗುತ್ತಿರುತ್ತವೆ. ಗ್ರಾಮದಲ್ಲೆಲ್ಲ ಜಾತ್ರೆ ನಡೆಯುತ್ತಿರುವಂತೆ ಕಾಣಿಸುತ್ತಿರುತ್ತದೆ. ಅದು ಕೇವಲ ಭಕ್ತರ ಜಾತ್ರೆಯಲ್ಲ. ಸಿದ್ಧ ದೈವಗಳ ಜಾತ್ರೆ. ಸುತ್ತಮುತ್ತಲಿನ ಗ್ರಾಮದ ಪಲ್ಲಕ್ಕಿಗಳು ಬಂದು ಸೇರಿಬಿಡುತ್ತವೆ.

"ಯೋಗಿ ಇಳಿದಲ್ಲಿ ಏಳೂರು ಜಾತರಿ
ಬಾಳೆಯ ಕಂಬ ಮರಮುನಿಯ ಅಮೋಘಸಿದ್ಧ
ಯೋಗಿ ಇಳಿದಲ್ಲಿ ಕೈಲಾಸ"[೧೧೪]

ಗುರುವನ್ನು ಕಾಣುವುದಕ್ಕೆ ಈ ಪಲ್ಲಕ್ಕಿಗಳು ಬಂದಿವೆ ಅನ್ನುವುದು ಜನರ ಹೇಳಿಕೆ. ಹಿಂದೆ ಹೇಳಿದಂತೆ ಈತನ ಶಿಷ್ಯ ಪರಂಪರೆ ದೊಡ್ಡದು. ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳ ಗಡಿನಾಡಿನಲ್ಲಿ ಹೆಚ್ಚು ಮಠಗಳಿವೆ. ಛಟ್ಟಿ ಅಮವಾಸ್ಯೆಯ ದಿವಸ ಅರಕೇರಿಯಲ್ಲಿ ನಡೆಯುವ ಪಲ್ಲಕ್ಕಿಗಳ ಸಂಖ್ಯೆಯಂತೂ ಈ ದೈವದ ಜನಪ್ರಿಯತೆಯನ್ನು ಬಿಂಬಿಸುತ್ತದೆ. 'ಸಿದ್ಧರಸಿದ್ಧ'ನೆನ್ನುವ ಜನಪದಿಗರ ಬಿರುದು ಈತನಿಗೆ ಮಾತ್ರ ಸೂಕ್ತವಾದುದೆಂದು ಅನಿಸುತ್ತದೆ.

ಅಮೋಘಸಿದ್ಧನ ಪಲ್ಲಕ್ಕಿ ಉತ್ಸವದಲ್ಲಿ ಒಂದು ತಾತ್ವಿಕತೆ ಇದೆ. ತತ್ತ್ವ ಪ್ರತಿಪಾದನೆ ಇದೆ. ಇಲ್ಲಿ ಪ್ರತಿಪಾದನೆ ಆಗುವ ತತ್ತ್ವ 'ಪ್ರತಿ ಜಗತ್ತ'ನ್ನು ನಿರ್ಮಾಣ ಮಾಡುವುದಲ್ಲ. 'ಪೂರಕವಾದ ಜಗತ್ತ'ನ್ನು ಪ್ರತಿಪಾದಿಸುವುದೂ ಅಲ್ಲ. 'ಪರಿಷ್ಕೃತ ಜಗತ್ತ'ನ್ನು ನಿರ್ಮಾಣ ಮಾಡುವುದು. ಅಮೋಘಸಿದ್ಧ ತಾನು ಮತ್ತು ತನ್ನ ಜನರು ಬದುಕುತ್ತಿದ್ದ ಸಾಂಸ್ಕೃತಿಕ ಅಸ್ಮಿತೆಯನ್ನು ತನ್ನ ಕಾಲಕ್ಕೆ ಹೊಂದಿಕೆ ಆಗುವಂತೆ ಪರಿಷ್ಕೃತಗೊಳಿಸಿಕೊಂಡಿದ್ದಾನೆ. 'ಅಮೋಘಸಿದ್ಧ ಒಡೆಯರು' ಅಥವಾ 'ಗುರುವಿನ್'ನವರು ಜಗತ್ತಿನ ಪರಿಷ್ಕೃತ ಸಂಸ್ಕೃತಿಯ ಒಂದು ಅಂಶವಾಗಿ, ನಾಯಕರಾಗಿ ಕಾಣಿಸುತ್ತಾರೆ. ಇವರನ್ನು ಸ್ಥಾಪಿಸಿರುವ ಉದ್ದೇಶ ರೇವಣಸಿದ್ಧ ಸ್ಥಾಪಿಸಿದ ಒಡೆಯರತ್ತ ಕುರುಬರು ಆಕರ್ಷಣೆಯಾಗುವ ಅಥವಾ ಪರಿವರ್ತನೆಯಾಗುವ ವಿಧಾನವನ್ನು ತಡೆಯಬೇಕಾಗಿತ್ತು. ಆ ಕಾರಣಕ್ಕಾಗಿ ತನ್ನ ಪಾರಂಪರಿಕ ಸಂಸ್ಕೃತಿಯನ್ನು ತನ್ನ ಕಾಲಕ್ಕೆ ತಕ್ಕಂತೆ ಪರಿಷ್ಕೃತಗೊಳಿಸಿಕೊಂಡ ಆ ಕಾರಣಕ್ಕೆ ಈತನಿಗೆ ಪಾರಂಪರಿಕ ಸಂಸ್ಕೃತಿಯೊಂದಿಗೆ ತನ್ನ ಸಂಬಂಧ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಪಲ್ಲಕ್ಕಿ ಉತ್ಸವದ ಸಂದರ್ಭಗಳಲ್ಲಿ ಭಂಡಾರ, ಕುರಿ ಉಣ್ಣೆ, ಉತ್ತುತ್ತಿ ಹಾರಿಸುವುದು ಮತ್ತು ಪಲ್ಲಕ್ಕಿಗಳನ್ನು ಕೂಡಿಸುವುದು ಹಾಲುಮತ ಸಂಸ್ಕೃತಿಯ ಪಾರಂಪರಿಕ ಅಸ್ಮಿತೆ. ಈ ವಿಧಾನ ಬೀರಪ್ಪನಲ್ಲೂ ಇದೆ. ಮಾಳಿಂಗರಾಯನಲ್ಲೂ ಇದೆ. ಮಾಯವ್ವನಲ್ಲೂ ಇದೆ. ಕರ್ನಾಟಕ, ಮಹಾರಾಷ್ಟ್ರ ಗಡಿನಾಡ ಗ್ರಾಮಗಳಲ್ಲಿ ಹೆಚ್ಚು ಜನಪ್ರಿಯ. ಚಿಕ್ಕಮಂಗಳೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ನಡೆಯುವ 'ತೋಪುಜಾತ್ರೆ' ಮತ್ತು 'ಕಂತೆಸೇವೆ' ಆಚರಣೆಗಳಲ್ಲಿ ಕಡ್ಡಾಯವೆನ್ನುವಂತೆ ಈ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಜಾತ್ರೆಗಳಿಗೆ ಮುಖ್ಯಸ್ಥನಂತೆ ಕಾಣುವ ರೇವಣಸಿದ್ಧ (ರೇವಣಸಿದ್ಧನ ಪಲ್ಲಕ್ಕಿ) ಉತ್ಸವದಲ್ಲಿ ಭಾಗಿಯಾಗುವುದೇ ಇಲ್ಲ. ಈ ದೈವಗಳ ಸಂತೋಷ ಮತ್ತು ನಲಿದಾಟದಲ್ಲಿ ಸೇರುವುದಿಲ್ಲ. ನಿಮ್ಮ ಸಂತೋಷ ನಲಿದಾಟ ನನಗೆ ಸಂಬಂಧವಿಲ್ಲವೆನ್ನುವಂತೆ ತನ್ನ ಪಾಡಿಗೆ ತಾನು ನೆರೆದ ಗ್ರಾಮದೈವಗಳೊಂದಿಗೆ ಬೀರಪ್ಪನ ಗುಡಿಯಲ್ಲಿ ಕುಳಿತಿರುತ್ತಾನೆ. ಆ ದೈವವೇನಿದ್ದರೂ ಅಲ್ಲಿ ಕೇವಲ ಗುರು. ಗುರುವಾಗಿ ತನ್ನ ಪ್ರತಿಷ್ಠೆಯನ್ನು ಕಾಪಾಡಿಕೊಂಡಿರುತ್ತಾನೆ. ಹಾಗಾಗಿ ಆತನ ಸಂಸ್ಕೃತಿ, ಗುರುಪರಂಪರೆ, ಆತ ಪ್ರತಿ ಜಗತ್ತಾಗಿ, ಪ್ರತಿ ಜಗತ್ತಿನ ನಿರ್ಮಾಣಕಾರನಾಗಿ ಕಾಣಿಸುತ್ತಾನೆ. ಆದರೆ ಅಮೋಘಸಿದ್ಧನ ಜಗತ್ತು ರೇವಣಸಿದ್ಧನಂತದ್ದಲ್ಲ. ಇತರ ಭಂಡಾರ ದೈವಗಳ ಸಂತೋಷದೊಂದಿಗೆ ಬೆರೆಯುತ್ತಾನೆ. ನಾಯಕನಾಗಿ ನರ್ತನ ಮಾಡುತ್ತಾನೆ. ಅಂದರೆ ಈ ದೈವಗಳ ಪಲ್ಲಕ್ಕಿ ಇತರ ದೈವಗಳ ಪಲ್ಲಕ್ಕಿಯೊಂದಿಗೆ ಗುರು-ಶಿಷ್ಯ, ಹಿರಿಯ-ಮಕ್ಕಳುಗಳ ದೈವಗಳ ಪಲ್ಲಕ್ಕಿಗಳೆನ್ನುವ ಭೇದವಿಲ್ಲದೆ ಭಾಗಿಯಾಗುತ್ತದೆ. ಈ ಇದು ತುಂಬಾ ಮಹತ್ವದ್ದು. ತನ್ನ ಸಂಸ್ಕೃತಿಯೊಂದಿಗೆ ಗಾಢವಾದ ಸಂಬಂಧವನ್ನು ಇಟ್ಟುಕೊಂಡಿದ್ದ ಅನ್ನುವುದನ್ನು ಪ್ರತಿಪಾದಿಸುತ್ತದೆ. ಹಾಗಾಗಿ ಅಮೋಘಸಿದ್ಧ ಪರಿಷ್ಕೃತ

ಸಂಸ್ಕೃತಿಯ ನಿರ್ಮಾಣಕಾರನಾಗಿ ಕಾಣಿಸುತ್ತಾನೆ. ಈ ಎರಡು ಒಡೆಯ ವರ್ಗಗಳು ಇಬ್ಬರು ನಾಯಕರ ವೈಯಕ್ತಿಕ ಪ್ರತಿಭೆಯ ಫಲ. ಈ ಎರಡೂ ಧಾರೆಗಳ ನಡುವೆ ಕೆಲವು ಮೂಲಭೂತ ವ್ಯತ್ಯಾಸಗಳಿದ್ದರೂ ಅವೆರಡೂ ಹಾಲುಮತ ಸಂಸ್ಕೃತಿಯಲ್ಲಿ ಪರಸ್ಪರ ಪೂರಕವಾಗಿ ಕೆಲಸ ಮಾಡಿವೆ. ಒಂದಕ್ಕೊಂದು ಸಂಘರ್ಷ ಮಾಡದೆ ತಮ್ಮ ತಮ್ಮ ಕ್ಷೇತ್ರದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿವೆ.

ಅಮೋಘಸಿದ್ಧನ ಸಾಂಸ್ಕೃತಿಕ ಚಹರೆಯ ಮೇಲೆ ಆಗಿರುವ ಪರಿಣಾಮಗಳನ್ನು ಗಮನಿಸಬಹುದು. ಇವತ್ತು ಈ ವ್ಯಕ್ತಿ ಸಮಗ್ರ ಹಾಲುಮತದ ಸಾಂಸ್ಕೃತಿಕ ನಾಯಕನಾಗಿ ಉಳಿದಿಲ್ಲ. ಕೇವಲ ಒಂದು ಕುಲದ ಆರಾಧಕನಾಗಿ ಸೀಮಿತನಾಗುತ್ತಿದ್ದಾನೆ. ಒಡೆಯ ವರ್ಗ ಮತ್ತು ಅಮೋಘಸಿದ್ಧನ ಕುಲದೈವ ವರ್ಗ ಡೊಳ್ಳಿನ ಹಾಡುಗಳಲ್ಲಿ 'ಶೀಲಮತ' ನಾಯಕನೆಂದು ಬಿಂಬಿಸಲಾಗುತ್ತಿದೆ. ಅಮೋಘಸಿದ್ಧ ನಮ್ಮವ ಮಾಳಿಂಗರಾಯ ನಿಮ್ಮವ ಅನ್ನುವ ಶೀರ್ಷಿಕೆ ಕ್ಯಾಸೆಟ್‌ಗಳು ಬಂದಿವೆ. ಇವತ್ತಿನ ಹಾಡುಗಳ ಪ್ರಕಾರ ಅಮೋಘಸಿದ್ಧ ಹಾಲುಮತದ ನಾಯಕನಲ್ಲ, ಕೇವಲ ಶೀಲಮತದ ನಾಯಕ.

"ಹೇ ಹಾಲುಮತ ಶೀಲಮತರ ಅಂತಾರ
ಹಣೆ ಮ್ಯಾಲೆ ಭಂಡಾರ ಬಡುದಾರ
ಜಾತಿ ಭೇದ ಸುಳ್ಳೆ ಮಾಡುತಾರ
ದೇವರ ಮಾನ ಕಳಿತಾರ
ಎಂತವರು ಹುಟ್ಟಿ ಬಂದಾರ"[೧೧೫]

ಶೀಲಮತದ ನಾಯಕನೆನ್ನುವ ತರ್ಕವಿಷ್ಟೆ. ನಿಮ್ಮ ದೈವಕ್ಕಿಂತ ನಮ್ಮ ದೈವ ಶ್ರೇಷ್ಠವಾದದ್ದು ಎಂದು ಉಳಿದ ಹಾಲುಮತ ದೈವಗಳ ಆರಾಧಕರಿಗೆ ರವಾನಿಸುವುದು. ತಾವು ಲಿಂಗಾಯತ ಮತ್ತು ವೈದಿಕ ಸಂಸ್ಕೃತಿಗೆ ಸಮಾನವೆಂದು ಬಿಂಬಿಸುವುದು. ಒಡೆಯ ವರ್ಗ ಕೇವಲ ತಮ್ಮ ಆರಾಧ್ಯ ದೈವವನ್ನು ಮಾತ್ರ ಬಿಂಬಿಸುತ್ತಿಲ್ಲ. ತಮ್ಮನ್ನು ತಾವು 'ಸಂಸ್ಕೃತೀಕರಣ'ಗೊಳಿಸಿಕೊಳ್ಳುತ್ತಿದ್ದಾರೆ. ಈ ದ್ವಿಮುಖ ಪ್ರಕ್ರಿಯೆಯಲ್ಲಿ ಅಮೋಘಸಿದ್ಧ ಸಂಕುಚಿತವಾಗುತ್ತಿದ್ದಾನೆ. ಆಧುನಿಕ ಸಮೂಹ ಮಾಧ್ಯಮಗಳಿಗಾಗಿ ಹಾಡುವ ವಾದ ಮತ್ತು ಪ್ರತಿವಾದಿತನದಲ್ಲಿ ಈ ದ್ವಂದ್ವ ನೆಲಗಟ್ಟು ಮತ್ತಷ್ಟು ಗಟ್ಟಿಯಾಗುತ್ತಿದೆ. ಇದು ಅಮೋಘಸಿದ್ಧನ ಸಾಂಸ್ಕೃತಿಕ ಚಹರೆ ವಿಸ್ಮೃತಿಗೊಳ್ಳುವ ಪ್ರಥಮ ಹಂತವಾಗಿ ಕಾಣಿಸುತ್ತದೆ. ಹಿರಿಯ ಕಲಾವಿದರಲ್ಲಿ ಈ ಸಂಕುಚಿತ ಸಾಂಸ್ಕೃತಿಕ ಚರಿತ್ರೆ 'ಭ್ರಮೆ'ಯನ್ನು ಹೊಡೆದು ಹಾಕುವ ಮತ್ತು ವಾಸ್ತವ ಚರಿತ್ರೆಯನ್ನು ಅನಾವರಣಗೊಳಿಸುವ ಡೊಳ್ಳಿನ ಹಾಡುಗಳಿವೆ. ಅಂತಹ ಹಾಡುಗಳನ್ನು ಕಲಿಯುವುದರತ್ತ ಆಕರ್ಷಿತರಾಗಬೇಕು. ಆಗಾದಾಗ ವಾಸ್ತವ ಚರಿತ್ರೆ ಉಳಿದಿತು ಅನ್ನುವ ಆಶಯ.

೪.೫. ಇಟ್ಟಪ್ಪ

೪.೫.೧. ಪ್ರವೇಶ

ಕರ್ನಾಟಕದ ಸಮುದಾಯಗಳಲ್ಲಿ ಹಾಲುಮತ ಸಮುದಾಯದ ಸಂಸ್ಕೃತಿ ವಿಶಿಷ್ಟವಾದದ್ದು. ಈ ಸಮುದಾಯದ ಸಾಂಸ್ಕೃತಿಕ ಚಹರೆಯಲ್ಲಿ ಶೈವ; ವೀರಶೈವ, ವೈದಿಕ, ವೈಷ್ಣವ, ಜೈನ, ಬೌದ್ಧ ಮತ್ತು ಮುಸ್ಲಿಂ ಧರ್ಮಗಳ ಚಿತ್ರಣಗಳು ಅಡಕವಾಗಿವೆ. ಆಯಾ ಧರ್ಮವನ್ನು ಪ್ರತಿನಿಧಿಸುವ ಕುಲಗಳು

ಹಾಲುಮತ ಸಮುದಾಯದಲ್ಲಿವೆ. ಆ ಕುಲಗಳು ಪ್ರತ್ಯೇಕ ಅಸ್ಮಿತೆಯನ್ನು ಕಟ್ಟಿಕೊಂಡು ಆಯಾ ಧರ್ಮದ ಪ್ರತಿನಿಧಿಗಳಂತೆ ಹಾಲುಮತ ಸಮುದಾಯದಲ್ಲಿ ಉಳಿದುಕೊಂಡು ಬದುಕುತ್ತಿವೆ. ಉದಾಹರಣೆಗೆ 'ಹಂಡೆ ಕುರುಬರು'. ಇವರು ತಾವು ಲಿಂಗಾಯತರೆಂದು ಹೇಳಿಕೊಳ್ಳುತ್ತಾರೆ. ವೀರಶೈವರಂತೆ ಬದುಕುವುದಕ್ಕೆ ಮುಂದಾಗುತ್ತಾರೆ. ನಾವು ವೀರಶೈವರ ಸಮಾನರೆಂದು ಗುರುತಿಸಿಕೊಳ್ಳುವುದಕ್ಕೆ ಹಂಬಲಿಸುತ್ತಾರೆ. ಆದರೆ ಇವರನ್ನು ವೀರಶೈವರು ತಮ್ಮಂತೆ ಸಮಾನರೆಂದು ಗ್ರಹಿಸುವುದಿಲ್ಲ. ಅವರ ಕುಲದೊಳಗೆ ಸೇರಿಸಿಕೊಳ್ಳುವುದಿಲ್ಲ. ಇವರನ್ನು ಹೊರಗಡೆ ಇಡುವ ರಾಜಕಾರಣದ ಸ್ವರೂಪ ಬೇರೆ. ಇಲ್ಲಿ ಅದು ನಮಗೆ ಮುಖ್ಯವಾಗುವುದಿಲ್ಲ. ಬದಲಾಗಿ ಹಂಡೆ ಕುರುಬರು ತಾವು ವೀರಶೈವರೆಂದು, ಲಿಂಗಾಯತರೆಂದು ಗುರುತಿಸಿಕೊಳ್ಳುವ ಧೋರಣೆ ಮುಖ್ಯವಾಗುತ್ತದೆ. ಒಡೆಯರು ಗುರುವಿನ್‌ರವರು ಮತ್ತು ದಾಸ ಕುರುಬರು ಇದಕ್ಕೆ ಹೊರತಾಗಿಲ್ಲ. ಗೊಂಡಕುರುಬ, ಕಾಡುಕುರುಬ, ಜೇನುಕುರುಬ ಮುಂತಾದ ಪಂಗಡಗಳ ಆಯಾಮವೇ ಬೇರೆ. ಕೆಲವು ಸಮುದಾಯಗಳು ತಮ್ಮ ಮೂಲವನ್ನು 'ಕುರುಬ' ಮೂಲದಿಂದಲೇ ಗುರುತಿಸಿಕೊಳ್ಳುತ್ತವೆ. ಉದಾ. ಸೋಲಿಗರು. ನಾವು ಕುರುಬ ಮೂಲದವರೆಂದು ಹೇಳುತ್ತಾರೆ. ಬಿಳಿಗಿರಿರಂಗನ ಕಾವ್ಯದಲ್ಲಿ ಈ ಚಿತ್ರಣವನ್ನು ಕಾಣಬಹುದು. ಅಧ್ಯಯನಕಾರರು ಕಾಡುಗೊಲ್ಲ, ಮ್ಯಾಸಬೇಡ ಸಮುದಾಯಗಳ ಮೂಲವನ್ನು ಹಾಲುಮತ ಸಮುದಾಯದಿಂದಲೆ ಗುರುತಿಸಿದ್ದಾರೆ. ಮ್ಯಾಕ್ಸ್ ಮುಲ್ಲರ್ ಅವರು "ಬ್ರಾಹ್ಮಣರು ಮೂಲತಃ ಕುರುಬರು. ಅವರು ವಿಶೇಷವಾಗಿ ಪಂಜಾಬಿನ ಕುರುಬರು"[೧೧೭] ಎಂದು ಕರಾರುವಕ್ಕಾಗಿ ಹೇಳುತ್ತಾರೆ. ಹೀಗೆ ಹಲವು ಸಮುದಾಯದೊಳಗೆ ಸಾಂಸ್ಕೃತಿಕ ಚರಿತ್ರೆಯನ್ನು, ಸಂಬಂಧವನ್ನು ಬೆಸೆದುಕೊಂಡಿರುವ ಹಾಲುಮತ ಸಮುದಾಯದ ಸಂಸ್ಕೃತಿ ವಿಶಿಷ್ಟ. ಅದಕ್ಕೆ ಸಂಬಂಧಿಸಿ ಎಲ್ಲ ವಿವರಗಳನ್ನು ಒಂದು ಚೌಕಟ್ಟಿಗೆ ತಂದು ವಿವರಿಸಲು ಸಾಧ್ಯವಿಲ್ಲ. ಇದಕ್ಕೆ ಹಾಲುಮತ ಸಾಂಸ್ಕೃತಿಕ ವೀರರ ಸಮಗ್ರ ಅಧ್ಯಯನ ಆಗಬೇಕು. ಜೊತೆಗೆ ಹಾಲುಮತ ಸಮುದಾಯದಲ್ಲಿರುವ ಉಪಪಂಗಡಗಳ ಅಧ್ಯಯನ ಆಗಬೇಕು. ಆಗ ಈ ಧರ್ಮಗಳ ರಾಜಕಾರಣವನ್ನು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ. ಇಟ್ಟಪ್ಪನ ಅಧ್ಯಯನ ಈ ತರಹದ ಅಧ್ಯಯನಕ್ಕೆ ಸಹಾಯಕವಾಗಬಲ್ಲದು.

'ಪಂಜಾಬಿನ ಕುರುಬರೇ ಭಾರತದ ಬ್ರಾಹ್ಮಣರು' ಎನ್ನುವ ಮ್ಯಾಕ್ಸ್ ಮುಲ್ಲರ್ ಅವರ ಹೇಳಿಕೆಯಲ್ಲಿ ಕುರುಬರು ವೈದಿಕ ಸಂಸ್ಕೃತಿಗೆ ಸಂಸ್ಕೃತೀಕರಣಗೊಂಡ ಅಥವಾ ವೈದಿಕೀಕರಣಗೊಂಡ ಚಿತ್ರಣವಿದೆ. ಕುರುಬ ಮತ್ತು ಬ್ರಾಹ್ಮಣ ಸಮುದಾಯಗಳಲ್ಲಿ ಸಂಯುಕ್ತ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಲವು ಅಂಶಗಳು ಅಧ್ಯಯನಕಾರರಲ್ಲಿ ಸಿಗುತ್ತವೆ. ಇವು ಮೂಲಸಂಸ್ಕೃತಿ ಹುಡುಕಾಟಕ್ಕೆ ಪ್ರೇರೇಪಿಸುತ್ತವೆ. ಆರಾಧಿಸುವ ಆರಾಧ್ಯ ದೈವಗಳಲ್ಲಿ ಈ ಸಂಯುಕ್ತತೆ ಇನ್ನೂ ಹೆಚ್ಚು. ಯಲ್ಲಮ್ಮ, ಪದ್ಮಬಾಯಿ, ಇಟ್ಟಪ್ಪ (ವಿಠಲ), ರಂಗನಾಥ, ವೆಂಕಟೇಶ, ಶ್ರೀನಿವಾಸ, ತಿಮ್ಮಪ್ಪ, ಮೈಲಾರಲಿಂಗ ಮುಂತಾದ ದ್ರಾವಿಡ ಪಶುಪಾಲಕ ದೈವಗಳನ್ನು ಆರಾಧಿಸುತ್ತಾರೆ. ಕುಲದೈವಗಳನ್ನಾಗಿ ಮಾಡಿಕೊಂಡಿದ್ದಾರೆ. ಪೂಜೆಯ ಹಕ್ಕನ್ನು ಹೊಂದಿದ್ದಾರೆ. ಈ ದೈವಗಳನ್ನು ಹಾಲುಮತಸ್ಥರು ಶೈವರೆಂದು ಕರೆದರೆ

[illegible]

ಬ್ರಾಹ್ಮಣರು, ವೈಷ್ಣವರೆಂದು ಕರೆಯುತ್ತಾರೆ. ಶೈವ, ವೈಷ್ಣವರೆಂದು ಹೇಳುವ ಸಾಂಸ್ಕೃತಿಕ ವೀರರ ದ್ವಂದ್ವಾತ್ಮಕ ಕಥನಗಳಲ್ಲಿನ ಸಾಂಸ್ಕೃತಿಕ ಚರಿತ್ರೆಯನ್ನು ಬಿಡಿಸಿಕೊಳ್ಳಬೇಕು. ಈ ಕಥನಗಳಲ್ಲಿ ಪ್ರಧಾನವಾಗಿ ಇಟ್ಟಪ್ಪ ಕಾಣಿಸಿಕೊಳ್ಳುತ್ತಾನೆ. ಶೈವ ಧರ್ಮದಿಂದ ವೈಷ್ಣವ ಧರ್ಮಕ್ಕೆ ರೂಪಾಂತರವಾದ ಮುಂಚೂಣಿಯ ನಾಯಕನೀತ. ಹಾಗಾಗಿ ಇಟ್ಟಪ್ಪನ ಸಾಂಸ್ಕತಿಕ ಚರಿತ್ರೆಯನ್ನು ಸೈದ್ಧಾಂಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕು. ಆಗ ಉಳಿದ ಸಾಂಸ್ಕೃತಿಕ ವೀರರ ದ್ವಂದ್ವ ತನ್ನ ಪಾಡಿಗೆ ತಾನು ಬಗೆ ಹರಿದುಕೊಳ್ಳುತ್ತ ಹೋಗುತ್ತದೆ. ಇಟ್ಟಪ್ಪನನ್ನು ಕುರಿತು ಅಧ್ಯಯನ ಮಾಡುವುದೆಂದರೆ ದ್ವಂದ್ವದ ಮೂಲವನ್ನು ಅಧ್ಯಯನ ಮಾಡಿದಂತೆ. ಹಾಗಾಗಿ ಇಟ್ಟಪ್ಪನನ್ನು ಅಧ್ಯಯನ ಮಾಡುವುದರ ಜೊತೆಗೆ ಆ ಸಾಂಸ್ಕೃತಿಕ ಸಂದರ್ಭವನ್ನು ವಿಶ್ಲೇಷಣೆ ಒಳಪಡಿಸಲಾಗಿದೆ. ಆದರೆ ಡೊಳ್ಳಿನ ಹಾಡುಗಳನ್ನು ಪ್ರಧಾನ ಆಕರಗಳೆಂದು ಗ್ರಹಿಸಿ, ಆ ಹಾಡುಗಳೊಂದಿಗೆ ತೌಲನಿಕ ಅಧ್ಯಯನ ಮಾಡಲಾಗಿದೆ.

೪.೫.೨. ಡೊಳ್ಳಿನ ಹಾಡುಗಳಲ್ಲಿ ಇಟ್ಟಪ್ಪನ ಚರಿತ್ರೆ

ಡೊಳ್ಳಿನ ಹಾಡುಗಳಲ್ಲಿ ಇಟ್ಟಪ್ಪನೇ ಪಾಡುರಂಗ ಮತ್ತು ವಿಠೋಬಾನೆಂದು ನಿರೂಪಿತನಾಗಿದ್ದಾನೆ. ಬಿಜಾಪುರ, ಬೆಳಗಾಂ, ಕೊಲ್ಹಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳಲ್ಲಿ ಈ ವ್ಯಕ್ತಿಯನ್ನು ಕುರಿತ ಡೊಳ್ಳಿನ ಹಾಡುಗಳು ಯಥೇಚ್ಛವಾಗಿ ಸಿಗುತ್ತವೆ. ಮೂರು-ನಾಲ್ಕು ದಿನಗಳ ಕಾಲ ಸತತವಾಗಿ ಹಾಡುವ ದೀರ್ಘ ಹಾಡುಗಳು ಇವೆ. ಈ ಹಾಡುಗಳನ್ನು ಸಂಗ್ರಹಿಸಿದರೆ ಬೃಹತ್ ಮಹಾಕಾವ್ಯ ಆಗುತ್ತದೆ. ಇಲ್ಲಿಯವರೆಗೂ ಈ ವ್ಯಕ್ತಿಯನ್ನು ಕುರಿತ ಪ್ರತ್ಯೇಕ ಹಾಡುಗಳನ್ನು ಸಂಗ್ರಹಿಸಿಲ್ಲ. ಈಗ ಜನಪದರಿಂದ ಕಣ್ಮರೆಯಾಗುವ ಲಕ್ಷಣಗಳಿವೆ. ಆ ಕಾರಣಕ್ಕೆ ಆದಷ್ಟು ಬೇಗ ಸಂಗ್ರಹಿಸುವುದು ಉತ್ತಮ. ಈಗಾಗಲೇ ಸಂಗ್ರಹವಾಗಿರುವ ಜನಪದ ಹಾಲುಮತ ಮಹಾಕಾವ್ಯ ಮತ್ತು ಮಾಳಿಂಗರಾಯನ ಕಾವ್ಯದಲ್ಲಿ ಇಟ್ಟಪ್ಪನನ್ನು ಕುರಿತು ಹಾಡುಗಳು ಸಿಗುತ್ತವೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಒಂದು ಸಂದು ಇದೆ. ಈ ಸಂದು ಕಾವ್ಯದ ಹೊರಭಾಗವಾಗಿ ಬಿತ್ತರಗೊಂಡಿದೆ. ಮಾಳಿಂಗರಾಯನ ಕಾವ್ಯದಲ್ಲಿ ಎರಡು ಸಂದುಗಳಿವೆ. ಈ ಸಂದುಗಳು ಕಾವ್ಯದ ಆಂತರಿಕ ಭಾಗವಾಗಿ ಕಾಣಿಸಿಕೊಂಡಿವೆ. ಈ ಎರಡು ಮಹಾಕಾವ್ಯಗಳ ಸಂಯುಕ್ತ ಸಾರಾಂಶ ಹೀಗಿದೆ.

ಪಾಂಡುರಂಗನ ಮೂಲಸ್ಥಳ ಪಂಡರಪುರ. ಪಂಡರಪುರಕ್ಕೆ ಲಿಂಗವನ್ನು ತಗೆದುಕೊಂಡು ಹೋಗುವುದಕ್ಕೆ ಹುಲಜಂತಿ ಗ್ರಾಮದಲ್ಲಿರುವ ಮಾಳಿಂಗರಾಯನ ಹತ್ತಿರ ಬರುತ್ತಾನೆ. ಈತನ ಬರುವಿಕೆಯನ್ನು ಮಾಳಿಂಗರಾಯ ತನ್ನ ದೂರದೃಷ್ಟಿಯ ಜ್ಞಾನದಿಂದ ಅರಿತುಕೊಳ್ಳುತ್ತಾನೆ. ಮಾಳಿಂಗರಾಯನ ಇಂತಹ ಅನೇಕ ಬಗೆಯ ಅದ್ಭುತ ಶಕ್ತಿಗಳನ್ನು ಹೇಳುವ ಪಠ್ಯಗಳು ಡೊಳ್ಳಿನ ಹಾಡುಗಳಿವೆ. ಇದನ್ನು ಅರಿತ ಮಾಳಿಂಗರಾಯ ಲಿಂಗ ಕೊಡಬಾರದೆಂದು ಪಾಂಡುರಂಗ ಬರುವುದಕ್ಕಿಂತ ಮುಂಚೆಯೇ ನಿರ್ಧರಿಸಿಬಿಡುತ್ತಾನೆ. ಬೀರಪ್ಪನ ಹತ್ತಿರ ಹೋಗಿ ಪಾಂಡುರಂಗ ಬರುವ ಉದ್ದೇಶವನ್ನು ಮತ್ತು ತನ್ನ ನಿರ್ಧಾರವನ್ನು ತಿಳಿಸಿ ನೀನೇ ಹಾಳ ಹಳ್ಳದಲ್ಲಿ ಲಿಂಗದ ರೂಪ ತಾಳಬೇಕೆಂದು ಮನವಿ ಸಲ್ಲಿಸಿ ತನ್ನ ಸ್ಥಾನಕ್ಕೆ ತಾನು ಬಂದು ಕುಳಿತುಕೊಳ್ಳುತ್ತಾನೆ. ಈತನ ಒಳರಾಜಕಾರಣವನ್ನು ತಿಳಿಯದ

[illegible]

[illegible]

[illegible]

ಪಾಂಡುರಂಗ ಉತ್ಸಾಹ ಭರಿತನಾಗಿ ಮಾಳಿಂಗರಾಯನ ಹತ್ತಿರ ಬರುತ್ತಾನೆ. ಲಿಂಗವನ್ನು ಕೇಳುತ್ತಾನೆ. ಮಾಳಿಂಗರಾಯ ಪಾಂಡುರಂಗ ಬಂದ ತಕ್ಷಣ ಲಿಂಗವನ್ನು ತೋರಿಸುವುದಿಲ್ಲ. ಅವನನ್ನು ಪ್ರೀತಿಯಿಂದ ತನ್ನ ಹತ್ತಿರ ಬರಮಾಡಿಕೊಳ್ಳುತ್ತಾನೆ. ಮನೆಯೊಳಗೆ ಕರೆದು ಹೊಟ್ಟೆ ತುಂಬಾ ಊಟ ಹಾಕಿ, ಸಂತೃಪ್ತಿಗೊಳಿಸಿ ಲಿಂಗವನ್ನು ತೋರಿಸುತ್ತಾನೆ. ಈ ವಿಧಾನ ಮಾಳಿಂಗರಾಯ ತನ್ನ ರಾಜಕಾರಣವನ್ನು ಬಚ್ಚಿಡುವುದಕ್ಕೆ ಕೈಗೊಂಡ ರಾಜಕಾರಣದಂತೆ ಕಂಡುಬಂದರೂ ಮನೆಗೆ ಬಂದ ವ್ಯಕ್ತಿಯ ಆತಿಥ್ಯ ಮಾಡುತ್ತಿದ್ದ ವಿಧಾನವನ್ನು ಹೇಳುತ್ತದೆ. ಹಾಲಹಳ್ಳಿಯಲ್ಲಿ ಲಿಂಗವನ್ನು ನೋಡಿದ ಪಾಂಡುರಂಗ ತುಂಬಾ ಖುಷಿಯಿಂದ ತೆಗೆದುಕೊಳ್ಳುವುದಕ್ಕೆ ಓಡುತ್ತಾನೆ. ಇಲ್ಲಿ ಬೀರಪ್ಪ ಲಿಂಗದ ರೂಪ ತಾಳಿ ನಿಂತಿರುವ ವೈಧಾನಿಕತೆ ಆಕರ್ಷಣೀಯವಾದದ್ದು. ಆಕಾಶ ಭೂಮಿ ಒಂದೇಯಾಗಿ ಕಾಣುವಂತೆ ಬೃಹತ್ ರೂಪ ತಾಳಿ ನಿಂತಿರುತ್ತಾನೆ. ಈ ಸನ್ನಿವೇಶವನ್ನು ಡೊಳ್ಳಿನ ಹಾಡುಗಳು ಮನಮೋಹಕವಾಗಿ ಕಟ್ಟಿಕೊಡುತ್ತವೆ.

"ಹಾಲಹಳ್ಳದೊಳಗೇನೆ ಪಾಂಡುರಂಗ ಬಂದಾನ
ಪಾಂಡುರಂಗ ಬಂದಾನ ಲಿಂಗ ನೋಡುತಾನೇನ
ಭೂಮಿ ಕೈಲಾಸಕಲ್ಲೇಳ್ ಏಕನಾಗಿ ನಿಂತಾದ
ಪಾಂಡುರಂಗನಂದಾರೆ ಕೈಯಾ ಹಾಕಬೇಕೆಂದಾನ
ಲಿಂಗ ಮುಂದ ನಡದಾವ ಪಾಂಡುರಂಗ ಹಿಂದೇನ
ಎಷ್ಟು ಅವಸರ ನಡದಾನ ಅಷ್ಟು ಅವಸರ ನಡದಾವ"[೧೯೬]

ಬೀರಪ್ಪ ದೈತ್ಯಕಾರ ರೂಪ ತಾಳಿ, ಪಾಂಡುರಂಗನನ್ನು ಭಯ ಬೀಳಿಸುವುದಕ್ಕೆ ಪ್ರಯತ್ನಿಸುತ್ತಾನೆ. ಪಾಂಡುರಂಗನಲ್ಲಿದ್ದ ಲಿಂಗದ ಆಸಕ್ತಿಯನ್ನು ವಿಮುಖಗೊಳಿಸುವ ಉದ್ದೇಶವಿದು. ಆದರೆ ಪಾಂಡುರಂಗ ಹಿಂಜರಿಯುವುದಿಲ್ಲ. ಭಕ್ತಿ, ಗೌರವದಿಂದ ಸಂತೋಷದಿಂದ ಅಪ್ಪಿಕೊಳ್ಳುವುದಕ್ಕೆ ಮುಂದಾಗುತ್ತಾನೆ. ಬೀರಪ್ಪ ಇದಕ್ಕೆ ಅವಕಾಶ ಕೊಡುವುದಿಲ್ಲ. ತನ್ನ ಪೂರ್ವ ನಿರ್ಧಾರದಂತೆ ಕೈಗೆ ಸಿಗದೆ ಹಿಂದೆ ಹಿಂದೆ ಸರಿಯುತ್ತಾ ಹೋಗುತ್ತಾನೆ. ಆದರೂ ಪಾಂಡುರಂಗ ಬಿಡುವುದೇ ಇಲ್ಲ. ಹಿಡಿದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಲೇ ಇರುತ್ತಾನೆ. ಈತನ ಆಸಕ್ತಿ, ಧೈರ್ಯ, ಹಠವನ್ನು ಕಂಡ ಬೀರಪ್ಪನಿಗೆ ಭಯವಾಗಿ ಬಿಡುತ್ತದೆ. ನನ್ನನ್ನು ಎಲ್ಲಿ ಹಿಡಿದುಕೊಂಡು ಬಿಡುತ್ತಾನೋ ಅನ್ನುವ ಆತಂಕ ಕಾಡಿಬಿಡುತ್ತದೆ. ಇಟ್ಟಪ್ಪ ಹಿಡಿದುಕೊಂಡರೆ ಮಾಳಿಂಗರಾಯನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆನ್ನುವ ಭಯದಿಂದ ತಕ್ಷಣ ಮಾಯವಾಗಿ ಬಿಡುತ್ತಾನೆ. ಪಾಂಡುರಂಗನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಬೇಕೋ; ಮಾಳಿಂಗರಾಯನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೋ ಅನ್ನುವ ಆತಂಕದ ಸನ್ನಿವೇಶ ಕೇಳುಗರನ್ನು ವಿಚಲಿತರನ್ನಾಗಿಸಿಬಿಡುತ್ತದೆ. ಬೀರಪ್ಪ, ಮಾಳಿಂಗರಾಯನತ್ತ ತನ್ನ ನಿರ್ಧಾರವನ್ನು ಪ್ರಕಟಿಸಿದಾಗ ಕೇಳುಗರು ನಿಟ್ಟುಸಿರು ಬಿಟ್ಟು, ಗುರು-ಶಿಷ್ಯರ ಸಂಬಂಧವನ್ನು ಮೆಚ್ಚಿ ಮೌನವಾಗುತ್ತಾರೆ. ಬೀರಪ್ಪ ಮಾಯವಾದ ತಕ್ಷಣ ಪಾಂಡುರಂಗ ನಿರಾಸೆಯೊಂದಿಗೆ ಮಾಳಿಂಗರಾಯನಲ್ಲಿಗೆ ಬರುತ್ತಾನೆ.

ಬರಿಗೈಲಿ ಮರಳಿ ಬಂದ ಪಾಂಡುರಂಗನನ್ನು ಮಾಳಿಂಗರಾಯ ಏನು ತಿಳಿಯದವನಂತೆ ಬರಮಾಡಿಕೊಂಡು, ನನಗೆ ನಾನು ಕೊಟ್ಟ ಲಿಂಗವನ್ನು ಮರಳಿ ಕೊಡಬೇಕೆಂದು ಹಠ ಮಾಡುತ್ತಾನೆ. ಪಾಂಡುರಂಗನನ್ನು ಲಿಂಗ ಪಡೆಯುವ ಶಕ್ತಿರಹಿತ ವ್ಯಕ್ತಿಯೆಂದು ಅವಮಾನ ಮಾಡುತ್ತಾನೆ. ಈ ಅವಮಾನವನ್ನು ಸಹಿಸಿಕೊಳ್ಳಲಾರದ ಪಾಂಡುರಂಗ ಲಿಂಗವನ್ನು ಪಡೆಯಲೇಬೇಕು ಅನ್ನುವ ನಿರ್ಧಾರಕ್ಕೆ ಬಂದು ಬಿಡುತ್ತಾನೆ. ಮಾಳಿಂಗರಾಯನಲ್ಲಿ ನೀನು ಲಿಂಗವನ್ನು ಪೂಜಿಸುವ ಶಕ್ತಿಯನ್ನು ಪಡೆದಿದ್ದು ಹೇಗೆ ಎಂದು ಕೇಳುತ್ತಾನೆ. ಇದಕ್ಕೆ ಮಾಳಿಂಗರಾಯ ನಾನು

"ಹಗಲ ಹನ್ನೆರಡು ತಾಸು ಕುರಿಗಳಂದಾರಾs
ಕಾಯ್ದು ನಾನು ಹೊಳ್ಳಿ ಬರ್ತೇನಂದಾರಾs
ಬೆಳತನಕ ಕೇಳಪ್ಪಾ ಮಜಕೊರಾ
ಸಾವಿರ ಏಳ್ನೂರು ಒಂದ ಲಿಂಗದ ಭಕ್ತಿ
ಮಾಡ್ತೇನಿ ಅಂದಾರಾs
ಎಷ್ಟು ಕಾಲ ಹಿಂಗ ಗತಿಸ್ಯಾವಂದಾರಾ
ನಿತ್ಯ ಮಾಡುವ ನಡದೇನಂದಾರಾs
ಪಾಂಡುರಂಗ ಹುಟ್ಟಾಗಿ ನಿಂತಾರಾs"[೧೧೬]

ಈ ಮಾತುಗಳಿಂದ ಪ್ರೇರಿತನಾದ ಪಾಂಡುರಂಗ ಲಿಂಗವನ್ನು ಪಡೆಯುವುದಕ್ಕೆ ಮುಂದಾಗುತ್ತಾನೆ. ಮಾಳಿಂಗರಾಯನೇ ತಿಳಿಸಿದ ಹುಲಜಂತಿ ಗ್ರಾಮದ ಮನೆಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾನೆ. ಮಾಳಿಂಗರಾಯ ಕೆಲಸವನ್ನು ಸೂಚಿಸುವ ಎರಡು ಮನೆತನಗಳ ವಿಧಾನ ಗಮನ ಸೆಳೆಯುತ್ತದೆ. ಇಲ್ಲಿ ಅಣ್ಣ-ತಮ್ಮಂದಿರ ಎರಡು ಬಗೆಯ ಮನೆತನಗಳು ಸೂಚಿತವಾಗಿರುತ್ತವೆ. ಇದು 'ಕೊಡವಿ ನಂದಣ್ಣ'ನೆಂಬ ಕೃಷಿ-ಪಶುಪಾಲನೆ ಮಾಡುತ್ತಿದ್ದ ಶ್ರೀಮಂತನ ಮನೆ. ಇನ್ನೊಂದು ಕುರಿಗಾರಿಕೆ ಮತ್ತು ನೇಕಾರಿಕೆಯನ್ನು ಮಾಡುತ್ತಿದ್ದ ಬಡವ 'ಧರಿಯಾದೋಳಗೊಂಡ'ನ ಮನೆ. ಪಾಂಡುರಂಗ ಮೊದಲು ಕೃಷಿಕ; ಶ್ರೀಮಂತನ ಮನೆಗೆ ಹೋಗುತ್ತಾನೆ. ಇವರು ಮನೆಯೊಳಗೆ ಕರೆದುಕೊಳ್ಳದೇ ರಕ್ತ ಬರುವಂತೆ ಹೊಡೆದು, ಚಿತ್ರಹಿಂಸೆ ಕೊಟ್ಟು, ಹೊರಗಡೆ ತಳ್ಳಿಬಿಡುತ್ತಾರೆ. ನಂತರ ಬಡವ; ಕುರಿಗಾರ ಧರಿಯಾದೋಳಗೊಂಡನ ಮನೆಗೆ ಹೋಗುತ್ತಾನೆ. ಆ ಮನೆಯವರು ಪಾಂಡುರಂಗನನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆ. ಹಾಡುಗಳು ತುಂಬಾ ವ್ಯವಸ್ಥಿತವಾಗಿ ಈ ಸನ್ನಿವೇಶವನ್ನು ಹೇಳುತ್ತವೆ. ಅಂದರೆ ಪಾಂಡುರಂಗ ಕುರಿ ಕಾಯುವ ವೃತ್ತಿಯನ್ನು ಮಾಡುತ್ತಿದ್ದವರ ಮನೆ ಸೇರಿದ ಅಥವಾ ಕುರಿಕಾಯುವ ವೃತ್ತಿಯನ್ನು ಆರಂಭಿಸಿ ಕೊಂಡ ಅನ್ನುವುದನ್ನು ಹೇಳುವ ಉದ್ದೇಶವನ್ನು ಹೊಂದಿದೆ. ಆ ಕಾರಣಕ್ಕೆ ಕೃಷಿಕ ಮನೆಯ ನಿರಾಕರಣೆ ಯನ್ನು ಹೇಳುತ್ತದೆ. ಜೊತೆಗೆ ಕೃಷಿಕ ಮತ್ತು ಪಶುಪಾಲಕ ಸಂಘರ್ಷವನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಪ್ರಯತ್ನ ಪಡುತ್ತದೆ.

ಪಾಂಡುರಂಗ ತುಂಬಾ ತಾಂತ್ರಿಕವಾಗಿ ಧರಿಯಾದೋಳಗೊಂಡನ ಮನೆ ಸೇರುವ ವಿಧಾನ ಗಮನ ಸೆಳೆಯುತ್ತದೆ. ಆತ ತಾನು ಇದ್ದ ಸ್ವರೂಪದಲ್ಲಿ ಹೋಗದೆ ಚಿಕ್ಕ ಬಾಲಕನ ರೂಪ ತಾಳಿ ಹೋಗು

ತ್ತಾನೆ. ಅದು ಸುಂದರವಾದ ಮಗುವಿನ ರೂಪ ತಾಳುವುದಿಲ್ಲ. ಕೈಕಾಲು ಸಣ್ಣ, ಹೊಟ್ಟೆ ಡುಮ್ಮ ಇರುವ ಕುರೂಪಿ ರೂಪ ತಾಳಿಬಿಡುತ್ತಾನೆ. ಈ ಮಗುವನ್ನು ನೋಡಿದ ಜನರಿಗೆ ಅನಾಥ ಮಗು ಅನ್ನುವ ಭಾವನೆ ಬರಬೇಕು. ಈತನ ಯೋಜನೆಯಂತೆ ಧರಿಯಾದೋಳಗೊಂಡನ ಪ್ರೀತಿ ಗೆಲ್ಲುವಲ್ಲಿ ಯಶಸ್ವಿಯಾಗಿ ಬಿಡುತ್ತಾನೆ. ಅನಾಥ ಬಾಲಕನೆಂಬ ಭಾವನೆಯಿಂದ ಮನೆಯೊಳಗೆ ಪ್ರವೇಶ ಪಡೆದ ಪಾಂಡುರಂಗ ಆರಂಭದಲ್ಲಿ ಕಂಬಳಿ ನೇಯುವ ಮತ್ತು ಕುರಿ ಉಣ್ಣೆ, ಕಂಬಳಿಗಳನ್ನು ಸಂತೆಗಳಲ್ಲಿ ಮಾರಾಟ ಮಾಡುವ ಕಾಯಕದಲ್ಲಿ ಯಶಸ್ವಿಯಾಗುವುದರ ಮುಖಾಂತರ ಮನೆಯವರಿಗೆ ಆಶ್ಚರ್ಯವನ್ನುಂಟು ಮಾಡುತ್ತಾನೆ. ಕುಟುಂಬದಲ್ಲಿದ್ದ ತಂದೆ-ತಾಯಿ, ಏಳು ಜನ ಅಕ್ಕ-ತಂಗಿಯರ ಪ್ರೀತಿಗೆ ಪಾತ್ರನಾಗುತ್ತಾನೆ. ಈತನ ಮುಖ್ಯ ಗುರಿ ತನ್ನ ಮೇಲೆ ಕುಟುಂಬಸ್ಥರು ನಂಬಿಕೆಯನ್ನಿಡಬೇಕು. ಕುರಿಗಳನ್ನು ಕಾಯುವ ಕೆಲಸಕ್ಕೆ ಕಳಿಸಬೇಕು ಅನ್ನುವುದಾಗಿರುತ್ತದೆ. ಹಾಗಾಗಿ ಜವಾಬ್ದಾರಿಯುತವಾದ ವ್ಯಕ್ತಿ ಅನ್ನುವ ನಂಬಿಕೆ ಬರುವುದಕ್ಕೆ ಮಾಡಬೇಕಾದ ಎಲ್ಲಾ ಕೆಲಸಗಳನ್ನು ತುಂಬಾ ಎಚ್ಚರದಿಂದ ಮಾಡುತ್ತಾನೆ. ಏಕೆಂದರೆ ಆ ಕಾಲದಲ್ಲಿ ಕುರಿಗಳನ್ನು ಕಾಯುವುದು ಜವಾಬ್ದಾರಿಯುತ ಕೆಲಸವಾಗಿತ್ತು. ಇತರರಿಂದ ಮತ್ತು ಕಾಡುಪ್ರಾಣಿಗಳಿಂದ ಸಂರಕ್ಷಣೆ ಮಾಡುವ ಬೌದ್ಧಿಕತೆ ಹೊಂದಿರಬೇಕಿತ್ತು. ಆ ಕಾರಣಕ್ಕೆ ಹಿರಿಯರಿಗೆ ಕುರಿಗಳನ್ನು ಕಾಯುವ ಕೆಲಸವನ್ನು ವಹಿಸಿಕೊಡಲಾಗುತ್ತಿತ್ತು. ಕುರಿಗಾರಿಕೆ ಮಾಡುವ ಮನೆತನಗಳಲ್ಲಿ ಈಗಲೂ ಈ ಪರಿಕಲ್ಪನೆಯನ್ನು ಕಾಣಬಹುದು. ಸಪ್ತಮಾತೃಕೆಯರು ಕುರಿಗಳನ್ನು ಕಾಯುವಾಗ ತಂಡಕ್ಕೆ ಹಿರಿಯ ಅಕ್ಕ ನಾಯಕಳಾಗುತ್ತಿದ್ದಳು. ಆಕೆಯ ಮಾರ್ಗದರ್ಶನದಲ್ಲಿ ಉಳಿದವರು ಕುರಿಗಳನ್ನು ಕಾಯುತ್ತಿದ್ದರು. ಮಾತೃಪ್ರಧಾನ ಸಂಸ್ಕೃತಿಯಲ್ಲಿ ಕುರಿಗಾರಿಕೆ ಮಹಿಳೆಯರ ಪ್ರಮುಖ ವೃತ್ತಿಯಾಗಿತ್ತು. ಈ ಮಹಿಳೆಯರು ಪುರುಷರಿಗೆ ಕುರಿಕಾಯುವ ವಿಧಾನವನ್ನು ಕಲಿಸಿಕೊಡುತ್ತಿದ್ದರು. ಬೀರಪ್ಪನಿಗೆ ಅಕ್ಕನಾದ ಮಾಯವ್ವ ಕುರಿಕಾಯುವ ವಿಧಾನವನ್ನು ಕಲಿಸಿಕೊಡುತ್ತಾಳೆ. ಪಾಂಡುರಂಗನೂ ಸಹ ಬೀರಪ್ಪನಂತೆ ಸಪ್ತಮಾತೃಕೆಯರಲ್ಲಿ ಹಿರಿಯಳಾದ 'ಅಕ್ಕನಾಗಮ್ಮ'ಗಳಿಂದ ಕುರಿಕಾಯುವ ವಿಧಾನವನ್ನು ಕಲಿಯುತ್ತಾನೆ.

ಕುರಿ ಕಾಯುವ ವೃತ್ತಿ ಕಲಿತ ಪಾಂಡುರಂಗ ಕುರಿಗಳನ್ನು ಕಾಯುತ್ತಾ ಅಥಣಿ ತಾಲ್ಲೂಕು ಮುರಗುಂಡಿ ಗ್ರಾಮಕ್ಕೆ ಬರುತ್ತಾನೆ. ಅಲ್ಲಿ ಬೀರಪ್ಪ ಲಿಂಗದ ರೂಪ ತಾಳಿ ಹುತ್ತಿನಲ್ಲಿ ಅಡಗಿಕೊಂಡಿರುತ್ತಾನೆ. ಇದನ್ನು ಅರಿತುಕೊಂಡ ಪಾಂಡುರಂಗ ತನ್ನ ಕುರಿಗಳೊಂದಿಗೆ ಬೀರಪ್ಪನ ಕುರಿಗಳನ್ನು ಕಾಯುತ್ತಾ ಹುತ್ತಿನಲ್ಲಿ ಅಡಗಿದ್ದ ಬೀರಪ್ಪನಿಗೆ ಪ್ರತಿದಿನ ಕುರಿ ಹಾಲು ಹಿಂಡುತ್ತಾನೆ. ಈ ಕ್ರಿಯೆ ಹನ್ನೆರಡು ವರ್ಷಗಳ ಕಾಲ ನಡೆಯುತ್ತದೆ. ಈತನ ಭಕ್ತಿಗೆ ಮೆಚ್ಚಿದ ಬೀರಪ್ಪ ಪ್ರತ್ಯಕ್ಷನಾಗಲೂ ಬಯಸುತ್ತಾನೆ. ಆದರೆ ತಾನು ನೇರವಾಗಿ ಪ್ರತ್ಯಕ್ಷನಾಗದೆ ಮಾಳಿಂಗರಾಯನ ಮುಖಾಂತರ ಇಟ್ಟಪ್ಪನಿಗೆ ಪ್ರತ್ಯಕ್ಷನಾಗುತ್ತಾನೆ. ಇದು ಮಾಳಿಂಗರಾಯನಿಗೆ ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳುವ ವಿಧಾನವಾಗಿದೆ. ಹಾಗಾಗಿ ಮಾಳಿಂಗರಾಯನಿಗೆ ಬೀರಪ್ಪ ಪ್ರತ್ಯಕ್ಷನಾಗುವ ದಿನ ಮತ್ತು ಸ್ಥಳದ ಮುನ್ಸೂಚನೆಯನ್ನು ಕೊಡುತ್ತಾನೆ. ಮಾಳಿಂಗರಾಯ ಪಾಂಡುರಂಗನನ್ನು ಕರೆದುಕೊಂಡು ಬಂದು 'ಸೊನಾಳಗುಡ್ಡ'ದ ಮೇಲೆ ನಿಲ್ಲುತ್ತಾರೆ.

[illegible]

"ಉಗ್ರ ಮಿಂಚ ಆಗಿ ಬೀರಣ್ಣ ದೇವರಾs
ಕೋಲ ಮಿಂಚ ಹೊಡದವರಾs
ಕೈಮಾಡಿ ಮಾಳಪ್ಪs
ದೇವ್ರು ತೋರ್ಸ್ಯಾರಾs
ಪಾಂಡುರಂಗ ಓಡಿ ಓಡಿ ಹ್ವಾದಾರಾs
ಮುಟಗೀಲಿ ಲಿಂಗ ಹಿಡಿದಾರಾs"[೧೯೯]

ಲಿಂಗವನ್ನು ಕಂಡ ತಕ್ಷಣ ಪಾಂಡುರಂಗ ತೆಗೆದುಕೊಳ್ಳಲು ತುಂಬಾ ಖುಷಿಯಿಂದ ಓಡಿ ಬರುತ್ತಾನೆ. ಆದರೆ ಆ ಲಿಂಗ ಸಂಪೂರ್ಣವಾಗಿ ನೆಲದಿಂದ ಮೇಲೆ ಬಂದಿರುವದಿಲ್ಲ. ಆತ ಕೈಹಾಕಿ ಎಳೆದರೂ ಬರುವುದಿಲ್ಲ. ಕೊನೆಗೆ ಪ್ರತ್ಯಕ್ಷ ಸ್ಥಳದಲ್ಲಿಯೇ ಮುರಸಿದ್ಧ ಅನ್ನುವ ಹೆಸರಿನಲ್ಲಿ ಪಾಂಡುರಂಗ ಆರಾಧನೆ ಮಾಡುವುದಕ್ಕೆ ಆರಂಭಿಸಿದ. ಈ ಸ್ಥಳವೇ ಇವತ್ತಿನ ಅಥಣಿ ತಾಲೂಕು 'ಮುರಗುಂಡಿ' ಗ್ರಾಮ. ಈತನ ಭಕ್ತಿಗೆ ಮೆಚ್ಚಿದ ಮಾಳಿಂಗರಾಯ ತನ್ನಲ್ಲಿರುವ ಲಿಂಗವನ್ನು ಕೊಡುತ್ತಾನೆ. ಆಗ ಪಾಂಡುರಂಗ ಖುಷಿಯಿಂದ ಪಂಡರಪುರಕ್ಕೆ ಮರಳಿ ಹೋಗುತ್ತಾನೆ.

೪.೫.೨.೧. ಇಟ್ಟಪ್ಪನನ್ನು ಕುರಿತ ಭಿನ್ನ ಪಠ್ಯಗಳ ತಾತ್ವಿಕತೆ

ಇಲ್ಲಿ ಪ್ರಮುಖವಾಗಿ ಮೂರು ಜನ ಕಲಾವಿದರು ಹಾಡಿರುವ ಡೊಳ್ಳಿನ ಹಾಡುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಒಂದು ಸಿದ್ಧಪ್ಪ ಮೇಟಿ ಅವರು ಹಾಡಿರುವ ಜನಪದ ಹಾಲುಮತ ಮಹಾಕಾವ್ಯ. ಎರಡು ಅಡಿವೆಪ್ಪ ಒಡೆಯರು ಅವರು ಹಾಡಿರುವ ಮಾಳಿಂಗರಾಯನ ಕಾವ್ಯ. ಮೂರು ಅಥಣಿ ಗ್ರಾಮದ ವಿಠಲ ಯಣಕಂಚಿ ಅವರು ಹಾಡಿರುವ ವಿಠೋಬನ ಹಾಡುಗಳು. ಇವುಗಳ ಜೊತೆಗೆ ಪಟ್ಟಣಕೊಡಲಿ ಇಟ್ಟಪ್ಪನ ಜಾತ್ರೆಯಲ್ಲಿ ಇಟ್ಟಪ್ಪನ ಸೇವೆಗಾಗಿ ಕಲಾವಿದರು ಹಾಡಿರುವ ಹಾಡುಗಳನ್ನು ಮತ್ತು ಕಲಾವಿದರು ಮತ್ತು ಭಕ್ತರೊಂದಿಗೆ ಚರ್ಚಿಸಿರುವ ಕಥಾಸಾರವನ್ನು ಬಳಸಿಕೊಳ್ಳಲಾಗಿದೆ. ಈ ಕಥನಗಳಲ್ಲಿ ಅನಾವರಣಗೊಂಡಿರುವ ಭಿನ್ನ ವಸ್ತುಗಳ ವಿಶ್ಲೇಷಣೆ ಈಗಿದೆ.

ಜನಪದ ಹಾಲುಮತ ಮಹಾಕಾವ್ಯದಲ್ಲಿ ಪಾಂಡುರಂಗ ಸಾಮಾನ್ಯ ಮನುಷ್ಯ. ಶೈವ ಆರಾಧಕ, ಪವಾಡ ಪುರುಷ. ಬೀರಪ್ಪ ಮತ್ತು ಮಾಳಿಂಗರಾಯನಿಗಿಂತ ದೊಡ್ಡ ವ್ಯಕ್ತಿ ಅಲ್ಲ. ಇವರ ಮಾರ್ಗ ದರ್ಶನದಲ್ಲಿ ಶಿವನನ್ನು ಪಡೆಯಬೇಕು ಅನ್ನುವ ಹಂಬಲವನ್ನು ಇಟ್ಟುಕೊಂಡಿದ್ದ ವ್ಯಕ್ತಿ. ಆ ಕಾರಣಕ್ಕೆ ಇವರನ್ನು ಹುಡುಕಿಕೊಂಡು ಹುಲಜಂತಿ ಗ್ರಾಮಕ್ಕೆ ಬರುತ್ತಾನೆ. ಬೀರಪ್ಪ, ಮಾಳಿಂಗರಾಯ ಇಬ್ಬರು ಸೇರಿ ಲಿಂಗ ಕೊಡುವ ನೆಪದಲ್ಲಿ ಚಿತ್ರಹಿಂಸೆ ಕೊಡುತ್ತಾರೆ. ಆ ಚಿತ್ರಹಿಂಸೆಗಳಿಗೆ ಪಾಂಡುರಂಗ ಯಾವುದೇ ರೀತಿಯ ಪ್ರತಿರೋಧಗಳನ್ನು ಮಾಡುವುದಿಲ್ಲ. ಏನು ಅರಿಯದ ವ್ಯಕ್ತಿಯಾಗಿ ಕಾಣಿಸಿ ಲಿಂಗ ಪಡೆಯುವಲ್ಲಿ ವಿಫಲನಾಗಿ ಬಿಡುತ್ತಾನೆ. ಈ ಪಠ್ಯದಲ್ಲಿ ಸೋತ ನಂತರ ಪಾಂಡುರಂಗ ತೆಗೆದುಕೊಳ್ಳುವ ನಿರ್ಧಾರ ಗಮನಸೆಳೆಯುತ್ತದೆ. ದೊಡ್ಡತನವನ್ನು ಕಳೆದುಕೊಂಡು ಸಣ್ಣ ಬಾಲಕನಾಗಿ ಬಿಡುತ್ತಾನೆ. ಇದರರ್ಥ ಕೇವಲ ದೇಹದಲ್ಲಿ ಸಣ್ಣನಾಗುವುದಲ್ಲ. ಮನಸ್ಥಿತಿಯಲ್ಲೂ ಸಣ್ಣವನಾಗುವುದು ಎಂದರ್ಥ. ಶಿವನನ್ನು ಪಡೆಯಬೇಕು ಅನ್ನುವ ಹಂಬಲ ಹಿಂಸೆಯನ್ನು ಸಹಿಸಿಕೊಳ್ಳುವಂತೆ ಮಾಡುತ್ತದೆ. ಇಲ್ಲಿ

ಪಾಂಡುರಂಗ ಮಾಳಿಂಗರಾಯನಂತೆ ತಾನು ಆಗಬೇಕು ಅನ್ನುವ ಹಂಬಲ ಶೈವ ಆರಾಧನೆಯ ತುಡಿತವನ್ನು ಪ್ರತಿಬಿಂಬಿಸುತ್ತದೆ. ಜನಪದ ಹಾಲುಮತ ಮಹಾಕಾವ್ಯ ಮಾಳಿಂಗರಾಯನ ಕಾವ್ಯಕ್ಕಿಂತ ಭಿನ್ನವಾಗಿ ಕಾಣಿಸುವುದು ಈ ಹಂಬಲದಿಂದಲೇ. ಏಕೆಂದರೆ ಪಾಂಡುರಂಗ ಕೈಗೊಳ್ಳುವ ಮುಂದಿನ ನಿರ್ಧಾರಗಳೆಲ್ಲವೂ ಈ ಹಂಬಲದಿಂದ ಪ್ರೇರಿತವಾದವು. ಅಂದರೆ ಮಾಳಿಂಗರಾಯ ದಿನಾಲು ಕುರಿಗಳನ್ನು ಕಾಯ್ದು ಲಿಂಗವನ್ನು ಪೂಜೆ ಮಾಡುತ್ತೇನೆ ಎಂದ ತಕ್ಷಣ ಪಾಂಡುರಂಗ ಕುರಿಗಳನ್ನು ಕಾಯುವುದಕ್ಕೆ ಸಣ್ಣ ಬಾಲಕನ ರೂಪ ತಾಳಿ ಬಿಡುತ್ತಾನೆ. ಧರಿಯಾದೋಳಿಗೊಂಡನ ಮನೆ ಸೇರುತ್ತಾನೆ. ಕುರಿ ಕಾಯುವ ಅರ್ಹತೆಯನ್ನು ಪಡೆಯುವುದಕ್ಕಾಗಿ ಪಾಂಡುರಂಗ ಮಾಡುವ ಮನೆ ಕೆಲಸಗಳು ಮತ್ತು ಮನೆಯ ಅಪ್ಪ-ಅಮ್ಮ, ಸಪ್ತಮಾತೃಕೆಯರೊಂದಿಗೆ ನಡೆದುಕೊಳ್ಳುವ ರೀತಿ ಗಮನ ಸೆಳೆಯುತ್ತದೆ. ಸಪ್ತಮಾತೃಕೆಯರ ಆರೈಕೆಯಲ್ಲಿ ಕುರಿಗಳನ್ನು ಕಾಯುವ ವಿಧಾನ ಬೀರಪ್ಪನ ಜೀವನ ಚರಿತ್ರೆಯನ್ನು ನೆನಪಿಸುತ್ತದೆ. ಪಾಂಡುರಂಗನನ್ನು ಕುರಿಗಾರಿಕೆಗೆ ಸಂಪೂರ್ಣವಾಗಿ ಒಗ್ಗಿಸಿಕೊಳ್ಳುವ ವಿಧಾನ ಇಲ್ಲಿದೆ. ಕುರಿಗಳನ್ನು ಕಾಯುವ, ಕಂಬಳಿ ನೇಯುವ ಹಾಗೂ ಉಣ್ಣೆ-ಕಂಬಳಿಯನ್ನು ಮಾರಾಟ ಮಾಡುವ ಕಾಯಕವನ್ನು ಖಚಿತವಾಗಿ ಕಲಿತ ನಂತರ ಶಿವನನ್ನು, ಲಿಂಗವನ್ನು ಪಡೆಯುವುದಕ್ಕೆ ಸಾಧ್ಯ ಅನ್ನುವುದನ್ನು ಈ ಕಥಾವಸ್ತು ಬಿಂಬಿಸುತ್ತದೆ. ಬೀರಪ್ಪ, ಮಾಳಿಂಗರಾಯರ ಧೋರಣೆಯಲ್ಲಿ ಈ ಪರಿಕಲ್ಪನೆ ತೀವ್ರವಾಗಿ ಕಾಣಿಸುತ್ತದೆ. ಇದೇ ತರದ ನಂಬಿಕೆ ಹಾಲುಮತ ಸಾಂಸ್ಕೃತಿಕ ವೀರನಾದ 'ವೀರಗೊಲ್ಲಾಳ'ನಲ್ಲೂ ಕಂಡುಬರುತ್ತದೆ. ವೀರಗೊಲ್ಲಾಳ ತಾನು ಬರೆದ ವಚನಗಳಲ್ಲೂ ಈ ಚಿಂತನೆಯನ್ನು ಬಲವಾಗಿ ಮಂಡಿಸಿದ್ದಾನೆ. ಕುರಿಗಳನ್ನು ಕಾಯುವ ಕೆಲಸದಲ್ಲಿ ಶಿವನನ್ನು ಕಾಣುವುದು ಹಾಲುಮತ ಸಂಸ್ಕೃತಿಯ ವಿಶಿಷ್ಟ ಅನನ್ಯತೆಯಾಗಿ ರೂಪಗೊಂಡಿದೆ. ಇವರು 'ಕಾಯಕವೇ ಕೈಲಾಸ' ಅನ್ನುವ ತತ್ವಕ್ಕೆ ಬದ್ಧರಾದವರು. ಕಾಯಕದಲ್ಲಿಯೇ ತಮ್ಮ ಆರಾಧ್ಯ ದೈವಗಳನ್ನು ಕಂಡವರು.

ಮಾಳಿಂಗರಾಯನ ಕಾವ್ಯ ಜನಪದ ಹಾಲುಮತ ಮಹಾಕಾವ್ಯಕ್ಕಿಂತ ಭಿನ್ನವಾದ ವಸ್ತುವನ್ನು ಅನಾವರಣ ಮಾಡುತ್ತದೆ. ಪಾಂಡುರಂಗ ಹುಲಜಂತಿ ಗ್ರಾಮಕ್ಕೆ ಲಿಂಗವನ್ನು ಪಡೆಯುವುದಕ್ಕೆ ಬರುವಾಗ ಬಡ ಬ್ರಾಹ್ಮಣನ ಮಾರುವೇಷದಲ್ಲಿ ಬರುತ್ತಾನೆ. ಈತನ ಆಗಮನವನ್ನು ದೂರದೃಷ್ಟಿ ಜ್ಞಾನದಿಂದಲೇ ಅರಿತ ಮಾಳಿಂಗರಾಯ ಓಡಿ ಓಡಿ ಬಂದು ಪಾಂಡುರಂಗನ ಪಾದಗಳನ್ನು ಹಿಡಿದುಕೊಂಡು ಆ ನಿನ್ನ ಪಾದಗಳನ್ನು ನನ್ನ ತಲೆಯ ಮೇಲೆ ಇಟ್ಟರೆ ಮಾತ್ರ ಬಿಡುತ್ತೇನೆ ಇಲ್ಲದಿದ್ದರೆ ಇಲ್ಲವೆಂದು ಹಠ ಮಾಡುತ್ತಾನೆ. ಪಾಡುರಂಗ ನಾನೊಬ್ಬ ಬಡ ಬ್ರಾಹ್ಮಣ. ನನ್ನಿಂದ ಏನನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನೀನೊಬ್ಬ ಮಹಿಮಾ ಪುರುಷ. ಇಂತ ಕೆಲಸವನ್ನು ಮಾಡುವುದು ಸರಿಯಲ್ಲ. ಕೈಬಿಡು ಅಂದರೂ ಕೇಳುವುದಿಲ್ಲ. ಮಾಳಿಂಗರಾಯನ ಹಠಕ್ಕೆ ಮತ್ತು ಆತನ ಗುರುತು ಹಚ್ಚಿದ ಜ್ಞಾನಕ್ಕೆ ಸೋತ ಪಾಂಡುರಂಗ ತನ್ನ ಹಸ್ತಗಳನ್ನು ಮಾಳಿಂಗರಾಯನ ತಲೆ ಮೇಲೆ ಇಟ್ಟು, ನಂತರ ನನ್ನ ನಿನ್ನ ಭೇಟಿ ಪ್ರತಿವರ್ಷ ದೀಪಾವಳಿ ಅಮವಾಸ್ಯೆಯ ದಿವಸ ಇದೇ ಹಾಲಹಳ್ಳದಲ್ಲಿ ಆಗಲಿ ಎಂದು ಹಾರೈಸುತ್ತಾನೆ. ಈಗಲೂ ದೀಪಾವಳಿ ಅಮವಾಸ್ಯೆಯ ದಿವಸ ನಡೆಯುವ ಮಾಳಿಂಗರಾಯನ ಪಲ್ಲಕ್ಕಿ ಭೇಟಿ ಆಚರಣೆ

ಯಲ್ಲಿ ಪಂಡರಪುರದ ವಿಠಲನ ಪಲ್ಲಕ್ಕಿ ಬರುತ್ತದೆ. ಭೇಟಿ ಆದ ನಂತರ ಮಾಳಿಂಗರಾಯ ಗದ್ದುಗೆಯ ಪಕ್ಕದಲ್ಲಿರುವ ವಿಠಲನ ದೇವಾಲಯಕ್ಕೆ ಹೋಗಿ ಆರ್ಶೀವಾದ ತೆಗೆದುಕೊಳ್ಳುತ್ತದೆ. ಸಾವಿರಾರು ವರ್ಷಗಳಿಂದ ಈ ಆಚರಣೆ ನಡೆದುಕೊಂಡು ಬಂದಿದೆ ಎಂದೂ ಸ್ಥಳೀಯರು ಹೇಳುತ್ತಾರೆ. ಮಾಳಿಂಗ ರಾಯ ಪಾಂಡುರಂಗನನ್ನು ಗುರುತು ಹಚ್ಚಿದ ತಕ್ಷಣ ಪಾಂಡುರಂಗ ನೀನು ಜ್ಞಾನವಂತನೆಂದು ಒಪ್ಪಿಕೊಳ್ಳುತ್ತಾನೆ. ಆದರೂ ಮಾಳಿಂಗರಾಯನನ್ನು ಪರೀಕ್ಷೆ ಮಾಡುವುದನ್ನು ಕೈಬಿಡುವುದಿಲ್ಲ. ಅನೇಕ ಪ್ರಕಾರದ ಪರೀಕ್ಷೆಗಳಿಗೆ ಮುಂದಾಗುತ್ತಾನೆ. ಅನೇಕ ಪವಾಡಗಳನ್ನು ಒಡ್ಡುತ್ತಾನೆ. ಮಾಳಿಂಗರಾಯ ಆ ಎಲ್ಲಾ ಪವಾಡಗಳನ್ನು ಬಹಳ ಸರಳವಾಗಿ ಗೆದ್ದುಬಿಡುತ್ತಾನೆ. ಕಾವ್ಯದಲ್ಲಿ ಮಾಳಿಂಗರಾಯ ಪಾಂಡುರಂಗನಿಗಿಂತಲೂ ಶ್ರೇಷ್ಠ, ಪವಾಡ ಪುರುಷ ಅನ್ನುವುದನ್ನು ತಿಳಿದುಬರುತ್ತದೆ. ಹೇಳುವ ರೀತಿ ಬಹಳ ಸೂಕ್ಷ್ಮವಾದದ್ದು. ಎಲ್ಲಿಯು ಪಾಂಡುರಂಗನನ್ನು ಅವಮಾನ ಮಾಡುವುದಿಲ್ಲ. ಏಕೆಂದರೆ ಮಾಳಿಂಗರಾಯ ಪಾಂಡುರಂಗನನ್ನು ಗುರು ಎಂದು ಒಪ್ಪಿಕೊಂಡಿದ್ದಾನೆ. ಆ ಕಾರಣಕ್ಕೆ ಪಾಂಡುರಂಗನನ್ನು ಪೂಜ್ಯಭಾವನೆಯಿಂದಲೇ ಕಾಣುತ್ತಲೇ ಮಾಳಿಂಗರಾಯನ ಶ್ರೇಷ್ಠತನವನ್ನು ಮೆರೆಸುತ್ತಾರೆ. ಇಲ್ಲಿ ಮಾಳಿಂಗರಾಯ ಗುರು ಪಾಂಡುರಂಗನಿಗೆ ಮಾತ್ರ ಮಾಡಿದ ಅಡುಗೆಯಲ್ಲಿ ಸಾವಿರಾರು ಭಕ್ತರನ್ನು ಸಂತೃಪ್ತಿಗೊಳಿಸುವ ಪವಾಡ ಗಮನ ಸೆಳೆಯುತ್ತದೆ. ಇದೇ ತರಹದ ಪವಾಡಗಳು ಜನಪದ ಹಾಲುಮತ ಮಹಾಕಾವ್ಯದಲ್ಲಿ ಸ್ತ್ರೀ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಮಾಳಿಂಗರಾಯ ಪವಾಡಗಳನ್ನು ಸಹಜವಾಗಿ ಗೆಲ್ಲುವ ಶಕ್ತಿಗೆ ಪಾಂಡುರಂಗ ಮನಸೋತು ಬಿಡುತ್ತಾನೆ. ಇಂತಹ ಶಕ್ತಿಯನ್ನು ನೀನು ಪಡೆದಿದ್ದು ಎಲ್ಲಿ ಎಂದು ಕೇಳುತ್ತಾನೆ. ದಿನನಿತ್ಯ ಹಗಲೆಲ್ಲ ಕುರಿಗಳನ್ನು ಕಾಯುವುದು ಮತ್ತು ರಾತ್ರಿ ಸಾವಿರಾರು ಲಿಂಗಗಳನ್ನು ಪೂಜೆ ಮಾಡುವುದರಿಂದ ಪಡೆದುಕೊಂಡಿದ್ದೇನೆಂದು ಮಾಳಿಂಗರಾಯ ಹೇಳುತ್ತಾನೆ. ಲಿಂಗವನ್ನು ಆರಾಧನೆ ಮಾಡುವುದರಿಂದ ಬರುವ ಶಕ್ತಿಗೆ ಮನಸೋತ ಪಾಂಡುರಂಗ ನನಗೆ ಒಂದು ಲಿಂಗವನ್ನು ಕೊಡಬೇಕು ಎಂದು ಮನವಿ ಸಲ್ಲಿಸುತ್ತಾನೆ. ಅಲ್ಲಿಯೂ ಮಾಳಿಂಗರಾಯ ಪಾಂಡುರಂಗನಿಗೆ ಪೂಜ್ಯಭಾವನೆಯನ್ನು ತೋರಿಸುತ್ತಾನೆ. ನೀನೇ ನಿಜವಾದ ಲಿಂಗ. ನಿನಗೆ ಲಿಂಗ ಕೊಡುವುದು ನನ್ನಿಂದ ಸಾಧ್ಯವೇ? ಎನ್ನುತ್ತಾನೆ. ಇದು ಮಾಳಿಂಗರಾಯ ಪಾಂಡುರಂಗನ ಬಗ್ಗೆ ಇಟ್ಟುಕೊಂಡ ಗೌರವ ಭಾವನೆ ಯನ್ನು ತಿಳಿಸುತ್ತದೆ. ಆದರೂ ಪಾಂಡುರಂಗ ತನ್ನ ಹಠವನ್ನು ಬಿಡುವುದಿಲ್ಲ. ಕೊನೆಗೆ ಈ ಲಿಂಗ ಪಡೆಯಬೇಕು ಅಥವಾ ಲಿಂಗ ಕೊಡಬೇಕು ಅನ್ನುವ ಹಂಬಲ ಪಾಂಡುರಂಗನನ್ನು ಕುರಿಕಾಯುವ ಕಾಯಕಕ್ಕೆ ತರುತ್ತದೆ. ಕುರಿಕಾಯುವ ಸಂದರ್ಭದಲ್ಲಿ ಸಪ್ತಮಾತೃಕೆಯರ ಚಿತ್ರಣಗಳು ಕಂಡುಬರುವುದಿಲ್ಲ. ಜನಪದ ಹಾಲುಮತ ಮಹಾಕಾವ್ಯದ ಮುಂದುವರೆದ ಭಾಗವನ್ನು ಈ ಕಾವ್ಯ ಹೇಳುತ್ತದೆ. ಅಂದರೆ ಕೊನೆಯ ಕಥೆಗೆ ಆರಂಭಿಕ ಕಥನವನ್ನು ಸಂಯುಕ್ತಗೊಳಿಸಿಕೊಂಡು ಕಥನವನ್ನು ಹೇಳುತ್ತದೆ. ಮುರಗುಂಡಿ-ಪಟ್ಟಣಕೊಡಲಿ ಸುತ್ತಮುತ್ತ ಕುರಿಗಳನ್ನು ಕಾಯುತ್ತಿದ್ದ ಮತ್ತು ಮುರಗುಂಡಿ ಗ್ರಾಮದಲ್ಲಿ ಬೀರಪ್ಪ ಕಾಣಿಸಿಕೊಂಡ ಅನ್ನುವ ಕಥನ ಬೇರೆ ರೀತಿಯಲ್ಲಿ ಆಲೋಚನೆ ಮಾಡುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಬೀರಪ್ಪ ತನ್ನ ಕೊನೆಯ ಕಾಲಾವಧಿಯಲ್ಲಿ ಹುಲಜಂತಿ, ಸಿರಡೋನಗಳನ್ನು ಬಿಟ್ಟು ಜಮಖಂಡಿ, ಅಥಣಿ ಭಾಗದತ್ತ ವಲಸೆ ಬಂದಿದ್ದಾನೆ. ಸಾಕು ಅಕ್ಕನಾದ ಮಾಯವ್ವನಿಗೆ ಚಿಂಚಲಿ

ಗ್ರಾಮದಲ್ಲಿ ನೆಲೆ ನಿಲ್ಲುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅನ್ನುವ ಚಾರಿತ್ರಿಕ ಅಂಶಗಳು ಡೊಳ್ಳಿನ ಹಾಡುಗಳಿಂದ ತಿಳಿದುಬರುತ್ತದೆ. ಪಾಂಡುರಂಗನಿಗೆ ಮುರಗುಂಡಿ ಗ್ರಾಮದಲ್ಲಿ ಬೀರಪ್ಪ ದೊರಕಿದನೆಂದು ಹೇಳುವ ಕಥನಗಳಿಗೆ ಕೋಣಗನೂರು, ಮುಂಡಗನೂರು ಮತ್ತು ಅಲಖನೂರು ಗ್ರಾಮದ ಕಥನಗಳು ಸಹಾಯಕವಾಗಿ ನಿಲ್ಲುತ್ತವೆ.

ಅಥಣಿ ಗ್ರಾಮದ ವಿಠಲ ಯಣಕಂಚಿ ಅವರು ಹಾಡುವ ಕಾವ್ಯ ಇವೆರಡಕ್ಕಿಂತ ಭಿನ್ನವಾಗಿದೆ. ಈ ಕಾವ್ಯ ಹೆಚ್ಚು ದೀರ್ಘವಾಗಿರುವುದಕ್ಕೆ ಸಾಧ್ಯವಿದೆ. ಏಕೆಂದರೆ ಕಥನ ತುಂಬಾ ವಿಸ್ತಾರವಾಗಿದೆ. ಈ ಕಥನದಲ್ಲಿ ಬೀರಪ್ಪ ಮಾಳಿಂಗರಾಯ, ಅಕ್ಕನಾಗಮ್ಮರ ಸಂಬಂಧಗಳ ಜೊತೆಗೆ ಪದ್ಮಬಾಯಿ, ಗುರು ಮುರಸಿದ್ಧ (ಬೀರಪ್ಪ), ಅಮೋಘಸಿದ್ಧ ಮುಂತಾದ ಸ್ಥಳೀಯ ಸಾಂಸ್ಕೃತಿಕ ವೀರರೊಂದಿಗೆ ಸಂಘರ್ಷ ಮತ್ತು ಸಂಬಂಧಗಳು, ಸ್ಥಳೀಯ ಹೊಲೆಮಾದಿಗರ ಮತ್ತು ಇತರ ಸಮುದಾಯಗಳೊಂದಿಗಿನ ಸಂಬಂಧಗಳು, ಪಟ್ಟಣಕೊಡಲಿ ಮತ್ತು ಮುರಗುಂಡಿ ಸುತ್ತಮುತ್ತಲಿನಲ್ಲಿ ನಡೆಯುವ ಇಟ್ಟಪ್ಪನಿಗೆ ಸಂಬಂಧಿಸಿದ ಆಚರಣೆಗಳ ವಿವರಗಳು ಕಂಡುಬರುತ್ತವೆ. ಈ ಕಾವ್ಯವನ್ನು ಸಂಗ್ರಹಿಸಬೇಕು. ಆಗ ಇಟ್ಟಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಸೈದ್ಧಾಂತಿಕವಾಗಿ ಕಟ್ಟುವುದಕ್ಕೆ ಸಾಧ್ಯ.

೪.೫.೩. ಬೀರಪ್ಪ ಮಾಳಿಂಗರಾಯರೊಂದಿಗೆ ಇಟ್ಟಪ್ಪನ ಸಂಬಂಧ

ಬೀರಪ್ಪ, ಮಾಳಿಂಗರಾಯರೊಂದಿಗೆ ಇಟ್ಟಪ್ಪ ಸಾಂಸ್ಕೃತಿಕ ಸಂಬಂಧವನ್ನು ಬೆಸೆದುಕೊಂಡಿರುವ ಭಿನ್ನ ಪಠ್ಯಗಳು ಡೊಳ್ಳಿನ ಹಾಡುಗಳಲ್ಲಿ ಸಿಗುತ್ತವೆ. ಡೊಳ್ಳಿನ ಹಾಡುಗಳಲ್ಲಿ ಇಟ್ಟಪ್ಪ ಮತ್ತು ಬೀರಪ್ಪನ ಸಂಬಂಧವನ್ನು ಹೇಳುವಾಗ ಬೀರಪ್ಪನನ್ನು ಹೆಚ್ಚಾಗಿ ಗುರುಮುರಸಿದ್ಧನೆಂದು ಕರೆಯಲಾಗುತ್ತದೆ. ಕರ್ನಾಟಕ ಮಹಾರಾಷ್ಟ್ರದ ಗಡಿಭಾಗದಲ್ಲಿ ಇಟ್ಟಪ್ಪ, ಬೀರಪ್ಪ (ಮರಸಿದ್ಧ; ಕರಸಿದ್ಧ)ರು ಸಂಯುಕ್ತಗೊಂಡು ಆರಾಧನೆಗೆ ಒಳಗಾಗುವ ಹಲವು ಸ್ಥಳಗಳು ಸಿಗುತ್ತವೆ. ಆದರೆ ಮಾಳಿಂಗರಾಯನ ಜೊತೆ ಪಾಂಡುರಂಗ ಆರಾಧನೆಗೆ ಒಳಗಾಗುವ ಸ್ಥಳಗಳು ಇಲ್ಲ. ಬೀರಪ್ಪ, ಇಟ್ಟಪ್ಪರು ಆರಾಧನೆಗೆ ಒಳಗಾಗುವ ಸ್ಥಳಗಳಲ್ಲಿ ಮಾಳಿಂಗರಾಯನೊಂದಿಗೆ ಇಟ್ಟಪ್ಪ ಆಚರಣಾತ್ಮಕ ಸಂಬಂಧವನ್ನು ಬೆಸೆದುಕೊಂಡಿರುವ ಕಥನಗಳು, ಆಚರಣೆಗಳು ಹೆಚ್ಚು ಜನಪ್ರಿಯತೆಯಲ್ಲಿವೆ. ಪಟ್ಟಣಕೊಡಲಿ (ಹಾತಕಣಗಲೆ ತಾ. ಕೊಲ್ಹಾಪುರ ಜಿ.) ಪೋಖಾಡಾಪುರ (ಮೊಹೋಳ ತಾ., ಸೊಲ್ಲಾಪುರ ಜಿಲ್ಲೆ) ಸಿದ್ಧೇಶ್ವರ ಕೊಡಲಿ (ಸಾತರ ಜಿ.) ರಾಜೂರಿ (ಫಲಟಣ ತಾ. ಸಾತಾರ ಜಿ.) ಸಾವಳ (ಬಾರವತಿ ತಾ. ಪುಣೆ ಜಿ.) ಗೌಳಿಗರ ಉಂಡೊಡಿ (ಬಾರಮತಿ ತಾ. ಪುಣೆ ಜಿ.) ತುರುವನೂರು (ರಾಮದುರ್ಗ ತಾ. ಬೆಳಗಾವಿ ಜಿ.) ಗೊರವಗುಂಡಗಿ (ಸಿಂದಗಿ ತಾ. ಬಿಜಾಪುರ ಜಿ.) ದೇವರ ಕಡಬಿ (ಸವದತ್ತಿ ತಾ. ಬೆಳಗಾವಿ ಜಿ.) ಇನ್ನೂ ಮುಂತಾದ ಸ್ಥಳಗಳು ಪ್ರಮುಖವಾದವು. ಆಂಧ್ರಪ್ರದೇಶದಲ್ಲಿ ವೆಂಕಟೇಶ ಮತ್ತು ಶ್ರೀನಿವಾಸನ ಜೊತೆ ಸಂಬಂಧವಿಟ್ಟುಕೊಂಡಿರುವ ವಿವರಗಳು ಸಿಗುತ್ತವೆ. "ವೆಂಕಟೇಶ ಮತ್ತು ಶ್ರೀನಿವಾಸ ಮತ್ತು ಬೀರಪ್ಪನನ್ನು ಗುರುತಿಸುವ ವೈಷ್ಣವ ಧರ್ಮದ ಹೆಸರುಗಳು. ಈ ಹೆಸರುಗಳನ್ನು ಹನ್ನೊಂದನೇ ಶತಮಾನದಲ್ಲಿ ರಾಮಾನುಜಾಚಾರ್ಯರು ಪ್ರಚಲಿತಕ್ಕೆ ತಂದರು"[೨೦] ಎಂದು ಚಿಂತಾಮಣಿ ಢೇರೆ ಅವರು ಹೇಳುತ್ತಾರೆ. ಈ ಪ್ರದೇಶಗಳಲ್ಲಿ

ಬೀರಪ್ಪ ಮತ್ತು ಇಟ್ಟಪ್ಪರು ಅಣ್ಣ-ತಮ್ಮಂದಿರು, ಗುರು-ಶಿಷ್ಯರು ಎನ್ನುವ ಕಥನಗಳು ಪ್ರಚಲಿತದಲ್ಲಿವೆ. ಈ ಇಬ್ಬರು ಸಾಂಸ್ಕೃತಿಕ ನಾಯಕರ ಸಂಬಂಧವನ್ನು ಹೇಳುವ ಸ್ಥಳೀಯ ಪುರಾಣಗಳು ಸಿಗುತ್ತವೆ. ಪಟ್ಟಣಕೊಡಲಿ ಗ್ರಾಮದಲ್ಲಿ ಪ್ರಚಲಿತದಲ್ಲಿರುವ ಪುರಾಣ ಹೀಗಿದೆ. "ಬೀರಪ್ಪ ವರ್ಣೀಯ (ವಾರಣಾಸಿ) ತೀರದಲ್ಲಿ ಹಾವಾಗಿ ಹನ್ನೆರಡು ವರ್ಷಗಳ ಕಾಲ ಹುತ್ತದಲ್ಲಿ ಅಡಗಿದ್ದಾನಂತೆ. ಆ ಸಮಯದಲ್ಲಿ ಇಟ್ಟಪ್ಪ ಬೀರಪ್ಪನ ಕುರಿಗಳನ್ನು ಕಾಯುತ್ತಾ ಬೀರಪ್ಪನಿಗೆ ಪ್ರತಿದಿನ ಹಾಲುಣಿಸಿ ಸೇವೆ ಮಾಡಿದನಂತೆ. ಇಟ್ಟಪ್ಪನ ಸೇವೆಗೆ ಸಂತೃಪ್ತಿಗೊಂಡ ಬೀರಪ್ಪ ಒಂದು ದಿವಸ ಪ್ರತ್ಯಕ್ಷವಾಗಿ ಅಪ್ಪಿಕೊಂಡ ಸ್ಥಳವೇ ಪಟ್ಟಣಕೊಡಲಿ. ಹಾಗಾಗಿ ಇಲ್ಲಿ ಇವರಿಬ್ಬರು ಒಂದೇ ಗದ್ದುಗೆಯ ಮೇಲೆ ಆರಾಧನೆಗೆ ಒಳಗಾಗುತ್ತಿದ್ದಾರೆ".[೧೫] ಈ ಕಥನ ಅಥಣಿ ತಾಲ್ಲೂಕು ಮುರಗುಂಡಿ ಗ್ರಾಮದಲ್ಲಿ ಪ್ರಚಲಿತದಲ್ಲಿದೆ ಹಾಗೂ ವಿಠೋಬನನ್ನು ಕುರಿತು ಹಾಡುವ ಡೊಳ್ಳಿನ ಹಾಡುಗಳಲ್ಲೂ ಇದೆ.

ಬೀರಪ್ಪನ ಮತ್ತು ಇಟ್ಟಪ್ಪ ಸಂಯುಕ್ತಗೊಂಡು ಆರಾಧನೆಗೊಳ್ಳುವ ನೆಲೆಗಳು ಸಿಗುತ್ತವೆ. ಉದಾಹರಣೆಗೆ ಅಥಣಿ, ಮುರಗುಂಡಗಿ, ಸಾಂದಲಗ, ತೇರುವಾಡ, ಕಣಾಳ್ ಮುಂತಾದ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶದ ಹಾಲುಮತಸ್ಥರಿಗೆ ಬೀರಪ್ಪ, ಮಾಳಿಂಗರಾಯ, ಮಾಯವ್ವ ಮತ್ತು ಇಟ್ಟಪ್ಪ ಕುಲದೈವ ಮತ್ತು ಆರಾಧ್ಯ ದೈವಗಳಾಗಿವೆ. ಒಂದು ಮನೆಯವರಿಗೆ ಬೀರಪ್ಪ ಕುಲದೈವವಾದರೆ, ಇಟ್ಟಪ್ಪ ಆರಾಧ್ಯದೈವ ಆಗಿರುತ್ತಾನೆ. ಇಟ್ಟಪ್ಪ ಕುಲದೈವ ಆಗಿದ್ದರೆ ಮಾಳಿಂಗರಾಯ ಆರಾಧ್ಯದೈವ ಆಗಿರುತ್ತಾನೆ. ಈ ಪ್ರದೇಶದ ಜನರಲ್ಲಿ ಮಾಳಿಂಗರಾಯನಿಗೆ ಹೋಗುವುದು ನಿಷೇಧವಿದೆ. ಇಟ್ಟಪ್ಪನ ಸೇವೆ ಮಾಡುವುದಕ್ಕಾಗಿ ಮಾಳಿಂಗರಾಯ ಈ ನಿಷೇಧವನ್ನು ಹಾಕಿದ್ದಾನೆಂದು ತಿಳಿಸುವ ಕಥನಗಳು ಸಿಗುತ್ತವೆ. "ದೀಪಾವಳಿ ದಿವಸ ನಡೆಯುವ ಜಾತ್ರೆಗೆ ಇಟ್ಟಪ್ಪ, ಮಾಳಿಂಗರಾಯನನ್ನು ಪಟ್ಟಣಕೊಡಲಿಗೆ ಬರುವಂತೆ ಕೇಳಿಕೊಂಡನಂತೆ. ಈ ಬೇಡಿಕೆಗೆ ಮನಸೋತ ಮಾಳಿಂಗರಾಯ ನನಗೆ ಬರುವುದಕ್ಕೆ ಆಗುವುದಿಲ್ಲ. ಆ ದಿವಸ ನನ್ನನ್ನು ಭೇಟಿ ಆಗುವುದಕ್ಕೆ ನನ್ನ ಗುರು-ಶಿಷ್ಯರು ಮತ್ತು ಭಕ್ತರು ನನ್ನ ಕ್ಷೇತ್ರಕ್ಕೆ ಬರುತ್ತಾರೆ. ಹಾಗಾಗಿ ನಿನ್ನಲ್ಲಿಗೆ ಬರುವುದಿಲ್ಲ. ಬದಲಾಗಿ ನನ್ನ ದಂಡ(ಬಳಗ)ನ್ನು ನಿನ್ನ ಜಾತ್ರೆಗೆ ಕಳಿಸಿಕೊಡುತ್ತೇನೆ. ಅವರು ನಿನ್ನ ಸೇವಕರಾಗಿ ಕಾರ್ಯ ನಿರ್ವಹಿಸುತ್ತಾರೆ ಎಂದು ಹೇಳಿ, ನಮ್ಮ ಮನೆತನದ ಪೂರ್ವಜರಿಗೆ ಹೀಗೆ ಹೇಳಿದನಂತೆ. 'ನೀವು ನನ್ನ ಜಾತ್ರೆಗೆ ಬರುವುದು ಬೇಡ. ನನ್ನ ಗುರುವಾದ ಪಟ್ಟಣಕೊಡಲಿಯ ಇಟ್ಟಪ್ಪನ ಜಾತ್ರೆಗೆ ಹೋಗಿ, ಆತ ಹೇಳಿದ ಕೆಲಸಗಳನ್ನು ಮಾಡಿ ಎಂದು ಹೇಳಿದನಂತೆ. ಆವತ್ತಿನಿಂದ ಇವತ್ತಿನವರೆಗೂ ನಮ್ಮ ಮನೆತನದವರು ಇಟ್ಟಪ್ಪ ಸೇವಕರಾಗಿ ಕೆಲಸ ಮಾಡುತ್ತಿದ್ದೇವೆ' ಎಂದು ಅಥಣಿ ಗ್ರಾಮದ ಕಲ್ಲಪ್ಪಜ್ಜರವರು ಹೇಳುತ್ತಾರೆ".[೧೬] ಪಟ್ಟಣಕೊಡಲಿ ಇಟ್ಟಪ್ಪನ ಜಾತ್ರೆಯಲ್ಲಿ ಸೇವಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಹಾಲುಮತಸ್ಥರು ಇವತ್ತಿಗೂ ನಿಷೇಧವನ್ನು ಮೀರಿ ಮಾಳಿಂಗರಾಯನ ಜಾತ್ರೆಗೆ ಹೋಗಿಲ್ಲವಂತೆ. ಈ ಪದ್ಧತಿಯನ್ನು ಮೀರಿ ನಡೆದರೆ ಮಾಳಿಂಗರಾಯ ನಮ್ಮ ದನ-ಕುರಿಗಳಿಗೆ ಹಾನಿಯನ್ನುಂಟು ಮಾಡುತ್ತಾನೆ ಅನ್ನುವ ಭಯ ಇವರಲ್ಲಿದೆ. ಇಟ್ಟಪ್ಪನ ಜಾತ್ರೆಯಲ್ಲಿ ನಡೆಯುವ ಆಚರಣೆಗಳನ್ನು ಒಂದೊಂದು ಗ್ರಾಮದವರು ಒಂದೊಂದು

[illegible]

ಆಚರಣೆಗಳ ಜವಾಬ್ದಾರಿ ಹೊತ್ತುಕೊಂಡಿರುವುದು ಗಮನಸೆಳೆಯುತ್ತದೆ. ಅಥಣಿಯವರು ಬಿಜಾಪುರದಿಂದ ಪಟ್ಟಣಕೊಡಲಿಗೆ ದೈವಕ್ಕೆ ಬೇಕಾದ ಹೂವಿನ ಹಾರಗಳನ್ನು ತೆಗೆದುಕೊಂಡು ಹೋಗುತ್ತಾರೆ. ಸಾಂದಲಗ ಗ್ರಾಮದವರು ಹಾಲಿನ ಬಿಂದಗಿಯನ್ನು ಒತ್ತುಕೊಂಡು ಬರುತ್ತಾರೆ. ಇವರು ಈ ಕೆಲಸಗಳನ್ನು ತಮಗೆ ಇಟ್ಟಪ್ಪ ಕೊಟ್ಟಿದ್ದಾನೆಂದು ಭಾವಿಸಿದ್ದಾರೆ. ಈ ಕೆಲಸಗಳನ್ನು ಮಾಡುವುದಕ್ಕೆ ಹಕ್ಕುಗಳಿವೆ, ಸಾಮಾಜಿಕ ಗೌರವಗಳು ಇವೆ. ಈ ಎಲ್ಲಾ ಭಿನ್ನ ಕಥನಗಳ ವಸ್ತುವನ್ನು ಅನಾವರಣ ಮಾಡುವ ಡೊಳ್ಳಿನ ಹಾಡುಗಳು ಸಿಗುತ್ತವೆ. ಈ ಹಾಡುಗಳು ಇನ್ನೂ ಸಂಗ್ರಹವಾಗಿಲ್ಲ.

೪.೫.೪. ಇಟ್ಟಪ್ಪನ ಸಂಘರ್ಷಗಳು

ಇಟ್ಟಪ್ಪ ದ್ರಾವಿಡ ಅಲೆಮಾರಿ ಪಶುಪಾಲನ ಸಂಸ್ಕೃತಿಗೆ ಸೇರಿದ ವ್ಯಕ್ತಿ. ಪಶುಪಾಲನೆಗಾಗಿ ಪಂಡರಪುರವನ್ನು ಬಿಟ್ಟು ದಕ್ಷಿಣ ನಾಡಿನತ್ತ ವಲಸೆ ಬಂದ ನಂತರ ಈಗಿನ ಕೊಲ್ಲಾಪುರ ತಾಲ್ಲೂಕು ಪಟ್ಟಣಕೊಡಲಿ ಗ್ರಾಮವನ್ನು ಆಡಳಿತದ ಪ್ರಮುಖ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾನೆಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಕರ್ನಾಟಕ-ಮಹಾರಾಷ್ಟ್ರದಲ್ಲಿರುವ ಹಲವು ಇಟ್ಟಪ್ಪ; ವಿಠೋಬನ ದೇವಾಲಯ ಗಳಲ್ಲಿ ಮೂಲಸ್ಥಳ ಪಟ್ಟಣಕೊಡಲಿಯೆಂದು, ತಮ್ಮ ದೈವಗಳು ಪಟ್ಟಣಕೊಡಲಿಯಿಂದಲೇ ವಲಸೆ ಬಂದಿದ್ದಾವೆ ಎಂದು ಹೇಳುವ ಕಥನಗಳು ಸಿಗುತ್ತವೆ. ಇಟ್ಟಪ್ಪ ಪಟ್ಟಣಕೊಡಲಿಗೆ ಬರುವ ವೇಳೆಗಾಗಲೇ ಈ ಸ್ಥಳದಲ್ಲಿ ಮಾತೃಮೂಲ ಸಂಸ್ಕೃತಿಯ ಹೊಲೆ ಮಾದಿಗರು ಪಶಪಾಲನೆ ಮಾಡುತ್ತ ನೆಲೆಸಿದಂತೆ ಕಂಡುಬರುತ್ತದೆ. ಇಟ್ಟಪ್ಪ ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುವುದಕ್ಕೆ ಹೊಲೆ ಮಾದಿಗರ ಜೊತೆ ಸಂಘರ್ಷ ಮಾಡಿರುವ ಸಾಧ್ಯತೆ ಇದೆ. ಬಿಜಾಪುರ, ಬೆಳಗಾಂ, ಸೊಲ್ಲಾಪುರ, ಕೊಲ್ಲಾಪುರ ಮತ್ತು ಸೌದತ್ತಿ ಮುಂತಾದ ಪ್ರದೇಶಗಳತ್ತ ವಲಸೆ ಬಂದ ಪಶುಪಾಲಕರು (ಕುರಿಗಾರರು) ಆ ವೇಳೆಗಾಗಲೇ ನೆಲಸಿದ್ದ ಹೊಲೆಮಾದಿಗರನ್ನು ಸಂಹಾರ ಮಾಡಿ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. ಮೈಲಾರಲಿಂಗ, ಅಮೋಘಸಿದ್ಧ, ಬೀರಪ್ಪ ಮತ್ತು ಮಾಯವ್ವ ಮುಂತಾದವರಲ್ಲಿ ಈ ಅಂಶಗಳು ಪ್ರಧಾನವಾಗಿ ಕಂಡುಬರುತ್ತವೆ. ಆದರೂ ಇಟ್ಟಪ್ಪ ಇವರಿಗಿಂತ ಸ್ವಲ್ಪ ಭಿನ್ನವಾಗಿ ನಿಲ್ಲುತ್ತಾನೆ. ಈತನಲ್ಲಿ ಸಂಹಾರ ಮಾಡಿದ ಲಕ್ಷಣಗಳು ಕಂಡುಬರುವುದಿಲ್ಲ. ಈ ಮಾತನ್ನು ಈಗ ಸಂಗ್ರಹವಾಗಿರುವ ಹಾಡುಗಳನ್ನು ಆಧರಿಸಿ ಹೇಳಲಾಗುತ್ತದೆ. ಶತ್ರುಗಳನ್ನು ಸೋಲಿಸಿ ತನ್ನ ಸೇವಕರನ್ನಾಗಿ ಮಾಡಿಕೊಂಡಿರುವ ಅಂಶಗಳು ಕಂಡುಬರುತ್ತವೆ. ಸಾಂಸ್ಕೃತಿಕ ಹೊಂದಾಣಿಕೆಯ ನಂತರ ಹೊಲೆಮಾದಿಗರು ಇಟ್ಟಪ್ಪನ ಸೇವಕರಾಗಿರಬೇಕು. ಹೊಂದಾಣಿಕೆ ಆಗುವುದಕ್ಕಿಂತ ಮುಂಚೆ ಈ ಎರಡು ವರ್ಗಗಳ ನಡುವೆ ಸಂಘರ್ಷವಾಗಿರುವಂತೆ ಕಾಣಿಸುತ್ತದೆ. ಇಟ್ಟಪ್ಪ ಸ್ಥಳಿಯ ಹೊಲೆಮಾದಿಗರನ್ನು ಸೋಲಿಸುವುದಕ್ಕೆ ಮಾಳಿಂಗರಾಯನ ಸಹಾಯ ತೆಗೆದುಕೊಂಡಿರುವ ಅಂಶಗಳು ಕಂಡುಬರುತ್ತವೆ. ಶೀಗೆಹುಣ್ಣಿಮೆಯಲ್ಲಿ ನಡೆಯುವ ಇಟ್ಟಪ್ಪ ಜಾತ್ರೆಯಲ್ಲಿ ಮಾಳಿಂಗರಾಯನ ಭಕ್ತರು ಇಟ್ಟಪ್ಪನ ರಕ್ಷಕರಾಗಿ ಕಾರ್ಯನಿರ್ವ ಹಿಸುತ್ತಾರೆ. ಇಟ್ಟಪ್ಪ ಪಟ್ಟಣಕೊಡಲಿಗೆ ಬಂದರೆ ಸಂಹಾರ ಮಾಡಿ ಹಬ್ಬ ಮಾಡುವುದಾಗಿ ಇಟ್ಟಪ್ಪನ ಹೆಂಡತಿ 'ಪದ್ಮಬಾಯಿ'ಯ ತವರು ಮನೆಯವರು ಪಣ ತೊಟ್ಟಿರುತ್ತಾರೆ. ಆಗ ಇಟ್ಟಪ್ಪ ಮಾಳಿಂಗರಾಯನ

ಸಹಾಯವನ್ನು ಬೇಡಿ ಸ್ಥಳೀಯವಾಗಿ ನೆಲೆಸಿದ್ದ ಮಾಳಿಂಗರಾಯನ ಭಕ್ತರನ್ನು (ಕುರುಬರನ್ನು) ಮತ್ತು ಹೊಲೆಮಾದಿಗರನ್ನು ಬೆಂಬಲಿಗರನ್ನಾಗಿ ಮಾಡಿಕೊಂಡು ಊರು ಪ್ರವೇಶ ಮಾಡಿರಬೇಕು. ಇಟ್ಟಪ್ಪ ಪಟ್ಟಣಕೊಡಲಿಯಲ್ಲಿ ಈ ವಸ್ತುಗಳನ್ನೊಳಗೊಂಡ ಆಚರಣೆಗಳು ನಡೆಯುತ್ತದೆ. ಇಟ್ಟಪ್ಪ ಪದ್ಮಬಾಯಿಯ ತವರು ಮನೆಯವರನ್ನು ಸೋಲಿಸಿದ ಬಗ್ಗೆಯೂ ಕಥನಗಳು ಸಿಗುತ್ತವೆ.

ಈ ಕಥನದಿಂದ ಇಟ್ಟಪ್ಪ ಮಾತೃಮೂಲ ಸಂಸ್ಕೃತಿ ಮತ್ತು ನೆಲೆಸುಗಾರ ಹೊಲೆಮಾದಿಗರ ಪಶುಪಾಲನ ಸಂಸ್ಕೃತಿಯ ಸಮುದಾಯದ ಜೊತೆ ಸಂಘರ್ಷ ಮಾಡಿರುವ ಅಂಶಗಳು ಕಂಡುಬರುತ್ತವೆ. ಈ ಕಥನ ಅಂಶಗಳನ್ನು ಪ್ರತಿಬಿಂಬಿಸುವ ಅನೇಕ ಆಚರಣೆಗಳು ಈಗಲೂ ನಡೆಯುತ್ತವೆ. ಜಾತ್ರೆ ನಡೆಯುವ ಸಂದರ್ಭದಲ್ಲಿ ಇಟ್ಟಪ್ಪನ ಪೂಜಾರಿ ಗ್ರಾಮದ ಹೊರಗಡೆ ಉಳಿದುಕೊಳ್ಳುತ್ತಾನೆ. ಹೊಲೆಮಾದಿಗರು ಮತ್ತು ಮಾಳಿಂಗರಾಯನ ಭಕ್ತರು ಆತನನ್ನು ರಕ್ಷಣಾತ್ಮಕವಾಗಿ ಗ್ರಾಮದೊಳಗಡೆ ಕರೆದುಕೊಂಡು ಬರುತ್ತಾರೆ. ಹಬ್ಬ ವಿಜೃಂಭಣೆಯಿಂದ ನಡೆಯುತ್ತದೆ. ಪೂಜಾರಿ ಹಲಗ ಹಾಯುವ ಆಚರಣೆಯನ್ನು ಮಾಡುತ್ತಾನೆ. ಲಕ್ಷಾಂತರ ಭಕ್ತರು ಭಂಡಾರ, ಕುರಿ ಉಣ್ಣೆ ಹಾರಿಸುತ್ತಾರೆ. ಈ ಆಚರಣೆಯಲ್ಲಿ ಮಹಿಳೆಯರ ಗುಂಪುಗಳು ಡೊಳ್ಳಿನ ನಾದಕ್ಕೆ ತಕ್ಕಂತೆ ಕುಣಿಯುವ ಮತ್ತು ಇಟ್ಟಪ್ಪನ ಪೂಜಾರಿಯನ್ನು ಬೈಯುವ ಅಣಕದ ನೃತ್ಯ ವಿಶಿಷ್ಟವಾಗಿವೆ. ಈ ಮಹಿಳೆಯರು ಪದ್ಮಬಾಯಿಯ ಭಕ್ತರು. ಈ ನೃತ್ಯಕ್ಕೆ ಇಂತಹ ಮಹಿಳೆಯರು ಅಥವಾ ದೀಕ್ಷೆ ತೊಟ್ಟ ಮಹಿಳೆಯರು ಆಗಬೇಕು ಅನ್ನುವ ನಿಯಮವಿಲ್ಲ. ಯಾವ ಮಹಿಳೆ ಪದ್ಮಬಾಯಿಯನ್ನು ಭಕ್ತಿಯಿಂದ ಆರಾಧಿಸುತ್ತಾರೋ ಅವರ ದೇಹದ(ಮೈಮೇಲೆ)ಲ್ಲಿ ಪದ್ಮಬಾಯಿ ಸೇರಿಕೊಳ್ಳುತ್ತಾಳೆ ಅನ್ನುವ ನಂಬಿಕೆ. ಇವರ ನರ್ತನ ಹಾವ-ಭಾವಗಳು ಇಟ್ಟಪ್ಪನನ್ನು ಬೈಯುವ, ಅವಹೇಳನ ಮಾಡುವಂತೆ ಕಂಡುಬರುತ್ತವೆ. ಇಟ್ಟಪ್ಪ ಪಟ್ಟಣ ಕೊಡಲಿಗೆ ಬರುವುದನ್ನು ಪ್ರತಿರೋಧ ಮಾಡುವ ಕ್ರಮ ಇದು. ಪಟ್ಟಣಕೊಡಲಿಯಲ್ಲಿ ನೆಲೆಸಿದ್ದ ಮಾತೃಪ್ರಧಾನ ಸಂಸ್ಕೃತಿಯನ್ನು ಹೊಡೆದುಹಾಕಿ ಪಿತೃಪ್ರಧಾನ ವ್ಯವಸ್ಥೆಯನ್ನು ಜಾರಿಗೆ ತಂದಿರಬೇಕು. ತನ್ನ ಅಸ್ತಿತ್ವವನ್ನು ಕಳೆದುಕೊಂಡ ಪದ್ಮಬಾಯಿ ಪ್ರತಿರೋಧವನ್ನು ಮಾಡಿರಬೇಕು. ಬೈಯುವ ಚಿತ್ರಣ ಪ್ರತಿರೋಧದ ಸಂಕೇತವಾಗಿ ಕಾಣಿಸುತ್ತದೆ. ಸ್ಥಳೀಯ ಹೊಲೆಮಾದಿಗರು ಮಾತೃಮೂಲ ಸಂಸ್ಕೃತಿಯ ಜೊತೆ ಗುರುತಿಸಿಕೊಳ್ಳುವುದು ಇವರ ಮಾತೃಮೂಲ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ನಾಗುಬಾಯಿ ಪಲ್ಲಕ್ಕಿಯ ಮುಂದೆ ಹೊಲೆಮಾದಿಗರು ಡೊಳ್ಳು ಬಡಿಯುತ್ತಾರೆ. ಹೊಲೆಮಾದಿಗರು ಮಾತೃಪ್ರಧಾನ ಸಂಸ್ಕೃತಿಯಿಂದ ಪಿತೃಪ್ರಧಾನ ಸಂಸ್ಕೃತಿಗೆ ರೂಪಾಂತರವಾದ ಚಿತ್ರಣವನ್ನು ಇಲ್ಲಿ ಕಾಣಬಹುದು. ಇಟ್ಟಪ್ಪ ಪಿತೃಪ್ರಧಾನ ಸಂಸ್ಕೃತಿಯ ನಾಯಕನಾಗಿ ಕಂಡುಬರುತ್ತಾನೆ.

೪.೫.೫. ಇಟ್ಟಪ್ಪನ ಸಾಂಸ್ಕೃತಿಕ ಚಹರೆಯ ತಾತ್ವಿಕತೆ

ಈತ ಬೀರಪ್ಪನ ಸೇವಕ. ಮಾಳಿಂಗರಾಯನ ಗುರು. ಅಮೋಘಸಿದ್ಧನೊಂದಿಗೆ ಸಂಬಂಧವಿರಿಸಿ ಕೊಂಡಿರುವ ಸಾಂಸ್ಕೃತಿಕ ನಾಯಕ. ಭಂಡಾರ ಪಂಥದ ಪ್ರತಿಪಾದಕ. ಶೈವ ಆರಾಧಕ. ಪಶುಪಾಲಕ

(ಕುರಿಗಾರ). ಮೂಲಸ್ಥಳ ಪಂಡರಪುರ. ಪಶುಪಾಲನೆಗಾಗಿ ಬೀರಪ್ಪ, ಮಾಳಿಂಗರಾಯರ ಜೊತೆ ಸಂಬಂಧ ಬೆಳಸಿಕೊಳ್ಳುತ್ತಾನೆ. ಸಪ್ತಮಾತೃಕೆಯರ ಮಾರ್ಗದರ್ಶನದಲ್ಲಿ ಕುರಿಗಳನ್ನು ಕಾಯುವ ವೃತ್ತಿಯನ್ನು ಕಲಿತುಕೊಂಡು ದಕ್ಷಿಣ ದೇಶಗಳತ್ತ ವಲಸೆ ಬಂದ ವ್ಯಕ್ತಿ ಈತ. ಆದರೆ ಶಂಬಾ ಅವರು "ಇಟ್ಟಪ್ಪ ಸಿಂಧೂ ನದಿಯ ಉಪನದಿಯಾದ 'ಚಿನಾಬನದಿ' ಮೂಲದ ದೈವ. ಅಲ್ಲಿ ಪಶುಗಳ ಸಂರಕ್ಷಣೆಗಾಗಿ ವೀರ ಮರಣ ಹೊಂದಿದ. ಕೆಲವು ದಶಕಗಳ ನಂತರ ಜನಪದ ದೈವವಾಗಿ ಪ್ರಸಿದ್ಧಿಗೆ ಬಂದ. ಈಗಲೂ ಚಿನಾಬನದಿ ತೀರದಲ್ಲಿ ಇಟ್ಟಪ್ಪನ ತೀರ್ಥ ಕ್ಷೇತ್ರವಿದೆ. ಅಲ್ಲಿ ಕುರುಬರ (ದನಗಾರರ) ದೈವವಾಗಿ ಆರಾಧನೆಗೆ ಒಳಗಾಗುತ್ತಿದ್ದಾನೆ. ಆ ಪ್ರದೇಶದ ದನಗಾರರು ದಕ್ಷಿಣಕ್ಕೆ ವಲಸೆ ಬರುವಾಗ ತಮ್ಮೊಂದಿಗೆ ಈ ದೈವವನ್ನು ಮೂರ್ತಿರೂಪದಲ್ಲಿ ಕರೆತಂದರು. ಭೀಮಾನದಿ ತೀರದಲ್ಲಿ ಪ್ರತಿಷ್ಠಾಪಿಸಿದರು. ಅವತ್ತಿನಿಂದ ಇವತ್ತಿನವರೆಗೂ ದನಗಾರರು (ಕುರುಬರು) ಆರಾಧನೆ ಮಾಡಿಕೊಂಡು ಬಂದಿದ್ದಾರೆ. ಜೊತೆ ಈತನ ವ್ಯಕ್ತಿ ಚರಿತ್ರೆಯನ್ನು ಕುರಿತು ಹಲವು ಕಥನಗಳನ್ನು ತಮ್ಮ ಮೌಖಿಕ ಪರಂಪರೆಯಲ್ಲಿ ಹಾಡುತ್ತಾರೆ".[೧೨೩] ಶಂಬಾ ಅವರು ಹೇಳುವಂತೆ ಡೊಳ್ಳಿನ ಹಾಡುಗಳು ಮತ್ತು ಇಟ್ಟಪ್ಪನನ್ನು ಕುಲದೈವವನ್ನಾಗಿ ಮಾಡಿಕೊಂಡಿರುವ ಕರ್ನಾಟಕದ ಇತರ ಪಶುಪಾಲನ ಸಮುದಾಯಗಳ ಮೌಖಿಕ ಅಭಿವ್ಯಕ್ತಿಯಲ್ಲಿ 'ಚಿನಾಬ' ನದಿಯ ಉಲ್ಲೇಖ ಕಂಡುಬರುವುದಿಲ್ಲ. ಪಂಡರಪುರದಿಂದಲೇ ಇಟ್ಟಪ್ಪನ ಚರಿತ್ರೆಯನ್ನು ಆರಂಭಿಸುತ್ತವೆ. ಗೌಳಿಗರು, ಸೋಲಿಗರು ಇಟ್ಟಪ್ಪನನ್ನು ಆರಾಧಿಸುವ ಪ್ರಮುಖ ಸಮುದಾಯಗಳು. ಈ ಸಮುದಾಯಗಳು ನಾವು ಪಂಡರಪುರದಿಂದ ವಲಸೆ ಬಂದವರೆಂದು ಹೇಳಿಕೊಳ್ಳುತ್ತವೆ. ದನಗಾರರು ಇದಕ್ಕೆ ಹೊರತಾಗಿಲ್ಲ. ಪಂಡರಪುರದಿಂದಲೇ ಇಟ್ಟಪ್ಪನ ಚರಿತ್ರೆಯನ್ನು ಅನಾವರಣ ಮಾಡುತ್ತವೆ.

ಇಟ್ಟಪ್ಪನನ್ನು ಕುಲದೈವಗಳನ್ನಾಗಿ ಮಾಡಿಕೊಂಡಿರುವ ಹಲವು ದ್ರಾವಿಡ ಪಶುಪಾಲನ ಸಮುದಾಯಗಳು ಹಾಲುಮತ ಸಂಸ್ಕೃತಿಯಿಂದ ವಿಸ್ತೃತಗೊಂಡಿರುವ ಸಮುದಾಯಗಳಾಗಿವೆ. ಗೌಳಿಗರು, ಗೊಂಡರು, ಗೊಲ್ಲರು, ಯಾದವರು, ಹಂಡೆ ಕುರುಬರು, ಸೋಲಿಗರು, ಕಾಡುಕುರುಬರು, ಜೇನು ಕುರುಬರು, ಒಕ್ಕಲಿಗರು, ಮ್ಯಾಸಬೇಡರು, ಹೊಲೆಮಾದಿಗರು ಹಾಗೂ ಇನ್ನೂ ಮುಂತಾದ ದ್ರಾವಿಡ ಪಶುಪಾಲನ ಸಮುದಾಯಗಳು ಹಾಲುಮತ ಸಮುದಾಯದಿಂದ ಪ್ರತ್ಯೇಕಗೊಂಡಿರುವ ಸಮುದಾಯಗಳೆಂದು ಸಂಶೋಧಕರು ಗುರುತಿಸಿದ್ದಾರೆ. ಪಶುಪಾಲನೆ ವೃತ್ತಿಯಲ್ಲಿ 'ಕುರಿಗಾರಿಕೆ' ಮತ್ತು 'ದನಗಾರಿಕೆ' ವೃತ್ತಿಗಳು ಕವಲೊಡೆದು ಪ್ರತ್ಯೇಕ ಅಸ್ತಿತ್ವ ಕಂಡುಕೊಂಡಾಗ ಈ ಸಮುದಾಯಗಳು ಈಗಿರುವ ಹಾಲುಮತ ಸಮುದಾಯದಿಂದ ಪ್ರತ್ಯೇಕವಾಗಿರುವುದಕ್ಕೆ ಸಾಧ್ಯತೆ ಇದೆ. ಇವತ್ತಿನ ಹಾಲುಮತ ಸಮುದಾಯವೂ ಕುರಿಗಾರಿಕೆ ವೃತ್ತಿಗಾಗಿ ಪ್ರತ್ಯೇಕಗೊಂಡಿರುವ ಸಮುದಾಯ. ಆದರೆ 'ಹಾಲುಮತ' ಮತ್ತು 'ಕುರುಬ' ಅನ್ನುವ ಪದದ ಪರಿಕಲ್ಪನೆಯನ್ನು ಪ್ರಾಚೀನ ಕಾಲದ ನೆಲೆಯಲ್ಲಿಯೇ ಬಲವಾಗಿ ಪ್ರತಿಪಾದನೆ ಮಾಡುತ್ತ ಮುನ್ನಡೆದುಕೊಂಡು ಬಂದಿದೆ. ಹಲವು ಪಶುಪಾಲನ ಸಮುದಾಯಗಳು ತಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ಹಾಲುಮತ ಸಂಸ್ಕೃತಿಯಿಂದಲೇ ಆರಂಭಿಸಿಕೊಳ್ಳುತ್ತವೆ. ಆರಾಧಿಸುವ

ಆರಾಧ್ಯ ದೈವಗಳು, ಕುಲದೈವಗಳು ಒಂದೇ ಆಗಿವೆ. ಉದಾಹರಣೆಗೆ ಸೋಲಿಗರಿಗೆ ಇಟ್ಟಪ್ಪ ಕುಲದೈವ. ಇವರು ತಮ್ಮ ಕುಲಮೂಲವನ್ನು ಹೇಳುವಾಗ 'ಕುರುಬ ಕುಲದಿಂದ' ಆರಂಭಿಸಿಕೊಳ್ಳುತ್ತಾರೆ. 'ಬಿಳಿಗಿರಿರಂಗ'ನ ಕಾವ್ಯದಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ. ಗೌಳಿಗರು ಇದಕ್ಕೆ ಹೊರತಾಗಿಲ್ಲ. ವಿಠೋಬಾ, ಖಂಡೋಬಾ ಮತ್ತು ಬೀರೋಬಾ ದೈವಗಳನ್ನು ಕುಲದೈವಗಳನ್ನಾಗಿ ಮಾಡಿಕೊಂಡಿದ್ದಾರೆ. ಇವರಲ್ಲಿ ಈ ಮೂರು ದೈವಗಳನ್ನು ಸಂಯುಕ್ತಗೊಳಿಸಿ ಆರಾಧನೆ ಮಾಡುತ್ತಿದ್ದಾರೆ. ಈ ಸಾಂಸ್ಕೃತಿಕ ವೀರರು ಅಣ್ಣತಮ್ಮಂದಿರೆಂದು ಹೇಳುವ ಕಥನಗಳು ಇವರಲ್ಲಿವೆ. ಕರ್ನಾಟಕ-ಮಹಾರಾಷ್ಟ್ರದ ಗಡಿಭಾಗದಲ್ಲಿ ಬೀರಪ್ಪ-ಇಟ್ಟಪ್ಪ ದೈವಗಳನ್ನು ಸಂಯುಕ್ತಗೊಳಿಸಿ ಹಾಲುಮತಸ್ಥರು ಆರಾಧನೆ ಮಾಡುತ್ತಾರೆ. ಈ ಎರಡು ದೈವಗಳು ಅಣ್ಣ-ತಮ್ಮಂದಿರು ಅನ್ನುವ ಕಥನಗಳು ಈ ಪ್ರದೇಶದಲ್ಲಿ ಪ್ರಚಲಿತದಲ್ಲಿವೆ. ಇಟ್ಟಪ್ಪನನ್ನು ಆರಾಧನೆ ಮಾಡುವ ಪಶುಪಾಲನ ಸಮುದಾಯಗಳು ಮತ್ತು ಡೊಳ್ಳಿನ ಹಾಡುಗಳು ಇಟ್ಟಪ್ಪ ಶೈವನೆಂದು, ಪಶುಪಾಲಕನೆಂದು; ಪಶುಪಾಲಕರ ಆರಾಧ್ಯ ದೈವವೆಂದು ಪ್ರತಿಪಾದನೆ ಮಾಡುತ್ತವೆ. ಆದ್ದರಿಂದ ಇಟ್ಟಪ್ಪ ಮೂಲತಃ ಶೈವನೆಂದು ಒಪ್ಪಿಕೊಳ್ಳಬಹುದು.

ಮೂಲತಃ ಶೈವ ದೈವನಾದ ಇಟ್ಟಪ್ಪನನ್ನು 'ವೈಷ್ಣವ ಧರ್ಮ' ತನ್ನ ಧರ್ಮವನ್ನು ವಿಸ್ತರಣೆ ಮಾಡುವುದಕ್ಕೆ ವಿಠಲನನ್ನಾಗಿ ರೂಪಾಂತರಿಸಿಕೊಂಡಿತು. ಈ ಕಾರ್ಯದಲ್ಲಿ ಪ್ರಮುಖವಾಗಿ ಕಾರ್ಯ ನಿರ್ವಹಿಸಿದವರು ರಾಮಾನುಜಾಚಾರ್ಯರು. "ಇಟ್ಟಪ್ಪನಲ್ಲದೆ ಇಟ್ಟಪ್ಪನ ಜೊತೆ ಆರಾಧನೆಗೆ ಒಳಗಾಗುತ್ತಿದ್ದ ಬೀರಪ್ಪನನ್ನು ಸಹ ಶ್ರೀನಿವಾಸನನ್ನಾಗಿ ರೂಪಾಂತರಿಸಿದರು. ಜೊತೆಗೆ ವಿಠಲನನ್ನು ಪ್ರಧಾನಧಾರೆಗೆ ತರುವುದಕ್ಕೆ ಪ್ರಯತ್ನಿಸಿದರು. ಇದರಿಂದ ಬೀರೇಶ್ವರ, ವೀರೇಶ್ವರ, ಶ್ರೀನಿವಾಸನ ಚರಿತ್ರೆ ಲೋಪಗೊಂಡಿತು. ಶೈವಧರ್ಮಿಯನಾದ ಇಟ್ಟಪ್ಪನನ್ನು ವೈಷ್ಣವ ಧರ್ಮದ 'ವಿಠಲ'ನನ್ನಾಗಿ ಮುಂಚೂಮಿಯಲ್ಲಿ ಪ್ರಚಲಿತಕ್ಕೆ ಬಂದ. ಆ ಬಳಿಕ ಮೌಖಿಕ ಪರಂಪರೆಯಲ್ಲಿ ಪ್ರಚಲಿತವಿದ್ದ ಇವರ ಲೌಕಿಕ ಚರಿತ್ರೆಯನ್ನೇ ಎಲ್ಲ ಲೋಕಧರ್ಮೀಯ ಭಾವನೆ ಸಹಿತ ವೈಷ್ಣವ ದೃಷ್ಟಿಯ ಬಣ್ಣ ನೀಡಿ ಜನರೆದುರು ಸ್ಥಳಪುರಾಣ ರೂಪದಲ್ಲಿ ಮಂಡಿಸಿದರು".[೧೨] ಕೆಲವು ಸಮುದಾಯಗಳು ಶೈವ-ವೈಷ್ಣ ಧರ್ಮಗಳಲ್ಲಿ ಇಟ್ಟಪ್ಪನ ಚರಿತ್ರೆಯನ್ನು ಅನಾವರಣ ಮಾಡಿ ವೈದಿಕಗೊಳಿಸುವ ವಿಧಾನವನ್ನು ರೂಢಿಸಿಕೊಂಡವು. ಸೋಲಿಗರು ಹಾಡುವ ಬಿಳಿಗಿರಿರಂಗನ ಕಾವ್ಯ ಈ ಪರಿಕಲ್ಪನೆಯ ವಸ್ತುವನ್ನು ಒಳಗೊಂಡಿರುವಂತದ್ದು.[೧೩] ಇದರಿಂದ ಇಟ್ಟಪ್ಪ (ವಿಠೋಭಾ) ಮತ್ತು ಬೀರಪ್ಪ ಹಾಗೂ ಬೀರಪ್ಪನ ಪಂಥದವರ (ಶೈವಧರ್ಮದ ಪ್ರತಿಪಾದಕರ) ಜೊತೆಗೆ ಇದ್ದ ಸಂಯುಕ್ತ ಸಾಂಸ್ಕೃತಿಕ ಚರಿತ್ರೆ ವಿಸ್ಮೃತಿ ಆಯಿತು. ಈ ವಿಸ್ಮೃತಿಗೆ ರಾಜ ಬೆಂಬಲವೂ ಆಶ್ರಯ ಒದಗಿಸಿತು. ರಾಮಾನುಜಾಚಾರ್ಯರು ಇಟ್ಟಪ್ಪ ಮತ್ತು ಬೀರಪ್ಪ ದೇವಾಲಯಗಳನ್ನು ವೈಷ್ಣವೀಕರಿಸುವಾಗ ಸ್ಥಳೀಯ ಶೈವರು ರಾಜರಿಗೆ ದೂರು ಸಲ್ಲಿಸಿದರು. ರಾಜ ವೈಷ್ಣವ ಧರ್ಮದ ಪರ ತೀರ್ಪು ಕೊಡುತ್ತಾನೆ. ಆದರೆ ರಾಜರು ಶೈವಧರ್ಮೀಯರ ಪರ ಇರುತ್ತಿರಲಿಲ್ಲ. ವೈಷ್ಣವ ಧರ್ಮದ ಪರ ನಿಲ್ಲುತ್ತಿದ್ದರು. ಅಂತಹ ರಾಜರಲ್ಲಿ ವಿಜಯನಗರ ಅರಸರು ಪ್ರಮುಖರು. ಹಾಗಾಗಿ ವೈಷ್ಣವ ಧರ್ಮ ೧೩-೧೭ನೇ ಶತಮಾನದಲ್ಲಿ ಹೆಚ್ಚು ಪ್ರಚಲಿತಕ್ಕೆ ಬಂತು.

ಸ್ಥಳೀಯ ಶೈವರು ವೈಷ್ಣವ ಧರ್ಮಕ್ಕೆ ರೂಪಾಂತರವಾಗುತ್ತಾ ತಾವು ಆರಾಧಿಸುತ್ತಿದ್ದ ಶೈವ ಇಟ್ಟಪ್ಪ ನನ್ನು ವೈಷ್ಣವ ವಿಠಲನನ್ನು ತಮ್ಮವನೆಂದು ಆರಾಧನೆ ಮಾಡುವುದಕ್ಕೆ ಆರಂಭಿಸಿದರು. ಇದರಿಂದ ಇಟ್ಟಪ್ಪನ ಪಶುಪಾಲನ ಮತ್ತು ಶೈವಧರ್ಮದ ಸಂಸ್ಕೃತಿ ವಿಸ್ಮೃತಿ ಆಯಿತು. ವೈಷ್ಣವ ಧರ್ಮೀಯರು ಅಥವಾ ವಿಠಲನ ವೈಷ್ಣವ ತಾಣಗಳು ಇಟ್ಟಪ್ಪನ ಶೈವ ಧರ್ಮದ ಪಾರಂಪರಿಕ ಚಹರೆಯನ್ನು ಕಟ್ಟಿಕೊಡುವ ಹಲವು ಆಚರಣೆಗಳನ್ನು ಅಪ್ರಜ್ಞಾಪೂರ್ವಕವಾಗಿಯೋ ಅಥವಾ ಪ್ರಜ್ಞಾಪೂರ್ವಕವಾಗಿಯೋ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಉದಾಹರಣೆ; ಕಂತೆಸೇವೆ, ಪಂಡರಾಪುರ, ತಿರುಪತಿ ಮುಂತಾದ ವೈಷ್ಣವ ವಿಠಲನ ಆರಾಧ್ಯ ಸ್ಥಳಗಳಲ್ಲಿ ಕಿರಿಯ ಕಂತೆಯನ್ನು ಅರ್ಪಿಸುವ ಆಚರಣೆ ಪ್ರಚಲಿತದಲ್ಲಿದೆ "ತೀರಾ ಇತ್ತೀಚಗೆ ಪಂಡರಪುರದ ಕುರುಬರು ವಿಠಲನಿಗಾಗಿ ಸೂರತ್‌ದಿಂದ ಹೆಣೆದು ತರಿಸಿದ ಭವ್ಯವಾದ ಕಂಬಳಿಯನ್ನು ಅರ್ಪಿಸಿದರು".[೧೨೬] ಕಂತೆಸೇವೆ ಪರಂಪರೆಯಿಂದಲೂ ಹಾಲುಮತಸ್ಥರಲ್ಲಿ ರೂಢಿಯಲ್ಲಿರುವ ಪ್ರಮುಖ ಆಚರಣೆ. ತಮ್ಮ ಕುಲದೈವಗಳಾದ ರೇವಣಸಿದ್ಧ, ಸಿದ್ಧರಾಮ ಮತ್ತು ಬೀರಪ್ಪರಿಗೆ ಹನ್ನೆರಡು ವರ್ಷಕ್ಕೊಮ್ಮೆ ಅಥವಾ 'ಕಂತೆ' ಮುಪ್ಪು ಆದಾಗ ಈ ಆಚರಣೆಯನ್ನು ಮಾಡುತ್ತಾರೆ. ಈ ಆಚರಣೆ ಈಗ ಚಿಕ್ಕಮಗಳೂರು, ಹಾಸನ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಹಾಲುಮತಸ್ಥರಲ್ಲಿ ಹೆಚ್ಚು ಪ್ರಚಲಿತವಿದೆ. ಹಾಗಾಗಿ ವಿಠಲ ವೈಷ್ಣವನೆಂದು ಪ್ರತಿಪಾದನೆ ಮಾಡಿದರಾದರೂ ಶೈವ ಧರ್ಮದ ವಾಸ್ತವ ಚಿತ್ರಣದಿಂದ ಸಂಪೂರ್ಣವಾಗಿ ವಿಸ್ಮೃತಿಗೊಳಿಸಲು ಸಾಧ್ಯವಾಗಲಿಲ್ಲ. ಈಗ ವೈಷ್ಣವ ಧರ್ಮ ಕಟ್ಟಿಕೊಟ್ಟಿರುವ ವಿಠಲನ ಚರಿತ್ರೆಗಿಂತ ಭಿನ್ನವಾದ ಚರಿತ್ರೆ ಶೈವ ಧರ್ಮದಲ್ಲಿದೆ. ಹಾಗಾಗಿ ಶೈವ ಧರ್ಮದ ವಿಠಲ (ಇಟ್ಟಪ್ಪ)ನನ್ನು ಅಧ್ಯಯನ ಮಾಡಬೇಕು. ಇದಕ್ಕೆ ಇಟ್ಟಪ್ಪನನ್ನು ಕುರಿತು ಹಾಡುವ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಬೇಕು. ಈ ಹಾಡುಗಳನ್ನು ಇಟ್ಟುಕೊಂಡು ದ್ರಾವಿಡ ಪಶುಪಾಲನ ಸಮುದಾಯಗಳಲ್ಲಿರುವ ವಿಠಲ(ಇಟ್ಟಪ್ಪ)ನ ಆಚರಣೆಗಳನ್ನು, ಮೌಖಿಕ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡುವುದರ ಮುಖಾಂತರ ಶೈವ ಧರ್ಮದ ಇಟ್ಟಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಬೇಕು. ಇದು ಶೈವ ಪಶುಪಾಲನ ಸಂಸ್ಕೃತಿಯ ಸಾಂಸ್ಕೃತಿಕ ನಾಯಕರ ಮೇಲೆ ಆದ ಅನ್ಯಧರ್ಮಗಳ ಪ್ರಭಾವವನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತದೆ.

೪.೬. ಬುಳ್ಳಪ್ಪ

೪.೬.೧. ಪ್ರವೇಶ

ಬುಳ್ಳಪ್ಪ ಹಾಲುಮತ ಸಾಂಸ್ಕೃತಿಕ ವೀರ. ಸಿದ್ಧಪ್ಪ ಮೇಟಿ ಅವರು ಹಾಡಿರುವ 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ಮತ್ತು ಶ್ರೀ ಅಡಿವೆಪ್ಪ ಮಹಾರಾಯ ಅವರು, ಹಾಡಿರುವ ಮಾಳಿಂಗ ರಾಯನ ಕಾವ್ಯದಲ್ಲಿ ಈತನ ಪರಿಚಯ ಸಿಗುತ್ತದೆ. ಅಲ್ಲಿ ಬುಳ್ಳಪ್ಪ ಕೇವಲ ಉಲ್ಲೇಖವಾಗಿ ಬಂದು ಹೋಗುತ್ತಾನೆ. ಇದೇ ರೀತಿಯ ಉಲ್ಲೇಖಿತ ಚಿತ್ರಣ ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣದಲ್ಲಿ ಸಿಗುತ್ತದೆ. ರಸ್ತಾಪುರ ಭೀಮಕವಿಯ ಹಾಲುಮತ ಪುರಾಣ ಜನಪದ ಹಾಲುಮತ ಮಹಾಕಾವ್ಯದ ಲಿಖಿತರೂಪ. ಹಾಗಾಗಿ ಮಹಾಕಾವ್ಯದಲ್ಲಿ ಕಾಣಿಸುವ ಚಿತ್ರಣಗಳಿಗೂ ಹಾಲುಮತ

ಪುರಾಣದಲ್ಲಿ ಕಾಣಿಸುವ ಚಿತ್ರಣಗಳಿಗೂ ಅಂತಹ ವ್ಯತ್ಯಾಸಗಳಿಲ್ಲ. ಶ್ರೀ ಅಡಿವೆಪ್ಪ ಮಹಾರಾಯ ಅವರು ಮಾಳಿಂಗರಾಯನ ಕಾವ್ಯಕ್ಕೆ ನೀಡಿರುವ ಸಂದರ್ಶನದಲ್ಲಿ ಬಿಜ್ಜರಗಿಯ ಬುಳ್ಳಪ್ಪನ ದೇವಾಲಯ ನಮ್ಮ ವ್ಯಾಪ್ತಿಗೆ ಬರುವಂತಹದ್ದು. ಅದರ ಹಕ್ಕು ನಮಗಿದೆ. ಬುಳ್ಳಪ್ಪ ಮಾಳಪ್ಪನ ಸಾಕು ಮಗ ಅಂತ ಹೇಳಿದ್ದಾರೆ. ಬಿಜ್ಜರಗಿ ಪ್ರದೇಶದಲ್ಲಿ ಈತನ ಬಗ್ಗೆ ಸಾಕಷ್ಟು ಡೊಳ್ಳಿನ ಹಾಡುಗಳು, ಜನಪದ ಗೀತೆಗಳು, ಪುರಾಣಗಳು, ಕಥೆಗಳು ಮತ್ತು ಐತಿಹ್ಯಗಳು ಇವೆ. ಅವುಗಳಿನ್ನು ಸಂಗ್ರಹವಾಗಿಲ್ಲ. ಡೊಳ್ಳುಹಾಡುಗಾರ ಶ್ರೀ ಸೋಮಲಿಂಗ ಬಿಜ್ಜರಗಿ ಈತನ ಬಗೆಗೆ ಮಹಾಕಾವ್ಯ ಹಾಡುತ್ತಾನೆ. ಈಗಾಗಲೇ ಕ್ಯಾಸೆಟ್‌ಗಾಗಿ ಬಿಡಿ ಬಿಡಿ ಡೊಳ್ಳಿನ ಹಾಡುಗಳನ್ನು ಹಾಡಿದ್ದಾನೆ. ಸ್ಪರ್ಧೆಗಾಗಿ ಬಳಸಿಕೊಳ್ಳುತ್ತಿದ್ದಾನೆ. ಅವುಗಳನ್ನು ಸಂಗ್ರಹ ಮಾಡಿದರೆ ಪ್ರಾಥಮಿಕ ಹಂತದ ಪರಿಚಯ ಆಗಬಹುದು. ಪ್ರಸ್ತುತ ಅಧ್ಯಯನಕ್ಕಾಗಿ ಆರು ಬಿಡಿ ಹಾಡುಗಳನ್ನು ಸಂಗ್ರಹ ಮಾಡಲಾಗಿದೆ. ಜೀವನ ಚರಿತ್ರೆಯ ಬಗೆಗೆ ಚರ್ಚೆ ಮಾಡಿದೆ. ಆ ಹಾಡುಗಳನ್ನು ಮತ್ತು ಚರ್ಚೆಯನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ.

ನೆಲೆ ಮತ್ತು ಕಾರ್ಯಕ್ಷೇತ್ರ

ಬಿಜಾಪುರ ಜಿಲ್ಲೆ ಬಿಜ್ಜರಗಿಯ ಊರ ಹೊರಗಡೆ ಸುಮಾರು ಒಂದು ಕಿ.ಮೀ ವ್ಯಾಪ್ತಿಯಲ್ಲಿ ಈತನ ಸಮಾಧಿ ಇದೆ. ಇದನ್ನು 'ಪೂಜಾರಿ' ಕುಲಕ್ಕೆ ಸೇರಿದ ಹಾಲುಮತದವರು ಪೂಜೆ ಮಾಡುತ್ತಾರೆ. ತನ್ನ ಬುಳ್ಳಪ್ಪ ಜೀವಿತದ ಅವಧಿಯಲ್ಲಿ ಬಿಜಾಪುರ ಜಿಲ್ಲೆ ಬಿಜಾಪುರ, ಬಬಲೇಶ್ವರ, ಸಿಂದಗಿ, ಇಂಡಿ, ಗುಲಬರ್ಗಾ ಜಿಲ್ಲೆ ಶಹಾಪುರ, ಸುರಪುರ, ಜೇವರ್ಗಿ ಮಹಾರಾಷ್ಟ್ರದ ರಾಜ್ಯದ ಸೊಲ್ಲಾಪುರ ಜಿಲ್ಲೆ ಮಾನಖೆಡ್ ತಾಲ್ಲೂಕಿನ ಹಲವು ಭಾಗಗಳಲ್ಲಿ ಅಲೆದಾಡಿರುವ ಮತ್ತು ಪವಾಡ ಮಾಡಿರುವ ಉಲ್ಲೇಖಗಳು ಸಿಗುತ್ತವೆ. ಈತನ ಜೊತೆ ಸಂಘರ್ಷ ಮಾಡಿರುವ ವ್ಯಕ್ತಿಗಳ ಸ್ಥಳಗಳು ಇವೆ. ಮಾಳಪ್ಪನ ಸಾಕು ಮಗ. ಬೀರಪ್ಪನ ಸೇವಕ (ಪೂಜಾರಿ) ಆಗಿರುವುದರಿಂದ ಇವರಿಬ್ಬರ ಕಾರ್ಯವ್ಯಾಪ್ತಿ ಈತನ ಕಾರ್ಯವ್ಯಾಪ್ತಿ. ಇವತ್ತು ಬಿಜ್ಜರಗಿ ಪ್ರದೇಶದ ಹಾಲುಮತಸ್ಥರಿಗೆ ಕುಲದೈವ, ಮನೆದೈವವಾಗಿದ್ದಾನೆ. ಗಾಣಿಗ ಮತ್ತು ಇತರ ಸಮುದಾಯದವರಿಗೂ ಆರಾಧ್ಯ ದೈವವಾಗಿದ್ದಾನೆ.

೪.೬.೨. ಬುಳ್ಳಪ್ಪನ ಜನನ; 'ಇಷ್ಟಲಿಂಗ' ಮತ್ತು 'ಹುಟ್ಟುಲಿಂಗದ' ಸಂಘರ್ಷ

ಬುಳ್ಳಪ್ಪನ ಹುಟ್ಟಿಗೆ ಧಾರ್ಮಿಕ ಮಹತ್ವವಿದೆ. ಲಿಂಗವಂತ ಕುಟುಂಬ ಸೋತು ಶರಣಾದ ನೆನಪು ಇದೆ. ಹಾಗಾಗಿ ಈತನ ಹುಟ್ಟು ವಿಶೇಷ. ಜನ್ಮಪಡೆಯುವುದಕ್ಕಿಂತ ಮುಂಚೆ ಹಾಲುಮತ ಧರ್ಮದ ಮಠದ ಸೇವಕನಾಗಿ, ಮಾಳಪ್ಪನ ಶಿಷ್ಯನಾಗಿ ಮೀಸಲಾಗುತ್ತಾನೆ. ಆದರೆ ಮಾಳಪ್ಪ ಅಥವಾ ಇತರ ದೈವದ ವರಪುತ್ರ ಅಲ್ಲ. ತಂದೆ ವೆಂಕಣ್ಣಗೌಡ. ತಾಯಿ ಶಿವಲಿಂಗಮ್ಮ. ಹುಟ್ಟಿ ಹದಿನಾರನೇ ದಿವಸದಲ್ಲಿ ತಂದೆ ತಾಯಿ, ಮನೆತನದಿಂದ ಅಗಲುತ್ತಾನೆ. ಮತ್ತೆ ಯಾವತ್ತೂ ತಂದೆ ತಾಯಿಯನ್ನು ಕೂಡದ ವ್ಯಕ್ತಿಯಾಗಿ ಮಾಳಪ್ಪನ ಮಠದಲ್ಲಿ ಬೆಳೆಯುತ್ತಾನೆ. ಒಂದು ಮಗುವನ್ನು ಪಡೆಯುವುದಕ್ಕಾಗಿಯೇ ಮಾಳಪ್ಪ ಉದ್ದೇಶಪೂರ್ವಕವಾಗಿ ಅಥವಾ 'ಲಿಂಗವಂತರ' ಮನೆಯಿಂದ ಶಿಷ್ಯನನ್ನು ಪಡೆಯಬೇಕು

ಅನ್ನುವ ಹಂಬಲದಿಂದ ವೆಂಕಣ್ಣಗೌಡನ ಜೊತೆ ಸಂಘರ್ಷ ಮಾಡಿದಂತೆ ಕಾಣುತ್ತದೆ. ಅಂದರೆ ಬುಳ್ಳಪ್ಪನ ಮನೆತನದವರು ಲಿಂಗವಂತರು. "ಅವ್ರ ಮನಿಯಾಗ ಭೂಮಿಗೆ ಲಿಂಗ, ಸೀಮಿಗೆ ಲಿಂಗ, ಎತ್ತಿಗೆ ಲಿಂಗ, ತುತ್ತಿಗೆ ಲಿಂಗ, ಬಳಚಿಗೆ ಲಿಂಗ, ಬಾಯಿಗೆ ಲಿಂಗ, ಕೈಗೆಲಿಂಗ, ಅರುವಾಳಕಿ ಲಿಂಗ ಸರ್ವೊಂದಕ್ಕೆ ಲಿಂಗ ಕಟ್ಟಿಕೊಂಡಿದ್ದರು". ಇಷ್ಟಲಿಂಗ ಅರಾಧಕರು. ಮಾಳಪ್ಪ ಇಷ್ಟಲಿಂಗದ ವಿರೋದಿ. ಈತನಷ್ಟೆ ಅಲ್ಲ ಹಾಲುಮತದ ಸಾಂಸ್ಕೃತಿಕ ವೀರರು ಇಷ್ಟಲಿಂಗ ವಿರೋಧಿಗಳು. "ಕುರುಬರು ಹುಟ್ಟು ಲಿಂಗದವರು ಲಿಂಗಾಯತರು ಕಟ್ಟುಲಿಂಗದವರು" ಎನ್ನುವ ಜನಪದ ಗಾದೆ ಹುಟ್ಟಿದ್ದು ಈ ಹಿನ್ನೆಲೆಯಲ್ಲಿ. ಇದು ಶ್ರೇಷ್ಠ ಮತ್ತು ಕನಿಷ್ಠ ಅನ್ನುವ ಪರಿಕಲ್ಪನೆಯ ಕಥನವನ್ನು ಪ್ರತಿಬಿಂಬಿಸುತ್ತದೆ. ನಾವು ಹುಟ್ಟುಲಿಂಗದವರು ನಾವೇ ಮೂಲ ಮತ್ತು ಶ್ರೇಷ್ಠ ಅಂತ ಹಾಲುಮತಸ್ಥರು. ನಾವು ಲಿಂಗ ಕಟ್ಟುತ್ತೇವೆ. ನಾವೇ ಶ್ರೇಷ್ಠ ಅಂತ ಲಿಂಗಾಯತರು. ಅವರ ಸಂಘರ್ಷದ ನೆನಪು ಈ ಗಾದೆ. ಹುಟ್ಟು ಲಿಂಗದವರು ಕಟ್ಟುಲಿಂಗದವರೊಡನೆ, ಕಟ್ಟುಲಿಂಗದವರು ಹುಟ್ಟುಲಿಂಗದವರೊಡನೆ ಸಾಕಷ್ಟು ಕಾದಾಟ ಮಾಡಿದ್ದಾರೆ. ಕೆಲವು ಕಡೆ ಸಂಕರಶೀಲವು ಆಗಿದೆ. ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧರಾಮ, ಅಮೋಘಸಿದ್ಧ ಮತ್ತು ವೀರಗೊಲ್ಲಾಳ ಸಂಕರಶೀಲ ಸಂಸ್ಕೃತಿಯ ಪ್ರತಿಪಾದಕರು. ಆದರೂ ಇವರ್‍ಯಾರು ಕಟ್ಟುಲಿಂಗವನ್ನು ಕಟ್ಟಲೇ ಇಲ್ಲ. ಸಿದ್ಧರಾಮ ದೊಡ್ಡ ಪ್ರತಿರೋಧ ಮಾಡಿದ. ಚನ್ನಬಸವಣ್ಣನ ಜೊತೆ ವಾಗ್ವಾದಕ್ಕೆ ಇಳಿಯುತ್ತಾನೆ. ಇದಕ್ಕೆ ಸಾಕ್ಷಿ. ಸಿದ್ಧರಾಮ ಲಿಂಗವನ್ನು ಕಟ್ಟದೆ ಇರುವುದಕ್ಕೆ ಚೆನ್ನಬಸವಣ್ಣ ದೀಕ್ಷೆ ನೀಡಲು ನಿರಾಕರಿಸಿದ. ಆದರೂ ಲಿಂಗ ಸಿದ್ಧರಾಮ ಕಟ್ಟಿಕೊಳ್ಳುವುದಿಲ್ಲ ಬದಲಾಗಿ

"ಅಯ್ಯಾ ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿಯೇ ಇರಲಿ
ಅಯ್ಯಾ ನಿಮ್ಮ ಪರಸ್ಥಲದ ಘನ ನಿಮ್ಮಲ್ಲಿಯೆ ಇರಲಿ
ಕರಸ್ಥಲವನೊಲ್ಲೆ ಪರಸ್ಥಲವನೊಲ್ಲೆ ಆವುದುಮಾನೊಲ್ಲೆ ನೋಡಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ನೀನೊಲಿದ ಸಂಗನ ಬಸವಣ್ಣನ ಶ್ರೀಪಾದದ ಘನವ
ತೋರಿಹನೆಂಬ ಮಾತಿಂಗೆ ಮಾರುವೋದೆನು
ಇನ್ನು ತೋರಿ ಎನ್ನನುಳಕೊಳ್ಳಾ ಎನ್ನ ದೇವರ ದೇವ"[೧೨೭]

ಎಂದು ಖಾರವಾಗಿ ಉತ್ತರಿಸುತ್ತಾನೆ. ಇದರಿಂದ ಕೋಪಿತಗೊಂಡ ಚನ್ನಬಸವಣ್ಣ ತನ್ನ ಹಠ ಬಿಡುವುದಿಲ್ಲ. 'ಜೊತೆಗೆ ಕೆಲವು ಲಿಂಗವಂತರನ್ನು ಜೋಡಿಸಿಕೊಂಡು ಪ್ರತಿರೋಧ ಮಾಡುತ್ತಾನೆ. ಅಲ್ಲಮನ ಪ್ರವೇಶ ಆಗುತ್ತೆ. ಇಷ್ಟಲಿಂಗ ತತ್ವದ ದೀಕ್ಷಾ ನಿಯಮದಲ್ಲಿ ಸಡಿಲತೆ ಮಾಡಿ ಲಿಂಗಧಾರಣೆ ರಹಿತವಾಗಿ ಸಿದ್ಧರಾಮನಿಗೆ ದೀಕ್ಷೆ ಕೊಡಲಾಗುತ್ತದೆ'.[೧೨೮] ಈ ಪ್ರಸ್ತಾವವನ್ನು ಇಲ್ಲಿ ಯಾಕೆ ಎತ್ತಿಕೊಳ್ಳ ಲಾಯಿತು ಅಂದರೆ ಹಾಲುಮತ ಸಾಂಸ್ಕೃತಿಕ ನಾಯಕರು ಲಿಂಗ ಕಟ್ಟುವುದಕ್ಕೆ ನಿರಾಕರಣೆ ಮಾಡಿದರು. ಕಟ್ಟಲೇ ಇಲ್ಲ. ಕಟ್ಟುಲಿಂಗದ ಪರಿಕಲ್ಪನೆಯನ್ನು ವಿರೋಧ ಮಾಡಿದರು. ಇವತ್ತು ಎಲ್ಲಾ ಹಾಲುಮತದ ಸಿದ್ಧ ದೈವಗಳಿಗೆ ಲಿಂಗ ಕಟ್ಟಲಾಗಿದೆ. ಸಿದ್ಧರಾಮನಿಗೆ ಸಹ ಲಿಂಗ ಕಟ್ಟಿದ್ದಾರೆ. ಈ ಪ್ರಕ್ರಿಯೆ ಯಾವತ್ತಿನಿಂದ ಆರಂಭವಾಗಿದೆ ಎನ್ನುವುದು ತಿಳಿಯುವುದಿಲ್ಲ. ಈ ದೈವಗಳನ್ನು ಪೂಜೆ

ಮಾಡುತ್ತಿರುವವರು 'ಒಡೆಯರು'. ಅವರು ಈ ಪರಂಪರೆಯನ್ನು ಹುಟ್ಟುಹಾಕಿರಬೇಕು. ಏಕೆಂದರೆ ಒಡೆಯರು ಲಿಂಗಧಾರಿಗಳು. ರೇವಣಸಿದ್ಧನಿಂದ ಲಿಂಗದೀಕ್ಷೆ ಆಯಿತೆಂದು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಹಾಗಾಗಿ ಅವರಿಂದ ಆಗಿರುವ ಸಾಧ್ಯತೆ ಹೆಚ್ಚು.

ಮಾಳಪ್ಪ ಗೌಡನ ಮೇಲೆ ಮಾಡಿದ ಸಂಘರ್ಷ ಲಿಂಗವಂತರ ಮೇಲೆ ಮಾಡಿದ ಸಂಘರ್ಷದಂತೆ ಕಾಣಿಸುತ್ತದೆ. ಈ ಸಂಘರ್ಷದ ಆರಂಭವೂ ಕುತೂಹಲಕರವಾದದ್ದು. ಬೆಳದು ನಿಂತ ಗೌಡನ ಹೊಲಗಳಿಗೆ ಕುರಿ ಹೊಕ್ಕಿಸಿ, ಮೇಯಿಸಿ ಹಾಳು ಮಾಡುವುದರ ಮುಖಾಂತರ ಜಗಳ ಆರಂಭ ಮಾಡುತ್ತಾನೆ. 'ಕೃಷಿ' ಮತ್ತು 'ಪಶುಪಾಲಕರ' ನಡುವೆ ನಡೆದಿರುವ ಸಂಘರ್ಷಗಳು ನಡೆದಿರುವುದೂ ಇದೇ ರೀತಿ. ಭೂಮಿ ಮತ್ತು ಪಶುಸಂಪತ್ತು ಇವರಿಬ್ಬರ ಆಸ್ತಿಯಾಗಿದೆ. ಈ ಆಸ್ತಿಗಳನ್ನು ಇಟ್ಟುಕೊಂಡು ಕಾದಾಡಿದ್ದಾರೆ. ಕುರಿಗಳು ಹೊಲಕ್ಕೆ ಹೊಕ್ಕಿಸಿರುವ ಸುದ್ದಿಯನ್ನು ಆಳುಮಗ ವೆಂಕಣ್ಣಗೌಡನಿಗೆ ತಿಳಿಸುತ್ತಾನೆ.

"ಗೌಡರ ಎದ್ದಾರೊ ಗಲಬಿಲಿಯಲ್ಲಿ | ಜೀನ
ಹಾಕ್ಯಾರೊ ತಂದು ಕುದುರೆ ಮೈಯಲ್ಲಿ | ಲಗಾಮ
ಹಿಡಿದಾರೊ ಕೈಯಲ್ಲಿ | ಮ್ಯಾಲ ಕುಂತ ಕುದರಿ
ಚಾಲ ಹಿಡಿದ್ಯಾರೊ ಬಂದರ ಹೊಲದಲ್ಲಿ |

ಗೌಡರ ಕಣ್ಣಿಗೆ ಕಂಡಾನೋ ಅಲ್ಲಿ | ಬೆಂಕಿ
ಕೆಂಡದಂಗ ಕಂಡೂ ಕಣ್ಣಲ್ಲಿ | ಬಂದಾನೊ ಮಾಳಪ್ಪ
ನ ಹಂತೆಲಿ | ಮೆತ್ತಾನ ಬಡಿಗಿ ಗೌಡನ ಸಿಕ್ಕಿತೊ
ಹಿಡಿದು ಹೊಡೆದಾನೋ ಮೈಯಲ್ಲ

ಮಾಳಪ್ಪ ನೆನೆದಿದ್ದ ಗುರುವಿಗಿ ಅಲ್ಲಿ
ಶಿಡಿಯಾಣ ಸಿದ್ಧ ಸಾಕೆಲ ಇದೋಚಿನ್ನಲ್ಲಿ"[೫೫]
ಬಾಸುಂಡಿ ಎದ್ದಾವ ಮೈಯಲ್ಲಿ
ಬಾಗ್ಯ ಹೊಡೆದುಕೊಂಡು ಬಂದಾನೊ ಮಾಳಪ್ಪ
ಬೀಜಗುಂತಿ ಬಲ್ಲಿ

ಕೋಪಗೊಂಡ ಗೌಡ ಮಾಳಪ್ಪನನ್ನು ಹೊಡೆಯುತ್ತಾನೆ. ಆ ಎಲ್ಲಾ ಹೊಡೆತಗಳು ಗುರು ಬೀರಪ್ಪನ ನೆನಕೆಯಿಂದ ಮಾಳಪ್ಪನಿಂದ ದೂರವಾಗುತ್ತವೆ. ಅವನ ಬದಲಾಗಿ ಗೌಡನ ಹೆಂಡತಿಗೆ ಹೊಡೆತ ಬೀಳುತ್ತವೆ. ಇದು ಜನಪದ ಸಾಂಸ್ಕೃತಿಕ ವೀರರಿಗೆ ಇರುವ ಆಗಾಧವಾದ ಶಕ್ತಿಯಾಗಿದೆ. ಯಾರು ಅವರನ್ನು ಹೊಡೆಯುತ್ತಾರೋ ಅವರ ಮನೆಯವರಿಗೆ ಹೊಡೆತ ಬೀಳುವಂತೆ ಮಾಡುವುದು ಇವರ ತಂತ್ರ. ಯಲ್ಲಮ್ಮನ ಕಾವ್ಯದಲ್ಲಿ ಈ ಚಿತ್ರಣವನ್ನು ಕಾಣಬಹುದು. ಯಲ್ಲಮ್ಮ ಗೌಡತಿಯ ಮನೆಗೆ ಭಿಕ್ಷಕ್ಕೆ ಹೋದಾಗ ಗೌಡತಿ ಆಳುಮಕ್ಕಳಿಂದ ಹೊಡೆಸುತ್ತಾಳೆ. ಆ ಎಲ್ಲಾ ಹೊಡೆತಗಳು ಗೌಡತಿಗೆ ಬೀಳುತ್ತವೆ. ಇದು ದೇಸಿ ದ್ರಾವಿಡ ಶೈವ ಆರಾಧಕರ ಶಕ್ತಿಯಾಗಿದೆ. ಆ ಶಕ್ತಿಯಿಂದಲೇ ಶತ್ರುಗಳನ್ನು ಸದೆ ಬಡೆಯುತ್ತಾರೆ. ಈ ಪರಿಕಲ್ಪನೆ ಶರಣ-ಸೂಫಿ-ಸೂಫಿಗಳಲ್ಲಿ, ಮಂಟೇಸ್ವಾಮಿ ಮತ್ತು ಗೋಣಿಬಸವನಲ್ಲಿ ಕಾಣಿಸುತ್ತದೆ.

ಗೌಡ ಮಾಳಪ್ಪನನ್ನು ಹೊಡೆದು, ಮನೆ ಸೇರುವಷ್ಟರಲ್ಲಿ ಹೆಂಡತಿ ಅನಾರೋಗ್ಯದಿಂದ, ಮೈ ಕೈ ನೋವಿನಿಂದ ಬಳಲುತ್ತಿರುತ್ತಾಳೆ. ಕಾರಣ ಕೇಳಿದರೆ "ಯಾರೋ ಗಟ್ಟಿಯಾದ ಬಡಿಗಿ ತಗೊಂಡು ಹೊಡೆದಂತಾಯ್ತು" ಅಂತ ಹೇಳುತ್ತಾಳೆ. ಆಗ ಗೌಡನಿಗೆ ಮನವರಿಕೆಯಾಗುತ್ತದೆ. 'ಕುರುಬ'ನನ್ನು ಹೊಡೆದ ಆ ಹೊಡೆತಗಳು ಇವಳಿಗೆ ಹೇಗೆ ಬಿದ್ದವು ಅಂತ ಆಶ್ಚರ್ಯ ಪಡುತ್ತಾನೆ. ಆದರೂ ಮಾಳಪ್ಪನ ಶಕ್ತಿಯನ್ನು ಪರಿಗಣಿಸುವುದಿಲ್ಲ. ಇದನ್ನು ಸೂಕ್ಷ್ಮವಾಗಿ ತಿಳಿದ ಮಾಳಪ್ಪ ಗೌಡನ ಮೇಲೆ ಪ್ರಯೋಗ ಮಾಡಿದ.

ಗೌಡರ ಬ್ಯಾನಿ ಹೆಚ್ಚಾಗಿ ಹರಿದೊ ಯಾವ ದೇವರ
ನೋಡಲಿಲ್ಲ ಕಣ್ಣಿಂದೊ | ಅಂತಾರ ಜನ ಉಳುದಿಲ್ಲ
ಇದರೊಂದೊ | ಅಷ್ಟರ ಒಳಗೆ ಶಕುನ ಹೇಳುತ್ತ
ಕೊರವಿ ಗೌಡರ ವಾಡ್ಯಾಗ ಬಂದೊ |

ಮಾಳಪ್ಪ ತಾನೆ ಸೃಷ್ಟಿಸಿದ ರೋಗವನ್ನು ವಾಸಿಯಾಗದಂತೆ ತಡೆಯುತ್ತಾನೆ. ಆಕಾಶದಿಂದ ಪಾರ್ವತಿಯನ್ನು ಕರೆಯಿಸಿ 'ಕೊರವಿ' ವೇಷದಲ್ಲಿ ಗೌಡನ ಮನೆಗೆ ಕಳುಹಿಸುತ್ತಾನೆ. ಈ ರೋಗ ವಾಸಿ ಮಾಡುವ ಶಕ್ತಿ ಇರುವುದು ಮಾಳಪ್ಪನಿಗೆ ಮಾತ್ರ ಅಂತ ಕೊರವಿಯಿಂದ ಹೇಳಿಸುತ್ತಾನೆ. ಇದರ ಉದ್ದೇಶ ಗೌಡ ತನ್ನ ಹತ್ತಿರ ಬರುವಂತೆ ಮಾಡುವುದು. ಇಲ್ಲಿ ಕೊರವಿ ಪಾತ್ರ ವಹಿಸುವುದು ಪಾರ್ವತಿ. ಮಾಳಪ್ಪನ ಕೋರಿಕೆಯಂತೆ ಆ ಮುಖಾಂತರ ಭೂಮಿಗೆ ಬರುತ್ತಾಳೆ. ಹಾಲುಮತ ಸಮುದಾಯದೊಡನೆ ಸಾಮಾನ್ಯ ಮಹಿಳೆಯಾಗಿ ಬೆರೆತುಕೊಳ್ಳುತ್ತಾಳೆ; ಚಲನಶೀಲವಾಗುತ್ತಾಳೆ. ಡೊಳ್ಳಿನ ಹಾಡುಗಳ ಉದ್ದಕ್ಕೆ ಕಾಣಿಸುವ ರೀತಿ ಭಿನ್ನವಾದದ್ದು. ಪಾರ್ವತಿ ದೊಡ್ಡ ದೊಡ್ಡ ಜವಾಬ್ದಾರಿಗಳನ್ನು ಹೊತ್ತಿದ್ದಾಳೆ. ಎಷ್ಟೋ ಬಾರಿ ಅಪವಾದಗಳನ್ನು ಹೊತ್ತಿದ್ದಾಳೆ. ಪಾರ್ವತಿಯನ್ನು ಹಾಲುಮತ ಸಾಂಸ್ಕೃತಿಕ ವೀರರು ತಮ್ಮ ಅನುಕೂಲಕ್ಕೆ ತಕ್ಕಂತೆ ದುಡಿಸಿಕೊಂಡಿದ್ದಾರೆ. ಹೀಗೆ ಪಾರ್ವತಿ ಮತ್ತು ಶಿವನನ್ನು ದುಡಿಸಿಕೊಂಡಿರುವುದು ಹಾಲುಮತ ಸಾಂಸ್ಕೃತಿಕ ವೀರರ ವಿಶೇಷ. ಇವರು ಶಿವ ಮತ್ತು ಪಾರ್ವತಿ ಬೇರೆ ನಾವುಗಳು ಬೇರೆ ಅಂತ ಅಂದುಕೊಳ್ಳಲೇ ಇಲ್ಲ. ಇವರಿಬ್ಬರು ತಮ್ಮ ನಡುವೆ ಬದುಕುವ ವ್ಯಕ್ತಿಗಳೆಂದು ತಿಳಿದುಕೊಂಡರು. ಆ ಕಾರಣಕ್ಕಾಗಿ ಯಾವುದೇ ಅಂತರವಿಲ್ಲದೇ ತಮ್ಮ ಕೆಲಸಗಳಿಗೆ ಬಳಸಿಕೊಂಡರು. ಆ ಮುಖಾಂತರ ತಮ್ಮ ಕೆಲಸಗಳನ್ನು ಪೂರೈಸಿಕೊಂಡರು.

ಕೊರವಿಯ ಮಾತನ್ನು ಒಪ್ಪಿಕೊಂಡ ಗೌಡ ತನ್ನ ತಾಯಿಯೊಂದಿಗೆ ಎತ್ತಿನಗಾಡಿಯನ್ನು ಕಟ್ಟಿಕೊಂಡು 'ಬೀಜಗುಂತಿಗೆ' ಬರುತ್ತಾನೆ. ಮಾಳಪ್ಪ ಅಲ್ಲಿ ಕಾಣಿಸುವುದಿಲ್ಲ. ರೋಗದಿಂದ ಬಳಲುತ್ತಿದ್ದ ಗೌಡನನ್ನು ಎಳೆಯ ಮಗುವಿನಂತೆ ಹೆಗಲ ಮೇಲೆ ಹಾಕಿಕೊಂಡು ಗೌಡನ ತಾಯಿ ಹುಡುಕುತ್ತಾಳೆ, ಕಾಣಿಸುವುದಿಲ್ಲ. ಕೂಗುತ್ತಾಳೆ, ರೋಧಿಸುತ್ತಾಳೆ, ಅಂಗಲಾಚುತ್ತಾಳೆ, ತನ್ನ ಮಗನ ಪರವಾಗಿ ತಾನು ಕ್ಷಮೆ ಕೋರುತ್ತಾಳೆ. ಇನ್ನು ಮುಂದೆ ತಪ್ಪು ಮಾಡುವುದಿಲ್ಲವೆಂದು ಭರವಸೆ ಕೊಡುತ್ತಾಳೆ. ಇದನ್ನು ನೋಡಿದ; ಕೇಳಿದ ಮಾಳಪ್ಪ ನೋಡಿದರೂ ನೋಡದವರಂತೆ, ಕೇಳಿದರೂ ಕೇಳಿದರಂತೆ ಸುಮ್ಮನಿರುತ್ತಾನೆ. ತನ್ನ ಹಠವನ್ನು ಮುಂದುವರೆಸಿ 'ಮಾಯಕಾರ' ಆಟ ಆಡುತ್ತಾನೆ.

ತನ್ನ ಏಳು ನೆಲೆಗಳಲ್ಲಿ ತಿರುಗಾಡುತ್ತಾನೆ.[೧೩೦] ಆ ಏಳು ಕಡೆ ಅವಳು ಹುಡುಕುತ್ತಾಳೆ. ಅವನು ಸಿಗುವುದೇ ಇಲ್ಲ. ಇಲ್ಲಿಗೆ ಬಂದಾಗ ಅಲ್ಲಿಗೆ ಹೋದ, ಅಲ್ಲಿಗೆ ಹೋದಾಗ ಮತ್ತೊಂಡೆ ಹೋದ ಅನ್ನುವ ಸುದ್ದಿ ರವಾನೆಯಾಗುತ್ತಿರುತ್ತದೆ. ಗೌಡನ ತಾಯಿ ಮಾಳಪ್ಪನನ್ನು ಹುಡುಕುವ ಪರಿ ಮಾಯೆ ಅಲ್ಲಮನನ್ನು ಹುಡುಕಿದಂತೆ ಕಾಣಿಸುತ್ತದೆ. ಕೊನೆಗೂ ಅವನು ಸಿಗುವುದೆ ಇಲ್ಲ. ನಿರಾಶೆಯಿಂದ ತನ್ನ ಊರಿನತ್ತ ಹಿಂತಿರುಗುವಾಗ ಮಾಳಪ್ಪ ಪ್ರತ್ಯಕ್ಷವಾಗಿ

"ಸಿದ್ಧಮಾಳಪ್ಪ ಸುದ್ದಾಗಿ ಹೇಳುತಾನಾ ಯಂಕಣ್ಣಗೌಡಗ
ಜಳಾಜಳಾ | ಬುಳ್ಳಿನಾಸಿದ ಹುಟ್ಟಿ ಬರುತಾನ್ ನಿನ್ನೊಳ್
ಮೊದಲ ಹುಟ್ಟಿದ ಮಗನ | ಮಠಕ
ಬಿಡಬೇಕೆಂದು ಹೇಳಿ ಕೊಟ್ಟೊ ಫಲಗಳಾ"

ಮಾಳಪ್ಪನ ಸಂಘರ್ಷದ ಪ್ರಧಾನವಾದ ಉದ್ದೇಶ ಇದು. ಆ ಕಾರಣಕ್ಕಾಗಿ ಹುಟ್ಟುವ ಮೊದಲ ಗಂಡು ಮಗುವನ್ನು ಮಠದ ಸೇವೆಗೆ ಬಿಡಬೇಕೆಂದು ನೇರವಾಗಿ ಕೇಳಿರುವುದು. ಈ ಮಾತಿನಿಂದ ಸಂಘರ್ಷ ಆಂತರಿಕ ಉದ್ದೇಶ ಸೂಕ್ಷ್ಮವಾಗಿ ಹೊರಹೊಮ್ಮುತ್ತದೆ. ಅಲ್ಲದೇ "ಕೃಷಿ ಸಮುದಾಯಗಳು ಪಶುಪಾಲನಾ ಸಮುದಾಯಗಳ ಆಸ್ತಿಯನ್ನು ತಮ್ಮ ಹಕ್ಕು ಅನ್ನುವಂತೆ ಕಸಿದುಕೊಂಡು ಆ ಸಂಪತ್ತನ್ನು ಕಾಯ್ದುಕೊಳ್ಳಲು ಸಾಂಸ್ಕೃತಿಕ ನಿಯಮ ನಂಬಿಕೆ ನಿಷೇದಗಳನ್ನು ಹೇರುತ್ತಿದ್ದವು".[೧೩೧] ಈ ಹೇರುವಿಕೆಯನ್ನು ತಡೆಯುವುದಕ್ಕೆ ಕೃಷಿಕ ಸಮುದಾಯವಾದ ಗೌಡನನ್ನು ಪಶುಪಾಲನ ಸಮುದಾಯದ ಮಾಳಪ್ಪ ಈ ಸಂಘರ್ಷದಲ್ಲಿ ಸೋಲಿಸಿರಬಹುದು. ಇಂತಹ ಹಲವು ಕಾರಣಗಳು ಈ ಸಂಘರ್ಷದಲ್ಲಿ ಅಡಕವಾಗಿವೆ. ಹಾಗಾಗಿ ಈ ಘಟನೆಯನ್ನು ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಅರ್ಥೈಸಿ ಕೊಳ್ಳಬಹುದು.

ಹುಲಿಜಂತಿ ಗ್ರಾಮದ ಮಠದ ಸೇವೆಗಾಗಿ ಮಗನನ್ನು ಬಿಡುವುದಕ್ಕೆ ಒಪ್ಪಿಗೆ ಕೊಟ್ಟ ಗೌಡನಿಗೆ ಮಾಳಪ್ಪ 'ಕುರಿಹಾಲು' ಕುಡಿಸಿ ರೋಗದಿಂದ ಮುಕ್ತನನ್ನಾಗಿಸಿದ. ಇಲ್ಲಿ ರೋಗ ನಿವಾರಣೆಗಾಗಿ ಬಳಕೆ ಯಾದ ಕುರಿ ಹಾಲು ಹಾಲುಮತ ಧರ್ಮದ ಸಾಂಕೇತಿಕ ವಸ್ತುವಾಗಿದೆ. ಕುರಿ ಹಾಲಿನಲ್ಲಿ ರೋಗ ನಿವಾರಕ ಗುಣಗಳಿವೆ ಅಂತ ಆಯುರ್ವೇದ ಹೇಳುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಜನಪದ ವೈದ್ಯರು ಕೆಲವು ಖಾಯಿಲೆಗಳ ನಿವಾರಣೆಗಾಗಿ ಮೇಕೆಯ ಹಾಲನ್ನು ಬಳಸುತ್ತಾರೆ. ಮೇಕೆ (ಆಡು) ವಿವಿಧ ಔಷಧಿಯ ಗಿಡಗಳನ್ನು ತಿನ್ನುತ್ತದೆ. ಹಾಗಾಗಿ ಅದರ ಹಾಲಿನಲ್ಲಿ ರೋಗನಿವಾರಕ ಗುಣಗಳಿವೆ ಎಂದು ವಿಜ್ಞಾನ ಹೇಳುತ್ತದೆ. ಕುರಿಹಾಲು ರೋಗ ನಿರೋಧಕ ಅಂತ ಮಾಳಪ್ಪ ತಿಳಿದುಕೊಂಡಿದ್ದ. ವೈದ್ಯದ ಜ್ಞಾನವು ಆತನಿಗೆ ಇತ್ತು ಹಾಗೂ ಕೆಲವು ರೋಗ ನಿವಾರಣೆಗಾಗಿ ಅವನು 'ಭಂಡಾರ'ವನ್ನು ಬಳಕೆ ಮಾಡಿದ್ದಾನೆ.

ಕೆಲವು ವರ್ಷಗಳ ನಂತರ ಗೌಡನಿಗೆ ಗಂಡು ಮಗುವಾಗುತ್ತದೆ. ಆ ಮಗುವಿಗೆ ಹದಿನಾರನೇ ದಿವಸದಲ್ಲಿ ಗೌಡಮನೆತನದವರು "ಲಿಂಗನಗೌಡ್ರು" ಅಂತ ನಾಮಕರಣ ಮಾಡುತ್ತಾರೆ. ಮಾಳಪ್ಪನಿಗೆ ಕೊಟ್ಟ ಮಾತಿನಂತೆ ಗೌಡ ಹದಿನಾರನೇ ದಿವಸದಲ್ಲಿ "ದಂಡು, ದರ್ಬಾರ, ಮಂದಿ ಮಕ್ಕಳು, ಹೆಣ್ಣು

[illegible]

[illegible]

[illegible]

[illegible]

[illegible]

ಗಂಡು ಹಿರಿಯರ್ನ ಕರಕೊಂಡು ಹುಲಿಜಂತಿಗೆ ಬಂದು, ಎಲ್ಲಾ ಪೂಜಾರಿಗಳಿಗೆ ಊಟ ಹಾಕಿ, ತಮ್ಮ ಮಂದಿಗ ಊಟ ಮಾಡ್ಸಿ, ನಿನ್ನ ಮಗ್ನ ನೀನು ತಗೋಳಪ್ಪ ಅಂತ ಹೇಳಿ ಮಾಳಪ್ಪನ ಉಡಿಯಾಗ ಹಾಕಿ ತಮ್ಮೂರಿಗೆ ತಾವು ಹೋದ್ರು". ಮಗುವನ್ನು ತಗೆದುಕೊಂಡ ಮಾಳಪ್ಪ ತಂದೆ ತಾಯಿ ಇಟ್ಟಿರುವ "ಲಿಂಗನಗೌಡ" ಅನ್ನುವ ಹೆಸರನ್ನು ತಗೆದುಹಾಕಿ "ಸಾಕಿನ ಮಗ ಬುಳ್ಳಪ್ಪ" ಅಂತ ಕರೆದುಕೊಂಡ.

ಇಲ್ಲಿ ಮಾಳಪ್ಪ ಬುಳ್ಳಪ್ಪನನ್ನು ಒತ್ತಾಯಪೂರ್ವಕವಾಗಿ ಪಡೆದುಕೊಂಡಂತಿದೆ. ಈ ಧೋರಣೆಯಲ್ಲಿ ಪ್ರಜ್ಞಾಪೂರ್ವಕವಾದ ಸಾಮುದಾಯಿಕ ರಾಜಕಾರಣವಿದೆ. ಮಗುವನ್ನು ಪಡೆಯುವುದರ ಮುಖಾಂತರ ಆ ಮನೆತನವನ್ನು ತನ್ನ ಒಕ್ಕಲನ್ನಾಗಿಸಿಕೊಳ್ಳುವುದು, ತನ್ನ ಅಡಿಯಲ್ಲಿ ಇಟ್ಟುಕೊಳ್ಳುವುದು, ಆ ಮುಖಾಂತರ ಸೋಲಿನ ಅನುಭವವನ್ನು ನೀಡುವುದು, 'ಲಿಂಗವಂತರ' ವಿಸ್ತರಣೆಯನ್ನು ತಡೆಯುವುದು ಅಥವಾ ಅವುಗಳನ್ನು ಹೊಡೆದು ಹಾಕುವುದು, ಶೈವ ಪರಂಪರೆಯನ್ನು ಭದ್ರಪಡಿಸುವುದು, ಹೀಗೆ ಹಲವು ಆಯಾಮಗಳು ಈ ಸಂಘರ್ಷದಲ್ಲಿ ಅಡಕವಾಗಿವೆ. ಏಕೆಂದರೆ ಬುಳ್ಳಪ್ಪನಿಗೆ ತಂದೆ ತಾಯಿಗಳು ಇಟ್ಟ ಹೆಸರನ್ನು ಅಳಿಸಿ ಹಾಕಿ ಹೊಸ ನಾಮಕರಣ ಮಾಡುವುದು ಆ ಮುಖಾಂತರ ಆ ಕುಲದ ಪೊರೆಯನ್ನು ಕಳಚುವ ಕ್ರಿಯೆಯಾಗಿದೆ. ಅಂದರೆ 'ಲಿಂಗನಗೌಡ್ರು' ಅನ್ನುವುದು 'ಲಿಂಗವಂತರ' ಗುರುತು. ಲಿಂಗಾಯತ ಅಥವಾ ಇಷ್ಟಲಿಂಗದ ಪ್ರತೀಕ. 'ಬುಳ್ಳಪ್ಪ' ಅನ್ನುವುದು ತಳಸಮುದಾಯ ಪ್ರತೀಕ. ಆ ಮುಖಾಂತರ ತನಗೆ ವಿರುದ್ಧವಾದ ವ್ಯವಸ್ಥೆಯನ್ನು ಹೊಡೆದು ಹಾಕಲಾಗುತ್ತದೆ. ಇವು ಗಳೆಲ್ಲವು ಅಸ್ತಿತ್ವವನ್ನು ಭದ್ರವಾಗಿಸಿಕೊಳ್ಳುವ ಹಂಬಲಗಳಾಗಿವೆ. ಹಾಗಾಗಿ ಇವುಗಳ ಹಿಂದೆ ಪ್ರಜ್ಞಾಪೂರ್ವಕವಾದ ಹೋರಾಟವಿದೆ.

೪.೬.೩. ಬುಳ್ಳಪ್ಪನ ಹೋರಾಟದ ನೆಲೆಗಳು

ಬುಳ್ಳಪ್ಪ ಸ್ಥಾಪಿತ ಪ್ರಭುತ್ವ ಮೌಲ್ಯಗಳ ವಿರುದ್ಧ ಸಂಘರ್ಷ ಮಾಡಿದ್ದಾನೆ. ನೊಂದವರ, ಅವಕಾಶ ವಂಚಿತರ ರೋಗ-ರುಜನಿಗಳಿಂದ ಬಳಲುತ್ತಿದ್ದ, ಶೋಷಣೆಗೆ, ಅಸ್ಪೃಶ್ಯತೆಗೆ ಒಳಗಾಗಿದ್ದ, ತೊಂದರೆಯನ್ನು ಅನುಭವಿಸುತ್ತಿದ್ದ ಜನಸಮುದಾಯದವರ ಪರ ಹೋರಾಟ ಮಾಡಿದ್ದಾನೆ. ಮಂಟೇಸ್ವಾಮಿ, ಮಾದಪ್ಪ, ಮೈಲಾರಲಿಂಗ, ಬೀರಪ್ಪ, ರೇವಣಸಿದ್ಧ, ಅಲ್ಲಮಪ್ರಭು, ಬಸವಣ್ಣ, ಮಹಾತ್ಮಾಗಾಂಧಿ ಮತ್ತು ಅಂಬೇಡ್ಕರ್ ಈ ರೀತಿಯ ಹೋರಾಟಗಳನ್ನು ಮಾಡಿದ್ದಾರೆ. ಜನಪದ ಸಾಂಸ್ಕೃತಿಕ ವೀರರ ಪ್ರಧಾನವಾದ ಉದ್ದೇಶವೇ ಇದು. "ಯಾವ ಕಾಲದಲ್ಲಿ ಶ್ರೇಷ್ಠ, ಪ್ರಧಾನ, ಆಳುವ ಸಮಾಜದ, ಧರ್ಮ ಮತ್ತು ಸಂಸ್ಕೃತಿಗಳು ಯಾರನ್ನು ನಿರ್ಲಕ್ಷಿಸಿ ಕೀಳಾಗಿ ಅಥವಾ ಗುಲಾಮ ಸ್ಥಿತಿಗೆ ತಳ್ಳಿ ನಿಕೃಷ್ಟವಾಗಿ ನಡೆಸಿಕೊಳ್ಳುತ್ತ ಎಲ್ಲಕಡೆ ಅಸ್ಪೃಶ್ಯತೆ ಆಚರಣೆ ಮಾಡುತ್ತದೆ. ಆಗ ಇಂತ ಸಂಘರ್ಷ ಪ್ರತಿಭಟನೆಗಳು ಆರಂಭವಾಗುತ್ತವೆ".[೮೨] ಜನಪದ ಸಾಂಸ್ಕೃತಿಕ ವೀರರ ಹೋರಾಟಗಳು ಆರಂಭವಾಗಿರುವುದು ಈ ನೆಲೆಯಲ್ಲಿಯೇ. ಆದರೆ ಹೋರಾಟಕ್ಕೆ ತಮ್ಮ ತಮ್ಮ ಸಮುದಾಯದ ಧರ್ಮವನ್ನು ಅಡಿಪಾಯ ಮಾಡಿಕೊಂಡಿರುತ್ತಾರೆ. ಇದಕ್ಕೆ ಹಲವು ಕಾರಣಗಳಿರುತ್ತವೆ. ತಮ್ಮ

ಸಮುದಾಯದ ಧರ್ಮವನ್ನು ಸಂರಕ್ಷಣೆ ಮಾಡುವುದು, ವಿಸ್ತರಣೆ ಮಾಡುವುದು, ಆ ಮೂಲಕ ತಮ್ಮ ಸಮುದಾಯದವರ ಬೆಂಬಲ ಪಡೆಯುವುದು, ಆ ಮುಖಾಂತರ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದು. ಈ ಪರಿಕಲ್ಪನೆಯ ನೆರಳಿನಲ್ಲಿ ಬುಳ್ಳಪ್ಪ ತನ್ನ ಹೋರಾಟಗಳನ್ನು ಮಾಡಿದ. ಸಿಂದಗಿ ನಾಡಿನೊಳಗೆ ಇದ್ದ "ಏಕದಂಡಿಗಿ ಪದುಮಣ್ಣ"ನೊಡನೆ ಮಾಡಿದ ಸಂಘರ್ಷ ಇದಕ್ಕೆ ಉದಾಹರಣೆ.

ಒಮ್ಮೆ ಸಿಂದಗಿ ಗ್ರಾಮದ ಪದಮಣ್ಣ ಈ ನಮ್ಮ ಗ್ರಾಮಕ್ಕೆ ಏಳು ವರ್ಷ ಮಳೆ, ಏಳು ವರ್ಷ ಬೆಳೆ ಇಲ್ಲ ಅಂತ ಬೆಟ್ಟಿಂಗ್ ಸಾರಿ, ಗ್ರಾಮದಲ್ಲಿರುವ ಭಾವಿಯನ್ನು ಅಕ್ರಮಣ ಮಾಡಿಕೊಂಡು, ನೀರನ್ನು 'ದುಡ್ಡಿಗೆ ಮಗಿ'ಯಂತೆ ಮಾರಾಟ ಮಾಡುತ್ತಿದ್ದ. ಇದರಿಂದ ಸಾಕಷ್ಟು ಜನ ಬಡವರು ನೀರು, ಆಹಾರವಿಲ್ಲದೆ ಬಳಲುತ್ತಿದ್ದರು. ಈ ಸುದ್ದಿಯನ್ನು ತಿಳಿದ ಬುಳ್ಳಪ್ಪ ಆ ಗ್ರಾಮಕ್ಕೆ ಹೋಗಿ ನೀರು ಇಲ್ಲದವರಿಗೆ ನೀರು ಕೊಟ್ಟು ಬರುವುದಾಗಿ ಮಾಳಪ್ಪನನ್ನು ಕೇಳಿದ. ಹೋಗುವುದಕ್ಕೆ ಅಪ್ಪಣೆ ಕೊಡುವಂತೆ ಹಠ ಮಾಡಿದ. ಆಗ ಮಾಳಪ್ಪ

'ಹೇ ಸಿಂದಗಿ ನಾಡಿಗೆ ಹೋಗಬ್ಯಾಡಲ್ಲಿಗೆ
ಹ್ಯಾದರ ತಿರುಗಿ ಬರೋದಿಲ್ಲೂರಿಗೆ
ವಳ್ಳಿ ಮಟ್ಟುವುದಿಲ್ಲ ಕ್ಯಾಣಗನೂರಗಿ'

ಅಂತ ಹೇಳುತ್ತಾನೆ. ಈ ಮಾತುಗಳು ಬುಳ್ಳಪ್ಪನಲ್ಲಿ ಭಯ ಹುಟ್ಟಿಸುತ್ತವೆ. ಅಲ್ಲದೆ ಪದುಮಣ್ಣ ಕೆಟ್ಟವನು ಹೋಗಬೇಡ ಅನ್ನುವುದರ ಹಿಂದೆ ಆತನ ಜೊತೆ ಸಂಬಂಧ ಕೆಡಿಸಿಕೊಳ್ಳುವುದು ಬೇಡ ಅನ್ನುವ ಧೋರಣೆಯೂ ಇದೆ. ಮಾಳಪ್ಪನೇ ಸೋತಿರುವುದು ಇದಕ್ಕೆ ಕಾರಣವಿರಬಹುದು. ಅಂದರೆ ಈ ಲೋಕದೊಳಗೆ ಜ್ಞಾನಿಗಳು ಅಂದರೆ ಮಾಳಪ್ಪ ಮತ್ತು ಅಮೋಘಸಿದ್ಧ ಅಂತ ಜನ ಮಾತನಾಡಿ ಕೊಳ್ಳುತ್ತಿರುತ್ತಾರೆ. ಅದು ಸರಿ ಅಥವಾ ತಪ್ಪು ಅಂತ ತಿಳಿದುಕೊಳ್ಳುವುದು ಪದಮಣ್ಣನಿಗೆ ಕುತೂಹಲ. ಪುಷ್ಪಕ ವಿಮಾನವನ್ನೇರಿ ಅಮೋಘಸಿದ್ಧನಲ್ಲಿಗೆ ಬರುತ್ತಾನೆ. ಇವನ ಬರುವಿಕೆಯನ್ನು ದೂರದಿಂದಲೇ ಅರಿತ ಅಮೋಘಸಿದ್ಧ 'ಮುಮ್ಮಟ್ಟಗುಡ್ಡ'ದ ಒಂದು ಕಲ್ಲು ಪೊಟರೆಯಲ್ಲಿ ಅವಿತು ಕೊಂಡ. ಪದುಮಣ್ಣ ಹುಡುಕಿದರು ಸಿಗುವುದಿಲ್ಲ. ಓ ಇವನು ನನಗಿಂತ ಜ್ಞಾನಿ ಅದನ ಅಂತ ಅಂದುಕೊಂಡು ಮಾಳಪ್ಪನ ಕಡೆಗೆ ಪಯಾಣ ಆರಂಭಿಸಿದ. ಇವನ ಬರುವಿಕೆಯನ್ನು ತಿಳಿದ ಮಾಳಪ್ಪ 'ಬಬ್ಬಲಿ ವನ'ದ ಮರದ ಪೊಟರೆಯಲ್ಲಿ ಅವಿತುಕೊಂಡ. ಪದುಮಣ್ಣ ಹುಡುಕಿದರೂ ಸಿಗುವುದೇ ಇಲ್ಲ. ಅದೇ ಸಂದರ್ಭದಲ್ಲಿ ಮಾಳಪ್ಪನ ನಾಲ್ಕು ಜನ ಸೊಸೆಯಂದಿರು ಹಾಲಹಳ್ಳಕ್ಕೆ ನೀರಿಗೆ ಬರುತ್ತಾರೆ. ಇವರನ್ನು ಚೇಡಿಸಿದರೆ ಮಾಳಪ್ಪ ಹೊರಗಡೆ ಬಂದೇ ಬರುತ್ತಾನೆ ಅಂದುಕೊಡು ನಾಲ್ಕು ಜನರ ಕೊಡಗಳನ್ನು ಮಾಯ ಮಾಡುತ್ತಾನೆ. ಆಗಲು ಮಾಳಪ್ಪ ಮೌನವಹಿಸುತ್ತಾನೆ. ಏನು ತೀರ್ಮಾನ ಕೈಗೊಳ್ಳದ ಆಸಮರ್ಥನಾಗುತ್ತಾನೆ. ಆಗ ತನ್ನ ಸಾಕುಮಗ ಬುಳ್ಳಪ್ಪ ಆಗ ನೆನಪಿಗೆ ಬರುತ್ತಾನೆ. "ಈ ಸಮಯದಾಗ ನನ್ನ ಸಾಕಿದ ಮಗ ಬುಳ್ಳಪ್ಪ ಇದ್ದುದ್ದರೆ" ಎಂದು ಮನದಲ್ಲಿ ನೆನಪಿಸಿಕೊಂಡ. ಕ್ಯಾಣಗನೂರಿನಲ್ಲಿ 'ಕರಿಸಿದ್ಧ'ನ ಸೇವೆ ಮಾಡುತ್ತಿದ್ದ ಬುಳ್ಳಪ್ಪನಿಗೆ ಇದು ಅರಿವಾಯಿತು.

ತಂದೆಗೆ ಬಂದಿರುವ ಕಷ್ಟವು ತಿಳಿಯುತ್ತು. ಬಲಗೈಯಿಂದ ಸೇವೆ ಮಾಡುತ್ತ ಬೀರಪ್ಪಗೂ ತಿಳಿಯದಂತೆ ಹುಲಿಜಂತಿ ಕಡೆಗೆ ಎಡಗೈ ಚಾಚಿದ. ನಾಲ್ಕು ಜನ ಸೊಸೆಯಂದಿರ ಕೊಡಗಳು ತಲೆಮ್ಯಾಲೆ ಬಂದು ಕುಂತವು. ಮಾಳಪ್ಪ ಖುಷಿಯಾದ. ಈ ಪವಾಡವನ್ನು ಅರಿತ ಪದುಮಣ್ಣ ಭಯಗೊಂಡು ನಾನು ಇಲ್ಲೆ ಇದ್ದರೆ ಉಳಿಗಾಲವಿಲ್ಲವೆಂದು ತನ್ನ ನೆಲೆಯತ್ತ ಓಡಿಹೋದ.

ಈ ಸಂಘರ್ಷ ಬುಳ್ಳಪ್ಪನನ್ನು ಸಿಂದಿಗೆ ನಾಡಿಗೆ ಬರುವಂತೆ ಮಾಡುತ್ತದೆ. ಆ ಗ್ರಾಮದಲ್ಲಿ ನೀರಿನ ಕೊರತೆಯಿಂದ ಜನರು ಬಳಲುತ್ತಿದ್ದಾರೆ. ಅವರಿಗೆ ನೀರು ಕೊಡಿಸಬೇಕು ಅನ್ನುವುದು ಸಂಘರ್ಷವನ್ನು ಆರಂಭಿಸಲು ಕಾರಣವಾಗುತ್ತದೆ. ಆ ಕಾರಣವನ್ನು ಬಿಟ್ಟು ಹಿನ್ನೆಲೆಯನ್ನು ಮಾತ್ರ ನೋಡಿದರೆ ಇದೊಂದು ವ್ಯಕ್ತಿಗತ, ಕೌಟುಂಬಿಕ, ಸಮುದಾಯ ಧಾರ್ಮಿಕ ಸಂಘರ್ಷ. ಹಿಂದೆ ಹೇಳಿದಂತೆ ಜನಪದ ಸಾಂಸ್ಕೃತಿಕ ವೀರರು ಇಲ್ಲದವರ ಪರವಾಗಿ ಹೋರಾಟ ಆರಂಭಿಸುವುದರ ಹಿಂದೆ ಇಂತಹದೊಂದು ಪ್ರಬಲವಾದ ಕಾರಣವಿರುತ್ತೆ. ಅಂತಹ ಕಾರಣ ಇಲ್ಲಿದೆ. ನಾವು ಸಾಂಸ್ಕೃತಿಕ ವೀರರನ್ನು ಸಾಮಾಜಿಕ ಆಯಾಮದಲ್ಲಿ ಗ್ರಹಿಸುವಾಗ ಆ ಹಿನ್ನೆಲೆ ಮುಖ್ಯವಾಗುವುದಿಲ್ಲ. ಆ ತರಹದ ಹುಟುಕಾಟ ಬೇರೆ ಸ್ವರೂಪದ್ದು. ಸಾಮುದಾಯಿಕ ಸಂಘರ್ಷಗಳನ್ನು ಅಥವಾ ಚಹರೆಯನ್ನು ಕಟ್ಟಿಕೊಡುವಾಗ ಅದು ಮುಖ್ಯವಾಗುತ್ತದೆ. ಆದರೆ ಇಲ್ಲಿ ಇಲ್ಲದಂತವರನ್ನು ಅತ್ಯಂತ ಆತ್ಮೀಯ ಭಕ್ತಿಭಾವದಿಂದ ಸ್ಪಂದಿಸುವುದರ ಮುಖಾಂತರ ಅಂತವರಿಗೆ ಹೇಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕು ಅನ್ನುವ ಮಾನವಿಯತೆಯನ್ನು ತೋರಿಸಿಕೊಡುವುದು ಅದು ಮುಖ್ಯವಾಗುತ್ತದೆ. ಪದುಮಣ್ಣ ನೀರು ಮಾರುವುದು ಇವತ್ತಿನ ಬಂಡವಾಳಶಾಹಿ ವ್ಯವಸ್ಥೆಯ ಪ್ರತೀಕ. ಸಾರ್ವಜನಿಕರ ಭಾವಿಯನ್ನು ಅಕ್ರಮಣ ಮಾಡಿಕೊಳ್ಳುವುದು ಪ್ರಭುತ್ವದ ಪರಿಕಲ್ಪನೆ. ನೀರು ಮಾರಾಟ ಮಾಡುವುದು ಉಳ್ಳವರು ಮತ್ತು ಇಲ್ಲದಂತವರ ನಡುವೆ ಇರುವ ಅಂತರದಂತೆ. ಇವುಗಳೆಲ್ಲವುಗಳು ಇವತ್ತಿನ ಜಾಗತೀಕರಣವನ್ನು ನೆನಪಿಸುತ್ತವೆ. ಯಜಮಾನಿಕೆಯ ನೆಲೆಯನ್ನು ಪ್ರತಿಬಿಂಬಿಸುತ್ತವೆ. ಅಂತಹ ಭಯಂಕರವಾದ ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳುವುದು ಅಥವಾ ಹೋರಾಟ ಮಾಡುವುದು ಅದರಲ್ಲಿ ಬಲಿಯಾಗುತ್ತಿದ್ದ ತಳಸಮುದಾಯವನ್ನು ಹೊರಗಡೆ ತರುವುದು ಮುಖ್ಯವಾಗಿ ಕಾಣಿಸುತ್ತದೆ.

ಬುಳ್ಳಪ್ಪ ಸಿಂದಗಿಯಲ್ಲಿ ಮಳೆ ಬರಿಸುವುದಾಗಿ ಪದಮಣ್ಣನಿಗೆ ಹೇಳುತ್ತಾನೆ. ನೆರೆದ ಜನ ಮತ್ತು ಪದುಮಣ್ಣ ನಗುತ್ತಾರೆ. ಅವಮಾನ ಮಾಡುತ್ತಾರೆ. ಇಲ್ಲಿ ಜನರು ಅವಮಾನ ಮಾಡುವುದರ ಹಿಂದೆ ಆಶ್ಚರ್ಯವಿದೆ. ಆದರೂ ಬುಳ್ಳಪ್ಪ ಹಿಂಜರಿಯುವುದಿಲ್ಲ. ಪದುವಣ್ಣನಿಗೆ ಸವಾಲು ಹಾಕುತ್ತಾನೆ. ಪವಾಡದಲ್ಲಿ ಭಾಗಿಯಾಗುವಂತೆ ಛೇಡಿಸುತ್ತಾನೆ. ಮಳೆ ಬರಿಸಿ ಸೋಲಿಸುತ್ತಾನೆ. ಆ ಮುಖಾಂತರ ಪದುಮಣ್ಣನಿಗೆ ಇದ್ದ ಅಹಂನ್ನು ಹೊಡೆದು ಹಾಕುತ್ತಾನೆ.

> "ಏಕದಂಡಿ ಪದುಮಣ್ಣನವರಾ ಸಿಂದಗಿ ನಾಡಿಗಿ
> ಇದೂ ದುಷ್ಟರಾ ಬುಳ್ಳಪ್ಪ ಹೋಗಿ ಶಿರ ಹರದಾನಾ
> ಅವನ ಗರ್ವ ಮುರದಾನಾ ಸಿಂದಗಿ
> ನಾಡನ್ಯಾಗ ಸಿದ್ಧಾಟಗಿ ಮಳಿ ಕರಿದೊ
> ಮಹಿಮಾ ತೋರಿಸಿದ್ದ ಸೂರ"

ಮಳೆ ಬರಿಸಿ ನೀರಿನ ದಾಹದಿಂದ ಬಳಲುತ್ತಿದ್ದ ಜನ, ಪಶು, ಪ್ರಾಣಿ, ಪಕ್ಷಿಗಳಿಗೆ ನೀರು ಕೊಡುತ್ತಾನೆ. ಪದುಮಣ್ಣ ಸೋತು ಶರಣಾಗುತ್ತಾನೆ. ಇದರಿಂದ ಖುಷಿಯಾದ ಜನ.

"ಹೇ ಭಿನ್ನ ಹೇಳತಾರ ದಿನವೊಂದು ಮನಿಗಿ
ಕ್ಯಾರೂಟ ಮಾಡುತಾನ ಬುಳ್ಳಪ್ಪ ಹೋಗಿ
ಸಣ್ಣ ದೊಡ್ಡವರೆಲ್ಲಾ ಬರತಾರ ಬಾಗಿ
ಸಣ್ಣ ದೊಡ್ಡವರೆಲ್ಲಾ ಶರಣ ಶರಣ ಅಂದೊ"

ಬುಳ್ಳಪ್ಪ ಪದುಮಣ್ಣನನ್ನು ಸೋಲಿಸಿ ಸಿಂದಗಿ ನಾಡಿನಲ್ಲಿ ತನ್ನ ಐಡೆಂಟಿಟಿ ಸ್ಥಾಪಿಸಿದ. ಈಗಲೂ ಸಿಂದಗಿಯಲ್ಲಿ ಪದುಮಣ್ಣನ ದೇವಾಲಯವಿದೆ. ಈ ದೇವಾಲಯಕ್ಕೆ ಲಿಂಗಾಯತರು ಅರ್ಚಕರಾಗಿದ್ದಾರೆ. ಆಡಳಿತದ ಅಧಿಕಾರವೂ ಲಿಂಗಾಯತರದ್ದೇ ಆಗಿದೆ. ಆದರೆ ಹಾಲುಮತಸ್ಥರಿಗೆ ವಿಶೇಷ ಸ್ಥಾನಮಾನ. ಗೌರವ. ಆಚರಣೆಯ ಸಂದರ್ಭದಲ್ಲಿ ಪ್ರಥಮ ದಿನ ಆಚರಣೆ ಹಾಲುಮತಸ್ಥರಿಗೆ. ಉತ್ಸವ ಮುಂತಾದ ಸಂದರ್ಭಗಳಲ್ಲಿ ಹಾಲುಮತದವರೇ ಮುಂದು. ಈ ದೇವಾಲಯ ಹಾಲುಮತಸ್ಥರಿಗೆ ಸೇರಿದ್ದು ಇತ್ತೀಚೆಗೆ ಲಿಂಗಾಯತರು ಅಕ್ರಮಣ ಮಾಡಿಕೊಂಡಿದ್ದಾರೆ ಅನ್ನುವ ಅಪವಾದವು ಇದೆ. ಪದುಮಣ್ಣ ಲಿಂಗಾಯತನಿರಬೇಕು. ಅವನನ್ನು ಸೋಲಿಸಿ ಆ ಪ್ರದೇಶವನ್ನು ಬುಳ್ಳಪ್ಪ ತನ್ನ ಹಿಡಿತಕ್ಕೆ ತೆಗೆದುಕೊಂಡಿರಬೆಕು. ಬುಳ್ಳಪ್ಪ ಸಾವಿನ ನಂತರ ಮತ್ತೆ ಲಿಂಗಾಯತರು ಆಕ್ರಮಣ ಮಾಡಿಕೊಂಡಿರಬೇಕು. ಬುಳ್ಳಪ್ಪನ ಕಾಲದಲ್ಲಿದ್ದ ಆಚರಣೆಗಳು ಈಗಲೂ ಮುಂದುವರೆದುಕೊಂಡು ಬಂದಂತೆ ಕಾಣಿಸುತ್ತದೆ.

ಒಟ್ಟಾರೆಯಾಗಿ ಬುಳ್ಳಪ್ಪ ಮಕ್ಕಳಿಲ್ಲದವರಿಗೆ ಮಕ್ಕಳ ಸಂತಾನ ಭಾಗ್ಯ ಕೊಡುವುದು. ರೋಗಿ ಗಳನ್ನು ರೋಗದಿಂದ ಮುಕ್ತವಾಗಿಸುವುದು, ಬಡವರನ್ನು ಶ್ರೀಮಂತರನ್ನಾಗಿಸುವುದು, ಸತ್ತವರಿಗೆ ಜೀವದಾನ ಮಾಡುವುದು. ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸುವುದು. ಸಮಾಜದಲ್ಲಿ ಸಹಮತ ಜೀವನವನ್ನು ಒದಗಿಸಿಕೊಡುವ ಕಾರ್ಯ ಮಾಡುತ್ತಿದ್ದ. ಇಂತಹ ಸಾಮಾಜಿಕ ಜವಾಬ್ದಾರಿಗಳು ಈತನಲ್ಲಿ ವಿಶೇಷವಾಗಿ ಕಂಡುಬರುತ್ತವೆ.

೪.೬.೩.೧. ಸಾಕು ತಂದೆ ಮತ್ತು ಗುರುವಿನೊಂದಿಗೆ ಸಂಘರ್ಷ

ಮಾಳಪ್ಪ ಬುಳ್ಳಪ್ಪನ ಸಾಕುತಂದೆ. ಕ್ಯಾಣಗನೂರು ಕರಿಸಿದ್ಧ ಈತನ ಗುರು. ಇವರಿಬ್ಬರ ಆಶ್ರಯದಲ್ಲಿ ಬುಳ್ಳಪ್ಪ ಬೆಳೆದ. ಇವರಿಬ್ಬರ ಆರೈಕೆಯೇ ತನ್ನ ಜೀವನ ಅಂದುಕೊಂಡ. ತನ್ನ ನಿಜವಾದ ತಂದೆ ತಾಯಿಗಳ ಬಗೆಗೆ ಚಿಂತಿಸುವುದಿಲ್ಲ. ಮಾಳಪ್ಪ ಆತನ ತಂದೆ ತಾಯಿಗಳ ಬಗೆಗೆ ತಿಳಿಸದೇ ಇರುವುದು ಇದಕ್ಕೆ ಕಾರಣವಿರಬಹುದು. ಬದುಕಿನ ಭೌತಿಕ ಸೌಲಭ್ಯಗಳಲ್ಲಿ ಸಾಕುತಂದೆ ಮತ್ತು ಗುರುವಿಗೆ ಎಲ್ಲಿಯು ಅನ್ಯಾಯವೆಸಗಿದಂತೆ ಕಾಣುವುದಿಲ್ಲ. ಈತನಿಗೆ ಅಧಿಕಾರ ನೀಡುವ ಅಧಿಕಾರ ಸ್ವರೂಪದಲ್ಲಿ ಪ್ರತಿ ಹೆಜ್ಜೆಗೂ ಅನ್ಯಾಯವೆಸಗಿದ್ದಾರೆ. ಇದಕ್ಕೆ ಸಾಕಷ್ಟು ಉದಾಹರಣೆಗಳು ಡೊಳ್ಳಿನ ಹಾಡುಗಳಲ್ಲಿ ಸಿಗುತ್ತವೆ. ಹುಲಿಜಂತಿ ಗ್ರಾಮದ ಮಠದ ಅಧಿಕಾರದ ಹಸ್ತಾಂತರದ ಸಂದರ್ಭ ಇದಕ್ಕೆ ಪುಷ್ಟೀಕರಣವಾದದ್ದು. ಮಾಳಪ್ಪನಿಗೆ ವಯಸ್ಸಾದಾಗ ಮಠದ ಅಧಿಕಾರ ಮಕ್ಕಳಿಗೆ ಕೊಡಬೇಕು ಅಂತ ನಿರ್ಧರಿಸುತ್ತಾನೆ. ಆಗ ಐದು ಜನ ಮಕ್ಕಳನ್ನು ಕರೆಯಿಸಿ, ಅಂದರೆ ನಾಲ್ಕು ಜನ ಸ್ವಂತ ಮಕ್ಕಳು ಮತ್ತು ಬುಳ್ಳಪ್ಪ, ಯಜಮಾನಿಕೆಯ ಹಸ್ತಾಂತರವನ್ನು ಕುರಿತು ಮಾತನಾಡುತ್ತಿದ್ದ.

ಅದೇ ಸಂದರ್ಭದಲ್ಲಿ ಇಜೇರಿ ಮಲಕವ್ವ ಭಯಂಕರವಾದ ಸುಂಟರಗಾಳಿ ಎಬ್ಬಿಸಿಕೊಂಡು ಅದರೊಳಗೆ ತಾನು ಗುಪ್ತವಾಗಿ ಅಡಗಿಕೊಂಡು ದೂರದಲ್ಲಿ ಹೋಗುತ್ತಿರುತ್ತಾಳೆ. ಮಾಳಪ್ಪ ಅದನ್ನು ನೋಡಿ ಸರಿಯಾಗಿ ಗುರುತಿಸಿದವರಿಗೆ ಮಠದ ಅಧಿಕಾರ ಕೊಡುವುದಾಗಿ ಹೇಳುತ್ತಾನೆ. ಸಂಪ್ರದಾಯದಂತೆ ಹಿರಿಯ ಮತ್ತು ಮನೆ ಮಕ್ಕಳಿಗೆ ಮೊದಲಿನ ಆಧ್ಯತೆ. ಆದರೆ ಸ್ವಂತ ಮಕ್ಕಳು ಗುರುತಿಸಲು ಸೋಲುತ್ತಾರೆ. ಬುಳ್ಳಪ್ಪ ಗುರುತಿಸುತ್ತಾನೆ. ಆದರೂ ಆತನಿಗೆ ಅಧಿಕಾರ ಕೊಡುವುದಿಲ್ಲ. ಈ ನಿರಾಕರಣೆ ಭಿನ್ನವಾದ ಆಯಾಮಕ್ಕೆ ಅವಕಾಶ ಕಲ್ಪಿಸುತ್ತದೆ. ಮಾಳಪ್ಪ ಪರೀಕ್ಷೆಗೆ ಒಡ್ಡುವ ಅವಸ್ಥೆಯ ಹಿಂದೆ ರಾಜಕಾರಣವಿದ್ದಂತಿದೆ. ಅವಕಾಶದಿಂದ ವಂಚಿತನನ್ನಾಗಿಸುವ ಉದ್ದೇಶವಿದೆ. ಸಾಕುಮಗನಿಗೆ ಅವಕಾಶ ಕೊಡಲಿಲ್ಲ ಅನ್ನುವ ಅಪವಾದವನ್ನು ತಪ್ಪಿಸಿಕೊಳ್ಳುವ ಪೂರ್ವನಿರ್ಧಾರದಂತಿದೆ. ಅಂದರೆ ಇಜೇರಿ ಮಲಕವ್ವನನ್ನು ಗುರುತಿಸುವ ಪವಾಡದ ಪರೀಕ್ಷೆಯಲ್ಲಿ ಬುಳ್ಳಪ್ಪ ಸೋತ ನಂತರ ತನ್ನಷ್ಟಕ್ಕೆ ತಾನೆ ಮೌನವಾಗುತ್ತಾನೆ. ಆಗ ಯಾರಿಗೆ ಬೇಕಾದರೂ ಅಧಿಕಾರ ಕೊಡಬಹುದು. ಅಥವಾ ಪದ್ಧತಿಯ ಪ್ರಕಾರ ಹಿರೇಮಗನಿಗೆ ಕೊಡಬಹುದು ಅನ್ನುವುದು ಮಾಳಪ್ಪನ ಯೋಚನೆ ಆಗಿರಬೇಕು. ಬುಳ್ಳಪ್ಪ ಇದನ್ನು ಹೊಡೆದು ಹಾಕಿದ. ಯಾವುದೇ ದುರುದ್ದೇಶವಿಲ್ಲದೆ ಸಹಜವಾಗಿ ಗೆದ್ದ. ಹಠದಿಂದಲ್ಲ. ಮಾಳಪ್ಪನ ನಿರಾಕಾರದ ಹಿಂದೆ ಹಠವಿದೆ. ಅಧಿಕಾರ ಕೊಡಬಾರದು ಅನ್ನುವ ಉದ್ದೇಶವಿದೆ. ಇದಾವುದರ ಪ್ರಜ್ಞೆ ಇಲ್ಲದೆ ನಾನು ಗೆದ್ದಿರುವೆ. ನನ್ನ ತಂದೆ ನನಗೆ ಮಠದ ಅಧಿಕಾರ ಕೊಡುತ್ತಾನೆ ಅನ್ನುವ ಅಭಿಲಾಷೆಯಿಂದ ಬುಳ್ಳಪ್ಪ ಸ್ವತಃ ಮುಂದೆ ನನಗೆ ಅಧಿಕಾರ ಕೊಡು ಎಂದು ಕೇಳುತ್ತಾನೆ. ಆದರೂ ಮಾಳಿಂಗರಾಯ ಒಪ್ಪುವುದಿಲ್ಲ. ಸ್ವತಃ ತಾವೇ ಮುಂದೆ ಬಂದು ನನಗೆ ಅದಿಕಾರ ಕೊಡು ಅಂತ ಕೇಳುವುದು ವ್ಯಕ್ತಿಯ ಮೌನ ಪ್ರತಿರೋಧದ ಸಂಕೇತ. ಮಾನವಿಯ ಸಂಬಂಧಗಳ ಇಕ್ಕಟ್ಟಿನಲ್ಲಿ ಸಿಲುಕಿ ಅವಕಾಶಗಳನ್ನು ಕಳೆದುಕೊಳ್ಳುವ ಶಕ್ತಿಶಾಲಿಗಳ, ಜ್ಞಾನಿಗಳ ಸೂಕ್ಷ್ಮ ಸ್ಫೋಟವಿದು. ನಾನು ಆ ಜಾಗಕ್ಕೆ ಅರ್ಹ. ಅದನ್ನು ನ್ಯಾಯಸಮ್ಮತವಾಗಿ ಪಡೆದಿದ್ದೇನೆ. ಆದರೂ ನನ್ನನ್ನು ನಿರಾಕರಿಸಲಾಗುತ್ತಿದೆ. ಆ ಮೂಲಕ ಅವಮಾನ ಮಾಡುತ್ತಿದ್ದಾರೆ. ನನ್ನ ಶಕ್ತಿ ದುರುಪಯೋಗ ಆಗುತ್ತದೆ. ನನ್ನನ್ನು ಈ ವ್ಯವಸ್ಥೆಯ ಹೊರಗಿನವರನಂತೆ, ಸಾಕುಮಗನಂತೆ ಕಾಣುತ್ತಿದ್ದಾರೆ ಅನ್ನುವ ಅನುಮಾನ ಬಂದಾಗ ಮತ್ತೆ ಮತ್ತೆ ಅವಕಾಶ ವಂಚಿತ ಆಗುವುದಕ್ಕೆ ಇಷ್ಟಪಡದೆ ತಾವೇ ಮುಂದೆ ಬಂದು ಅಧಿಕಾರ ಕೊಡುವಂತೆ ಕೇಳುವುದು ಸಹಜ. ಮಹಾಭಾರತದ ಕರ್ಣನಲ್ಲಿ ಇಂತಹ ಆತಂಕ ಮತ್ತು ಪ್ರತಿರೋಧ ಇತ್ತು. ಬುಳ್ಳಪ್ಪನಲ್ಲಿ ಆಗಿದ್ದು ಇದೆ. ಕೌಟುಂಬಿಕ ಶ್ರೇಣೀಕರಣ ಇಲ್ಲಿ ಕೆಲಸ ಮಾಡಿದೆ. ಇದನ್ನು ಸೂಕ್ಷ್ಮವಾಗಿ ಅರಿತ ಬುಳ್ಳಪ್ಪ ಪ್ರತಿರೋಧ ಮಾಡಿದ್ದಾನೆ. ಇದು ಮಾಳಿಂಗರಾಯ ಮತ್ತು ಬುಳ್ಳಪ್ಪ ಸಂಬಂಧದಲ್ಲಿ ತೊಡಕಾಗದಂತೆ ಕಾಣುತ್ತದೆ. ಮುಂದೆ ಮಠ ಬಿಟ್ಟು ಹೊರಹಾಕುವುದಕ್ಕೆ ಕಾರಣ ವಾಗಿರುವುದಕ್ಕೆ ಸಾಧ್ಯವಿದೆ.

ಇದೇ ಧೋರಣೆ ಕ್ಯಾಣಗನೂರು ಕರಿಸಿದ್ಧೇಶ್ವರನ ಸೇವೆಯ ಆಯ್ಕೆ ವಿಷಯದಲ್ಲಿ ಆಗುತ್ತದೆ. ಒಮ್ಮೆ ಕರಿಸಿದ್ಧ "ನೋಡು ಮಾಳಪ್ಪ ನಿನಗೆ ವಯಸ್ಸಾಯಿತು. ನಿನ್ನಿಂದ ಪೂಜೆ ಮಾಡಲು ಆಗುತ್ತಿಲ್ಲ. ನಿನ್ನ ಮಕ್ಕಳಲ್ಲಿ ಯಾರನ್ನಾದರು ನನ್ನ ಸೇವೆಗೆ ಬಿಟ್ಟುಬಿಡು" ಅಂತ ಹೇಳುತ್ತಾನೆ. ಆಗ ಮಾಳಪ್ಪ ಐದು ಜನ ಮಕ್ಕಳನ್ನು ಕರೆಯಿಸಿ ಕೇಳಿದ. ಮಾತು ಮುಗಿಯುತ್ತಿದ್ದಂತೆಯೇ ಬುಳ್ಳಪ್ಪ ನಾನೆ

[illegible]

ಹೋಗುವೆ ಅಂತ ಮುಂದೆ ಬಂದ. ಆಗಲೂ ಮಾಳಪ್ಪ 'ಛೇ ಸೂಳೆ ಮಗನೇ ಎಂಥಾ ಆಸೆ ಬುರುಕ ನೀನು' ಅಂತ ಹೀಯಾಳಿಸಿದ. ಈ ಧೋರಣೆ ಮಲತಂದೆತನವನ್ನು ತೋರಿಸುತ್ತದೆ. ಇಬ್ಬರ ನಡುವಿನ ವಾಗ್ವಾದದ ನಂತರ ಮಠದ ಪೂಜೆಗೆ ಅನಿವಾರ್ಯವಾಗಿ ಮಾಳಪ್ಪ ಒಪ್ಪಿಗೆಕೊಡುತ್ತಾನೆ. ಈ ಒಪ್ಪಿಗೆಯ ಹಿಂದೆ ಕರಿಸಿದ್ಧನ ಬೇಡಿಕೆ ಇದೆ. ಏಕೆಂದರೆ ಕರಿಸಿದ್ಧನಲ್ಲಿ ಮಾಳಪ್ಪ ಬುಳ್ಳಪ್ಪನ ಬಗ್ಗೆ ಅಸಮಾಧಾನದ ಮಾತುಗಳನ್ನು ಆಡಿದರೂ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಒಪ್ಪಿಗೆ ಕೊಡುತ್ತಾನೆ. ಅಂದರೆ 'ಎಪ್ಪಾ ನೀ ಬಾಳ ಕೆಟ್ಟಾವ. ನೀ ಬರಿ ಕಣ್ ತಗದ್ರ ನನಮಗ ಸುಟ್ಟು ಬೂದಿ ಆಗತಾನ. ನೀ ಅಂತ ಅವತಾರ ಪುರುಷ ಅದಿ. ಅವ ಒಂದು ದಿನ ಪೂಜಾ ಮಾಡ್‌ತಾನ ನಾಲ್ಕು ದಿನ ತಿರುಗುತಾನ. ನೀ ಎಲ್ಲದಕ್ಕೂ ಸಹಿಸಿಕೊಂತಿ ಅಂದ್ರ ನಾ ಕಳಿಸವಾ. ಇಲ್ಲ ಅಂದ್ರ ಇಲ್ಲ' ಅಂತ ಮಾಳಪ್ಪ ಹೇಳಿದ. ಅದಕ್ಕೆ ಕರಿಸಿದ್ಧ 'ನಿನ ಮಗ ಯಾಂಗ್ ಮಾಡ್ತಾನ ಮಾಡ್ಲಿ ನಾ ಧಕ್ಕಿಸಿಕೊಂತೀನಿ ಬಿಡು' ಅಂತ ಹೇಳುತ್ತಾನೆ.

ಈ ತಿರಸ್ಕಾರದ ನಡುವೆ ಪುತ್ರ ವಾತ್ಸಲ್ಯವೂ ಮಾಳಪ್ಪನಿಗೆ ಇತ್ತು. ಆಗ ಬೇಡಿಕೊಳ್ಳುವುದರ ಹಿಂದೆ ಶಿಕ್ಷಿಸಬೇಡ ಅನ್ನುವ ಮಾತುಗಳನ್ನು ಹೇಳುತ್ತಾನೆ. ಇದರ ಜೊತೆಗೆ ಕೆಲವು ಬೇಡಿಕೆಗಳನ್ನೂ ಇಟ್ಟ.

"ಹೇ ಜಗ್ಗಿನ ಬುಳ್ಳಪ್ಪನ ಕತಿ ಕೇಳಿರಿ
ಮಾಳಪ್ಪ ಸಾಕಿದ ಮಗ ಅನಾರಿ
ಕರಿದೇವರ ಕೈಯಾಗ ಹೊಯ್ದು ಕೊಟ್ಟಾನರ್ರಿ
ಬೇಡಿದ ಉಣಸಂದೊ
ಬುಳ್ಳಪ್ಪಗೆ ಜ್ವಾಕಿ
ಸವಣ ರಾಜಕಿ ನೋಡಿದ ತೋರಿಸಂದೋ"

ಹೀಗೆ ಇಟ್ಟ ಬೇಡಿಕೆಗಳನ್ನು ಕರಿಸಿದ್ಧ ಬುಳ್ಳಪ್ಪನ ಒತ್ತಾಯದ ಮೇರೆಗೆ ಪೂರೈಸುತ್ತಾನೆ. ಪೂರೈಕೆಯ ಸಂದರ್ಭ ಬಹಳ ಮುಖ್ಯವಾಗಿದ್ದು. ಕರಿಸಿದ್ಧನ ಆತಂಕಗಳನ್ನು ಮೀರಿ ಬುಳ್ಳಪ್ಪ ಪವಾಡ ಮಾಡುತ್ತಾನೆ. ಆ ಮೂಲಕ ಪರಾಕ್ರಮಿಯಾಗಿ, ಶಕ್ತಿಶಾಲಿಯಾಗಿ, ಜ್ಞಾನಿಯಾಗಿ ಮೆರೆಯುತ್ತಾನೆ. 'ಸವಣದ ನಾಡಿ'ಗೆ ಭೇಟಿ ಕೊಟ್ಟಾಗ "ಛೇಡಿಸಿದ್ಧ"ರೊಂದಿಗೆ ಮಾಡುವ ಸಂಘರ್ಷ, ಅವರನ್ನು ಸದೆಬಡಿಯುವ ವಿಧಾನ ಕುತೂಹಲಕರವಾದದ್ದು. ಮಾಳಪ್ಪನಂತೆ ಈತನು ಸಿದ್ಧರೊಂದಿಗೆ ಸಂಘರ್ಷ ಮಾಡುವುದು ಕಂಡುಬರುತ್ತದೆ. ಸಿದ್ಧಟಿಕೆಯ ಜ್ಞಾನದಲ್ಲಿ ಹೆಚ್ಚು ಅನುಭವ ಪಡೆದಿದ್ದರಿಂದ. ಸಿದ್ಧರನ್ನು ಸೋಲಿಸಿದ. ಇದರಿಂದ ಸ್ವತಃ ಬೀರಪ್ಪ ಮುಜುಗರಕ್ಕೆ ಆದರೂ ಒಳಗಾಗುತ್ತಾನೆ. ಒಳಗೊಳಗೆ ಖುಷಿ ಪಡುತ್ತಾನೆ. ಬುಳ್ಳಪ್ಪನ ವಿಜಯದ ಬೆಂಬಲಿಗನಾಗಿ ಕಾರ್ಯನಿರ್ವಹಿಸುತ್ತಾನೆ.

೪.೬.೩.೨. ಅಸ್ತಿತ್ವಕ್ಕಾಗಿ ಗಾಣಿಗರೊಂದಿಗೆ ಸಂಘರ್ಷ

ಕೌಟುಂಬಿಕ ಶ್ರೇಣಿಕರಣವನ್ನು ಎದುರಿಸುತ್ತಿದ್ದ ಬುಳ್ಳಪ್ಪ ಸಿಂದಗಿಯ ಏಕದಂಡಿ ಪದುಮಣ್ಣನನ್ನು ಸೋಲಿಸಿ ಬರುವುದಕ್ಕೆ ಹೆಚ್ಚು ಸಮಯ ತಗೆದುಕೊಂಡ ಅನ್ನುವ ಸಣ್ಣ ಕಾರಣದಿಂದ ಹುಲಿಜಂತಿ ಮತ್ತು ಕ್ವಾಣಗನೂರು ಮಠಗಳಿಂದ ತೆಗೆದು ಹಾಕಲಾಗುತ್ತದೆ. ಅಂದರೆ,

"ಮೂರ ತಿಂಗಳ ಮುದ್ದತ್ತದೊಳಗ ವಳ್ಳಿ ಬರಬೇಕೆಂದೂ
ಹೇ ಗುರುವಿನ ಮಾತರು ಹಿಡಿಯಂದಾನೊ
ಮೂರು ತಿಂಗಳು ಮುದ್ದತ್ತು ಆರತಾದೊ ಮರವೂ
ಕರಿದೇವರ ಮಠ ನಿನಗೆ ಆಗತಾದ ವರವೊ"

ಪದುಮಣ್ಣನನ್ನು ಸೋಲಿಸಿ ಬರುವುದಕ್ಕೆ ಮಾಳಪ್ಪನಿಂದ ಒಪ್ಪಿಗೆ ಸಿಕ್ಕ ಸಮಯ ಕೇವಲ ಮೂರು ತಿಂಗಳಾಗಿತ್ತು. ಆ ಮೂರು ತಿಂಗಳಲ್ಲಿ ಬುಳ್ಳಪ್ಪ ತನ್ನ ಸ್ವತ ಕೆಲಸವನ್ನು ಮುಗಿಸಿಕೊಂಡು ವಾಪಾಸು ಮಠ ಸೇರಬೇಕು ಅನ್ನುವುದು ಮಾಳಪ್ಪನ ಕರಾರು. ಅದರಂತೆ ಬುಳ್ಳಪ್ಪ ಬಹಳ ಪ್ರಜ್ಞಾ ಪೂರ್ವಕವಾಗಿ ಆ ಸಮಯದಲ್ಲಿ ಸೋಲಿಸುತ್ತಾನೆ. ಆದರೆ ಜನರ ಬೇಡಿಕೆಯಂತೆ ಹೆಚ್ಚು ಕಾಲ ಅಲ್ಲಿಯೇ ಕಳೆದುಬಿಡುತ್ತಾನೆ. ಅನಿವಾರ್ಯವಾಗಿ ಮಾಳಪ್ಪ ಕೊಟ್ಟ ಸಮಯ ಮೀರುತ್ತೆ. ಈ ಕಾರಣ ವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಸಿದ್ಧನಾದ ಮಾಳಪ್ಪ ಬಂದ ತಕ್ಷಣ 'ನೀನು ಗುರುವಿಗೆ ಸಲ್ಲದವ. ಸಾಕು ತಂದೆಗೂ ಸಲ್ಲದವ'. ನಮ್ಮಿಬ್ಬರಲ್ಲಿ ಇರುವ ಯೋಗ್ಯತೆ ನಿನಗಿಲ್ಲ. ಮಠದಿಂದ ಹೊರಗಡೆ ಹೋಗು. ನಮ್ಮಲ್ಲಿ ಇರಲೇಬೇಕು ಎನ್ನುವ ಹಠ ನಿನ್ನದಾದರೆ ನಮ್ಮಿಬ್ಬರ ನಡುವೆ ಇರುವ ಬಿಜ್ಜರಗಿ ಗ್ರಾಮದಲ್ಲಿ ಇರು. ನನ್ನ ನೋಡಬೇಕು ಅನಿಸಿದರೆ ವರ್ಷಕೊಮ್ಮೆ ದೀಪಾವಳಿಯ ದಿವಸ ಬಾ' ಅಂತ ಹೇಳಿ ಮಾಳಪ್ಪ ಮನೆಯಿಂದ ಹೊರಹಾಕುತ್ತಾನೆ. ಇದರಿಂದ ನೊದ ಬುಳಪ್ಪ ಅನಿವಾರ್ಯವಾಗಿ ಹೊರಬರುತ್ತಾನೆ. ಈಗಲೂ ಮಾಳಪ್ಪನ ಜಾತ್ರೆಯಲ್ಲಿ ಬುಳ್ಳಪ್ಪನ ಪಲ್ಲಕ್ಕಿ ಬಂದು ಮಾಳಪ್ಪನನ್ನು ಭೇಟಿ ಆಗುವ ತನಕ ಯಾವುದೇ ದೈವದ ಪಲ್ಲಕ್ಕಿಗಳು ಭೇಟಿ ಆಗುವುದಿಲ್ಲ. ಜಾತ್ರೆಗೆ ಬಂದ ಪಲ್ಲಕ್ಕಿಗಳು ಸಮಾಧಿಯ ಹೊರಗಡೆ ತಂಗಿರುತ್ತವೆ. ಇದು ಮಾಳಪ್ಪ ನಲ್ಲಿ ಬುಳ್ಳಪ್ಪನಿಗೆ ಇದ್ದ ಪ್ರಾಧಾನ್ಯತೆಯ ಸ್ವರೂಪದ ರೂಪಕವಾಗಿದೆ.

ಬಿಜ್ಜರಗಿಗೆ ಬಂದು ವಾಪಸು ಹೋದ ನಂತರ ಬುಳ್ಳಪ್ಪನಿಗೆ ಅಭದ್ರತೆ ಕಾಡಿದೆ. ಜೊತೆಗೆ ಮನೆಯಿಂದ ಹೊರಹಾಕಿದ ಅವಮಾನ ಕಾಡುತ್ತಿತ್ತು. ಇವೆರಡು ಕಾರಣಗಳಿಂದ ಹೊರಬರುವ ಸಲುವಾಗಿ ಮತ್ತು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಅದೇ ಗ್ರಾಮದ ಗಾಣಿಗ ಸಮುದಾಯದೊಂದಿಗೆ ಸಂಘರ್ಷ ಆರಂಭಿಸಿದ. ಆ ವೇಳೆಗಾಗಲೇ ಆ ಪ್ರದೇಶದಲ್ಲಿ ಗಾಣಿಗ ಸಮುದಾಯ ಗಟ್ಟಿಯಾಗಿ ನೆಲೆಯೂರಿರಬೇಕು. ಆ ಕಾರಣಕ್ಕೆ ಇವನ ಆರಂಭಿಕ ಕಾರ್ಯಚಟುವಟಿಕೆಗಳನ್ನು ಪ್ರಶ್ನಿಸಲಾಗಿದೆ. ಆ ಕೋಪಕ್ಕೆ ಅವರನ್ನು ಶಾಶ್ವತವಾಗಿ ಇಲ್ಲವಾಗಿಸುವಂತಹ ಪವಾಡಗಳಿಗೆ ಕೈಹಾಕುತ್ತಾನೆ. ಅಂದರೆ

* ಮನೆಯಲ್ಲಿರುವ ಅಡಕಲ ಗಡಿಗೆಗಳನ್ನು ಬಿಳಿಸುವುದು.
* ಗರ್ಭಧರಿಸಿದ ಪಶುಗಳು ಕಂದು (ಗರ್ಭಪಾತ) ಹಾಕುವಂತೆ ಮಾಡುವುದು ಮತ್ತು ಅನಾರೋಗ್ಯ ದಿಂದ ಬಳಲಿಸುವುದು.
* ಗರ್ಭಿಣಿ ಹೆಣ್ಣುಮಕ್ಕಳ ಹೊಟ್ಟೆ ಬೀಳುವಂತೆ ಮಾಡುವುದು.

ಹೀಗೆ ಸಂಹಾರಕ್ಕಾಗಿ ಮೂರು ದಿನದ ಯೋಜನೆ ಹಾಡಿಕೊಂಡಿದ್ದ. ಎರಡು ದಿನಗಳಲ್ಲಿ ಈ ಮೇಲಿನ ಪವಾಡಗಳನ್ನು ಮಾಡಿ ಮುಗಿಸಿದ, ಯಶಸ್ವಿಯಾದ. ಮೂರನೇ ದಿನದಲ್ಲಿ ಸಂಪೂರ್ಣವಾಗಿ

ಆ ಸಮುದಾಯವನ್ನು ಸರ್ವನಾಶ ಮಾಡಬೇಕು ಅಂತ ನಿರ್ಧಾರ ಮಾಡಿದ. ಅದಕ್ಕಾಗಿ ಮೂರನೇ ದಿನ ತರಾತುರಿ ಸಿದ್ಧತೆಯನ್ನು ನಡೆಸಿದ. ಇದನ್ನರಿತ ಗಾಣಿಕ ಸಮುದಾಯದವರೆಲ್ಲರು ಸೇರಿ ಅವನ ಶಿಷ್ಯನ ಸಹಾಯದಿಂದ ಆತನನ್ನು ಹಿಡಿಯುತ್ತಾರೆ. ಸಾಮುದಾಯಿಕ ಒಮ್ಮತದ ನಿರ್ಧಾರದಿಂದ ಕೊಲೆ ಮಾಡುತ್ತಾರೆ. ಬುಳ್ಳಪ್ಪನಿಗೆ ಸಾವು ಖಚಿತ ಅಂತ ಗೊತ್ತಾದಾಗ ಶಿಷ್ಯನನ್ನು ಕುರಿತು ಎಂತಹ ಮೋಸಗಾರ ನೀನು, ಎಂತ ಕೆಟ್ಟ ಕೆಲಸ ಮಾಡಿದೆ. ಇವತ್ತೊಂದು ದಿವಸ ಮೌನವಾಗಿದ್ದರೆ ನಾಳೆ ನೀನು ಏನು ಕೇಳಿದರು ಕೊಡತಿದ್ದೆ; ಅಂತ ಹೇಳಿ ಸಾಯುತ್ತಾನೆ. ಶಿಷ್ಯ ಅದೇ ಗ್ರಾಮದ ಗಾಣಿಗ ಕುಲದವನು ಅನ್ನುವುದು ಸದ್ಯಕ್ಕೆ ತಿಳಿದುಬಂದಿದೆ. ಇಲ್ಲಿ ಕುಲಾಭಿಮಾನ ಕೆಲಸ ಮಾಡಿರಬೇಕು.

ಬಿಜ್ಜರಗಿ ಗ್ರಾಮದ ಹೊರಭಾಗದಲ್ಲಿ ಸರೋವರದ ಮಧ್ಯೆ ಈತನ ಸಮಾಧಿಯಿದೆ. ಆ ಸ್ಥಳಕ್ಕೆ ಎರಡು ಮೂರು ದಿಕ್ಕಿನಿಂದ ನೀರು ಹರಿದುಬರುತ್ತದೆ. ಸುತ್ತಮುತ್ತಲ ಭೂಮಿ ಕುರಿಗಾರಿಕೆಗೆ ಯೋಗ್ಯವಾದದ್ದು. ಆ ಕಾರಣಕ್ಕೆ ಬುಳ್ಳಪ್ಪ ಅಲ್ಲಿ ಶಾಶ್ವತವಾಗಿ ನೆಲೆಯುರಲು ಪ್ರಯತ್ನಿಸಿರಬೇಕು. ತನ್ನ ವಂಶಸ್ಥರ ಮೂಲವು ಇದಕ್ಕೆ ಕಾರಣವಾಗಿರಬೇಕು. ಅದಕ್ಕೆ ಗಾಣಿಗ ಸಮುದಾಯ ಆವಕಾಶ ಕಲ್ಪಿಸಿಲ್ಲ. ಏಕೆಂದರೆ ಆ ವೇಳೆಗಾಗಲೇ ಗಾಣಿಗ ಸಮುದಾಯ ಪಶುಪಾಲನೆ ಮತ್ತು ಕೃಷಿಯಲ್ಲಿ ನಿರತವಾಗಿತ್ತು. ಅದನ್ನು ಕಳೆದುಕೊಳ್ಳುವುದಕ್ಕೆ ಇಷ್ಟವಿರಲಿಲ್ಲ. ತಮ್ಮ ಅಸ್ತಿತ್ವಕ್ಕಾಗಿ ಬುಳ್ಳಪ್ಪನನ್ನು ಸಂಹಾರ ಮಾಡಲೇಬೇಕಾಯಿತು. ಹಾಲುಮತ ಮತ್ತು ಗಾಣಿಗ ಸಮುದಾಯಗಳು ಸಂಘರ್ಷ ಮಾಡಿರುವ ಸಾಕಷ್ಟು ಉಲ್ಲೇಖಗಳು ಡೊಳ್ಳಿನ ಹಾಡುಗಳಲ್ಲಿ ಬರುತ್ತವೆ. ಮಾಳಪ್ಪನ ತಂದೆ ಸ್ವಾಮಿರಾಯ ಮತ್ತು ತುಕ್ಕಪ್ಪರಾಯರನ್ನು ತಮ್ಮ ಮನೆ ದೇವತೆ 'ಇಚೇರಿ ಮಲಕವ್ವ' ಮನುಷ್ಯನ ಮಾಂಸ ಬೇಡುತ್ತಾಳೆ. ಆಗ ಇವರು 'ಗಾಣಿಗರ ಮಲ್ಲಣ್ಣ'ನನ್ನು ಬಲಿಕೊಡುತ್ತಾರೆ. ಗಾಣಿಗರು ಹಾಲುಮತದವರನ್ನು ನಾಶ ಮಾಡಿರುವ ಉಲ್ಲೇಖಗಳು ಇವೆ. "ಬಿಜಾಪುರ ಜಿಲ್ಲೆ ಹೂರ್ತಿ ಗ್ರಾಮದಲ್ಲಿ ರೇವಣಸಿದ್ಧನನ್ನು ಗುರುವನ್ನಾಗಿ ಮಾಡಿಕೊಂಡು 'ಗಂಗಿ ಮಾಳಮ್ಮ'ನನ್ನು ಸಂಹಾರ ಮಾಡಿರುವ ಕಥೆಗಳು ಇವೆ."[೧೩೩] ಕೆಲವು ಕಡೆ ಸಂಕರಶೀಲ ಆಗಿರುವ ಕುರುಹುಗಳು ಇವೆ. ಹಾಗಾಗಿ ಈ ಎರಡು ಸಮುದಾಯಗಳು ಸಂಕರಶೀಲ ಮತ್ತು ಸಂಘರ್ಷದ ಬಗೆಗೆ ವಿಶೇಷವಾದ ಅಧ್ಯಯನ ಮಾಡಬಹುದು. ಸಂಘರ್ಷಕ್ಕೆ ಇರುವ ಸೂಕ್ಷ್ಮ ಹಿನ್ನಲೆಯನ್ನು ಗುರುತಿಸುವುದಕ್ಕೆ ಸಾಧ್ಯ.

೪.೬.೩.೩. ಬುಳ್ಳಪ್ಪನ ಸಾವಿನ ಗೊಂದಲಗಳು

ಬುಳ್ಳಪ್ಪನ ಸಾವಿನ ಕಥನಗಳು ಗೊಂದಲಮಯವಾಗಿವೆ. ಕೆಲವು ಕಡೆ "ಕೊಲೆಯಾದ" ಮತ್ತೆ ಕೆಲವು ಕಡೆ "ಮಾಯವಾದ" ಅನ್ನುವ ಉಲ್ಲೇಖಗಳು ಸಿಗುತ್ತವೆ. ಈತನ ಸಮಾಧಿ ಕೊಲೆ ಮಾಡಿದ ಸೂಕ್ಷ್ಮತೆಯನ್ನು ಹೇಳುತ್ತದೆ. ಸಮಾಧಿಯ ಮೇಲೆ "ಹಾರಿ" ಬಡೆಯಲಾಗಿದೆ. ಜನಪದಿಗರ ದೃಷ್ಟಿಯಲ್ಲಿ ನೆತ್ತಿಯ ಮೇಲೆ (ಗೂಟ) ಬಡಿಯುವುದೆಂದರೆ ಬೆಳವಣಿಗೆಯನ್ನು ತಡೆಯುವುದು ಎಂದರ್ಥ. ದೈವಗಳ, ಮೂರ್ತಿಗಳ ಬೆಳವಣಿಗೆ ತಡೆಯುವುಕ್ಕೆ ಈಗಲೂ ಗೂಟ ಬಡಿಯುವ ಪರಿಪಾಠವಿದೆ. ಹಡಗಲಿ ತಾಲೂಕು ಕುರುವತ್ತಿ ಗ್ರಾಮದ 'ಬಸವಣ್ಣ' ಮೂರ್ತಿಯ ತಲೆಯ ಮೇಲೆ ಹಾಗೂ ಕುರುಗೋಡು ಗ್ರಾಮದ ಬಸವಣ್ಣನ ಮೂರ್ತಿಯ ತಲೆಯ ಮೇಲೆ ಹಾರಿ ಬಡಿದಿದ್ದಾರೆ.

ಬುಳ್ಳಪ್ಪನಿಗೆ ಗಾಣಿಗರು ಹಾರಿ ಬಡಿದಿದ್ದಾರೆ. ಬುಳ್ಳಪ್ಪ ಪವಾಡಗಳನ್ನು ಮಾಡಿ ಗಾಣಿಗ ಸಮುದಾಯವನ್ನು ಹಿಂಸೆ ಮಾಡುತ್ತಿದ್ದ. ಇದರಿಂದ ರೊಚ್ಚಿಗೆದ್ದ ಗಾಣಿಗ ಸಮುದಾಯ ಬುಳ್ಳಪ್ಪನನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತದೆ. ಆಗ ಬುಳ್ಳಪ್ಪ ತಪ್ಪಸಿಕೊಂಡು ಓಡಿ ಹೋಗಿ ಎರಡು ಕಲ್ಲು ಬಂಡೆಗಳ ಸಂದಿಯಲ್ಲಿ ಬಚ್ಚಿಟ್ಟುಕೊಳ್ಳುತ್ತಾನೆ. ಕೋಪಗೊಂಡ ಅವರು ಆ ಸಂದಿಗೆ ದೊಡ್ಡದಾದ ಹಾರಿ ಬಡಿದರು. ಅವತ್ತಿನಿಂದ ಕಾಣಿಸಲೇ ಇಲ್ಲ ಅನ್ನುವ ಕಥೆಗಳು ಸಿಗುತ್ತವೆ. ಈಗಲೂ ಗದ್ದುಗೆಯ ಮೇಲೆ ಗೂಟಾ ಬಡಿದಿದ್ದಾರೆ. ಈ ವಾಸ್ತವ ಚಿತ್ರಣವನ್ನು ಮರೆಮಾಡಿಸುವುದಕ್ಕೆ 'ಮಾಯವಾದ' ಅನ್ನುವ ಕಲ್ಪನೆಯನ್ನು ಹುಟ್ಟುಹಾಕಲಾಗಿದೆ. ಇಂತಹ ಆಪಾದನೆಗಳು ಹಲವು ತಳಸಮುದಾಯದ ಜನಪದ ಸಾಂಸ್ಕೃತಿಕ ನಾಯಕರುಗಳಿಗಿವೆ. "ಮುಗೇರರ ಸಮುದಾಯದ ಸಾಂಸ್ಕೃತಿಕ ನಾಯಕರಾದ ಮುದ್ದು-ಕೀಲ ಅನ್ನುವ ಅವಳಿ ಸಹೋದರರಿಗೆ ಇಂತಹ ಅಪಾದನೆ ಇದೆ."[೧೩೪] ಸಿರಿಕಾವ್ಯದಲ್ಲಿ ಬರುವ 'ಕೋರಗ ತನಿಯರ' ಸಾವು ಇಂತದ್ದು. ಹೀಗೆ ಸತ್ತವರ ದೇಹಗಳ ಮಾಹಿತಿ ಸಿಗುವುದಿಲ್ಲ. "ಏಕೆಂದರೆ ದೇಹವನ್ನು ಬಿಟ್ಟುಹೋದ ಅಂದರೆ ಮಾಯಕ್ಕೆ ಔಚಿತ್ಯ ಬರುವುದಿಲ್ಲ. ದೇಹ ಸಮೇತ ಮಾಯವಾದ ಅಂದರೆ ಈ ನಿಗೂಢ ನಿರೂಪಣೆಗೆ ಸತ್ಯತೆ ಬರುತ್ತದೆ".[೧೩೫] ಜೊತೆಗೆ ಜನಪದಿಗರು ತಾವು ನಂಬಿರುವ ಅಥವಾ ಆರಾಧಿಸುವ ದೈವವನ್ನು ಸಾಯಿಸದಿರುವುದಕ್ಕೆ ಇಷ್ಟಪಡುವುದಿಲ್ಲ. ಹಾಗಾಗಿ "ದೈವಕ್ಕೇರಿದ ವ್ಯಕ್ತಿಗಳ ಅವರ ಹೆತ್ತವರ ಜನನ ಸಂಬಂಧವಾಗಿ ರಹಾಸ್ಯಾತ್ಮಕತೆ ಇರುವಂತೆಯೇ ಇವರ ಜೀವನಾಶದ ಸಂಬಂಧದ ಬಗೆಗೆ ನಿಗೂಢತೆ ಗೂಡು ಕಟ್ಟಿರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ ದೈವ ಕಥನಗಳಲ್ಲಿ ಕೆಲವೊಂದು ಅಕಾಲಿಕ ಅಥವಾ ಅಸಹಜ ಮರಣವನ್ನು ಸಾವೆಂದು ಹೇಳದೆ "ಮಯೆ" ಅಥವಾ "ಮಾಯಕ" ಎಂಬ ನಿಗೂಢತೆಗೊಪ್ಪುವ ಪರಿಭಾಷೆಯಿಂದ ಭೂತ ಚರಿತ್ರಕಾರರು ಸೂಚಿಸುತ್ತಾರೆ. ಅಂತ ಅಕಾಲಿಕ ಮರಣವು ಕೊಲೆಯ ಮೂಲಕವೊ ಆತ್ಮಹತ್ಯದ ಮೂಲಕವೋ ಅಥವಾ ಅನಿರೀಕ್ಷಿತ ಆಕಸ್ಮಿಕದ ಮೂಲಕವೋ ನಡೆದಿರಬಹುದು".[೧೩೬] ಬುಳ್ಳಪ್ಪನ ವಿಷಯದಲ್ಲಿ ಹೀಗೆ ಆಗಿರಬೆಕು. ಹಾಗಾಗಿ ಈ ಸಾವು ಉದ್ದೇಶಪೂರಿತ ಕೊಲೆ ಅಂತ ಹೇಳಬಹುದು.

೪.೬.೪. ಪಾರಂಪರಿಕ ಭೌಗೋಳಿಕ ನೆಲೆಗಳ ಪಲ್ಲಟ

ಬುಳ್ಳಪ್ಪನನ್ನು ಬಿಜ್ಜರಗಿ ಗ್ರಾಮಕ್ಕೆ ಯಾಕೆ ಕಳುಹಿಸಲಾಯಿತು? ಆ ಕಾಲಕ್ಕೆ ಬಿಜ್ಜರಗಿ ಪ್ರದೇಶ ಯಾವ ಧಾರ್ಮಿಕ ಹಿನ್ನೆಲೆಯನ್ನು ಹೊಂದಿತ್ತು. ಬುಳ್ಳಪ್ಪ ಹೋಗುವ ಸಮಯಕ್ಕಾಗಲೇ ಹಾಲುಮತ ಧರ್ಮದ ಧಾರ್ಮಿಕ ಸ್ಥಳವಾಗಿತ್ತು. ಈ ಪ್ರದೇಶ ಕ್ಯಾಣಗನೂರು ಮತ್ತು ಹುಲಿಜಂತಿ, ಸಿರಡೋಣ ಪ್ರದೇಶಗಳ ಮಧ್ಯೆ ಇದ್ದು, ಈ ಕ್ಯಾನಗನೂರು ಕರಿಸಿದ್ಧ ಮತ್ತು ಹುಲಿಜಂತಿ ಮಾಳಪ್ಪರಿಬ್ಬರು ಈ ಪ್ರದೇಶದಲ್ಲಿ ಕುರಿಗಳನ್ನು ಕಾಯುತ್ತ ತಿರುಗಾಡಿರುವ ಉಲ್ಲೇಖಗಳಿವೆ. ಮಾಳಪ್ಪ ಕುರಿಕಾಯ್ದ ಮತ್ತು ತಂಗಿದ್ದ ಅನ್ನುವ ಜಾಗಗಳಿವೆ. ಆ ಜಾಗಗಳು ಮಾಳಪ್ಪನ ಬಗೆಗೆ ಕಥೆಗಳನ್ನು ಹೇಳುತ್ತವೆ. ಅಲ್ಲೆಲ್ಲ ಸಣ್ಣಪುಟ್ಟ ದೇವಾಲಯಗಳನ್ನು ಜನರು ಕಟ್ಟಿದ್ದಾರೆ. ಕಲ್ಲುಗಳನ್ನು ಇಟ್ಟು ಪೂಜೆಮಾಡುತ್ತಿದ್ದಾರೆ. ಬುಳ್ಳಪ್ಪನ ದೇವಾಲಯದ ಸ್ವಲ್ಪ ಮುಂದಿನ ಭಾಗದಲ್ಲಿ 'ಸೋಮಲಿಂಗ' ಮತ್ತು 'ಬೂತಾಳಸಿದ್ಧ' ದೇವಾಲಯಗಳಿವೆ. ಇವರಿಬ್ಬರೂ ಹಾಲುಮತದ ಸಾಂಸ್ಕೃತಿಕ ವೀರರು. ಬುಳ್ಳಪ್ಪ ನೆಲೆಗೊಂಡಿದ್ದ

ಹಳ್ಳಕ್ಕೆ ಹೊಂದಿಕೆಯಾಗಿಯೆ ಇದೆ. ಸೋಮಲಿಂಗ ದೇವಾಲಯ ಬುಳ್ಳಪ್ಪನ ದೇವಾಲಯಕ್ಕಿಂತ ಮುಂಚಿನದು. ಸೋಮಲಿಂಗ ಭಂಡಾರದ ದೈವ. ಹಾಲುಮತದವರ ಆರಾಧ್ಯ ದೈವ. ದಕ್ಷಿಣ ಕರ್ನಾಟಕದ ಕೆಲವು ಗ್ರಾಮಗಳಲ್ಲಿ ಹಾಲುಮತದವರಿಗೆ ಕುಲದೈವ. ತಮ್ಮ ಆರಾಧ್ಯ ದೈವಗಳಾದ ಬೀರಪ್ಪ, ರೇವಣಸಿದ್ಧ ಮತ್ತು ಓರಂಗಲ್ಲಮ್ಮನಿಗೆ ಅರ್ಪಣೆ ಮಾಡುವ ಮುಂಚೆ ಸೋಮಲಿಂಗ ದೇವಾಲಯಕ್ಕೆ ಹೋಗಿ ಕಾಣಿಕೆ ಸಲ್ಲಿಸುತ್ತಾರೆ. ಕುಲದೈವಕ್ಕೆ ಮೊದಲ ಆಧ್ಯತೆ ಅನ್ನುವುದು ಜನರ ಅಭಿಪ್ರಾಯ. ರೇವಣಸಿದ್ಧ ಸೋಮಲಿಂಗ ಲಿಂಗದಲ್ಲಿ ತನ್ನ ಹುಟ್ಟು ಪಡೆದಿದ್ದಾನೆ ಅಥವಾ ಸೋಮಲಿಂಗ ದೇವಾಲಯದಲ್ಲಿ ನಾಥ ಪರಂಪರೆಯಿಂದ ಶೈವಸಿದ್ಧ ಪರಂಪರೆಗೆ ರೂಪಾಂತರವಾದದ್ದು ಎನ್ನುವ ಕಥನಗಳು ಸಿಗುತ್ತವೆ. ಸರೂರು ಗ್ರಾಮದಲ್ಲಿ ರೇವಣಸಿದ್ಧ ಮತ್ತು ಸೋಮಲಿಂಗ ಮೂರ್ತಿಗಳನ್ನೊಳಗೊಂಡ ದೇವಾಲಯವಿದೆ. ಮೈಲಾರ ಸೋಮಲಿಂಗನ ಪರಮಭಕ್ತ. ಸೋಮಲಿಂಗ ಮತ್ತು ಮೈಲಾರ (ಮಲ್ಲಯ್ಯ, ಖಂಡೋಬಾ) ಸಂಕರಶೀಲವಾಗಿರುವ ಹಲವು ಕುರುಹುಗಳು ಮಹಾರಾಷ್ಟ್ರದಲ್ಲಿವೆ.[೧೩೭] ಹಡಗಲಿ ತಾಲ್ಲೂಕು ಮೈಲಾರದಲ್ಲಿ ಸೋಮನಾಥ ದೇವಾಲಯವಿದೆ. ಈ ದೈವದ ಭಕ್ತರು ಹಾಲುಮತಸ್ಥರು ಮತ್ತು ಲಿಂಗಾಯತರು. ಮೈಲಾರನ ಜಾತ್ರೆಯ ದಿನದಂದು ಸೋಮಲಿಂಗನ ಜಾತ್ರೆ. ಮೈಲಾರನಿಗೆ ಬಂದ ಭಕ್ತರು ಸೋಮನಾಥನಿಗೆ ಹೋಗಿ ಕಾಣಿಕೆ ಸಲ್ಲಿಸುತ್ತಾರೆ. ಕೆಲವು ಗೋತ್ರದವರು ಸೋಮನಾಥನಿಗೆ ಮಾತ್ರ ಪ್ರಸಾದ ಅರ್ಪಿಸುತ್ತಾರೆ. ಸೋಮಲಿಂಗ ದೇವಾಲಯದ ಆವರಣದಲ್ಲಿರುವ ಭೂತಾಳಸಿದ್ಧ ಸೋಮಲಿಂಗ ದೇವಾಲಯ ಸ್ಥಾಪನೆಯಾದ ನಂತರದ ದಿನಗಳಲ್ಲಿ ಸೇರಿಕೆಯಾಗಿರಬೇಕು. ಏಕೆಂದರೆ ಭೂತಾಳಸಿದ್ಧ ಅಮೋಘಸಿದ್ಧನ ಶಿಷ್ಯ. ಅಮೋಘ ಸಿದ್ಧನಿಗಿಂತ ಮುಂಚೆ ಸೋಮಲಿಂಗ ಇದ್ದ. ಅಮೋಘಸಿದ್ಧನೂ ಸೋಮಲಿಂಗನ ಆರಾಧಕ. ಭೂತಾಳಸಿದ್ಧ ಅಮೋಘಸಿದ್ಧನ ಶಿಷ್ಯ. ಭೂತಾಳಸಿದ್ಧನ ಕಾಲಘಟ್ಟಕ್ಕೆ ಬುಳ್ಳಪ್ಪ ಸಾವನ್ನಪ್ಪಿರಬೇಕು. ಏಕೆಂದರೆ ಆಚರಣೆಗಳು ಆರಂಭವಾಗಿರುವಂತೆ ಕಾಣಿಸುತ್ತದೆ. ಆ ಆಚರಣೆಯಲ್ಲಿ ಭೂತಾಳಸಿದ್ಧ ಭಾಗಿಯಾಗಿರಬೇಕು.

ಪುಟ್ಯಾಗ ಹಿಟ್ಟಿಲ್ಲ ತಟ್ಯಾಗ ರೊಟ್ಟಿಲ್ಲ
ಏಳು ಮಂದಿ ಸಾಧೂರನ ಉನಿಸಿ ಸಂತಾನ
ನೋಡಾಕ್ಕ ನೋಡಾನಾ ಹ್ಯಾಂಗ ಮಾಡಲೇ
ಮರದಾಗ ಜ್ವಾಳಿಲ್ಲ ಕಲ್ಯಾಗ ಹಿಟ್ಟಿಲ್ಲ
ಬುಳ್ಳಪ್ಪನ ಜಾತ್ರೆ ಹೋಗಲೆಂತಾನ[೧೩೮]

ಅಮೋಘಸಿದ್ಧ ಹಾಲಮತದ ಆರಾಧ್ಯ ದೈವ. ಆಮೋಘಸಿದ್ಧ ಮತ್ತು ಬೂತಾಳಸಿದ್ಧ ದೈವಗಳ ಮಠಗಳ ಪೂಜೆಯ ಅಧಿಕಾರ ಇರುವುದು ಹಾಲುಮತಸ್ಥರ ಕೈಯಲ್ಲಿದೆ. ಕೆಲವು ಮಠಗಳು ಲಿಂಗಾಯತರ (ವೀರಶೈವರ) ಕೈಯಲ್ಲಿವೆ. ಆದರೆ ಅವುಗಳ ಮೂಲಹಕ್ಕು ಹಾಲುಮತದವರದ್ದು. ಇತ್ತೀಚೆಗೆ ಲಿಂಗಾಯತರು ಅಕ್ರಮಣ ಮಾಡಿಕೊಂಡಿದ್ದಾರೆ. ಬಿಜ್ಜರಗಿಯ ಸೋಮಲಿಂಗ ದೇವಾಲಯದ ಪೂಜೆಯ ಹಕ್ಕನ್ನು ಗಾಣಿಗರು ಹೊಂದಿದ್ದಾರೆ. ಇವರು ಪೂಜೆ ಮಾಡುವಾಗ ಹೆಗಲಿಗೆ ಕಂಬಳಿ, ಬಗಲಲ್ಲಿ ಕಲ್ಲಿ (ಕುರಿ ಕಾಯುವವರು ಬುತ್ತಿ ಇಟ್ಟುಕೊಳ್ಳುವ ವಸ್ತು) ಮತ್ತು ಭಂಡಾರ ಚೀಲವನ್ನು

ಹಾಕಿಕೊಳ್ಳಬೇಕು. ಹಣೆಗೆ ಭಂಡಾರ ಹಚ್ಚಬೇಕು. ಇದು ಕಡ್ಡಾಯ ನಿಯಮ. ಆ ದೇವಾಲಯದಲ್ಲಿ ಯಾವುದೇ ಆಚರಣೆಗಳನ್ನು ಮಾಡಿದರೆ, ಪರ್ವ ಮಾಡಿದರೆ ಮೊದಲನೆ ಊಟ ಹಾಲುಮತದವರದ್ದೇ ಆಗಬೇಕು. ಅವರು ಬಂದು ಊಟ ಮಾಡುವ ತನಕ ಬೇರೆ ಯಾವ ಸಮುದಾಯದವರೂ ಊಟ ಮಾಡುವಂತಿಲ್ಲ. ಇಷ್ಟೊಂದು ಸಾಂಸ್ಕೃತಿಕ, ಧಾರ್ಮಿಕ ಮತ್ತು ಸಾಮಾಜಿಕ ಮಹತ್ವ ಹೊಂದಿದ ಆಚರಣೆಗಳು ಈಗಲೂ ಅಸ್ತಿತ್ವದಲ್ಲಿವೆ. ಇವು ಹುಟ್ಟುಕೊಂಡಿರುವುದರ ಬಗ್ಗೆ ಅಧ್ಯಯನ ಆಗಬೇಕಾಗಿದೆ ಸದ್ಯಕ್ಕೆ ಇರುವ ನಂಬಿಕೆ. ಅಂದರೆ ಬಿಜ್ಜರಗಿಯ ಸೋಮಲಿಂಗ ಮಠ ಮೂಲತಹ ಹಾಲುಮತದವರ ಮಠ. ಆ ಕಾರಣಕ್ಕಾಗಿಯೇ ಅವರಿಗೆ ಮೊದಲ ಆದ್ಯತೆ. ಅದು ಈಗ ಬದಲಾಗಿದೆ ಎನ್ನುವ ಮಾತುಗಳು ಕೇಳಿಬರುತ್ತವೆ. ಹಾಗಾಗಿ ಆ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಮಾಳಪ್ಪ ಬುಳ್ಳಪ್ಪನನ್ನು ಕಳಿಸಿರಬೇಕು. ಆ ವೇಳೆಗಾಗಲೇ ಭದ್ರವಾಗಿದ್ದ ಗಾಣಿಗರು ಅವಕಾಶ ಮಾಡಿಕೊಂಡೆ ಸಂಹಾರ ಮಾಡಿ, ಇರುವ ಸೋಮಲಿಂಗ ದೇವಾಲಯವನ್ನು ಅಕ್ರಮಣ ಮಾಡಿಕೊಂಡು ತಮ್ಮ ಹತ್ತಿರ ಇಟ್ಟುಕೊಂಡಿರಬೇಕು. ಆ ಸಂದರ್ಭದಿಂದ ಲಿಂಗಾಯತರು ವಿಭೂತಿ ಪಂಥದ ಮಠವಾಗಿ ರೂಪಾಂತರಿಸಿ ಕೊಂಡಿರಬೇಕು.

೪.೬.೫. ಬುಳ್ಳಪ್ಪನ ತಾತ್ವಿಕತೆ

ಬುಳ್ಳಪ್ಪನು ಮಾಳಪ್ಪ, ಬೀರಪ್ಪ ಮತ್ತು ಬಿಜಾಪುರ ಜಿಲ್ಲೆಯ ಸುತ್ತಮುತ್ತಲೂ ಇದ್ದ 'ಸಿದ್ಧಪುರುಷರ'ಗಿಂತಲೂ ಪ್ರಭಾವಶಾಲಿಯಾಗಿದ್ದ. ಸಾಕುಮಗ ಅನ್ನುವ ಒಂದೇ ಒಂದು ಕಾರಣಕ್ಕೆ ಹಲವಾರು ಅವಕಾಶಗಳು ಈತನಿಂದ ಕೈ ತಪ್ಪಿದವು. ಬುಳ್ಳಪ್ಪನ ಸಾವು ಉದ್ದೇಶಪೂರಿತವಾದುದು. ಆ ಸಾವು ಭಂಡಾರ ಪಂಥದ ಮೇಲೆ ಅಪಾರವಾದ ಪರಿಣಾಮ ಬೀರಿತು. ಶೈವ ಕೇಂದ್ರವಾಗಿದ್ದ ಬಿಜ್ಜರಗಿ ವೀರಶೈವ ಕೇಂದ್ರವಾಗಿ ಪರಿವರ್ತನೆ ಆಯಿತು. ಭಂಡಾರ ಆರಾಧನೆ ಬದಲಾಗಿ ವಿಭೂತಿ ಆರಾಧನೆ ಪ್ರಬಲವಾಯಿತು. ಮಾಳಪ್ಪನ ನಂತರ ಹುಲಿಜಂತಿ, ಕ್ಯಾಣಗನೂರು, ಸಿರಿಡೋನ ಮಠಗಳು ಪ್ರಭಾವಶಾಲಿಯಾಗಿ ಬೆಳೆಯಲಿಲ್ಲ. ಆ ಮಠಗಳು ಅಧಿಕಾರ ಮಾಳಪ್ಪನ ನಂತರ ಯಾರು ತೆಗೆದು ಕೊಂಡರು ಅನ್ನುವುದರ ಬಗ್ಗೆ ಮಾಹಿತಿಯಿಲ್ಲ. ಮಾಳಪ್ಪನ ನಾಲ್ಕು ಜನ ಮಕ್ಕಳು ಪ್ರಭಾವಶಾಲಿ ಆಗಿರಲಿಲ್ಲ ಅನ್ನುವುದು ಬುಳ್ಳಪ್ಪನ ಬಗೆಗೆ ಹಾಡಿರುವ ಡೊಳ್ಳಿನ ಹಾಡುಗಲ್ಲಿ ತಿಳಿದುಬರುತ್ತದೆ. ವಿಭೂತಿ ಪರಂಪರೆ ಪ್ರಭಾವಶಾಲಿ ಆಗುತ್ತಿದ್ದ ಕಾಲಘಟ್ಟವದು. ವಿಭೂತಿ ಪಂಥದ ಜೊತೆ ಸಂಘರ್ಷ ವನ್ನೆ ಒಡ್ಡದ ವೃತ್ತಿ ಇಲ್ಲದಂತೆ ಇರುವುದರಿಂದ ಆ ಪಂಥವೇ ಪ್ರಭಾವಶಾಲಿಯಾಗಿ ಬೆಳೆದಿರಬೇಕು. ಬುಳ್ಳಪ್ಪನಿಗೆ ಆ ಮಠಗಳು ಅಧಿಕಾರ ಸಿಕ್ಕಿದ್ದರೆ ಇನ್ನಷ್ಟು ದಿನ ಭಂಡಾರ ಪಂಥ ಪ್ರಧಾನ ಧಾರೆಯಲ್ಲಿ ರುತ್ತಿತ್ತು. ಅಂತಹ ಅವಕಾಶ ಭಂಡಾರ ಪಂಥಕ್ಕೆ ಸಿಗಲಿಲ್ಲ.

ಈ ಮೇಲೆ ತೆಗೆದುಕೊಂಡಿರುವ ನಿರ್ಧಾರಗಳು ಕೆಲವೇ ಕೆಲವು ಡೊಳ್ಳಿನ ಹಾಡುಗಳಿಂದ. ಸುಳ್ಳಾಗಬಹುದು. ಏಕೆಂದರೆ ನಾವು ಇನ್ನೂ ಸಂಪೂರ್ಣವಾದ ಹಾಡುಗಳನ್ನು ಸಂಗ್ರಹ ಮಾಡಿಲ್ಲ, ಸಂಗ್ರಹ ಮಾಡಬೇಕಾಗಿದೆ. ಆಗ ಒಂದು ಖಚಿತವಾದ ನಿರ್ಧಾರಕ್ಕೆ ಬರಬಹುದು. ಎ.ಕೆ. ರಾಮಾನುಜನ್ ಅವರು 'ಭಾರತೀಯ ಜನಪದ ಕಥೆಗಳು' ಎನ್ನುವ ಪುಸ್ತಕದ ಪ್ರಸ್ತಾವನೆಯಲ್ಲಿ 'ಭಾರತದ ಒಂದು

ಪ್ರಕಾರದ ಜಾನಪದವನ್ನು ಇಟ್ಟುಕೊಂಡು ನಿರ್ಧಾರಕ್ಕೆ ಬರುವುದು ಬಲು ಅಪಾಯಕಾರಿ. ಏಕೆಂದರೆ ನಾವು ತೆಗೆದುಕೊಂಡ ನಿರ್ಧಾರದ ತಲೆಯನ್ನು ಹೊಡೆಯುವಂತಹ ಮತ್ತೊಂದು ಪಠ್ಯ ಸಿಕ್ಕು ನಮ್ಮನ್ನು ನಮ್ಮ ವಾದವನ್ನು ಸಾಯಿಸಿಬಿಡುತ್ತದೆ' ಅಂತ ಹೇಳುತ್ತಾರೆ. ಅಂತಹ ಅಪಾಯ ಇದಕ್ಕಿದೆ.

೪.೭. ಮಾಯವ್ವ

೪.೭.೧. ಪ್ರವೇಶ

ಮಾಯವ್ವನ ಜೀವನ ಚರಿತ್ರೆಯನ್ನು ಅನಾವರಣ ಮಾಡುವ ಪ್ರತ್ಯೇಕ ಡೊಳ್ಳಿನ ಹಾಡುಗಳು ಸಿಗುವುದು, ಸಂಗ್ರಹವಾಗಿರುವುದು ತುಂಬಾ ಕಡಿಮೆ. ಡೊಳ್ಳಿನ ಹಾಡುಗಳಲ್ಲಿ ಬೀರಪ್ಪನ ಬಾಲ್ಯಜೀವನ ವನ್ನು ಹೇಳುವ ಸಂದರ್ಭದಲ್ಲಿ ಪೂರಕವಾಗಿ ಮಾಯವ್ವನ ಚರಿತ್ರೆಯನ್ನು ಹೇಳಲಾಗುತ್ತದೆ. ಈ ತನಕ ಸಂಗ್ರಹವಾಗಿರುವ ಡೊಳ್ಳಿನ ಹಾಡುಗಳಲ್ಲಿ ಜನಪದ ಹಾಲುಮತ ಮಹಾಕಾವ್ಯದಲ್ಲಿ ಸಿಗುವ 'ಅಕ್ಕಮಾಯವ್ವರ ವೃತ್ತಾಂತ'ವೇ ದೀರ್ಘವಾದ ಹಾಡು. 'ತೂಕಮಾಡಿ ಹೇಳತೀನಿ ನ್ಯಾಯ', 'ಕಾಡು ಹೂಗಳು', 'ನಡಿಯಪ್ಪ ನಮ್ಮ ನಾಡಿಗೆ', 'ಡೊಳ್ಳಿನ ಪದಗಳು (ಸಂ:ಹಂಜಗಿ ಮಠ)', 'ಜೀವನ ಜೋಕಾಲಿ ಭಾಗ-೬ ಡೊಳ್ಳಿನ ಹಾಡು' ಮುಂತಾದ ಕೃತಿಗಳಲ್ಲಿ ಮಾಯವ್ವನನ್ನು ಕುರಿತ ಚಿಕ್ಕ ಚಿಕ್ಕ ಬಿಡಿ ಹಾಡುಗಳು ಸಿಗುತ್ತವೆ. ಅಧ್ಯಯನಕ್ಕಾಗಿ ಕಲಾವಿದರಿಂದ ಕೆಲವು ಬಿಡಿಹಾಡುಗಳನ್ನು ಸಂಗ್ರಹ ಮಾಡಲಾಗಿದೆ. ಈ ಎಲ್ಲಾ ಹಾಡುಗಳ ಮಾಯವ್ವನ ಜೀವನ ಚರಿತ್ರೆಯ ಸಂಯುಕ್ತ ಕಥಾಸಾರ ಈ ಕೆಳಗಿನಂತಿದೆ.

೪.೭.೨. ಡೊಳ್ಳಿನ ಹಾಡುಗಳಲ್ಲಿ ಮಾಯವ್ವನ ಜೀವನ ಚರಿತ್ರೆ

ಮಾಯವ್ವ ತನ್ನ ಜನ್ಮದಿಂದಲೇ ಅಪವಾದವನ್ನು ಹೊತ್ತವಳು. ದೇವಗಿರಿ ಅರಸನಿಗೆ ಏಳು ಜನ ಹೆಣ್ಣುಮಕ್ಕಳು ಹುಟ್ಟುತ್ತಾರೆ. ಅವರಲ್ಲಿ ಮಾಯವ್ವ ಕೊನೆಯವಳು. ಮೊದಲಿನ ಆರು ಜನ ಅಕ್ಕತಂಗಿಯರ ಜನನ ಕಿವಿ, ಬೆನ್ನು ಮತ್ತು ದೇಹದ ಇತರ ಭಾಗಗಳಲ್ಲಾದರೆ ಮಾಯವ್ವನ ಜನನ ಯೂನಿಯಲ್ಲಿ ಆಗುತ್ತದೆ. ಕೂಸು ಯೂನಿಯಲ್ಲಿ ಹುಟ್ಟಿದಕ್ಕೆ ತಂದೆ ತಾಯಿಗಳು ಆತಂಕ ಪಡುತ್ತಾರೆ. ಭವಿಷ್ಯವನ್ನು ಕೇಳುತ್ತಾರೆ. ಭವಿಷ್ಯ ಈ ಕೂಸಿನಿಂದ ತಂದೆ ತಾಯಿಯ ಜೀವಕ್ಕೆ ಅಪಾಯವೆಂದು ಹೇಳುತ್ತದೆ. ಭಯಬೀತನಾದ ದೇವಗಿರಿಯ ಅರಸ ಕೂಸನ್ನು ಬಂಗಾರದ ಪೆಟ್ಟಿಗೆಯೊಳಗೆ ಹಾಕಿ ಭದ್ರವಾಗಿ ಮುಚ್ಚಿ, ತೆಪ್ಪದ ಮೇಲಿಟ್ಟು ನದಿಯಲ್ಲಿ ತೇಲಿಬಿಡುತ್ತಾನೆ. ಆ ಕೂಸು ನದಿಯಲ್ಲಿ ತೇಲಿಬಂದು ಭೂಮಿಯನ್ನು ಸೇರುತ್ತದೆ. ನದಿಯ ದಡದಲ್ಲಿ ತಪಸ್ಸು ಮಾಡುತ್ತಿದ್ದ ಋಷಿಗಳ ಕೈಗೆ ಸಿಗುತ್ತದೆ. ಆ ಕೂಸನ್ನು ಋಷಿಗಳು ಸಂತೆಯಲ್ಲಿ ಮಾರಾಟಕ್ಕೆ ಇಡುತ್ತಾರೆ. ಮಗುವಿನ ಮಾರಾಟದ ಸಂದರ್ಭದಲ್ಲಿ ಋಷಿಗಳು ಕೂಗುವ ಧ್ವನಿ ಗಮನ ಸೆಳೆಯುತ್ತದೆ. "ಕಂದ ನಿಮ್ಮಗ ತೊಗೊರೇ ಪೆಟಗಿ ನಮ್ಮಗ ಕೊಡರೋ"[೧೩೯] ಎನ್ನುತ್ತಾರೆ. ಸಂತೆಗೆ ಬಂದಿದ್ದ 'ದಿಬರಾಯನ' ಮಕ್ಕಳಾದ ಏಳು ಜನ ಅಕ್ಕತಂಗಿಯರು ಕೂಸನ್ನು ತೆಗೆದುಕೊಂಡು ಮನೆಗೆ ಬರುತ್ತಾರೆ. ಕೆಲವು ದಿನಗಳು ಕಳೆದ ನಂತರ

ದಿಬರಾಯನ ಮನೆಯ ವಾತಾವರಣ ಬದಲಾಗುತ್ತದೆ. ಕುರಿಮರಿಗಳ ಲಕ್ಷಣಗಳು ಬದಲಾಗುತ್ತವೆ. ಹಾಲು ಹಿಂಡಲಾರದ ಕುರಿಗಳು ಹಾಲು ಹಿಂಡುವುದಕ್ಕೆ ಆರಂಭಿಸುತ್ತವೆ. ದಿಬರಾಯ ಸ್ವಾಮಿರಾಯ ಮತ್ತು ಏಳುಜನ ಅಕ್ಕ ತಂಗಿಯರ ಆರೈಕೆಯಲ್ಲಿ ಮಾಯವ್ವ ಸಂತೋಷದಿಂದ ಬೆಳೆದು ದೊಡ್ಡಳಾ ಗುತ್ತಾಳೆ. ಏಳು ಹಿಂಡು ಕುರಿಗಳನ್ನು ತಾನೇ ಕಾಯುವುದಾಗಿ ಹಠ ಹಿಡಿದು 'ಕಾಡರುದ್ದರ' ಭೂಮಿಗೆ ಹೋಗುತ್ತಾಳೆ. ಅಲ್ಲಿ ಕುರಿಗಳನ್ನು ಕಾಯುತ್ತಿರುವಾಗ ಆರು ಜನ ಅಕ್ಕಂದಿರು ತಂಗಿ ಮಾಯವ್ವನನ್ನು ಹುಡುಕಿಕೊಂಡು ಬರುತ್ತಾರೆ. ಇವರು ನಾವು ನಿಮ್ಮ ಅಕ್ಕಂದಿರು ಎಂದು ಹೇಳಿದಾಗ ಮಾಯವ್ವ ನಂಬುವುದಿಲ್ಲ. ಮನೆಗೆ ಹೋಗಿ ಸಾಕು ತಂದೆ ದಿಬರಾಯನನ್ನು ಕೇಳುತ್ತಾಳೆ. ದಿಬರಾಯ ವಾಸ್ತವ ಸಂಗತಿಯನ್ನು ತಿಳಿಸಿ ಹೇಳುತ್ತಾನೆ. ಸಹೋದರಿ ಅಕ್ಕಮ್ಮ ಹೇಳಿದ ಮಾತಿನ ಮೇಲೆ ಮಾಯವ್ವನಿಗೆ ನಂಬಿಕೆ ಬರುತ್ತದೆ. ರೌದ್ರಭೂಮಿಗೆ ವಾಪಸ್ಸು ಬಂದು ಅಕ್ಕಮ್ಮನನ್ನು ಸೇರಿಸಿಕೊಂಡು ಕುರಿ ಕಾಯುತ್ತ ನೆಲೆಸುತ್ತಾಳೆ. ಮಾಯವ್ವ ಅಕ್ಕಮ್ಮನನ್ನು ಸೇರಿದ ನಂತರ ಸಾಕು ತಂದೆ ದಿಬರಾಯ ಮತ್ತು ಸಾಕು ಸಪ್ತಸಹೋದರಿಯರ ಸಂಬಂಧ ಕಳೆದುಹೋಗುತ್ತದೆ. ಅಂದರೆ ಆ ಪಾತ್ರಗಳು ಹಾಡುಗಳಲ್ಲಿ ಕಣ್ಮರೆ ಯಾಗುತ್ತವೆ.

ಅಕ್ಕವ್ವ ಮಾಯವ್ವ ಇಬ್ಬರೂ ಸೇರಿಕೊಂಡು ಕಾಡುರುದ್ದರ ಭೂಮಿ 'ಕೂದಲಿಗಿ ನಂದನ' ಬನದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದರು. ಒಂದು ದಿನ ಮಧ್ಯಾಹ್ನ ಕಂಬಿನಾಲದ ಮರದ ಕೆಳಗೆ ಊಟ ಮಾಡುತ್ತ ಕುಳಿತಿರುವಾಗ ಕೂಸು ಅಳುವ ಧ್ವನಿ ಕೇಳಿಬರುತ್ತದೆ. ಆಶ್ಚರ್ಯದಿಂದ ಮೇಲೆ ನೋಡುತ್ತಾರೆ. ಮರದ ಮೇಲೆ ಟೊಂಗೆಗೆ ಕಟ್ಟಿದ ಬಂಗಾರದ ತೊಟ್ಟಿಲು ಕಣ್ಣು ಕುಕ್ಕುವಂತೆ ಹೊಳೆಯುತ್ತಿರುತ್ತದೆ. ಇದನ್ನು ನೋಡಿದ ಅಕ್ಕ ತಂಗಿಯರು ಕುತೂಹಲದಿಂದ ತೊಟ್ಟಿಲನ್ನು ಕೆಳಗಿಲಿಸಲು ನಿರ್ಧರಿಸುತ್ತಾರೆ. ಯಾರು ಗಿಡ ಏರಬೇಕೆನ್ನುವ ವಾದ ಆರಂಭವಾಗುತ್ತದೆ. ಸರದಿಯಂತೆ ಮೊದಲ ಅವಕಾಶ ಹಿರಿಯ ಅಕ್ಕನಾದ ಅಕ್ಕಮ್ಮನಿಗೆ ಸಿಗುತ್ತದೆ. ಆಕೆ ಗಿಡ ಹತ್ತಲು ಮುಂದಾದರೂ ಮರಕ್ಕೆ ಮುಕ್ಕರಿದ ಇರುವೆಗಳು ಮರ ಹತ್ತುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಿಲ್ಲ. ಹಿಂದೆ ನಿಂತ ಮಾಯವ್ವ ಅಕ್ಕಮ್ಮನನ್ನು ಹಿಂದೆ ಸರಿಸಿ ತಾನು ಹತ್ತುವುದಕ್ಕೆ ಮುಂದಾಗುತ್ತಾಳೆ. ಇರುವೆಗಳು ಜಾಜ ಕೊಟ್ಟರೆ ಬಿಡುವುದಾಗಿ ಹಠ ಮಾಡುತ್ತವೆ. ಇರುವೆಗಳಿಗೆ ಹಿಟ್ಟು ಕೊಟ್ಟು ಮರವೇರುತ್ತಾಳೆ. ತೊಟ್ಟಿಲು ಸಮೀಪ ಹೋದಾಗ ಗಿಳಿಗಳು ಬಂದು ತಡೆಯುತ್ತವೆ. ನಾವು ತಮ್ಮನೆಂದು ಸಾಕಿದ್ದೇವೆ. ಕೂಸು ನಮಗಿರಲಿ, ಮುಟ್ಟಬೇಡವೆಂದು ಹಠ ಮಾಡುತ್ತವೆ. ಮಾತಿನ ನಂತರ ಜಾಜ ಕೊಟ್ಟರೆ ಮಾತ್ರ ಬಿಡುವ ಒಪ್ಪಂದಕ್ಕೆ ಬರುತ್ತವೆ. ಆಗ ಮಾಯವ್ವ ತೊಟ್ಟಿಲಲ್ಲಾಡುವ ಮಕ್ಕಳಿಗೆ ಮೇಲಗಿಣಿಗಳಾಗುವ ಭಾಗ್ಯ ಕೊಡುತ್ತಾಳೆ. ನಂತರ ನಾಗಪ್ಪ (ಏಳು ಎಡೆಯ ಹಾವು) ಬಂದು ಜಾಜ ಕೊಡುವಂತೆ ಕೇಳುತ್ತಾನೆ. ನಿನ್ನ ರೂಪವನ್ನು ಬಾಗಿಲ ಮೇಲೆ, ಹೊಸ್ತಿಲ ಮೇಲೆ ಬರೆಸುವೆ ಅನ್ನುವ ಜಾಜ ಕೊಟ್ಟು, ತೊಟ್ಟಿಲನ್ನು ಬಿಚ್ಚಿಕೊಂಡು ಬರುತ್ತಾಳೆ. ಇರುವೆ, ಗಿಳಿ, ಹಾವು, ಜಾಜ ಕೇಳುವ ಮತ್ತು

ಮಾಯವ್ವ ಜಾಜ ಕೊಡುವ ಸನ್ನಿವೇಶಗಳನ್ನು ಕಲಾವಿದರು ಮೈದುಂಬಿ ಹಾಡುತ್ತಿರುತ್ತಾರೆ. ಕೇಳುಗರು ಗಿಳಿ, ಹಾವು, ಇರುವೆಗಳನ್ನು ಮನದಾಳದಲ್ಲಿ ಪ್ರೀತಿಸುತ್ತಾ ಶಬಷ್‌ಗಿರಿಯನ್ನು ಹೇಳುತ್ತಾರೆ. ಇವು ತಮ್ಮ ಕುಲದೇವರನ್ನು ಕಾಪಾಡಿದ ಜೀವಿಗಳು ಅನ್ನುವ ಹಿರಿಮೆಗೆ, ಗೌರವಕ್ಕೆ ಪಾತ್ರವಾಗಿ ಬಿಡುತ್ತವೆ.

ಮಾಯವ್ವ ಕೂಸನ್ನು ಕೆಳಗಡೆ ಇಳಿಸಿದ ನಂತರ ಕೂಸು ಯಾರಿಗೆ ಸೇರಬೇಕು ಅನ್ನುವ ತಕರಾರು ಆರಂಭವಾಗುತ್ತದೆ. ಮಾಯವ್ವ ನನಗೆ ಬೇಕು ಎಂದರೆ ಅಕ್ಕವ್ವ ನನಗೆ ಬೇಕು ಎನ್ನುತ್ತಾಳೆ. ಇಬ್ಬರಲ್ಲಿ ಜಗಳ ಆರಂಭವಾಗುತ್ತದೆ. ಅದೇ ಸಮಯಕ್ಕೆ ಇವರ ಹತ್ತಿರ 'ರಾಯಣ್ಣ' ಬರುತ್ತಾನೆ. ನೀವು ಜಗಳ ಮಾಡಬೇಡಿ, ಇಬ್ಬರು ಜಾಮ ಜಳಕ ಮಾಡಿ ಮಗುವಿನ ತೊಟ್ಟಿಲನ್ನು ಐದು ಸುತ್ತು ಸುತ್ತು ಹಾಕಿ. ಆಗ ಯಾರ ಎದಿಬದಿಗಳು ಚಿಗಿತು ಹಾಲು ಬರುವವೋ ಅವರಿಗೆ ಮಗುವನ್ನು ಕೊಡುವುದಾಗಿ ಹೇಳುತ್ತಾನೆ. ಸರದಿಯಂತೆ ಮೊದಲು ಅಕ್ಕವ್ವ ಸುತ್ತು ಹಾಕುತ್ತಾಳೆ. ಅವಳ ಎದೆಬದಿಗಳು ಚಿಗಿಯುವುದಿಲ್ಲ. ರಾಯಣ್ಣ ನಿನ್ನಲ್ಲಿ ತಾಯ್ತನ ಇಲ್ಲವೆಂದು ಹಿಂದಕ್ಕೆ ಕರೆಯುತ್ತಾನೆ. ನಂತರ ಮಾಯವ್ವ ಸುತ್ತುಹಾಕುತ್ತಾಳೆ. ಅವಳ ಎದೆಬದಿಗಳು ಚಿಗಿತು ಹಾಲು ಬರುತ್ತವೆ. ರಾಯಣ್ಣ ನಿನ್ನಲ್ಲಿ ತಾಯ್ತನವಿದೆಯೆಂದು ಹೇಳಿ ಮಗುವನ್ನು ಕೊಟ್ಟು ಹೋಗುತ್ತಾನೆ. ಡೊಳ್ಳಿನ ಹಾಡುಗಳು ಮಾಯವ್ವ ತಾಯ್ತನ ಪಡೆದ ಸನ್ನಿವೇಶವನ್ನು ಹೀಗೆ ಕಟ್ಟಿಕೊಡುತ್ತವೆ.

"ಐದು ಸುತ್ತ ಹಾಕ್ಯಾಳೆ ಎದಿಯ ಚಿಗಿಯುತಾವೇನ
ಎದಿಯ ಚಿಗಿಯುತಾವೇನೆ ಬದಿಯ ಚಿಗಿಯುತಾವೇನ
ಏ ನಮ್ಮಕ್ಕ ಮಾಯವ್ವ ಬಾಣತಿ ರೂಪ ಬಂದಾವ
ಬಾಣತಿ ರೂಪ ಬಾಂದಾವೆ ಎರಳಿಗುಂಪಿ ರಾಯಣ್ಣ
ಮನಕ ಮಗನ ಮಾಡವ್ವ ಜನಕ ತಮ್ಮಣ ಮಾಡವ್ವ
ಎರಳಗುಂಪಿ ರಾಯಣ್ಣ ಕೂಸಿನ ಕೊಡುವುತಾನೇನ"[೧೪೦]

ಕಾವ್ಯದಲ್ಲಿ ಸಪ್ತಮಾತೃಕೆಯರ ತಾಯ್ತನದ ತುಡಿತ ಗಮನ ಸೆಳೆಯುತ್ತದೆ. ತಾಯ್ತನದ ಮಗುವಿನ ಆಯ್ಕೆಯ ವಿಷಯ ಬಂದಾಗ ಸದಾ ಮಾಯವ್ವ ಗೆಲ್ಲುತ್ತಾಳೆ. ಆದರೆ ಸಾಕುವಿಕೆಯಲ್ಲಿ ಎಲ್ಲರೂ ಸಮಾನ ಪಾತ್ರಧಾರಿಗಳಾಗಿ ಕಾಣುತ್ತಾರೆ. ಬೀರಪ್ಪ ನನಗೆ ಆಟಕ್ಕೆ ಬಿಲ್ಲು ಬಾಣ ಮತ್ತು ಅಂಬು ಬೇಕೆಂದು ಕೇಳಿದಾಗ ಸಪ್ತಮಾತೃಕೆಯರೆಲ್ಲರೂ ಸೇರಿ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡು ಬಿಲ್ಲು, ಬಾಣ, ಅಂಬು ಕೊಡಿಸುತ್ತಾರೆ. ಜೊತೆಗೆ ಕರೆದುಕೊಂಡು ಕುರಿ ಕಾಯುವ ವಿಧಾನವನ್ನು ಕಲಿಸಿಕೊಡುತ್ತಾರೆ. ಈ ಗುಣಗಳು ಸಪ್ತ ಮಾತೃಕೆಯರು ಬೀರಪ್ಪನನ್ನು ಪ್ರೀತಿಸುತ್ತಿದ್ದ ವಿಧಾನವನ್ನು ತಿಳಿಸುತ್ತದೆ. ಆದರೆ ಕುರಿಗಾರಿಕೆಗಾಗಿ ಅಲೆಮಾರಿತನವನ್ನು ಆರಂಭಿಸಿದ ನಂತರ ಬೀರಪ್ಪ ಮತ್ತು ಮಾಯವ್ವನ ಪಾತ್ರಗಳು ಮಾತ್ರ ಕಾಣಸುತ್ತವೆ. ಕಣ್ಮರೆ ಆಗುವ ಪಾತ್ರಗಳ ಬಗ್ಗೆ ವಿಶೇಷವಾದ ಅಧ್ಯಯನ ಮಾಡಬೇಕಾಗಿದೆ. ಏಕೆಂದರೆ ಪಾತ್ರಗಳ ಕಣ್ಮರೆ ಆಗುವಿಕೆ ಹಲವು ಕುತೂಹಲಗಳನ್ನು ಹುಟ್ಟಿಸುತ್ತದೆ. ಉತ್ಪಾದನಾ ವ್ಯವಸ್ಥೆಗಳಲ್ಲಾದ ಬಿರುಕುಗಳಂತೆ ಕಾಣಸುತ್ತವೆ. ಬೀರಪ್ಪ-ಮಾಯವ್ವರ ಜೊತೆ ಸೇರಿ ಅಲೆಮಾರಿತನವನ್ನು ಆರಂಭಿಸಿರಬೇಕು. ಇವರಿಬ್ಬರು ಕುರಿಗಳನ್ನು ಮೇಯಿಸುತ್ತಾ ಈಗಿನ

ಚಿಂಚಲಿ, ಕೋಣಗನೂರು, ಅಲಖನೂರು ಮತ್ತು ಮುಂಡಗನೂರು ಸುತ್ತಮುತ್ತಲಿನ ಪ್ರದೇಶಗಳತ್ತ ವಲಸೆ ಬರುತ್ತಾರೆ. ಚಿಂಚಲಿ ಪ್ರದೇಶದ ಸುತ್ತಲಿನ ಪ್ರದೇಶದಲ್ಲಿ 'ಭಗನಾಥ' ಮಾಯವ್ವನನ್ನು ಮಾನಭಂಗ ಮಾಡುವುದಕ್ಕೆ ಬರುತ್ತಾನೆ. ಇದನ್ನು ನೋಡಿದ ಬೀರಪ್ಪ ಭಗನಾಥನನ್ನು ಸಂಹಾರ ಮಾಡುತ್ತಾನೆ. ಮಾಯವ್ವ ಇದಕ್ಕೆ ಸಹಕಾರ ಕೊಡುತ್ತಾಳೆ. ನಂತರ ಚಿಂಚಲಿಯಲ್ಲಿ ನೆಲೆಸಿದ 'ವನದೇವತೆ'ಯನ್ನು ಸಂಹಾರ ಮಾಡುತ್ತಾರೆ. ಆಗ ಮಾಯವ್ವ ಖಾಯಂ ಆಗಿ ಚಿಂಚಲಿಯಲ್ಲಿ ಉಳಿದುಕೊಳ್ಳುತ್ತಾಳೆ. ಬೀರಪ್ಪ ಕೋಣಗನೂರು ಪ್ರದೇಶದಲ್ಲಿ ನೆಲೆಸುತ್ತಾನೆ. ಇವರಿಬ್ಬರು ನೆಲೆನಿಂತ ನಂತರ ಕೇವಲ ಅಣ್ಣತಂಗಿಯ ಸಂಬಂಧಗಳು ಬೆಳೆಯುತ್ತವೆ. ನಂತರ ಮಾಯವ್ವನ ಪಾತ್ರ ಕಣ್ಮರೆ ಆಗುತ್ತದೆ. ಬೀರಪ್ಪನ ಶಿಷ್ಯ ಬಳಗದೊಂದಿಗಿನ ಸಂಬಂಧಗಳು ಆರಂಭವಾಗುತ್ತವೆ.

೪.೭.೨.೧. ಮಾಯವ್ವ ಚರಿತ್ರೆಯನ್ನು ಕುರಿತ ಡೊಳ್ಳಿನ ಹಾಡುಗಳ ಭಿನ್ನಪಠ್ಯಗಳು

'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ಮಾಯವ್ವ ದೇವೇಂದ್ರರಾಯ ಮತ್ತು ಸುಭದ್ರೆಯರ ಏಳನೆಯ ಹೆಣ್ಣುಮಗುವಾಗಿ ಜನ್ಮ ಪಡೆಯುತ್ತಾಳೆ. ಆ ಏಳು ಜನ ಮಕ್ಕಳಲ್ಲಿ ಮಾಯವ್ವನನ್ನು ಮಾತ್ರ ನದಿಗೆ ಬಿಡಲಾಗುತ್ತದೆ. ಬಸವನಗೌಡ ಪಾಟೀಲ ಅವರು ಸಂಪಾದನೆ ಮಾಡಿರುವ 'ತೂಕಮಾಡಿ ಹೇಳತೀನಿ ನ್ಯಾಯ' ಕೃತಿಯಲ್ಲಿ ಬೀರೇಶ್ವರನ ಚರಿತ್ರೆಯನ್ನು ಕುರಿತ ಒಂದು ಬಿಡಿ ಹಾಡು ಇದೆ. ಈ ಹಾಡಿನ ಪ್ರಕಾರ ಶಿವ ಬೀರಪ್ಪನಿಗೆ ನಿನ್ನ ನೆರಳಿಗೆ ಕುಳಿತ ಸ್ತ್ರೀಯರು ಗರ್ಭದರಿಸಲಿ ಅನ್ನುವ ಹರಕೆಯನ್ನು ಕೊಟ್ಟು ಹೋಗಿರುತ್ತಾನೆ. ಆಗ

"ದೇವಗನ್ನೇರು ಐದು ಮಂದಿ
ಸಂಚಾರ ಮಾಡುತ ಬಂದಾರಿನ್ನೋ
ಸಂಚಾರ ಮಾಡುತ ವನವೆಲ್ಲ ತಿರುಗಿ
ವೃಕ್ಷದ ನೆರಳಿಗೆ ಕುಳಿತಾರಿನ್ನೋ

ವನತಿಯರೈದು ಮಂದಿ ಗರ್ಭವ ಧರಿಸಿ
ನವ ಮಾಸದಿನ ತುಂಬಿದವಿನ್ನು
ಕೇಡು ಬಂತು ನಮಗೆ ಮನೆಗೆ ಪೋದರೆ
ನಮ್ಮನ್ನು ಬಿಡುವುದಿಲ್ಲ"[೧೪೧]

ಈ ಪಂಚಕನ್ಯೆಯರು ದೇವಲೋಕಕ್ಕೆ ಮರಳಿ ಹೋಗುವುದಕ್ಕೆ ಹೊಟ್ಟೆಯಲ್ಲಿರುವ ಪಿಂಡಗಳನ್ನು ತೆಗೆದುಹಾಕಿ ನದಿಯಲ್ಲಿ ತೇಲಿ ಬಿಟ್ಟು ಹೋಗುತ್ತಾರೆ. ನದಿಯ ದಡದಲ್ಲಿ ಕುರಿಗಳನ್ನು ಕಾಯುತ್ತಿದ್ದ 'ಭೀಮರಾಯ'ನಿಗೆ ಆ ಕೂಸುಗಳು ಸಿಗುತ್ತವೆ. ಖುಷಿಯಿಂದ ಹೆಂಡತಿ 'ಶಾಂಭವಿ' ಹತ್ತಿರ ತೆಗೆದು ಕೊಂಡು ಹೋಗುತ್ತಾನೆ. ಮಕ್ಕಳಿಲ್ಲದ ಯಾತನೆಯನ್ನು ಅನುಭವಿಸುತ್ತಿದ್ದ ಶಾಂಭವಿ ಖುಷಿಯಿಂದ ಮಕ್ಕಳಿಗೆ ಮಾಯವ್ವ, ಮಹಾಂಕಾಳಿ, ಯಕ್ಕವ್ವ, ಲಕ್ಕವ್ವ, ಲಕ್ಷ್ಮಿಯೆಂದು ಹೆಸರುಗಳನ್ನಿಟ್ಟು ಸಾಕುತ್ತಾಳೆ. ಈ ಪಂಚ ಸಹೋದರಿಯರು ಬೆಳೆದು ದೊಡ್ಡವರಾದ ನಂತರ ಕುರಿಗಳನ್ನು ಕಾಯುತ್ತ 'ಹೇವಲಿ' ಹಳ್ಳಕ್ಕೆ ಬರುತ್ತಾರೆ. ಅಲ್ಲಿ ಬೀರಪ್ಪ ದೊರಕುತ್ತಾನೆ. ಇಲ್ಲಿ ಮಗುವಿಗಾಗಿ ಪಂಚ

ಸಹೋದರಿಯರು ಕಾದಾಡುತ್ತಾರೆ. ತಮ್ಮಷ್ಟಕ್ಕೆ ತಾವೇ ತೊಟ್ಟಿಲನ್ನು ಸುತ್ತುವ ನಿರ್ಧಾರಕ್ಕೆ ಬರುತ್ತಾರೆ. ಇಲ್ಲಿ ರಾಯಣ್ಣನೆಂಬ ಮಧ್ಯವರ್ತಿಯ ಪಾತ್ರ ಬರುವುದಿಲ್ಲ. ಈ ಎರಡು ಪಠ್ಯಗಳಲ್ಲಿ ಮಾಯವ್ವನಿಗೆ ಬೀರಪ್ಪ ಸಿಗುತ್ತಾನೆ. "ನಡಿಯಪ್ಪ ನಮ್ಮ ನಾಡಿಗೆ" ಕೃತಿಯಲ್ಲಿರುವ 'ಬೀರಯ್ಯ ಲಿಂಗ'ನ ಹಾಡಿನಲ್ಲಿ ಮೇಲಿನ ಎರಡು ಪಠ್ಯಗಳಿಗಿಂತ ಭಿನ್ನವಾದ ವಸ್ತು ಸಿಗುತ್ತದೆ. ಸಪ್ತದೇವ ಕನ್ಯೆಯರು ಬೇಟೆ ಆಡುತ್ತ 'ಕೊಂದಲಿ ನಂದನ' ವನಕ್ಕೆ ಬರುತ್ತಾರೆ. ಅಲ್ಲಿ ಈ ಕನ್ಯೆಯರಿಗೆ ಬೀರಪ್ಪ ಸಿಗುತ್ತಾನೆ. ಈ ಪಠ್ಯದಲ್ಲಿ ಮಗುವಿಗಾಗಿ ಅಕ್ಕತಂಗಿಯರಲ್ಲಿ ಸಂಘರ್ಷ ನಡೆಯುವುದಿಲ್ಲ. ಹಿರಿಯ ಅಕ್ಕನಾದ ಮಾಯವ್ವನಿಗೆ ತಂಗಿಯರು ಸ್ವತಂತ್ರವಾಗಿ ಬಿಟ್ಟುಕೊಡುತ್ತಾರೆ. ಆರು ಜನ ಅಕ್ಕ ತಂಗಿಯರು ಹೇಳುವ ಮಾತುಗಳು ಹೀಗಿವೆ.

> "ನಂದು ನಿಂದು ಅಂದಾರಲ್ಲಾ ಹಿರಿಯ ಅಕ್ಕನು ನಮ್ಮಯ್ಯ
> ವಕ್ತನಿಲ್ಲದ ಬಾಲೇರವ್ವ ನಾವು ಮಲಿ ಮೂಗಿಲ್ಲದ ಬಾಲೇರ
> ನಾವ್ಯಾಕ ಮುಂದ ಹೋಗತೀವವ್ವ ಅವರದು ಕೂಸೇಳಂದಾಳ"[೧೮]

ಮಾಯವ್ವನಿಗೆ ಕೂಸು ದೊರಕಿದ ನಂತರ ಉಳಿದ ಅಕ್ಕ ತಂಗಿಯರ ಜೊತೆ ಬ್ಯಾಟಿ ಆಡುವುದಕ್ಕೆ ಹೋಗುವುದಿಲ್ಲ. ಮಗುವನ್ನು ಸಾಕುತ್ತ ಮನೆಯಲ್ಲಿ ಇರುತ್ತಾಳೆ. ಇದರಿಂದ ಕೋಪಿತರಾದ ಅಕ್ಕತಂಗಿಯರು ಮಗುವನ್ನು ಕೊಲ್ಲುವ ನಿರ್ಧಾರಕ್ಕೆ ಬರುತ್ತಾರೆ. ಮಗುವನ್ನು ಕೊಂದು ಹಾಕಿದರೆ ಅಕ್ಕ ಮಾಯವ್ವ ನಮ್ಮ ಜೊತೆ ಬರುತ್ತಾಳೆ ಅನ್ನುವ ಯೋಜನೆ ಇವರದಾಗಿರುತ್ತದೆ. ಇವರ ಯೋಜನೆಯ ಉದ್ದೇಶ ಬೀರಪ್ಪ(ಕೂಸಿಗೆ)ನಿಗೆ ತಿಳಿಯುತ್ತದೆ. ಬೀರಪ್ಪ ಗುಪ್ತವಾಗಿ ಅಕ್ಕ ಮಾಯವ್ವನಿಗೆ ತಿಳಿಸುತ್ತಾನೆ. ಆಗ ಮಾಯವ್ವ ಮಗುವನ್ನು ಬುಟ್ಟಿಯಲ್ಲಿ ಹಾಕಿಕೊಂಡು ಮೂಡಲ ನಾಡಿನಿಂದ ಪಡುವಲನಾಡಿಗೆ ಬರುತ್ತಾಳೆ. ಇಲ್ಲಿಗೆ ಈ ಹಾಡು ಮುಕ್ತಾಯವಾಗಿದೆ. ಸಂಪಾದಕರು ಚಿಕ್ಕ ಚಿಕ್ಕ ಹಾಡುಗಳನ್ನು ತರುವ ಉದ್ದೇಶದಿಂದ ಕಲಾವಿದರಿಂದ ಈ ಹಾಡನ್ನು ಹಾಡಿಸಿರಬೇಕು. ಈ ಹಾಡು ವಿಸ್ತಾರವಾಗಿರುವುದಕ್ಕೆ ಸಾಧ್ಯವಿದೆ. ಸಂಪೂರ್ಣವಾದ ಹಾಡನ್ನು ಸಂಗ್ರಹಿಸಿದ್ದರೆ ಮಾಯವ್ವನ ಜೀವನ ಚರಿತ್ರೆಯನ್ನು ಭಿನ್ನವಾಗಿ ಗ್ರಹಿಸುವುದಕ್ಕೆ ಸಾಧ್ಯತೆ ಇತ್ತು.

೪.೭.೨.೨. ಮಾಯವ್ವನ ಚರಿತ್ರೆಯ ಭಿನ್ನಪಠ್ಯಗಳ ತಾತ್ವಿಕತೆ

ಮಾಯವ್ವನ ಚರಿತ್ರೆಯನ್ನು ಹೇಳುವ ಡೊಳ್ಳಿನ ಹಾಡುಗಳ ಪಠ್ಯಗಳಲ್ಲಿ ಪ್ರಮುಖವಾಗಿ ಮೂರು ಭಿನ್ನ ಪಠ್ಯಗಳು ಸಿಗುತ್ತವೆ. ಎರಡು ಪಠ್ಯಗಳಲ್ಲಿ 'ಸಪ್ತಮಾತೃಕೆ'ಯರಿದ್ದಾರೆ. ಮತ್ತೊಂದು ಪಠ್ಯದಲ್ಲಿ 'ಪಂಚಮಾತೃಕೆ'ಯರು ಇದ್ದಾರೆ. ಪಂಚಮಾತೃಕೆಯರು ಮತ್ತು ಒಂದು ಪಠ್ಯದ ಸಪ್ತಮಾತೃಕೆ ಯರು ಕುರಿಕಾಯುವ (ಪಶುಪಾಲನೆ) ಕೆಲಸವನ್ನು ಮಾಡಿದರೆ, ಮತ್ತೊಂದು ಪಠ್ಯದ ಸಪ್ತಮಾತೃಕೆಯರು ಬೇಟೆ (ಬ್ಯಾಟಿ) ಆಡುವ ಕಾಯಕವನ್ನು ಮಾಡುತ್ತಾರೆ. ಸಪ್ತ, ಸಪ್ತಮಾತೃಕೆಯರ ಆರಾಧನ ಪದ್ಧತಿ ವಲಸೆಗಾರ ದ್ರಾವಿಡ ಪಶುಪಾಲನ ಸಂಸ್ಕೃತಿಯ ಅಸ್ಮಿತೆಯಾದರೆ ಪಂಚ ಮಾತೃಕೆಯರ ಆರಾಧನ ಪದ್ಧತಿ ಕೃಷಿ ಸಂಸ್ಕೃತಿಯ ಅಸ್ಮಿತೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈಗ ಮಾಯವ್ವನನ್ನು

[illegible]

[illegible]

> [illegible]

[illegible]

[illegible]

[illegible]

ಬೇಟೆ, ಪಶುಪಾಲನೆ, ಕೃಷಿ ಸಮುದಾಯಗಳು ಕುಲದೇವತೆಯನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿವೆ. ಅಂದರೆ ಮಾಯವ್ವನ ಚರಿತ್ರೆ ಈ ಮೂರು ಕಾಲಘಟ್ಟದ ಸಂಸ್ಕೃತಿಯೊಂದಿಗೆ ಸಂಯುಕ್ತಗೊಂಡು ಬಿಂಬಿತವಾಗುತ್ತಲಿದೆ. ಡೊಳ್ಳಿನ ಹಾಡುಗಳು ಇದಕ್ಕೆ ಹೊರತಾಗಿಲ್ಲ. ಈ ಮೂರು ಕಾಲಘಟ್ಟಗಳನ್ನು ಸಂಕರಶೀಲಗೊಳಿಸಿಕೊಂಡ ಮತ್ತು ಆಯಾ ಕಾಲಘಟ್ಟದ ಪ್ರತ್ಯೇಕ ಹಾಡುಗಳು ಸಿಗುತ್ತವೆ.

೪.೭.೩. ಮಾಯವ್ವ ಪಶುಪಾಲಕರ ಆರಾಧ್ಯ ದೇವತೆ

ಒಂದು ಸಮುದಾಯದ ಸಾಂಸ್ಕೃತಿಕ ವೀರರು ಜನ್ಮ ತಾಳಿದ ಸಂದರ್ಭವನ್ನು ಹೇಳುವ ಕಥನಗಳು ಆ ಸಮುದಾಯದ ಮೂಲ ಸಂಸ್ಕೃತಿಯನ್ನು ಹೇಳುತ್ತವೆ. ಹಾಲುಮತದ ಸಾಂಸ್ಕೃತಿಕ ವೀರರು ಶಿವನ ಆರ್ಶೀವಾದದಿಂದ ಇಲ್ಲವೇ ಕೈಲಾಸದಲ್ಲಿ ಜನ್ಮತಾಳಿದರೆಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಹಾಲುಮತ ಸಮುದಾಯಧಲ್ಲಿ ಸಿಗುವ ಹಾಲುಮತ ಪುರಾಣಗಳು, ಸ್ಥಳ ಪುರಾಣಗಳು ಇದಕ್ಕೆ ಹೊರತಾಗಿಲ್ಲ. ಡೊಳ್ಳಿನ ಹಾಡುಗಳು ಕೈಲಾಸವನ್ನು ಶಿವನ ವಾಸಸ್ಥಳವೆಂದು ಕರೆದುಕೊಂಡಿವೆ. ಇಲ್ಲಿ ಸಾಂಸ್ಕೃತಿಕ ವೀರರ ಜನ್ಮಗಳು ಎರಡು ಬಗೆಯಲ್ಲಿ ಆಗಿದೆ. ೧. ಕೈಲಾಸದಲ್ಲಿ ಶಿವನ ಹತ್ತಿರ ಹುಟ್ಟಿ ಭೂಮಿಗೆ ಬರುತ್ತಾರೆ. ೨. ಶಿವ ಭೂಮಿಗೆ ಬಂದು ತಂದೆ ತಾಯಿಗಳಿಗೆ ಆರ್ಶೀವಾದ ಮಾಡಿ ಹೋದ ನಂತರ ಜನ್ಮ ತಾಳುತ್ತಾರೆ. ಬೀರಪ್ಪ, ಮಾಳಿಂಗರಾಯನ ಜನ್ಮದ ವಿಧಾನಗಳು ೨ನೇ ವರ್ಗಕ್ಕೆ ಸೇರುತ್ತವೆ. ಹರಿಹರನ ರಗಳೆಗಳಲ್ಲಿ ಕಾಣಿಸಿಕೊಳ್ಳುವ ನಾಯಕರು ಇದೇ ರೀತಿಯಲ್ಲಿ ಭೂಮಿಗೆ ಬರುತ್ತಾರೆ. ಮಾಯವ್ವ ಮತ್ತು ಅಮೋಘಸಿದ್ಧನ ಜನ್ಮದ ವಿಧಾನಗಳು ಒಂದನೇ ವರ್ಗಕ್ಕೆ ಸೇರುತ್ತವೆ. ಮಾಯವ್ವ ಭೂಮಿಗೆ ಪ್ರವೇಶ ಪಡೆಯುವ ವಿಧಾನ ಭಿನ್ನವಾದದ್ದು. ಹುಟ್ಟಿದ ತಕ್ಷಣ ಅಪಶಕುನವೆನ್ನುವ ಪಟ್ಟವನ್ನು ಕಟ್ಟಿಕೊಂಡು ಬಿಡುತ್ತಾಳೆ. ಈಕೆ ಯೂನಿಯಲ್ಲಿ ಜನ್ಮತಾಳುತ್ತಾಳೆ. ಆ ಕಾರಣಕ್ಕೆ ತಂದೆ ತಾಯಿಗಳ ಜೀವಕ್ಕೆ ಅಘಾತವಿದೆ ಅನ್ನುವ ಅಪವಾದವನ್ನು ಹೊರುತ್ತಾಳೆ. ಜೀವ ಭಯಕ್ಕೆ ಹೆದರಿದ ತಂದೆತಾಯಿಗಳು ನದಿಯಲ್ಲಿ ತೇಲಿಬಿಟ್ಟು ತಮ್ಮ ಜೀವವನ್ನು ರಕ್ಷಣೆ ಮಾಡಿಕೊಂಡು ಬಿಡುತ್ತಾರೆ. ನದಿಯಲ್ಲಿ ತೇಲಿಬಿಟ್ಟ ಕೂಸು ನದಿ ದಡದಲ್ಲಿದ್ದ ಋಷಿಮುನಿಗಳಿಗೆ ಸಿಗುತ್ತದೆ. ನಂತರ ಕುರಿಗಾರರ ಕೈಗೆ ಸೇರುತ್ತದೆ. ರೇವಣಸಿದ್ಧನ ಜನನದ ಬಗ್ಗೆ ಇದೇ ತರದ ಕಥೆಗಳು ಸಿಗುತ್ತವೆ. ಕೂಸು ಇರುವಾಗಲೇ ನದಿಯ ದಡದಲ್ಲಿ ನಾಥರ ಕೈಗೆ ಸಿಗುತ್ತಾನೆ. ನದಿಯ ದಡದಲ್ಲಿ ಸಿಕ್ಕ ಕಾರಣಕ್ಕೆ ನಾಥರು 'ರೇವಣನಾಥ'ನೆಂದು ಹೆಸರನ್ನು ಇಡುತ್ತಾರೆ. ಅಮೋಘಸಿದ್ಧನ ಜನನ ಮಾಯವ್ವ ರೇವಣಸಿದ್ಧರಿಗಿಂತ ಭಿನ್ನವಾದುದ್ದಾಗಿದೆ. ಈತ ಕೈಲಾಸದಲ್ಲಿ ಆರು ಜನ್ಮಗಳನ್ನು ತಾಳಿ ಶಿವನನ್ನು ಪೂಜಿಸುತ್ತಾನೆ. ಈತನ ನಿಯತ್ತಿನ ಭಕ್ತಿಗೆ ಮೆಚ್ಚಿದ ಶಿವ ಏಳನೇ ಜನ್ಮ ತಾಳಿದ ನಂತರ ಶೈವಾ ಆರಾಧನೆಯನ್ನು ಬಲಗೊಳಿಸುವುದಕ್ಕೆ ಭೂಮಿಗೆ ಕಳಿಸುತ್ತಾನೆ. ಅಮೋಘಸಿದ್ಧ ಭೂಮಿಗೆ ಬರುವ ಸಂದರ್ಭದಲ್ಲಿ ಶೈವ ಆರಾಧನೆ ಕಣ್ಮರೆಯ ಹಂತದಲ್ಲಿತ್ತು ಎಂದು ಡೊಳ್ಳಿನ

ಹಾಡುಗಳು ಹೇಳುತ್ತವೆ. ಅಮೋಘಸಿದ್ಧನನ್ನು ಶಿವ ತನ್ನ ರಾಯಭಾರಿ ಎನ್ನುವಂತೆ ಒಂದು ನಿಶ್ಚಿತ ಜವಾಬ್ದಾರಿಯನ್ನು ಪೂರೈಸುವುದಕ್ಕಾಗಿ ಕಳಿಸಿಕೊಡುವುದು ಇಲ್ಲಿ ಗಮನ ಸೆಳೆಯುತ್ತದೆ ಹಾಗೂ ಪುರುಷರಿಗಿದ್ದ ಸ್ಥಾನಮಾನವನ್ನು ಹೇಳುತ್ತದೆ. ಇಲ್ಲಿ ಮಾಯವ್ವ ಅಮೋಘಸಿದ್ಧನಂತೆ ನಂಬಿಕಸ್ಥೆ ಮಹಿಳೆ ಅಲ್ಲ. ಅಪಶಕುನದ ಮಹಿಳೆ. ನದಿಯ ದಡದಲ್ಲಿ ಋಷಿಮುನಿಗಳಿಗೆ ಸಿಕ್ಕರೂ ರೇವಣಸಿದ್ಧನಂತೆ ಈಕೆಯನ್ನು ಸಾಕುವುದಿಲ್ಲ. ಬದಲಾಗಿ ಸಂತೆಯಲ್ಲಿಟ್ಟು ಮಾರಾಟ ಮಾಡಿಬಿಡುತ್ತಾರೆ. ಮಾರಾಟದ ಸಂದರ್ಭದಲ್ಲಿ ಋಷಿಗಳು ಹೇಳುವ ಮಾತುಗಳು ಗಮನ ಸೆಳೆಯುತ್ತವೆ. ಪೆಟ್ಟಿಗೆ ನಮಗೆ ಕೂಸು ನಿಮಗೆ ಎನ್ನುತ್ತಾರೆ. ಇವರಿಗೆ ಬಂಗಾರ ಮುಖ್ಯವೇ ಹೊರತು ಕೂಸು ಮುಖ್ಯವಲ್ಲ. ಪುರುಷ ಪ್ರಧಾನ ವ್ಯವಸ್ಥೆಯ ಮನಸ್ಥಿತಿಯನ್ನು ಇಲ್ಲಿ ಅರಿಯಬಹುದು. ಇದು ಹೆಣ್ಣನ್ನು ಮಾರಾಟಕ್ಕೆ ಇಟ್ಟ ವ್ಯವಸ್ಥೆಯನ್ನು ತಿಳಿಸುತ್ತದೆ.

ಈ ತರಹದ ಜನ್ಮದ ಪರಿಕಲ್ಪನೆಯಲ್ಲಿ ಹಾಲುಮತ ಸಂಸ್ಕೃತಿಯ ಹಲವು ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಬಹುದು. ಹಾಲುಮತಸ್ಥರು ಮೂಲತಃ ಶೈವ ಆರಾಧಕರು. ಜಲ ಆರಾಧಕರು; ಜಲಮೂಲ ಸಂಸ್ಕೃತಿಯವರು ಎಂದು ಶಂಬಾರವರು ಅಭಿಪ್ರಾಯ ಪಡುತ್ತಾರೆ. ಮಾಯವ್ವನ ಜನ್ಮ ಶೈವಾರಾಧನೆ ಮತ್ತು ಜಲಮೂಲದಿಂದ ಆರಂಭವಾಗಿ ಪಶುಪಾಲಕ ಕುಟುಂಬಗಳ ಜೊತೆ ಸಂಬಂಧ ಬೆಳೆದುಕೊಳ್ಳುತ್ತದೆ. ನಂತರ ಕೃಷಿ ಸಂಸ್ಕೃತಿಯೊಂದಿಗೆ ತಳಕು ಹಾಕಿಕೊಳ್ಳುತ್ತದೆ. ರೇವಣಸಿದ್ಧನ ಜನನದ ಪರಿಕಲ್ಪನೆ ಇದಕ್ಕೆ ಹೊರತಾಗಿಲ್ಲ. ಆದರೆ ರೇಣುಕಾಚಾರ್ಯನ ಜನ್ಮದ ವಿಧಾನಗಳನ್ನು ಹೇಳುವ ಕಥನಗಳಲ್ಲಿ ಈ ಅಂಶಗಳು ಕಂಡುಬರುವುದಿಲ್ಲ. ಈ ಕಥನಗಳು ಮನುಕುಲದ ಸೃಷ್ಟಿಯ ಜೊತೆ ತಳಕು ಹಾಕಿಕೊಳ್ಳುತ್ತವೆ. ಈ ಕಥನಗಳ ಸೃಷ್ಟಿಯ ರಾಜಕಾರಣ ಬೇರೆ. ಅದರ ಚರ್ಚೆ ಇಲ್ಲಿ ಅಸಮಂಜಸ. ಹಾಲುಮತದ ಸಾಂಸ್ಕೃತಿಕ ವೀರರ ಜನ್ಮವನ್ನು ಹೇಳುವ ಕಥನಗಳು ಶೈವಾರಾಧನೆ ಮತ್ತು ಜಲಮೂಲ ಸಂಸ್ಕೃತಿಯಿಂದ ಆರಂಭವಾಗುತ್ತವೆ ಅನ್ನುವುದು ಪ್ರಮುಖ. ಪಶುಪಾಲಕರಾದ ಇವರು ತಮ್ಮ ಸಂಸ್ಕೃತಿಯನ್ನು ನದಿಯ, ಹಳ್ಳದ ದಡದಲ್ಲಿ ಆರಂಭಿಸಿಕೊಂಡರು. ಹಾಗೂ ಇವರು ಮೂಲತಃ ಶೈವ ಆರಾಧಕರು ಅನ್ನುವುದನ್ನು ಅರಿಯಬಹುದು. ಈಗಲೂ ಇವರ ಆರಾಧ್ಯ ದೈವಗಳ ನೆಲೆಗಳು ಅಥವಾ ಮೂಲ ನೆಲೆಗಳು ಹೆಚ್ಚಾಗಿ ನದಿ, ಹಳ್ಳ ಮತ್ತು ಕೆರೆಗಳ ದಡದಲ್ಲಿ ಇವೆ.

ಈಗ ಮಾಯವ್ವ ಪಶುಪಾಲಕ-ಕೃಷಿ ಸಮುದಾಯಗಳ ಆರಾಧ್ಯ ದೇವತೆಯಾಗಿ, ಗ್ರಾಮದೇವತೆಯಾಗಿ ಆರಾಧನೆಗೆ ಒಳಗಾಗುತ್ತಿದ್ದಾಳೆ. ಕೃಷಿ ಸಮುದಾಯಗಳಿಗಿಂತ ಪಶುಪಾಲನ ಸಮುದಾಯಗಳು ಹೆಚ್ಚಾಗಿ ಆರಾಧನೆ ಮಾಡುತ್ತಿವೆ. ಮರದ ಕೆಳಗಡೆ ಚಿಕ್ಕ ಚಿಕ್ಕ ಗುಡಿಗಳನ್ನು ಕಟ್ಟಿ ಕಲ್ಲು ಅಥವಾ ಮಣ್ಣಿನ ಮೂರ್ತಿಗಳನ್ನು ಮಾಡಿ ಪೂಜಿಸುತ್ತಿದ್ದಾರೆ. ಸಿಡಿಯಾಣದ ಬೀರಪ್ಪ ಮತ್ತು ಮಾಳಿಂಗರಾಯನ ದೇವಾಲಯಗಳ ಹಿಂಭಾಗದಲ್ಲಿ ಚಿಕ್ಕ ಮರದ ಕೆಳಗಡೆ ಮಾಯವ್ವನನ್ನು ಆರಾಧನೆ ಮಾಡುತ್ತಿದ್ದಾರೆ. ಅಲ್ಲಿ ಈಕೆಯನ್ನು 'ಮರದೇವತೆ'ಯೆಂದು ಕರೆಯುತ್ತಾರೆ. ಮಾರಮ್ಮನನ್ನು ಸಹ ಮರದೇವತೆಯೆಂದು ಕರೆಯುವ ಸಂಪ್ರದಾಯ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿದೆ. ವಿದ್ವಾಂಸರು 'ಮಾಯವ್ವ'ನ

ಮುಂದುವರಿದ ಭಾಗವೇ 'ಮಾರಮ್ಮ'ವೆನ್ನುತ್ತಾರೆ. ಮಾರಮ್ಮ ದೇವತೆಯ ಪದದ ಶಬ್ದೋತ್ಪತ್ತಿ ಹೀಗಿದೆ. ಮರ+ಅಮ್ಮ=ಮರಮ್ಮ > ಮರದಮ್ಮ > ಮರಗಮ್ಮ > ಮಾರಮ್ಮ ಮಾರಿ+ಅಮ್ಮ= ಮಾರಿಯಮ್ಮ > ಮಾರೆಮ್ಮ > ಮಾರೆಮ್ಮ"[೧೪೩] ಕಾಡುಗೊಲ್ಲರು 'ಮಾಯಿ'ಯನ್ನು ಮಾರಮ್ಮನ ಹೆಸರಿನಲ್ಲಿ ಆರಾಧನೆ ಮಾಡುತ್ತಿದ್ದಾರೆ. ಈಕೆಯನ್ನು ಜುಂಜಪ್ಪನ ಅಕ್ಕನೆಂದು ಹೇಳುವ ಕಥನಗಳು ಇವರಲ್ಲಿವೆ. ಚಿತ್ರದುರ್ಗ, ಶಿರಾ, ಹಿರಿಯೂರು, ಕಡೂರು, ಹೊಸದುರ್ಗ ತಾಲೂಕುಗಳ ಪ್ರದೇಶದಲ್ಲಿ ಜುಂಜಪ್ಪ ಮತ್ತು ಮಾಯಿ(ಮಾರಮ್ಮ)ಯನ್ನು ಒಂದೇ ಸ್ಥಳಗಳಲ್ಲಿ ಆರಾಧನೆ ಮಾಡಿದರೆ ಹಾಲುಮತಸ್ಥರು ಬೀರಪ್ಪನ ಜೊತೆ ಸಂಯುಕ್ತಗೊಳಿಸಿ ಆರಾಧನೆ ಮಾಡುತ್ತಿದ್ದಾರೆ. "ಗೌರಸಂದ್ರದಲ್ಲಿ ಮಾರಮ್ಮನನ್ನು ಹುತ್ತದ ರೂಪದಲ್ಲಿ ಆರಾಧಿಸುವ ಪದ್ಧತಿ ಕಾಡುಗೊಲ್ಲರಲ್ಲಿದೆ. ಇಲ್ಲಿ ಮಾರಮ್ಮನನ್ನು 'ಪೆಟ್ಟಿಗೆಯ ದೇವತೆ' ಎಂದು ಕರೆಯುತ್ತಾರೆ. ಪೆಟ್ಟಿಗೆಯನ್ನೇ ದೇವತೆ ಎಂದು ಪೂಜಿಸುತ್ತಾರೆ. ಇವರಿಗೆ ಮಾರಮ್ಮ ಮೊದಲು ಪೆಟ್ಟಿಗೆಯ ರೂಪದಲ್ಲಿ ದೊರಕಿದಳಂತೆ. ಇದುವರೆಗೂ ಪೆಟ್ಟಿಗೆಯೊಳಗಿರುವ ಸಾಮಗ್ರಿಗಳನ್ನು ಯಾರು ನೋಡಿಲ್ಲವಂತೆ. ಹಬ್ಬದ ಹಿಂದಿನ ದಿನ (ಸಾಮಾನ್ಯವಾಗಿ ಗುಗ್ಗರಿ ಹಬ್ಬದ ಹಿಂದಿನ ದಿನ) ಸ್ವತಃ ಪೂಜಾರಿ ಕಣ್ಣು ಕಟ್ಟಿಕೊಂಡು ಈ ವಸ್ತುಗಳನ್ನು ಶುಚಿ ಮಾಡುವ ಸಂಪ್ರದಾಯ ರೋಚಕ ವಾಗಿದೆ".[೧೪೪] ಹಾಸನದ ಹಾಸನಾಂಬಿಯನ್ನು ಪೆಟ್ಟಿಗೆಯ ದೇವತೆ ಎಂದು ಕರೆಯುತ್ತಾರೆ. ಮಾಯವ್ವ ಕುರಿಗಾರರಿಗೆ ಪೆಟ್ಟಿಗೆಯಲ್ಲಿ ದೊರೆತ ದೇವತೆ ಎಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಮಾಯವ್ವ ಮತ್ತು ಮಾರಮ್ಮನ ಪುರಾಣಗಳು ಒಂದೇ ತೆರನಾಗಿವೆ. 'ಕೋಣಾಸುರ'ನ ಸಂಹಾರ ಇಬ್ಬರಲ್ಲೂ ಕಂಡುಬರುತ್ತದೆ. ಈ ಮಾಯಿಯನ್ನು ಕಾಡುಗೊಲ್ಲರು ಗೌರಸಂದ್ರ ಮಾರಕ್ಕ, ಬೇವಿನಹಳ್ಳಿ ಕರಿಯಮ್ಮ, ಕೆರೆ ಬೆನಕನಹಳ್ಳಿ ಮಾರಮ್ಮ, ಗೊಲ್ಲರಹಳ್ಳಿ ಮಾರಮ್ಮ ಎಂಬ ಬೇರೆ ಬೇರೆ ಹೆಸರುಗಳಿಂದ ಬೇರೆ ಬೇರೆ ಪ್ರದೇಶದಲ್ಲಿ ಪೂಜಿಸುತ್ತಿದ್ದಾರೆ. ಇವರೆಲ್ಲರೂ ಅಕ್ಕತಂಗಿಯರು ಅನ್ನುವ ಕಥನಗಳು ಇವರಲ್ಲಿವೆ. ಮಾರಮ್ಮ, ಪಾಲಕಮ್ಮ, ಕರಿಯಮ್ಮ, ಯಲ್ಲಮ್ಮ, ಮಲಿಯಮ್ಮ ಮುಂತಾದವರನ್ನು ಅಕ್ಕತಂಗಿಯರು ಸಪ್ತಮಾತೃಕೆಯರು ಎಂದು ಕರೆಯಲಾಗುತ್ತದೆ. ಇವರನ್ನು ಕುಲದೈವಗಳನ್ನಾಗಿ ಮಾಡಿಕೊಂಡ ಮನೆತನಗಳು ಹಾಲುಮತ ಸಮುದಾಯದಲ್ಲಿವೆ. ಡೊಳ್ಳಿನ ಹಾಡುಗಳಲ್ಲಿ ಕಂಡುಬರುವ ಸಪ್ತಮಾತೃಕೆಯರು ಈ ಕೆಳಗಿನಂತಿದ್ದಾರೆ.

"ಎಕ್ಕಲಕ್ಕಿ ಎಲ್ಲವ್ವ ನೀಬಾ ಕುಕನೂರು ದ್ಯಾಮವ್ವನೇ
ಒಡ್ಡಟ್ಟಿ ಉಡಸವ್ವ ನೀಬಾ ಸಿರಸಂಗಿ ಕಾಳವ್ವನೇ
ಬಾದೇವಿ ಬನೆದವ್ವ ನೀಬಾ ಬಾಳಿಯ ವನದವ್ವನೆ
ಹಾಲುಹಳ್ಳದ ಬಣ್ಣದ ಮಾಯವ್ವ ಇವರಾರು ಮಂದ್ಯಂತ ತಂಗೇಳೆ"[೧೪೫]

ಡೊಳ್ಳಿನ ಹಾಡುಗಳಲ್ಲಿ ಕಂಡುಬರುವ ಸಪ್ತಮಾತೃಕೆಯರಿಗೆ 'ಮಾಯವ್ವ' ಹಿರಿಯವಳಾಗಿದ್ದಾಳೆ. ಈಕೆಯನ್ನು 'ಅಕ್ಕ'ನೆಂದು ಕರೆಯಲಾಗುತ್ತದೆ. ಅಲ್ಲದೆ ತಂಗಿಯಂದು ಕರೆಯುವ ಹಾಡುಗಳೂ ಸಿಗುತ್ತವೆ. ಇದರಲ್ಲಿ ಅಕ್ಕನೆಂದು ಕರೆಯುವ ಹಾಡುಗಳು ಹೆಚ್ಚು.

'ದ್ಯಾಮವ್ವ'ನನ್ನು 'ಅಕ್ಕ' ಹಿರಿಯವಳೆಂದು ಕರೆಯುವ ಸಂಪ್ರದಾಯ ನಮ್ಮಲ್ಲಿದೆ. ಇದಕ್ಕೆ ಸಂಬಂಧಿಸಿದ ಜನಪದ ಗೀತೆಗಳು, ಸ್ಥಳ ಪುರಾಣಗಳು ಸಿಗುತ್ತವೆ. ದ್ಯಾಮವ್ವನನ್ನು ಅಕ್ಕನೆಂದು ಕರೆಯುವ ಸಪ್ತಮಾತೃಕೆಯರ ಗುಂಪು ಈ ಕೆಳಗಿನಂತಿದೆ. "ಮರಗಮ್ಮ, ದುರುಗಮ್ಮ, ಎಲ್ಲಮ್ಮ,

ಕಾಳಮ್ಮ, ಚೌಡಮ್ಮ, ಪಾಲಕಮ್ಮ ಮತ್ತು ದ್ಯಾಮವ್ವ".[೧೪೬] ಇಲ್ಲಿ ಮಾಯವ್ವನ ಹೆಸರು ಕಂಡು ಬರುವುದಿಲ್ಲ. ದ್ಯಾಮವ್ವನನ್ನು ಬೀರಪ್ಪನ ಅಕ್ಕನೆಂದು ಕರೆಯುವ ಕಥನಗಳು ಇವೆ. ಹಾಗೂ ಮಾಳಂಗರಾಯನೊಂದಿಗೆ ದ್ಯಾಮವ್ವ ಸಂಘರ್ಷ ಮಾಡಿರುವ ಕಥನಗಳು ಇವೆ. ಈ ಸಂಘರ್ಷಗಳ ಕಥನಗಳ ವಿಶಿಷ್ಟತೆಯನ್ನು ಅರಿಯಬೇಕು. "ತುಮಕೂರು ಜಿಲ್ಲೆ ಮೂಗನಹಳ್ಳಿ ಅಮ್ಮಾಜಿ ಸಿದ್ಧರ ಬೆಟ್ಟದವಳು. ಈಕೆ ಒಕ್ಕಲಿಗರ ಕುಲದೇವತೆ. ಈ ಗುಡಿಯ ಪೆಟ್ಟಿಗೆಯಲ್ಲಿ ಚಿಕ್ಕಮ್ಮ, ದೊಡ್ಡಮ್ಮ, ಚನ್ನಪಟ್ಟಣದಮ್ಮ, ಅಕ್ಕಮ್ಮ, ಅಮ್ಮಾಜಿ, ಮೇಗಳ ಹೊಲದಮ್ಮ, ಕಾಮಕ್ಕ ಅನ್ನುವ ಏಳು ಅಮ್ಮಗಳಿವೆ. ಈ ದೇವತೆಗಳನ್ನು ಗುಡಿಯಲ್ಲಿ ಬಾಗಿಲು ಮುಚ್ಚಿ ಪೂಜಿಸಲಾಗುತ್ತದೆ. ಇವರನ್ನು ಸಿದ್ಧರ ಬೆಟ್ಟದ ಸಿದ್ಧಪ್ಪನ ತಂಗಿಯರೆಂದು ಕರೆಯಲಾಗುತ್ತದೆ. ಹಾಲುಮತ ಸಂಸ್ಕೃತಿಯಲ್ಲಿ ಬೀರಪ್ಪ ನನ್ನು 'ಸಿದ್ಧಪ್ಪ'ನೆಂದು ಕರೆಯುವ ಸಂಪ್ರದಾಯವಿದೆ. ನಂಜನಗೂಡು ತಾಲೂಕು ಕಳಲೆ ಗ್ರಾಮದಲ್ಲಿ ಹಾಲುಮತದವರು ಸಪ್ತಮಾಳಮ್ಮ, ಕೊಳ್ಳೆ ಮಾಲೆಮ್ಮ, ಮಲಿಯಮ್ಮ, ಪಿರಿಯಪಟ್ಟಣದ ಚಿಕ್ಕಮ್ಮ, ಮೂಗು ಚಿಕ್ಕಮಾಲೆಮ್ಮ, ಕೇರನಾಳ ಮಾಲೆಮ್ಮ, ಕಡೆ ಮಾರಮ್ಮ ಎನ್ನುವ ಸಪ್ತದೈವಗಳನ್ನು ಕುಲದೈವಗಳನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿದ್ದಾರೆ. ಸಪ್ತಮಾಳಮ್ಮನನ್ನು 'ಹಿರಿಯಕ್ಕ'ನೆಂದು ಕರೆಯಲಾಗುತ್ತದೆ. ಮಾಳಮ್ಮ ಪಶುಪಾಲಕರ ಕುಲದೇವತೆ. ಈ ಸಪ್ತಮಾತೃಕೆಯರೆಲ್ಲರೂ ರೇವಣಸಿದ್ಧನ ಜೊತೆ ಸಂಯುಕ್ತಗೊಂಡು ಆರಾಧೆಗೆ ಒಳಗಾಗುತ್ತಿದ್ದಾರೆ. ಇವರನ್ನೆಲ್ಲ ರೇವಣಸಿದ್ಧನ ತಂಗಿಯರೆಂದು ಕರೆಯುತ್ತಾರೆ".[೧೪೭] ರೇವಣಸಿದ್ಧ ಹಾಲುಮತಸ್ಥರ ಆರಾಧ್ಯ ದೈವ, ಕುಲದೈವ. ಈತ ಹಾಲುಮತ ಸಮುದಾಯದಲ್ಲಿ ಹುಟ್ಟಿದ ವ್ಯಕ್ತಿಯೆಂದು ಹೇಳಲಾಗುತ್ತದೆ. ಮಾಳಮ್ಮನನ್ನು ಹುತ್ತಿನ ರೂಪದಲ್ಲಿ ಆರಾಧನೆ ಮಾಡುವ ಪದ್ಧತಿ ಹಾಲುಮತಸ್ಥರಲ್ಲಿದೆ. ಮಾಯವ್ವ, ಮಾಲಿಯಮ್ಮ, ಮಾರೆಮ್ಮ, ಮಾರೆಮ್ಮನನ್ನು ಹುತ್ತಿನ ರೂಪದಲ್ಲಿ ಆರಾಧನೆ ಮಾಡುವ ವಿಧಾನವನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಕಾಣಬಹುದು. ಹೆತ್ತಗೋನಹಳ್ಳಿಯಲ್ಲಿ ಮಾಯವ್ವನನ್ನು ಹುತ್ತದ ರೂಪದಲ್ಲಿ ಆರಾಧನೆ ಮಾಡಲಾಗುತ್ತದೆ. ಈ ಎಲ್ಲಾ ದೇವತೆಗಳನ್ನು 'ಭಂಡಾರ ದೇವತೆ'ಗಳೆಂದು ಕರೆಯಲಾಗುತ್ತದೆ. ಹಾಗೂ ಈ ದೈವಗಳ ಆಚರಣೆಗಳಲ್ಲಿ ಭಂಡಾರ ಅರ್ಪಣೆಯ ಪ್ರಮುಖ ವಸ್ತುವಾಗಿದೆ. ಮಾರಮ್ಮ, ಮಾಳಮ್ಮ, ಮಲಿಯಮ್ಮ, ಕಾಳಮ್ಮ, ಓರಗಲ್ಲಮ್ಮ, ಯಲ್ಲಮ್ಮ ಮುಂತಾದ ಸ್ತ್ರೀದೈವಗಳು ಬೀರಪ್ಪ, ಕರಿಸಿದ್ಧ, ಸಿದ್ಧಪ್ಪ, ಬ್ಯಾಟಿ ಬೀರಪ್ಪ, ಈರಪ್ಪ, ವೀರಭದ್ರ, ರೇವಣಸಿದ್ಧ, ರೇಣುಕಚಾರ್ಯ, ಅಮೋಘಸಿದ್ಧ, ಮೈಲಾರಲಿಂಗ, ಮಲ್ಲಯ್ಯ, ಮಲ್ಲಿಕಾರ್ಜುನ, ಸೋಮಲಿಂಗ ಮುಂತಾದ ಪಶುಪಾಲನ (ಹಾಲುಮತ) ಸಾಂಸ್ಕೃತಿಕ ವೀರರ ಜೊತೆ ಸಂಯುಕ್ತಗೊಂಡು ಆರಾಧನೆಗೆ ಒಳಗಾಗುತ್ತಿದ್ದಾರೆ. ರೇವಣಸಿದ್ಧ, ಬೀರಪ್ಪ ಮತ್ತು ಮಲ್ಲಯ್ಯನ ಜೊತೆ ಆರಾಧನೆ ಆಗುವ ಸ್ವರೂಪಗಳು ಮತ್ತು ಉದ್ದೇಶಗಳು ಬೇರೆ ಬೇರೆ ಆಗಿವೆ. ಹಾಲುಮತದ ಗುಡಿಕಟ್ಟು ವ್ಯವಸ್ಥೆಯಲ್ಲಿ ಪುರುಷ ದೈವಗಳೊಂದಿಗೆ ಈ ಸಪ್ತಮಾತೃಕೆಯರು ಸೇರಿರುತ್ತಾರೆ. ಉದಾಹರಣೆ : ಹಿರಿಯೂರು ರೇವಣಸಿದ್ಧೇಶ್ವರ ದೇವಾಲಯದ ಗುಡಿಕಟ್ಟು ವ್ಯವಸ್ಥೆ.

೧. ಮಲ್ಲಿಗೆ ಕುರುಬರು - ಮಸಕಲು ಲಕ್ಕಮ್ಮ

೨. ಗೌಡ ಕುರುಬರು - ದ್ವಾರಣಕುಂಟೆ ಲಕ್ಷ್ಮಿ

೩. ಹಾಲನ ಕುರುಬರು - ಹಿರಿಯೂರು ಮಲಿಯಮ್ಮ

೪. ದಾನಿ ಕುರುಬರು - ಬನಶಂಕರಿ

೫. ಹೊನ್ನುಂಗರ ಕುರುಬರು - ಮಾಪುರ ಸಿದ್ಧೇಶ್ವರ

೬. ಹಾಲನ್ ಕುರುಬರು - ಬೀರಪ್ಪ

೭. ಪರಶಲು ಕುರುಬರು - ಹಿರಿಯೂರು ಹೊಸುರಾಂಬ ದೇವತೆ.

ಹೀಗೆ ಗುಡಿಕಟ್ಟು ವ್ಯವಸ್ಥೆಯಲ್ಲಿ ಕುಲದೈವಗಳನ್ನಾಗಿ ಮಾಡಿಕೊಂಡು ಹಾಲುಮತಸ್ಥರು ಸಪ್ತಮಾತೃಕೆಯರನ್ನು ಆರಾಧನೆ ಮಾಡುತ್ತಿದ್ದಾರೆ. ಬೀರಪ್ಪ, ಸಿದ್ಧೇಶ್ವರ ಮತ್ತು ದೊಡ್ಡದೇವರ ಜಾತ್ರೆಗಳಲ್ಲಿ ಈ ದೈವಗಳೆಲ್ಲವೂ ಒಂದು ಕಡೆ ಸೇರುತ್ತವೆ. ಕೆಲವು ಪ್ರದೇಶಗಳಲ್ಲಿ ಹಾಲುಮತದ ಸಾಂಸ್ಕೃತಿಕ ವೀರರ ಜೊತೆಯಲ್ಲಿ ಆರಾಧನೆಗೆ ಒಳಪಡುತ್ತಾರೆ. ಶಿರಾ ತಾಲೂಕು ಕಾಮುಗನಹಳ್ಳಿ ಗ್ರಾಮದಲ್ಲಿ ಬೀರಪ್ಪನ ಜೊತೆ ಹೊಸುರಮ್ಮ ಮೂರ್ತಿ ಇದೆ. ಈ ಎರಡು ದೈವಗಳು 'ಹಾಲನ್' ಕುರುಬರ ಕುಲದೈವಗಳಾಗಿವೆ. ಸೋಮೇಶ್ವರ ದೇವಾಲಯದಲ್ಲಿ ಲಕ್ಕಮ್ಮನ ಮೂರ್ತಿ ಇದೆ. ಬಾಗೂರು ಗ್ರಾಮದ ಬೀರದೇವರ ದೇವಾಲಯದ ಆವರಣದಲ್ಲಿ ಎರಡು 'ಉಚ್ಚಂಗಿ ಎಲ್ಲಮ್ಮ'ನ ದೇವಾಲಯಗಳಿವೆ. ಈ ದೈವಗಳನ್ನು 'ಬೆಳ್ಳಿಕುಲ'ದ ಕುರುಬರು ಕುಲದೈವವನ್ನಾಗಿ ಮಾಡಿಕೊಂಡಿದ್ದಾರೆ. ಹೊಸದುರ್ಗ ತಾಲೂಕು ಕೆಲ್ಲೋಡು ಗ್ರಾಮದಲ್ಲಿ ಮಲಿಯಮ್ಮನನ್ನು ಕರಿಸಿದ್ಧನ ತಂಗಿ ಎಂದು ಕರೆದುಕೊಳ್ಳುತ್ತಾರೆ. ಈ ಪ್ರದೇಶದಲ್ಲಿರುವ ದ್ರಾವಿಡ ಪಶುಪಾಲನ ಸಮುದಾಯಗಳು ಮತ್ತು ಈ ಪ್ರದೇಶದಲ್ಲಿ ಹಾಲುಮತಸ್ಥರಲ್ಲಿ ಆರಾಧನೆಗೆ ಒಳಗಾಗುವ ಸ್ತ್ರೀದೈವಗಳು ಉತ್ತರದೇಶದಿಂದ ವಲಸೆ ಬಂದವರೆಂದು ಹೇಳಲಾಗುತ್ತದೆ. ಮಾಯವ್ವ ಉತ್ತರ ದೇಶದಲ್ಲಿ ನೆಲೆಸಿದವಳು. ಇಲ್ಲಿ ಉತ್ತರ ದೇಶವೆಂದರೆ ಮಹಾರಾಷ್ಟ್ರ, ಕರ್ನಾಟಕದ ಗಡಿನಾಡು ಪ್ರದೇಶ ಎಂದಾರ್ಥ. ಬೆಳಗಾವಿ ಜಿಲ್ಲೆ ಗೋಕಾಕ್ ತಾಲೂಕು ಚಿಂಚಲಿಯಲ್ಲಿ 'ಮಾಯವ್ವ ಮೂಲಸ್ಥಳವಿದೆ. ಚಿಂಚಲಿ ಮಾಯವ್ವ ಮತ್ತು ಕೋಣಗನೂರು ಕರಿಸಿದ್ಧ ಏಕಕಾಲಕ್ಕೆ ದಕ್ಷಿಣ ದೇಶದಿಂದ ವಲಸೆ ಬಂದು ಈ ಪ್ರದೇಶದಲ್ಲಿ ನೆಲೆಸಿದರು ಅನ್ನುವ ವಿವರಗಳು ಡೊಳ್ಳಿನ ಹಾಡುಗಳಲ್ಲಿ ಸಿಗುತ್ತವೆ. ಚಿಂಚಲಿಯಲ್ಲಿ ಸಿಗುವ ಮಾಯವ್ವನ ಸ್ಥಳ ಪುರಾಣಗಳು ಇದಕ್ಕೆ ಹೊರತಾಗಿಲ್ಲ. ಮಾಯವ್ವ, ಬೀರಪ್ಪರಿಬ್ಬರು ಅಕ್ಕ ತಂಗಿಯರು ಅನ್ನುವ ಕಥನಗಳು ಈ ಪ್ರದೇಶದಲ್ಲಿವೆ. ಮಾಯವ್ವನನ್ನು ಸಪ್ತಮಾತೃಕೆಯರ ಅಕ್ಕನೆಂದು ಇಲ್ಲಿ ಕರೆಯಲಾಗುತ್ತದೆ. ಹಾಗಾಗಿ ಮಾಯವ್ವ-ಮಾರಮ್ಮನಾಗಿ ಕರ್ನಾಟಕ-ಮಹಾರಾಷ್ಟ್ರ-ಆಂಧ್ರಪ್ರದೇಶದಲ್ಲಿ ಆರಾಧನೆಗೆ ಒಳಗಾಗುತ್ತಿರಬೇಕು. ಈಕೆಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವುದಕ್ಕೆ ಮತ್ತು ಮಾರಮ್ಮ-ಮಾಯಮ್ಮರ ನಡುವೆ ಇರುವ ಗೊಂದಲವನ್ನು ಬಿಡಿಸಿಕೊಳ್ಳಬೇಕು. ಇದಕ್ಕೆ ಡೊಳ್ಳಿನ ಹಾಡುಗಳನ್ನು ವಿಸ್ತಾರವಾಗಿ ಅಧ್ಯಯನ ಮಾಡಬೇಕಾಗಿದೆ. ಈ ಗೊಂದಲವನ್ನು ಬಿಡಿಸಿ ಕೊಳ್ಳುವುದಕ್ಕೆ ಈ ಹಾಡುಗಳು ಸಹಾಯಕವಾಗುತ್ತವೆ.

೪.೭.೪. ಮಾಯವ್ವ ದನಗಾರರ ಸಂಹಾರಕಿ

ಮಾಯವ್ವನಿಗೆ ಬೀರಪ್ಪ ದೊರಕಿದ ನಂತರ ಆತನಿಗೆ ಕುರಿಕಾಯುವ ತರಬೇತಿಯನ್ನು ಕೊಟ್ಟು ದಕ್ಷಿಣ ದೇಶಗಳತ್ತ ಅಂದರೆ ಈಗಿನ ಅಥಣಿ, ಚಿಂಚಲಿ, ಕೋಣಗನೂರು ಪ್ರದೇಶಗಳತ್ತ ವಲಸೆ ಬರುತ್ತಾಳೆ. ಆ ವೇಳೆಗಾಗಲೇ ನೆಲೆನಿಂತು ದನಗಾರಿಕೆಯನ್ನು ಮಾಡುತ್ತಿದ್ದ. ಕೋಣಾಸುರ, ವನದೇವತೆ ಮತ್ತು ಭಗನಾಥ ಅನ್ನುವ ಸದಸ್ಯರನ್ನೊಳಗೊಂಡ ಪಶುಪಾಲಕ ಮನೆತನವೊಂದು ಎದುರುಗೊಳ್ಳುತ್ತದೆ. ಪಶುಪಾಲನೆ (ಕುರಿಗಾರಿಕೆಗೆ) ಹೆಚ್ಚು ಸೂಕ್ತ ಭೂಮಿ ಇದಾಗಿತ್ತು. ಇದನ್ನು ಅರಿತ ಮಾಯವ್ವ-ಬೀರಪ್ಪರು ಇಲ್ಲಿಯೇ ನೆಲೆ ನಿಲ್ಲುವುದಕ್ಕೆ ನಿರ್ಧಾರ ಮಾಡುತ್ತಾರೆ. ಈ ಉದ್ದೇಶಕ್ಕೆ ಕೋಣಾಸುರ, ಭಗನಾಥ ಮತ್ತು ವನದೇವತೆಯರು ಪ್ರತಿರೋಧ ಮಾಡಿರಬೇಕು. ಹಾಗಾಗಿ ಬೀರಪ್ಪ-ಮಾಯವ್ವ ಇಬ್ಬರು ಸೇರಿ ಆ ಮೂರು ಜನರನ್ನು ಸಂಹಾರ ಮಾಡುತ್ತಾರೆ.

"ಅಕ್ಕನ ಧ್ಯಾನ ಮಾಡ್ಯಾನೆ ತಂಗಿಯ ಧ್ಯಾನ ಮಾಡ್ಯಾನ
ಇಬ್ಬರೂ ಅಕ್ಕ ತಂಗೆದೇರ ಬೆನ್ನಿಂದ ನಿಂದ್ರುತಾರೇನ
ಪಂಚಡಂಕಿ ಹಚ್ಯಾನ ಶಿರಗೋಳು ಹೊಡೆಯುತಾನೇನ
ವನದೇವಿದಲ್ಲೇಳ ಶಿರಗೋಳು ಹೊಡೆಯುತಾನೇನ
ಬಾರೋ ಬಾರೋ ಬೀರಣ್ಣ ನೀನೆ ಗೆದ್ದೇಳಂದಾಳ"[೧೮೪]

ಮಾಯವ್ವ ವನದೇವತೆಯನ್ನು ಸಂಹಾರ ಮಾಡಿದ ನಂತರ 'ಚಿಂಚಲಿ'ಯಲ್ಲಿ ಉಳಿದುಕೊಳ್ಳುತ್ತಾಳೆ. ಚಿಂಚಲಿ ಮಾಯವ್ವನ ದೇವಾಲಯದಲ್ಲಿ ಸಿಗುವ ಸಾಂಸ್ಕೃತಿಕ ಕಥನಗಳು ಮಾಯವ್ವನ ಚರಿತ್ರೆಯನ್ನು ಭಿನ್ನವಾಗಿ ಗ್ರಹಿಸುವುದಕ್ಕೆ ಸಹಾಯಕವಾಗುತ್ತವೆ. ಇಲ್ಲಿ 'ಹಿರಿದೇವತೆ' ಅನ್ನುವ ದೇವತೆಗೆ ಮೊದಲ ಆದ್ಯತೆ. ದೇವಾಲಯದೊಳಗೆ ಪ್ರವೇಶ ಪಡೆದ ತಕ್ಷಣ ಮೊದಲ ದರ್ಶನ ಹಿರಿದೇವತೆಯದ್ದಾಗುತ್ತದೆ. ಮೊದಲ ಪೂಜೆಯು ಹಿರಿದೇವತೆಗೆ ಆಗಬೇಕು. ನಂತರದ ಪೂಜೆ ಮಾಯವ್ವನಿಗೆ ಅನ್ನುವ ನಿಯಮವಿದೆ. ಈಗಲೂ ಈ ನಿಯಮದಂತೆ ಪೂಜೆ ನಡೆಯುತ್ತದೆ. ಪೂಜಾರಿಗಳು ಈ ವಿಧಾನ ಪರಂಪರೆಯಿಂದಲೂ ನಡೆದುಕೊಂಡು ಬಂದ ಪದ್ಧತಿ ಎಂದು ಕರೆಯುತ್ತಾರಷ್ಟೆ. ವಿದ್ವಾಂಸರು ಹಿರೇದೇವಿಯ ಸಾಂಸ್ಕೃತಿಕ ಚರಿತ್ರೆಯನ್ನು ಬೇರೆ ಬೇರೆ ರೀತಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಹಿರಿದೇವತೆ ಅಂದರೆ ಮಾಯವ್ವ. ಈಕೆ ಸಪ್ತಮಾತೃಕೆಯರಿಗೆಲ್ಲ ಹಿರಿಯವಳು ಆಗಿರುವುದರಿಂದ ಹಿರೇ ದೇವತೆ ಅನ್ನುವ ಹೆಸರು ರೂಢಿಗೆ ಬಂತು ಎಂದು ಹೇಳುತ್ತಾರೆ. ಇದು ತಪ್ಪು ಗ್ರಹಿಕೆ. ಇಲ್ಲಿ ಹಿರಿಯ ದೇವತೆ ಅಂದರೆ ಸಪ್ತಮಾತೃಕೆಯಲ್ಲಿ ಕಾಣಿಸಿಕೊಂಡಿರುವ ಹಿರೇ ದೇವತೆ ಅಲ್ಲ. ಮಾಯವ್ವ ಚಿಂಚಲಿ ಪ್ರದೇಶಕ್ಕೆ ವಲಸೆ ಬರುವುದಕ್ಕಿಂತ ಮುಂಚೆ ಚಿಂಚಲಿಯಲ್ಲಿ ನೆಲೆಸಿದ್ದ ದೇವತೆ. ಆಕೆಯನ್ನು ಡೊಳ್ಳಿನ ಹಾಡುಗಳು 'ವನದೇವತೆ' ಎಂದು ಕರೆದಿವೆ. ಮಾಯವ್ವ ಚಿಂಚಲಿಯಲ್ಲಿ ನೆಲೆನಿಂತ ಕಥನಗಳು ಹೀಗಿವೆ. ಚಿಂಚಲಿಗೆ ವಲಸೆ ಬಂದ ತಕ್ಷಣ ವಾಸ ಮಾಡುವುದಕ್ಕೆ ವನದೇವತೆ ಹತ್ತಿರ ಹೋಗಿ ಉಳಿದುಕೊಳ್ಳುವುದಕ್ಕೆ ಸ್ವಲ್ಪ ಸ್ಥಳ ಕೊಡಿಯೆಂದು ಕೇಳುತ್ತಾಳೆ.

"ಚಿಂಚಲಿಪೂರ ಊರದೊಳಗೇನೆ ಅಕ್ಕವ್ವ ಮಾಯಮ್ಮನ
ಅಕ್ಕವ್ವ ಮಾಯವ್ವನೆ ಚಿಕ್ಕಬೀರಣ್ಣಾ ದೇವರೆ

[illegible]

ಬಾರೋ ಬಾರೇ ವನದೇವತೆ ಜಾಗ ಕೇಳಂದಾರ
ನಾವೇ ಇರತೀವಿ ಅಂದಾರ ಜಾಗ ನಮ್ಮಗ ಕೊಡಬೇಕಾ"[೧೪೯]

ಇದಕ್ಕೆ ಒಪ್ಪಿಕೊಂಡ ವನದೇವತೆ "ಈ ಸ್ಥಳದಲ್ಲಿ ಮೊದಲ ಪೂಜೆ, ಮೊದಲ ದರ್ಶನ, ಮೊದಲ ಆದ್ಯತೆ ನನಗೆ. ದ್ವಿತೀಯ ಆದ್ಯತೆ ನಿನಗೆ ಅನ್ನುವ ಕರಾರನ್ನು ಹಾಕುತ್ತಾಳೆ. ಈಗಲೂ ಆ ಕರಾರಿನಂತೆ ಆಚರಣೆಗಳು ನಡೆಯುತ್ತವೆ. ಹಾಗಾಗಿ 'ವನದೇವತೆ'ಯನ್ನು ಹಿರೇದೇವತೆ ಅನ್ನುವ ಹೆಸರಿನಲ್ಲಿ ಆರಾಧನೆಗೆ ಒಳಗಾಗುತ್ತಿದ್ದಾಳೆ.

ವನದೇವತೆ ಮಾಯವ್ವ ಚಿಂಚಲಿಗೆ ಬರುವುದಕ್ಕಿಂತ ಮುಂಚೆ ನೆಲೆನಿಂತು ಪಶುಪಾಲನೆ (ದನಗಾರಿಕೆ) ಮಾಡುತ್ತಿದ್ದ ಮಹಿಳೆ. ಈಕೆ ನೆಲೆ ನಿಂತ ಸ್ಥಳೀಯ ಪಶುಪಾಲಕಿಯಾಗಿ ಕಾಣಿಸುತ್ತಾಳೆ. ಮಾಯವ್ವ ವಲಸೆ ಬಂದ ಮಹಿಳೆಯಾಗಿ ಕಾಣಿಸುತ್ತಾಳೆ. ಮಾಯವ್ವನಿಗೆ ಮಹಾರಾಷ್ಟ್ರದ ಭಕ್ತರು ಹೆಚ್ಚಾಗಿದ್ದಾರೆ. ಈಕೆ ನಮ್ಮ ದೇವತೆ ಅನ್ನುವುದು ಅವರ ವಾದ. "ಕೋಂಕಣನಾಡಿನಿಂದ (ನಮ್ಮ ನಾಡಿನಿಂದ) ರಾಕ್ಷಸರನ್ನು ಬೆನ್ನು ಹತ್ತಿಕೊಂಡು ಬಂದು ಚಿಂಚಲಿಯಲ್ಲಿ ಸಂಹಾರ ಮಾಡಿದಳು. ಆಕೆಗೆ 'ಕೀಲ' ಮತ್ತು 'ಕಟ್ಟರು' ಎನ್ನುವ ವೀರರು ಸಹಾಯ ಮಾಡಿದರು. ಹಾಗಾಗಿ ಕೀಲಕಟ್ಟರನ್ನು ಈಗಲೂ ಚಿಂಚಲಿಯಲ್ಲಿ ಆರಾಧನೆ ಮಾಡುತ್ತಿದ್ದಾರೆ"[೧೫೦] ಅನ್ನುವ ಕಥನಗಳು ಜನಪ್ರಿಯಗೊಂಡಿವೆ. ಕೊಂಕಣ ನಾಡಿನಲ್ಲಿ ಮಾಯವ್ವನ ಪ್ರಾಚೀನ ದೇವಾಲಯವಿದೆ. ಆ ಕೊಂಕಣನಾಡು ಕನ್ನಡನಾಡು ಆಗಿತ್ತು ಎಂದು ಶಂಬಾ, ಚಿಂತಾಮಣಿ ಢೇರೆ ಅವರ ವಾದವಾಗಿದೆ. ಈ ಮೇಲಿನ ಕಥನಗಳು ಮಾಯವ್ವನ ವಲಸೆಗಾರಿಕೆಯನ್ನು ಹೇಳುತ್ತವೆ. ಹಾಗಾಗಿ ಈ ಸಂಘರ್ಷವನ್ನು ಪಶುಪಾಲಕರ (ದನಗಾರಿಕೆ-ಕುರಿಗಾರರ) ಸಂಘರ್ಷ ಅಥವಾ ಸ್ಥಳೀಯವಾಗಿ ನೆಲೆನಿಂತವರ ಮತ್ತು ವಲಸೆ ಬಂದವರ ಸಂಘರ್ಷವೆಂದು ಕರೆಯಬಹುದು. ಮಾಯವ್ವ ದ್ರಾವಿಡ ವಲಸೆಗಾರರ ಪಶುಪಾಲಕ ಸಂಸ್ಕೃತಿಗೆ ಸೇರಿದರೆ ವನದೇವತೆ ನೆಲೆನಿಂತ ಸ್ಥಳೀಯ ಪಶುಪಾಲನ ಸಂಸ್ಕೃತಿಗೆ ಸೇರುತ್ತಾಳೆ. ಮಾಯವ್ವ ಸ್ಥಳೀಯ ದನಗಾರರ ಸಂಹಾರಕಿಯಾಗಿ ಕಾಣಿಸುತ್ತಾಳೆ. 'ಕೋಣಾಸುರ' ಸಂಹಾರದ ಕಥನಗಳು ಇದಕ್ಕೆ ಪೂರಕವಾಗಿ ನಿಲ್ಲುತ್ತದೆ. ಅಂದರೆ ಮಾರಮ್ಮ, ದ್ಯಾಮವ್ವ, ಮಲಿಯಮ್ಮ ಮುಂತಾದ ಸ್ತ್ರೀದೈವಗಳಿಗೆ ಕೋಣವನ್ನು ಬಲಿಕೊಡುವ ಪದ್ಧತಿ ಇದೆ. ಇವರನ್ನು ಕೋಣಾಸುರನ ಸಂಹಾರಕಿಯರೆಂದು ಕರೆಯ ಲಾಗುತ್ತದೆ. ಬೀರಪ್ಪನ ಚರಿತ್ರೆಯಲ್ಲಿ ಕೋಣಾಸುರನನ್ನು ಸಂಹಾರ ಮಾಡಿದ ಕಥನಗಳು ಸಿಗುತ್ತವೆ. ಇಲ್ಲಿ 'ಕೋಣ' ದನಗಾರರ ಸಂಕೇತ. ಎಸ್.ಎಸ್. ಹಿರೇಮಠ ಅವರು "ಸ್ಥಳೀಯವಾಗಿ ನೆಲೆನಿಂತ ದನಗಾರರನ್ನು ಹೊಲೆ ಮಾದಿಗರೆಂದು, ಇವರನ್ನು ವಲಸೆಗಾರ ದ್ರಾವಿಡ ಪಶುಪಾಲಕರು ಸಂಹಾರ ಮಾಡಿ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡರೆಂದು ಹೇಳುತ್ತಾರೆ".[೧೫೧] ಇವರ ಗ್ರಹಿಕೆ ಸರಿಯಾಗಿದೆ. ಕೋಣ ಈಗಲೂ ಮಾರಮ್ಮನ ಆಚರಣೆಗಳಲ್ಲಿ 'ದಲಿತ'ರ ಸಂಕೇತವಾಗಿ ಬಿಂಬಿತವಾಗುತ್ತಲಿದೆ. ಅದನ್ನು ಮಾರಮ್ಮನಿಗೆ ಬಲಿಕೊಡುತ್ತಾರೆ. ಇದು ಮಾಯವ್ವನಿಗೆ ವನದೇವತೆ-ಭಗನಾಥರು ಬಲಿಯಾದ ಕಥನವನ್ನು ನೆನಪಿಸುತ್ತದೆ. 'ರ್‍ಯಾಣ'ಗಳ ಸೃಷ್ಟಿಮೂಲ ಕಥನಗಳು ಇದಕ್ಕೆ ಪೂರಕವಾಗಿ ನಿಲ್ಲುತ್ತವೆ.

[illegible]

೪.೭.೫. ಮಾಯವ್ವನ ತಾತ್ವಿಕತೆ

ಮಾಯವ್ವ ಮೂಲತಃ ಕೊಂಕಣ ನಾಡಿನವಳು. ಈಗ ಕೊಂಕಣ ನಾಡು ಎಂದು ಗುರುತಿಸುವ ಪ್ರದೇಶ ಹಿಂದೆ ಕರ್ನಾಟಕವಾಗಿತ್ತೆನ್ನುವುದು ಶಂಬಾರವರ ಅಭಿಪ್ರಾಯ. ಚಂತಾಮಣಿ ಢೇರೆ ಅವರು ಮಹಾರಾಷ್ಟ್ರದಲ್ಲಿ ಆರಾಧನೆಗೊಳ್ಳುವ ಮಾಯವ್ವನನ್ನು ಕರ್ನಾಟಕ ಈಕೆ ದೇವತೆ ಎಂದು ಕರೆಯುತ್ತಾರೆ. ಸಾಂತ್ಯೆಮೆರ್ ಅವರು ಇವರಿಬ್ಬರ ವಾದವನ್ನು ಒಪ್ಪಿಕೊಳ್ಳುತ್ತಾರೆ. ಬೀರಪ್ಪನ ಜೊತೆ ಸೇರಿ ಪಶುಪಾಲನೆ ಮಾಡುತ್ತ ದಕ್ಷಿಣ ದೇಶಗಳತ್ತ ವಲಸೆ ಬಂದವಳು. ಚೆಂಚಲಿಯಲ್ಲಿ ನೆಲೆ ನಿಂತ ಸ್ಥಳೀಯ ಪಶುಪಾಲಕ(ದನಗಾರ)ರನ್ನು ಸಂಹಾರ ಮಾಡಿ ತನ್ನ ಅಸ್ತಿತ್ವವನ್ನು ಕಟ್ಟಿಕೊಂಡವಳು. ಚಿಂಚಲಿಯಲ್ಲಿ ನೆಲೆಸಿ ಪಶುಪಾಲನೆ ಮಾಡಿದ ವೀರ ಮಹಿಳೆ. ಕಾಲಾನುಂತರ ಪಶುಪಾಲಕರ ಆರಾಧ್ಯ ದೇವತೆಯಾಗಿ ಹಲವು ರೂಪಾಂತರಗಳನ್ನು ಪಡೆದು ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ವಿಸ್ತರಣೆ ಆದ ದೇವತೆ. ಮಾಯವ್ವ ಹಾಲುಮತ ಸಮುದಾಯದ ಆರಾಧ್ಯ ಸ್ತ್ರೀ ದೈವಗಳಲ್ಲಿ ಹೆಚ್ಚು ಜನಪ್ರಿಯ ಆಗಿರುವ ದೇವತೆ. ಪಶುಪಾಲನೆಗಾಗಿ ಹೋರಾಡಿದ ಮಹಿಳೆ. ಈಕೆಯ ಬಗ್ಗೆ ಪ್ರತ್ಯೇಕ ಡೊಳ್ಳಿನ ಹಾಡುಗಳು ಸಿಗುವುದಿಲ್ಲ. ಇದು ಡೊಳ್ಳಿನ ಹಾಡುಗಳ ಕ್ಷೇತ್ರದಲ್ಲಿ ಮಹಿಳೆಗೆ ನೀಡಿದ ಸ್ಥಾನಮಾನಗಳನ್ನು ತಿಳಿಸುತ್ತದೆ.

೪.೮. ಸಾಂಸ್ಕೃತಿಕ ವೀರರ ತಾತ್ವಿಕತೆ

ಡೊಳ್ಳಿನ ಹಾಡುಗಳ ಕ್ಷೇತ್ರ ವಿಸ್ತಾರವಾದದ್ದು. ಇದರಲ್ಲಿ ನೂರಾರು ಸಾಂಸ್ಕೃತಿಕ ವ್ಯಕ್ತಿಗಳ, ಹತ್ತಾರು ಕುಟುಂಬಗಳ, ಹಲವು ಪಂಥಗಳ ಮತ್ತು ಹಲವು ಪಂಥಗಳನ್ನು ಪ್ರತಿಪಾದಿಸುವ ವ್ಯಕ್ತಿಗಳ ವಿವರಗಳು ಸಿಗುತ್ತವೆ. ಇಲ್ಲಿ ಕಾಣಸಿಕೊಳ್ಳುವ ಪ್ರತಿಯೊಂದು ಕುಟುಂಬದ ಮತ್ತು ಪ್ರತಿಯೊಬ್ಬ ವ್ಯಕ್ತಿಯ ವಿವರಗಳು ಅಷ್ಟೇ ಮುಖ್ಯ. ಅವರೆಲ್ಲರನ್ನು ಒಂದು ಸೈದ್ಧಾಂತಿಕ ವ್ಯವಸ್ಥೆಯಲ್ಲಿ ವಿಶ್ಲೇಷಣೆ ಮಾಡಿದಾಗ ಡೊಳ್ಳಿನ ಹಾಡುಗಳ ಮತ್ತು ಡೊಳ್ಳಿನ ಹಾಡುಗಳಲ್ಲಿ ಕಂಡುಬರುವ ಸಾಂಸ್ಕೃತಿಕ ವೀರರ ಸಮಗ್ರ ಚರಿತ್ರೆಯನ್ನು ಅರಿಯುವುದಕ್ಕೆ ಸಾಧ್ಯ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಡೊಳ್ಳಿನ ಹಾಡುಗಳಲ್ಲಿ ಕಾಣಿಸಿಕೊಳ್ಳುವ ಎಲ್ಲಾ ಸಾಂಸ್ಕೃತಿಕ ವೀರರನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ. ಕೇವಲ ಆಯ್ಕೆಯ ಸಾಂಸ್ಕೃತಿಕ ವೀರರನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇದು ಅಧ್ಯಯನದ ಮಿತಿಯೂ ಹೌದು. ಚೌಕಟ್ಟು ಹೌದು. ಕೆಲವು ಸಾಂಸ್ಕೃತಿಕ ನಾಯಕರ ಕಥನಗಳನ್ನು ಇಟ್ಟುಕೊಂಡು ಹಾಲುಮತ ಸಮುದಾಯದ ಸಾಂಸ್ಕೃತಿಕ ನಾಯಕರ ಸಮಗ್ರ ಧೋರಣೆಯನ್ನು ಗ್ರಹಿಸುವ ಪ್ರಯತ್ನ ಮಾಡಲಾಗಿದೆ.

೪.೮.೧. ಸಾಂಸ್ಕೃತಿಕ ನಾಯಕರ ವೃತ್ತಿ ಸಂಘರ್ಷಗಳು

ಪಶುಪಾಲನೆಯಲ್ಲಿ 'ಕುರಿಗಾರಿಕೆ' ಮತ್ತು 'ದನಗಾರಿಕೆ' ಎರಡು ಪ್ರಭೇಧಗಳಿವೆ. ಇವೆರಡೂ ಶ್ರೀಮಂತಿಕೆಯನ್ನು ನಿರ್ಧರಿಸುವ ಭಾಗಗಳು. ಪಶುಪಾಲನ ಸಮುದಾಯಗಳು ಬಹಳ ಹಿಂದೆಯೇ ಈ

[illegible]

ವಾಸ್ತವವನ್ನು ಅರಿತುಕೊಂಡಿದ್ದವು. ಆ ಕಾರಣಕ್ಕಾಗಿ ಈ ಎರಡು ವೃತ್ತಿಗಳನ್ನು ಹಂಚಿಕೆ ಮಾಡಿಕೊಂಡವು. ಹಂಚಿಕೊಂಡ ನಂತರ ತಮ್ಮ ವೃತ್ತಿಯನ್ನು ಪಾಲನೆ ಮಾಡಿಕೊಳ್ಳುವುದಕ್ಕೆ ಹೋರಾಟ ಮಾಡಿದವು. ಚಿತ್ರದುರ್ಗ ಪರಿಸರದಲ್ಲಿ ಕಾಣಿಸುವ ಕಾಡುಗೊಲ್ಲರ ಮತ್ತು ಕುರುಬರ ಹಟ್ಟಿಗಳು ವೃತ್ತಿ ಮತ್ತು ಆರ್ಥಿಕ ಹಂಚಿಕೆಯ ವಿಧಾನಗಳಂತೆ; ಕೇಂದ್ರಗಳಂತೆ ಕಾಣಿಸುತ್ತವೆ. ಹಟ್ಟಿಗಳ ಯಜಮಾನಿಕೆಯನ್ನು ಹೆಚ್ಚಾಗಿ ತಿಳಿದುಕೊಳ್ಳಬೇಕೆಂದರೆ ಕೊಸಂಬಿ ಅವರ Myth and Realityಯನ್ನು ನೋಡಬೇಕು. ಈ ಬಗೆಯ ಅಲೆಮಾರಿ ಬುಡಕಟ್ಟುಗಳ ಆರ್ಥಿಕ ಮತ್ತು ವೃತ್ತಿ ವಿಂಗಡನೆ ಜಾತಿ ರೂಪಗಳಿಗೆ ತಿರುಗಿದಾಗ ಅಲ್ಲಿ ಹೊಸಬಗೆಯ ಬದಲಾವಣೆಗಳು ಉಂಟಾಗಿವೆ. ಇದನ್ನು ಮೊಗಳ್ಳಿ ಗಣೇಶ್ ಅವರು "ಬುಡಕಟ್ಟುಗಳ ತಾತ್ವಿಕ ರೂಪಾಂತರ"ವೆಂದು ಕರೆಯುತ್ತಾರೆ. ಇದಕ್ಕೆ ಜುಂಜಪ್ಪನ ಕಾವ್ಯದ ತಾತ್ವಿಕತೆಯನ್ನು ಈ ಹಿನ್ನೆಲೆಯಲ್ಲಿ ಗುರುತಿಸುತ್ತಾರೆ. "ಇವತ್ತು ಅನೇಕ ಬುಡಕಟ್ಟುಗಳು ಮತಾಂತರಗೊಂಡಿವೆ. ಹಾಗೆಯೇ ಕಾಡನ್ನು ಬಿಟ್ಟು ಗ್ರಾಮದ ವ್ಯಾಪ್ತಿಗೆ ಒಳಪಟ್ಟಿವೆ. ಮತ್ತೆ ಕೆಲವು ಅಲೆಮಾರಿಗಳಾಗಿ, ಜಾತಿಗಳಾಗಿ ರೂಪಾಂತರಗೊಂಡಿವೆ. ಕೆಲವು ಪ್ರಾಚೀನ ಬುಡಕಟ್ಟುಗಳಲ್ಲಿ ಕಣ್ಮರೆಯಾಗಿವೆ. ಹಾಗೆಯೇ ನಗರ ಸೇರಿ ತಳಹದಿಯನ್ನು ಪರಿಶೀಲಿಸಿಕೊಂಡಿವೆ. ಅದರಿಂದಾಗಿಯೇ ಹೊಸಬಗೆಯ ನಂಬಿಕೆಗಳನ್ನು, ಧರ್ಮಗಳನ್ನು ಆಶ್ರಯಿಸಿವೆ. ಮುಖ್ಯ ಎಂದರೆ ಪರಂಪರಾಗತ ಪ್ರಾಚೀನ ಸಾಂಸ್ಕೃತಿಕ ಅನುಭವ ನಿರೂಪಿಸಿದ್ದ ತಾತ್ವಿಕತೆಯನ್ನು ಆಧುನಿಕ ಯುಗದ ಸಂವೇದನೆಗೆ ಬದಲಿಸಿಕೊಂಡಿವೆ. ಇದು ಅವರ ಸಾಮಾಜಿಕ ಪರಿಸರದ ತಾತ್ವಿಕ ರೂಪಾಂತರ ಅಷ್ಟೇ ಅಲ್ಲ. ಆಚರಣೆ ಮತ್ತು ಪುರಾಣಗಳ ರೂಪಾಂತರವು ಹೌದು. ಯುರೋಪಿನಲ್ಲೂ, ಆಫ್ರಿಕ ಖಂಡದಲ್ಲೂ ಇಂತಹ ತಾತ್ವಿಕ ರೂಪಾಂತರಗಳು ದೊಡ್ಡ ಪ್ರಮಾಣದಲ್ಲೂ ಆಗಿವೆ. ಭಾರತದಲ್ಲೂ ಇದರ ರೂಪಗಳಿವೆ. ಕ್ರೈಸ್ತ ಧರ್ಮಕ್ಕೆ ತಾತ್ವಿಕವಾಗಿ ರೂಪಾಂತರಗೊಂಡವರು ಇವತ್ತು ಬೇರೆಯದೇ ಜಗತ್ತಿನಲ್ಲಿ ಗುರುತಿಸಿಕೊಂಡಿದ್ದಾರೆ. ಇದರ ಜೊತೆಗೆ ಬೇರೆ ಬೇರೆ ಜನಪದ ಪರಂಪರೆಗಳ ಜೊತೆಗೂ ಮುಖಾಮುಖಿಯಾಗಿ ತಾತ್ವಿಕ ರೂಪಾಂತರಗಳಾಗಿವೆ. ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ನಾಯಕರ ಒಟ್ಟು ಸಂಬಂಧಗಳಲ್ಲಿ ಈ ಬಗೆಯ ವಿಕಾಸ ನಿಚ್ಚಳವಾಗಿ ಕಂಡುಬರುತ್ತದೆ".[೧೫೨] ಹಾಲುಮತ ಸಮುದಾಯದ ಮೂಲಪುರುಷರಲ್ಲಿ ಒಬ್ಬನಾದ ಪದ್ಮಗೊಂಡ ಕುರಿಗಳನ್ನು ಬೆನ್ನು ಹತ್ತಿಕೊಂಡು ಹೋಗುವುದು ಕುರಿಗಾರಿಕೆ ವೃತ್ತಿ ಆಯ್ಕೆಯ ವಿವರಗಳನ್ನು ತಿಳಿಸುತ್ತದೆ. ಇಲ್ಲಿ ಅಣ್ಣ ತಮ್ಮಂದಿರು ಬೇರೆ ಬೇರೆ ಆಗುವುದು, ಅಂದರೆ ಒಬ್ಬ ವ್ಯಕ್ತಿ ಅಲೆಮಾರಿ(ಕುರಿಗಾರ)ಯಾಗುವುದು ಉಳಿದವರು ನೆಲೆ (ಕೃಷಿ) ನಿಲ್ಲುವುದು. ಇದು ಆರ್ಥಿಕ ಛಿದ್ರದಂತೆ ಕಾಣುತ್ತದೆ. ಅಣ್ಣ ತಮ್ಮಂದಿರು ಹೊಲಗದ್ದೆಗಳನ್ನು, ಕುರಿಗಳನ್ನು ಹಂಚಿಕೊಳ್ಳುವ ವಿವರಗಳು ಆರ್ಥಿಕ ಛಿದ್ರತೆಯನ್ನು ಬಲಪಡಿಸುತ್ತವೆ.

ಸ್ವಾಮಿರಾಯ, ತುಕ್ಕಪ್ಪರಾಯ, ಮಾಳಿಂಗರಾಯ, ಜಕ್ಕಪ್ಪ ಮುಂತಾದ ಸಾಂಸ್ಕೃತಿಕ ನಾಯಕರು ಬೇಡರನ್ನು ಸಂಹಾರ ಮಾಡುವುದು, ಮೈಲಾರಲಿಂಗ, ಬೀರಪ್ಪ, ಮಾಯವ್ವ ದನಗಾರರನ್ನು ಸಂಹಾರ

[illegible]

ಮಾಡುವುದು. ಆರ್ಥಿಕ ಸಂಘರ್ಷಗಳೇ ಸರಿ. ಬುಳ್ಳಪ್ಪ ಸಿಂದಗಿಯ ಏಕದಂಡಿಗಿ ಪದುಮಣ್ಣನ ಜೊತೆ ಮತ್ತು ಮಾಳಿಂಗರಾಯ, ಅಮೋಘಸಿದ್ಧನ ಜೊತೆ ಮಾಡುವ ಸಂಘರ್ಷಗಳು ಇದಕ್ಕೆ ಹೊರತಾಗಿ ನಿಲ್ಲುವುದಿಲ್ಲ. ಈ ಸಂಘರ್ಷಗಳು ಸಾಂಸ್ಕೃತಿಕ ವೀರರಿಗಿದ್ದ ಕುರಿಗಾರಿಕೆ ವೃತ್ತಿಯ ತುಡಿತವನ್ನು ಹೇಳುತ್ತವೆ. ಈ ಸಾಂಸ್ಕೃತಿಕ ವೀರರ ಕುರಿಗಾರಿಕೆ ವೃತ್ತಿಯತ್ತ ಆಗಮನವಾಗುವ ವಿಧಾನಗಳು ಭಿನ್ನ ಭಿನ್ನವಾಗಿವೆ. ಬೀರಪ್ಪ, ಇಟ್ಟಪ್ಪ ಮುಂತಾದವರನ್ನು ಸಪ್ತಮಾತೃಕೆಯರು ಕುರಿಗಾರಿಕೆಯ ವೃತ್ತಿಯತ್ತ ಕರೆತರುತ್ತಾರೆ. ಮೂಲತಃ ದನಗಾರಿಕೆ ಮನೆತನಕ್ಕೆ ಸೇರಿದವರು. ಸಪ್ತಮಾತೃಕೆಯರ ಆಶ್ರಯದಲ್ಲಿ ಬೆಳೆದ ಕಾರಣಕ್ಕೆ ಕುರಿಗಾರಿಕೆಯನ್ನು ಕಲಿತುಕೊಳ್ಳುತ್ತಾರೆ. ಮೈಲಾರಲಿಂಗ ದನಗಾರಿಕೆಯಿಂದ ಕುರಿಗಾರಿಕೆಗೆ ಶಿಫ್ಟ ಆದ ವಿಧಾನ ಭಿನ್ನ. "ಈತ ತುಪ್ಪದ ಮಾಳಿಯ ಪ್ರಭಾವದಿಂದ ಪರಿವರ್ತನೆ ಆಗುತ್ತಾನೆ".[೧೫೩] ಮಾಳಿಂಗರಾಯ ಮತ್ತು ಬುಳ್ಳಪ್ಪನಿಗೆ ಸಪ್ತಮಾತೃಕೆಯರು ಕುರಿಕಾಯುವ ವಿಧಾನವನ್ನು ಕಲಿಸಿಕೊಡು ವುದಿಲ್ಲ. ಬೀರಪ್ಪ ಕಲಿಸಿಕೊಡುತ್ತಾನೆ. ಬುಳ್ಳಪ್ಪ, ಮಾಳಿಂಗರಾಯ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕುರಿಗಾರಿಕೆ ವೃತ್ತಿಯನ್ನು ಕಲಿತ ಕೊಂಡಿಯಾಗಿ ಕಾಣುತ್ತಾರೆ. ಅಮೋಘಸಿದ್ಧ ದನಗಾರಿಕೆಯಿಂದ ಕುರಿಗಾರಿಕೆಯತ್ತ ಪರಿವರ್ತನೆ ಆಗುವುದಕ್ಕೆ ಹಂಬಲಿಸುತ್ತಾನೆ. ಜಕ್ಕಪ್ಪ ಈ ಹಂಬಲಕ್ಕೆ ಅವಕಾಶ ಕೊಡುವುದಿಲ್ಲ. ಮಾಳಿಂಗರಾಯನ ವಿರುದ್ಧ ಸೋತ ಸಂದರ್ಭದಲ್ಲಿ 'ಐದು ಕುರಿ'ಗಳನ್ನು ಬೇಡುವುದು ಕುರಿಗಾರಿಕೆಯ ವೃತ್ತಿಯತ್ತ ಮುನ್ನಡೆಯುವ ಹಂಬಲದಂತೆ ಕಾಣುತ್ತದೆ.

ಮೈಲಾರಲಿಂಗ, ಬೀರಪ್ಪ, ಇಟ್ಟಪ್ಪ, ಮಾಳಮ್ಮ, ಮಾಯವ್ವ, ಅಕ್ಕನಾಗಮ್ಮ, ಮಾಳಿಂಗರಾಯ, ಬುಳ್ಳಪ್ಪ ಮುಂತಾದ ಸಾಂಸ್ಕೃತಿಕ ನಾಯಕರು ಕುರಿಗಾರಿಕೆಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದ ರಾದರೂ ದನಗಾರಿಕೆಯನ್ನು ಸಂಪೂರ್ಣವಾಗಿ ಕೈಬಿಟ್ಟರಲಿಲ್ಲ. ಜೊತೆಗೆ ಇಡಿ ಪಶುಪಾಲನೆ(ದನಗಾರಿಕೆ ಮತ್ತು ಕುರಿಗಾರಿಕೆ)ಯ ಯಜಮಾನಿಕೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಸ್ಥಳೀಯವಾಗಿ ನೆಲೆನಿಂತ ಪಶುಪಾಲಕರನ್ನು ಸೋಲಿಸಿ ತಮ್ಮ ಒಕ್ಕಲನನ್ನಾಗಿ ಮಾಡಿಕೊಳ್ಳುವುದು ಯಜಮಾನಿಕೆಯ ಲಕ್ಷಣಗಳಾಗಿದ್ದವು. ಭೂತಾಳಸಿದ್ಧ (ಹೊಲೆಮಾದಿಗ), ಬುಳ್ಳಪ್ಪ (ಗಾಣಿಗ-ಲಿಂಗಾಯತ), ಏಕದಂಡಿಗಿ ಪದ್ಮಣ್ಣ (ಲಿಂಗಾಯತ), ಕೋಣಾಸುರ (ಹೊಲೆಮಾದಿಗ) ಮುಂತಾದ ಸ್ಥಳೀಯ ಪಶುಪಾಲನ ನಾಯಕರನ್ನು ಸೋಲಿಸುವುದು ಮತ್ತು ತಮ್ಮ ಒಕ್ಕಲನ್ನಾಗಿ ಮಾಡಿಕೊಳ್ಳುವ ವಿಧಾನಗಳು ಯಜಮಾನಿಕೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಉದ್ದೇಶವನ್ನು ಹೊಂದಿವೆ.

೮.೨. 'ಸಪ್ತ' ಪರಿಕಲ್ಪನೆ ಮಾತೃಮೂಲ ಸಂಸ್ಕೃತಿಯ ಅನನ್ಯತೆ

ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ನಾಯಕರಲ್ಲಿ '೭'ರ ಸಂಖ್ಯೆ ಮತ್ತೆ ಮತ್ತೆ ಕಾಣಿಸಿ ಕೊಳ್ಳುತ್ತದೆ. ಏಳು ನಾಯಕಿಯರು, ಏಳುಜನ ಅಕ್ಕತಂಗಿಯರು, ಏಳು ಕೂಸಗಳು, ಏಳು ಅರವಿಗಳು, ಏಳು ಹಟ್ಟಿಗಳು, ಏಳುನೂರು ಎಮ್ಮಿಗಳು, ಏಳುಸಾವಿರ ಕಿಲಾರಿಗಳು, ಏಳುನಾಡುಗಳು, ಏಳು ಜಾತಿಗಳು, ಏಳು ದಾರಿಗಳು, ಏಳುನೂರು ಎಮ್ಮಿಗ ಗೌಳೇರ್, ಏಳುನೂರು ಬ್ಯಾಡರು, ಏಳುನೂರು ರುಂಡಗಳು, ಏಳು ಮರಗಳು, ಏಳು ಹುತ್ತಗಳು, ಏಳು ಕೆರೆಗಳು, ಏಳು ದೇವತೆಗಳು, ಏಳುಸಾವಿರ

[illegible]

[illegible]

[illegible]

[illegible]

ಸಿದ್ಧರು, ಏಳು ಗುಡಿಗಳು, ಏಳು ಮೂರ್ತಿಗಳು, ಏಳು ಪಲ್ಲಕ್ಕಿಗಳು, ಏಳು ಎಡೆಗಳು, ಏಳುಕೋಟಿ ಭಕ್ತರು, ಏಳುಕೋಟಿ ರೂಪಾಯಿ, ಏಳು ನಾಯಿಗಳು, ಏಳು ಕಂಬಳಿಗಳು, ಏಳೂರು ಗೌಡರು ಈಗೆ ಮುಂತಾದ ಬಗೆಗಳಲ್ಲಿ ೭ರ ಉಲ್ಲೇಖ ಸಿಗುತ್ತದೆ. ಈಗಲೂ ಈ ಸಾಂಸ್ಕೃತಿಕ ವೀರರ ಜಾತ್ರೆಗಳು 'ಏಳರ ಗುಡಿಕಟ್ಟು' ವ್ಯವಸ್ಥೆಯಲ್ಲಿ ನಡೆಯುತ್ತಿವೆ. ಎಸ್.ಎಸ್. ಹಿರೇಮಠ ಅವರು "ವಲಸೆಗಾರ ದ್ರಾವಿಡ ಪಶುಪಾಲಕರು ತಾತ್ಕಾಲಿಕವಾಗಿ ನೆಲೆನಿಂತು ತಮ್ಮ ವ್ಯವಹಾರ ವಹಿವಾಟುಗಳನ್ನು ನಡೆಸುತ್ತಿದ್ದ ಸಂದರ್ಭಗಳೇ ಜಾತ್ರೆಗಳು"[೧೫೪] ಎನ್ನುತ್ತಾರೆ. ಸಿರಡೋಣದ ಬೀರಪ್ಪನ ಜಾತ್ರೆ, ಹುಲಜಂತಿ ಮಾಳಿಂಗ ರಾಯನ ಜಾತ್ರೆ, ಕೋಣಗನೂರು ಕರಿಸಿದ್ಧೇಶ್ವರ ಜಾತ್ರೆ, ಚಿಂಚಲಿ ಮಾಯವ್ವನ ಜಾತ್ರೆ, ಅರಕೇರಿ ಅಮೋಘಸಿದ್ಧನ ಜಾತ್ರೆ, ಪಟ್ಟಣಕೊಡಲಿ ಇಟ್ಟಪ್ಪನ ಜಾತ್ರೆ, ಹಡಗಲಿ; ಹರಪನಹಳ್ಳಿ; ದೇವರಗುಡ್ಡ ಮೈಲಾರಲಿಂಗನ ಜಾತ್ರೆ ಮುಂತಾದ ದೈವಗಳ ಜಾತ್ರೆಗಳಲ್ಲಿ ಕುರಿಉಣ್ಣೆ, ಕಂಬಳಿ, ಭಂಡಾರ, ಕುರಿಕಾಯುವುದಕ್ಕೆ ಬೇಕಾದ ಚಪ್ಪಲಿಗಳು, ಕುರಿ ಕೊಡಲಿ, ಭಂಡಾರದ ಚೀಲ, ಕುರಿಬಟ್ಟಲು ಮುಂತಾದ ಪಶುಪಾಲನೆಗೆ ಸಂಬಂಧಿಸಿದ ವಸ್ತುಗಳ ಮಾರಾಟ ಪ್ರಧಾನವಾಗಿ ಕಂಡುಬರುತ್ತದೆ. ಹುಲಿಜಂತಿ ಮಾಳಿಂಗರಾಯನ ಜಾತ್ರೆಗಳಲ್ಲಿ ಕುರಿಗಳ ವ್ಯಾಪಾರ ಗಮನ ಸೆಳೆಯುತ್ತದೆ. ವಿಶೇಷವಾಗಿ 'ಬೀಜದ ಟಗರು'ಗಳ ವ್ಯಾಪಾರವಿದು. ಹೊಸ ಹೊಸ ತಳಿಗಳ ಮತ್ತು ಪಾರಂಪರಿಕ ವಿಶೇಷ ತಳಿಗಳ ಟಗರುಗಳನ್ನು ಕುರಿಗಾರರು ಚೆನ್ನಾಗಿ ಮೇಯಿಸಿಕೊಂಡು ಬಂದಿರುತ್ತಾರೆ. ಟಗರುಗಳಿಗೆ ಮಾಡಿರುವ ಅಲಂಕಾರ ಆಕರ್ಷಣೀಯ. ಇಲ್ಲಿ ಒಂದೊಂದು ಟಗರುಗಳು ನಲವತ್ತು, ಐವತ್ತು ಸಾವಿರದಿಂದ ಒಂದು ಲಕ್ಷಕ್ಕೂ ಅಧಿಕ ಮೊತ್ತಕ್ಕೆ ಮಾರಾಟವಾಗುತ್ತವೆ. ಈ ಸಂತೆಗೆ ವಿವಿಧ ರಾಜ್ಯಗಳಿಂದ ಕುರಿಗಾರರು ಬಂದಿರುತ್ತಾರೆ. ಈಗೆ ಈ ಜಾತ್ರೆಗಳು ಆರ್ಥಿಕ ವಹಿವಾಟುಗಳ ಕೇಂದ್ರಗಳಾಗಿ ಇವತ್ತು ಜೀವಂತವಾಗಿವೆ. ಸಾಂಥೈಮರ್ ತಮ್ಮ Pastoral Deities in Western India ಕೃತಿಯಲ್ಲಿ ಕುರಿಗಾರರ ವ್ಯಾಪಾರಿ ಮಾರ್ಗಗಳನ್ನು ಗುರುತಿಸಿದ್ದಾರೆ. ಭೀಮಾ ನದಿ ದಡಗಳು ಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದವು ಅನ್ನುವುದು ಇವರ ವಾದ. ಜಾತ್ರೆಗಳಲ್ಲಿ ನಡೆಯುವ ವ್ಯವಹಾರಗಳಿಗೂ ಮತ್ತು ಆ ದೈವಗಳನ್ನು ಆರಾಧಿಸುವ ಸಮುದಾಯಗಳಿಗೂ ಆರ್ಥಿಕ ಸಂಬಂಧಗಳಿವೆ ಎನ್ನುವುದು ಇವರ ಅಭಿಪ್ರಾಯ. ಈ ಜಾತ್ರೆಗಳಲ್ಲಿ ನಡೆಯುವ ಪಶುಗಳ ಮಾರಾಟ ಆರ್ಥಿಕ ನೆಲೆಯಾಗಿ ಕಾಣಿಸುತ್ತದೆ ಎನ್ನುತ್ತಾರೆ. ಇದಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿರುವ ಖಂಡೋಬಾ ಮತ್ತು ಬೀರೋಬಾ ದೈವಗಳು ದನಗಳ ವ್ಯಾಪಾರಿಗಾರರ ಮೂಟೆಗಳಲ್ಲಿ ದೊರೆತ ಕಥನಗಳನ್ನು ಮತ್ತು ಆ ದೈವಗಳ ಜಾತ್ರೆಗಳಲ್ಲಿ ನಡೆಯುವ ದನಗಳ ವ್ಯಾಪಾರಗಳನ್ನು ಉದಾಹರಣೆ ಕೊಡುತ್ತಾರೆ. ಜಾತ್ರೆಗಳು ಪ್ರತಿವರ್ಷ ನಿಗದಿತ ದಿನದಂದು ನಡೆಯುತ್ತವೆ. ಇದು ವ್ಯಾಪಾರಗಳ ನಿದಗಿತ ದಿನದಂತೆ, ಇವತ್ತಿನ ಸಂತೆಗಳ ದಿನಗಳನ್ನು ನೆನಪಿಸುತ್ತವೆ. ಈ ದೈವಗಳ ಜಾತ್ರೆಗಳು ಹೆಚ್ಚಾಗಿ ದೀಪಾವಳಿಯ ಅಮವಾಸ್ಯೆಯ ದಿನದಂದು ನಡೆಯುವವು. ಈ ದಿನ ಪಶುಪಾಲಕ ವ್ಯವಹಾರಕ್ಕೆ ನಿಗದಿಯಾದ ಪ್ರಮುಖ ದಿನದಂತೆ ಕಾಣುತ್ತದೆ. ವಿಶೇಷವೆಂದರೆ ಈ ಜಾತ್ರೆಗಳಲ್ಲಿ ಭಾಗಿಯಾಗುವ ಭಕ್ತರು ಆ ಜಾತ್ರೆಯಲ್ಲಿ ನಡೆಯುವ ದೈವಗಳ ಮಳೆ ಬೆಳೆಯ ಹೇಳಿಕೆಗಳನ್ನು ಆಧರಿಸಿ ತಮ್ಮ ವ್ಯವಹಾರಗಳನ್ನು ಆರಂಭಿಸುತ್ತಾರೆ. ಅಂದರೆ

ಕುರಿಗಾರರು ತಾವು ವಲಸೆ ಹೋಗುವ ದಿಕ್ಕನ್ನು, ಕೃಷಿಕರು ತಾವು ಬಿತ್ತುವ ಬೀಜಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ.

ದಕ್ಷಿಣ ಕರ್ನಾಟಕದ ಹಾಲುಮತ ಆರಾಧ್ಯ ದೈವಗಳ ಜಾತ್ರೆಗಳಲ್ಲಿ ಈ ವ್ಯವಹಾರದ ಪರಿಕಲ್ಪನೆ ತುಂಬಾ ಕಡಿಮೆ. ಇಲ್ಲವೇ ಇಲ್ಲವೆನ್ನುವಷ್ಟು ಮಾತ್ರ ಕಾಣಿಸುತ್ತದೆ. ಈ ಜಾತ್ರೆಗಳು ಕೇವಲ ಆರಾಧನ ಕೇಂದ್ರಗಳ ಭಾಗದಂತೆ ಕಾಣಿಸುತ್ತವೆ. ಈ ಪ್ರದೇಶಗಳಲ್ಲಿ ಈ ದೈವಗಳು ನೆಲೆಗೊಳ್ಳುವ ಮತ್ತು ಆರಾಧನ ಕೇಂದ್ರಗಳಾಗುವ ವೇಳೆಗಾಗಲೆ ವ್ಯಾಪಾರ ಮತ್ತು ದೈವಿಕ ನೆಲೆ ಬೇರೆ ಬೇರೆ ಆಗಿತ್ತೆಂದು ಕಾಣಿಸುತ್ತದೆ. ಇದರಿಂದ ದೈವಗಳ ಮೂಲವನ್ನು ಮತ್ತು ವಲಸೆಯನ್ನು ಗುರುತಿಸಬಹುದು. ದೈವಗಳ ವಲಸೆಯನ್ನು ಗುರುತಿಸುವುದೆಂದರೆ ಆ ದೈವಗಳ್ನು ಆರಾಧಿಸುವ ಜನಾಂಗಗಳ ಮೂಲ ಮತ್ತು ವಲಸೆಯನ್ನು ಗುರುತಿಸಿದಂತೆ.

ದಕ್ಷಿಣ ಕರ್ನಾಟಕದಲ್ಲಿ ಪಂಚ '೫' ಆರಾಧನಾ ಕಲ್ಪನೆ ಹೆಚ್ಚಾಗಿ ಕಂಡುಬರುತ್ತದೆ. ಎಸ್.ಎಸ್. ಹಿರೇಮಠರವರ ಪ್ರಕಾರ '೫' ಕೃಷಿ ಮತ್ತು ನೆಲೆನಿಂತ ಸಂಸ್ಕೃತಿಯ ಪ್ರತೀಕ. '೫'ರ ಸಂಖ್ಯೆಯ ಆರಾಧನೆ ಪ್ರಚಲಿತಕ್ಕೆ ಬಂದ ನಂತರ '೭'ರ ಸಂಖ್ಯೆಯ ಆರಾಧನೆ ಕಣ್ಮರೆ ಆಯಿತು. ಇದರಿಂದ '೭'ರ ಆರಾಧನೆ ಮಾತೃಪ್ರಧಾನ ಸಂಸ್ಕೃತಿಯ ಪ್ರತೀಕವಾಗಿ ಕಾಣುತ್ತದೆ. ಹಾಗಾಗಿ ಇದನ್ನು ದ್ರಾವಿಡ ಅಲೆಮಾರಿ ಪಶುಪಾಲನ ಮಹಿಳೆಯರು ಜಾರಿಗೆ ತಂದ ಆಡಳಿತ ವ್ಯವಸ್ಥೆ ಎನ್ನಬಹುದು. ಮಾತೃಪ್ರಧಾನ ಸಂಸ್ಕೃತಿಯ ನೇರ ಪ್ರಭಾವಕ್ಕೆ ಒಳಗಾದ ಪುರುಷ ಸಾಂಸ್ಕೃತಿಕ ವೀರರಲ್ಲಿ ಮತ್ತು ಆರಾಧನೆಯನ್ನು ಕಾಣಬಹುದು. ಬೀರಪ್ಪ, ಇಟ್ಟಪ್ಪ, ಮೈಲಾರಲಿಂಗರಲ್ಲಿ ಹೆಚ್ಚಾಗಿ '೭'ರ ಆರಾಧನೆ ಜೀವಂತವಾಗಿದ್ದು ಈ ಕಾರಣಕ್ಕಾಗಿ. ಕಾಡುಗೊಲ್ಲರ ಆರಾಧ್ಯ ದೈವ ಜುಂಜಪ್ಪನಲ್ಲೂ '೭' ಆರಾಧನೆ ಹೆಚ್ಚು ರೂಢಿಯಾಗುವುದಕ್ಕೆ ಮಾತೃಪ್ರಧಾನ ಸಂಸ್ಕೃತಿಯೇ ಕಾರಣ. ಜುಂಜಪ್ಪನನ್ನು ಅಕ್ಕ ತಂಗಿಯರು ಸಪ್ತಮಾತೃಕೆಯರು ಬೆಳೆಸಿದರು ಅನ್ನುವ ಕಥನಗಳು ಸಿಗುತ್ತವೆ. ಬೀರಪ್ಪನೇ ಜುಂಜಪ್ಪನಾಗಿದ್ದಾನೆ. ಈತ ಮೈಲಾರಲಿಂಗನ ಮಗ ಅನ್ನುವ ಕಥನಗಳು ಇವೆ. ಈ ಚರ್ಚೆ ಬೇರೆ. ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧ, ವೀರಗೊಲ್ಲಾಳ ಇವರಲ್ಲಿ '೭'ರ ಆರಾಧನೆ ಕಾಣುವುದು ಕಡಿಮೆ. ಅಮೋಘಸಿದ್ಧನಲ್ಲಿ ಕಂಡಷ್ಟು ಆತನ ಶಿಷ್ಯನ ಬಳಗದವರಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಅಮೋಘಸಿದ್ಧ ಪಶುಪಾಲಕನಾಗಿದ್ದರೆ ಆತನ ಅಂತಿಮ ಕಾಲಘಟ್ಟದ ಶಿಷ್ಯರು ಕೃಷಿಕರಾಗಿ ಕಾಣಿಸುತ್ತಾರೆ. ಅಂದರೆ ಕೃಷಿ ಪ್ರಧಾನ ಸಂಸ್ಕೃತಿ ಗಟ್ಟಿ ಆಗುತ್ತಿದ್ದಂತೆ ೭ ಆರಾಧನೆ ಕ್ಷೀಣಿಸುತ್ತಾ ಬಂದಿತು. ಹಾಗಾಗಿ ಆರಂಭಿಕ ಪುರುಷ ಸಾಂಸ್ಕೃತಿಕ ವೀರರ ಮೇಲೆ ಮಹಿಳೆಯರು ಪ್ರಭಾವ ಬೀರಿದಷ್ಟು ನಂತರದ ತಲೆಮಾರಿನ ಸಾಂಸ್ಕೃತಿಕ ನಾಯಕರ ಜೀವನ ವಿಧಾನದ ಮೇಲೆ ಪ್ರಭಾವ ಬೀರಲಿಲ್ಲ. ಇದರಿಂದ ಮಹಿಳಾ ಪ್ರಧಾನ ಸಂಸ್ಕೃತಿಯ ಅಸ್ಮಿತೆಗಳು ಮತ್ತು ಮಹಿಳೆಯರು ವಿಸ್ಮೃತಿಗೆ ಒಳಗಾದವು.

೮.೩. ಸಾಂಸ್ಕೃತಿಕ ವೀರರ ಅಭಿವ್ಯಕ್ತಿ ಮಾಧ್ಯಮಗಳಾಗಿ ಆಚರಣೆಗಳು

ಹಾಲುಮತ ಸಾಂಸ್ಕೃತಿಕ ವೀರರ ಆಚರಣೆಗಳು ಗಮನ ಸೆಳೆಯುತ್ತವೆ. "ಆಚರಣೆಗಳು ಯಾವಾಗಲೂ ಧಾರ್ಮಿಕ ಕಾರಣಗಳಿಂದ ರೂಪಗೊಂಡಿರುತ್ತವೆ. ಲೌಖಿಕ ಆಶೋತ್ತರಗಳು ಆಚರಣೆಯಲ್ಲಿ

ಅಭಿವ್ಯಕ್ತಿಗೊಳ್ಳುತ್ತವೆ. ಆಯಾ ಪ್ರಾದೇಶಿಕ ಭೌಗೋಳಿಕ ವೈಶಿಷ್ಟ್ಯತೆ ಸಮುದಾಯದ ಸಾಮಾಜಿಕ, ರಾಜಕೀಯಾರ್ಥಿಕ ಕಾರಣಗಳೂ ಕೂಡ ಆಚರಣೆಗಳು ರೂಪಗೊಳ್ಳಲು ಕಾರಣವಾಗುತ್ತವೆ. ಆಚರಣೆಗಳು ಒಂದು ರೀತಿಯಲ್ಲಿ ಕ್ರಿಯಾತ್ಮಕ ಪಠ್ಯಗಳು. ಇಲ್ಲಿ ಅಕ್ಷರಗಳು, ಮಾತುಗಳು, ಮಂತ್ರಗಳು, ಪೋಷಣೆ ಗಳಿಗೂ ಹಾಡುಗಳ ಜೊತೆ ಜೊತೆಯಲ್ಲಿಯೇ ಅನೇಕ ಕ್ರಿಯೆಗಳು ಇರುತ್ತವೆ. ಪೂಜೆಗಳ ಉನ್ಮಾದ ನೃತ್ಯಗಳು, ವಾದ್ಯಗಳು ಇಲ್ಲಿ ಪಾಲ್ಗೊಂಡಿರುತ್ತವೆ. ಆಚರಣೆಗಳು ಏಕಕಾಲದಲ್ಲಿ ವ್ಯಕ್ತಿಯ ತೀರ ವೈಯಕ್ತಿಕವೆನಿಸುವ ಗುಣಗಳು ಭಾವ ತೀವ್ರತೆಯಲ್ಲಿ ಮತ್ತು ಸಮೂಹದ ಪ್ರೋತ್ಸಾಹದ ಫಲವಾಗಿ ಅಸ್ತಿತ್ವಕ್ಕೆ ಬಂದಿರುತ್ತವೆ".[೧೫೫] ಜನಪದ ಆಚರಣೆಗಳು ಬೇರೊಂದು ಪಂಥ ಅಥವಾ ಧರ್ಮದಿಂದ ತನಗೆ ಬೇಕಾದದ್ದನ್ನು ಸ್ವೀಕಾರ ಮಾಡಿಕೊಳ್ಳಲು ಹಿಂಜರಿಯುವುದಿಲ್ಲ. ಆದ್ದರಿಂದ ಹಾಲುಮತದ ಸಾಂಸ್ಕೃತಿಕ ವೀರರ ಆಚರಣೆಗಳಲ್ಲಿ ಶೈವನಾಥ ಸಿದ್ಧರ ಆಚರಣೆಗಳಲ್ಲದೆ ವೈಷ್ಣವ, ಮುಸ್ಲಿಂ, ಲಿಂಗಾಯತ, ಬೌದ್ಧ, ಜೈನ ಮತ್ತು ಸೂಫಿಗಳ ಆಚರಣೆಗಳು ಹೆಚ್ಚಾಗಿ ಅನುಕರಣೆಯಿಂದ ಬಂದಂತವು. ಇಲ್ಲಿ ವೈಷ್ಣವ ಮತ್ತು ಲಿಂಗಾಯತ ಧರ್ಮದ ಆಚರಣೆಗಳ ಪ್ರಭಾವಕ್ಕೆ ಕೇವಲ ಅನುಕರಣೆ ಕಾರಣವಾಗಿಲ್ಲ. ಆ ಧರ್ಮಗಳ ಉದ್ದೇಶಪೂರಿತ ಪ್ರಭಾವವು ಕಾರಣವಾಗಿದೆ. ಅಂದರೆ ಈ ಸಾಂಸ್ಕೃತಿಕ ವೀರರನ್ನು ಬಳಸಿಕೊಂಡು ವೈಷ್ಣವ ಮತ್ತು ಲಿಂಗಾಯತ (ವಿಭೂತಿ ಪಂಥ) ಧರ್ಮ ಗಳು ಪ್ರಬಲವಾಗುವುದಕ್ಕೆ ಹಂಬಲಿಸಿದವು. ಕೆಲವು ಸಾಂಸ್ಕೃತಿಕ ವೀರರ ವಿಷಯದಲ್ಲಿ ಯಶಸ್ವಿಯಾದವು. ವೈದಿಕ ಧರ್ಮ ಇಟ್ಟಪ್ಪ, ಬೀರಪ್ಪ, ಪದ್ಮಬಾಯಿ ಮುಂತಾದವರನ್ನು ಪ್ರಧಾನವಾಗಿ ಆಯ್ಕೆ ಮಾಡಿಕೊಂಡಿತು. ಲಿಂಗಾಯತ ಧರ್ಮ ರೇವಣಸಿದ್ಧ (ರೇಣುಕಾಚಾರ್ಯ) ಸಿದ್ಧರಾಮ, ಅಮೋಘಸಿದ್ಧ, ವೀರಗೊಲ್ಲಾಳ, ಬೀರಪ್ಪ (ವೀರಭದ್ರ), ಮೈಲಾರಲಿಂಗ (ಮಲ್ಲಯ್ಯ -ಮಲ್ಲಿಕಾರ್ಜುನ), ಸೋಮನಾಥ ಮುಂತಾದ ದೈವಗಳನ್ನು ಆಯ್ಕೆ ಮಾಡಿಕೊಂಡಿತು. ದೈವಗಳನ್ನು ರೂಪಾಂತರ ಗೊಳಿಸುವಲ್ಲಿ ಲಿಂಗಾಯತ ಧರ್ಮ ಯಶಸ್ವಿ ಆದಷ್ಟು ವೈಷ್ಣವ ಧರ್ಮಕ್ಕೆ ಸಾಧ್ಯವಾಗಲಿಲ್ಲ. ಆದರೆ ವೈಷ್ಣವ ಧರ್ಮಕ್ಕೆ ಲಿಂಗಾಯತ ಧರ್ಮದಷ್ಟು ಸರಳವಾಗಲಿಲ್ಲ. ಆ ಧರ್ಮದ ವಕ್ತಾರರು ದೈವಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಮುಂದಾದಾಗ ಜನರು ಪ್ರತಿರೋಧ ಮಾಡಿದರು. ಈ ಪ್ರತಿರೋಧಗಳಿಂದ ಹಿಂಜರಿಕೆ ಉಂಟಾಗಿರುವುದಕ್ಕೆ ಸಾಧ್ಯವಿದೆ. ಈ ಪ್ರತಿರೋಧದಲ್ಲಿ ಈಶ್ವರ ಬೇರೆ, ಶಿವ ಬೇರೆ ಅನ್ನುವ ಮನೋಭಾವನೆ ದಟ್ಟವಾಗಿ ಅಡಕವಾಗಿದೆ.

ಜೋಗಿ, ನಾಥ ಪಂಥದ ಆಚರಣೆಗಳು ಸಹಜವಾಗಿ ರೂಢಿಯಾದವು. ಇದಕ್ಕೆ ಈ ಸಾಂಸ್ಕೃತಿಕ ವೀರರು ನಾಥರೊಂದಿಗೆ ಇಟ್ಟುಕೊಂಡಿದ್ದ ಸಂಬಂಧಗಳು ಪ್ರಮುಖ ಕಾರಣ. ಈ ಸಮುದಾಯದ ನಾಯಕರು ನಾಥ ಪಂಥದಲ್ಲಿ ಬದುಕುತ್ತಿದ್ದರು. ಇವರೇ ನಾಥರಾಗಿದ್ದರು. ಉದಾಹರಣೆ : ಸೋಮನಾಥ (ಸೋಮಲಿಂಗ), ರೇವನಾಥ (ರೇವಣಸಿದ್ಧ) ಮುಂತಾದವರು. ಜೈನಧರ್ಮದ ಪ್ರಭಾವ ಈ ಎರಡು ಸಮುದಾಯಗಳ ಸಂಕರಶೀಲ ಬದುಕಿನಿಂದ ರೂಢಿಯಾಯಿತು. ಮೈಲಾರಲಿಂಗ,

ರೇವಣಸಿದ್ಧ, ಬೀರಪ್ಪ, ಮಾರವ್ವ ಮುಂತಾದ ದೇವಾಲಯಗಳ ಆವರಣದಲ್ಲಿ ನಾಗಪ್ರತಿಮೆಗಳನ್ನು ಇಡುವುದು ಮತ್ತು ಪೂಜಿಸುವುದು ಪ್ರಾದೇಶಿಕ ಚಾರಿತ್ರಿಕ ಒತ್ತಡಗಳಿಂದ ಸೇರಿಕೊಂಡವು. ದೈವಗಳಿಗೆ ಲಿಂಗ ಕಟ್ಟುವುದು, ವಿಭೂತಿ ಹಚ್ಚುವುದು, ದೇವಾಲಯಗಳ ಮೇಲೆ ಮತ್ತು ಪಲ್ಲಕ್ಕಿಗಳ ಮೇಲೆ ಕೆಂಪು ಧ್ವಜಗಳನ್ನು ಕಟ್ಟುವುದು, ಬಲಿ ನಿಷೇಧ ಲಿಂಗಾಯತ ಧರ್ಮದ ಅನುಕರಣೆಯಿಂದ ಬಂದಂತವು. ಲಕ್ಷದೀಪೋತ್ಸವ ಆಚರಿಸುವುದು, ತುಲಾಭಾರ ಕೊಡುವುದು (ಅರಕೇರಿ ಅಮೋಘಸಿದ್ಧನ ಮಠದಲ್ಲಿ ಈ ವಿಧಾನ ಹೆಚ್ಚಾಗಿದೆ), ನವಗ್ರಹಗಳ ಪೂಜೆ, ಹೋಮ, ಬೆಳ್ಳಿರಥದಲ್ಲಿ ಉತ್ಸವ ನಡೆಸುವುದು ಇತ್ಯಾದಿಗಳು ರಾಜಕೀಯಾರ್ಥಿಕ ಒತ್ತಡಗಳಿಂದ ರೂಪುಗೊಂಡಂತಹ ಆಚರಣೆಗಳಾಗಿವೆ.

ಈ ದೈವಗಳ ಪಾರಂಪರಿಕ ಆಚರಣೆಗಳು ಯಜಮಾನಿಕೆಯ ಸ್ವರೂಪದಿಂದ ಕೂಡಿವೆ. ಇಲ್ಲಿ ಯಜಮಾನಿಕೆ ಅಂದರೆ 'ಹಿರಿತನ', ಹಿರಿಯ, ದೊಡ್ಡವ, ಗುರು ಎಂದಾರ್ಥ. ರೇವಣಸಿದ್ಧ, ಅಮೋಘಸಿದ್ಧ, ಬೀರಪ್ಪ, ಇಟ್ಟಪ್ಪ ಮತ್ತು ಮಾಯವ್ವ ದೈವಗಳಲ್ಲಿ ಈ ಸ್ವರೂಪದ ಆಚರಣೆಗಳು ಪ್ರಮುಖವಾಗಿ ಕಂಡುಬರುತ್ತವೆ. ಇದಕ್ಕೆ ಅಳಂದ ತಾಲೂಕು ಮಡಿಯಾಳು ಗ್ರಾಮದ ಅಮೋಘಸಿದ್ಧ ದೈವದ ಪಲ್ಲಕ್ಕಿ ಉತ್ಸವದ ವಿವರಣೆಯನ್ನು ನೋಡಬಹುದು. ಆಚರಣೆಯ ವಿವರ ಹೀಗಿದೆ. ಪಲ್ಲಕ್ಕಿ ಬಾದಾಮಿ ಅಮಾವಾಸ್ಯೆಗಿಂತ ಮೂರು ದಿವಸ ಮುಂಚೆ ದೇವರ ಗಾಣಗಾಪೂರದ ಹತ್ತಿರ ಇರುವ ಕೂಡಲಸಂಗಮ ನದಿಗೆ ಹೊಳೆಪೂಜೆಗಾಗಿ ಹೋಗುತ್ತದೆ. ದಾರಿಯುದ್ದಕ್ಕೂ ಸುತ್ತಮುತ್ತಲಿನ ಗ್ರಾಮಗಳ ಗ್ರಾಮದೈವಗಳು ಪಲ್ಲಕ್ಕಿಗಳು ಬಂದು ಅಮೋಘಸಿದ್ಧನ ಪಲ್ಲಕ್ಕಿ ಆರ್ಶೀವಾದ ಪಡೆದುಕೊಂಡು ಹೋಗುತ್ತವೆ. ಇದಕ್ಕೆ 'ಗುರುವಿನ' ದರ್ಶನ ಎಂದು ಕರೆಯುತ್ತಾರೆ. ಹತ್ತಾರು ಪಲ್ಲಕ್ಕಿಗಳು ಒಟ್ಟಿಗೆ ಸೇರಿ ಆರ್ಶೀವಾದ ಪಡೆಯುವುದು ಅಮೋಘಸಿದ್ಧನಿಗೆ ಇದ್ದ ಸ್ಥಾನಮಾನವನ್ನು ತಿಳಿಸುತ್ತದೆ. ಬಿಜಾಪುರ ತಾಲೂಕು ಅರಿಕೇರಿ ಗ್ರಾಮದಲ್ಲಿ ಬಾದಾಮಿ ಅಮವಾಸ್ಯೆಯ ದಿನದಂದು ನಡೆಯುವ ಪಲ್ಲಕ್ಕಿ ಉತ್ಸವಕ್ಕೆ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ ರಾಜ್ಯಗಳಿಂದ ಸುಮಾರು ೨೫೦ಕ್ಕೂ ಹೆಚ್ಚು ಪಲ್ಲಕ್ಕಿಗಳು ಬಂದು ಅಮೋಘಸಿದ್ಧನ ಪಲ್ಲಕ್ಕಿ ಆರ್ಶೀವಾದ ಪಡೆದುಕೊಂಡು ಹೋಗುತ್ತವೆ. ತೋಪುಜಾತ್ರೆ, ಕಂತೆಸೇವೆ ಆಚರಣೆಗಳನ್ನು ಹಾಲುಮತ ಸಮುದಾಯ ತಮ್ಮ ಕುಲದೈವಗಳ ಸೇವೆಗಾಗಿ ಆಚರಿಸುವ ಹಬ್ಬವಿದು. ಈ ಜಾತ್ರೆಗೆ ತಮ್ಮ ಗುಡಿಕಟ್ಟು ಮಹಾಸಂಸ್ಥಾನದ ರೇವಣಸಿದ್ಧ ದೈವವನ್ನು ಅಹ್ವಾನ ಮಾಡಿಕೊಳ್ಳುವ ವಿಧಾನ ಗಮನಸೆಳೆಯುತ್ತದೆ. ರೇವಣಸಿದ್ಧ ದೈವದ ಪಲ್ಲಕ್ಕಿಯನ್ನು ಹೊತ್ತುತಂದವರು ಗ್ರಾಮದ ಹೊರಗಡೆ ಇರುವ ಹೊಳೆ, ಬಾವಿ, ಹಳ್ಳ, ಕೆರೆದಡಗಳಲ್ಲಿ ನೆಲೆಸುತ್ತಾರೆ. ಆ ಪಲ್ಲಕ್ಕಿಯನ್ನು ಗ್ರಾಮದೊಳಗಡೆ ಕರೆತರಲು ಇಡೀ ಗ್ರಾಮ ದೈವಗಳೆಲ್ಲವು ಸೇರಿಕೊಂಡು ಹೋಗುತ್ತವೆ. ನಮಸ್ಕಾರ ಅರ್ಪಿಸುತ್ತವೆ. ಸೇವೆ ಮಾಡುತ್ತವೆ. ಚಿಕ್ಕಮಂಗಳೂರು ಜಿಲ್ಲೆ ಹಿರೇನಲ್ಲೂರು ಗ್ರಾಮದಲ್ಲಿ ನಡೆದ ತೋಪುಜಾತ್ರೆಯಲ್ಲಿ 'ಕೆರೆಸಂತೆ ಲಕ್ಕಮ್ಮ'ದೇವಿಯ ಪಲ್ಲಕ್ಕಿ ಹಿಮ್ಮುಖವಾಗಿ ಚಲಿಸುತ್ತ ರೇವಣಸಿದ್ಧನ ಪಲ್ಲಕ್ಕಿಯನ್ನು ಆಹ್ವಾನ ಮಾಡಿಕೊಂಡಿತು. ಹಿರಿಯ ದೇವರಿಗೆ ಬೆನ್ನುಕೊಟ್ಟು ನಡೆಯಬಾರದು ಅನ್ನುವ ತತ್ವ ಇದರದು. ತಳವಾರರು ಪಂಜು ಸೇವೆ

[illegible]

[illegible]

ಮಾಡುವುದು, ಅಗಸರು ಅರಬಿ ಹಾಸುವುದು, ದಳವಾಯಿಗಳು ಅಲಗ ಹಾಯುವುದು, ಕೊಲ್ಕಾರರು ರಕ್ಷಕರಾಗುವುದು ಮುಂತಾದ ಆಚರಣೆಗಳಲ್ಲಿ ಈ ವಿಧಾನಗಳನ್ನು ಕಾಣಬಹುದು. ಇವು ರೇವಣಸಿದ್ಧ ಮತ್ತು ಅಮೋಘಸಿದ್ಧ ದೈವಗಳಿಗೆ ಇರುವ ಸಾಮಾಜಿಕ ಗೌರವವನ್ನು ತಿಳಿಸುತ್ತವೆ. ಇದೇ ತರದ ಆಚರಣೆಗಳು ಹಾಲುಮತ ಸಾಂಸ್ಕೃತಿಕ ವೀರರಲ್ಲಿ ಕಂಡುಬರುತ್ತದೆ.

೮.೪. ಸಾಂಸ್ಕೃತಿಕ ವೀರರು; ಪ್ರಭುತ್ವನಾಶ ಮತ್ತು ಪ್ರತಿನಿರ್ಮಾಣ

ಗ್ರಾಂಶ್ಚಿಯವರ ಪ್ರಕಾರ "ಪ್ರಭುತ್ವ" ಎಂಬುದು "ದುರ್ಬಲರನ್ನು ಆಳುವ ಪ್ರಬಲ ಶಕ್ತಿಯಾಗಿದೆ".[೧೫೬] ಸಮಾಜದ ಉಪವ್ಯವಸ್ಥೆಗಳಾದ ಜಾತಿ ಧರ್ಮ, ವರ್ಗ, ಜನಾಂಗ ರಾಜ್ಯ ಮೊದಲಾದವು ಅಂಥ ಶಕ್ತಿಗಳಾಗಿ ಕಂಡುಬರುತ್ತವೆ. ಹೀಗೆ ಉಪವ್ಯವಸ್ಥೆಗಳು ಹಿಂದುಳಿದ ಗುಂಪುಗಳನ್ನು ಆಳುತ್ತಿರುತ್ತವೆ. ಈ ಆಳ್ವಿಕೆಗಳಲ್ಲಿ ಬಡವ ಶ್ರೀಮಂತ, ಬ್ರಾಹ್ಮಣ ಶೂದ್ರ, ಪುರೋಹಿತ ಭಕ್ತ, ಆರ್ಯ ದ್ರಾವಿಡ, ರಾಜ ಪ್ರಜೆ, ಗುರು ಶಿಷ್ಯ ಮೊದಲಾದ ಶ್ರೇಣೀಕರಣಗಳು ಕಂಡುಬರುತ್ತವೆ. ಇವೆಲ್ಲಕ್ಕೂ ಆಳುವ ಮತ್ತು ಆಳಿಸಿಕೊಳ್ಳುವ ತತ್ವವೇ ತಳಪಾಯವಾಗಿರುತ್ತದೆ. ಇದು ಎರಡು ಬಗೆಗಳಲ್ಲಿ ಕೆಲಸ ಮಾಡುತ್ತಿರುತ್ತದೆ. ಒಂದು, ಸಮಾಜದ ಬೇರೆ ಬೇರೆ ಪಂಗಡಗಳ ಒಳಿತನ್ನು ಸಮನ್ವಯಗೊಳಿಸುವ ಏರ್ಪಾಡು. ಎರಡು, ಇತರೆ ದುರ್ಬಲ ವರ್ಗಗಳನ್ನು ತುಳಿಯುವ ಅಸ್ತ್ರ. ಪ್ರಭುತ್ವವನ್ನು ಸಮಾಜದ ಎಲ್ಲಾ ಕಡೆ ಕಾಣಲು ಸಾಧ್ಯ. ಇದಕ್ಕೆ ಭಿನ್ನ ಭಿನ್ನ ಆಯಾಮಗಳಿರುತ್ತವೆ. "ಅವುಗಳಲ್ಲಿ ಪ್ರಧಾನವಾದವುಗಳೆಂದರೆ:

೧. ರಾಜ ಪ್ರಭುತ್ವ

೨. ಧಾರ್ಮಿಕ ಪ್ರಭುತ್ವ

೩. ಆರ್ಥಿಕ ಪ್ರಭುತ್ವ

೪. ಸಾಮಾಜಿಕ ಪ್ರಭುತ್ವ

ಹೀಗೆ ಪ್ರಭುತ್ವವು ಹಲವಾರು ಹಂತಗಳಲ್ಲಿ ತನ್ನ ಛಾಯೆಯನ್ನು ಒತ್ತಿರುತ್ತದೆ".[೧೫೭] ಮೇಲಿನ ವಿಭಾಗ ಕ್ರಮಗಳು ಅಧ್ಯಯನದ ವೈಶಿಷ್ಟತೆಗಾಗಿ ಮಾಡಿಕೊಂಡ ವರ್ಗೀಕರಣವಷ್ಟೆ. ಇವುಗಳೆಲ್ಲವೂ ಏಕಕಾಲಕ್ಕೆ ಒಂದು ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುತ್ತವೆ. ಆ ಸಂಗತಿಗಳನ್ನು ಸಾಂಸ್ಕೃತಿಕ ವೀರರ ಜೀವನದ ಘಟನೆಗಳನ್ನು ಇಟ್ಟುಕೊಂಡು ಚರ್ಚಿಸಬಹುದಾಗಿದೆ.

ಹಾಲುಮತದವರು ಮೂಲತಃ ಅಲೆಮಾರಿ ಪಶುಪಾಲಕರು. ಇವರಿಗೆ ಪಶುಗಳೇ ಸಂಪತ್ತು. ಪಶುಗಳ ಸಂರಕ್ಷಣೆಗೆ ಕೊಟ್ಟಷ್ಟು ಮಾನ್ಯತೆ ಬೇರೆ ಯಾವುದೇ ವಿಷಯಕ್ಕೆ ಕೊಡುತ್ತಿರಲಿಲ್ಲ. ಪಶುಗಳ ಅಭಿವೃದ್ಧಿಯೇ ನಮ್ಮ ಅಭಿವೃದ್ಧಿ ಅಂದುಕೊಂಡವರು. ಇವುಗಳ ಸಂರಕ್ಷಣೆಗಾಗಿ ರಾಜಾಡಳಿತವನ್ನು ಬಿಟ್ಟು ಬರುತ್ತಿದ್ದರು. ತುಕ್ಕಪ್ಪರಾಯ, ಸ್ವಾಮಿರಾಯರು ಇದಕ್ಕೆ ಉದಾಹರಣೆ. ಪಶುಗಳ ಸಂರಕ್ಷಣೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಹೋರಾಡುತ್ತಿದ್ದರು. ಶಂಬಾ ಜೋಶಿ ಅವರು ಬೀರಪ್ಪ,

ಇಟ್ಟಪ್ಪರು ಪಶುಗಳ ಸಂರಕ್ಷಣೆಗಾಗಿ ಹೋರಾಡಿ ವೀರ ಮರಣವನ್ನಪ್ಪಿದರು ಎಂದು ಕರೆಯುತ್ತಾರೆ. ಇಂತಹ ಚಿತ್ರಣಗಳು ಕೇವಲ ಹಾಲುಮತ ಸಮುದಾಯದಲ್ಲಿ ಮಾತ್ರವಿಲ್ಲ. ಹಲವು ಪಶುಪಾಲನ ಸಮುದಾಯಗಳಲ್ಲೂ ಕಾಣಬಹುದು. ಮ್ಯಾಸಬ್ಯಾಡರ ಸಾಂಸ್ಕೃತಿಕ ವೀರರಾದ ಗಾದ್ರಿಪಾಲನಾಯಕ, ದಡ್ಡಿಶೂರನಾಯಕ ಮುಂತಾದವರು ಪಶುಗಳ ಸಂರಕ್ಷಣೆಗಾಗಿ ಜೀವ ತೆತ್ತರು. ಇವರು ಪಶುಗಳ ಮೇವಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು. ತಮ್ಮ ವಲಸೆಗೆ ಅಡ್ಡಿಯನ್ನುಂಟು ಮಾಡಿದವರ ಜೊತೆ ಸಂಘರ್ಷಕ್ಕೆ ಇಳಿಯುತ್ತಿದ್ದರು. ಸೋಲಿಸಿ ತಮ್ಮ ಒಕ್ಕಲುಗಳನ್ನಾಗಿ ಮಾಡಿಕೊಳ್ಳುವುದರ ಮುಖಾಂತರ ತಮ್ಮ ಉದ್ದೇಶವನ್ನು ಸರಳಗೊಳಿಸಿಕೊಳ್ಳುತ್ತಿದ್ದರು. ಒಕ್ಕಲುತನಕ್ಕೆ ಅವಕಾಶ ಸಿಗದಿದ್ದಾಗ ಸಂಹಾರ ಮಾಡಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಿದ್ದರು. ಮಾಳಿಂಗರಾಯ "ಬಿಜ್ಜರಗಿಯ ವೆಂಕಣ್ಣಗೌಡ" (ಬುಳ್ಳಪ್ಪನ ತಂದೆ)ನ ಜೊತೆ ಮಾಡುವ ಸಂಘರ್ಷ ಒಕ್ಕಲುತನದ ವಿಧಾನಕ್ಕೆ ಸಂಬಂಧಪಟ್ಟಿರುವಂಥದ್ದು. ಸಂಘರ್ಷ ಆರಂಭಗೊಳ್ಳುವ ವಿಧಾನ ಹೀಗಿದೆ. ವೆಂಕಣ್ಣಗೌಡ ಕೃಷಿಕ. ತನ್ನ ಹೊಲದಲ್ಲಿ ಬೆಳೆದ ಬೆಳೆಗೆ ಕಾವಲುಗಾರರನ್ನು ನೇಮಿಸಿರುತ್ತಾನೆ. ಆ ಹೊಲಕ್ಕೆ ಮಾಳಿಂಗರಾಯನ ಮಕ್ಕಳು ಕುರಿಗಳನ್ನು ಬಿಟ್ಟು ಬೆಳೆಯನ್ನು ಹಾಳುಮಾಡುತ್ತಾರೆ. ಆ ಮುಖಾಂತರ ಸಂಘರ್ಷ ಆರಂಭವಾಗುತ್ತದೆ. ಸಂಘರ್ಷದಲ್ಲಿ ಮಾಳಿಂಗರಾಯ, ವೆಂಕಣ್ಣಗೌಡನಿಗೆ ಹಿಂಸೆ ಕೊಡುತ್ತಾನೆ. ರೋಗ ರುಜಿನಗಳನ್ನು ತರುತ್ತಾನೆ. ಆ ರೋಗಗಳು ಯಾರಿಂದಲೂ ವಾಸಿಯಾಗದಂತೆ ತಡೆಯುತ್ತಾನೆ. ಕೊನೆಗೆ ತನ್ನನ್ನೇ ಹುಡುಕಿಕೊಂಡು ಬರುವಂತೆ ಮಾಡುತ್ತಾನೆ. ಈ ಕಾರ್ಯಕ್ಕಾಗಿ ಮಧ್ಯವರ್ತಿಗಳನ್ನು ಸೃಷ್ಟಿಸುವ ತಂತ್ರಗಳು ಗಮನ ಸೆಳೆಯುತ್ತವೆ. ಕೊನೆಗೆ ತನ್ನ ಒಕ್ಕಲನ್ನಾಗಿ ಮಾಡಿಕೊಂಡು ಮಠಕ್ಕೆ ಮೊದಲು ಹುಟ್ಟಿದ ಮಗುವನ್ನೇ ಕೊಡಬೇಕು ಅನ್ನುವ ಒಪ್ಪಂದದೊಂದಿಗೆ ಸಂಘರ್ಷ ಮುಕ್ತಾಯ ವಾಗುತ್ತದೆ. ಇವೆಲ್ಲವೂ ಹಿಂಸಾತ್ಮಕ ಕೃತ್ಯಗಳಂತೆ ಕಂಡುಬಂದರೂ ಪ್ರಭುತ್ವವನ್ನು ಹೊಡೆದು ಹಾಕುವ ತಂತ್ರಗಳಂತೆ ಕಾಣುತ್ತವೆ. ಒಕ್ಕಲನ್ನಾಗಿ ಮಾಡಿಕೊಳ್ಳುವುದು ತನ್ನ ಅಡಿಯಾಳನ್ನಾಗಿ ಮಾಡಿಕೊಳ್ಳುವ ಮತ್ತು ಪ್ರತಿಸಂಸ್ಕೃತಿಯನ್ನು ಸೃಷ್ಟಿಸಿಕೊಳ್ಳುವ ವಿಧಾನದಂತೆ ಕಾಣಿಸುತ್ತದೆ. ಬೀರಪ್ಪ, ಮಾಯವ್ವ, ಕೋಣಾಸುರನೊಂದಿಗೆ ಮಾಡುವ ಸಂಘರ್ಷ ಇದಕ್ಕಿಂತ ಭಿನ್ನವಾದದ್ದು. ಅಲ್ಲಿ ಅವರನ್ನು ಸಂಹಾರ ಮಾಡುವುದರ ಮೂಲಕ ತಮ್ಮ ಅಸ್ತಿತ್ವವನ್ನು ಕಟ್ಟಿಕೊಳ್ಳುತ್ತಾರೆ.

ಮಾಳಿಂಗರಾಯ ಮತ್ತು ಅಮೋಘಸಿದ್ಧ ಮಾಡುವ ಸಂಘರ್ಷ ತಮ್ಮ ತಮ್ಮ ಯಜಮಾನಿಕೆಯನ್ನು ಪರೀಕ್ಷಿಸಿಕೊಳ್ಳುವುದಕ್ಕೆ ಮಾಡುವ ಸಂಘರ್ಷದಂತೆ ಕಾಣುತ್ತದೆ. ಅಮೋಘಸಿದ್ಧ ಶೈವ ಆರಾಧನೆಯಲ್ಲಿ ಯಾರು ಶ್ರೇಷ್ಠರು ಅಂತ ತಿಳಿದುಕೊಳ್ಳುವುದಕ್ಕೆ ಶಿವನ ಹತ್ತಿರ ಹೋಗುತ್ತಾನೆ. ಶಿವ ನನಗಿಂತ ಶ್ರೇಷ್ಠ ಭಕ್ತ ಮಾಳಿಂಗರಾಯ ಎಂದ ತಕ್ಷಣ ಅಮೋಘಸಿದ್ಧನಿಗೆ ಕೋಪ ಬಂದು ಬಿಡುತ್ತದೆ. ತಕ್ಷಣ ಮಾಳಿಂಗರಾಯನ ಪರೀಕ್ಷೆಗೆ ಮುಂದಾಗುತ್ತಾನೆ. ಈ ಸಂಘರ್ಷ ಮುಕ್ತಾಯವಾಗುವ ವಿಧಾನ ಗಮನ ಸೆಳೆಯುತ್ತದೆ. ಸೋತ ಅಮೋಘಸಿದ್ಧ ಐದು ಕುರಿಗಳನ್ನು ಬೇಡುತ್ತಾನೆ. ಇದಕ್ಕೆ ಒಪ್ಪಿದ ಮಾಳಿಂಗರಾಯ ಐದು ಕುರಿಗಳನ್ನು ಕೊಟ್ಟು ತಮ್ಮ 'ಜಕ್ಕಪ್ಪ'ನ ಹತ್ತಿರ ಐದು ಕುರಿಗಳನ್ನು ಪಡೆದುಕೊಳ್ಳುವ ಸಲಹೆ

[illegible]

[illegible]

ಕೊಡುತ್ತಾನೆ. ಈ ಮಾತನ್ನು ಋಷಿಯಿಂದ ಒಪ್ಪಿಕೊಂಡ ಅಮೋಘಸಿದ್ಧ ಜಕ್ಕಪ್ಪನ ಹತ್ತಿರ ಹೋಗಿ ಕುರಿಗಳನ್ನು ಬೇಡುತ್ತಾನೆ. ಇದು ಅಮೋಘಸಿದ್ಧನ ವೃತ್ತಿ ಆಸಕ್ತಿಯನ್ನು ತಿಳಿಸುತ್ತದೆ. ಜಕ್ಕಪ್ಪ ಐದು ಕುರಿಗಳನ್ನು ಕೊಟ್ಟು ಸಾಯಿಸುವ ವಿಧಾನ ಬೇರೆ ರೀತಿ ಆಲೋಚಿಸುವುದಕ್ಕೆ ಅವಕಾಶ ಸಿಗುತ್ತದೆ. ಆ ವೇಳೆಗೆ ರಾತ್ರಿ ಆಗುತ್ತದೆ. ಅಮೋಘಸಿದ್ಧ ಅಲ್ಲಿಯೇ ಉಳಿದುಕೊಳ್ಳುತ್ತಾನೆ. ಬೆಳಗಾವುದರೊಳಗೆ ಕುರಿಗಳು ಸತ್ತು ಹೋಗುತ್ತವೆ. ಕೆಲವು ಡೊಳ್ಳಿನ ಹಾಡುಗಳಲ್ಲಿ ಜಕ್ಕಪ್ಪ ಸಾಯಿಸುತ್ತಾನೆ ಅನ್ನುವ ಚಿತ್ರಗಳು ಸಿಗುತ್ತವೆ. ಅಮೋಘಸಿದ್ಧ ಕುರಿಗಳನ್ನು ಬದುಕಿಸಿ ಕೊಡುವಂತೆ ಜಕ್ಕಪ್ಪನಲ್ಲಿ ಅಂಗಲಾಚುತ್ತಾನೆ. ಜಕ್ಕಪ್ಪ ಇದಕ್ಕೆ ಯಾವುದೇ ಪ್ರತಿಕ್ರಿಯೆ ಕೊಡದೆ ಮೌನವಾಗಿ ಬಿಡುತ್ತಾನೆ. ಅಮೋಘಸಿದ್ಧ ತನ್ನ ನಾಡಿಗೆ ತಾನು ಬರಿಗೈಲಿ ವಾಪಾಸ್ಸಾಗುತ್ತಾನೆ. ಇಲ್ಲಿ ಕುರಿಗಳು ಸಾಯುವ ಮತ್ತು ಜಕ್ಕಪ್ಪ ಮೌನ ವಾಗುವ ವಿಧಾನ ಗಮನ ಸೆಳೆಯುತ್ತದೆ. ಕುರಿಗಾರಿಕೆಯ ಯಜಮಾನಿಕೆಯನ್ನು ಹಂಚಿಕೊಳ್ಳದ; ಶಿಷ್ಟ ಆಗುವುದಕ್ಕೆ ಬಿಡದ; ಕಳೆದುಕೊಳ್ಳುವುದಕ್ಕೆ ಇಷ್ಟವಾಗದ ವಿಧಾನದಂತೆ ಕಾಣುತ್ತದೆ. ಅಂದರೆ ಕುರಿಗಾರಿಕೆ ವೃತ್ತಿಯ ಪ್ರಭುತ್ವವನ್ನು ತನ್ನ ಹತ್ತಿರ ಇಟ್ಟುಕೊಳ್ಳುವ ವಿಧಾನವಿದು.

ಇವರಲ್ಲಿ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವ ಗುಣಗಳಿದ್ದಂತೆ ವಿರೋಧಿ ಗುಣಗಳು ಇದ್ದವು. ರೇವಣಸಿದ್ಧನಲ್ಲಿ ಪ್ರಭುತ್ವ ವಿರೋಧಿ ಗುಣಗಳು ಭಿನ್ನವಾಗಿ ಕಾಣುತ್ತವೆ. ರೇವಣಸಿದ್ಧ ವಿಕ್ರಮಾದಿತ್ಯನ ಆಸ್ಥಾನಕ್ಕೆ ಭೇಟಿ ನೀಡುವ ಘಟನೆಯನ್ನು ನೆನಪಿಸಿಕೊಳ್ಳಬಹುದು. ವಿಕ್ರಮಾದಿತ್ಯನ ಆಸ್ಥಾನಕ್ಕೆ ಹೋಗಿ ಭಿಕ್ಷೆ ಬೇಡುತ್ತಾನೆ. ಆಗ ರಾಜ 'ಕುದಿಯುವ ಅನ್ನ'ವನ್ನು ಅಂಗೈಯಲ್ಲಿ ಹಾಕುತ್ತಾನೆ. ಆ ಸಂದರ್ಭದಲ್ಲಿ ರೇವಣಸಿದ್ಧ ಪ್ರತಿಕ್ರಿಯೆ ನೀಡುವ ವಿಧಾನ ವಿಶಿಷ್ಟವಾದದ್ದು. ವಿಕ್ರಮಾದಿತ್ಯ ಹಾಕಿದ ಬಿಸಿ ಅನ್ನವನ್ನು ಅರಮನೆಯ ಕಂಬಕ್ಕೆ ವರಸುವುದರ ಮೂಲಕ ಅರಮನೆಗೆ ಬೆಂಕಿ ಹಚ್ಚುತ್ತಾನೆ. ಇದಕ್ಕೆ ಹೆದರಿದ ವಿಕ್ರಮಾದಿತ್ಯ ಸೋತು ಶರಣಾಗುತ್ತಾನೆ. ಮನಸೋತ ವಿಕ್ರಮಾದಿತ್ಯ ರಾಜಧಾನಿಗೆ ಕರೆದೊಯ್ದು ಖಡ್ಗವನ್ನು ನೀಡಿ ಗೌರವಿಸುತ್ತಾನೆ. ಈ ಕಥನದಲ್ಲಿ ರೇವಣಸಿದ್ಧ ರಾಜಪ್ರಭುತ್ವವನ್ನು ಹೊಡೆದು ಹಾಕಿರುವ ಮತ್ತು ತನ್ನದೆಯಾದ ಪ್ರತಿ ಸಂಸ್ಕೃತಿಯನ್ನು ನಿರ್ಮಿಸಿಕೊಂಡ ವಿಧಾನವನ್ನು ಕಾಣಬಹುದು. ಜೊತೆಗೆ ಜನಸಾಮಾನ್ಯರು, ಸಿದ್ಧಿಗಳು ಭಿಕ್ಷೆಗೆ ಬಂದಾಗ ರಾಜನಾದ ನೀನು ನಿನ್ನಲ್ಲಿರು ವುದನ್ನು ನೀಡಿ ಕಳಿಸಬೇಕು ಅನ್ನುವ ಎಚ್ಚರವನ್ನು ಕೊಟ್ಟಿರುವ ಮನೋಧೋರಣೆಯಂತೆ ಕಾಣುತ್ತದೆ. ಇದು ಭಿಕ್ಷುಕರನ್ನು ಅವಮಾನಿಸಬಾರದು ಅನ್ನುವ ಪಾಠವನ್ನು ರಾಜ ವ್ಯವಸ್ಥೆಗೆ ರವಾನಿಸುವ ಸ್ವರೂಪ ದಂತಿದೆ. 'ಮಂಗಳ ವೇಡ' ಪ್ರದೇಶಕ್ಕೆ ಬರಗಾಲ ಬಂದಾಗ ರೇವಣಸಿದ್ಧ ಕೆರೆಯೊಂದನ್ನು ನಿರ್ಮಿಸು ತ್ತಾನೆ. ಇದು ರೇವಣಸಿದ್ಧನಲ್ಲಿದ್ದ ಸಾಮಾಜಿಕ ಕಳಕಳಿಯನ್ನು ತೋರಿಸುತ್ತದೆ.

ಈ ಸಾಂಸ್ಕೃತಿಕ ವೀರರು ಸಮಾಜದ ಜೊತೆಗೆ ಅತ್ಯುತ್ತಮವಾದ ಸಂಬಂಧವನ್ನು ಇಟ್ಟುಕೊಂಡಿ ದ್ದರು. ಅಮೋಘಸಿದ್ಧ ಭೂಲೋಕಕ್ಕೆ ಬರುವಾಗ ಮಳೆಯ ಕೀಲ, ಬೆಳೆಯ ಕೀಲ ಮತ್ತು ಬಡವರಿಗೆ ಭಾಗ್ಯವನ್ನು ಕೊಡುವ ಮತ್ತು ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಡುವ ವರಗಳನ್ನು ಪಡೆದುಕೊಂಡು ಬರುತ್ತಾನೆ. ಅಮೋಘಸಿದ್ಧ ಇಲ್ಲಿ ಭೂಲೋಕಕ್ಕೆ ಬರುವುದೆಂದರೆ 'ಸಿದ್ಧಿ'ಯನ್ನು ಪಡೆದು ಜನಸಾಮಾನ್ಯರ

ಹತ್ತಿರ ಬರುವುದೆಂದರ್ಥ. ಅಮೋಘಸಿದ್ಧ ತನ್ನ ಶಿಷ್ಯ ಮತ್ತು ಮಕ್ಕಳಿಗೆ ಹೇಳುವ ಮಾತುಗಳು ಅಮೋಘಸಿದ್ಧನ ಸಾಮಾಜಿಕ ಕಾಳಜಿಯನ್ನು ತಿಳಿಸುತ್ತದೆ. "ಭಕ್ತರನ್ನು ಕಾಪಾಡುತ್ತಾ ಕಾಲ ಕಳೆಯಬೇಕು. ಪಕ್ಷಪಾತವಿಲ್ಲದೆ ನ್ಯಾಯ ನೀತಿ ಧರ್ಮದಿಂದ ನಡೆದುಕೊಳ್ಳಬೇಕು. ಆಸ್ತಿಯನ್ನು ಕೂಡಿ ಹಾಕುವ ಆಸೆ ಮಾಡಬಾರದು"[೧೫೮] ಎಂದು ಹೇಳುತ್ತಾನೆ. ಅಮೋಘಸಿದ್ಧನ ಶಿಷ್ಯರು ಅಮೋಘಸಿದ್ಧನ ತತ್ವಕ್ಕೆ ಬದ್ಧರಾಗಿ ಕಾರ್ಯನಿರ್ವಹಿಸುತ್ತಾರೆ. ಇಲ್ಲಿ 'ಹೊನ್ನಬಿವರಗಿ'ಯಲಿ ನಡೆದ ಘಟನೆಯನ್ನು ನೆನಪಿಸಿಕೊಳ್ಳ ಬಹುದು. ಭೂತಾಳಸಿದ್ಧ, ಔದುತಸಿದ್ಧ, ಬಿಳಿಯಾನಿಸಿದ್ಧ, ಸೋಮಣ್ಣ ಮುತ್ಯಾರು 'ಹೊನ್ನಬಿವರಗಿ'ಗೆ ನ್ಯಾಯ ಬಗೆಹರಿಸುವುದಕ್ಕೆ ಹೋಗುತ್ತಾರೆ. ಪಂಚಾಯಿತಿ ಮುಗಿದ ನಂತರ "ಸಿದ್ಧನಗೌಡ ಮತ್ತು ಮುದ್ದೇಗೌಡರು ಅಮೋಘಸಿದ್ಧನ ಶಿಷ್ಯರಿಗೆ ಎರಡು ಚಾವರ ಭೂಮಿಯನ್ನು ಬನಕ್ಕೆಂದು ಮತ್ತು ಸಾಗುವಳಿಗಾಗಿ ಇಪ್ಪತ್ತೈದು ಚಾವರ ಭೂಮಿಯನ್ನು ಕೊಡುತ್ತಾರೆ. ಆ ಭೂಮಿಯನು ಗುರುವ, ಮುಲ್ಲಾ, ಕುಂಬಾರ, ಬಡಿಗ, ಹಡಪದ, ಕುಲಕರ್ಣಿ ವಾಲಿಕಾರ ಮುಂತಾದವರಿಗೆ ಆ ಧರ್ಮದ ಭೂಮಿಯನ್ನು ಹಂಚಿಕೊಟ್ಟರು."[೧೫೯] ಹೀಗೆ ಭೂಮಿಯನ್ನು ಹಂಚುವುದರ ಮುಖಾಂತರ 'ಪ್ರತಿ ಸಂಸ್ಕೃತಿ' ನಿರ್ಮಾಣಕ್ಕೆ ಅವಕಾಶವನ್ನು ಸೃಷ್ಟಿಸಿಕೊಂಡರು.

ಮರುಳಮಂಕ, ಶಾಂತಮುತ್ತಯ್ಯ, ರೇವಣಸಿದ್ಧ, ಸಿದ್ಧರಾಮ ಮುಂತಾದ ಸಾಂಸ್ಕೃತಿಕ ನಾಯಕರೆಲ್ಲರೂ ಸೇರಿ ಕಲ್ಯಾಣದ ಬಹಿಷ್ಕಾರವನ್ನು ಪ್ರತಿರೋಧಿಸುವುದು ಸಾಮೂಹಿಕ ಪ್ರತಿರೋಧದಂತೆ ಕಾಣಿಸುತ್ತದೆ. ಕಲ್ಯಾಣದಲ್ಲಿ ಕುರುಬರು ಹಾಲಿನ ಜೊತೆ ಮಾಂಸವನ್ನು ಹೊತ್ತು ಮಾರಿದರೆನ್ನುವ ಕಾರಣಕ್ಕೆ ಕಲ್ಯಾಣದಿಂದ ಬಹಿಷ್ಕಾರಕ್ಕೆ ಒಳಗಾಗುತ್ತಾರೆ. ಈ ಬಹಿಷ್ಕಾರವನ್ನು ಪ್ರತಿರೋಧ ಮಾಡುವುದಕ್ಕೆ 'ಮರುಳಮಂಕ' ಇವತ್ತಿನ 'ಸರೂರು' ಗ್ರಾಮದ 'ತೂಗುಡ್ಡ'ದಲ್ಲಿ ಉಗ್ರವಾದ ತಪಸ್ಸನ್ನು ಆರಂಭಿಸು ತ್ತಾನೆ. ಈ ತಪಸ್ಸು ಮಾಡಿದ ಸಂದರ್ಭದ ಕಥನ ಹಲವು ಸಾಂಸ್ಕೃತಿಕ ನಾಯಕರೊಂದಿಗೆ ತಳಕು ಹಾಕಿಕೊಂಡಿದೆ. ಒಂದು ಪಠ್ಯದಲ್ಲಿ ಮರುಳಮಂಕ ಎಂದು ಉಲ್ಲೇಖಗೊಂಡರೆ ಮತ್ತೊಂದು ಪಠ್ಯದಲ್ಲಿ ರೇವಣಸಿದ್ಧವೆಂದು ಉಲ್ಲೇಖಗೊಂಡಿದೆ. ಈ ಕಥನಗಳ ಸೃಷ್ಟಿಯ ರಾಜಕಾರಣ ಬೇರೆ. ಅದು ಇಲ್ಲಿ ಮುಖ್ಯ ಆಗುವುದಿಲ್ಲ. ಬಹಿಷ್ಕಾರವನ್ನು ಪ್ರತಿರೋಧ ಮಾಡುವುದಕ್ಕೆ ಸಾಂಸ್ಕೃತಿಕ ವೀರರೆಲ್ಲರೂ ಒಂದುಗೂಡುವುದು ಹಾಗೂ 'ಸತ್ತ ತಗರ'ನ್ನು ಹೊತ್ತು ಕಲ್ಯಾಣ ಪ್ರವೇಶಿಸುವುದು ರಾಜಪ್ರಭುತ್ವ ವಿರೋಧಿಯಾಗಿ ಕಾಣಿಸುತ್ತದೆ. ತಗರ ಪವಾಡದ ನಂತರ 'ಶಾಂತಮುತ್ತಯ್ಯ'ನಿಗೆ ಲಿಂಗದೀಕ್ಷೆ ಕೊಡುತ್ತಾರೆ. ಆ ಮುಖಾಂತರ 'ಗುರುಕುಲ'ವನ್ನು ಸ್ಥಾಪನೆ ಮಾಡಿಕೊಳ್ಳುವುದರ ಮುಖಾಂತರ 'ಪ್ರತಿ ಸಂಸ್ಕೃತಿ'ಯನ್ನು ಸ್ಥಾಪಿಸಿಕೊಳ್ಳುತ್ತಾರೆ.

ಇಲ್ಲಿಯವರೆಗೆ ಸಾಂಸ್ಕೃತಿಕ ನಾಯಕರ ತಾಕಲಾಟಗಳ ಸ್ವರೂಪವನ್ನು ನೋಡಲಾಯಿತು. ಇದರಲ್ಲಿ ಪ್ರತಿಯೊಬ್ಬ ಸಾಂಸ್ಕೃತಿಕ ನಾಯಕ ತನ್ನ ಅಸ್ತಿತ್ವ ಹಾಗೂ ಅನನ್ಯತೆಗಳಿಗಾಗಿ ಅನೇಕ ರೀತಿಯ ಪ್ರಭುತ್ವಗಳ ಜೊತೆಗೆ ಮುಖಾಮುಖಿ ಆಗಿದ್ದಾನೆ. ಒಂದಲ್ಲ ಒಂದು ರೀತಿಯ ಹೋರಾಟ

[illegible]

[illegible]

[illegible]

ನಡೆಸಿದ್ದಾನೆ. “ರಾಜ ಮಹಾರಾಜರಿರುವುದು ಸಾಮಾನ್ಯ ಜನರ ಕಷ್ಟ ಸುಖಗಳಿಗೆ ಭಾಗಿಯಾಗುವುದಕ್ಕೆ ಹೊರತು ಅವರ ವೈಭವೋಪೇತ ಜೀವನ ನಡೆಸುವುದಲ್ಲ”[೧೬೦] ಎನ್ನುವುದು ಈ ಸಾಂಸ್ಕೃತಿಕ ವೀರರ ತತ್ವವಾಗಿದೆ. ಇಂಥ ಉದ್ದೇಶಗಳಿಂದ ಹೋರಾಟ ಮಾಡಿದ ಸಾಂಸ್ಕೃತಿಕ ವೀರರ ಹೋರಾಟಗಳನ್ನು ಡೊಳ್ಳಿನ ಹಾಡುಗಳ ರೂಪದಲ್ಲಿ, ಗೀತೆಗಳ ರೂಪದಲ್ಲಿ ಹಾಲುಮತ ಸಮುದಾಯ ಹಾಡಿ ಹೊಗಳಿದೆ. ಹಾಗೆ ನೋಡಿದರೆ ಸಾಂಸ್ಕೃತಿಕ ನಾಯಕರ ಈ ಪ್ರಭುತ್ವ ವಿರೋಧಿ ನಿಲುವು ಆಯಾ ಸಮುದಾಯಗಳಿಗೆ ಇಂದಿಗೂ ಬೇಕಿದೆ. ಇಂಥ ಸಾಂಸ್ಕೃತಿಕ ನಾಯಕರ ಸಾಹಸ ಕಥೆಗಳನ್ನು ಹಾಡಿ ಹೊಗಳುವ ಈ ಸಮುದಾಯ ಆಧುನಿಕ ಪ್ರಭುತ್ವವನ್ನು ಹೇಗೆ ಎದುರಿಸುತ್ತಿದೆ ಅನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಏಕೆಂದರೆ ಜಾಗತೀಕರಣದ ಹೆಸರಿನಲ್ಲಿ ತೃತೀಯ ರಾಷ್ಟ್ರಗಳ ಸಂಪತ್ತು ಹಾಗೂ ಸಂಸ್ಕೃತಿಯನ್ನು ಹರಾಜಿಗಿಡುವ ಪ್ರಥಮ ಜಗತ್ತಿನ ರಾಷ್ಟ್ರಗಳ ಖಾಸಗೀಕರಣ, ಉದಾರೀಕರಣ ನೀತಿಗಳೇ ಆಧುನಿಕ ಜಗತ್ತಿನ ಬಹುದೊಡ್ಡ ಪ್ರಭುತ್ವಗಳಾಗಿವೆ. ಈ ಪ್ರಭುತ್ವ ಧೋರಣೆಗಳಿಂದ ತಳಸಮುದಾಯಗಳು ತಲ್ಲಣಗೊಂಡಿರುವುದು ಸತ್ಯ. ಆದರೆ ವಿರೋಧಿ ಧೋರಣೆಯನ್ನು ಮಾತ್ರ ಕಳೆದುಕೊಂಡಿಲ್ಲ. ಆ ಸಮುದಾಯಗಳಲ್ಲಿರುವ ಸಾಂಸ್ಕೃತಿಕ ವೀರರ ಆರಾಧನೆ ಮತ್ತು ನಂಬಿಕೆ, ಸಂಪ್ರದಾಯ, ಆಚರಣೆ, ಸಾಹಿತ್ಯ ಇತ್ಯಾದಿ ಕೃತಿಗಳು ಆ ಸಮುದಾಯಗಳಿಗೆ ದೊಡ್ಡ ಪ್ರತಿರೋಧದ ಶಕ್ತಿಯನ್ನು ಕೊಡುತ್ತಿವೆ. ಇಲ್ಲಿ ಟಿ.ಎಸ್. ಸತ್ಯನಾಥ ಅವರು ಮಂಟೇಸ್ವಾಮಿ ಪರಂಪರೆಯ ಬಗ್ಗೆ ಹೇಳುವ ಮಾತುಗಳು ನೆನಪಿಗೆ ಬರುತ್ತದೆ. “ಒಂದರ್ಥದಲ್ಲಿ ಮಂಟೇಸ್ವಾಮಿ ಪರಂಪರೆ ಯಾವ ಸದ್ದುಗದ್ದಲವಿಲ್ಲದೆ ತನ್ನ ಪಾಡಿಗೆ ತಾನು ಜೀವಂತವಾಗಿ ಬದುಕುತ್ತಿರುವುದೇ ಅದು ತನ್ನದೇ ಆದ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾ ಇರುವುದಕ್ಕೆ ಒಂದು ನಿದರ್ಶನ ಎನ್ನುತ್ತಾರೆ. ಈ ಮಾತುಗಳು ಸಂಪ್ರದಾಯ ಮತ್ತು ಆಚರಣೆಗಳು ಸಮುದಾಯಗಳನ್ನು ಅಪವಸಾಹತೀಕರಣಗೊಳಿಸಬಲ್ಲವು ಎಂಬುದರ ಕಡೆಗೆ ಗಮನ ಸೆಳೆಯುತ್ತವೆ.”[೧೬೧] ಡೊಳ್ಳಿನ ಹಾಡುಗಳು ಉಳಿದೆಲ್ಲ ಮಹಾಕಾವ್ಯಗಳಿಗಿಂತ ಹೆಚ್ಚು ಜೀವಂತವಾಗಿವೆ. ಹಾಲುಮತ ಸಮುದಾಯ ತನ್ನ ಪಾಡಿಗೆ ತಾನು ಸಾವಿರಾರು ತಂಡಗಳನ್ನು ಕಟ್ಟಿಕೊಂಡು ಹಾಡುಗಳನ್ನು ಅನಾವರಣ ಮಾಡುತ್ತಿದೆ. ಇದರಿಂದ ಸಾಂಸ್ಕೃತಿಕ ವೀರರನ್ನು ಇವತ್ತೂ ಜೀವಂತಗೊಳಿಸುತ್ತಿದ್ದಾರೆ. ಆ ಮುಖಾಂತರ ತಮ್ಮ ಜೀವನದಲ್ಲಿ ಬದುಕುವ ಹುಮ್ಮಸ್ಸನ್ನು ತಂದುಕೊಳ್ಳುತ್ತಿದ್ದಾರೆ.

ಅಡಿಟಿಪ್ಪಣಿಗಳು

೧. ನಿಂಗಪ್ಪ ಮುದೇನೂರು, **ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು**, ಪು. ೨.

೨. ಪ್ರಭಾಕರ ಎ.ಎಸ್., **ಮ್ಯಾಸಬೇಡರ ಕಥನಗಳು**, ಪು. ೫.

೩. ಕಲಬುರ್ಗಿ ಎಂ.ಎಂ., **ಸಂಸ್ಕೃತಿ-ವಿಕೃತಿ**, ಪು. ೪.

೪. ವೀರಣ್ಣದಂಡೆ (ಸಂ.), **ಜನಪದ ಹಾಲುಮತ ಮಹಾಕಾವ್ಯ**, ಪು. ೧೨೪.

೫. ಅದೇ, ಪು. ೧೨೬.

[illegible]

೬. ಅದೇ, ಪು. ೧೨೭.

೭. ಬೊನಾ ಬಸವರಾಜ, ಭಗವಾನ್ ಬೀರೇಶ್ವರರು, ಪು. ೧೯-೩೬.

೮. ಕೋಸಂಬಿ ಡಿ.ಡಿ., ಪುರಾಣ ಮತ್ತು ವಾಸ್ತವ, ಪು. ೨೯.

೯. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪು. ೧೨೯.

೧೦. ಅದೇ, ಪು. ೧೬೨.

೧೧. ಬಸವನಗೌಡ ಪಾಟೀಲ್ (ಸಂ.), ತೂಕಮಾಡಿ ಹೇಳತೀನಿ ನ್ಯಾಯ, ಪು. ೩೫.

೧೨. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪ್ರಸ್ತಾವನೆ, ಪು. LXVIII.

೧೩. ಮಲ್ಲಿಕಾರ್ಜುನ ಶಿ. ಲಠ್ಠೆ (ಸಂ.), ಜಾನಪದ ಸಂಪದ, ಪು. ೯೯.

೧೪. ಹಂಜಗಿ ಮಠ (ಸಂ.), ಡೊಳ್ಳಿನ ಪದಗಳು, ಪು. ೮.

೧೫. ಅದೇ, ಪು. ೮.

೧೬. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪು. ೨೪೯.

೧೭. ಅದೇ, ಪು. ೨೯೮.

೧೮. ಅದೇ, ಪು. ೪೧೦.

೧೯. ಗಂಗಾಧರ ದೈವಜ್ಞ (ಸಂ.), ಮಾಳಿಂಗರಾಯನ ಕಾವ್ಯ, ಪು. ೮೩.

೨೦. ವೀರೇಶ ಶೆ. ಬಡಿಗೇರ, ಉತ್ತರ ಕರ್ನಾಟಕ ಜನಪದ ಗೀತ ಮೇಳಗಳು, ಪು. ೧೭೮.

೨೧. ವಿರೂಪಾಪಗೌಡ, ಮೇಟಿಕೊಟ್ರಪ್ಪ, ನಡಿಯಪ್ಪ ನಮ್ಮ ನಾಡಿಗೆ, ಪು. ೧೧.

೨೨. ಖಾಡೆ ಜಿ.ಬಿ., (ಸಂ.), ಕಾಡು ಹೂಗಳು, ಪು. ೧೪೨.

೨೩. ಬಸವರಾಜ ಪೊಲೀಸ್ ಪಾಟೀಲ್, ಹೈದ್ರಾಬಾದ್ ಕರ್ನಾಟಕ ಜನಪದ ಸಾಹಿತ್ಯ, ಪು. ೩೦೮.

೨೪. ರಾಮಚಂದ್ರ ಚಿಂತಾಮಣಿ ಢೇರೆ, ಶ್ರೀ ವಿಠಲ ಒಂದು ಮಹಾಸಮನ್ವಯ, ಪು. ೬೫-೬೭.

೨೫. ರೇವಣಯ್ಯ ಒಡೆಯರು, ರಾಮಗಿರಿ, ಹೊಳಲ್ಕೆರೆ ತಾ.

೨೬. ಕರಿಸಿದ್ದಪ್ಪ ಗುಡಿಗೌಡ್ರು, ಕೆಲ್ಲೋಡು, ಹೊಸದುರ್ಗ ತಾ.

೨೭. ಸಿದ್ದಯ್ಯ ಒಡೆಯರ್, ಚಿಕ್ಕಸಿಂದೋಗಿ, ಕೊಪ್ಪಳ ತಾ.

೨೮. ದೇ. ಜವರೇಗೌಡ (ಸಂ.), ಜನಪದ ವಾಹಿನಿ, ಪು. ೭೪.

೨೯. ದೇ. ಜವರೇಗೌಡ (ಸಂ.), ಜನಪದ ವಾಹಿನಿ, ಪು. ೭೮.

೩೦. ಗಂಗಾಧರ ದೈವಜ್ಞ (ಸಂ.), ಮಾಳಿಂಗರಾಯನ ಕಾವ್ಯ, ಪುಟ. ೬.

೩೧. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೩೩೦.

೩೨. ಗಂಗಾಧರ ದೈವಜ್ಞ (ಸಂ.), ಮಾಳಿಂಗರಾಯನ ಕಾವ್ಯ, ಪುಟ. ೧೬.

೩೩. Herksovites melville, **Culturel Anthropology**, Page, No. 330.

೩೪. ಮೀರಾಸಾಬಿಹಳ್ಳಿ ಶಿವಣ್ಣ, ಕಾಡಗೊಲ್ಲ ಬುಡಕಟ್ಟು ವೀರರು, ಪುಟ. ೯೩.

೩೫. ಸಾಂತ್ಯೆಮರ್, **Pastrol delites in Western India**, ಪುಟ. ೧೦೧.

೩೬. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೩೩೨.

೩೭. ಶಂಬಾ ಜೋಶಿ, ಹಾಲುಮತ ದರ್ಶನ, ಪುಟ. ೧೫೪.

೩೮. ಶ್ರೀರಾಮ ಇಟ್ಟಣ್ಣ (ಸಂ.), ಹಾಲಕೆನೆ, ಪುಟ. ೧೯.

೩೯. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೩೪೪.

೪೦. ಅಪ್ಪಣ್ಣ, ಸಾಂದಲಗ ಅಲೆಮಾರಿ ಕುರುಬ.

೪೧. ರೇವಣ್ಣ ಒಡೆಯರ್, ತರೀಕೆರೆ

೪೨. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೩೪೩.

೪೩. ಅದೇ, ಪುಟ. ೩೫೬.

೪೪. ರಹಮತ್ ತರೀಕೆರೆ, ಜನಪದ ಹಾಲುಮತ ಮಹಾಕಾವ್ಯ ಸಾಂಸ್ಕೃತಿಕ ಕಾರ್ಯಕ್ರಮ, ತುಮಕೂರು

೪೫. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೩೮೭.

೪೬. ಅದೇ, ಪುಟ. ೩೩೫.

೪೭. ಗಂಗಾಧರ ದೈವಜ್ಞ (ಸಂ.), ಮಾಳಿಂಗರಾಯನ ಕಾವ್ಯ, ಪುಟ. ೧೬.

೪೮. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೪೧೦.

೪೯. ಗಂಗಾಧರ ದೈವಜ್ಞ (ಸಂ.), ಮಾಳಂಗರಾಯನ ಕಾವ್ಯ, ಪುಟ. ೮೩.

೫೦. ಹಾಡಿದವರು; ಸೋಮಲಿಂಗ ಬಿಜ್ಜರಗಿ, ಬಿಜ್ಜರಗಿ.

೫೧. ವೀರಣ್ಣದಂಡೆ (ಸಂ.), ಜನಪದ ಹಾಲುಮತ ಮಹಾಕಾವ್ಯ, ಪುಟ. ೫೭೭.

೫೨. ಗಂಗಾಧರ ದೈವಜ್ಞ (ಸಂ.), ಮಾಳಿಂಗರಾಯನ ಕಾವ್ಯ, ಪುಟ. ೧೨೯.

೫೩. ಅದೇ., ಪುಟ. ೧೧೦.

೫೪. ಅದೇ, ಪುಟ. ೪೧೧.

೫೫. ಹಾಡಿದವರು; ಶ್ರೀಶೈಲ ಇಂಗಳೇಶ್ವರ, ಬಸವನ ಬಾಗೇವಾಡಿ.

೫೬. ಹಾಡಿದವರು; ವಿಠಲ ಯಣಕಂಚಿ, ಅಥಣಿ.

೫೭. ಹಿರೇಮಠ ಎಸ್.ಎಸ್., ಜಾತ್ರೆಗಳು, ಪುಟ. ೨೯.

೫೮. ಶಕುಂತಲಾ ಗೋಪಶೆಟ್ಟಿ, ರೇವಣಸಿದ್ಧರು : ಒಂದು ಅಧ್ಯಯನ, ಪು. ೩.

೫೯. ಕಲಬುರ್ಗಿ ಎಂ.ಎಂ., **ಮಾರ್ಗ ಸಂ.೩,** ಪು. ೭೫.

೬೦. ಕಲಬುರ್ಗಿ ಎಂ.ಎಂ., **ಲಿಂಗಾಯತ,** ಜುಲೈ, ೨೦೦೬, ಪು. ೩.

೬೧. ಕಲಬುರ್ಗಿ ಎಂ.ಎಂ., **ಹರಿಹರ ರಗಳೆಗಳು,** ಪು. ೨೮೯.

೬೨. ಶ್ರೀರಾಮ ಇಟ್ಟಣ್ಣವರ (ಸಂ.), **ಹಾಲಕೆನೆ,** ಪು. ೭೨.

೬೩. ಅದೇ, ಪು. ೭೪.

೬೪. ಮಲ್ಲಿಕಾರ್ಜುನ, **ವೀರಶೈವ ಪಂಚಾಚಾರ್ಯ ಚರಿತ್ರೆ, ಶ್ರೀ ರೇವಣಸಿದ್ಧರು,** ಪು. ೭.

೬೫. ಹನುಮಂತಯ್ಯ ವ್ಹಿ.ಆರ್., **ಕುರುಬರ ಚರಿತ್ರೆ,** ಪು. ೩.

೬೬. ಸುಂಕಾಪುರ ಎಂ.ಎಸ್., **ಜೀವನ ಜೋಕಾಲಿ ಭಾಗ ೬ ಡೊಳ್ಳಿನಹಾಡು,** ಪು. ೬೦.

೬೭. ಅದೇ, ಪು. ೭.

೬೮. ಈ ಪರಿಕಲ್ಪನೆ ಮೌಖಿಕತೆಯನ್ನು ಲಿಖಿತತೆ ಅನುಮಾನದಿಂದ ನೋಡುವ ಸಂದರ್ಭದಲ್ಲಿ ನಿರಾಕರಣೆ ಮಾಡುವುದಕ್ಕೆ ಆರಂಭ ಮಾಡಿದಾಗ ಹುಟ್ಟಿಕೊಂಡಿರುವಂತದ್ದು. ಅದರ ತಾತ್ವಿಕ ಉದ್ದೇಶಗಳನ್ನು ಹಾಡುಗಳ ಸ್ವರೂಪ ಮತ್ತು ಲಕ್ಷಣಗಳಲ್ಲಿ ವಿವರಿಸಲಾಗಿದೆ. ಆದರೆ ಅಂತಹ ಸಂದರ್ಭ ಡೊಳ್ಳಿನ ಹಾಡುಗಳಲ್ಲಿ ಇತ್ತು ಅನ್ನುವುದು ಇಲ್ಲಿ ಮುಖ್ಯ.

೬೯. ಹನುಮಂತಯ್ಯ ವ್ಹಿ.ಆರ್., **ಕುರುಬರ ಚರಿತ್ರೆ.** ಪು. ೧೨.

೭೦. ರವೀಂದ್ರನಾಥ ಕೆ., **ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ,** ಪು. ೧೦.

೭೧. ರಾಜರಾಮ ಹೆಗಡೆ, **ಲೌಕಿಕ ಅಲೌಕಿಕ,** ಪು. ೨೬.

೭೨. ಕಲುಬುರ್ಗಿ ಎಂ.ಎಂ., (ಸಂ.), ಡಾ. ವೈ.ಸಿ. ಭಾನುಮತಿ, **ಸಿದ್ಧಮಂಕ ಚರಿತೆ** ಈ ವಸ್ತುವನ್ನು ಹೇಳುತ್ತದೆ. ಆದರೆ ಸಿದ್ಧರಾಮ, ರೇವಣಸಿದ್ಧ ಮತ್ತು ಅಮೋಘಸಿದ್ಧರು ಈ ಪವಾಡವನ್ನು ಮಾಡಿದರು ಅನ್ನುವ ಆಕರಗಳು ಸಿಗುತ್ತವೆ.

೭೩. ಬೀರಪ್ಪ ದೈವದ ಜಾತ್ರೆ, ದಕ್ಷಿಣ ಕರ್ನಾಟಕದ ಹಲವು ಪ್ರದೇಶಗಳಲ್ಲಿ ನಡೆಯುತ್ತದೆ.

೭೪. ಸುಂಕಾಪುರ ಎಂ.ಎಸ್. ಸಂ., **ಜೀವನ ಜೋಕಾಲಿ (ಸಂಪುಟ-೬) ಡೊಳ್ಳಿನ ಹಾಡು,** ಪು. ೫೯.

೭೫. ಹೊಸದುರ್ಗ ತಾಲ್ಲೂಕು ಹಂದನಕೆರೆ ಗ್ರಾಮದ ಲಕ್ಕಮ್ಮಜ್ಜಿ ಅವರು ಹಾಡಿರುವ ಜನಪದ ಗೀತೆ.

೭೬. ಒಡೆಯರ್ ಡಿ. ಹೆಗ್ಗಡೆ, **ಶ್ರೀ ರೇವಣಸಿದ್ದೇಶ್ವರ ಮತ್ತು ಶ್ರೀ ಬೀರೇಶ್ವರರು,** ಪು. ೨೫.

೭೭. ಇತ್ತೀಚೆಗೆ ಆರಂಭವಾದ ರೇವಣಸಿದ್ಧ ಮತ್ತು ಸಿದ್ಧರಾಮ ಮಠಗಳು, ಸರೂರು ಗ್ರಾಮದ ಸಂಬಂಧ ಪಡೆಲ್ಲ.

೭೮. ಮಹಾರಾಷ್ಟ್ರ ಕರ್ನಾಟಕದ ಗಡಿಭಾಗಗಳಲ್ಲಿ ರೇವಣಸಿದ್ಧನ ಆರಾಧಕ ಬ್ರಾಹ್ಮಣ ಮನೆತನಗಳಿವೆ. ಆದರೆ ಅವರು ಅರ್ಚಕರಲ್ಲ.

೭೯. ಹಿರೇಮಠ ಎಸ್.ಎಸ್., **ಜಾತ್ರೆಗಳು,** ಪು. ೫ ಮತ್ತು ೩೬೫.

೮೦. ವಿಷ್ಣು ಎಂ. ಸಿಂದೆ, **ಮಹಾಲಕ್ಷ್ಮಿ ಚಿಂಚಲಿ ಮಾಯಮ್ಮದೇವಿ**, ಪು. ೧೬.

೮೧. ಬಾಗೂರು ಗ್ರಾಮದ ಯಲ್ಲಮ್ಮ, ಓರಗಲ್ಲಮ್ಮ ತಾಳಿಕಟ್ಟೆ ಗ್ರಾಮದ ಓರಗಲ್ಲಮ್ಮ ದೇವಾಲಯಗಳಲ್ಲಿ ಸಾಕಷ್ಟಿವೆ.

೮೨. Gunter - Dist and Sontneiner; **Pastorel Ditities in western India**, P.No. 82-86.

೮೩. ಪರಶುರಾಮಯ್ಯ ಸಿ.ಕೆ., **ಚೌಡಿಕೆಯರು**, ಪು. ೬.

೮೪. ನಿಂಗಪ್ಪ ಒಡೆಯರು, ತರೀಕೆರೆ ಗ್ರಾಮದ ರೇವಣಸಿದ್ಧ ಅರ್ಚಕರು.

೮೫. ಬೀರಪ್ಪ ತಂದೆ ಹನುಮಂತಪ್ಪ, ತಾಳಿಕಟ್ಟೆ ಗ್ರಾಮ.

೮೬. ಯಲ್ಲನಗೌಡ ಫ. ಅತ್ತಿಕೊಳ್ಳ, **ಹಾಲುಮತದ ಚರಿತ್ರೆ**, ೧೯೪೯, ಪು. ೨೫.

೮೭. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, **ಹಾಲುಮತದ ಪುರಾಣವು**, ಪು. ೩೯.

೮೮. ಕನಕಮಠ ಹಾವೇರಿ, **ಪಾವನ**, ಪು. ೪೪.

೮೯. ವೀರಣ್ಣದಂಡೆ (ಸಂ.), **ಜನಪದ ಹಾಲುಮತ ಮಹಾಕಾವ್ಯ**, ಪು. ೬೩೫.

೯೦. ವಿರೂಪಾಕ್ಷಗೌಡ ಕೆ., ಮೇಟಿ ಕೊಟ್ರಪ್ಪ (ಸಂ.), **ನಡಿಯಪ್ಪ ನಮ್ಮ ನಾಡಿಗೆ, ಡೊಳ್ಳಿನ ಪದಗಳು**, ಪು. ೩೦.

೯೧. ಚಿಂತಾಮಣಿ ಢೇರೆ, **ಮಲ್ಲಿಕಾರ್ಜುನ ಮತ್ತು ಮಹಾರಾಷ್ಟ್ರ**, ಪು. ೮೬.

೯೨. ಶ್ರೀಧರ ಒಡೆಯರು, ಯಳನಡು.

೯೩. ನಾಗನೂರು ಬ್ರಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳು, ವಿಜಯನಗರ ಸಾಮ್ರಾಜ್ಯವೂ ಶ್ರೀ ರೇಣುಕಾಚಾರ್ಯರೂ, ಪು. ೭.

೯೪. ಹಳ್ಳಿಕೇರಿ ಎಫ್.ಟಿ., ಮಾಹಿತಿ.

೯೫. ಪ್ರಕಾಶ್ ಒಡೆಯರು, ದೊಡ್ಡೇರಿ.

೯೬. ಈ ಗ್ರಾಮದ ಹಾಲುಮತಸ್ಥರು ಊರು ಬಿಟ್ಟು ಹೋಗುವುದಕ್ಕೆ ಮತ್ತು ದೇವಾಲಯಗಳನ್ನು ನಾಶ ಮಾಡುವುದಕ್ಕೆ ಕೇವಲ ಮುಸ್ಲಿಂ ಸಮುದಾಯ ಕಾರಣ ಆಗಿರುವುದಕ್ಕೆ ಸಾಧ್ಯವಿಲ್ಲ. ಲಿಂಗಾಯತ ವಿಭೂತಿ ಪಂಥವು ಕಾರಣ ಆಗಿರಬೇಕು. ಏಕೆಂದರೆ ಆ ಗ್ರಾಮದಲ್ಲಿ ಬೀರಪ್ಪ ಮತ್ತು ಇತರ ಹಾಲುಮತ ದೈವಗಳು ಭಂಡಾರ ಪಂಥದ ಹಾಳಾಗಿವೆ. ರೇವಣಸಿದ್ಧ ವಿಭೂತಿ ಪಂಥದ ದೇವಾಲಯ ಉಳಿದುಕೊಂಡಿದೆ. ಮುಸ್ಲಿಂರಷ್ಟೆ ಲಿಂಗಾಯತರು ಆ ಗ್ರಾಮದಲ್ಲಿದ್ದಾರೆ. ಹಾಗಾಗಿ ಇನ್ನೂ ಹೆಚ್ಚಿನ ಅಧ್ಯಯನ ಈ ವಿಷಯದಲ್ಲಿ ಆಗಬೇಕು.

೯೭. ಕಲಬುರ್ಗಿ ಎಂ.ಎಂ., ಪರಶುರಾಮಯ್ಯ ಸಿ.ಕೆ., ಹಳ್ಳಿಕೇರಿ ಎಫ್.ಟಿ. (ಸಂ.), **ತಗರ ಪವಾಡ**, ಪು. ೧೦.

೯೮. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೇವಲ ಎರಡು ಮಠಗಳು ಸಿಕ್ಕಿವೆ. ಆ ಭಾಗದಲ್ಲಿ 'ಮಂಕ ಒಡೆಯರು' ಸಿಗದೇ ಇದ್ದ ಸಂದರ್ಭದಲ್ಲಿ ಶಾಂತ ಒಡೆಯರನ್ನು ತರುವ ರೂಢಿ ಬೆಳೆದುಕೊಂಡು ಬಂದಿದೆ.

೯೯. ವೀರಣ್ಣದಂಡೆ (ಸಂ.), **'ಜನಪದ ಹಾಲುಮತ ಮಹಾಕಾವ್ಯ'**, ಪು. ೫೭೨.

೧೦೦. ಅವದೂತಸಿದ್ಧ, ಸೋಮಯ್ಯ, ಕಣ್ಣಪ್ಪ ಒಡೆಯರನ್ನು ಅಮೋಘಸಿದ್ಧನ ಧರ್ಮದ ಮಕ್ಕಳೆಂದು ಮಲಕಾರಸಿದ್ಧ, ಮಂಗರಾಯರನ್ನು ಅಮೋಘಸಿದ್ಧನ ಪುಣ್ಯದ ಮಕ್ಕಳೆಂದು ಕರೆಯಲಾಗುತ್ತದೆ.

೧೦೧. **ಹಿರಕೂರ** (ಹಾ) ಹತ್ತೂರು ಗ್ರಾಮ, ಸೊಲ್ಲಾಪುರ ತಾ.

೧೦೨. ಮದಗೊಂಡ ಧೋಂಡಪ್ಪಾ ಒಡೆಯರ್, **ಸಿದ್ಧಸಿರಿ**, ಪು. ೬೬.

೧೦೩. ಅದೇ, ಪು. ೬೭.

೧೦೪. ಅದೇ, ಪು. ೬೮.

೧೦೫. ಅದೇ, ಪು. ೧೯.

೧೦೬. ಕ್ಯಾಸೆಟ್; **'ಸಾಯಬೇಡ ನೀ ಹುಟ್ಟಿ'** ಹಾಡಿದವರು; ಗುರುಲಿಂಗ ಮಾಸ್ತರ್.

೧೦೭. ಖಾಡೆ ಬಿ.ಬಿ., **ಕಾಡು ಹೂಗಳು**, ಪು. ೮೩.

೧೦೮. ವೀರಣ್ಣದಂಡೆ (ಸಂ.), **'ಜನಪದ ಹಾಲುಮತ ಮಹಾಕಾವ್ಯ'**, ಪು. ೫೭೨.

೧೦೯. ಅದೇ, ಪು. ೫೭೭,

೧೧೦. ಅದೇ, ಪು. ೫೭೯.

೧೧೧. ಅದೇ, ಪು. ೫೮೨.

೧೧೨. ಕ್ಯಾಸೆಟ್; **'ಬಿಟ್ಟಾರ ಸ್ವಾದರ ಮಾವರ ಗೆಳೆತನ'** ಹಾಡಿದವರು; ಕರಿಯಪ್ಪ ಚಕ್ಕೇರಿ.

೧೧೩. ಕ್ಯಾಸೆಟ್; **'ಸಾಯಬ್ಯಾಡ ನೀ ಹುಟ್ಟಿ'** ಹಾಡಿದವರು; ಗುರುಲಿಂಗ ಸಂಕನಾಳ್.

೧೧೪. ಕಾಡೆ ಜಿ.ಬಿ., **ಕಾಡು ಹೂಗಳು**, ಪು. ೩೪.

೧೧೫. ಕ್ಯಾಸೆಟ್; **'ಸವಾಲಿನ ಸರದಾರ'** ಹಾಡಿದವರು; ಬೀರಣ್ಣ ಪೂಜಾರಿ ಮತ್ತು ಮುತ್ತಣ್ಣ ಪೂಜಾರಿ.

೧೧೬. ಮ್ಯಾಕ್ಸ್ ಮುಲ್ಲರ್, **Popular Educotor, Vol-VI,** P.p. 256-257.

೧೧೭. ವೀರಣ್ಣದಂಡೆ (ಸಂ.), **ಜನಪದ ಹಾಲುಮತ ಮಹಾಕಾವ್ಯ**, ಪು. ೬೧೩.

೧೧೮. ಗಂಗಾಧರ ದೈವಜ್ಞ, **ಮಾಳಿಂಗರಾಯನ ಕಾವ್ಯ**, ಪು. ೧೫೯.

೧೧೯. ಅದೇ, ಪು. ೧೬೨

೧೨೦. ರಾಮಚಂದ್ರ ಚಿಂತಾಮಣಿ ಢೇರೆ, **ಶ್ರೀ ವಿಠಲ ಒಂದು ಮಹಾಸಮನ್ವಯ**, ಪು. ೭೪.

೧೨೧. **ಕಲ್ಲಪ್ಪಜ್ಜ**, ಅಥಣಿ.

೧೨೨. **ಕಲ್ಲಪ್ಪಜ್ಜ**, ಅಥಣಿ.

೧೨೩. ಮಲ್ಲೇಪುರಂ ಜಿ. ವೆಂಕಟೇಶ (ಸಂ.), **ಶಂಬಾ ಕೃತಿ ಸಂಪುಟ-೩,** ಪು. ೪೬೫-೬೬.

೧೨೪. ರಾಚಮಂದ್ರ ಚಿಂತಾಮಣಿ ಢೇರೆ, **ಶ್ರೀ ವಿಠಲ ಒಂದು ಮಹಾಸಮನ್ವಯ,** ಪು. ೭೭.

೧೨೫. ಕೇಶವನ್ ಪ್ರಸಾದ್ (ಸಂ.), **ಬಿಳಿಗಿರಿರಂಗನ ಕಾವ್ಯ.**

೧೨೬. ರಾಮಚಂದ್ರ ಚಿಂತಾಮಣಿ ಢೇರೆ, **ಶ್ರೀ ವಿಠಲ ಒಂದು ಮಹಾಸಮನ್ವಯ,** ಪು. ೧೫೭.

೧೨೭. ನಾಗರಾಜ ಡಿ.ಆರ್., **ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ,** ಪುಟ ೧೩೨.

೧೨೮. ಅದೇ, ಪುಟ. ೧೩೩.

೧೨೯. ಇದೋಚಿನಿ ವೆಂಕಣ್ಣನ ಗೌಡನ ಹೆಂಡತಿ. ಕಥಾಸಾರದಲ್ಲಿ ಸೋಮಲಿಂಗ ಬಿಜ್ಜರಗಿ ಶಿವಲಿಂಗಮ್ಮ ಅಂತ ಹೇಳಿದ್ದಾನೆ. ಹಾಗಾಗಿ ಶಿವಲಿಂಗಮ್ಮ ಅನ್ನುವುದನ್ನು ಇಲ್ಲಿ ಬಳಸಲಾಗಿದೆ.

೧೩೦. ಏಳು ನೆಲೆಗಳು ಯಾವುದು ಅನ್ನುವುದನ್ನು ಮಾಳಪ್ಪನ ಬಗ್ಗೆ ಬರೆದಿರುವ ಅಧ್ಯಯನದಲ್ಲಿ ಬರೆಯಲಾಗಿದೆ.

೧೩೧. ಮೊಗಳ್ಳಿ ಗಣೇಶ್, **ಆದಿಮ,** ಪುಟ ೧೩೩.

೧೩೨. ಅದೇ, ಪುಟ. ೧೩೪.

೧೩೩. ಮಲಕಣ್ಣ ಸಿದ್ಧರಾಯ ಪೂಜಾರಿ, **ಶ್ರೀ ರೇವಣಸಿದ್ಧೇಶ್ವರ ಚರಿತ್ರೆ,** ಪುಟ. ೧೮.

೧೩೪. ಅಭಯಕುಮಾರ ಕೌಕ್ರಾಡಿ, **ಮುಗೇರರು ಜನಾಂಗದ ಜಾನಪದ ಅಧ್ಯಯನ,** ಪುಟ. ೬೬.

೧೩೫. ಅಮೃತ ಸೋಮೇಶ್ವರ, **ತುಳುವ ಜಾನಪದ ಕೆಲವು ನೋಟಗಳು,** ಪುಟ. ೧೪೩.

೧೩೬. ಅದೇ, ಪುಟ. ೧೪೨.

೧೩೭. Ganther Dists Sontheimer; **Essays on Raligion Literature and Law,** P.p. 159.

೧೩೮. ಖಾಡೆ ಬಿ.ಜಿ., **ಕಾಡು ಹೂಗಳು,** ಪುಟ. ೮೭.

೧೩೯. ವೀರಣ್ಣದಂಡೆ (ಸಂ.), **ಜನಪದ ಹಾಲುಮತ ಮಹಾಕಾವ್ಯ,** ಪು. ೧೯೦.

೧೪೦. ಅದೇ, ಪು. ೨೧೦.

೧೪೧. ಬಸವನಗೌಡ ಪಾಟೀಲ, **ತೂಕ ಮಾಡಿ ಹೇಳತೀನಿ ನ್ಯಾಯ,** ಪು. ೩೩.

೧೪೨. ವಿರೂಪಾಕ್ಷಗೌಡ ಕೆ. ಮೇಟಿ ಕೊಟ್ರಪ್ಪ, ನಡಿಯಪ್ಪ ನಮ್ಮ ನಾಡಿಗೆ, ಪು. ೨೮.

೧೪೩. ಚೆನ್ನಣ್ಣ ವಾಲಿಕರ, **ಗ್ರಾಮದೇವತೆಗಳ ಜಾನಪದೀಯ ಅಧ್ಯಯನ,** ಪು. ೯೦.

೧೪೪. ಹೇಮಾವತಿ ಟಿ.ಆರ್., **ಜನಪದ ಮಹಾಕಾವ್ಯಗಳಲ್ಲಿ ಸ್ತ್ರೀಸಂವೇದನೆ,** ಪು. ೬೩.

೧೪೫. ವಿರೂಪಾಕ್ಷಗೌಡ ಕೆ. ಮೇಟಿ ಕೊಟ್ರಪ್ಪ, ನಡಿಯಪ್ಪ ನಮ್ಮ ನಾಡಿಗೆ, ಪು. ೩೪.

೧೪೬. ಚನ್ನಣ್ಣ ವಾಲಿಕರ, **ಗ್ರಾಮದೇವತೆಗಳ ಜಾನಪದೀಯ ಅಧ್ಯಯನ,** ಪು. ೧೩೦.

೧೪೭. ಹಿರೇಮಠ ಎಸ್.ಎಸ್., **ಜಾತ್ರೆಗಳು,** ಪು. ೩೧.

೧೪೮. ವೀರಣ್ಣದಂಡೆ (ಸಂ.), **ಜನಪದ ಹಾಲುಮತ ಮಹಾಕಾವ್ಯ,** ಪು. ೨೦೧.

೧೪೯. ಅದೇ, ಪು. ೨೯೯.

೧೫೦. ವಿಷ್ಣು ಎಂ. ಶಿಂದೆ, ಮಹಾಶಕ್ತಿ ಬೆಂಚಲಿ ಮಾಯಕ್ಕದೇವಿ, ಪು. ೧೮.

೧೫೧. ಹಿರೇಮಠ ಎಸ್.ಎಸ್., ಜಾತ್ರೆಗಳು, ಪು. ೧೪೬.

೧೫೨. ಮೊಗಳ್ಳಿ ಗಣೇಶ್. ಸೊಲ್ಲು, ಪು. ೧೨೬.

೧೫೩. ನಿಂಗಪ್ಪ ಮುದೇನೂರು, ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು, ಪು. ೧೦೬.

೧೫೪. ಹಿರೇಮಠ ಎಸ್.ಎಸ್. ಜಾತ್ರೆಗಳು, ಪು. ೧೦೫.

೧೫೫. ಸತೀಶ್ ಪಾಟೀಲ್, ಪಂಚಗಣಾಧೀಶ್ವರರು; ಸಾಂಸ್ಕೃತಿಕ ಅಧ್ಯಯನ, ಪು. ೨೦೯.

೧೫೬. ಮನೋಹರ್ ಚಂದ್ರಪ್ರಸಾದ್ ಡಿ., ಪ್ರತಿ ಸಂಸ್ಕೃತಿ ಆಂತೋನಿ ಗ್ರಾಂಶ್ಚಿಯ ಚಿಂತನೆಗಳು, ಪು. ೫೦.

೧೫೭. ಮುತ್ತಯ್ಯನ ಎಸ್.ಎಂ., ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ, ಪು. ೧೩೦.

೧೫೮. ಮುದಗೊಂಡ ಧೊಂಡಪ್ಪಾ ಒಡೆಯರ್, ಸಿದ್ಧಸಿರಿ, ಪು. ೬೭.

೧೫೯. ಅದೇ. ೬೯.

೧೬೦. ವೆಂಕಟೇಶ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ, ಪು. ೨೪.

೧೬೧. ಉಲ್ಲೇಖ; ಮುತ್ತಯ್ಯನ ಎಸ್.ಎಂ., ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ, ಪು. ೧೬೭.

• • •

ಅಧ್ಯಾಯ ಐದು

ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅನನ್ಯತೆ

೫.೧. ಪ್ರವೇಶ

ಇಂಗ್ಲಿಷ್‌ನ 'Cultural Identity' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಸಾಂಸ್ಕೃತಿಕ ಅನನ್ಯತೆ' ಎಂಬ ಪದವನ್ನು ಬಳಸುತ್ತಿದ್ದೇವೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ನೀಡಿದ ಉಪನ್ಯಾಸವೊಂದರಲ್ಲಿ ಬಿ.ಎ. ವಿವೇಕ ರೈ ಅವರು ಈ ಪದವನ್ನು ಮೊದಲು ಖಚಿತ ಅರ್ಥದಲ್ಲಿ ಬಳಸಿದರು. ವಿವೇಕ ರೈ ಅವರ ಪರಿಕಲ್ಪನೆಯನ್ನು ಅಂಬಳಿಕೆ ಹಿರಿಯಣ್ಣ ಅವರು ವಿಸ್ತರಿಸುತ್ತ "ಇಂಗ್ಲೀಷನ್ Identityಗೆ ಸಂವಾದಿಯಾಗಿ ಕನ್ನಡದಲ್ಲಿ ಅನನ್ಯತೆ, ಪ್ರತ್ಯೇಕತೆ, ವಿಶಿಷ್ಟತೆ, ಅಭಿನ್ನತೆ, ಸ್ವಂತಿಕೆ, ಏಕರೂಪತೆ, ಸಮಾನತೆ ಮುಂತಾದ ಅರ್ಥಗಳನ್ನು ಸ್ಫುರಿಸುತ್ತದೆ. ಇಲ್ಲಿ ಯಾವುದೇ ಒಂದು ಗುಂಪಿನ ಸ್ವಂತಿಕೆಯನ್ನು ಎತ್ತಿ ಹೇಳುವ, ಅದರ ಅಸ್ತಿತ್ವವನ್ನು ಸ್ಥಾಪಿಸುವ ವಿಶಿಷ್ಟಾಂಶಗಳನ್ನು ಪ್ರದರ್ಶಿಸಿ ಪ್ರತ್ಯೇಕತೆಯನ್ನು ಸಾರುವ ಆಯಾ ಗುಂಪಿನ ಅನನ್ಯ ಸ್ವಭಾವವೇ ಮುಖ್ಯವಾಗಿರುವುದರಿಂದ Identityಗೆ ಸಮನಾರ್ಥಕವಾಗಿ 'ಅನನ್ಯತೆ' ಎಂದು ಪ್ರಯೋಗಿಸುವುದು ಸೂಕ್ತ"[೧] ಎಂದಿದ್ದಾರೆ. ಪುರುಷೋತ್ತಮ ಬಿಳಿಮಲೆ ಅವರು ಸಹ ಅನನ್ಯತೆ ಪದವನ್ನು ಬಳಸುವುದೇ ಸೂಕ್ತ ಎನ್ನುತ್ತಾರೆ.

'Identity' ಎನ್ನುವ ಪದ 'ಲ್ಯಾಟೀನ್' ಭಾಷೆಯ 'Identitatis' ಪದವು 'Idem' ಪದದಿಂದ ನಿಷ್ಪನ್ನಗೊಂಡಿದೆ. Idem ಎಂದರೆ 'ಅದೇ' (The Same) ಎಂದಾರ್ಥ. Identity ಪದಕ್ಕೆ ಸ್ವೀಡಷ್ ಅಕಾಡೆಮಿ ಮೂರು ಅರ್ಥಗಳನನ್ನು ಕೊಟ್ಟಿದೆ.

೧. ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರು ವಸ್ತುಗಳು ಅಥವಾ ಪರಿಕಲ್ಪನೆಗಳು ಒಂದೇ ಆಗಿರುವುದು; ಒಂದು ಮತ್ತೊಂದರಂತೆ ಇರುವುದು; ಎರಡೂ ವಸ್ತುಗಳು ಅಭೇದವಾಗಿರುವುದು. ಇದನ್ನು ಉಲ್ಸ್‌ಬ್ರುಕ್ ಅವರು 'ಸಾಮ್ಯ' (Similarity) ಎಂದು ಕರೆದಿದ್ದಾರೆ.

೨. ಬೇರೆ ಬೇರೆ ಕಾಲ ಮತ್ತು ಸನ್ನಿವೇಶಗಳಲ್ಲಿ ನಿರಂತರವಾಗಿ ಉಳಿದು ಬಂದಿರುವ ಕೆಲವು ಅಂಶಗಳು ಇರುತ್ತವೆ.

೩. ವ್ಯಕ್ತಿಯೊಬ್ಬ ನಿಜವಾಗಿಯೂ ತಾನು ಒಬ್ಬ ವ್ಯಕ್ತಿ ಎಂದು ಭಾವಿಸಿಕೊಳ್ಳುವುದು. ಒಬ್ಬನ ಅನನ್ಯತೆಯನ್ನು ದೃಢೀಕರಿಸಿಕೊಳ್ಳಲು ಇದು ಅಗತ್ಯ. ಇದನ್ನು "ನ್ಯಾಯ ಸಮ್ಮತ" ಬಗೆ (Ligitimising aspect) ಎಂದು ಕರೆಯಲಾಗಿದೆ.[೨]

ವಿವೇಕ ರೈ ಅವರ ಮತ್ತು ಸ್ವೀಡಿಷ್ ಅಕಾಡೆಮಿಯ ಅರ್ಥಗಳನ್ನು ನೋಡಿದಾಗ ಒಂದು ಜಾತಿ, ಒಂದು ಭಾಷೆಯನ್ನಾಡುವ ಜನವರ್ಗ, ಒಂದು ಪ್ರದೇಶದಲ್ಲಿ ವಾಸಿಸುವ ಜನರ ಗುಂಪು ಇವರಿಗೆಲ್ಲ ಸಾಂಸ್ಕೃತಿಕ ಅನನ್ಯತೆ ಇದೆ ಎಂದು ಗ್ರಹಿಸಿದಂತಾಗುತ್ತದೆ ಹಾಗೂ ಆ ಹಿನ್ನಲೆಯಲ್ಲಿಯೇ ಸಾಂಸ್ಕೃತಿಕ ಅಸ್ಮಿತೆಯೊಂದನ್ನು ಕಟ್ಟಿಕೊಳ್ಳುತ್ತಿದ್ದೇವೆ. ಈ ಪರಿಕಲ್ಪನೆಗಳ ಹಿನ್ನೆಲೆಯಲ್ಲಿಯೇ ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಲಾಗಿದೆ.

ಡೊಳ್ಳಿನ ಹಾಡುಗಳ ಅನನ್ಯತೆಯ ಚರ್ಚೆಗಳು ಅಷ್ಟಾಗಿ ನಡೆದಿಲ್ಲ. ಬಹುಮುಖ್ಯವಾಗಿ ಈ ಹಾಡುಗಳಲ್ಲಿ ಹಾಡುಗಳ ವಸ್ತು, ಶೈಲಿ, ಭಾಷೆಯ ಅನನ್ಯತೆ ಹಾಗೂ ಈ ಹಾಡುಗಳಲ್ಲಿ ಉಲ್ಲೇಖಿತ ವಾಗಿರುವ ಹಾಲುಮತ ಸಮುದಾಯದ ಕುಲಮೂಲ; ವೃತ್ತಿಮೂಲ; ಸ್ಥಳಮೂಲ; ದೈವಮೂಲ; ಅನನ್ಯತೆ ಮುಂತಾದ ಆಯಾಮಗಳನ್ನು ಗುರುತಿಸಬಹುದು. ಪ್ರಸ್ತುತ ಅಧ್ಯಯನದಲ್ಲಿ ಆ ಎಲ್ಲಾ ಭಿನ್ನ ಆಯಾಮಗಳನ್ನು ಗುರುತಿಸುವುದಿಲ್ಲ. ಇದು ಈ ಅಧ್ಯಯನದ ಮಿತಿಯು ಹೌದು. ಜೊತೆಗೆ 'ಸಾಂಸ್ಕೃತಿಕ ವೀರರ' ಮತ್ತು 'ಹಾಡುಗಳ ಸ್ವರೂಪ ಮತ್ತು ಲಕ್ಷಣಗಳು' ಅಧ್ಯಯಗಳಲ್ಲಿ ಸಾಂಸ್ಕೃತಿಕ ವೀರರ ಅನನ್ಯತೆ, ಹಾಡುಗಳ ವಸ್ತು ಮತ್ತು ಶೈಲಿ ಅನನ್ಯತೆ, ಹಾಡುವ ಸಂದರ್ಭಗಳ ಅನನ್ಯತೆ ಮುಂತಾದ ಆಯಾಮಗಳ ವಿಶ್ಲೇಷಣೆಗಳಿವೆ. ಆದ್ದರಿಂದ ಪ್ರಸ್ತುತ ಅಧ್ಯಾಯದಲ್ಲಿ ಕೇವಲ 'ಕುಲ ಮೂಲ ಅನನ್ಯತೆ' ಮತ್ತು 'ಹಾಡುಗಳ; ಹಾಡಗಾರ ಅನನ್ಯತೆ'ಗಳೆಂದು ಎರಡು ಪ್ರಕಾರಗಳನ್ನಾಗಿ ಮಾಡಿಕೊಂಡು ವಿಶ್ಲೇಷಿಸಲಾಗಿದೆ.

೫.೨. ಕುಲಮೂಲ ಅನನ್ಯತೆ

ಇದನ್ನು ಸಮುದಾಯದ ಅನನ್ಯತೆ ಎನ್ನಬಹುದು. ಸಮುದಾಯದ ಅನನ್ಯತೆಯನ್ನು ಗುರುತಿಸುವುದೆಂದರೆ ಆ ಸಮುದಾಯವು ಕಟ್ಟಿಕೊಂಡಿರುವ ಹಾಗೂ ಅದನ್ನು ಸಂರಕ್ಷಣೆ ಮಾಡಿಕೊಳ್ಳು ವುದಕ್ಕೆ ಹಂಬಲಿಸುತ್ತಿರುವ ಧೋರಣೆಗಳನ್ನು ಗುರುತಿಸುವುದೆಂದರ್ಥ. ಇದರಿಂದ ಸಮುದಾಯವೊಂದು ಕಳೆದುಕೊಳ್ಳುತ್ತಿರುವ ಬದುಕಿನ ಹಕ್ಕನ್ನು ಮರುಸ್ಥಾಪಿಸಲು ಅನನ್ಯತೆಯಡಿ ಆ ಸಮುದಾಯವನ್ನು ಶಕ್ತಗೊಳಿಸುವುದು. ಸಮುದಾಯವೊಂದರ ಬದುಕಿನ ಸಂಘರ್ಷಕ್ಕೆ ಧ್ವನಿಯಾಗುವುದು, ಸಮುದಾಯ ವೊಂದು ಕಳೆದುಕೊಳ್ಳುತ್ತಿರುವ ಸ್ಮೃತಿಲೋಕವನ್ನು ಉಳಿಸಿಕೊಳ್ಳುವ ಮೂಲಕ ವರ್ತಮಾನದ ಬದುಕಿಗೆ ಚೈತನ್ಯವನ್ನು ಪಡೆಯುವುದು ಅಂತೆಲ್ಲಾ ವಿವರಿಸಬಹುದು.

ಸಮುದಾಯದ ಅನನ್ಯತೆ ಎನ್ನುವ ಕಲ್ಪನೆ ತೀರಾ ಇತ್ತೀಚಿನದು. ಇದನ್ನು ಗಟ್ಟಿಗೊಳಿಸಲು ಅಥವಾ ಪರಂಪರೆಯನ್ನು ಗುರುತಿಸಲು ಸಮುದಾಯದೊಳಗೆ ರೂಢಿ ಆಗಿರುವ ಅಥವಾ ಕಾಣಿಸಿಕೊಳ್ಳುವ ಅಸ್ಮಿತೆಯ ಚಿತ್ರಣಗಳನ್ನು ಬಳಸಿಕೊಳ್ಳುತ್ತ ಹೋಗುತ್ತೇವೆ. ಇವುಗಳ ಮುಖಾಂತರ ಬಹುಹಿಂದಿನಿಂದಲೂ ಈ ಅನನ್ಯತೆ ಅಸ್ತಿತ್ವದಲ್ಲಿ ಇತ್ತೆಂದು ತೋರಿಸುತ್ತೇವೆ. ಈ ಪ್ರಕ್ರಿಯೆ ನಿರ್ದಿಷ್ಟ ಧರ್ಮದ ಮರು ನಿರ್ವಚನಕ್ಕೆ ಕಾರಣವಾಗಬಹುದು. ಏಕೆಂದರೆ ಇಲ್ಲಿ ಕಾಣಿಸಿಕೊಳ್ಳುವ ಧರ್ಮಕ್ಕೂ ಐಡಿಯಾಲಜಿಗೂ ನೇರಸಂಬಂಧ ಇರುತ್ತದೆ.

ಬಹುಮುಖ್ಯವಾಗಿ ಎರಡು ನೆಲೆಗಳಲ್ಲಿ ಸಮುದಾಯಗಳ ಅನನ್ಯತೆಗಳು ರೂಪಗೊಳ್ಳುತ್ತವೆ. **ಒಂದು:** ಸಮುದಾಯಗಳು; ವ್ಯಕ್ತಿಗಳು; ಕಲೆಗಳು ತಮ್ಮಷ್ಟಕ್ಕೆ ತಾವು ಅನನ್ಯತೆಯನ್ನು ಕಟ್ಟಿಕೊಳ್ಳುತ್ತವೆ. **ಎರಡು:** ಒಂದು ಸಮುದಾಯದ; ವ್ಯಕ್ತಿ ಇನ್ನೊಂದು ಸಮುದಾಯದ; ವ್ಯಕ್ತಿಯ ಮೇಲೆ ಆರೋಪ ಮಾಡುತ್ತವೆ. ಇದನ್ನು ಅರೋಪಿತ ಅಥವಾ ಕಲ್ಪಿತ ಅನನ್ಯತೆಯಂದು ಕರೆಯಬಹುದು. ವಿವೇಕ ರೈ ಅವರು ಅನನ್ಯತೆಯ ಸೃಷ್ಟಿಯನ್ನು ಕುರಿತು ಈ ರೀತಿಯಾಗಿ ವಿವರಿಸುತ್ತಾರೆ. "ಜನರು ಅನನ್ಯತೆಯಲ್ಲಿ ಆಸಕ್ತರಾಗಿರುತ್ತಾರೆ. ಈ ಕುರಿತು ತಮ್ಮ ಭಾವನೆಗಳನ್ನು ಪರಿಕಲ್ಪನೆಯ ರೂಪದಲ್ಲಿ ಅಭಿವ್ಯಕ್ತಿಸಲು ಅವರಿಗೆ ಸಾಧ್ಯವಾಗದಿದ್ದರೂ ಅವರು ಅನನ್ಯತೆಯ ಮೂಲಕವೇ ವ್ಯವಹರಿಸುತ್ತಾರೆ. ಅನನ್ಯತೆಯನ್ನು ವಿವರಿಸಲು ಅದರ ಆಕರದ ಶೋಧ ಮತ್ತು ವಿಶ್ಲೇಷಣೆ ಅಗತ್ಯವಾಗುತ್ತದೆ. ಆಕರದ ಶೋಧ ಮತ್ತು ಚರ್ಚೆಯೆಂದರೆ ಅನನ್ಯತೆಯ ಅನೇಕ ಬಾರಿ ತೋರಿಕೆಗಾಗಿ ರೂಪಿಸಿದ್ದು ಆಗಿರುತ್ತದೆ. ಅನ್ಯರು ಒಂದು ಸಮುದಾಯಕ್ಕಾಗಿ ಎಷ್ಟೋ ಬಾರಿ ಅನನ್ಯತೆಯನ್ನು ಸಿದ್ಧ ಮಾಡಿರುತ್ತಾರೆ. ಆದರೆ ಅಂತಹ ಸಮುದಾಯಕ್ಕೆ ಅನನ್ಯತೆಯ ತಿಳಿವಳಿಕೆ ಇರುವುದಿಲ್ಲ. ಒಂದು ಸಮುದಾಯ ಮತ್ತು ಆ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ತಮ್ಮ ಸಮುದಾಯದ ಮುಖ್ಯ ಅಂಶಗಳು ಮೌಲ್ಯಗಳು, ಧೋರಣೆಗಳು ಅಥವಾ ಸಮಷ್ಟಿ ಪರಂಪರೆಯಿಂದ ಆಯ್ಕೆ ಮಾಡಿದ ಪರಂಪರಾಗತ ವೈಶಿಷ್ಟ್ಯಗಳ ಸಂಗ್ರಹ ಇದನ್ನು ಪ್ರಕಟಿಸುವುದನ್ನು ಗಮನಿಸಬೇಕಾಗುತ್ತದೆ. ಸಮೂಹದ ಅನನ್ಯತೆಯನ್ನು ವಿವರಿಸುವುದೆಂದರೆ ಸಮೂಹದ ಸಂಕೇತ ಮತ್ತು ರೂಪಕಗಳನ್ನು ಆಯ್ಕೆ ಮಾಡುವುದು."[೩]

"ಕುರುಬರು ನಾವು ಕುರುಬರು ನಾವು
ಕುರಿಗಳ ಮೇಯಿಸುವ ಕುರುಬರು
ಕುರಿಗಳ ಮೇಯಿಸುವ ಕುರುಬರು
ಮರೆಮೋಸಗಳರಿಯದ ಕುರುಬರು || ೧೪ ||

ಸುರಿಯುವ ಮಳೆಯಲಿ ನೆನೆಯುವ ಕುರುಬರು
ಕೊರೆಯುವ ಚಳಿಯಲಿ ಬಿರಿವವರು
ಕೊರೆಯುವ ಚಳಿಯಲಿ ಬಿರಿವವರು
ಉರಿ ಬಿಸಿಲಲಿ ಕರಿಯುವ ಧೀರರು || ೧೫ ||

ಅಡವಿಯ ಹೊಡೆಹುಲ್ಲ ಮೇಯಿಸುವವರು
ಮಡುವಿನ ತಿಳಿನೀರ ಕುಡಿಸವರು
ಮಡುವಿನ ತಿಳಿನೀರ ಕುಡಿಸವರು
ಯಾರೊಡನೆ ಜಗಳ ಮಾಡದಂಥವರು || ೧೬ ||

ಕಾಡಿನ ಬಂಟರು ಮುಗಿಲಿನ ನೆಂಟರು
ಹುಲಿ ಚಿರ್ಚಗಳನ್ನಿರಿಯುವವರು
ಹುಲಿ ಚಿರ್ಚಗಳನ್ನಿರಿಯುವವರು
ತೋಳಗಳ ಬೆದರಿಸಿ ಅಟ್ಟುವವರು || ೧೭ ||

ಸತ್ತಕುರಿಗಳನು ಹೊತ್ತು ಮಾರುವೆವು
ಮತ್ತೆ ಮಾಂಸ ಸೇವಿಸದವರು

ಮತ್ತೆ ಮಾಂಸ ಸೇವಿಸದವರು
ಚಿತ್ತ ಜಾರಿಯನು ನೆನವವರು || ೧೮ ||

ಇಂತಹ ಉದಾರ ಗುಣದವರೆಮಗೆ
ಹಾಲುಮತದವರು ಎನ್ನುವರು
ಹಾಲುಮತದವರು ಎನ್ನುವರು
ನಮ್ಮ ಕುಲಕೆ ಹಾಲುಮತ ಎನ್ನುವರು || ೧೯ ||

ಇಂತಹ ಉದಾರ ಗುಣದವರೆಮಗೆ
ದಡ್ಡ ಮಡ್ಡರೆಂದು ಜರಿಯುವರು
ದಡ್ಡ ಮಡ್ಡರೆಂದು ಜರಿಯುವರು
ನಮ್ಮ ಹೊಲಬೆನೆ ಅರಿಯದ ಗಾವಿಲರು || ೨೦ ||

ಕುರುಬಗೆ ಹೂವನು ಕೊಟ್ಟರೆ ಅದನವ
ಕುಂಡಿಯೊಳಿಟ್ಟೆಂತೆನ್ನುವರು
ಕುಂಡಿಯೊಳಿಟ್ಟೆಂತೆನ್ನುವರು
ನಿಜ ಗುಟ್ಟನು ತಿಳಿಯದ ಪಾಮರನು"[೪] || ೨೧ ||

ಈ ಹಾಡಿನಲ್ಲಿ ಹಾಲುಮತ ಸಮುದಾಯ 'ಕಟ್ಟಿಕೊಂಡ' ಮತ್ತು 'ಆರೋಪಿಸಿದ' ಎರಡು ಚಿತ್ರಣಗಳು ನಮಗೆ ಸಿಗುತ್ತವೆ. ಆರೋಪಿಸಿದ ಆರೋಪವನ್ನು ಅಲ್ಲಗಳೆಯುವುದಕ್ಕಾಗಿಯೇ ಈ ಹಾಡನ್ನು ಹಾಡಿದ್ದಾರೆ. ಇದು 'ಸಹಜ ಅನನ್ಯತೆ' ಅಲ್ಲ. 'ಕೃತಕ ಅನನ್ಯತೆ'. 'ಕೃತಕ' ಅನ್ನುವ ಪದವನ್ನು ಇಲ್ಲಿ ಬಹಳ ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಅಂದರೆ ಇನ್ನೊಂದು ಸಮುದಾಯಕ್ಕೆ ತೋರ್ಪಡಿಸಿಕೊಳ್ಳುವುದಕ್ಕಾಗಿಯೇ ಸೃಷ್ಟಿಸಿಕೊಂಡ ಅನನ್ಯತೆಯಲ್ಲ. ಅದನ್ನು ಅಲ್ಲಗಳೆಯುವುದಕ್ಕಾಗಿ ಸೃಷ್ಟಿಸಿಕೊಂಡ ಅನನ್ಯತೆಯಂದರ್ಥ. ಇದಕ್ಕಾಗಿ ಸಹಜ ಅನನ್ಯತೆಯಲ್ಲಿ ಸಿಗುವ ಚಾರಿತ್ರಿಕ ಅಂಶಗಳನ್ನು ಹೆಕ್ಕಿ ಆಯ್ಕೆ ಮಾಡಿಕೊಂಡು ತನಗೆ ಬೇಕಾದ ರೀತಿಯಲ್ಲಿ ರೂಪಿಸಿಕೊಂಡಿರುತ್ತದೆ. "ಸಮುದಾಯವೊಂದು ಗುರುತಿಸಿಕೊಂಡಿರದ ಆದರೆ ಹೊರಗಿನವರು ಕಂಡುಕೊಳ್ಳುವ ಅನನ್ಯತೆಯನ್ನು ಆ ಸಮುದಾಯದ 'ಸಹಜ ಅನನ್ಯತೆ' ಎಂದು ತಿಳಿಯಬಹುದು ಮತ್ತು ಸಹಜ ಅನನ್ಯತೆ ಎಂದು ಹೇಳುವಾಗಲೂ ಅದು ಸಮುದಾಯವೊಂದು ಅಪ್ರಯತ್ನಪೂರ್ವಕವಾಗಿ ಅಭಿವ್ಯಕ್ತಿಸುವ, ಬಳಸುವ ಅನನ್ಯತೆ ಎಂದು ಭಾವಿಸಬೇಕು. ನಿರ್ಮಿಸಿದ ಅಥವಾ ಸೃಷ್ಟಿಸಿದ ಅನನ್ಯತೆಗಳು (Contructed Identity) ಆಧುನಿಕ ಸಮಾಜದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸುತ್ತವೆ. ಒಂದು ಕಾಲದ ನಿರ್ಮಿಸಿದ ಅನನ್ಯತೆ ಇನ್ನೊಂದು ಕಾಲದ ಸಹಜ ಅನನ್ಯತೆ ಆಗಬಹುದು. ಆಡಳಿತಕ್ಕಾಗಿ ಮಾಡಿಕೊಂಡ ನಿರ್ದಿಷ್ಟ ವ್ಯಾಪ್ತಿಯ ಭೌಗೋಳಿಕ ಪ್ರದೇಶದಲ್ಲಿ ಪ್ರಾದೇಶಿಕ ಅನನ್ಯತೆಯ ಕಲ್ಪನೆ ನಿಜವಾಗಿಯೂ ಇರುವುದಿಲ್ಲ. ರಾಜಕೀಯ ಉದ್ದೇಶಗಳಿಗಾಗಿ ತೋರಿಕೆಯ ಅನನ್ಯತೆಯಾಗಿ ಸಾಮಾನ್ಯವಾಗಿ ಇಲ್ಲಿ ಹೇರಲಾಗುತ್ತದೆ."[೫] ಹಾಗಾಗಿ ಈ ಮೇಲಿನ ಹಾಡು ಹಾಲುಮತ ಸಮುದಾಯ ಕೃತಕ ಅನನ್ಯತೆಯನ್ನು ಬಿಂಬಿಸುವಂತದ್ದು ಎನ್ನಬಹುದು. ಆದರೆ ಅಭಿವ್ಯಕ್ತಿಸಿದ ಅಥವಾ ಕಟ್ಟಿಕೊಂಡ ಸಮುದಾಯಗಳು ಇದು 'ಕೃತಕ', ಇದು 'ಸಹಜ'ವೆನ್ನುವ ತಾರತಮ್ಯ ಭಾವನೆಯನ್ನು ಹೊಂದಿರುವುದಿಲ್ಲ. ಎರಡನ್ನು ಅಷ್ಟೇ ಸಮಾನವಾಗಿ ಪ್ರೀತಿಸುತ್ತವೆ ಮತ್ತು ಸಂರಕ್ಷಿಸಿಕೊಳ್ಳುತ್ತವೆ.

ಸಹಜ ಅನನ್ಯತೆಯ ಸ್ವರೂಪವನ್ನು ಇಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿಸಬಹುದು. 'ಜನಪದ ಹಾಲುಮತ ಮಹಾಕಾವ್ಯ' ಮತ್ತು 'ಮಾಳಿಂಗರಾಯನ ಕಾವ್ಯ'ಗಳಲ್ಲಿ ಸಿಗುವ ಕುಲ ಮೂಲ ಕಥನ ಗಳು ಮತ್ತು ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಹೇಳುವ ಕುಲ ಮೂಲ ಕಥನಗಳು ಸಹಜ ಅನನ್ಯತೆಗೆ ಉದಾಹರಣೆಗಳಾಗಿವೆ. ಸಾಂಸ್ಕೃತಿಕ ವೀರರ ಕುಲ ಮೂಲ ಕಥನಗಳ ವಸ್ತುಗಳು ಭಿನ್ನ ಆಯಾಮದಲ್ಲಿವೆ. ಬೀರಪ್ಪ ಭಂಡಾರ ಪಂಥವನ್ನು ಪ್ರತಿಪಾದನೆ ಮಾಡುವುದಕ್ಕೆ ಜನ್ಮ ತಾಳಿದರೆ 'ಶಾಂತ ಮುತ್ತಯ್ಯ', 'ವಿಭೂತಿ ಪಂಥ'ವನ್ನು ಪ್ರತಿಪಾದನೆ ಮಾಡುವುದಕ್ಕೆ ಜನ್ಮ ತಾಳುತ್ತಾನೆ. 'ಜನಪದ ಹಾಲುಮತ ಮಹಾಕಾವ್ಯ' ಮತ್ತು 'ಸಿದ್ಧಮಂಕ ಚರಿತೆ'ಗಳಲ್ಲಿ ಹಾಲುಮತಸ್ಥರ ಕುಲ ಮೂಲಗಳು ವಿರುದ್ಧ ದಿಕ್ಕಿನೆಡೆಗೆ ಚಲಿಸುತ್ತವೆ. ಆದರೆ 'ಆಶಯ' (MOTIF) ಮಾತ್ರ ಸಹಜವಾಗಿದೆ. ಸಹಜವಾದ ಆಶಯದಿಂದಲೇ ಜನಪದ ಕಾವ್ಯಗಳು ವಿಶಿಷ್ಟವಾಗಿ ನಿಲ್ಲುತ್ತವೆ.

ಸಮುದಾಯಗಳ ಅನನ್ಯತೆಯ ಹುಡುಕಾಟ ಸಮುದಾಯಗಳ ಸಂಘರ್ಷಗಳನ್ನು ಅಧ್ಯಯನ ಮಾಡುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಆ ಸಂಘರ್ಷಗಳು ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ವ್ಯಕ್ತಿಗತದಿಂದ ಕೂಡಿರಬಹುದು. ಒಂದು ಸಮುದಾಯ ಮತ್ತೊಂದು ಸಮುದಾಯವನ್ನು ಆರೋಪಿಸು ವುದು ಹಾಗೂ ಆರೋಪಿತ ಸಮುದಾಯ ಅದನ್ನು ಸಮರ್ಥಿಸಿಕೊಳ್ಳುವುದು ಸಂಘರ್ಷಗಳ ಆಯಾಮ ಗಳಂತೆ ಕಾಣಿಸುತ್ತದೆ. ಸಮುದಾಯಗಳ ಅನನ್ಯತೆಯನ್ನು ಕಟ್ಟಿಕೊಳ್ಳುವುದಕ್ಕೆ ತಾರತ್ಯಮ ಭಾವನೆಗಳೇ ಪ್ರಮುಖ ಕಾರಣಗಳಾಗಿವೆ. ಡಿ.ಆರ್. ನಾಗರಾಜ ಅವರು ಸಮುದಾಯಗಳು ಅನನ್ಯತೆಯನ್ನು ಕಟ್ಟಿಕೊಳ್ಳುವ ಸಂದರ್ಭವನ್ನು ಸರಿಯಾಗಿ ಗುರುತಿಸಿದ್ದಾರೆ. "ಸಂಸ್ಕೃತಿಯೊಂದರ ವಿಶಿಷ್ಟತೆಯ ಬಗ್ಗೆ ತನ್ನತನ ಮತ್ತು ಅನ್ಯತನದ ಬಗೆಗೆ ಯಾವಾಗ ಚಿಂತನೆ ಶುರುವಾಗುತ್ತದೆ ಎಂಬುದನ್ನು ವಿಶ್ಲೇಷಿಸುವುದು ತೀರಾ ಜಟಿಲವಾದ ಕೆಲಸ. ಸರ್ವಸಾಮಾನ್ಯವಾದ ತಾತ್ವಿಕ ಉತ್ತರ ಬಹುತೇಕ ಅಸಾಧ್ಯವಾದರೂ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಇದು ಪ್ರಾರಂಭವಾಗುವ ಲಕ್ಷಣಗಳನ್ನು ಮಾತ್ರ ಖಚಿತವಾಗಿ ಗುರುತಿಸಲು ಸಾಧ್ಯ. ಸಂಸ್ಕೃತಿಯೊಂದು, ಸಮಾಜವೊಂದು ತನ್ನ ಸ್ವಪ್ರತಿಮೆಯ ಬಗ್ಗೆ ತನ್ನನ್ನೆ ನಂಬಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಾಗ ಅನ್ಯಸಂಸ್ಕೃತಿಯ ಶಕ್ತಿ ತನ್ನನ್ನು ಸಂಪೂರ್ಣವಾಗಿ ಕರಗಿಸಿ ಹಾಕುವ ಸ್ಥಿತಿಯಲ್ಲಿ ಈ ರೀತಿಯ ವಿಶಿಷ್ಟ ರೂಪರೇಖೆಗಳ ಅನ್ವೇಷಣೆ ಪ್ರಾರಂಭವಾಗುತ್ತದೆ."[೬] ಇದು ಸಮುದಾಯಗಳ ಅನನ್ಯತೆಯ ಹುಡುಕಾಟವು ಹೌದು. ಸಮುದಾಯಗಳು ಅನನ್ಯತೆಯನ್ನು ಕಟ್ಟಿಕೊಳ್ಳುವ ಸಂದರ್ಭದ ಗುರುತು ಹೌದು. ಅಂದರೆ ಒಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯ ಮೇಲೆ ಪ್ರಭುತ್ವ ವನ್ನು ಹೇರಿರುವ ಸಂದರ್ಭದಲ್ಲಿ ತನ್ನತನವನ್ನು ಕಾಪಾಡಿಕೊಳ್ಳುವುದಕ್ಕಾಗಿಯೇ ಅನನ್ಯತೆಯನ್ನು ಸೃಷ್ಟಿಸಿಕೊಳ್ಳುತ್ತದೆ.

"ಕುರುಬರೆಂದು ಜರಿಯದಿರಣ್ಣಾ ಧರಿಯೊಳು ಭರದಿ
ಕುರುಬರೆಂದು ಜರಿಯದಿರಣ್ಣಾ ಧರಿಯೊಳು ಅವತಾರ ಪುರುಷರು"

“ಕುರುಬರಕಿಂತ ಮೊದಲ ಯಾವದಿಲ್ಲರಿ ತಿಳಿದು ನೋಡರಿ ನಿಮ್ಮ ಮನಕ
ಹೊಸ ವರ್ಷ ಉಗಾದಿ ಪಾಡ್ಯೇಕ ಹೊಲದಾಗ ಕುಂಟಿಯ ಹೂಡುದಕ
ಮೊದಲ ಕುರುಬನ ಕುಂಟಿ ಹೋಗಲೆಂದು ರೈತರು ಮಾಡ್ಯಾರೊ ನೇಮಣೂಕ
ಅಂಗಡಿ-ಮುಂಗಡಿ ವ್ಯವಹಾರ ಮೊದಲಿಗ ಕುರುಬನ ಬೋಣಗಿ ಆಗಬೇಕ
ಕುರುಬಗೌಡ ಬಂದು ಬೋಣಗಿ ಮಾಡಿದಾಗ ವ್ಯಾಪಾರದವರೊ ಮುಂದ

ಮೋಜು ಮಜಲಿಗೆ ಕುರುಬನು ಮೊದಲು ಗಣಪತಿಯ ಪೂಜೆಯ ಮಾಡಬೇಕ
ಕುರುಬಗೌಡ ಬಂದು ಪೂಜೆ ಮಾಡಿದಾಗ ಸಾಗಿ ಬಂತೊ ಮಜಲು ಮುಂದಕ

ಪಂಡಿತ ಜನರೆಲ್ಲ ಸೋಸಿ ತಗಿದಾರೊ ಒಂದು ತೂಕವನಾ
ಭವಿಷ್ಯ ಶಾಸ್ತ್ರದಾಗ ಹನ್ನೆರಡು ರಾಸಿಯೊಳಗೆ ಕುರುಬನಿರುವನು ಮೊದಲಿಗ
ಕುರುಬನ ಗುರ್ತು ಕುರಿಮರಿ ಇರುವದು ತಿಳಿದು ನೋಡರಿ ನಿಮ್ಮ
ಮನಕ”[೬]

ಕುರುಬರು ‘ನಿಂದನೆಗೆ’ ಒಳಗಾದ ನಂತರ ಹಾಡಿರುವ ಹಾಡಿದು. ಇಲ್ಲಿ ನಿಂದನೆಯನ್ನು ಅಲ್ಲಗಳೆಯುವುದರ ಮುಖಾಂತರ ತನ್ನತನವನ್ನು ಸಮರ್ಥಿಸಿಕೊಳ್ಳುವ ತಂತ್ರಗಾರಿಕೆ ಇದೆ. ಹಾಲುಮತ ಸಮುದಾಯ ಸದಾ ಪ್ರಧಾನ ಸಂಸ್ಕೃತಿಯ ನಿಂದನೆಗೆ ಒಳಗಾಗುತ್ತ ಬಂದಿದೆ. ಇವರ ಆರಾಧ್ಯ ದೈವ ಬೀರಪ್ಪನನ್ನು ಕ್ಷುದ್ರ ದೈವವೆಂದು ಮೈಲಾರಲಿಂಗನನ್ನು ‘ಒಳ್ಳಿಹ ಮೈಲಾರನ ಒಳಗೆಲ್ಲಾ ಸೆಣಬು’ ಮತ್ತು ‘ಕುರಬಗ ಹೂ ಕೊಟ್ಟರೆ ಕುಂಡ್ಯಾಗ ಮುಡಕೊಂಡ’ - ಮುಂತಾದ ನಿಂದನೆಯ ಚಿತ್ರಣಗಳು ಸಿಗುತ್ತವೆ. ಈಗಲೂ ದಡ್ಡತನಕ್ಕೆ ಕುರುಬನನ್ನು ಹೋಲಿಕೆ ಕೊಡಲಾಗುತ್ತದೆ. ಇದರಿಂದ ಬೇಸತ್ತ ಸಮುದಾಯ ತಮಗೆ ಸಮಾಜದಲ್ಲಿ, ಇತಿಹಾಸದ ಆಧಾರಗಳಲ್ಲಿ ಸಿಗುವ ಕುರುಹುಗಳನ್ನು ಸಾಕ್ಷಿಯಾಗಿ ಇಡುವುದರ ಮುಖಾಂತರ ತನ್ನ ಅನನ್ಯತೆಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಮುಂದಾಗುತ್ತದೆ. ಗಣಪತಿ ಪೂಜೆಯ ಜೊತೆಗೆ ತಮ್ಮನ್ನು ಸಮೀಕರಿಸಿಕೊಂಡಿರುವ ವಿಧಾನ ಭಿನ್ನವಾದದ್ದು. ನಾನು ದೈವಕ್ಕೆ ಸಮಾನ ಅನ್ನುವ ಮೂಲಭೂತವಾದದಂತೆ ಕಾಣಿಸುತ್ತದೆಯಾದರೂ ಮೂಲಭೂತ ಅಲ್ಲ. ಈ ವಿಧಾನಕ್ಕೂ ಭಯ ಬಿಳದೆ ಇದ್ದಾಗ -

“ನಿಂದೆ ಮಾಡಿದವರು ಮುಂದಿನ ಜನ್ಮಕ್ಕೆ ಹಂದಿ ಆಗುವರೆಂದನು”[೭]

ಎನ್ನುವುದರ ಮುಖಾಂತರ ಪ್ರಭುತ್ವ ಹೇರುವುದನ್ನು ತಡೆಯುವುದಕ್ಕೆ ಪ್ರಯತ್ನಪಡುತ್ತದೆ. ಹಾಲುಮತ ಸಮುದಾಯ ಪ್ರತಿರೋಧಕ್ಕಾಗಿ ಪಾಪ-ಪುಣ್ಯದ ಪರಿಕಲ್ಪನೆಯನ್ನು ಬಳಸಿಕೊಳ್ಳುವ ತಂತ್ರಗಾರಿಕೆ ಗಮನ ಸೆಳೆಯುತ್ತದೆ. ತಳ ಸಮುದಾಯಗಳು ಈ ಪರಿಕಲ್ಪನೆಗಳಿಗೆ ಅಂಟಿಕೊಂಡಿರುವುದಕ್ಕೆ ಹಲವು ಕಾರಣಗಳಿವೆ. ಪ್ರಮುಖ ಕಾರಣಗಳನ್ನು ಹೀಗೆ ಗುರುತಿಸಬಹುದು. ಒಂದು: ‘ಅಧಿಮ ಸಂಸ್ಕೃತಿ’ ಪ್ರತೀಕ. ಇದು ಆದಿಮ ಸಮುದಾಯಗಳಿಗೆ ಸಹಜವಾಗಿ ಬಂದಿರುತ್ತದೆ ಅಥವಾ ತನ್ನ ಬದುಕಿನಲ್ಲಿ ಜೀವವಾಡುತ್ತಿರುತ್ತದೆ. ಎರಡು; ಸೋತು ಶರಣಾದ ಅಂತಿಮ ಸ್ಥಿತಿಯಲ್ಲೂ ತನ್ನತನವನ್ನು ಉಳಿಸಿ ಕೊಳ್ಳುವ ಪ್ರಯತ್ನದಿಂದಾಗಿ - ಮುಂತಾದವು. ಎರಡನೆ ಕಾರಣವನ್ನು ಸ್ವಲ್ಪ ವಿಸ್ತರಿಸಬಹುದು. ತಳಸಮುದಾಯಗಳು ತಮ್ಮ ಪ್ರತಿರೋಧವನ್ನು ಕಾರ್ಯನಿರ್ವಹಿಸದೇ ಇದ್ದಾಗ ಮತ್ತು ಸಂಪೂರ್ಣವಾಗಿ

ಸ್ರೋತ ಸ್ಥಿತಿಯಲ್ಲಿರುವಾಗ ಪಾಪ-ಪುಣ್ಯ-ದೈವಗಳನ್ನು ಬಳಸಿಕೊಳ್ಳುತ್ತವೆ. ಹಾಗಾಗಿ ತಳಸಮುದಾಯಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳುವುದಕ್ಕೆ ಮಾಡುವ ಅಂತಿಮ ಹೋರಾಟದ ತಂತ್ರವಿದು.

"ಹೀಗೆ ಯಾವುದೇ ಒಂದು ಸಂಸ್ಕೃತಿ ಸಮೂಹ ಮತ್ತೊಂದರಿಂದ ಬೇರೆಯಾಗುವ ವಿಶಿಷ್ಟ ಅಂಶಗಳನ್ನು ದೃಢವಾಗಿ ಹೊಂದಿದ್ದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಪ್ರದರ್ಶಿಸಿದರೆ ಅದು ಸಮೂಹದ ಸಾಂಸ್ಕೃತಿಕ ಅನನ್ಯತೆ ಆಗುತ್ತದೆ. ತಮ್ಮನ್ನು ತಾವು ಗುರುತಿಸಿಕೊಳ್ಳುವ, ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸುವ ಆ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಒಂದು ಪ್ರಕ್ರಿಯೆಯೇ ಸಾಂಸ್ಕೃತಿಕ ಅನನ್ಯತೆ"[೧೦] ಅಂಬಳಿಕೆ ಹಿರಿಯಣ್ಣ ಅವರು ತನ್ನತನದ ಹುಡುಕಾಟವೇ ಅನನ್ಯತೆ ಎನ್ನುತ್ತಾರೆ. ಸಮುದಾಯ; ಸಂಸ್ಕೃತಿಯೊಂದು ತನ್ನ ಸ್ವಂತಿಕೆಯನ್ನು ಪ್ರದರ್ಶಿಸುವ ಮೂಲಕವೇ ತನ್ನ ಅಸ್ತಿತ್ವನ್ನು ಕಟ್ಟಿಕೊಳ್ಳುತ್ತಿರುತ್ತದೆ. ಇಲ್ಲಿ ಸಮುದಾಯಧ ಅನನ್ಯತೆ ಎನ್ನುವುದು ಡೊಳ್ಳಿನ ಹಾಡುಗಳ ಅನನ್ಯತೆಯು ಹೌದು. ಇದರಿಂದ ಅನನ್ಯತೆ ಎನ್ನುವುದು ಸಮುದಾಯಗಳಿಗೆ ಅನಿವಾರ್ಯ ಅಂಶವಾಗಿದೆ ಎನ್ನುವುದು ಖಚಿತವಾಗುತ್ತದೆ.

೫.೨.೧. ಕುಲಮೂಲ ಅನನ್ಯತೆಯ ಸ್ವವಿಮರ್ಶೆ

ಸಮುದಾಯವು ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಅನ್ಯ ಸಮುದಾಯ; ಸಂಸ್ಕೃತಿಗಳ ಜೊತೆ ಹೋರಾಟ ಮಾಡಿದಂತೆ ತನ ಸಮುದಾಯದೊಳಗೂ; ಸಂಸ್ಕೃತಿ ಯಲ್ಲೂ ಹೋರಾಟ ಮಾಡುತ್ತಿರುತ್ತದೆ.

"ಅನಾಚಾರದಿಂದಲಿ ಅಡವಿ ಕೂಡಿದರು |
ಹಿಡಿಯಲಿಲ್ಲೂ ಧರ್ಮದ ಗುರ್ತಾ |
ಹೆಂಡ ಕುಡಿಯುವರು ಖಂಡಾ ತಿನ್ನುವರು |
ಭಂಡರಿಬ್ಬ್ಯಾದರೊ ಬರಬರ್ತಾ ||
ಮದ್ಯಪಾನ ಮಾಡಿ ಮೆರೆದಾಡಿ |
ಉರದಾಡಿ ಮನುಜನ್ಮ ಕಳೆದರು ವ್ಯರ್ಥ
ಮೊದಲಿನ ಕುರುಬ ಕಂಬಳಿ ಬೀಸಲು
ಮಳಿಯು ಬಂದ ಆಗುವದಂತೆ ||
ನೂರ ವರ್ಷದಾಚೆ ಕಡೆ ಹೀಗೆ ಇತ್ತ
ಹಿಂದೆ ಆಗಿ ಹೋದ ಹಳೇ ಮಾತ ||[೧೧]

ತಮ್ಮ ಸಂಸ್ಕೃತಿಗೆ ಧಕ್ಕೆಯುಂಟು ಮಾಡುವ ಕುಲಸ್ಥರನ್ನು ಅಂದರೆ ಸಮುದಾಯದೊಳಗೆ ಇರುವ ಸಂಸ್ಕೃತಿ ಭ್ರಷ್ಟರನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಹಿಂದೆ ಇದ್ದ 'ಅಸ್ಮಿತೆ' ಇವತ್ತು ಕಣ್ಮರೆ ಆಗುತ್ತಿ ರುವುದು, ಮೌಲ್ಯಗಳು ಹಾಳಾಗಿಗುತ್ತಿರುವುದು ದುಷ್ಟ ಚಟಗಳಿಂದ ಅನ್ನುವುದು ಇವರ ನಂಬಿಕೆ. ತಮ್ಮ ಅನನ್ಯತೆಗೆ ಬದ್ಧರಾಗುವಂತೆ ಹೇಳುವ ತಂತ್ರವಿದು. ಇದು ಹಾಲುಮತ ಸಮುದಾಯದ;

ಡೊಳ್ಳಿನ ಹಾಡುಗಳಲ್ಲಿರುವ ವಿಶಿಷ್ಟತೆ. ಈ ವಿಶಿಷ್ಟತೆಯಿಂದಲೇ ಅನನ್ಯತೆಯನ್ನು ಕಟ್ಟಿಕೊಳ್ಳುವಲ್ಲಿ ಹಾಲುಮತ ಸಮುದಾಯ ಉಳಿದ ಸಮುದಾಯಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ.

“ಹೇ ಹಾಲುಮತ ಶೀಲಮತ ಅಂತಾರ
ಹಣೆ ಮ್ಯಾಲೆ ಭಂಡಾರ ಬಡುದಾರ
ಜಾತಿ ಭೇದ ಸುಳ್ಳೆ ಮಾಡುತಾರ
ದೇವರ ಮಾನ ಕಳಿತಾರ
ಎಂತವರು ಹುಟ್ಟಿ ಬಂದಾರ”[೧೨]

‘ಶೀಲಮತ’ ಎನ್ನುವ ಪರಿಕಲ್ಪನೆಯಲ್ಲಿ ಹಾಲುಮತ ಸಮುದಾಯದೊಳಗಿನ ಕೆಲವು ಕುಲಗಳು ಪ್ರತ್ಯೇಕ ಸಂಸ್ಕೃತಿಯನ್ನು ಕಟ್ಟಿಕೊಳ್ಳುವುದಕ್ಕೆ ಹಂಬಲಿಸುತ್ತವೆ. ‘ಪ್ರತಿ ಸಂಸ್ಕೃತಿ’ ನಿರ್ಮಾಣದ ಅಥವಾ “ಸಂಸ್ಕೃತೀಕರಣ”ದ ತುಡಿತವಿದು. ಕುಲಗಳ ಹಂಬಲಗಳನ್ನು ತಿಳಿಸುತ್ತದೆ. ಆದರೆ ಆ ಸಮುದಾಯ ದಲ್ಲಿರುವ ಮತ್ತು ತನ್ನತನವನ್ನು ಕಾಪಾಡಿಕೊಳ್ಳಬೇಕೆನ್ನುವ ಕುಲ; ವ್ಯಕ್ತಿಗಳು ಇದಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಹಾಗಾಗಿ ಈ ಕುಲಗಳು ಪೊಳ್ಳು ಆಧಾರಗಳನ್ನು ಸೃಷ್ಟಿಸಿಕೊಂಡಿವೆಯೆಂದು ಪ್ರತಿರೋಧ ಮಾಡುತ್ತದೆ. ಜಾಗತೀಕರಣಕ್ಕೆ, ಬಂಡವಾಳಶಾಹಿ ವ್ಯವಸ್ಥೆಗೆ ಪ್ರತಿರೋಧವನ್ನು ಒಡ್ಡುವ ಮತ್ತು ಸಾಂಸ್ಕೃತಿಕ ಅನನ್ಯತೆಯ ಛಿದ್ರತೆಯನ್ನು ತಡೆಯುವ ತಂತ್ರಗಾರಿಕೆ ಇದು. ಸಮುದಾಯಗಳಿಗೆ ಈ ಬದ್ಧತೆ ಇವತ್ತಿನ ಜಾಗತೀಕರಣದಂತಹ ಪ್ರಭುತ್ವ ಶಕ್ತಿಗಳನ್ನು ಪ್ರತಿರೋಧಿಸಬೇಕೆಂದರೆ ಅವಶ್ಯಕವಾಗಿ ಬೇಕಾಗುತ್ತದೆ.

ಹೀಗೆ ಡೊಳ್ಳಿನ ಹಾಡುಗಳು; ಹಾಲುಮತ ಸಮುದಾಯ, ಸಾಮುದಾಯಿಕ ಸಮುದಾಯದ, ಅನನ್ಯತೆಯನ್ನು ಸಂರಕ್ಷಿಸಿಕೊಳ್ಳುವುದಕ್ಕೆ ಮತ್ತು ಪ್ರತಿಪಾದನೆ ಮಾಡುವುದಕ್ಕೆ ಹೋರಾಟ ಮಾಡಿವೆ.

೫..೩. ಹಾಡುಗಳ; ಹಾಡುಗಾರರ ಅನನ್ಯತೆ

ಹಾಲುಮತ ಸಂಸ್ಕೃತಿಯನ್ನು, ಧರ್ಮವನ್ನು ನಿಂದನೆ ಮಾಡಿದಂತೆ ಆ ಸಂಸ್ಕೃತಿಯ; ಸಮುದಾಯದ ಅಭಿವ್ಯಕ್ತಿಯನ್ನು ಅಂದರೆ ಸಮುದಾಯದ ಕಥನಗಳನ್ನು ಹಾಗೂ ಆ ಕಥನಗಳನ್ನು ಅಭಿವ್ಯಕ್ತಿಸುವ ವಕ್ತೃ ವರ್ಗವನ್ನು ಪ್ರಧಾನ ಸಂಸ್ಕೃತಿಗಳು ನಿಂದನೆ ಮಾಡಿರುವ ಚಿತ್ರಣಗಳು ಸಿಗುತ್ತವೆ. ತಳ ಸಮುದಾಯಗಳಿಗೆ ಚರಿತ್ರೆಯನ್ನು ಅಥವಾ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಳ್ಳುವುದಕ್ಕೆ ಇರುವ ಆಕರಗಳೆಂದರೆ ಮೌಖಿಕ ಕಥನಗಳು. ಆ ಕಥನಗಳಿಗೆ ವಕ್ತೃಗಳೇ ಜೀವಂತಿಕೆ. ವಕ್ತೃಗಳನ್ನು ನಿಂದಿಸುವು ದೆಂದರೆ ಆ ಕಥನಗಳ ಸಂಬಂಧವನ್ನು ಕಳಚಿಸುವುದೆಂದಾರ್ಥ. ಅಂದರೆ ಕಥನಗಳಿಗೆ ಇರುವ ಜೀವಂತಿಕೆಯನ್ನು ಇಲ್ಲವಾಗಿಸುವುದು. ಆ ಮುಖಾಂತರ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಶೂನ್ಯಗೊಳಿಸುವುದು. ಇದು ಪ್ರಧಾನ ಸಂಸ್ಕೃತಿ ತನ್ನ ಸಾಂಸ್ಕೃತಿಕ ಯಜಮಾನಿಕೆಯನ್ನು ಹೇರುವುದಕ್ಕೆ ರೂಢಿಸಿಕೊಂಡ ಸೂಕ್ಷ್ಮ ರಾಜಕಾರಣ. ಇಂತಹ ಪ್ರಯತ್ನಗಳು ಡೊಳ್ಳಿನ ಹಾಡುಗಳ ಮತ್ತು ಕಲಾವಿದರ ಮೇಲೆ ಸಾಕಷ್ಟು ಆಗಿವೆ. ಆದರೆ ನಿಂದನೆ ಮಾಡಿದ ಉಲ್ಲೇಖಗಳು ಸಿಗುವುದು ಕಡಿಮೆ. ನಿಂದನೆಗೆ ಉತ್ತರಿಸಿದ ಕಥನಗಳು ಸಿಗುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಡೊಳ್ಳಿನ ಹಾಡುಗಳು ತನ್ನ ಸಂವೇದನೆಯನ್ನು ಮಾತ್ರ ತನ್ನಲ್ಲಿಟ್ಟುಕೊಂಡು ಬಂದಿವೆ.

“ಕುರುಬರ್ನಾಂತ ಅಲ್ಲಗಳೆಯದೆ ಪ್ರೇಮದಿಂದ ಇರಬೇಕ ಚಿತ್ತ
ಯಾತರ ಹಾಡಂತ ಏಳಬ್ಯಾಡರಿ ಸೆರಗ ಒಡ್ಡಿ ಬೇಡುವೆ ನಿಂತಾ
ಹಾಳರಗಳಿ ಹಾಡುವುದಿಲ್ಲ ಪುರಾಣದೊಳಗಿನ ಸವಿಮಾತಾ
ಸತ್ಯ ಸದಾಚಾರ ಭಕ್ತಿ ಸದ್ಗುಣ ಪೂರ್ತಿಯಾದ ನಮ್ಮ ಹಾಲಮತಾ”

ನಮಗೂ ಒಂದು ಧರ್ಮ (ಹಾಲುಮತ) ಇದೆ. ಅದು ಧರ್ಮದಂತೆ ಪುರಾಣ ಕೇಂದ್ರಿತವಾದದ್ದು. ಜೊತೆಗೆ ಸತ್ಯ ಸದಾಚಾರ, ಭಕ್ತಿ ಸದ್ಗುಣಗಳಿಂದ ಕೂಡಿದೆ. ಹಾಳರಗಳಿ ಅಂತೂ ಖಂಡಿತ ಅಲ್ಲ. ಹಾಗಾಗಿ ನೀವು ಪ್ರೀತಿಯಿಂದ ಕೇಳಿ ಎನ್ನುವುದರ ಮುಖಾಂತರ ತರ್ಕಕ್ಕೆ ಹಚ್ಚಿದ್ದಾರೆ. ಕೇಳಿಸಿ ವಾಸ್ತವತೆಯನ್ನು ಅರಿವುಗೊಳಿಸುವುದರ ಮುಖಾಂತರ ಪ್ರಭುತ್ವವನ್ನು ಹೊಡೆದು ಹಾಕುವ ತಂತ್ರಗಾರಿಕೆ ಇದು. ಕನಕದಾಸರು ವೈದಿಕ ಧರ್ಮಕ್ಕೆ ಅಥವಾ ದಾಸಪಂಥದ ವೈದಿಕ ನಾಯಕರಿಗೆ ತನ್ನ ಪ್ರತಿಭೆ, ಜ್ಞಾನವನ್ನು ಗುರುತುಪಡಿಸಿದ್ದು ಈ ನೆಲೆಯಲ್ಲಿಯೇ. ಈ ತಂತ್ರಗಾರಿಕೆಯನ್ನು ಕಿ.ರಂ. ನಾಗರಾಜ ಅವರ ‘ಕಾಲಜ್ಞಾನಿ’ ನಾಟಕ ಬಹಳ ಅರ್ಥಗರ್ಭಿತವಾಗಿ ಕಟ್ಟಿಕೊಡುತ್ತದೆ.

ಹಾಡುಗಳನ್ನು ಹಾಡುವುದಕ್ಕೆ ಕಲಾವಿದ ಬಳಗ ಒಂದು ಮಾದರಿಯನ್ನು ರೂಪಿಸಿಕೊಂಡಿದೆ. ಇದನ್ನು ಹಾಡುಗಳ ಕಲಾಭಿವ್ಯಕ್ತಿ ಸಾಂದರ್ಭಿಕ ಅನನ್ಯತೆ ಎನ್ನಬಹುದು. ಅಂದರೆ ಹಾಡನ್ನು ಹಾಡುವುದಕ್ಕೆ ಆರಂಭಿಸುವ ಮುಂಚೆ ‘ವಾಲಗ’ ಮಾಡಬೇಕು. ಆರಂಭದಲ್ಲಿ ಶಿವನನ್ನು ಕರೆಯುವುದರ ಮುಖಾಂತರ ಆರಂಭಿಸಬೇಕು. ‘ಶಿವನೇ ನಮ್ಮಯ ದೇವರು ಬಂದಾವ್ ಬನ್ನಿರೇ’ ಎನ್ನುವುದರಿಂದಲೆ ಶುರು ಮಾಡಬೇಕು, ಈ ಪಲ್ಲವಿ ಡೊಳ್ಳಿನ ಹಾಡುಗಳಿಗೆ ಇರುವ ವಿಶಿಷ್ಟ ಅನನ್ಯತೆ. ಬೇರೆ ಜನಪದ ಗೀತೆಗಳಲ್ಲಿ ಇದನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಆರಂಭಿಕ ಕಾಲದ ಸಂಗ್ರಹಕಾರರು; ವಿದ್ವಾಂಸರು ಈ ಪಲ್ಲವಿಯನ್ನು ಆಧಾರವಾಗಿಟ್ಟುಕೊಂಡು ಡೊಳ್ಳಿನ ಹಾಡುಗಳನ್ನು ಗುರುತಿಸಿದರು. ಈ ಪಲ್ಲವಿಯನ್ನು ಗುರುತಿಸಿಕೊಳ್ಳುವವರೆಗೂ ಈ ಹಾಡುಗಳನ್ನು ಲಾವಣಿಗಳೆಂದು ಗ್ರಹಿಸಿದ್ದರು. ಹೀಗೇ ಹಾಡುವ ವರ್ಗ ಕೆಲವು ನಿಯಮಗಳನ್ನು, ಚೌಕಟ್ಟನ್ನು ಉದ್ದೇಶವನ್ನು ಹಾಕಿಕೊಂಡಿದೆ. ಅವುಗಳನ್ನು ಮೀರಿದರೆ ಇದು ಸಹಿಸುವುದಿಲ್ಲ.

“ಕುಣಿಯ ಬೇಡೋ ನೀ ಕೋತಿಯ ಹಂಗ
ಉಮದಿ ಮಾನಸಿದ್ಧನ ಡೊಳ್ಳಿನ ಅಜ್ಞಾನಿ ಗ್ಯಾಂಗ್
ಕುಣಿತ ತಪ್ಪಿದರೆ ಹಚ್ಚೆತೇವೊ... ದಶರಾಗ |”[೧೪]

“ನಾಲ್ಕು ದುಡ್ಡಿಗೊಬ್ಬ ಬೇಕು ಅನ್ನುವರ ತರುವಿರೆಪ್ಪ ಮಾಡಿಕೊಂಡು
ಕೇಳವರ್ಯಾರಿಲ್ಲ ಹಾಳಹರಟೆ ಹೊಡೆದು ವ್ಯಾಳೆಗಳೆದು ಹೋಗತೀರಿ ವ್ಯರ್ಥ”[೧೫]

ಕುಣಿತದ ಚೌಕಟ್ಟನ್ನು ಮೀರಿ ಕುಣಿಯುವವರನ್ನು, ವ್ಯರ್ಥವಾಗಿ ಹಾಡಿ ಕೇಳುಗರನ್ನು; ಕೇಳುಗರ ಸಮಯವನ್ನು ವ್ಯರ್ಥ ಮಾಡುವ ಕಲಾವಿದರನ್ನು ಡೊಳ್ಳಿನ ಹಾಡುಗಳು ನಿಂದಿಸಿವೆ. ತಮ್ಮ ಅನನ್ಯತೆ ಯನ್ನು ಕಾಪಾಡಿಕೊಳ್ಳುವುದಕ್ಕೆ ಕಲಾವಿದರಿಗೆ ಕೊಡುವ ಎಚ್ಚರಿಕೆ ಇದು. ಹೀಗೆ ಡೊಳ್ಳಿನ ಹಾಡುಗಳು ಅಭಿವ್ಯಕ್ತಿ ಶೈಲಿ, ಉದ್ದೇಶ, ವಸ್ತು ಸಂದರ್ಭಗಳ ಅನನ್ಯತೆಯನ್ನು ಕಟ್ಟಿಕೊಂಡಿವೆ. ಹಾಗೂ ಉಳಿಸಿಕೊಳ್ಳುವುದಕ್ಕೆ ಹಂಬಲಿಸಿವೆ.

[illegible]

[illegible]

[illegible]

[illegible]

[illegible]

[illegible]

೫.೪. ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅನನ್ಯತೆಯ ತಾತ್ವಿಕತೆ

ಡೊಳ್ಳಿನ ಹಾಡುಗಳ ಹುಟ್ಟು ಅನನ್ಯತೆಯ ನೆಲೆಯುಳ್ಳದ್ದು. ಚರಿತ್ರೆಯಲ್ಲಿ ಅನುಭವಿಸಿದ ಸಾಂಸ್ಕೃತಿಕ ಒತ್ತಡಗಳಿಂದಲೇ ಇಂಥ ಹಾಡುಗಳು ಜನ್ಮ ತಾಳಿರುವುದನ್ನು ಅಲ್ಲಗಳೆಯುವಂತಿಲ್ಲ. ಸಿ.ಎನ್. ರಾಮಚಂದ್ರನ್ ಅವರು ಹೇಳುವಂತೆ "ಎರಡು ಅಸಮಾನ ಸಂಸ್ಕೃತಿಗಳು ಎದುರಾದ ಸಂದರ್ಭದಲ್ಲಿ ಅಧಿಕಾರದ ನೆಲೆಯಲ್ಲಿ ದುರ್ಬಲವಾಗಿರುವ ಸಂಸ್ಕೃತಿ ತನ್ನ ಅನನ್ಯತೆಯನ್ನು ಸ್ಥಾಪಿಸಲು ಬಗೆಬಗೆಯಾಗಿ ಹೆಣಗಾಡುತ್ತದೆ. ಇಂಥ ರಕ್ಷಣಾತ್ಮಕ ಪ್ರಯತ್ನಗಳಲ್ಲಿ ಮುಖ್ಯವಾದದ್ದು. ತನ್ನ ಬೇರುಗಳನ್ನು ಮರಳಿ ಗುರುತಿಸುವ ಮತ್ತು ರಕ್ಷಿಸುವ ಪ್ರಜ್ಞಾಪೂರ್ವಕ ಕ್ರಿಯೆ."[೧೧೬] ಈ ಹಿನ್ನೆಲೆಯಲ್ಲಿ ಹಾಲುಮತ ಸಮುದಾಯ ತನ್ನ ಚಾರಿತ್ರಿಕ ಬೇರುಗಳನ್ನು ಬಿಂಬಿಸುವ ಉದ್ದೇಶದಿಂದ ಡೊಳ್ಳಿನ ಹಾಡುಗಳನ್ನು ರಚಿಸಿಕೊಂಡಿದೆ. ಈ ಹಾಡುಗಳ ವಿಧಾನ ಇತರ ಸಮುದಾಯಗಳ ಕಥನಗಳಿಗಿಂತ ಭಿನ್ನವಾಗಿದೆ. ಇವುಗಳಲ್ಲಿ ಪ್ರತಿರೋಧವಿದೆ. ಸಮರ್ಥನೆ ಇದೆ. ಅಲ್ಲಗಳೆಯುವಿಕೆ ಇದೆ. ತನ್ನದೇ ಶ್ರೇಷ್ಟವೆಂದು ಮೆರೆಯುವಿಕೆ ಇದೆ. ಇದು ಮೂಲಭೂತ ವಾದದಂತೆ ಕಾಣಿಸುತ್ತದೆ. ಅಪಾದನೆಯನ್ನು ಸರಿಪಡಿಸಿಕೊಳ್ಳುವ ತಂತ್ರಗಾರಿಕೆಯೂ ಇದೆ. ಹೀಗೆ ಸರಿಪಡಿಸಿಕೊಳ್ಳುವ ತಂತ್ರಗಾರಿಕೆ ಸಂಸ್ಕೃತೀಕರಣದ ಆಯಾಮವನ್ನು ಬಿಂಬಿಸುತ್ತದೆ.

"ಹುಂಬ ಕುರುಬರಂತ ಅನಿಸಿಕೊಳ್ಳುವುದು | ನಮ್ಮ ಪಾಲಿಗಿದು ಬಿಟ್ಟಿಲ್ಲ
ಜ್ಞಾನವಂತರ ಸಂಗ ಮಾಡಿ ನಾವು | ಶ್ಯಾಣೆರಾಗಬೇಕರಿ ಮೊದಲ
ಅದದ್ದಾಗಿ ಹೋತು ಇನ್ನಮ್ಯಾಲೆ | ಚಲೋಹಾದಿ ಹಿಡಿಯಬೇಕ ನಾವೆಲ್ಲಾ"[೧೧೭]

ಕಲ್ಪಿತ ಅನನ್ಯತೆ; ಅಪಾದನೆಯನ್ನು ಒಪ್ಪಿಕೊಂಡು ಬದಲಾಗುವುದಕ್ಕೆ ಮುಂದಾಗಿರುವ ಚಿತ್ರಣ ಇಲ್ಲಿದೆ. ತಳಸಮುದಾಯಗಳ ತಾಕಲಾಟ, ತುಡಿತವಿದು. ಇದನ್ನೇ ಎಂ.ಎನ್. ಶ್ರೀನಿವಾಸ ಅವರು ಸಂಸ್ಕೃತೀಕರಣ ಎನ್ನುತ್ತಾರೆ. ತನ್ನ ಅನನ್ಯತೆಯ ಸಮರ್ಥನೆ ಮತ್ತು ಪ್ರತಿರೋಧದ ಸಂದರ್ಭದಲ್ಲಿ ತುಂಬಾ ಭಾವನಾತ್ಮಕವಾಗಿ ತನ್ನ ಚರಿತ್ರೆಯನ್ನು ಕಟ್ಟಿಕೊಂಡೆ ಸಮುದಾಯ ಅಕ್ರೋಶತೆಯನ್ನು ಬಿಂಬಿಸುತ್ತದೆ.

"ಕುರುಬನಕ್ಕಿಂತ ಮತ್ತೊಂದು ಹೆಚ್ಚಿನದು
ಯಾವುದಿಲ್ಲ ಕುಂತ ಕೇಳರಿ
....
ಕುರುಬಗೊಂಡನ ವಿಚಾರ ಕೇಳರಿ ನೀವಿನ್ನಾ
ಎಂಬತ್ತ ಕೋಟಿ ಜೀವರಾಶಿಯಲಿ ಕುರುಬ ದೊಡ್ಡವನೋ"[೧೧೮]

ಹೀಗೆ ಕುಲ ಸಂರಕ್ಷಣೆಯ ಸಂದರ್ಭದಲ್ಲಿ ಮೂಲಭೂತವಾದದ ರೂಪ ತಾಳಿದೆ. ಆದರೆ ಮಾನವ ಕುಲವನ್ನು ಸಮರ್ಥನೆ ಮಾಡುವಾಗ ತನ್ನತನವನ್ನು ಮರೆತು ಬಿಡುತ್ತದೆ. 'ಕುಲ ಕುಲವೆಂದು ಬಡಿದಾಡದಿರಯ್ಯ' ಎನ್ನುವ ಕನಕದಾಸರ ಮನುಕುಲದ ತತ್ವದ ರೀತಿಯಲ್ಲಿ ಸೌಹಾರ್ದತೆಯತ್ತ ತನ್ನ ಹೆಜ್ಜೆ ಹಾಕಿ ಬಿಡುತ್ತದೆ. ಕುಲ ಸ್ಥಾಪನೆಯಲ್ಲಿ 'ಮತಿಯವಾದಿ'ಗಳಂತೆ ಕಾಣಿಸಿಕೊಂಡರೆ ಮಾನವ

ಕುಲಸ್ಥಾಪನೆಯ ಸಂದರ್ಭದಲ್ಲಿ ಮತಾತೀತವಾದಿಗಳಾಗಿ ನಿಂತು ಬಿಡುತ್ತವೆ. ಇದು ಡೊಳ್ಳಿನ ಹಾಡುಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ಅನನ್ಯತೆಯ ವಿಶಿಷ್ಟ ಗುಣ.

ಈ ಹಾಡುಗಳು ತಳಸಮುದಾಯಗಳು ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಳ್ಳುವುದಕ್ಕೆ ಅಥವಾ ಕುಲಧರ್ಮವನ್ನು; ಚರಿತ್ರೆಯನ್ನು ಕಾಪಾಡಿಕೊಳ್ಳುವುದಕ್ಕೆ ಮಾಡಿದ ಹೋರಾಟಗಳನ್ನು ಮತ್ತು ಅನುಭವಿಸಿದ ತಾಕಲಾಟಗಳನ್ನು ಅಧ್ಯಯನ ಮಾಡುವುದಕ್ಕೆ ಬಹುಮುಖ್ಯ ಆಕರಗಳಾಗಿವೆ.

ಜಾಗತೀಕರಣದ ಪ್ರಭಾವದಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ಬೆನ್ನು ಹತ್ತಿದ ಈ ಹಾಡುಗಳು ತನ್ನ ಸಾಂಸ್ಕೃತಿಕ ಅನನ್ಯತೆಯ ಛಿದ್ರೀಕರಣವಾಗುತ್ತಿವೆ ವಿಸ್ಮೃತಿಯ ಹಂತದಲ್ಲಿವೆ. ವೈಯಕ್ತಿಕ ಮತ್ತು ಕುಲ ಸಂಘರ್ಷಗಳೇ ಪ್ರಧಾನವಾಗುತ್ತಿವೆ. ಪ್ರಸ್ತುತ ಜೀವನ ವಿಧಾನವನ್ನು ಹೋಲಿಸಿಕೊಂಡರೆ ಪುರಾಣ ಮಾರ್ಗಗಳ ಜೀವನ ವಿಧಾನ ಹೆಚ್ಚು ಅರ್ಥಗರ್ಭಿತದಿಂದ ಕೂಡಿದೆ. "ಏಕೆಂದರೆ ಎಲ್ಲಾ ಪುರಾಣಗಳಿಗೂ ಅಂತಿಮವಾಗಿ ನೀತಿ ರೂಪದ ಕಥೆಗಳೂ ಹೌದಾದ್ದರಿಂದ ಪುರಾಣೀಕರಣದ ಈ ಕ್ರಿಯೆ ನೀತಿಕರಣ ಆಗಿರುತ್ತದೆ. "ಮಾನವ ದೌರ್ಬಲ್ಯಗಳ ಬಗ್ಗೆ ಪುರಾಣ ಪ್ರಜ್ಞೆಯ ಸಮುದಾಯಗಳಿಗಿರುವ ಅರಿವು ಇತಿಹಾಸ ಆಧುನಿಕ ಸಮಾಜಗಳಿಗಿಲ್ಲ".[೧೯] ಈ ನೆಲೆಯಲ್ಲಿ ಪುರಾಣಗಳ ಕಲ್ಪನೆಯನ್ನು ಈಗ ಯಾವ ನೆಲೆಯಲ್ಲಿ ಉಳಿಸಿಕೊಳ್ಳಬೇಕೆನ್ನುವುದರ ಬಗ್ಗೆ ಚಿಂತಿಸಬೇಕಾಗಿದೆ. ಈ ನೆಲೆಯಲ್ಲಿ ಸಮುದಾಯಗಳನ್ನು ಕುರಿತು ಚಿಂತಿಸುವರು ಸಮುದಾಯಗಳ ಪುನರ್‌ವ್ಯಾಖ್ಯಾನಕ್ಕೆ ಒಳಗು ಮಾಡಬೇಕಾಗಿದೆ. ಸಮುದಾಯಗಳು ಕಟ್ಟಿಕೊಳ್ಳಬೇಕಾದ ಹೊಸ ಅನನ್ಯತೆಗಳ ಪರ್ಯಾಯವನ್ನು ಸೂಚಿಸಬೇಕಾಗಿದೆ. ಅಂಬೇಡ್ಕರ್ ಸೂಚಿಸುವ ಶಿಕ್ಷಣ, ಸಂಘಟನೆ, ಹೋರಾಟವನ್ನು ಎಲ್ಲಾ ಕೆಳಜಾತಿಗಳ ಅನನ್ಯತೆಯಾಗಬೇಕು ಎಂದು ತಳಸಮುದಾಯಗಳಿಗೆ ಮನವರಿಕೆ ಮಾಡಿಕೊಡುವ ಅಗತ್ಯತೆ ಜೊತೆ ಜೊತೆ ಸಾಗಬೇಕಾಗಿದೆ.

ಅಡಿಟಿಪ್ಪಣಿಗಳು

೧. ಉಲ್ಲೇಖ : ಪುರುಷೋತ್ತಮ ಬಿಳಿಮಲೆ, **ಕೂಡುಕಟ್ಟು**, ಪು. ೫೮.

೨. ಉಲ್ಲೇಖ : ಅಂಬಳಿಕೆ ಹಿರಿಯಣ್ಣ, **ಸೈದ್ಧಾಂತಿಕ ಜಾನಪದ**, ಪು. ೭.

೩. ವಿವೇಕ ರೈ ಬಿ.ಎ., **ಗಿಳಿಸೊವೆ**, ಪು. ೩೬.

೪. **ಶಿವಾನಂದ ಗುಬ್ಬಣ್ಣವರ**, **ದೇವರ್ ಬಂದಾವ್ ಬನ್ನಿರೇ**, ಪು. ೧೦೮-೧೦೯.

೫. ವಿವೇಕ ರೈ ಬಿ.ಎ., **ಗಿಳಿಸೊವೆ**, ಪು. ೩೮.

೬. ನಾಗರಾಜ ಡಿ.ಆರ್., **ಸಾಹಿತ್ಯ ಕಥನ**, ಪು. ೨೩೫.

೭. ವಿರುಪಾಕ್ಷಗೌಡ ಕೆ., ಕೊಟ್ರಪ್ಪ ಮೇಟಿ (ಸಂ), ನಡಿಯಪ್ಪ ನಮ್ಮ ನಾಡಿಗೆ, ಪು. ೫೨.

೮. ಸುಂಕಾಪುರ ಎಂ.ಎಸ್., **ಜೀವನ ಜೋಕಾಲಿ ಭಾಗ-೬ ಡೊಳ್ಳಿನ ಹಾಡು**, ಪು. ೫೧.

೯. ಹಾಡಿದವರು; ಕುಮಾರಿ ಲಕ್ಷ್ಮಿ, ಅಥಣಿ.

೧೦. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಪು. ೦೧.

೧೧. ನೀಲಗಾರ ಎಂ.ಜಿ. (ಸಂ), ಜಾನಪದ ಜೇನು, ಪು. ೬೫.

೧೨. ಹಾಡಿದವರು; ಬೀರಣ್ಣ ಪೂಜಾರಿ ಮತ್ತು ಮುತ್ತಣ್ಣ, ಚಿಮ್ಮಲಗಿ ಕ್ಯಾಸೆಟ್, ಸವಾಲಿನ ಸರದಾರ ಭಾಗ-೧.

೧೩. ಸುಂಕಾಪುರ ಎಂ.ಎಸ್., ಜೀವನ ಜೋಕಾಲಿ ಭಾಗ-೬ ಡೊಳ್ಳಿನ ಹಾಡು, ಪು. ೦೭.

೧೪. ಹಾಡಿದವರು; ಶ್ರೀ ಇಂಗಳೇಶ್ವರ, ಪದ್ಮಿನಿ ಕ್ಯಾಸೆಟ್‌ಗಳು ಭಾಗ-೧೯.

೧೫. ಸುಂಕಾಪುರ ಎಂ.ಎಸ್., ಜೀವನ ಜೋಕಾಲಿ ಭಾಗ-೬ ಡೊಳ್ಳಿನ ಹಾಡು, ಪು. ೦೯.

೧೬. ಸಿ.ಎನ್. ರಾಮಚಂದ್ರನ್, ವಸಹತೋತ್ತರ ಚಿಂತನೆ, ಪು. ೭೨.

೧೭. ಪಂಚಮುಖಿ ಆರ್.ಎಸ್., **Folk Songs of Karnataka**, ಪು. ೨೬.

೧೮. ನಿಂಗಣ್ಣ ಸಣ್ಣಕ್ಕಿ, ಜಾನಪದ ಪ್ರಚಾರ, ಪು. ೩೦.

೧೯. ಆಶಿಸ ನಂದಿ, ಆಶಿಸನಂದಿ ವಿಚಾರ, ಪು. ೩೧.

• • •

ಅಧ್ಯಾಯ ಆರು

ಡೊಳ್ಳಿನ ಹಾಡುಗಳ ಲೋಕದೃಷ್ಟಿ

೬.೧. ಪ್ರವೇಶ

ನಮ್ಮ ಕಾಲದ ಎಲ್ಲ ಸಂಗತಿಗಳ ಕುರಿತು ನಮ್ಮದೇ ಆದ ತಿಳುವಳಿಕೆಯೊಂದಿರುತ್ತದೆ. ಇಂತಹ ತಿಳುವಳಿಕೆಯನ್ನು ನಮ್ಮ ಪರಂಪರೆ, ಸಂಸ್ಕೃತಿ, ನಾವು ಬದುಕುತ್ತಿರುವ ಪರಿಸರದಲ್ಲಿ ದೊರೆಯುವ ಜ್ಞಾನ ಇವುಗಳು ಪ್ರಭಾವಿಸುತ್ತಿರುತ್ತವೆ. ಆಕಾಶ ಕಾರ್ಯಗಳ ಕುರಿತು ವಿಜ್ಞಾನದ ಸಂಶೋಧನೆಯ ಮೂಲಕ ಬಂದ ತಿಳುವಳಿಕೆ ಒಂದಾದರೆ, ಅದೇ ಆಕಾಶ ಕಾರ್ಯಗಳ ಕುರಿತು ಜನಪದರಲ್ಲಿರುವ ನಂಬಿಕೆ, ಆಚರಣೆ, ಪಾರಂಪರಿಕ ಜ್ಞಾನದಲ್ಲಿ ಭಿನ್ನವಾದ ಲೋಕದೃಷ್ಟಿ ಇರಲಿಕ್ಕೆ ಸಾಧ್ಯ. ಲೋಕದ ಹುಟ್ಟನ್ನು ಡಾರ್ವಿನ್ ವಿಕಾಸವಾದದ ಮೂಲಕ ಸಮೀಕರಿಸಿದರೆ, ಜನಪದರು ತಮ್ಮ ಸಮುದಾಯದ ಮೂಲ ಪುರುಷನಿಂದ ಈ ಲೋಕ ಉದಯವಾಯಿತು ಎನ್ನುತ್ತ ತಮ್ಮನ್ನು ತಾವು ವಿಶ್ವಾತ್ಮಕಗೊಳಿಸಿಕೊಳ್ಳುತ್ತಾರೆ. ಹೀಗೆ ಜನಪದರು ಲೋಕದ ಸಂಗತಿಗಳ ಕುರಿತು ತಳೆಯುವ ನಿಲುವು ಹೊಂದಿರುವ ಜ್ಞಾನ ಲೋಕದ ಬಗೆಗಿನ ತಿಳುವಳಿಕೆಯನ್ನು ಅಗಾಧವಾಗಿ ವಿಸ್ತರಿಸುತ್ತದೆ.

ಹಾಲುಮತ ಸಮುದಾಯವು ಅಪಾರವಾದ ಸಾಂಸ್ಕೃತಿಕ ನೆನಪುಗಳನ್ನು ಉಳಿಸಿಕೊಂಡು, ಈಗಲೂ ಅದನ್ನು ತೀರಾ ವಿಶಿಷ್ಟವಾದ ಎಚ್ಚರದೊಂದಿಗೆ ವರ್ತಮಾನದಲ್ಲಿ ಮುಖಾಮುಖಿಯಾಗುತ್ತಿದೆ. ಹಾಲುಮತ ಸಮುದಾಯದು, ಎಂದು ಹೇಳುವ ಮೌಖಿಕ ಪರಂಪರೆಯನ್ನು ಪರಿಶೀಲಿಸಿದರೆ, ಈ ಸಮುದಾಯದ್ದೆ ಆದ ಒಂದು ಬಗೆಯ ಲೋಕದೃಷ್ಟಿಯ ವಿಶಿಷ್ಟ ಅಂಶಗಳು ಗಮನ ಸೆಳೆಯುತ್ತವೆ. ಆತ್ಯಂತಿಕವಾಗಿ ಹಾಲುಮತ ಸಮುದಾಯದ ಲೋಕದೃಷ್ಟಿ ಎಂದು ಕರೆಯುವುದೊಂದು ತೊಡಕು. ಹಲವು ಸಮುದಾಯಗಳು ಜೊತೆ ಜೊತೆಗೆ ಬೆರೆತು ಬದುಕುತ್ತಿರುವುದರಿಂದ, ಒಂದು ಸಮುದಾಯದ ಲೋಕದೃಷ್ಟಿಯಲ್ಲಿ ಹಲವು ಸಮುದಾಯದ ಜ್ಞಾನ ಪರಂಪರೆಯ ಪ್ರಭಾವಗಳನ್ನು, ಕೊಡುಕೊಳ್ಳುವಿಕೆಯನ್ನು ಅಲ್ಲಗಳೆಯುವಂತಿಲ್ಲ. ಇಂತಹ ಎಚ್ಚರದೊಂದಿಗೆ ಹಾಲುಮತಸ್ಥರು ಹಾಡುವ ಡೊಳ್ಳಿನ ಹಾಡುಗಳ ಮೂಲಕ ವ್ಯಕ್ತವಾಗುವ ಲೋಕದೃಷ್ಟಿಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

೬.೨. ಲೋಕದೃಷ್ಟಿ ಪರಿಕಲ್ಪನೆಯ ಚರ್ಚೆ

ಲೋಕದೃಷ್ಟಿ ಒಂದು ಪರಿಕಲ್ಪನೆಯಾಗಿ ಮಾನವಶಾಸ್ತ್ರೀಯ ಅಧ್ಯಯನಗಳಲ್ಲಿ ಹೆಚ್ಚು ಬಳಕೆಯಾಗುತ್ತಿರುವ ಪದ. ಅದೀಗ ಜಾನಪದ ಅಧ್ಯಯನಗಳನ್ನು ಪ್ರಭಾವಿಸುತ್ತದೆ. ಜನರು ತಾವು ಬದುಕುತ್ತಿರುವ ಲೋಕದ ಸಂಗತಿಗಳನ್ನು ಕುರಿತು ತಳೆಯುವ ನಿಲುವು. ಕಟ್ಟಿಕೊಂಡ ನಂಬಿಕೆಯನ್ನು

ಆಧರಿಸಿ ಈ ಪರಿಕಲ್ಪನೆ ಬೆಳೆದಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಜನರ ಲೋಕದಲ್ಲಿ ಅಪಾರ ವೈವಿಧ್ಯತೆಗಳಿವೆ. ನಾನಾ ಸ್ತರದ, ವಿವಿಧ ಪ್ರದೇಶದ, ವಿವಿಧ ಭಾಷೆ, ಸಂಸ್ಕೃತಿಯ ಇಂತಹ ಬಹುವಿಧದ ಜನರು ಲೋಕವನ್ನು ತನ್ನದೇ ಆದ ಗ್ರಹಿಕೆಯಲ್ಲಿ ಕಟ್ಟಿಕೊಳ್ಳುತ್ತಾರೆ. ಹೀಗೆ ಕಟ್ಟಿಕೊಳ್ಳುವಿಕೆಯನ್ನು ಅವರ ಅಭಿವ್ಯಕ್ತಿಯ ಕಲೆ, ಆಚರಣೆ, ಪುರಾಣ, ನಿತ್ಯದ ನಡವಳಿಕೆಯಲ್ಲಿ ತೋರ್ಪಡಿಸುತ್ತಿರುತ್ತಾರೆ. ಹಾಗಾಗಿ ಈ ಲೋಕದ ಸಂಗತಿಗಳು ಇಲ್ಲಿ ಬದುಕುತ್ತಿರುವ ಅಷ್ಟೂ ಜನರಿಂದ ಭಿನ್ನ ಅರ್ಥಕ್ಕೆ ಒಳಗಾಗುತ್ತಿರುತ್ತವೆ. ಇದನ್ನೇ 'ಜನದರ್ಶನ' ಅಂತಲೂ ಕರೆಯಬಹುದು. ಈ ಕುರಿತ ಒಟ್ಟು ಆಲೋಚನೆಯನ್ನು ಸ್ಥಾಯಿಯಾಗಿ ಹಿಡಿದಿಡುವ ಪದವಾಗಿ 'ಲೋಕದೃಷ್ಟಿ' (World View) ಎಂಬ ಪದವನ್ನು ಬಳಸಲಾಗುತ್ತಿದೆ.

ಲೋಕದೃಷ್ಟಿ, ಪರಿಕಲ್ಪನೆಯ ಮೂಲ ಅರ್ಥ ಬಳಕೆಯಾದ ಬಗೆ ಮತ್ತು ಅದರ ಬೆಳವಣಿಗೆಯ ವಿವಿಧ ಹಂತಗಳ ಸೂಕ್ಷ್ಮ ಪರಿಚಯ ಅಗತ್ಯ. ಇಂಗ್ಲೀಷ್‌ನ ಮೂಲ ಪದ 'World Conception' ಇದನ್ನು ಆಂಗ್ಲ ವಿದ್ವಾಂಸ ಸ್ಯಾಂಡರ್ ಎರ್ಡೆಸ್‌ನು (೧೯೮೪) 'ಲಾ ಜೋಸ್ ಅಮಿ' ಎಂಬ ಕತೆಗಾರನನ್ನು ಸಂದರ್ಶಿಸಿ ವಿಶ್ವದ ಹುಟ್ಟು ಮತ್ತು ಸಾವಿನ ಬಗೆಗೆ ಅವನ ಅಭಿಪ್ರಾಯವನ್ನು ಸಂಗ್ರಹಿಸಿ ಪ್ರಕಟಿಸುವಾಗ ಈ ಪದವನ್ನು ಬಳಸಿದ. ಅನಂತರ ಅಮೆರಿಕದ ಜಾನಪದ ವಿದ್ವಾಂಸ ಅಲೆನ್ ಡಂಡಸ್‌ರು ತಮ್ಮದೊಂದು ಲೇಖನದಲ್ಲಿ World View (೧೯೭೧) ಎಂಬ ಪದವನ್ನು ಬಳಸಿದರು. ಈತ ತನ್ನ ವಿಚಾರ ಮಂಡನೆಗೆ ಅಮೆರಿಕದ ಬಾಲಕರ ಜೀವನ ಕ್ರಮ, ಶುಭಾಷಯ ಪತ್ರ, ವಿದಾಯ ಹೇಳುವ ಮಂದಿಗಳ ವರ್ತನೆ ಜನರ ನುಡಿಗಟ್ಟನ್ನು ಬಳಸಿಕೊಂಡ. 'World View' ಪದಕ್ಕೆ ಲೋಕದೃಷ್ಟಿಯೇ ಸರಿಯಾದ ಸಂವಾದಿ ಪದ ಎಂದು ಕನ್ನಡದಲ್ಲಿ ಪುರುಷೋತ್ತಮ ಬಿಳಿಮಲೆ ಅವರು ಅಭಿಪ್ರಾಯ ಪಡುತ್ತಾರೆ.[೧]

ಅಂತೆಯೇ ಅವರು ಜಾಗತಿಕವಾಗಿ ಲೋಕದೃಷ್ಟಿಯನ್ನು ಕುರಿತ ಚಿಂತನೆಯ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ೧೯೨೨ರಲ್ಲಿ ಮಾಲಿನೋವಸ್ಕಿಯವರು "ಪ್ರತಿಯೊಂದು ಮಾನವನ ಸಂಸ್ಕೃತಿಯೂ ತನ್ನ ಸದಸ್ಯರಿಗೆ ಲೋಕದ ಬಗೆಗೆ ಒಂದು ನಿರ್ದಿಷ್ಟ ದರ್ಶನವನ್ನು ನೀಡುತ್ತದೆ ಎಂದಿದ್ದಾರೆ. ಇಲ್ಲಿ ಮಾಲಿನೋವಸ್ಕಿ ಬಳಸಿದ 'ದರ್ಶನ' ಎಂಬ ಪದವು ಜನರ ಕಾಣ್ಕೆಗೆ ಸಂಬಂಧಿಸಿದೆ. ಆ ಕಾರಣಕ್ಕೆ ಅದು ಸಂಸ್ಕೃತಿ ವಿಶಿಷ್ಟವೂ ಆಗುತ್ತದೆ. ಇನ್ನೊಬ್ಬ ಮಾನವಶಾಸ್ತ್ರಜ್ಞರಾದ ರಾಬರ್ಟ್ ರೆಡ್‌ಫಿಲ್ಡ್ ಪ್ರಕಾರ "ಲೋಕದ ಶೀಲ ಸ್ವಭಾವದ ಕುರಿತಾದ ಜನರ ನೋಟವೇ ಲೋಕದೃಷ್ಟಿ' ಎನ್ನುತ್ತಾರೆ. ಈ ನಿರ್ವಚನವನ್ನು ವಿಸ್ತರಿಸಿದ ಗರ್ಟಜನು 'ಲೋಕದೃಷ್ಟಿಯೆಂದರೆ ಜನರು ಪ್ರಕೃತಿಯ ಬಗೆಗೆ, ತಮ್ಮ ಸ್ವಂತದ ಬಗೆಗೆ ಮತ್ತು ಸಮಾಜದ ಬಗೆಗೆ ಪ್ರಕಟಿಸಿದ ನೈಜ ವಸ್ತು ಚಿತ್ರಗಳು' ಎಂದು ವಿವರಿಸಿದ್ದಾರೆ.[೨]

ಜಾಗತಿಕವಾಗಿ ೧೯೫೦ರ ನಂತರ 'ಲೋಕದೃಷ್ಟಿ' ಪರಿಕಲ್ಪನೆಯು ಖಚಿತ ಅರ್ಥಗಳಲ್ಲಿ ಬಳಸಲು ಪ್ರಾರಂಭಿಸಿದರು. ಈ ನೆಲೆಯ ಪ್ರಾರಂಭಿಕ ಹಂತದ ಚಾಲನೆ ಒದಗಿಸಿದವರೆಂದರೆ

ರಾಬರ್ಟ್ ರೆಡ್‌ಫೀಲ್ಡ್. ಆತನ 'ಲಿಟ್ಲಟ್ರಡಿಷನ್' 'ಗೇಟರ್ ಟ್ರಡಿಷನ್' ಎನ್ನುವ ಪರಿಕಲ್ಪನೆಗಳನ್ನು ವಿಸ್ತರಿಸುವಲ್ಲಿ ಲೋಕದೃಷ್ಟಿಯ ಭಿನ್ನ ಆಯಾಮಗಳನ್ನು ಗುರುತಿಸಿದನು. ಈತನ ನಂತರ ಸೋಲ್ ಟಾಕ್ಸ್, ಸಿ.ಜಿ. ಹೋಮ್ಸ್, ಚಾರ್ಲ್ಸ್ ಲೆಸ್ಲಿ, ಎ.ಎಂ. ಮಂಡಲ್‌ಸನ್ ಅಲನ್ ಡಂಡಸ್, ಮುಂತಾದ ಮಾನವಶಾಸ್ತ್ರಜ್ಞರು ಲೋಕದೃಷ್ಟಿಯ ಪರಿಕಲ್ಪನೆಯನ್ನು ನಿರ್ವಚಿಸಲು ಪ್ರಯತ್ನಿಸಿದ್ದಾರೆ. ಲೋಕದೃಷ್ಟಿ ಮತ್ತು ಲೋಕದೊಳಗಿನ ಜೀವರಾಶಿಗಳ ಉಗಮ, ವಿಕಾಸ, ಮನುಷ್ಯ ಮತ್ತು ಪ್ರಕೃತಿಯ ಸಂಬಂಧ 'ಜನ್ಮ', 'ಪುರ್ನಜನ್ಮ' ಮೊದಲಾದ ಘಟಕಗಳ ಸ್ವರೂಪ ಮತ್ತು ಅಂತರ್ ಸಂಬಂಧಗಳನ್ನು ಗಮನಿಸಿ ಈ ವಿದ್ವಾಂಸರು ಲೋಕದೃಷ್ಟಿಯ ಪರಿಕಲ್ಪನೆಯನ್ನು ನಿರ್ವಚಿಸಿದ್ದಾರೆ. ಜನಪದರ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳು ಕುಟುಂಬ ವ್ಯವಸ್ಥೆ ಬಂಧುತ್ವ, ವೃತ್ತಿ ಪರಂಪರೆ, ಆರ್ಥಿಕತೆ, ಆರಾಧನಾ ಪರಂಪರೆ, ಇವುಗಳ ಜೊತೆಗೆ ಲೋಕದೃಷ್ಟಿಯ ಪರಿಕಲ್ಪನೆಯು ಬೆಸೆದುಕೊಂಡಿರುವ ಬಗೆಯನ್ನು ಈ ವಿದ್ವಾಂಸರು ವಿಶ್ಲೇಷಿಸಿದ್ದಾರೆ. ಕೆಲವು ವಿದ್ವಾಂಸರು ಜನಪದರ ಬೌದ್ಧಿಕತೆಯನ್ನು, ಇನ್ನು ಕೆಲವು ವಿದ್ವಾಂಸರು ಜನಪದರ ಆಚರಣಾ ಸಂಬಂಧಿ ಆಶಯಗಳನ್ನು ಮತ್ತೆ ಕೆಲವರು ಒಂದು ನಿರ್ದಿಷ್ಟ ಭಾಷಾ ಸಮುದಾಯ ವ್ಯಕ್ತಪಡಿಸಿದ ಸಾಂಕೇತಿಕ ಸ್ವರೂಪಗಳನ್ನು ಲೋಕದೃಷ್ಟಿ ಎಂದು ಕರೆದರೆ, ಅಲೆನ್ ಡಂಡಸ್ 'ಜಾನಪದ ಲೋಕದ ಸಕಲ ವಿವರಗಳೂ ಲೋಕದೃಷ್ಟಿಯ ಪರಿಧಿಗೆ ಸೇರುತ್ತವೆ' ಎಂಬ ವಿಶಾಲ ವ್ಯಾಪ್ತಿಯ ಅರ್ಥವನ್ನು ಕಲ್ಪಿಸುತ್ತಾನೆ. ಲೋಕದೃಷ್ಟಿಗೆ ಈ ರೀತಿ ಪರಿಕಲ್ಪಿಸಿದ್ದು ಮಹತ್ವದ ಬೆಳವಣಿಗೆಯಾಗಿದೆ.

ಹೀಗೆ 'ಲೋಕದೃಷ್ಟಿ' ಕುರಿತ ಚಿಂತನೆಯ ಅನೇಕ ಆಯಾಮಗಳಲ್ಲಿ ವಿಸ್ತರಿಸಿಕೊಳ್ಳುತ್ತಾ ಬೆಳೆದು ಬಂದಿದೆ. ಕನ್ನಡದಲ್ಲಿ 'ಲೋಕದೃಷ್ಟಿ' ನೆಲೆಯ ಅಧ್ಯಯನಗಳು ನಡೆದಿವೆ. ಆದರೆ ಒಂದು ಪರಿಕಲ್ಪನೆಯಾಗಿ ಹೆಚ್ಚು ನಿಖರವಾಗಿ ಚರ್ಚೆಗೆ ಒಳಗಾಗಿಲ್ಲ. ಈಗಿನ ಅಧ್ಯಯನಗಳು 'ಲೋಕದೃಷ್ಟಿ' ಕುರಿತು ಆಲೋಚಿಸುತ್ತಿವೆ. ಜನಪದರ ಕುರಿತ ವಿಶ್ಲೇಷಣೆಗಳು ಬಹುಪಾಲು ಅವರ ಲೋಕದೃಷ್ಟಿಯ ಭಿನ್ನಧಾರೆಗಳನ್ನೇ ವಿವರಿಸಿವೆ. ಕನ್ನಡದಲ್ಲಿ ಜಿ.ಎಸ್. ಶಿವರುದ್ರಪ್ಪ, ಪುರುಷೋತ್ತಮ ಬಿಳಿಮಲೆ, ಬಿ.ಎ. ವಿವೇಕ ರೈ, ಹಿ.ಚಿ. ಬೋರಲಿಂಗಯ್ಯ, ಕಿಕ್ಕೇರಿ ನಾರಾಯಣ, ಚಿನ್ನಪ್ಪಗೌಡ, ಹಿ.ಶಿ. ರಾಮಚಂದ್ರೇಗೌಡ, ಅಂಬಳಿಕೆ ಹಿರಿಯಣ್ಣ, ರಾಜೀಗೌಡ ಹೊಸಹಳ್ಳಿ, ರಾಜಶೇಖರ ಪಿ.ಕೆ., ರಾಜಶ್ರೀ, ಮುಂತಾದವರ ಬರಹಗಳನ್ನು ಗಮನಿಸಬಹುದು. ಆಯಾ ಸಮುದಾಯದ ಅಧ್ಯಯನಗಳಲ್ಲಿಯೂ 'ಲೋಕದೃಷ್ಟಿ' ಪರಿಕಲ್ಪನೆಗೆ ಪೂರಕವಾದ ಅಂಶಗಳನ್ನು ಗುರುತಿಸಲು ಸಾಧ್ಯವಿದೆ.

೬.೩. ಹಾಲುಮತ ಲೋಕದೃಷ್ಟಿ; ಗುರುತಿಸುವ ತೊಡಕು

ತೊಡಕನ್ನು ಈ ಹಿಂದೆ ವಿವರಿಸಿದೆ. ಒಂದು ಸಮುದಾಯದ ಲೋಕದೃಷ್ಟಿ ಆತ್ಯಂತಿಕವಾಗಿ ಒಂದು ಸಮುದಾಯದ್ದೇ ಲೋಕದೃಷ್ಟಿಯಾಗಿರುತ್ತದೆಯೇ ಎಂದು. ಇಂತಹ ಪ್ರಶ್ನೆಗಳನ್ನು ಕೇಳಿಕೊಂಡರೆ ಮತ್ತೆ ಹಲವಾರು ಪ್ರಶ್ನೆಗಳು ಎದುರು ನಿಲ್ಲುತ್ತವೆ. ಯಾವೊಂದು ಸಮುದಾಯವು ಸಮಾಜದ ಇತರ

ಸಮುದಾಯಗಳೊಂದಿಗೆ ಸಂಬಂಧ ಕಡಿದುಕೊಂಡು ದ್ವೀಪದಂತೆ ಬದುಕಲು ಸಾಧ್ಯವಿಲ್ಲ. ಸಮುದಾಯಗಳು ಪರಸ್ಪರ ಬೆರೆಯುತ್ತ ಒಂದರೊಳಗೊಂದು ಕಳೆದು ಹೋಗುತ್ತಿರುತ್ತವೆ. ಏಕಕಾಲಕ್ಕೆ ತಮ್ಮದೇ ಆದ ಕೆಲವೇ ಕೆಲವು ವಿಶಿಷ್ಟ ಅಂಶಗಳಿಂದಾಗಿಯೇ ಇತರೆ ಸಮುದಾಯಗಳಿಂದ ತಮ್ಮನ್ನು ತಾವು ಬೇರ್ಪಡಿಸಿಕೊಳ್ಳುತ್ತಿರುತ್ತವೆ. ಇಂತಹ ವಿಶಿಷ್ಟ ಅಂಶಗಳೊಳಗೆ ತಳೆಯುವ ಲೋಕದರ್ಶನವನ್ನೇ ಲೋಕದೃಷ್ಟಿ ಎಂದು ಕರೆಯಲು ಸಾಧ್ಯವಿದೆ. ಅಂದಾಗಲೂ ಇದು ಒಂದು ಸಮುದಾಯದ್ದೇ 'ಲೋಕದೃಷ್ಟಿ' ಎಂದು ಹಕ್ಕು ಸ್ಥಾಪಿಸಿ ಮಾತನಾಡುವುದು ಸರಿಯಲ್ಲ. ಒಂದು ಸಮುದಾಯದ ಲೋಕದೃಷ್ಟಿಯಲ್ಲಿ ಸಮುದಾಯಗಳ ಸಂವೇದನೆ ಅಂತರ್ಗತವಾಗಿರುತ್ತದೆ. ಒಂದು ಸಮುದಾಯದ ಲೋಕದೃಷ್ಟಿಯನ್ನು ಗುರುತಿಸುವ ಹೊತ್ತಿಗೆ, ಅದು ಸಮುದಾಯಗಳ ಸಂಯುಕ್ತ ಸಂವೇದನೆ ಎಂದು ಹೇಳಲೇಬೇಕು. ಈ ಎಚ್ಚರವನ್ನು ಗಮನದಲ್ಲಿರಿಸಿಕೊಂಡೇ ಡೊಳ್ಳಿನ ಹಾಡುಗಳ ಲೋಕದೃಷ್ಟಿಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಡೊಳ್ಳಿನ ಹಾಡುಗಳು ಕಟ್ಟಿಕೊಂಡಿರುವ ಲೋಕದೃಷ್ಟಿಯೆಂದರೆ ಹಾಲುಮತ ಸಮುದಾಯದ ಲೋಕದೃಷ್ಟಿ ಎಂದಾರ್ಥ. ಡೊಳ್ಳಿನ ಹಾಡು ಮತ್ತು ಹಾಲುಮತ ಪದಗಳು ಇಲ್ಲಿ ಏಕ ನೆಲೆಯಲ್ಲಿ ಬಳಕೆಯಾಗಿವೆ.

ಹಾಲುಮತ ಸಮುದಾಯವೂ ಒಂದು ಏಕೀಕೃತ ಘಟಕವಲ್ಲ. ಇಲ್ಲಿ ಅನೇಕ ಒಳಪಂಗಡಗಳಿವೆ, ಬಳಿಗಳಿವೆ, ಪಂಥಗಳಿವೆ. ಇವರು ಶೈವಾರಾಧಕರು. ಆ ಕಾರಣಕ್ಕಾಗಿ ಶೈವಾರಾಧನೆಯ ಗಾಢ ಪ್ರಭಾವಗಳು ಕುರುಬ ಸಮುದಾಯದಲ್ಲಿ ಮಿಳಿತವಾಗಿದೆ. ಕುರುಬರಲ್ಲಿ ಗುರು ಒಡೆಯರು, ಹಾಲು ಕುರುಬ, ಸಾದಾ ಕುರುಬ, ಕಾಡು ಕುರುಬ, ಜೇನು ಕುರುಬ, ದನಗಾರರು, ಗುರುವಿನ್, ಕಂಚಿ ಕುರುಬ, ಮುಳ್ಳು ಕುರುಬ, ಹಂಡೆ ಕುರುಬ, ಕಂಬಳಿ ಕುರುಬ, ದಾಸ ಕುರುಬ ಮುಂತಾದ ಪಂಗಡಗಳಿವೆ. ಜೊತೆಗೆ ಪ್ರಾದೇಶಿಕ ಭಿನ್ನತೆಯನ್ನಾಧರಿಸಿ ಹೊಸ ಕುರುಬ, ಹಳೆ ಕುರುಬ, ಸಣ್ಣ ಕುರುಬ, ದೊಡ್ಡ ಕುರುಬ ಎಂದು ಕರೆಯುವುದುಂಟು.

೧೨ನೇ ಶತಮಾನದಲ್ಲಿ ರೇವಣಸಿದ್ಧನ ಪ್ರಭಾವಕ್ಕೆ ಒಳಗಾದ ಕೆಲವರು ವೀರಶೈವ ದೀಕ್ಷೆ ಪಡೆದು ಲಿಂಗಾಯಿತರಾಗಿದ್ದಾರೆ. ಈಗಾಗಿ ಕುರುಬರಲ್ಲಿ ಲಿಂಗಾಯಿತ ಕುರುಬರೂ ಇದ್ದಾರೆ. ಕುರುಬ ರಲ್ಲಿಯೇ ಕೆಲವರು ಮಾಂಸಹಾರಿಗಳಿದ್ದಾರೆ, ಇನ್ನು ಕೆಲವರು ಕೇವಲ ಸಸ್ಯಹಾರಿಗಳಿದ್ದಾರೆ. ಈ ವೈವಿಧ್ಯಗಳನ್ನು ನೋಡಿದರೆ ಹಲವು ಸಮುದಾಯಗಳ ಸಂಕರಶೀಲತೆಯೊಂದು ಗೋಚರಿಸುತ್ತಿದೆ. ಇಲ್ಲಿ ಹೇಳಿದ ಇಷ್ಟು ಭಿನ್ನತೆಗಳಿಲ್ಲದೆ ಪ್ರಾದೇಶಿಕವಾಗಿ ಕುರುಬರು ಆರಾಧಿಸುವ ದೈವ ಆಚರಣೆ, ನಂಬಿಕೆ, ಪುರಾಣ ಎಲ್ಲವೂ ಭಿನ್ನವಾಗುತ್ತಾ ಹೋಗುತ್ತವೆ. ಇಷ್ಟು ವೈವಿಧ್ಯಗಳಲ್ಲಿ ಯಾವುದನ್ನು ಕುರುಬರದು ಎಂದು ಗುರುತಿಸುವುದು? ಯಾವ ಪಂಗಡದ ಕುರುಬರ ಆಚರಣೆ ಪರಂಪರೆಯನ್ನು ಕುರುಬರ ಆಚರಣೆ ಪರಂಪರೆ ಎಂದು ಗುರುತಿಸುವುದು? ಯಾವುದೇ ಒಂದು ಪಂಗಡದ ಲಕ್ಷಣಗಳನ್ನು ಕುರುಬರವು ಎಂದಾಕ್ಷಣ ಇತರೆ ಹಲವು ವೈವಿಧ್ಯಗಳು ಹೊರಗುಳಿಯುತ್ತವೆ. ಇದು ತುಂಬಾ ಸಂಕೀರ್ಣವಾದ ಪ್ರಶ್ನೆ. ಸಮುದಾಯದ ಅಧ್ಯಯನ ಮಾಡುವ ಪ್ರತಿಯೊಬ್ಬರೂ ಕೇಳಿಕೊಳ್ಳಲೇಬೇಕಾ

ದಂತವು ಇವು. ಇಷ್ಟು ಒಳ ಬಳಿಗರ ನಡುವೆ ಶ್ರೇಣೀಕರಣದ ಸಂಬಂಧವಿದೆ. ಹೀಗೆ ಕುರುಬರ ಲೋಕದೃಷ್ಟಿ ಎಂದಾಗಲು ಇಷ್ಟು ವೈವಿಧ್ಯತೆಗಳು ಬೆರೆತ ಒಂದು ಸಂಕರವೇ ಹೊರತು, ಹಾಲುಮತಸ್ಥರದ್ದೇ ಆದ ಲೋಕದೃಷ್ಟಿಗಳು ಅನ್ನುವ ಮೂಲಭೂತವಾದವಲ್ಲ.

ಹಾಲುಮತ ಸಮುದಾಯದ ಸಾಂಸ್ಕೃತಿಕ ವೈವಿಧ್ಯಗಳು ಅವರ ಆಚರಣೆ, ಸಾಹಿತ್ಯ, ಮೌಖಿಕ ಪರಂಪರೆ ಮುಂತಾದ ಹಲವು ಮಾದರಿಗಳಲ್ಲಿ ಗೋಚರಿಸುತ್ತದೆ. ಹೀಗೆ ಹಲವು ಮಾದರಿಗಳಲ್ಲಿ ಡೊಳ್ಳಿನ ಹಾಡುಗಳು ಪ್ರಧಾನವಾಗಿ ಕಂಡು ಬರುತ್ತವೆ. ಈ ಹಾಡುಗಳು ಕೇವಲ ಹಾಡುಗಳಾಗಿರದೆ ಹಾಲುಮತಸ್ಥರ ಸಾಂಸ್ಕೃತಿಕ ವಿಶಿಷ್ಟತೆಯ ಹಲವು ಮಗ್ಗಲುಗಳನ್ನು ಗುರುತಿಸುವ ಕಥನಗಳೂ ಆಗಿವೆ. ಈ ಹಾಡುಗಳು ಏಕಕಾಲದಲ್ಲಿ ಕುರುಬ ಸಮುದಾಯದ ಆಚರಣ ಲೋಕವನ್ನೂ, ಕುಲ ಮೂಲವನ್ನೂ, ದೈವ ಮೂಲವನ್ನೂ, ವರ್ತಮಾನದ ಚಲನೆಯನ್ನೂ ಒಳಗೊಂಡು ಬಹುಮುಖಿ ಅಭಿವ್ಯಕ್ತಿಯಾಗಿ ಮಾರ್ಪಟ್ಟಿವೆ. ಈ ಹಾಡುಗಳಲ್ಲಿ ವ್ಯಕ್ತವಾಗುವ ಲೋಕದೃಷ್ಟಿಯ ಭಿನ್ನ ಎಳೆಗಳನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅದನ್ನು ಹಲವು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ, (i) ಕುಲ ಮೂಲ ಲೋಕದೃಷ್ಟಿ, (ii) ದೇವ ಮೂಲ ಲೋಕದೃಷ್ಟಿ, (iii) ಸ್ಥಳ ಮೂಲ ಲೋಕದೃಷ್ಟಿ, (iiii) ವೃತ್ತಿ ಮೂಲ ಲೋಕದೃಷ್ಟಿ, (v) ಲಿಂಗ ಮೂಲ ಲೋಕದೃಷ್ಟಿ (vi) ವರ್ತಮಾನದ ಲೋಕದೃಷ್ಟಿ.

೬.೪.೧. ಕುಲಮೂಲ ಲೋಕದೃಷ್ಟಿ

ಪ್ರತಿ ಸಮುದಾಯದ ಸೃಷ್ಟಿ ಲೋಕವು ಆ ಸಮುದಾಯದ ಮೂಲವನ್ನೂ ಮೂಲ ಚರಿತ್ರೆಯನ್ನು ಹೇಳುತ್ತಿರುತ್ತದೆ. ಹಾಗಾಗಿಯೇ ಇಂದು ಮೌಖಿಕ ಚರಿತ್ರೆಯು ಇಂತಹ ಜಾನಪದದ ಚಾರಿತ್ರಿಕ ಸಂಗತಿಗಳನ್ನು ತೀರಾ ಭಿನ್ನವಾಗಿ ಅರ್ಥೈಸುತ್ತದೆ. ಆಯಾ ಸಮುದಾಯ ಅಭಿವ್ಯಕ್ತಿಸುವ ಮೌಖಿಕ ಮತ್ತು ಭೌತಿಕ ಅಭಿವ್ಯಕ್ತಿಯಲ್ಲಿ ತನ್ನ ಕುಲ ಮೂಲದ ಲೋಕದೃಷ್ಟಿಯೊಂದು ಅಂತರ್ಗತವಾಗಿರುತ್ತದೆ. ಕುಲ ಮೂಲದ ಲೋಕದೃಷ್ಟಿಯನ್ನು ಡೊಳ್ಳಿನ ಹಾಡುಗಳಲ್ಲಿ ಹೇರಳವಾಗಿ ಕಾಣಬಹುದು. ಈ ಹಾಡುಗಳಲ್ಲಿ ಹಾಲುಮತದವರ ಕುಲ ಮೂಲ ಎಲ್ಲಿಯದು, ಎಲ್ಲಿಂದ ಬಂದವರು, ಇವರನ್ನು ಹಾಲುಮತದವರೆಂದೇ ಯಾಕೆ ಕರೆಯಬೇಕು ಮುಂತಾದ ವಿವರಗಳಿವೆ. ಹಾಲುಮತ ಮತ್ತು ಕುರುಬ ಪರಿಕಲ್ಪನೆಗಳನ್ನು ಬಿಡಿಸಿ ಹೇಳುತ್ತವೆ. ಹಾಲುಮತದಿಂದ ಪ್ರತ್ಯೇಕವಾದ ಪಂಡಗಳ ಸೃಷ್ಟಿಯನ್ನು ಬಿಂಬಿಸುತ್ತದೆ. ಈಚಿನ ಡೊಳ್ಳಿನ ಹಾಡುಗಳ ರಚನೆಯಲ್ಲಿ ಜಾತಿ ಮೂಲದ ಮೂಲಭೂತವಾದಕ್ಕೂ ಎಡೆಮಾಡಿಕೊಟ್ಟಿದೆ. ಕುಲ ಮೂಲವನ್ನು ಬಿಂಬಿಸುವ ಡೊಳ್ಳಿನ ಹಾಡುಗಳಲ್ಲಿ ಕೆಲ ಆಯ್ದ ಪಠ್ಯಗಳ ಉಲ್ಲೇಖ ಮತ್ತು ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗುತ್ತದೆ.

ಜನಪದ ಹಾಲುಮತ ಮಹಾಕಾವ್ಯವು ಜಗತ್ತನ್ನು ಸೃಷ್ಟಿ ಮಾಡಿಕೊಂಡ ವಿಧಾನವನ್ನು ನೋಡಬಹುದು. ಅಖಂಡೇಶ್ವರನ ಸೃಷ್ಟಿಯ ಮುಖಾಂತರ ತನ್ನ ಲೋಕವನ್ನು ಕಟ್ಟಿಕೊಳ್ಳುತ್ತದೆ.

“ನೀರೆ ನೀರಂಕಾರದೊಳಗ ಭೂಮಿನಾರ ಇಲ್ಲಯ್ಯ
ಆಕಾಶನಿಲ್ಲೇಳಂದಾರ ಭೂಮಿನಿಲ್ಲೇಳಂದಾರ
ತೆರಿಗೋಳು ಮೊದಲ ಇಲ್ಲೇನ ನೀರೆ ನೀರಂಕಾರದೊಳಗೆ
ತೆರಿಗೊಳು ಮೊದಲು ಇಲ್ಲೇನಪ್ಪಲ್ಲಿ ನೀರ ಮ್ಯಾಲೊಂದು ಗುಳ್ಳೇನ
ನೀರ ಮ್ಯಾಲೆ ಗುಳ್ಳೆನಪ್ಪಲಿ ಚಂಡ ಮೊದಲ ಆದವ
ಚಂಡ ಮೊದಲ ಆದವಪ್ಪಲ್ಲಿ ದಂಡ ಹಿಂದ ಆದವ
ಚಂಡಿಗ ಕೂಡ್ಯಾವ ಮುನ್ನೂರದ ಅರವತ್ತು ನರಗೋಳು”[೩]

ಹೀಗೆ ಭೂಲೋಕದಲ್ಲಿ ಭೂಮಿಯೇ ಇಲ್ಲದಂದು ನೀರಿನ ಲೋಕ ಇತ್ತು. ಗಾಳಿ ಇಲ್ಲ. ತೆರೆಗಳೂ ಇಲ್ಲ. ಅಂತಹ ನೀರಿನ ಮೇಲೆ ‘ರುಂಡ’ವೊಂದು ಸೃಷ್ಟಿಯಾಯಿತು. ನಂತರ ಕೈಕಾಲು, ನರಗಳು, ಹೊಟ್ಟೆ, ಬೆಳೆದು, ಮನುಷ್ಯನ ರೂಪವಾಯಿತು. ಆತನೇ ಅಖಂಡೇಶ್ವರ. ಆತನ ದೇಹದಲ್ಲಿ ೫೨ ನಾದ, ಜ್ಯೋತಿರ್ಲಿಂಗ, ಮಾತು-ಮಂತ್ರಗಳು ಸೃಷ್ಟಿಯಾದವು. ಇವುಗಳ ಜೊತೆಗೆ ೫೨ ಅಕ್ಷರಗಳೂ ಸೃಷ್ಟಿಯಾದವು ಅನ್ನುವುದು ಕುತೂಹಲ. ಅಕ್ಷರ ಜ್ಞಾನದ ಮುಖಾಂತರ ತನ್ನ ಕಾಲವನ್ನು ಕಟ್ಟಿಕೊಳ್ಳುವ ಮೌಖಿಕ ಪರಂಪರೆಯ ವಿಧಾನ ಭಿನ್ನವಾದುದು. ಅಖಂಡೇಶ್ವರ ತನ್ನ ಎಡ ಮಗ್ಗುಲಿನ ಎಲುಬಿನಿಂದ ಆದಿಶಕ್ತಿಯನ್ನು ನಿರ್ಮಾಣ ಮಾಡಿಕೊಂಡು ಹೆಂಡತಿಯನ್ನಾಗಿ ಮಾಡಿಕೊಳ್ಳುತ್ತಾನೆ. ಆ ವೇಳೆಗಾಗಲೆ ರಾಕ್ಷಸರು ಹುಟ್ಟಿದರು. ಭೂಮಿಯಲ್ಲಿ ಗಾಳಿ ಆರಂಭವಾಯಿತು. ತೆರೆಗಳು ಪ್ರಾರಂಭವಾದವು. ಲಕ್ಷಾನುಗಟ್ಟಲೆ ಅಂಡಾಂಡ ಪಿಂಡಾಂಡಗಳು ಸೃಷ್ಟಿಯಾದವು. ಬಸವಣ್ಣೆಪ್ಪ ಹುಟ್ಟಿದ. ಯಲ್ಲಮ್ಮ ಹುಟ್ಟಿದಳು. ಆ ವೇಳೆಗಾಗಲೇ ಐದಾರು ಯುಗಗಳು ಕಳೆದು ಹೋದವು. ನಂತರ ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ, ಮಹಾದೇವ ಹುಟ್ಟಿದರು. ಇಲ್ಲಿಯೇ ಶಾಂತಮುತ್ತಯ್ಯ ತಯ್ಯಾರಾದ. ಈ ಶಾಂತಮುತ್ತಯ್ಯ ಐದು ಮಂದಿ ರಕ್ಕಸರನ್ನು ಸಂಹಾರ ಮಾಡಿ ಐದು ಕುರಿಗಳನ್ನು ನಿರ್ಮಿಸಿದ. ಇನ್ನೊಬ್ಬ ರಕ್ಕಸನನ್ನು ಸಂಹಾರ ಮಾಡಿ ‘ತಗರ’ನ್ನು ತಯ್ಯಾರ ಮಾಡಿದ ಕುರಿಗಳ ಉಣ್ಣೆ ತೆಗೆದು ಕಂಬಳಿ ಮಾಡಿದ. ‘ಡೊಳ್ಳಸೂರ’ ರಾಕ್ಷಸನನ್ನು ಸಂಹಾರ ಮಾಡಿ ಡೊಳ್ಳು ಮತ್ತು ಡೊಳ್ಳಿನ ಜೊತೆ ಬಳಸುವ ಸಹ ವಾದ್ಯಗಳನ್ನು ಸೃಷ್ಟಿಸಿಕೊಂಡು ಶಿವ-ಪಾರ್ವತಿಯರನ್ನು ಆರಾಧನೆ ಮಾಡುವುದಕ್ಕೆ ಆರಂಭಿಸಿದ.

ಇದು ಸಮಗ್ರ ಹಾಲುಮತ ಪರಿಕಲ್ಪನೆ ಸಂಸ್ಕೃತಿ ಕಟ್ಟಿಕೊಂಡಿರುವ ಲೋಕದೃಷ್ಟಿಯಾದರೆ ಆ ಸಮುದಾಯದೊಳಗೆ ಬದುಕುತ್ತಿರುವ ‘ಉಪ ಸಂಸ್ಕೃತಿ’(ಪಂಗಡ)ಗಳು ತನ್ನದೆಯಾದ ಲೋಕದೃಷ್ಟಿಯನ್ನು ಕಟ್ಟಿಕೊಂಡಿವೆ. ಉದಾಹರಣೆ; ಜೇನುಕುರುಬರ ಸೃಷ್ಟಿ ಪುರಾಣ ಹೀಗೆದೆ. “ಎಲ್ಲಕ್ಕೂ ಮೊದಲು ಈ ಪ್ರಪಂಚ ಪ್ರಳಯದಲ್ಲಿ ಮುಳುಗಿ ಬರೀ ನೀರಿನಿಂದ ತುಂಬಿತ್ತು. ಅಲ್ಲಿ ಒಂದು ಕ್ರಿಮಿಕೀಟವೂ ಜೀವರಾಶಿಯೂ ಇರಲಿಲ್ಲ. ಒಂದು ಕಹಿ ಸೋರೆ ಬುರುಡಿ ತೇಲುತ್ತಾ ತೇಲುತ್ತಾ ಅಂಗೈ ಅಗಲ ಭೂಮಿಯ ಮೇಲೆ ಬಂದು ಕೂತಿತು. ಈ ಬುರುಡೆ ಹೊಡೆದ ನಂತರ ಇಬ್ಬರು ಸೃಷ್ಟಿಯಾದರು. ಅವರಿಬ್ಬರಲ್ಲಿ ಒಂದು ಹೆಣ್ಣು, ಒಂದು ಗಂಡು. ಅವರಿಬ್ಬರೂ ಅಣ್ಣ ತಂಗಿಯರು. ಅವರಿಬ್ಬರೂ

ತಮ್ಮ ಕೈ ಮುಷ್ಟಿಯಲ್ಲಿ ಮಣ್ಣನ್ನು ಹಿಡಿದು ಹೆಣ್ಣು ಗಂಡನ್ನು ಸೃಷ್ಟಿಸಿದರು. ಅವರಿಂದ ಹುಟ್ಟಿದವರೇ ಜೇನು ಕುರುಬ ಜನಾಂಗ”.[೪] ಇಂತಹ ಹಲವು ಕುಲಗಳ ಲೋಕದೃಷ್ಟಿ ಕಥನಗಳು ಹಾಲುಮತ ಸಮುದಾಯದಲ್ಲಿವೆ. ಹತ್ತಿ ಕಂಕಣ, ಉಣ್ಣೆ ಕಂಕಣ, ಕಾಡು ಕುರುಬ, ಊರು ಕುರುಬ, ಗೊಂಡ ಕುರುಬ, ದನಗಾರ ಕುರುಬ, ಒಡೆಯ ಕುರುಬ ಮುಂತಾದ ಕುಲಗಳ ಲೋಕಸೃಷ್ಟಿ ಕಥನಗಳನ್ನು ಡೊಳ್ಳಿನ ಹಾಡುಗಳು ಸಿಗುತ್ತವೆ.

ಹಾಲುಮತ ಪರಿಕಲ್ಪನೆಯ ಕುಲ ಮೂಲ ಸೃಷ್ಟಿಯನ್ನು ಕಟ್ಟಿಕೊಳ್ಳುವ ವಿಧಾನ ಇತರ ಸಮುದಾಯಗಳ ಲೋಕದೃಷ್ಟಿಗಿಂತ ತುಂಬಾ ಭಿನ್ನವಾದದ್ದು, ‘ಹಾಲು’ ಮತ್ತು ‘ಮಣ್ಣೆ’ನಿಂದ ಹಾಲುಮತ ಮತ್ತು ಹಾಲುಮತದ ಮೂಲ ಪುರುಷರು ಜನ್ಮ ತಾಳುತ್ತಾರೆ. ಇಲ್ಲಿ ಬಳಕೆಯಾಗುವ ಹಾಲು ಪಾರ್ವತಿಯ ಮೊಲೆ ಹಾಲು ಎನ್ನುವುದು ವಿಶೇಷ. ತಾವು ಶಿವ-ಪಾರ್ವತಿಯ ಪುತ್ರರೆಂದು ಶಿವ ಮೂಲದವರೆಂದು ಹೇಳಿಕೊಳ್ಳುವ ತಂತ್ರಗಾರಿಕೆ ಇದು.

“ಮಣ್ಣ ಮುಟಗಿ ಮಾಡೀನೇ ಗೊಂಬಿ ಮಾಡಿನಿ ಅಂದಾಳ
ಎಡಕಿನ ಮಲಿಯ ಹಾಲಿಗೆ ಒಂದು ಗೊಂಬಿ ಮಾಡೀನೆ
ಬಲಕಿಯ ಮಲಿಯ ಹಾಲಿಗೆ ಒಂದು ಗೊಂಬಿ ಮಾಡೀನೆ
ಮಣ್ಣಿಗೆ ಹಾಲ ಹಿಂಡಿನೆ ಎರಡು ಗೊಂಬಿ ಮಾಡೀನೆ”[೫]

ಪಾವರ್ತಿಯ ಮೊಲೆ ಹಾಲು ಮತ್ತು ಮಣ್ಣಿನಿಂದ ಸೃಷ್ಟಿಯಾದವರೇ ಮದ್ದಪ್ಪ-ಮದ್ದವ್ವ. ಇವರಿಂದ ಹಾಲುಮತ ವಂಶ ಬೆಳೆಯುತ್ತ ಹೋಗುತ್ತದೆ. ಭೂಮಿ ಮತ್ತು ಹಾಲಿನ ಪರಿಕಲ್ಪನೆ, ಕೃಷಿ ಮತ್ತು ಪಶುಪಾಲನೆಯ ಸಂಯುಕ್ತ ಸಂದರ್ಭವನ್ನು ಹೇಳುತ್ತದೆ.

ಲೋಕದೃಷ್ಟಿಯನ್ನು ಕಟ್ಟಿಕೊಳ್ಳುವಲ್ಲಿಯು ಸಮುದಾಯಗಳು ಸಂಘರ್ಷ ಮಾಡಿವೆ. ನಾನು ಶ್ರೇಷ್ಟ, ನನ್ನದು ಶ್ರೇಷ್ಟವೆಂದು ಹೇಳುವ ಅನನ್ಯತೆಯ ಲೋಕಸೃಷ್ಟಿಗಳು ಇವೆ. ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ಚಿಕ್ಕೊಪ್ಪದ ‘ನಿಂಗಪ್ಪ ರಾಯಪ್ಪ ಕಡಕೋಳ’ ಹಾಡುವ ಹಾಡಿದಲ್ಲಿ ಕುಲ ಮೂಲದ ಲೋಕದೃಷ್ಟಿಯನ್ನು ಗುರುತಿಸಬಹುದು.

“ಕುರುಬರಪ್ಪ ನಾವು ಕುರುಬರೋ
ಜಗದ ಸಾರವನರಿತ ಕುರುಬರೋ
ಜಗದ ಹಾಲುಮತದ ಕುರುಬರೋ || ಪ ||

ಹೌದೆನಿಸಿಕೊಂಡ ಕುರುಬರೇನೋ
ಸತ್ಯವ ನುಡಿಯುವ ಕುರುಬರೇನೋ
ಸತ್ಯವ ನುಡಿಯುವ ಕುರುಬರಯ್ಯಾ
ಪ್ರಾಮಾಣಿಕ ಮನುಜ ಕುರುಬರೋ || ೨ ||

ಶಿವ ಪಾರ್ವತಿಯ ವಂಶವಯ್ಯಾ
ಮುಂದಿನ ಹೊಯಕಾ ಹೇಳುವರೋ
ಮುಂದಿನ ಹೊಯಕಾ ಹೇಳುವರಯ್ಯಾ
ಕಂಬಳಿ ಬೀಸಿ ಮಳೆ ಕರೆದವರೋ || ೪ ||

ಜಗತಿಗೆ ಅನ್ನಾ ನೀಡಿದವರಯ್ಯಾ
ಗುರುವಿನ ಗುರುತಾ ಮಾಡಿದವರೋ
ಗುರುವಿನ ಗುರುತಾ ಮಾಡಿದವರಯ್ಯಾ
ಜಗತಿಗೆ ಲಿಂಗದ ನೀಡಿದವರೋ"[೬] || ೬ ||

ಹೀಗೆ ಸಾಗುವ ಡೊಳ್ಳಿನ ಪದ ಕುರುಬರ ಕುಲ ಮೂಲವನ್ನು ಹೇಳುತ್ತದೆ. ಅಲ್ಲಿ ಲೋಕದ ಮೂಲಕ ಹೇಳಿದರೆ ಇಲ್ಲಿ ತನ್ನ ವೃತ್ತಿ, ಸಂಸ್ಕೃತಿ ಆಚರಿಸುವ ಧರ್ಮ, ವೈಯಕ್ತಿಕ ಗುಣ ಇಷ್ಟು ಸಂಗತಿಗಳ ಮೂಲಕ ಕುಲ ಮೂಲವನ್ನು ಹೇಳುತ್ತಿದೆ. ಹೀಗೆ ಕುಲ ಮೂಲವನ್ನು ಹೇಳುವ ಡೊಳ್ಳಿನ ಹಾಡುಗಳು ಉತ್ತರ ಕರ್ನಾಟಕದಲ್ಲಿ ಹೇರಳವಾಗಿ ಸಿಗುತ್ತವೆ. ಒಂದು ಸಮುದಾಯ ತನ್ನ ಕುಲ ಮೂಲವನ್ನು ಯಾಕಾಗಿ ಹಾಡಿಕೊಳ್ಳುತ್ತಾರೆ? ಇದರ ಹಿಂದಿನ ಒತ್ತಡವೇನು? ಎಂದು ಯೋಚಿಸಬೇಕಿದೆ. ಒಂದೋ ಇತರೆ ಕುಲ ಮೂಲಗಳಿಗಿಂತ ತಮ್ಮನ್ನು ತಾವು ಬೇರ್ಪಡಿಸಿಕೊಳ್ಳಲಿಕ್ಕೆ ಹೇಳಿರಬಹುದು. ಇಲ್ಲವೆ, ಕುಲ ಸಂಘರ್ಷದಿಂದಾಗಿ ತಮ್ಮ ಕುಲದ ಶ್ರೇಷ್ಠತೆಯನ್ನು ಹಾಡಿಕೊಂಡಿಬರಬಹುದು. ಈ ಬಗೆಯ ಕುಲ ಮೂಲದ ಪ್ರಜ್ಞೆ, ವಚನಕಾರರ ಜಾತಿ ಪ್ರಜ್ಞೆಯನ್ನು ಹೋಗಲಾಡಿಸಲಿಕ್ಕೆ ಎಲ್ಲ ಜಾತಿಯ ವಚನಕಾರರು ತಮ್ಮ ಕುಲ ಮತ್ತು ವೃತ್ತಿಯ ಬಗೆಗೆ ಹಾಡಿಕೊಂಡ ವಚನಗಳ ಪ್ರಭಾವವಿರ ಬಹುದೆ? ಹಾಗಿದ್ದರೆ ಯಾವ ಜಾತಿ ಕುಲವನ್ನು ಹೋಗಲಾಡಿಸಲು ಜಾತಿ ಮೂಲದ ನಿರೂಪಣೆಗಳು, ಶ್ರೇಷ್ಠತೆಯ ಆಶಯಗಳು ವ್ಯಕ್ತವಾದವೋ ಅವುಗಳನ್ನೇ ತಪ್ಪಾಗಿ ಅರ್ಥೈಸಿಕೊಂಡಿರಬಹುದೇ? ಮುಂತಾಗಿ ಯೋಚಸಲಿಕ್ಕೆ ಸಾಧ್ಯವಿದೆ. ಈಗಲೂ ವಚನಕಾರ ಸಿದ್ಧಾರಾಮ ಮತ್ತು ವೀರಗೊಲ್ಲಾಳರನ್ನು ಕುರುಬರ ಅನನ್ಯತೆಯ ಭಾಗವಾಗಿ ನೋಡುತ್ತಿರುವುದರ ಹಿಂದೆಯೂ ಈ ಪ್ರಭಾವವಿರುವುದನ್ನು ನೋಡಬಹುದು. ಇಂತಹ ಕುಲ ಮೂಲದ ಹಾಡುಗಳೇ ಕುರುಬರ ಕುಲ ಮೂಲದ ಜಾತೀವಾದವನ್ನು ಬೆಳಸಿರಬಹುದೆ? ಎಂದು ಯೋಚಿಸಬಹುದು. ಕುರುಬ ಸಮುದಾಯವನ್ನು ಕುರಿತ ಕುರುಬರೇ ಮಾಡುತ್ತಿರುವ ಅಧ್ಯಯನಗಳಲ್ಲೂ ಇದನ್ನು ಗುರುತಿಸಬಹುದು. ಚಂದ್ರಕಾಂತ ಬಿಜ್ಜರಿಗಿಯವರ ಕುರುಬ ಸಮುದಾಯದ ಅಧ್ಯಯನಗಳಲ್ಲಿ ಮಾಹಿತಿ ಪ್ರಧಾನವಾಗಿ ಮುಖ್ಯವೆನಿಸಿದರೆ, ಈ ಮಾಹಿತಿಯ ಹಿಂದಿನ ಧೋರಣೆ ಮಾತ್ರ ಕುಲ ಮೂಲದ ಮೂಲಭೂತವಾದವನ್ನೇ ಪ್ರತಿಪಾದಿಸುತ್ತಿದೆ. ಇಂತಹ ವಿಧಾನಗಳನ್ನು ಕುಲ ಮೂಲ ಹೇಳುವ ಡೊಳ್ಳಿನ ಹಾಡುಗಳು ಪ್ರಭಾವಿಸಿರಲಿಕ್ಕೆ ಸಾಕು.

ಮೇಲಿನ ಹಾಡಿನಲ್ಲಿ 'ಜಗವ ಸಾರವನರಿತ ಕುರುಬರ್' ಎಂಬ ಪದದ ಬಳಕೆ ಬರುತ್ತದೆ. ಅಂದರೆ ಇತರೆ ಜನಸಮುದಾಯಗಳು ಇವರನ್ನು ಜಗದ ಸಾರವ ನರಿಯದ ದಡ್ಡರೆಂದು ಹಿಯಾಳಿಸಿದ ನಂತರ ಸೃಷ್ಟಿಯಾಗಿರಬೇಕು. ಕುರಿ ಮತ್ತು ಕುರುಬರನ್ನು ದಡ್ಡರಿಗೆ ಸಾಂಕೇತಿಕವಾಗಿ ಹೋಲಿಸುವ ವಿಧಾನ ಈಗಲೂ ಚಾಲ್ತಿಯಲ್ಲಿದೆ. ಇದನ್ನು ಹೊಡೆದು ಹಾಕಿ ತನ್ನದೇಯಾದ ಲೋಕದೃಷ್ಟಿಯನ್ನು ಸಮರ್ಥನೆ ಮಾಡಿಕೊಳ್ಳುವ ತಂತ್ರಗಾರಿಕೆಗಾಗಿ ಹೀಗೆ ಹಾಡಿರಬೇಕು. ಇದು ಇನ್ನೊಂದು ಸಮುದಾಯದ ಸಮರ್ಥನೆಗಾಗಿ ಕಟ್ಟಿಕೊಂಡ ಲೋಕದೃಷ್ಟಿ. ಸಹಜ ಲೋಕದೃಷ್ಟಿ ಈ ನೆಲೆಯಲ್ಲಿರುವುದಿಲ್ಲ. ನಿಸರ್ಗದ ಜೊತೆ ತನ್ನ ಸಂಬಂಧವನ್ನು ಬೆಳೆಸಿಕೊಂಡಿರುತ್ತದೆ. ಈ ಹಾಡುಗಳ ಲೋಕದೃಷ್ಟಿ ಪ್ರಮುಖ

ವಾಗಿ ಮಣ್ಣು ಮತ್ತು ನೀರಿನ ಜೊತೆ ಇರುತ್ತದೆ. ಈ ಬಗೆಯ ಜಗತ್ತಿನ ಕಲ್ಪನೆಗಳು ಅದು ಆಯಾ ಸಮುದಾಯಿಕ ವಿಶ್ವಾತ್ಮಕ ಪ್ರಜ್ಞೆಯನ್ನು ಬಿಂಬಿಸುತ್ತವೆಯೇ ವಿನಃ ಒಂದು ಸಮುದಾಯದ ಮೂಲಭೂತವಾದವನ್ನಲ್ಲ. ಈ ನೆಲೆಯ ಹಾಡುಗಳು ಆಯಾ ಸಮುದಾಯಗಳಲ್ಲಿ ಹುಟ್ಟಿಸುವ ಆತ್ಮವಿಶ್ವಾಸ ಬದುಕಿನ ಚೈತನ್ಯ ಬಹಳ ಮುಖ್ಯವಾಗುತ್ತದೆ.

೬.೪.೨. ದೇವಮೂಲ ಲೋಕದೃಷ್ಟಿ

ಪ್ರತಿ ಸಮುದಾಯವು ತನ್ನ ಆರಾಧನೆಯ ದೈವವನ್ನು ಕುರಿತು ಹಾಡಿಕೊಳ್ಳುತ್ತದೆ. ಆ ದೈವದ ಮೂಲಕ ತನ್ನ ಸಮುದಾಯವನ್ನು ಭಿನ್ನ ನೆಲೆಗಳಲ್ಲಿ ಗುರುತಿಸಿಕೊಳ್ಳುತ್ತದೆ. ಈ ದೈವಗಳ ಕುರಿತು ಹಾಡಿಕೊಳ್ಳುವ ಕಥನಗಳು ಶಿಷ್ಟ ದೈವಗಳ ನಂಬಿಕೆಗಳನ್ನು ಹೊಡೆಯುವಂತಿರುತ್ತವೆ. ಅಂತೆಯೇ ತನ್ನ ಸಮುದಾಯಕ್ಕೆ ಮಾತ್ರ ದೈವ ಅನ್ನುವ ಅತಿಯಾದಿ ಭಾವುಕತೆಯೂ ಮಿಶ್ರಣಗೊಂಡಿರುತ್ತದೆ. ಕುರುಬ ಸಮುದಾಯವು ಹಾಡಿಕೊಳ್ಳುವ ಡೊಳ್ಳಿನ ಹಾಡುಗಳಲ್ಲಿ ದೇವರ ಮೂಲಕ ಲೋಕವನ್ನು ನೋಡುವ ಪರಿ ಅಪರೂಪದ್ದು ಅಥವಾ ದೈವಗಳಿಗೆ ಮನುಷ್ಯ ಸಹಜ ದೌರ್ಬಲ್ಯಗಳನ್ನೂ ಗುರುತಿಸಿ, ಅಂತಹ ದೌರ್ಬಲ್ಯಗಳು ಆರಾಧನೆಯ ಪಂಥಕ್ಕೂ ಇದೆ ಎನ್ನುವ ಸಮೀಪಕರಣವು ವಿಶಿಷ್ಟವಾಗಿದೆ. ಶೈವ ಆರಾಧಕರು ಶಿವನೇ ಶ್ರೇಷ್ಠವೆನ್ನುವರು. ಶಿವನಿಂದಲೇ ನಾವು ಜನಿಸಿದ್ದೇವೆ ಎನ್ನುತ್ತಾರೆ. ಶಿವನನ್ನು ತೃಪ್ತಿಪಡಿಸುವ ಉದ್ದೇಶಕ್ಕಾಗಿ ಹಾಡುಗಳನ್ನು ಹಾಡುತ್ತೇವೆ ಎನ್ನುತ್ತಾರೆ. 'ಬಸವಣ್ಣನಿಗಿಂತ ಬಲ್ಲಿದನಿಲ್ಲ ಶಿವನಿಗೆ ದೊಡ್ಡವನ್ಯಾರು'[೬] ಎಂದು ಕೇಳುತ್ತಾರೆ.

ಡೊಳ್ಳಿನ ಹಾಡುಗಳ ಪಲ್ಲವಿ "ಸ್ವಾಮಿ ನಮ್ಮಯ್ಯ ದೇವರ್' ಬಂದಾವರೆ ಬನ್ನಿರೇ | ಸ್ವಾಮಿ ನಮ್ಮಯ್ಯ, ದೇವಿ ಬಂದಾರ ಬನ್ನಿರೆ || ಎನ್ನುವುದು. ಅಂದರೆ ದೇವರನ್ನೇ; ಶಿವನನ್ನು ಹಾಡುವಲ್ಲಿಗೆ ಕರೆತರುವುದು ದೈವದ ಜಂಗಮತ್ವವನ್ನು ಸಾರುತ್ತದೆ. ದೇವರಲ್ಲಿಗೆ ಹೋಗೋಣ ಎನ್ನುವುದಕ್ಕಿಂತ, ನಮ್ಮಲ್ಲಿಗೆ ದೇವರು ಬಂದಾನೆ ಅನ್ನುವುದೆ, ದೈವವನ್ನು ಮನುಷ್ಯೀಕರಿಸುವ ಪ್ರಯತ್ನದಂತೆ ಕಾಣುತ್ತದೆ. ಅಂದರೆ ದೈವ ಮನುಷ್ಯರಲ್ಲಿಗೆ ಬರುತ್ತದೆ. ಆತನನ್ನು ಡೊಳ್ಳಿನ ಹಾಡುಗಾರರ ಹಾಡು ಹೇಳಿ ಕರೆ ತರುತ್ತಾರೆ. ಇಂತಹ ಸಮೀಕರಣವೇ ತೀರಾ ಭಿನ್ನವಾದುದು. ಆದರೆ ದೇವರ ಲೀಲೆಗಳನ್ನು ಅತಿಮಾನುಷ ವರ್ಣನೆಗಳಿಂದಲೂ, ಮನುಷ್ಯ ಸಹಜ ದೌರ್ಬಲ್ಯಗಳಿಂದಲೂ ನೋಡುವುದು ವಿಶೇಷವಾಗಿದೆ. ರೇವಣಸಿದ್ಧನ ಕುರಿತು ಹಾಡುವ ಡೊಳ್ಳಿನ ಹಾಡೆಂದು ಹೀಗಿದೆ.

"ರೇವಣಸಿದ್ಧನ ಲೀಲೆಯ ಕೇಳಿರಿs
ನಿಮ್ಮ ಮುಂದ ನಾ ಹೇಳುವೆನೋss
ನಿರಂಕಾರ ನಿರ್ಗುಣ ನಿರಂಜನನೋss
ನಿರ್ಭಯವಾಗಿತು ಕೇಳಿರಿನ್ನೋsss
ಹಂಕಾರ ಓಂಕಾರ ಡೇಂಕಾರ ಮಕಾರಗಳೋss....."

ಹೀಗೆ ರೇವಣಸಿದ್ಧನ ಲೀಲೆಯನ್ನು ಹಾಡುವ ಹಾಡು, ರೇವಣಸಿದ್ಧನ ಮೂಲ, ಆತನ ಮಕ್ಕಳು, ಸೊಸೆಯಂದಿರು, ಹೆಂಡತಿ ಮುಂತಾದ ಲೌಕಿಕ ವಿವರಗಳಲ್ಲಿ ಸಾಗುತ್ತದೆ. ಮೊದಲು ದೈವದ

ಅತಿಮಾನುಷ ವರ್ಣನೆಯಿಂದ ಪ್ರಾರಂಭವಾಗಿ, ಮನುಷ್ಯ ಸಂಬಂಧಿ ವಿಷಯಗಳೊಂದಿಗೆ ಸಮೀಕರಿಸ ಲಾಗುತ್ತದೆ. ಜನಪದ ಮಹಾಕಾವ್ಯ ಮತ್ತು ಮಾಳಿಂಗರಾಯನ ಕಾವ್ಯಗಳಲ್ಲೂ ಈ ಗುಣಗಳನ್ನು ಕಾಣಬಹುದು. ಮುದ್ದಪ್ಪ ಮುದ್ದವ್ವರಿಂದ ಆರಂಭಗೊಂಡ ಕಾವ್ಯ ಹತ್ತಾರು ತಲೆಮಾರುಗಳ ವಿವರ ಗಳನ್ನು ದೈವಗಳ ಸಂಬಂಧಗಳನ್ನು ವಿವರಿಸುತ್ತಾ ಒಮ್ಮೆ ಮೂರ್ತ ಮತ್ತೊಮ್ಮೆ ಅಮೂರ್ತ ರೂಪ ತಾಳುತ್ತ ಮುನ್ನಡೆಯುತ್ತಿರುತ್ತದೆ.

ಈ ಹಾಡುಗಳು ದೇವರ ಮೂಲವನ್ನು ಹೇಳುತ್ತಲೇ ಹಲವು ಧರ್ಮಗಳ ಸಂಕರಶೀಲತೆಯನ್ನು ಹೇಳುತ್ತವೆ. ಅಂದರೆ ರೇವಣಸಿದ್ಧನನ್ನು ಕುರುಬರ ಮೂಲ ದೈವ ಎನ್ನುತ್ತಲೇ, ರೇವಣಸಿದ್ಧ ಲಿಂಗಾಧಾರಣೆಗೊಂಡ ಬಗ್ಗೆ ಹೇಳುತ್ತವೆ. ಕುರುಬರನ್ನು ಕುರುಬ ದೈವಗಳನ್ನು ಲಿಂಗಾಧಾರಣೆ ಮಾಡಿದ ಬಗೆಗಿನ ಡೊಳ್ಳಿನ ಹಾಡುಗಳು ಸಿಗುತ್ತವೆ. ರೇವಣಸಿದ್ಧನ ಹೆಂಡತಿಯಾದ ಜಿಂಕಾದೇವಿಗೆ ೨೦ ಜನ ಗಂಡು, ೨೦ ಜನ ಹೆಣ್ಣು ಮಕ್ಕಳಾಗುತ್ತವೆ. ಇದನ್ನು ಹೇಳುವ ಹಾಡು ಹೀಗಿದೆ.

ಜಿಂಕಾದೇವಿಗೆ ಇಪ್ಪತ್ತು ಗಂಡು |
ಇಪ್ಪತ್ತು ಮಂದಿ ಹೆಣ್ಣು ಮಕ್ಕಳುದಿಸಿದರಲ್ಲಾ..
ಅಲ್ಲಿಗೆ ಬಂದಾನ ರೇವಣ ಗುರುವರನೊ |
ಶಿವ ಪದ್ಮಗ ಜಿಂಕಾದೇವಿಗೆ |
ಲಿಂಗದೀಕ್ಷೆ ಶಿವ ಪಂಚಾಕ್ಷರನೋ |
ರೇವಣಸಿದ್ಧ ಬೋದಿಸಿ ನಡೆದಿದ್ದಾನೋ |
ಶಿವಸಿದ್ಧ ಬೋದಿಸಿ ನಡೆದಿದ್ದಾನೋ |
ಲಿಂಗದೀಕ್ಷೆ ಶಿವ ಪಂಚಾಕ್ಷರನೋ |

ಇಲ್ಲಿ ಕುರುಬರ ಮೂಲ ಗುರು ರೇವಣಸಿದ್ಧ ಎನ್ನತ್ತಲೂ, ಆತನ ಲಿಂಗದೀಕ್ಷೆಯನ್ನು ಈ ಪಡೆದ ಸನ್ನಿವೇಶವನ್ನು ಹೇಳುತ್ತಿದೆ. ಅಂದರೆ ಲಿಂಗಾಯಿತ ಧರ್ಮದ ಜತೆಗೆ ಕುರುಬ ಸಮುದಾಯವೊಂದು ಸಂಕರಗೊಳ್ಳುತ್ತಿರುವ ಸೂಕ್ಷ್ಮವನ್ನು ಈ ಹಾಡು ವಿವರಿಸುತ್ತಿದೆ. 'ತಗರ ಪವಾಡ' | 'ಸಿದ್ಧಮಂಕ ಚರಿತೆ' ಕಥನಗಳ ಅಂಶಗಳು ಇಲ್ಲಿವೆ. ಅಂದರೆ ಸಮುದಾಯದ ಮೂಲಭೂತವಾದವನ್ನು ಹೇಳುವ ಜನರೇ ಆ ಸಮುದಾಯದ ಸಂಕರಶೀಲತೆಯನ್ನು ಹಾಡಿಕೊಳ್ಳುತ್ತಿದ್ದಾರೆ. ಇದು ದೈವ ಮೂಲ ಲೋಕದೃಷ್ಟಿಯಲ್ಲಿ ವಿಶೇಷವಾದುದು. ಸಮುದಾಯಗಳ ಸ್ವೀಕಾರ ಮತ್ತು ನಿರಾಕಾರ ಗುಣಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಇಂಥ ಹಾಡುಗಳು ಸಹಾಯಕವಾಗುತ್ತವೆ. ಇದು ಅನ್ಯಸಂಸ್ಕೃತಿ ವಿರುದ್ಧ ಪ್ರತಿರೋಧ ಹಾಗೂ ಅಂಗೀಕಾರಗಳ ಮೂಲಕ ತನ್ನನ್ನು ತಾನು ಮುರಿದು-ಕಟ್ಟುವ ಸಹಜ ಕ್ರಿಯೆಯಂತೆಯೂ ಕಾಣುತ್ತದೆ. ಒಂದು ಘಟ್ಟದ ವಿರೋಧ ಮತ್ತೊಂದು ಘಟ್ಟದ ಸಹಜ ಗುಣ ಆಗಿದೆ ಅಥವಾ ತನ್ನದಾಗಿದೆ.

ಹೀಗೆ ಕುರುಬರ ಬೀರಪ್ಪ, ಮೈಲಾರಲಿಂಗ, ಮಾಳಪ್ಪ, ಇಟಪ್ಪ ಮಾಯವ್ವ, ಬುಳಪ್ಪ, ಅಮೋಘಸಿದ್ಧ, ಮುಂತಾದ ದೈವದ ಆರಾಧನೆಯ ಹಾಡುಗಳು ಏಕಕಾಲದಲ್ಲಿ ಕುರುಬರ ಸಾಂಸ್ಕೃತಿಕ

ಅನನ್ಯತೆಯನ್ನು, ಮನುಷ್ಯ ಸಹಜ ದೌರ್ಬಲ್ಯಗಳನ್ನೂ, ಅಂತೆಯೇ ಸಮುದಾಯವೊಂದರ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಏಕಕಾಲಕ್ಕೆ ಹಾಡಿಕೊಳ್ಳುವಿಕೆಯನ್ನು ನೋಡಬಹುದು. ದೈವಗಳ ಸಂಕರಶೀಲತೆಯಂತೆ ಸಮುದಾಯದ ಸಂಕರಶೀಲತೆಯನ್ನು ಗುರುತಿಸಬಹುದು. ಗ್ರಾಮದೇವತೆಗಳನ್ನು ಅದರಲ್ಲೂ ದ್ಯಾಮವ್ವ, ದುರುಗವ್ವ ಮುಂತಾದ ದೈವಗಳನ್ನು ಹರಿಜನ, ಮಾದಿಗ ಮುಂತಾದ ದಲಿತ ಅಸ್ಪೃಶ್ಯ ಜಾತಿಗಳೊಂದಿಗೆ ಸಮೀಕರಿಸುವ ವಿಧಾನವೊಂದಿದೆ. ಆದರೆ ಈ ದೈವಗಳು ಕೆಳಸಮುದಾಯಗಳ ಪ್ರತಿನಿಧಿಕವಾಗಿವೆ. ಡೊಳ್ಳಿನ ಹಾಡಿನಲ್ಲಿ ಬರುವ ದೇವಿಯ ಪದವನ್ನು ಈ ನೆಲೆಯಲ್ಲಿ ಗುರುತಿಸಬಹುದು.

> "ಶುಕ್ರವಾರ ದಿನವು ದ್ಯಾಮವ್ವ | ಸೂರವ್ವನಾಗಾಳ ||
> ಸೂರವತಿಸುರ ಎಲ್ಲವ್ವ | ಚಂದ್ರಗಾವಿ ರಂಗವ್ವ |
> ಚಂದ್ರಗಾವಿ ತುರುಬಂದ ಕೋಣ ತರಿಬ್ಯಾಳ ||
> ಹಾಲುಂಡ ಕೋಣ ತರಿಸ್ಯಾಳ ದ್ಯಾಮವ್ವ
> ಆಲದ ಮರಕೆ ಬಿಗಿಸ್ಯಾಳ
> ನಾಲ್ಗಿಲಿ ನೊವ ತೆಗಿಸ್ಯಾಳ ![೫೧೦]

ಇಲ್ಲಿ ಕೋಣವನ್ನು ಬಲಿ ಕೊಡುವ ಆಚರಣೆ ಉಲ್ಲೇಖವಿದೆ. ಇದು ಡೊಳ್ಳಿನ ಹಾಡುಗಳಲ್ಲಿ ಬರುತ್ತದೆ. ಅಂದರೆ ಪ್ರಾಣಿ ಬಲಿ ಕೊಡುವ ಸಮುದಾಯಗಳಿಗೆ ಬಲಿ ಕೊಡುವ ಪ್ರಾಣಿ ಯಾವುದೆನ್ನು ವುದು ಮುಖ್ಯವಲ್ಲ. ಹಾಗೆಂದು ಕುರುಬರು ಕೋಣವನ್ನು ಬಲಿಕೊಡುತ್ತಾರೆಯೇ? ಎಂದು ವಿವರಿಸುವ ಅಗತ್ಯವಿಲ್ಲ. ಆದರೆ ತಳಸಮುದಾಯಗಳ ಸಾಂಸ್ಕೃತಿಕ ಸಂಕರಶೀಲತೆಯನ್ನು ಈ ಹಾಡು ಬಿಂಬಿಸುತ್ತಿದೆ. ದ್ಯಾಮವ್ವ ಕೋಣವನ್ನು ಮಣಿಸುವಿಕೆಯನ್ನು ಸಮುದಾಯ ತನಗೆ ತಾನೇ ಆರೋಪಿಸಿಕೊಂಡಂತೆ ಕಾಣುವುದಿಲ್ಲ. ಇದು ಸಪ್ತಮಾತೃಕೆಯರಲ್ಲಿ ಕಂಡುಬರುವ ವಿಶೇಷ ಆಚರಣೆ ಮತ್ತು ಕಥನ. ಇದನ್ನು ವಿದ್ವಾಂಸರು ದನಗಾರ ಮತ್ತು ಕುರಿಗಾರರ ಸಂಘರ್ಷಕ್ಕೆ ಉದಾಹರಣೆ ಕೊಡುತ್ತಾರೆ. ದನಗಾರರ ಮತ್ತು ಕುರಿಗಾರರ ನಡುವೆ ಮೇವಿಗಾಗಿ ಹಲವು ಸಂಘರ್ಷಗಳಾದವು. ಇದನ್ನು ಒಪ್ಪುವುದಾದರೆ ತನ್ನ ಲೋಕಸೃಷ್ಟಿಯಲ್ಲಿ ಸಂಘರ್ಷಗಳನ್ನು ತರುತ್ತದೆ. ಇದು ಮನುಷ್ಯ ಜೀವನದಲ್ಲಿ ನಡೆದು ಹೋದ ಸಹಜ ಕ್ರಿಯೆಯಾಗಿ ಕಟ್ಟಿಕೊಳ್ಳುತ್ತದೆ.

ಹೀಗೆ ದೈವ ಮೂಲ ಲೋಕದೃಷ್ಟಿಯಲ್ಲಿ ದೈವ ಮನುಷ್ಯ ಮತ್ತು ಮನುಷ್ಯ ಮತ್ತು ದೇವರ ನಡುವೆ ಶ್ರೇಣೀಕರಣವನ್ನು ಸೃಷ್ಟಿಸದೆ ಬೆರೆಯುವಿಕೆಯನ್ನು ಇಲ್ಲಿ ಕಾಣಬಹುದು. ಈ ಸಮುದಾಯದ ಶಿವ ಬೇರೆ ಅಲ್ಲ, ನಾವು ಬೇರೆ ಅಲ್ಲ ಎಂದು ಜೀವಿಸಿದವರು. ತಮ್ಮ ಸಂಘರ್ಷಗಳ ಮಧ್ಯವರ್ತಿ ಯಾಗಿ ಶಿವನನ್ನು ಅಥವಾ ಪಾರ್ವತಿಯನ್ನು ಭಯ ಬಿಳದೆ ಸಾಮಾನ್ಯ ಮನುಷ್ಯರಂತೆ ತಂದು ಬಿಡುವ ಹಾಡುಗಳು ಇವೆ. ಇದರಲ್ಲಿ ಪಾರ್ವತಿ ಹೆಚ್ಚಾಗಿ ಬಳಕೆ ಆಗುತ್ತಾಳೆ. ಅಂತೆಯೇ ಡೊಳ್ಳಿನ ಹಾಡುಗಳಲ್ಲಿ ಕೇವಲ ಕುರುಬ ಸಮುದಾಯದ ಆಶಯವಿರದೆ, ತಳಸಮುದಾಯಗಳ ಮಾನಸ ಲೋಕವೆ ಇಲ್ಲಿ ಮೈದೆಳುವಿಕೆಯನ್ನು ಗುರುತಿಸಲಿಕ್ಕೆ ಸಾಧ್ಯವಿದೆ.

೬.೪.೩. ಸ್ಥಳಮೂಲ ಲೋಕದೃಷ್ಟಿ

ಡೊಳ್ಳಿನ ಹಾಡುಗಳ ಸ್ಥಳ ಮೂಲ ಲೋಕದೃಷ್ಟಿಯೊಂದಿದೆ. ಒಂದು ಸ್ಥಳದ ವೈಶಿಷ್ಟ್ಯ ಒಂದು ಸ್ಥಳ ಮೂಲ. ಒಂದು ಸ್ಥಳದ ಚಾರಿತ್ರಿಕ ಪ್ರಾಮುಖ್ಯತೆ ಮುಂತಾದ ವಿಶಿಷ್ಟ ಸಂಗತಿಗಳ ಡೊಳ್ಳಿನ ಹಾಡಿನ ಮೂಲಕ ಅನಾವರಣಗೊಳ್ಳುತ್ತದೆ. ಇದು ಪ್ರಾದೇಶಿಕ ಅನನ್ಯತೆಯನ್ನು, ಪಶುಪಾಲನ ಅಲೆಮಾರಿತನ ಒಂದು ಕಡೆ ಸ್ಥಿರ ನೆಲೆಯನ್ನು ಕಂಡುಕೊಳ್ಳುವ ಚಾರಿತ್ರಿಕ ಮಹತ್ವದ ಕಡೆಗೆ ಹಾಗೂ ಇವರು ಆಡಳಿತ ಮಾಡಿದ, ವ್ಯವಹಾರ (ವ್ಯಾಪಾರ) ಮಾಡಿದ; ಆಚರಣೆ ಹಬ್ಬಗಳನ್ನು ಮಾಡುತ್ತಿದ್ದ ಸ್ಥಳದತ್ತ ಗಮನಸೆಳೆಯುತ್ತವೆ. ಒಂದೊಂದು ಸ್ಥಳಕ್ಕೆ ಇರುವ ವಿಶಿಷ್ಟತೆಯನ್ನು ಸ್ಥಳ ಮೂಲ ಉಲ್ಲೇಖಗಳಲ್ಲಿ ಗುರುತಿಸಲಿಕ್ಕೆ ಸಾಧ್ಯವಿದೆ. ಬಹುಪಾಲು ಜಾನಪದ ಗೀತ ಪ್ರಕಾರದಲ್ಲಿ ಹಳ್ಳಿಗಳ ಲಕ್ಷಣ ಬಳಸಿ ಹಾಡು ಕಟ್ಟುವ ವಿಧಾನದಲ್ಲಿ ಇರುವ ಈ ಡೊಳ್ಳಿನ ಹಾಡೊಂದು ಹೀಗಿದೆ :

"ಹುಲುಹುಲುಗ್ಯಾ ಹುಲು ಹುಲುಗ್ಯಾಲೇ ತಮ್ಮ ಹುಲುಲುಗ್ಯಾ
ಹೇಳ್ತೀನಿ ಕೇಳಲೇ ತಮ್ಮ ಹುಲುಲುಗ್ಯಾ
ಶಿರಹಟ್ಟಿ ಜಾತ್ರಿಗೊಮ್ಮೆ ಹೋರಿ ತರಾಕ ಹೊಂಟ್ನೆಲೆ ತಮ್ಮ
ಹುಲುಲುಗ್ಯಾ ||ಪ||

ಹೋರಿ ನೋಡಿ ಖರೀದೀಗೆ ಕೇಳಿದ್ನಲೆ ತಮ್ಮ ಹುಲುಲುಗ್ಯಾ
ಕರದ ಸಾವಿರ ಹೇಳಿದ್ರಲೆ ತಮ್ಮ ಹುಲುಲುಗ್ಯಾ
ಸಾವಿರ ಹೇಳದ್ರೊಳಗ ಮೈಮುಟ್ಟಿ ಕೈಮುಟ್ಟಿ ಎಬ್ಬಿಸಿದ್ನಲೆ
ತಮ್ಮ ಹುಲುಲುಗ್ಯಾ ||

ಸೂಳಿಗೇರ‍್ಯಾರು ಬಂದು ಸುಳಿ ನೋಡಿದ್ರು
ಕೋಡೆಳ್ಳೇರು ಕೋಡು ನೋಡಿದ್ರು
ಮುದ್ಲಾಪುರಾದವರು ಬಂದು ಮೂಗು ನೋಡಿದ್ರು ತಮ್ಮ ಹುಲುಲುಗ್ಯಾ
ಕವಿತಾಳರು ಬಂದು ಕಿವಿ ನೋಡಿದ್ರು
ಅಣ್ಣಿಗೇರ‍್ಯಾರು ಬಂದು ಕಣ್ಣು ನೋಡಿದ್ರು
ಅಬ್ಬಿಗೇರ‍್ಯಾರು ಬಂದು ದುಬ್ಬ ನೋಡಿದ್ರಲೆ ತಮ್ಮ ಹುಲುಲುಗ್ಯಾ
ಹ್ಯಾಡ್ಲದಾರು ಬಂದು ಹೆಗಲು ನೋಡಿದ್ರು
ಕೌಲೂರರು ಬಂದು ಕಾಲು ನೋಡಿದ್ರು
ಕೊಳಚಿಯರು ಬಂದು ಕೊಳಗ ನೋಡಿದ್ರಲೆ ತಮ್ಮ ಹುಲುಲುಗ್ಯಾ
ಕಲ್ಲಳ್ಳಿಯಾರು ಬಂದು ಖರೀದಿ ಮಾಡನ್ನಾದ್ರಾಗ
ಗುಡ್ಲನೂರರು ಬಂದು ಹೊಡನ್ನಂದ್ರಲೇ ತಮ್ಮ ಹುಲುಲುಗ್ಯಾ"[೫೯]

ಹೀಗೆ ಪ್ರತಿ ಹಳ್ಳಿಗೂ ಒಂದೊಂದು ಲಕ್ಷಣವನ್ನು ಗುರುತಿಸಲಾಗಿದೆ ಅಥವಾ ಈ ಹಳ್ಳಿಗಳ ಹೆಸರಿಗೆ ಲಯಕ್ಕೆ ಹೊಂದುವ ಹಾಗೆ ತನ್ನ ಎತ್ತಿನ ವ್ಯಾಪಾರದ ಹಾಡಿಗೆ ಅನ್ವಯಿಸಿಕೊಂಡು ಹಾಡಿರಲಿಕ್ಕೆ ಸಾಧ್ಯವಿದೆ. ಆದರೆ ಮುಖ್ಯವಾಗುವುದು ಒಂದು ಎತ್ತಿನ ವ್ಯಾಪಾರದಲ್ಲಿ ಗಮನಿಸಬೇಕಾದ ಸೂಕ್ಷ್ಮತೆ, ಇಂತಹ ಸೂಕ್ಷ್ಮತೆಯನ್ನು ಬೇರೆ ಬೇರೆ ಹೆಸರುಗಳ ಸ್ಥಳದೊಂದಿಗೆ ಸಮೀಕರಿಸುವ ಅನ್ವಯಿಕತೆ ಬಹಳ ಮುಖ್ಯವೆನಿಸುತ್ತದೆ. ಹೀಗೆ ಸ್ಥಳ ಮೂಲ ಲೋಕದೃಷ್ಟಿಯಲ್ಲಿ ದೈವದ ವಾಸದ ನೆಲೆಗಳ ಬಗೆಗೆ ಉಲ್ಲೇಖಗಳಿವೆ, ಆಯಾ ಊರಿನ ವಿಶಿಷ್ಟ ಅಂಶಗಳ ಬಗೆಗೆ ಉಲ್ಲೇಖಗಳು

ಸಿಗುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಹಾಡಿದ ಹಾಡುಗಾರನ ಸ್ಥಳವನ್ನು ವಿವರಿಸಿಕೊಳ್ಳುವಿಕೆಯೂ ಸ್ಥಳ ಮೂಲ ಲೋಕದೃಷ್ಟಿಗೆ ವಿಶಿಷ್ಟ ಆಯಾಮವೊಂದನ್ನು ಒದಗಿಸುತ್ತದೆ. ಹಾಡುಗಳ ಬಗ್ಗೆ ಜನಪದರೆ ಹಾಕಿಕೊಳ್ಳುವ 'ಜನ ಜನಪದ' ಕುರಿತು ಈ ಚರ್ಚೆಯನ್ನು ವಿಸ್ತರಿಸಬಹುದು. ಡೊಳ್ಳಿನ ಪದ ಹೇಳುವ ಊರಿನವರ ಮೂಲಕ ಸ್ಥಳ ಮೂಲವನ್ನು ಹಾಡಿನ ಹಾಡುವಿಕೆಯ ಕ್ರಿಯೆ ಮೂಲಕ ಗುರುತಿಸುತ್ತಿರುವುದನ್ನು ಕಾಣಬಹುದು.

"ನಿವಳ ಹಾಡುವವರು ನಿಂಗಾಪುರದವರು |
ಶೃಂಗಾರದಿಂದ ಸಂಗಮದವರ |
ಹುಲಕುಂದದವರು ಒಳ್ಳೆ ಹುರುಪಿಂದ ಬಂದಿದ್ರು
ಜಲಾಲ್‌ಪುರ ಜಾವೂರವರ |
ಶಿದಗುಪ್ಪಿ ಶಿವಮಗ್ಗಿ ಶಿರಶಿ ಶಿಖಾರಪುರ |
ಸರಸಗ್ರಾಮ ಶಿರಸಂಗೆವರ |
ಇಷ್ಟ ಮಂದಿ ಎಲ್ಲ ಒಟ್ಟಗೂಡಿದ್ದರು
ಪುಟ್ಟ ತಾಳಗತಿ ಬಲ್ಲವರ
ಎಲ್ಲರಾದಿ ಮೇಲೆ ನಮ್ಮ ಸಂತಿ ಬಂತ
ಏಳೆಂಬ ಎಬ್ಬಿಸ್ಯಾರೋ ಕುಂತವರ |
ಬಂದ ಬಂದ ಪದ ಚನ್ನಾಗಿ ಹಾಡಲು |
ಮುಂದೆ ಬಂದ್ರೋ ಅರಿಕೇರಿಯವರ |"[೨೨]

ಹೀಗೆ ಹಾಡಿನ ಲಯ ಗತ್ತುಗಳ ಮೂಲಕ ಸ್ಥಳ ಮೂಲವನ್ನು ಹುಡುಕುವುದನ್ನು ನೋಡಬಹುದು. ಮಾಳಿಂಗರಾಯನ ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಸ್ಥಳಗಳ ಉಲ್ಲೇಖವು ಭಿನ್ನವಾದ ಲೋಕದೃಷ್ಟಿಯನ್ನು ಕಟ್ಟಿಕೊಡುತ್ತದೆ. 'ಕುರಿಹಟ್ಟಿ', 'ಮರಿಹಟ್ಟಿ' ಸ್ಥಳಗಳ ಉಲ್ಲೇಖವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮಾಳಿಂಗರಾಯ ಕುರಿ ನಿಲ್ಲಿಸುತ್ತಿದ್ದ ಸ್ಥಳಕ್ಕೆ ಕುರಿಹಟ್ಟಿ, ಮರಿಗಳನ್ನು ನಿಲ್ಲಿಸುತ್ತಿದ್ದ ಸ್ಥಳಕ್ಕೆ ಮರಿಹಟ್ಟಿ ಎನ್ನುವ ಹೆಸರುಗಳು ಬಳಕೆಯಲ್ಲಿವೆಯನ್ನುವುದು ಈ ಹಾಡುಗಳ ತತ್ವ. ಇದು ಕುರಿ ಕಾಯುವ; ಸಾಕುವ ವೃತ್ತಿಯ ಲೋಕದೃಷ್ಟಿಯನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಅಂದರೆ ಹಾಡಿನ ಪರಂಪರೆಯ ವಿಸ್ತಾರವನ್ನು ಈ ಮೂಲಕ ವಿವರಿಸಿಕೊಳ್ಳಬಹುದಾಗಿದೆ. ಸ್ಥಳನಾಮವನ್ನು ಅಧ್ಯಯನ ಮಾಡುವಾಗ ಇಂತಹ ಹಾಡುಗಳು ತುಂಬಾ ವಿಶಿಷ್ಟವಾದ ಆಯಾಮವೊಂದನ್ನು ಒದಗಿಸುತ್ತವೆ. ಆದರೆ ಕನ್ನಡದಲ್ಲಿ ನಡೆದ ಸ್ಥಳನಾಮಗಳ ಅಧ್ಯಯನದಲ್ಲಿ ಇಂತಹ ಉಲ್ಲೇಖಗಳನ್ನು ಗಮನಿಸಿಲ್ಲ. ಇವುಗಳು ಸ್ಥಳನಾಮವನ್ನು ಕುರಿತ ಐತಿಹ್ಯಗಳನ್ನು ಬಲವಾಗಿ ನಂಬಿದಂತೆ ಕಾಣುತ್ತದೆ. ಹೀಗೆ ಡೊಳ್ಳಿನ ಹಾಡಿನ ಮೂಲಕ ಸ್ಥಳ ಮೂಲವನ್ನು ಲೋಕದೃಷ್ಟಿಯನ್ನು ಭಿನ್ನವಾಗಿ ಅರ್ಥೈಸಲು ಸಾಧ್ಯವಿದೆ.

೬.೪.೪. ವೃತ್ತಿಮೂಲ ಲೋಕದೃಷ್ಟಿ

ಡೊಳ್ಳಿನ ಹಾಡುಗಳಲ್ಲಿ ಕುರುಬ ಸಮುದಾಯದ 'ವ್ಯಾಪ್ತಿ'ಯನ್ನು ಬಹಳ ಮುಖ್ಯವಾಗಿ ಉಲ್ಲೇಖಿಸಲಾಗುತ್ತದೆ. ಕುರುಬರ ವಿಶಿಷ್ಟ ಅನನ್ಯತೆಯನ್ನು ಗುರುತಿಸುವ ಕಾರಣಕ್ಕೆ ಡೊಳ್ಳಿನ

ಹಾಡುಗಳನ್ನು ಕುರುಬ ಸಮುದಾಯದೊಂದಿಗೆ ಸಮೀಕರಿಸಿರಲಿಕ್ಕೆ ಸಾಕು. ಇಲ್ಲಿ ವೃತ್ತಿಯನ್ನು 'ಕಾಯಕ'ದ ಪಾವಿತ್ರ್ಯದೊಂದಿಗೆ ಹೋಲಿಸಲಾಗಿದೆ. ಅದು ವಚನಕಾರರ ಕಾರ್ಯ ಧರ್ಮದ ಫಲವಾಗಿ ಬಂದಿರಲಿಕ್ಕೆ ಸಾಕು. ಕುರುಬರ ಕಾಯಕ ಮುಖ್ಯವಾಗಿ ಕುರಿ ಕಾಯುವುದು. ಕಂಬಳಿ ನೇಯುವುದು, ಮುಂತಾದ ಕಾಯಕನಿಷ್ಠ ಹಾಡುಗಳು ಒಂದು ಸಮುದಾಯವನ್ನು ಇತರೆ ಸಮುದಾಯಗಳಿಗಿಂತ ಭಿನ್ನವಾಗಿ ನಿರೂಪಿಸುತ್ತವೆ. ಕಾಯಕದಲ್ಲಿ ದೈವಗಳನ್ನು ಕಾಣುವುದಕ್ಕೆ ಹಂಬಲಿಸಿದವರು ಇವರು. ಬಸವಣ್ಣನ 'ಕಾಯಕವೇ ಕೈಲಾಸ' ಎನ್ನುವ ತತ್ವದಂತೆ ಇವರ ವೃತ್ತಿಗಳ ಸಂಬಂಧಗಳು ಕಾಣಿಸುತ್ತವೆ. ಅಂತೆಯೇ, ಆ ಕಾಯಕಗಳನ್ನು ಒಂದೇ ಸಮುದಾಯಕ್ಕೆ ಆತ್ಯಂತಿಕವಾಗಿ ಸಮೀಕರಿಸುವ ಮೂಲಕ ಆ ಕಾಯಕದಿಂದ ಇತರೆ ಸಮುದಾಯಗಳನ್ನು ದೂರವಿಡುತ್ತದೆ. ಆದರೆ ಈಗ ಈ ಬಗೆಯ ಏಕಸ್ವಾಮ್ಯ ಉಳಿದಿಲ್ಲವಾದರೂ, ಡೊಳ್ಳು ಹಾಡುಗಳು ರೂಪಿಸುವ ಕಾಯಕ ಮೀಮಾಂಸೆ ವಿಶಿಷ್ಟವಾಗಿದೆ. ಕಂಬಳಿಯನ್ನು ಕುರುಬ ಸಮುದಾಯದೊಂದಿಗೆ ಸಮೀಕರಿಸುವ ಹಾಡೊಂದು ಹೀಗಿದೆ :

"ದೇವರ ಬಂದಾವ ಬನ್ನಿರೆ
ಸ್ವಾಮಿ ನಮ್ಮಯ್ಯ ಬಂದಾನ ಬನ್ನಿರೇ || ಪಲ್ಲ ||

ಆದಿ ಸ್ಥಳದಲ್ಲಿ ಇದ್ದ ಕಂಬಳಿ
ಹಾಲುಮತ ದರಮಕ ಬಂತ ಕಂಬಳಿ
ಶಿಷ್ಯರದಿಂದ ಹುಟ್ಟಿದ ಕಂಬಳಿ
ಜಗದ ಗುರುವ ಮಡ್ಡಿಸಿದ ಕಂಬಳಿ
ಮಳಿರಾಜ ಬಂದಾಗ ಬೇಚ್ಯಾತ ಕಂಬಳಿ
ತಲಿಮ್ಯಾಲ ಸುತ್ತುವ ಪಾವಡಾತ ಕಂಬಳಿ
ರಾಜ ಪಂಡಿತರಿಗೆ ಉಲನ ಕೋಟಾತ ಕಂಬಳಿ
ಜಾಕೀಟನಂತ ಶೋಭಾಯ ಕಂಬಳಿ
ಬತ್ತು ಕೂರಿಗೆ ಹಾಕುವ ಕಂಬಳಿ
ಕಣದಾಗ ರಾಶಿ ಅಳೆಯುವ ಕಂಬಳಿ
ಬಂಡಿ ರೈತಗ ಮುಂಡಿ ಮ್ಯಾಲಾಡುವ ಕಂಬಳಿ
ಬೇಕ ಬೇಕಾದಕ ಬಳಿಸುವ ಕಂಬಳಿ
ದಿಮ್ಮಿನ ಬುಡಕ ಹಾಸು ಕಂಬಳಿ
ಇಂಗು - ಜೀರಿಗೆ ಮಾರುವ ವ್ಯಾಪಾರಿ ಕಂಬಳಿ
ಶಿಷ್ಯರಿಂದ ಹುಟ್ಟಿದ ಶುಭದ ಕಂಬಳಿ
ಸಿದ್ಧ ಮಾಳಪ್ಪನ ಬಲಿಸುವ ಕಂಬಳಿ"||[೧೩]

ಹೀಗೆ ಕಂಬಳಿ ನೇಯುವುದು ಕುರುಬರ ಕಾಯಕ ಎನ್ನುತ್ತಲೇ ಕಂಬಳಿ ಪಡೆದುಕೊಳ್ಳುವ ಸಾಮಾಜಿಕ ಆಯಾಮದ ಕುರಿತು ಧ್ವನಿ ಎತ್ತುತ್ತಾರೆ. ಕಂಬಳಿಯನ್ನು ರೈತನ ಬದುಕಿನ ಜತೆ, ಸಮೀಕರಿಸುತ್ತ ಕಂಬಳಿಗೆ ದೈವೀ ಶಕ್ತಿಯನ್ನು ಆಧ್ಯಾತ್ಮಿಕ ನೆಲೆಯನ್ನು ಸಮೀಕರಿಸುವಿಕೆಯ ವಚನಕಾರರ ಕಾಯಕ ತತ್ವವನ್ನೇ ನೆನಪಿಸುತ್ತದೆ. ಈ ಬಗೆಯ ಕಾಯಕದಲ್ಲಿ ತೆರೆದುಕೊಳ್ಳುವ ಮಾನವೀಯ ಆಯಾಮವೊಂದು ನಮ್ಮ ಕಾಲದ ಆರ್ಥಿಕ ಕಸಬುಗಾರಿಕೆಯನ್ನು ಅಣಕಿಸುವಂತಿದೆ. ಕುರಿಗಳ ಸೃಷ್ಟಿ

ಮೂಲ ಕಥನಗಳು ಮತ್ತು ಡೊಳ್ಳು ವಾದ್ಯದ ಸೃಷ್ಟಿಯ ಕಥನಗಳನ್ನು ಇವತ್ತಿನ ಆರ್ಥಿಕ ಪರಿಕಲ್ಪನೆಯಲ್ಲಿ ನೋಡಬಹುದು.

"ಕುರಿಯ ಮ್ಯಾಲೆ ಒಂದು ಕಣ್ಣಿರಲ್ಯೋ
ಡೊಳ್ಳಿನ ಮ್ಯಾಲೆ ಒಂದು ಕೈಯಿರಲ್ಯೋ"[೧೪]

ಕುರಿಗಳ ಸಂರಕ್ಷಣೆಗಾಗಿ ಡೊಳ್ಳು ವಾದ್ಯವನ್ನು ಸೃಷ್ಟಿಕೊಂಡಿದ್ದೇವೆ ಎನ್ನುವ ಸೃಷ್ಟಿ ಕಥನಗಳು ಸಿಗುತ್ತವೆ. ರಾಕ್ಷಸನ ಸಂಹಾರದ ನಂತರ ಡೊಳ್ಳನ್ನು ಸೃಷ್ಟಿಸಿಕೊಂಡಿದ್ದೇವೆ ಅನ್ನುವುದು ಸಹ ಕುರಿಗಳ ಮತ್ತು ತಮ್ಮ 'ರಕ್ಷಣೆ'ಯ ಪ್ರತೀಕವಾಗಿ ಬಳಕೆ ಆಗಿದೆ. ಕುರಿ ಕಾಯುವಿಕೆ, ಡೊಳ್ಳು ವಾದ್ಯ ಬಾರಿಸುವಿಕೆ, ಕಂಬಳಿ ನೇಯುವಿಕೆ, ಪೂಜಾರಿತನ ಮಾಡುವಿಕೆ ಮುಂತಾದ ವೃತ್ತಿಗಳನ್ನು ದೈವ ಮೂಲಗಳಿಂದಲೇ ಆರಂಭಿಸಿಕೊಳ್ಳುತ್ತಾರೆ. ತಮ್ಮ ವೃತ್ತಿಗಳ ಬಗ್ಗೆ ಶ್ರೇಷ್ಟತೆಯನ್ನು ಮರಿಸಿಕೊಳ್ಳುವ ತಂತ್ರಗಾರಿಕೆ ಇದು. ಈ ಹಾಡುಗಳು ವ್ಯವಹಾರ ಜ್ಞಾನಗಳಿಂದ ಕೂಡಿರುತ್ತವೆ. "ಲೋಕದೃಷ್ಟಿಯು ಆಯಾ ಸಂಸ್ಕೃತಿಗಿರುವ ವ್ಯವಹಾರಿಕ ಜ್ಞಾನದಲ್ಲಿ ಕ್ರಿಯಾಶೀಲವಾಗಿರುತ್ತದೆ. ಆದ್ದರಿಂದಲೇ ಜನರು ತಮ್ಮ ವ್ಯವಹಾರಿಕ ನೆಲೆಯನ್ನು ಆಧರಿಸಿಕೊಂಡು ತಮ್ಮ ಸಂಸ್ಕೃತಿ ಶ್ರೇಷ್ಠ ಎಂಬ ಭಾವನೆಗೆ ಪಕ್ಕಾಗಿ ಬಿಡುತ್ತಾರೆ. ಇದು ಒಂದು ಬಗೆಯ ಮಿಥ್ಯಾಪ್ರಜ್ಞೆ ಅಥವಾ ಸಂಸ್ಕೃತಿಯೊಂದರ ಹುಸಿ ನೆಲೆ. ಇವರು ಬೇರೆ ಸಂಸ್ಕೃತಿಗಳಿಗೂ ಅಂಥ ಸೈದ್ಧಾಂತಿಕತೆ ಇರುತ್ತದೆ ಅನ್ನುವುದನ್ನು ಮರೆತುಬಿಟ್ಟು, ಎಷ್ಟೋ ಬಾರಿ ಅಕ್ರಮಣಶೀಲರಾಗಿಬಿಡುತ್ತಾರೆ. ನಮ್ಮಲ್ಲಿರುವ ವಿವಿಧ ಜಾತಿಗಳ ಬಗೆಗೆ ಹುಚ್ಚರಂತೆ ವರ್ಣಿಸುತ್ತಾ ತಮ್ಮ ಮಿಥ್ಯಾ ಪ್ರಜ್ಞೆಯನ್ನು ಪ್ರಕಟಿಸುವುದುಂಟು. ಮತ-ಧರ್ಮ-ಪ್ರದೇಶಗಳ ವಿಷಯದಲ್ಲೂ ಈ ಮಿಥ್ಯಾಪ್ರಜ್ಞೆ ತೀವ್ರವಾಗಿ ಕಾಡುತ್ತದೆ. ಸಂಸ್ಕೃತಿಯೊಂದರ ಸೈದ್ಧಾಂತಿಕತೆಯು ಹೀಗೆ ಜನರನ್ನು ಭ್ರಮಾತ್ಮೀಕರಣಕ್ಕೆ ಒಳಪಡಿಸಿ ಬಿಡುತ್ತಾರೆ"[೧೫] ಎನ್ನುವ ಪುರುಷೋತ್ತಮ ಬಿಳಿಮಲೆ ಅವರ ಮಾತುಗಳು ಸಮುದಾಯಗಳ ವೃತ್ತಿಯ ಬಗ್ಗೆ ತಾಳುವ ಮತ್ತು ತಾಳಿರುವ ಭಿನ್ನ ಆಯಾಮಗಳನ್ನು ನಮ್ಮೆದುರಿಗೆ ಇಡುತ್ತದೆ.

ಶಿಷ್ಟ ಸಂಸ್ಕೃತಿ ಮತ್ತು ಶಿಷ್ಟ ಕಾಯಕ ಧರ್ಮವನ್ನು ಹಾಡುಗಳಲ್ಲೇ ಎದುರುಗೊಳ್ಳುವ ಮೂಲಕ ಕಾಯಕದ ಮೌಲ್ಯವನ್ನು ಕೃಷಿಯೊಂದಿಗೆ ಸಮೀಕರಿಸುತ್ತವೆ. ಕುರುಬರು ಕೇವಲ ಪಶುಪಾಲಕರು ಮಾತ್ರವಲ್ಲ ಅವರು ಕೃಷಿಕರೂ ಕೂಡ. ಕುರುಬರು ಯಾವುದೇ ಕಾರ್ಯವನ್ನು ಮೊದಲು ಮಾಡಿ ಆರಂಭಿಸಿದರೆ ಒಳ್ಳೆಯದಾಗುತ್ತದೆ. ಶುಭ ಸೂಚಕ ಎನ್ನುವ ಲೋಕದೃಷ್ಟಿ ವ್ಯಕ್ತವಾದದ್ದು ಮತ್ತದು ಗಟ್ಟಿಯಾದ ನಂಬಿಕೆಯಾದದ್ದೂ ಸಹ ಡೊಳ್ಳಿನ ಹಾಡುಗಳ ಮೂಲಕವೆ. ಇದು ವಿಗ್ರಹ ಬಂಜಕ, ಮೇಲ್ವರ್ಗದವರ ಪಾವಿತ್ರ್ಯ ನಾಶಕ್ಕೆ ಒಂದು ಸಮರ್ಥ ರೂಪಕ. ಈ ಮೂಲಕ ಪ್ರತಿ ಸಂಸ್ಕೃತಿ ರೂಪುಗೊಳ್ಳುವ ಪ್ರಕ್ರಿಯೆಯೊಂದು ಜೀವಂತವಾಗುತ್ತಿರುವುದನ್ನು ಗಮನಿಸಲಿಕ್ಕೆ ಸಾಧ್ಯ. ಕುರುಬರ ಮೊದಲ ಬೋಣಿಗೆ ಕುರಿತ ಹಾಡೊಂದು ಹೀಗಿದೆ.

"ಚೊಲೋ ಗವಾಯಿಗಳ ಜಗದೊಳಗಿರುವಾಗ
ಕುರುಬನ ಪದ ಯಾರ ಕೇಳಬೇಕ

ಕುರುಬರಂತೆ ಹೇಳಿ ಶೃತಿ ಸಾರತಾವ
ಓದಿ ನೋಡಿರಿ ಪುಸ್ತಕ
ಕುರುಬರೆಂದರ ಜರಿಯಬೇಡದರಿ
ಮಾಡಿಕೊಳ್ಳಿರಿ ನಿಮ್ಮ ಮನಪಕ್ಕ
ವರುಷಾ ವರುಷಾ ಉಗಾದಿ ಪಾಡೇಕ
ಹೊಲದಾಗ ಕುಂಟಿ ಹೂಡುದಕ
ಮೊದಲ ಕುರುಬನ ಕುಂಟಿ ಹೋಗಲೆಂತ
ರೈತರ ಮಾಡ್ಯಾರ ನೇಮನೂಕ
ಮೋಜಮೊಜಲಿಗೆ ಕುರುಬನ ಮಜಲು
ಗವಾಪತಿ ಪೂಜೆಯ ಮಾಡಬೇಕ
ಮಳಿ ಇಲ್ಲದೆ ಹನ್ನೆರಡು ವರುಷ ಬರಬಿದ್ದೀತು ದೇಶಕ್ಕೆ
ರೈತರಾಣ್ಯಾರೆಲ್ಲ ಹೊಂದಿಗೂಡಿಕೊಂಡು ಬಂದಾರ ಕುರುಬನ ಹಂತೇಕ”[೧೬]

ಹೀಗೆ ಕಾಯಕದ ಮೌಲ್ಯಗಳನ್ನು ವಿಸ್ತರಿಸುತ್ತಾ, ಅದಕ್ಕೆ ದೈವಿಕ ನೆಲೆಯನ್ನು ಕೊಡುವ ಮೂಲಕ ಒಂದು ಸಮುದಾಯದ ಕಾಯಕಕ್ಕೆ ಶ್ರೇಷ್ಠತೆಯನ್ನು ತಂದುಕೊಡುವುದು. ಹೀಗೆ ಪ್ರತಿ ಸಮುದಾಯಗಳು ಕಾಯಕ ನಿಷ್ಠೆಯನ್ನು ಪ್ರತಿನಿಧಿಸುತ್ತವಾದರೂ ಆ ಕಾಯಕದಿಂದಾದ ಲಾಭ ನಷ್ಟದ ಬಗೆಗೆ ಮಾತನಾಡುವುದಕ್ಕಿಂತ ಅದರ ಸಾಂಸ್ಕೃತಿಕ ಆಯಾಮಕ್ಕೆ ಇಲ್ಲಿ ಹೆಚ್ಚು ಅವಕಾಶವಿರುತ್ತದೆ. ಹೀಗೆ ಡೊಳ್ಳಿನ ಕಾಡುಗಳಲ್ಲಿ ವೃತ್ತಿ ಮೂಲ ಲೋಕದೃಷ್ಟಿಯ ವಿಶಿಷ್ಟ ನೆಲೆಗಳನ್ನು ಗುರುತಿಸಲಿಕ್ಕೆ ಸಾಧ್ಯವಿದೆ.

೬.೪.೫. ಲಿಂಗಮೂಲ ಲೋಕದೃಷ್ಟಿ

ಡೊಳ್ಳು ಮೂಲತಃ ಗಂಡು ಕಲೆಯಂತಲೇ ಹೇಳುತ್ತಾರೆ. ಅಂದರೆ ಡೊಳ್ಳಿನ ದೈತ್ಯಕಾರಕ್ಕೆ, ಅದರ ಗಡುಸಾದ ನಾದಕ್ಕೂ ಅದರ ಮೈನೆವರೇಳಿಸುವ ತಾಳಕ್ಕೂ ಗಂಡಿನ ದೈಹಿಕ ಲಕ್ಷಣಗಳಿಗೂ ಹೋಲಿಸಲಾಗುತ್ತದೆ. ಮೂಲತಃ ಕಲೆಗಳನ್ನು ಗಂಡು ಕಲೆ, ಹೆಣ್ಣು ಕಲೆ ಅಂತ ವರ್ಗೀಕರಿಸುವುದೇ ಒಂದು ಬಗೆಯ ಪುರುಷ ಮೂಲಭೂತವಾದದ ಧೋರಣೆ. ದೊಡ್ಡದಾದ ಡೊಳ್ಳು ಗಂಡು ಕಲೆಯನ್ನು ಪ್ರತಿನಿಧಿಸಿದರೆ, ಹೆಣ್ಣನ್ನು ತುಚ್ಛಗೊಳಿಸಲು ಇರುವ ಅವಳಿ ವೈರುಧ್ಯಗಳಂತೆ ಕಾಣುತ್ತದೆ. ಹೀಗೆ 'ಡೊಳ್ಳನ್ನು' ಗಂಡು ಕಲೆ ಎಂದು ಸಮೀಕರಿಸುವ ಹೊತ್ತಿಗೇ ಈಗೀಗ ಹೆಣ್ಣುಮಕ್ಕಳ ಡೊಳ್ಳಿನ ತಂಡಗಳಿರುವುದನ್ನು ಗಮನಿಸಬೇಕು. ಡೊಳ್ಳಿನ ಹಾಡುಗಳನ್ನು ಹಾಡುವವರು ಬಹುಪಾಲು ಗಂಡಸರು. ಈಗೀಗ ಹೆಣ್ಣುಮಕ್ಕಳು ಪ್ರವೇಶ ಪಡೆಯುತ್ತಿದ್ದಾರೆ. ಇದು ಒಂದು ಕಲೆಯನ್ನು ಲಿಂಗಾಧಾರಿತವಾಗಿ ವರ್ಗೀಕರಿಸಿದ ಕ್ರಮವನ್ನೇ ಪ್ರಶ್ನಿಸುತ್ತಿದೆ ಅಥವಾ ಮೌಲ್ಯವನ್ನು ಒಡೆದು ಪ್ರತಿ ಮೌಲ್ಯವನ್ನು ಸ್ಥಾಪಿಸುತ್ತಿದೆ.

ಡೊಳ್ಳು ಗಂಡು ಕಲೆಯಾದ ಕಾರಣ ಬಹುಪಾಲು ಡೊಳ್ಳಿನ ಹಾಡುಗಳು ಪುರುಷ ವಾಚಕ ನಿರೂಪಣೆಯಿಂದಲೇ ಕೂಡಿವೆ. ಈ ಹಾಡುಗಳಲ್ಲಿ ಬರುವ ಮಹಿಳೆಯು ಸೌಮ್ಯವಾದಿ ಮಹಿಳೆಯೇ ಆಗಿದ್ದಾರೆ. ಇಲ್ಲಿ ಸಿಡಿದ ಮಹಿಳೆ ಬರುವುದು ಅಪರೂಪ. ಈ ಸಮುದಾಯದಲ್ಲಿ ಕಾಣಿಸಿಕೊಳ್ಳುವ

ಮಹಿಳೆಯರು ಹೋರಾಟಗಾರ್ತಿಯರು. ಪಶುಪಾಲನೆಗಾಗಿ ಹೋರಾಟ ಮಾಡಿದರು. ಬಹುಪಾಲು ಡೊಳ್ಳಿನ ಹಾಡುಗಳು ಕುರುಬರ ಪುರುಷ ದೈವಗಳನ್ನು ಹೆಚ್ಚು ಕೊಂಡಾಡುತ್ತಾರೆ. ಪವಾಡಗಳನ್ನು ವಿಜೃಂಬಿಸುತ್ತಾರೆ. ಈ ಕಥನಗಳಲ್ಲಿ ಬರುವ ಮಹಿಳೆಯರು ಮಂಕಾಗಿ ಕಾಣುತ್ತಾರೆ ಅಥವಾ ದುರ್ಬಲ ರಂತೆ ಕಾಣುತ್ತಾರೆ. ಕೆಲವೇ ಕೆಲವು ಪದಗಳಲ್ಲಿ ಇದಕ್ಕೆ ಅಪವಾದಗಳೂ ಇವೆ. ಹೆಣ್ಣನ್ನು ನೋಡುವ ಒಂದು ಬಗೆಯ ದೃಷ್ಟಿಕೋನ ಈ ಹಾಡಿನಲ್ಲಿ ಹೀಗಿದೆ :

"ಹೆಣ್ಣು ಹೆಚ್ಚಂತ ಬಣ್ಣಿಸಿ ಹೇಳಬ್ಯಾಡ
ಮಾನಕಮ್ ಶ್ಯಾನಿನ ಜಾತಿ | ನಿಮ್ಮ ಶಕ್ತಿ
ಆಗ್ಯಾಳ ಚಿಂಪ್ಯಾಗಿನ ಸೋಪ್ಪಿ
ದ್ರೌಪದಿ ಕರ್ಣನ ಮ್ಯಾಲೆ ಮನಸ ಮಾಡಿ ತಿಳಿದಿಲ್ಲ
ಹೆಂಗಸರ ಮನೋಗತಿ | ಸುಭದ್ರಾಗ ನಾಚಿಕೆ
ಎಲ್ಲೈತಿ |
ಸನ್ಯಾಸಿ ಅರ್ಜುನನ ಮೋಸ ಮಾಡಿದಾಳ
ಮುಂದ ಕೇಳರಿ ಕೃಷ್ಣ ಕಥಿ | ರುಕ್ಮಿಣಿ
ಹ್ವಾದಾಳ ಕೃಷ್ಣನ ಬೆನ್ನ ಹತ್ತಿ |
ಸೋಳಾ ಸಾವಿರ ಗೋಪಿಕಾ ಸ್ತ್ರೀಯರು ಹ್ವಾದಾರ
ಕೃಷ್ಣನ ಬೆನ್ನತ್ತಿ | ಹೆಣ್ಣ ಹೆಚ್ಚ ಅಂತ
ಸುಳ್ಳ ನೀ ಪಾದ ಹಾಕತಿ" |೯

ಹೀಗೆ ಪುರಾಣ ಪಾತ್ರಗಳನ್ನು ಬಳಸಿಕೊಂಡು ಕಟ್ಟಿದ ಹಾಡೊಂದು ಹೆಣ್ಣಿನ ದೌರ್ಬಲ್ಯವನ್ನು ಹಾಡುತ್ತಿದೆ. ಹೆಣ್ಣನ್ನು 'ನಾಯಿ'ಯ ಜಾತಿಗೆ ಹೋಲಿಸುವ ಪರಿಯೂ ಪುರುಷಪ್ರಧಾನ ಸಮಾಜದ ಆತ್ಯಂತಿಕ ನಿಲುವೊಂದು ತಾಳಿದಂತಿದೆ. ಈ ಮೇಲಿನ ಹಾಡಿನ ತುಂಬ ಪೂರ್ತಿ ಹೆಣ್ಣು ಮೋಸಗಾರ್ತಿ, ಅವಳು ನಂಬಿಕೆಗೆ ಅರ್ಹಳಲ್ಲ ಎನ್ನುವ ನಿಲುವಿರುವುದನ್ನು ನೋಡಬಹುದು. ಹಾಗೆಂದಾಗ ಇಂತಹ ಪದಗಳನ್ನು ನಮ್ಮ ಕಾಲಕ್ಕೆ ಹೊಂದಿಸಿಕೊಂಡು, ಅನ್ವಯಿಸಿಕೊಳ್ಳುವುದು ಹೇಗೆ? ಈ ಮಾದರಿ ಗೀಗಿ ಪದಗಳಲ್ಲಿಯೂ, ಲಾವಣಿಗಳಲ್ಲಿಯೂ ಕಾಣುತ್ತದೆ. ಇಲ್ಲಿ ಹೆಣ್ಣು ಹೆಚ್ಚು, ಗಂಡು ಹೆಚ್ಚು ಎನ್ನುವ ಜಿದ್ದಾ ಜಿದ್ದಾ ಹಾಡುಗಳು ಇರುತ್ತವೆ. ಇಲ್ಲಿ ಹೆಣ್ಣನ್ನು ಅವಾಚ್ಯ ಶಬ್ದಗಳಿಂದ ಜರಿಯುವಿಕೆಯೂ ಇರುತ್ತದೆ. ಹೆಣ್ಣನ್ನು ಶಕ್ತಿಯ ಸಂಕೇತವಾಗಿ ನೋಡದೆ ಅವಳನ್ನು ಭೋಗದ ವಸ್ತು ಮತ್ತು ದುರ್ಬಲಳು ಎಂದು ಸಾರುವ ಡೊಳ್ಳಿನ ಹಾಡುಗಳನ್ನು ತುಂಬಾ ಎಚ್ಚರದಿಂದ ವಿವರಿಸಿಕೊಳ್ಳಬೇಕಿದೆ. ಇಂತಹ ಹಾಡುಗಳು ಹಳ್ಳಿಗಳಲ್ಲಿ ಮತ್ತೆ ಮತ್ತೆ ಪುನರುಕ್ತಿ ಆಗುವ ಕಾರಣಕ್ಕೇ ಗ್ರಾಮೀಣ ಭಾಗದಲ್ಲಿ ಸ್ತ್ರೀಯು ಪುರುಷನ ಅಧೀನದಲ್ಲಿಯೋ ಉಳಿದಳೆ ಎಂಬ ಪ್ರಶ್ನೆಯು ಎದುರಾಗುತ್ತದೆ.

ಡೊಳ್ಳಿನ ಹಾಡುಗಳನ್ನು ದೇವಿಯ ಹಾಡುಗಳು ಬಂದಾಗಲೆಲ್ಲಾ ದೇವಿಯ ಶಕ್ತಿಯಾರಾಧನೆಯ ನೆಲೆಯಲ್ಲಿ ವಿವರಿಸುತ್ತಾರೆ. ದೇವಿಗೆ ಭಂಗ ಬಂದಂತೆ ಅವಳ ಪವಾಡಗಳನ್ನು ಹಾಡಲಾಗುತ್ತದೆ. ಆದರೆ ಅದೇ ಸಾಮಾನ್ಯ ಮಹಿಳೆಯೊಬ್ಬಳು ಡೊಳ್ಳಿನ ಹಾಡಿನ ವಸ್ತುವಾಗುತ್ತಲೂ ಅವಳನ್ನು ಶಕ್ತಿಯ ಸಂಕೇತವಾಗಿ ನಿರೂಪಿಸಲು ಮನಸ್ಸು ಒಪ್ಪದೆ, ಅವಳನ್ನು ದುರ್ಬಲಳನ್ನಾಗಿ ಚಿತ್ರಿಸುವ ಮಾದರಿಯನ್ನು

ಗಮನಿಸಬೇಕು. ಈಚೆಗೆ ಬರುತ್ತಿರುವ ಡೊಳ್ಳಿನ ಹಾಡುಗಳಲ್ಲಿ ಈ ಬಗೆಯ ಮಹಿಳೆಯ ತುಚ್ಛೀಕರಣ ಹೆಚ್ಚುತ್ತಿದೆ. ಹಣಕ್ಕಾಗಿ ಬೈದು ಹಾಡುವುದೇ ಇದಕ್ಕೆ ಪ್ರಮುಖ ಕಾರಣ. ಡೊಳ್ಳಿನ ಹಾಡಿನ ಮೂಲಕ ಕುರುಬರ ಲೋಕದೃಷ್ಟಿಯನ್ನು ವಿವರಿಸ ಹೊರಟಾಗ ಮಹಿಳೆಯನ್ನು ದಮನಕಾರಿಯಾಗಿ ನೋಡುವ ಹಾಡುಗಳನ್ನು ಬೇರೆಯಾಗಿಯೇ ನೋಡಬೇಕಾಗಿದೆ. ಅವುಗಳು ತನ್ನ ಕಾಲದ ಮಹಿಳೆಯನ್ನು ಪ್ರತಿನಿಧಿಸಲಾರವು ಎಂಬಂಥ ನಿಲುವು ತಾಳಲು ಅಧ್ಯಯನಕಾರರಿಗೆ ಸಾಧ್ಯವಾಗಬೇಕಿದೆ.

೬.೪.೬. ವರ್ತಮಾನದ ಲೋಕದೃಷ್ಟಿ

ಡೊಳ್ಳಿನ ಹಾಡುಗಳಲ್ಲಿ ವರ್ತಮಾನದ ಲೋಕದೃಷ್ಟಿಯೊಂದು ತುಂಬಾ ತೀವ್ರವಾಗಿ ರೂಪುಗೊಳ್ಳುತ್ತಿದೆ. ನಾಜೂಕಿನ ಕಾಲವನ್ನು, ಬದಲಾಗುತ್ತಿರುವ ಹೆಣ್ಣು ಗಂಡಿನ ಸಂಬಂಧವನ್ನು, ಆಧುನಿಕ ಪರಿಕರಗಳೊಂದಿಗೆ ಸಮಾಜದ ಒಳಗೊಳ್ಳುವಿಕೆಯನ್ನು ಸಿನಿಮಾ, ಟಿವಿ ಮಾಧ್ಯಮದ ಪರಿಣಾಮವನ್ನು ಹೀಗೆ ಹತ್ತಾರು ವರ್ತಮಾನದ ಸಂಗತಿಗಳ ಬಗೆಗೆ ಡೊಳ್ಳು ಹಾಡುಗಳಲ್ಲಿ ಒಂದು ಬಗೆಯ ಲೋಕದೃಷ್ಟಿ ವ್ಯಕ್ತವಾಗುತ್ತಿದೆ. ಹಾಗೆಂದಾಗ ಈ ಹಿಂದೆ ಸಂಗ್ರಹಿತವಾದ ಡೊಳ್ಳಿನ ಹಾಡುಗಳಲ್ಲಿ ವರ್ತಮಾನದ ಮುಖಾಮುಖಿ ಇರಲಿಲ್ಲವೆಂತಲ್ಲ. ಆದರೆ ಈಗಿನ ಹಾಡುಗಳಲ್ಲಿ ವ್ಯಕ್ತವಾಗುವ ವರ್ತಮಾನದ ಕಲ್ಪನೆ ಹಿಂದಿನ ಹಾಡುಗಳಲ್ಲಿ ಪರಿಣಾಮಕಾರಿಯಾಗಿ ಮೂಡಿ ಬರಲಿಲ್ಲ ಎಂದಷ್ಟೇ ಹೇಳಬಹುದು.

ನಾವಿಂದು ಅನೇಕ ಸ್ಥಿತ್ಯಂತರಗಳಿಗೆ ನಮ್ಮನ್ನು ನಾವು ಬಗ್ಗಿಸಿಕೊಳ್ಳುತ್ತಿದ್ದೇವೆ ಅಥವಾ ಕಾಲದ ಅನಿವಾರ್ಯತೆಯ ಜೊತೆ ರಾಜಿಯಾಗುತ್ತಿದ್ದೇವೆ ಎಂದರೆ ಸರಿ. ಈಚಿನ ಡೊಳ್ಳಿನ ಹಾಡುಗಳಲ್ಲಿ ವರ್ತಮಾನದ ಸಂಕೇತಗಳು ಕೇವಲ ಸಂಕೇತಗಳಾಗಿರದೆ ಅವುಗಳು ದಮನಕಾರಿ ಆಶಯಗಳು ಆಗಿವೆ ಎನ್ನುವ ಸೂಚನೆಗಳಿವೆ. 'ಕುಲಮೂಲ'ಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ಇರುವ ಆಕರಗಳಂತೆ ಸೃಷ್ಟಿಯಾಗುತ್ತವೆ. ಆರ್ಥಿಕ ಸಂಪನ್ಮೂಲ ಮತ್ತು ವೈಯಕ್ತಿಕ ಪ್ರತಿಷ್ಠೆಯನ್ನು ತರುವ ವೃತ್ತಿಗಳೆನ್ನುವಂತೆ ರೂಪಗೊಳ್ಳುತ್ತಿವೆ. ಇದರಿಂದ ದೈವಿ ನೆಲೆಯ ಸಂಬಂಧ ಮತ್ತು ಈ ವೃತ್ತಿಯು ಸೃಷ್ಟಿಯ ಕಥನಗಳಿಂದ ವಿಸ್ಮೃತಿ ಆಗುತ್ತಲಿವೆ. ಇವುಗಳ ಹೆಚ್ಚಿನ ವಿವರಗಳಿಗಾಗಿ ಪಂಥಗಳ ಹಾಡು, ಸಾಂಸ್ಕೃತಿಕ ವೀರರ ತಾತ್ವಿಕತೆ ಮತ್ತು ಡೊಳ್ಳಿನ ಹಾಡುಗಳು ಹಾಗೂ ಆಧುನಿಕತೆ ಅಧ್ಯಯನಗಳನ್ನು ನೋಡಬಹುದು.

೬.೫. ಡೊಳ್ಳಿನ ಹಾಡುಗಳ ಲೋಕದೃಷ್ಟಿಯ ತಾತ್ವಿಕತೆ

ಡೊಳ್ಳಿನ ಹಾಡುಗಳ ಕ್ಷೇತ್ರ ವಿಶಾಲವಾದದ್ದು. ಹಲವು ಬಗೆಯ ಲೋಕದೃಷ್ಟಿ ಕಥನಗಳು ಈ ಹಾಡುಗಳಲ್ಲಿ ಸಿಗುತ್ತವೆ. ಅಂದರೆ ಹತ್ತಾರು ಕುಲಗಳ ಅಥವಾ ಹತ್ತಾರು ಕುಲ ಮೂಲಗಳ, ಹತ್ತಾರು ವೃತ್ತಿ ಮೂಲಗಳ, ನೂರಾರು ಸ್ಥಳ ಮೂಲಗಳ, ಹಲವು ಸಾಂಸ್ಕೃತಿಕ ವೀರರ ಸೃಷ್ಟಿಗಳ, ಕುಲಗಳ, ಛಿದ್ರೀಕರಣವಾಗುವ ಅಥವಾ ಪ್ರತಿ ಸಂಸ್ಕೃತಿ, ಸಂಸ್ಕೃತೀಕರಣ ತಾಳುವ ಸೃಷ್ಟಿ ಕಥನಗಳು ಅಂದರೆ ಮೂಲ ಕುಲದೊಂದಿಗೆ ಸಂಬಂಧವನ್ನು ಕಳಚಿಕೊಂಡು ತನ್ನದೇಯಾದ ಲೋಕ, ವೃತ್ತಿ,

ಕುಲ ಮುಂತಾದ ಸಾಂಸ್ಕೃತಿಕ ಆಯಾಮಗಳನ್ನು ಕಟ್ಟಿಕೊಳ್ಳುವಾಗ ಪ್ರತ್ಯೇಕವಾದ ಲೋಕಸೃಷ್ಟಿ ಕಥನಗಳು ಸಿಗುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಆ ಎಲ್ಲಾ ಬಗೆಯ ಲೋಕಸೃಷ್ಟಿ ಕಥನಗಳನ್ನು ಮತ್ತು ಭಿನ್ನ ಪಠ್ಯಗಳನ್ನು ಈ ಅಧ್ಯಯನದಲ್ಲಿ ಗುರುತಿಸುವುದಕ್ಕೆ ಸಾಧ್ಯವಾಗಿಲ್ಲ. ಅಧ್ಯಯನದಲ್ಲಿ ಬಳಕೆಯಾದ ಲೋಕಸೃಷ್ಟಿ ಕಥನಗಳನ್ನು ಇತರ ಸಮುದಾಯಗಳ ಲೋಕ ಸೃಷ್ಟಿ ಕಥನಗಳೊಂದಿಗೆ ಮತ್ತು ಈ ಸಮುದಾಯದ ಸಾಂಸ್ಕೃತಿಕ ವೀರರ ಆಚರಣೆ ಉತ್ಸವ ಮತ್ತು ಬದುಕಿನ ಭಿನ್ನ ಆಯಾಮ ಗಳೊಂದಿಗೆ ನೋಡುವುದಕ್ಕೆ ಸಾಧ್ಯವಾಗಿಲ್ಲ. ಹಾಗೆಂದು ಈ ಅಧ್ಯಯನಕ್ಕೆ ಈ ಯಾವುದೇ ಆಯಾಮ ಗಳು ಇಲ್ಲ ಎಂದರ್ಥವಲ್ಲ, ಇವೆ. ಆದರೆ ಪ್ರಸ್ತುತ ಅಧ್ಯಯನವು ಬಯಸುವಷ್ಟು ಆಕರಗಳಿಂದ ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದು ಅಧ್ಯಯನದ ಮಿತಿ ಮತ್ತು ಚೌಕಟ್ಟು ಹೌದು.

ಡೊಳ್ಳಿನ ಹಾಡುಗಳ ಲೋಕದೃಷ್ಟಿ ಕಥನಗಳು ತಮ್ಮಷ್ಟಕ್ಕೆ ತಾವು ವಿಶಿಷ್ಟ ಮತ್ತು ಅನನ್ಯ ಎಂಬುದನ್ನು ಸಾಬೀತು ಪಡಿಸುತ್ತವೆ. ಶಿಷ್ಟ ಪುರಾಣಗಳ ಕೃತಕತೆಯಾಗಲೀ, ಜನಪದ ಸಮಾಜ ಉಳಿಗಮಾನ್ಯ ಬಂಧನವಾಗಲೀ ಇಲ್ಲಿಲ್ಲ. ತಮ್ಮನ್ನು ತಾವು ಸ್ವತಂತ್ರರೆಂದು ಘೋಷಿಸಿಕೊಳ್ಳುವ ಎದೆಗಾರಿಕೆ ಇದೆ. ಇದು ಒಮ್ಮೊಮ್ಮೆ ಹಠತನಕ್ಕೆ ಬಿದ್ದಿದೆ. ಇದರ ಹಿಂದಿನ ರಾಜಕಾರಣವನ್ನು ಗುರುತಿಸಬೇಕು. ವಿಸ್ಮೃತಿ ಅಥವಾ ಭ್ರಮ್ಮಾತ್ಮೀಕರಣವನ್ನು ಮೀರಿ ನಿಂತ ಡೊಳ್ಳಿನ ಹಾಡುಗಳು ಅಧ್ಯಯನಕಾರರನ್ನು ತಮ್ಮತ್ತಿರ ಬರುವಂತೆ ಆಹ್ವಾನ ಮಾಡಿ ನಿಂತಿವೆ. ಇಲ್ಲಿ ಎನ್ನುವ ಬಿ.ಎಂ.ಶ್ರೀ.

"ಬೆಳೆಯೇನೂ ಬೇಕಾದ ಹಾಗಿದೆ
ಕುಯ್ಯುವವರು ಕಡಿಮೆ"

ಅವರ ಕವನದ ಸಾಲುಗಳು ನೆನಪಿಗೆ ಬರುತ್ತವೆ.

ಅಡಿಟಿಪ್ಪಣಿಗಳು

೧. ಪುರುಷೋತ್ತಮ ಬಿಳಿಮಲೆ, **ಕರಾವಳಿ ಜಾನಪದ**, ಪು. ೧೫೪.

೨. ಅದೇ., ಪು. ೧೫೪.

೩. ವೀರಣ್ಣದಂಡೆ (ಸಂ), **ಜನಪದ ಹಾಲುಮತ ಮಹಾಕಾವ್ಯ**, ಪು. ೨.

೪. ಬೋರಲಿಂಗಯ್ಯ ಹಿ.ಚಿ., **ದೇಸಿ ಸಂಸ್ಕೃತಿ ಸಂಕಥನ**, ಪು. ೧೭೯.

೫. ವೀರಣ್ಣದಂಡೆ (ಸಂ), **ಜನಪದ ಹಾಲುಮತ ಮಹಾಕಾವ್ಯ**, ಪು. ೧೨.

೬. ಹಾಡಿದವರು; **ನಿಂಗಪ್ಪ ರಾಯಪ್ಪ ಕಡಕೋಳ್, ಚಿಕ್ಕೊಪ್ಪ.**

೭. ನಿಂಗಣ್ಣ ಸಣ್ಣಕ್ಕಿ, **ಜಾನಪದ ಪ್ರಚಾರ**, ಪು. ೩೧.

೮. ಅದೇ., ಪು. ೨೭.

೧೦. ನೀಲಗಾರ, **ಜಾನಪದ ಜೇನು**, ಪು. ೭೯.

೧೧. ರುದ್ರಪ್ಪ ಕೆ., **ಬಳ್ಳಾರಿ ಜಿಲ್ಲೆ ಜನಪದ ಸಾಹಿತ್ಯ**, ಪು. ೩೯.

೧೨. ಹಾಡಿದವರು; **ಆಶಾ ಬಸಗೊಂಡ ಗೌಡಿ ಕಿರಣಗಿ,** ಅಥಣಿ ತಾಲೂಕು.

೧೩. ನಿಂಗಣ್ಣ ಸಣ್ಣಕ್ಕಿ, **ಜಾನಪದ ಪ್ರಚಾರ,** ಪು. ೨೬.

೧೪. ಎಂ.ಎಂ. ಕರಡಿ ಬುಕ್ ಸೆಲ್ಲರ್, ಹುಬ್ಬಳ್ಳಿ, **ಡೊಳ್ಳಿನ ಹಾಡುಗಳು,** ಪು. ೧೪.

೧೫. ಪುರುಷೋತ್ತಮ ಬಿಳಿಮಲೆ, **ಕೂಡುಕಟ್ಟು,** ಪು. ೧೧೨.

೧೬. ನೀಲಗಾರ ಎ.ಜಿ., **ಜಾನಪದ ಜೇನು,** ಪು. ೯೯.

೧೭. ಶಿವಾನಂದ ಶೆಲ್ಲಿಕೇರಿ (ಸಂ), **ಕೃಷ್ಣಾತೀರಿದ ಹಾಡು ಸಂಸ್ಕೃತಿ,** ಪು. ೧೧.

• • •

ಅಧ್ಯಾಯ ಏಳು

ಡೊಳ್ಳಿನ ಹಾಡುಗಳು ಮತ್ತು ಆಧುನಿಕತೆ

೭.೧. ಪ್ರವೇಶ

ಇಂಗ್ಲಿಷ್‌ನ 'Modern' ಎನ್ನುವ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಆಧುನಿಕತೆ' ಎನ್ನುವ ಪದವನ್ನು ಬಳಿಸುತ್ತಿದ್ದೇವೆ. 'Modern' ಎನ್ನುವ ಪದ 'ಲ್ಯಾಟಿನ್' ಭಾಷೆಯ 'Modernus' ಎಂಬ ಪದದಿಂದ ನಿಷ್ಪನ್ನಗೊಂಡಿದೆ. ಈ ಪದವನ್ನು ೧೫ನೇ ಶತಮಾನದಲ್ಲಿ ರೋಮನ್ನರು ಕ್ಷುದ್ರಧರ್ಮ (pagen)ಗಳನ್ನು ವರ್ತಮಾನ ಕಾಲದಿಂದ ಪ್ರತ್ಯೇಕಿಸಲು ಬಳಸಿದರು. ಮಧ್ಯಯುಗದಲ್ಲಿ ಈ ಪದ ವಿಸ್ತೃತ ರೂಪ ಪಡೆದು ಸಮಕಾಲೀನ ಘಟ್ಟವನ್ನು ಗುರುತಿಸುವುದಕ್ಕೆ ಬಳಕೆ ಆಯಿತು. ಆಧುನಿಕತೆ ಪರಿಕಲ್ಪನೆ ರೂಪಗೊಂಡ ವಿಧಾನವನ್ನು ನಟರಾಜ ಹುಳಿಯಾರ್ ಅವರು ಈ ರೀತಿಯಾಗಿ ಗುರುತಿಸುತ್ತಾರೆ. "ಪುನರುಜ್ಜೀವನ ಯುಗ ಹಾಗೂ ಸುಧಾರಣಾ ಯುಗಗಳು ಕೂಡ 'ಆಧುನಿಕ ಯುಗ' ಹಾಗೂ 'ಮಧ್ಯಯುಗ' ಎಂಬ ನಿರ್ಣಾಯಕ ವರ್ಗೀಕರಣವನ್ನು ಮಾಡಿದವು. ಧರ್ಮ ಹಾಗೂ ಆದ್ಯತೆಗಳಿಗೆ ಪರ್ಯಾಯವಾದ ಜ್ಞಾನವಾಗಿ ವಿಜ್ಞಾನ ಸ್ಥಾಪಿತಗೊಳ್ಳತೊಡಗಿದ ಘಟ್ಟ ಇದು. ಈ ದೃಷ್ಟಿಯಿಂದ ವಿಜ್ಞಾನ ಕೇಂದ್ರ ರಂಗಕ್ಕೆ ಬಂದ ನಂತರ ಸ್ಥಾಪಿತಗೊಂಡ ನೋಟ ಕ್ರಮ 'ಆಧುನಿಕತೆ'. ಆದರೆ ೧೨ನೇ ಶತಮಾನದ ಚಾರ್ಲ್ಸ್ ದೊರೆಯ ಕಾಲದಲ್ಲಿ ಜನರು ತಮ್ಮನ್ನು ತಾವು 'ಮಾಡರ್ನ್' ಎಂದು ಕರೆದುಕೊಳ್ಳುತ್ತಿದ್ದ ಉದಾಹರಣೆಗಳಿವೆ. ಅಂದರೆ ಒಂದು ಕಾಲದ ಜನ ಭೂತದೊಂದಿಗೆ ತಮ್ಮ ಸಂಬಂಧವನ್ನು ಪುನರ್‌ವ್ಯಾಖ್ಯಾನಿಸಿಕೊಂಡಾಗ ಅಥವಾ ಭೂತದಿಂದ ತಮ್ಮನ್ನು ಕಡಿದುಕೊಂಡಾಗ ಅಥವಾ ಭೂತದೊಂದಿಗೆ ಕಡಿದು ಹೋದ ಸಂಬಂಧವನ್ನು ಪುನರ್ ಸ್ಥಾಪಿಸಿಕೊಳ್ಳಲೆತ್ನಿಸಿದಾಗ ಆಧುನಿಕತೆ ಎನ್ನುವ ಪರಿಕಲ್ಪನೆ ಇತಿಹಾಸದಲ್ಲಿ ಚಾಲ್ತಿಗೆ ಬಂದಂತಿದೆ. ಆದರೆ ಆಧುನಿಕತೆ ಒಂದು ಬಹುದೊಡ್ಡ ಆಳುವ ಭಾಷೆಯಾಗಿ, ಸಂಕಥನವಾಗಿ, ವ್ಯವಸ್ಥೆಯಾಗಿ, ಧೋರಣೆಯಾಗಿ ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಸಾಧನವಾಗಿ, ಮಾನವ ಪ್ರಜ್ಞೆ ಹಾಗೂ ಸಂವೇದನೆಗಳನ್ನು ನಿರ್ಣಾಯಕವಾಗಿ ಬದಲಿಸುವ ನೋಟ ಕ್ರಮವಾಗಿ ಪುನರುಜ್ಜೀವನದಿಂದೀಚೆಗೆ ಬೆಳೆದು ಬಂತು. ಹಾಗೂ ಇಪ್ಪತ್ತನೆಯ ಶತಮಾನದ ಮುಖವನ್ನೆ ಬದಲಿಸಿತು"[೧]. ಇವತ್ತು ಯಾವುದೇ ಒಂದು ಅಧ್ಯಯನ ಶಿಸ್ತನ್ನು ಅಭ್ಯಾಸಿಸ ಹೊರಟರೆ ಆಧುನಿಕತೆ ಉಂಟು ಮಾಡಿದ ಪಲ್ಲಟಗಳು ಬೃಹದಾಕಾರದಲ್ಲಿ ನಿಲ್ಲುತ್ತವೆ. ಇವು ಆಯಾ ಅಧ್ಯಯನ ಶಿಸ್ತಿನ ದಿಕ್ಕನ್ನೇ ಬದಲಾಯಿಸಿವೆ. ಇದು ಕರ್ನಾಟಕದಲ್ಲಿ ನಡೆದ ಜಾನಪದ ಅಧ್ಯಯನಗಳಿಗೂ ಅನ್ವಯವಾಗುವ ಮಾತು.

ನಮ್ಮಲ್ಲಿ ಯಾವುದು ಬದುಕಿನ ಭಾಗವಾಗಿತ್ತೋ ಅದನ್ನು ಬೇರ್ಪಡಿಸಿ ನೋಡುವ ವಿಧಾನವನ್ನು ಆಧುನಿಕತೆ ಕಲಿಸಿತು. ಇದರಿಂದ ಹಳತು-ಹೊಸತು, ಪಟ್ಟಣಿಗರು-ಹಳ್ಳಿಗರು, ಶಿಕ್ಷಿತರು-ಅಶಿಕ್ಷಿತರು, ಹಳೆಕಾಲ-ಹೊಸಕಾಲ, ಹಳೆ ತಲೆಮಾರು-ಹೊಸ ತಲೆಮಾರು ಮುಂತಾದ ವೈರುಧ್ಯಗಳು ಸೃಷ್ಟಿಯಾದವು.

ಈ ಪರಿಕಲ್ಪನೆಗಳ ಸಂಬಂಧದ ನಡುವೆ ಕಂದರ ಏರ್ಪಟ್ಟಿತು. ಆದರೆ ಈ ವೈರುಧ್ಯಗಳ ಗೆರೆ ಕೊರೆದು ಬೇರ್ಪಡಿಸಲಾಗದಷ್ಟು ಒಂದರೊಳಗೊಂದು ಹೆಣೆದುಕೊಂಡು ಬಿಟ್ಟವು. ಅಂದರೆ ಹಳತು-ಹೊಸತಾಗುವಾಗ ಹಳತುಗಳ ಸಂಬಂಧಗಳು ಹೊಸತನದಲ್ಲಿ ಗಟ್ಟಿಯಾಗಿರುತ್ತವೆ. ಈ ಮಾತು ಜಾನಪದಕ್ಕೆ ತುಂಬಾ ಹತ್ತಿರವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಬಿ.ಎಂ.ಶ್ರೀಯವರು 'ಜನವಾಣಿ ಬೇರು; ಕವಿವಾಣಿ ಹೂವು' ಎಂದು ಕರೆದರು. ಹಾಗಾಗಿ ಮೇಲಿನ ಪರಿಕಲ್ಪನೆಗಳನ್ನು ವೈರುಧ್ಯದ ನೆಲೆಯಲ್ಲಿ ವಿಶ್ಲೇಷಿಸ ಬಾರದು. ಒಂದು ವೇಳೆ ವಿಶ್ಲೇಷಣೆಗೆ ಹೊರಟ ಆಲೋಚನೆ ಅಪೂರ್ಣ. ಬದಲಿಗೆ ಅವುಗಳ ಹೆಣಿಗೆಯ ಸಂಕೀರ್ಣತೆಯನ್ನು ವಿಶ್ಲೇಷಿಸುವ ಕ್ರಮ ಹೆಚ್ಚು ಪ್ರಸ್ತುತ. ಆದರೆ ಕನ್ನಡ ಜನಪದ ಅಧ್ಯಯನಕಾರರು ಆಧುನಿಕತೆಯನ್ನು ಅರ್ಥೈಸಿಕೊಂಡಿದ್ದು, ವಿಶ್ಲೇಷಿಸಿದ್ದು ಬಹುಪಾಲು ವೈರುಧ್ಯದ ನೆಲೆಯಲ್ಲಿಯೇ. ಇದನ್ನು 'ವಿದ್ವಾಂಸರ ಆತಂಕದ ನೆಲೆ' ಎಂದು ಕರೆಯಬಹುದು. ಅಂದರೆ ತಮ್ಮ ಬಾಲ್ಯದ ಕಾಲದಲ್ಲಿ ಜಾನಪದದ ವಿಧಾನವನ್ನು ನೆನಪಿಸಿಕೊಂಡು ಇವತ್ತು ಅದನ್ನು ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಆಧುನಿಕತೆಯ ಪ್ರಭಾವದಿಂದ ನಮ್ಮ ಸಂಸ್ಕೃತಿ (ಜಾನಪದ) ವಿಸ್ಮೃತಿಯಾಗುತ್ತಿದೆ. ಆದಷ್ಟು ಬೇಗನೆ ಸಂರಕ್ಷಣೆ ಮಾಡಬೇಕು ಅನ್ನುವ ಆತಂಕವನ್ನು ವ್ಯಕ್ತಪಡಿಸುತ್ತಿದ್ದರು. ಡಿ.ಆರ್. ನಾಗರಾಜ ಅವರ ಬರಹಗಳಲ್ಲಿ ಈ ಆಶಯವನ್ನು ಪ್ರಧಾನವಾಗಿ ಕಾಣಬಹುದು. "ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ. ಅದರಲ್ಲೂ ತಾನು ಚಿಂತಿಸುತ್ತಿದ್ದ, ಪ್ರತಿಕ್ರಿಯಿಸುತ್ತಿದ್ದ, ಭಾವಿಸುತ್ತಿದ್ದ ಕ್ರಮಗಳು ಮರೆತು ಹೋಗುವುದು ದೊಡ್ಡ ದುರಂತವೆ ಸರಿ. ವಸಾಹತುಶಾಹಿ ನಂತರದ ಭಾರತೀಯ ಸಮಾಜಕ್ಕೆ ಈ ರೀತಿಯ ವಿಸ್ಮೃತಿ ಈಗ ಆವರಿಸಿಬಿಟ್ಟಿದೆ. ನಮ್ಮ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ ವೈಚಾರಿಕ ರಚನೆಗಳು ಮರೆತು ಹೋಗುವುದರಿಂದ ಈ ಲಭ್ಯವಿರುವ ಚಿಂತನ ಕ್ರಮಗಳು ಪೂರ್ಣವಾಗಿ ಪಶ್ಚಿಮ ಮುಖಿಯಾಗಿ ಬಿಟ್ಟಿವೆ. ನಮ್ಮನ್ನು ಕಾಡುತ್ತಿರುವ ಬಿಕ್ಕಟ್ಟುಗಳನ್ನು ಅವುಗಳ ಮೂಲಕ ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಕ್ಷರ ಚಿಂತನದ ಪ್ರಮುಖ ಗುರಿ ಈ ವೈಚಾರಿಕ ವಿಸ್ಮೃತಿಯನ್ನು ದಾಟುವುದೇ ಆಗಿದೆ"[೨] ಇಲ್ಲಿ ದೇಶಿಯ ಚಿಂತನೆಯ ನೆಲೆಗಳನ್ನು ಕಟ್ಟಿಕೊಳ್ಳಬೇಕೆನ್ನುವ ತುಡಿತ ಗಮನ ಸೆಳೆಯುತ್ತದೆ. ಈ ತುಡಿತ ಹುಟ್ಟಿಕೊಂಡಿದ್ದು ಸಹ ಆತಂಕದ ಹಿನ್ನೆಲೆಯಲ್ಲಿಯೇ. ಈ ಆತಂಕದ ಜೊತೆಗೆ ಜಾನಪದವನ್ನು ಉಳಿಸಿಕೊಳ್ಳಬೇಕೆನ್ನುವ ಆಶಯ ಮತ್ತು ಆಧುನಿಕತೆಯನ್ನು ವಿರೋಧಿಸುವ ಧೋರಣೆ ಹೆಚ್ಚುತ್ತ ಹೋಯಿತು. ಅಧ್ಯಯನಗಳಲ್ಲೂ ಅಂತರಗಳು ಹೆಚ್ಚಾದವು.

ಜಾನಪದದಲ್ಲಿ ಆಧುನಿಕತೆಯ ವಿರೋಧಿ ನಿಲುವು ಜಾನಪದದ ಬಗ್ಗೆ ತಳೆಯುವ ಅಭಿಮಾನದ ಸಂಗತಿಯೇ ಹೊರತು ವಾಸ್ತವ ಅಲ್ಲ. ಇದು ಕಾಲದ ಚಲನೆಗೆ ಎದುರು ನಡಿಗೆ. ನಿತ್ಯವೂ ಕಾಲ ಬದಲಾವಣೆಯನ್ನು ಧರಿಸುತ್ತದೆ. ಇದು ಪ್ರಕೃತಿಯ ಸಹಜ ನಿಯಮ. ಈ ಬದಲಾವಣೆ ಸಮಾಜದ ಬದಲಾವಣೆಯನ್ನು ತರುತ್ತದೆ. ಸಮಾಜದ ಭಾಗವಾದ ಸಮುದಾಯಗಳು ಈ ಬದಲಾವಣೆಗೆ ಹಲವು ಬಗೆಗಳಲ್ಲಿ ಪ್ರತಿಕ್ರಿಯಿಸುತ್ತವೆ. ಇದು ಸಹಜವಾಗಿ ನಡೆಯುವ ನಿರಂತರ ಕ್ರಿಯೆ. ಈ ಕ್ರಿಯೆಯಲ್ಲಿ ಹಳೆಯದು ಹೊಸ ರೂಪ ಪಡೆಯುತ್ತದೆ. ಹಾಗೂ ಕೆಲ ಅಂಶಗಳು ಕಣ್ಮರೆಯಾಗುತ್ತವೆ. ಮತ್ತೆ ಕೆಲ ಅಂಶಗಳು ಹೊಸ ರೂಪ ಪಡೆಯುತ್ತವೆ. ಹೊಸ ರೂಪ ಪಡೆಯುವ ವಿಧಾನದಲ್ಲಿ ಸೇರಿಕೊಳ್ಳು ವಿಕೆಯೂ ಕಳೆದುಕೊಳ್ಳುವಿಕೆಯೂ ಇರುತ್ತದೆ. ಇದನ್ನು ಹಳತು-ಹೊಸತರ ಮಿಶ್ರಣವೆಂದು

ಕರೆಯಬಹುದು. ಈ ಬಗೆಯ ಚಲನೆ ಏಕಕಾಲದಲ್ಲಿ ಎರಡು ತಲೆಮಾರುಗಳ ನಡುವೆ ನಡೆಯುತ್ತಿರುತ್ತದೆ. ಹಾಗೆ ಈ ಎರಡು ತಲೆಮಾರುಗಳ ನಡುವೆ ಸ್ವೀಕಾರ-ನಿರಾಕರಣೆ ಭಿನ್ನವಾಗಿರುತ್ತದೆ. ಹೊಸ ತಲೆಮಾರಿನಲ್ಲಿ ಸ್ವೀಕಾರದ ಗುಣ ಹೆಚ್ಚಿದ್ದರೆ ಹಳೆ ತಲೆಮಾರಿನಲ್ಲಿ ನಿರಾಕರಣೆಯ ಗುಣ ಹೆಚ್ಚಾಗಿರುತ್ತದೆ. ಇದಕ್ಕೆ ಶಿಕ್ಷಣ, ವಯೋಮಾನ, ವೈಯಕ್ತಿಕ ಜ್ಞಾನ, ಕಲಾ ನಂಬಿಕೆ, ದೈವಗಳ ಬಗ್ಗೆ ಇರುವ ನಂಬಿಕೆ ಮುಂತಾದವುಗಳು ಕಾರಣವಾಗಿರುತ್ತವೆ. ಇಲ್ಲಿ ಆಧುನಿಕತೆ ಜಾನಪದವನ್ನು 'ಏಕರೂಪ'ಗೊಳಿಸುವುದಕ್ಕೆ ಪ್ರಯತ್ನ ಪಡುತ್ತದೆ. ಇಡೀ ಜಗತ್ತನ್ನೇ ಒಂದು ಹಳ್ಳಿಯನ್ನಾಗಿ ರೂಪಿಸುವುದಕ್ಕೆ ಮುಂದಾಗುತ್ತದೆ. ಜಾನಪದ ಅಧ್ಯಯನಕಾರರಲ್ಲಿ ಇದಕ್ಕೆ ವಿರುದ್ಧವಾದ ಕ್ರಿಯೆ ನಡೆಯುತ್ತಿದೆ. ಅಂದರೆ ಜಾನಪದವನ್ನು ಇರುವ ವೈವಿಧ್ಯತೆಯ ನೆಲೆಯಲ್ಲಿ ಉಳಿಸಿಕೊಳ್ಳಬೇಕೆನ್ನುವುದು ಇವರ ಪ್ರಯತ್ನ. ಇವರೆಡಕ್ಕೂ ಅಧ್ಯಯನದಲ್ಲಿ ಹೊಂದಿಕೆ ಆಗುತ್ತಿಲ್ಲ.

ಜೊತೆಗೆ ಈ ವಿದ್ವಾಂಸರು ತೆಗೆದುಕೊಂಡ ಮತ್ತೊಂದು ಅಪಾಯಕಾರಿ ನಿಲುವು ಎಂದರೆ ಆಧುನಿಕ ಸಮೂಹ ಮಾಧ್ಯಮಗಳಲ್ಲಿ ಅಭಿವ್ಯಕ್ತಿಗೊಳ್ಳುವ ಜಾನಪದವನ್ನು FAKE ಎಂದು ಗ್ರಹಿಸಿದ್ದು. ಅಂದರೆ ಇದು ಜಾನಪದದ ವ್ಯಾಪ್ತಿಯೊಳಗೆ ಬರದೇ ಇರುವ 'ಜನಪ್ರಿಯ' (Popular) ಸಾಹಿತ್ಯ ಅಥವಾ 'ಖೋಟಾ'; 'ನಕಲಿ' (FAKE) ಎಂದು ಗ್ರಹಿಸಿ ಸೈದ್ಧಾಂತಿಕ ಅಧ್ಯಯನ ಶಿಸ್ತಿನೊಳಗೆ ತೆಗೆದುಕೊಳ್ಳದೇ ಇರುವುದು ಈಗ ಈ ಅಭಿವ್ಯಕ್ತಿಯನ್ನು ಕೇವಲ 'FAKE' ಎಂದು ಗ್ರಹಿಸುವಂತಿಲ್ಲ. ಈ ಕಾಲದಲ್ಲಿ ಅಭಿವ್ಯಕ್ತಿಯಾಗುವ ಪರಿಕರಗಳಿವು. ಪ್ರಸ್ತುತದಲ್ಲಿ ಜೀವಿಸುವ ಕೇಳುಗ ಸಮುದಾಯದ ಸ್ಥಿತಿಯೊಡನೆ ಮಿಲನಗೊಳಿಸಿಕೊಂಡಂತೆ ಕಾಣಿಸುತ್ತಿದೆಯಷ್ಟೆ. ಹಾಗಾಗಿ ಈ ಅಭಿವ್ಯಕ್ತಿಯನ್ನು ಜಾನಪದವೆಂದು ಗ್ರಹಿಸಬೇಕು. 'FAKE' ಪರಿಕಲ್ಪನೆಯನ್ನು ಹೊಸದಾಗಿ ಅರ್ಥೈಸಿ ಕೊಳ್ಳಬೇಕು. ಪ್ರಸ್ತುತ ಅಧ್ಯಾಯದಲ್ಲಿ ಡೊಳ್ಳಿನ ಹಾಡುಗಳನ್ನು ಇಟ್ಟುಕೊಂಡು ಈ ರೀತಿಯ ಪ್ರಯತ್ನ ಮಾಡಲಾಗಿದೆ. ಇದು ಕನ್ನಡ ಜಾನಪದಕ್ಕೆ ಹೊಸಪ್ರಯತ್ನ. ಇದರ ಭಿನ್ನ ಆಯಾಮಗಳನ್ನು ಕ್ಯಾಸೆಟ್ ಮತ್ತು ಡೊಳ್ಳಿನ ಹಾಡುಗಳ ಸಂಬಂಧದ ವಿಶ್ಲೇಷಣೆಯಲ್ಲಿ ನೋಡಬಹುದು.

ಹೀಗೆ ಕನ್ನಡ ಜಾನಪದ ಅಧ್ಯಯನದಲ್ಲಿ 'ಜಾನಪದ' ಮತ್ತು 'ಆಧುನಿಕತೆ' ಇಷ್ಟೊಂದು ವಿರೋಧಿ ನಿಲುವು ತಾಳಿ ಜೀವಂತವಾಗಿದೆ. ಈ ಗೊಂದಲಗಳನ್ನು ಬಿಡಿಸಿಕೊಳ್ಳುವ ಮುಂದುವರಿಕೆಯಾಗಿ ಪ್ರಸ್ತುತ ಅಧ್ಯಯನ ಮಾಡಲಾಗಿದೆ. ಇದರ ಸಾಧಕ-ಬಾಧಕಗಳ ಬಗ್ಗೆ ಇನ್ನೂ ಚರ್ಚೆ ಆಗಬೇಕಿದೆ.

೭.೨. 'ಪ್ರದರ್ಶನ ಹಾಡುಗಳು' ಮತ್ತು 'ಆಧುನಿಕ ಸಂವಹನ ಮಾಧ್ಯಮಗಳ ಹಾಡುಗಳು' ಗ್ರಹಿಕೆಯ ತಾತ್ವಿಕತೆ

ಈ ಚರ್ಚೆ ಡೊಳ್ಳಿನ ಹಾಡುಗಳ ಗ್ರಹಿಕೆಗೆ ಸಂಬಂಧಿಸಿದಾಗಿದೆ. ಇದು ಕನ್ನಡ ಜನಪದ ಗೀತೆಗಳಿಗೆ ಅನ್ವಯ ಆಗುತ್ತದೆ ಎನ್ನುವ ಆಶಯ ಅಧ್ಯಾಯದ್ದು. ಉತ್ತರ ಕರ್ನಾಟಕದಲ್ಲಿ ಜೀವಂತ ವಾಗಿರುವ ಜನಪದ ಗೀತೆಗಳಿಗೆ ತುಂಬಾ ಅನ್ವಯವಾಗುತ್ತದೆ.

ಹಿಂದೆ ಚರ್ಚಿಸಿದಂತೆ ಡೊಳ್ಳಿನ ಹಾಡುಗಳು ಮತ್ತು ಆಧುನಿಕತೆ ಎನ್ನುವ ಚರ್ಚೆಯನ್ನು ಪ್ರದರ್ಶನ ಮತ್ತು ಸಂದರ್ಭ(Context)ಗಳ ಗ್ರಹಿಕೆಯಿಂದ ಆರಂಭಿಸಿಕೊಳ್ಳಬೇಕಾಗಿದೆ. ಜಾನಪದ ಎನ್ನುವುದು ಒಂದು ವ್ಯವಸ್ಥಿತ ಪ್ರದರ್ಶನದ ಆವರಣದಲ್ಲಿ ಮಾತ್ರ ಅನಾವರಣವಾಗುವಂತಹದ್ದು ಎನ್ನುವುದು ಜಾನಪದ ವಿದ್ವಾಂಸರ ಗ್ರಹಿಕೆ. ಇದು ದೇಶಿ ಚಿಂತನ ಸಿದ್ಧಾಂತಗಳ ಪ್ರತಿಪಾದಕರಿಗಿಂತ ಹೆಚ್ಚಾಗಿ ಪಾಶ್ಚಿಮಾತ್ಯ ಸಿದ್ಧಾಂತಗಳನ್ನು ಕನ್ನಡ ಜಾನಪದಕ್ಕೆ ಅನ್ವಯಿಸಿಕೊಂಡು ಅಧ್ಯಯನ ಮಾಡುವ ವಿದ್ವಾಂಸರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇವರು ಪ್ರದರ್ಶನದ ಸಂದರ್ಭದಲ್ಲಿ ಮಾತ್ರ ಪಠ್ಯ(Text)ನ್ನು ಅಧ್ಯಯನ ಮಾಡಬೇಕು ಎನ್ನುವ ಧೋರಣೆಯನ್ನು ಹೊಂದಿದವರು. ಕನ್ನಡದಲ್ಲಿ ಇಂತಹ ಹಲವು ಪ್ರಯೋಗಗಳು ಆದವು. ಉದಾಹರಣೆಗೆ : ಎ.ವಿ. ನಾವಡರವರ 'ಕಾಡ್ಯನಾಟ್ಯ ಪಠ್ಯ ಮತ್ತು ಪ್ರದರ್ಶನ' ಎಂಬ ಜನಪದ ಪಠ್ಯ(Folk Text)ವನ್ನು ಅದರದೇ ಆದ ಸಂದರ್ಭದಲ್ಲಿ ಮಾತ್ರ ಸಂಗ್ರಹಿಸಬೇಕೆನ್ನುವುದು ಸೈದ್ಧಾಂತಿಕ ಅಧ್ಯಯನ ವಿಧಾನಕ್ಕೆ ಬಹಳ ಪ್ರಮುಖವಾದದ್ದು. ಈಗ ಕನ್ನಡ ಜನಪದ ಗೀತೆಗಳು ಆ ಸಂದರ್ಭದಲ್ಲಿ ಮಾತ್ರ ಅನಾವರಣಗೊಳ್ಳುತ್ತಿಲ್ಲ. ಅಭಿವ್ಯಕ್ತಿಗಳಿಗಾಗಿ ಈ ಕಾಲದಲ್ಲಿರುವ ಹಲವು ನವ ಸ್ಪೇಸ್‌ಗಳನ್ನು ಸೃಷ್ಟಿಸಿಕೊಂಡಿವೆ. ಅಂತಹ ಸ್ಪೇಸ್‌ನಲ್ಲಿ ಆಧುನಿಕ ಸಮೂಹ ಸಂವಹನ ಮಾಧ್ಯಮಗಳು ಅವುಗಳಲ್ಲಿ ಕ್ಯಾಸೆಟ್ ಮತ್ತು ಸಿಡಿಗಳು ಮುಂಚೂಣಿಯಲ್ಲಿವೆ.

ಆಧುನಿಕ ಸಂವಹನ ಮಾಧ್ಯಮಗಳ ಅಭಿವ್ಯಕ್ತಿಯನ್ನು ಕನ್ನಡ ಜಾನಪದ ಅಧ್ಯಯನ ಶಿಸ್ತಿನಲ್ಲಿ ಸೇರಿಸಿಕೊಳ್ಳುತ್ತಿಲ್ಲ. ಬದಲಾಗಿ ಅದನ್ನು 'ಜನಪ್ರಿಯ (Popular) ಜನಪದ ಸಾಹಿತ್ಯ' ಅಥವಾ ಖೋಟಾ; 'ನಕಲಿ (FAKE) ಜನಪದ ಸಾಹಿತ್ಯ'ವೆಂದು ಗ್ರಹಿಸುತ್ತಾರೆ. 'FAKE' ಎನ್ನುವುದು 'FOKE' ವಿರುದ್ಧವಾದದ್ದು. ಇದು ಸೈದ್ಧಾಂತಿಕ ಅಧ್ಯಯನ ವಿಧಾನದೊಳಗಡೆ ಸೇರುವುದಕ್ಕೆ ಅನರ್ಹವಾದದ್ದು ಎಂದಾರ್ಥ. ಒಂದು ವೇಳೆ ಬಳಕೆಯಾದರು ವಾಸ್ತವದ ಅಪಮೌಲ್ಯವನ್ನು ಗುರುತಿಸುವುದಕ್ಕೆ ಮಾತ್ರ. ಈ ಅಧ್ಯಯನ ಶಿಸ್ತು ಹುಟ್ಟಿಕೊಂಡಿದ್ದು ಈ ಹಿನ್ನೆಲೆಯಲ್ಲಿ. ಆದರೆ ಈಗ ಜೀವಂತವಾಗಿರುವುದು ಬೇರೆ ರೀತಿಯಲ್ಲಿ. ಸಾಂದರ್ಭಿಕ ಪ್ರದರ್ಶನೇತರದ ಮೌಖಿಕ ಅಭಿವ್ಯಕ್ತಿಯನ್ನು ಖೋಟಾ ಎಂದು ಗ್ರಹಿಸುವುದಕ್ಕೆ ಆರಂಭಿಸಿದೆ. ಹಾಗಾಗಿ ಇವತ್ತಿನ ಕ್ಯಾಸೆಟ್ ಮತ್ತು ಸಿ.ಡಿ.ಗಳಲ್ಲಿ ಅಭಿವ್ಯಕ್ತಿಯನ್ನು ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳುತ್ತಿಲ್ಲ. ಇದು ಪ್ರದರ್ಶನ ಮತ್ತು ಸಾಂದರ್ಭಿಕ ಸಿದ್ಧಾಂತಗಳು ದೇಶಿಯ ಅಧ್ಯಯನ ವಿಧಾನಗಳ ಮೇಲೆ ಹೇರುತ್ತಿರುವ ನಿರ್ಬಂಧವಾಗಿದೆ. ಇದರಿಂದ ಹೊರಬರುವುದಕ್ಕೆ ಹಲವಾರು ವಿದ್ವಾಂಸರು ಪ್ರಯತ್ನಪಟ್ಟರು. ಡಿ.ಆರ್. ನಾಗರಾಜ ಅವರ ಅಕ್ಷರ ಚಿಂತನಾ ಮಾಲೆಗಳು ರೂಪಗೊಂಡಿದ್ದು ಈ ಹಿನ್ನೆಲೆಯಲ್ಲಿ. ಆಶಿಸ್‌ನಂದಿ, ಜಿ.ಎನ್. ದೇವಿ, ಯು.ಆರ್. ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ರಾಮಚಂದ್ರೇಗೌಡ ಹಿ.ಶಿ. ಮೊಗಳ್ಳಿ ಗಣೇಶ್ ಮುಂತಾದವರ ಬರಹಗಳಲ್ಲಿ ಈ ತುಡಿತವನ್ನು ಕಾಣಬಹುದು.

ಆಧುನಿಕ ಸಂವಹನ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುವ ಡೊಳ್ಳಿನ ಹಾಡುಗಳನ್ನು ಕೇವಲ FAKE ಎಂದು ಗ್ರಹಿಸಬೇಕಿಲ್ಲ. ಈಗ ಈ ಹಾಡುಗಳ ಪ್ರದರ್ಶನ ಆಧುನಿಕ ಮಾಧ್ಯಮಗಳೊಂದಿಗೆ

ತಾತ್ವಿಕ ಸಂಬಂಧ ಪಡೆದುಕೊಂಡಿದೆ. ಇವತ್ತು ಜೀವಂತವಿರುವ ಪಾರಂಪರಿಕ ಪ್ರದರ್ಶನದ ವ್ಯವಸ್ಥೆ ಮತ್ತು ಆಧುನಿಕ ಮಾಧ್ಯಮಗಳ ಪ್ರದರ್ಶನದ ವ್ಯವಸ್ಥೆ ಒಂದಕ್ಕೊಂದು ಪರಕಾಯ ಒಪ್ಪಂದವನ್ನು ಮಾಡಿಕೊಂಡಂತಿದೆ. ಇಲ್ಲಿ ಒಪ್ಪಂದ ಎನ್ನುವುದೇ ಅಪಾಯಕಾರಿ. ಅದನ್ನು ಸಹಜ ಕ್ರಿಯೆ ಎಂದು ಕರೆಯಬೇಕಷ್ಟೆ. ಅದು ಒಂದನ್ನು ಹೊರತುಪಡಿಸಿ ಮತ್ತೊಂದು ಜೀವಂತವಾಗಿರಲಾರದು ಅನ್ನುವಷ್ಟರ ಮಟ್ಟಿಗೆ ಹೊಂದಿಕೊಂಡಿವೆ. ಇದು ಉದ್ದೇಶಪೂರ್ವಿತ ಯೋಜನೆ ಅಲ್ಲ. ಸಹಜ ಕ್ರಿಯೆ. ಇದನ್ನು ಸ್ವಲ್ಪ ವಿಸ್ತರಿಸಲು ಬಯಸುವೆ. ಯಾವುದೇ ಒಬ್ಬ ಡೊಳ್ಳು ಹಾಡುಗಾರ ಯಾವುದೇ ಒಂದು ಪ್ರದರ್ಶನದಲ್ಲಿ ಅಥವಾ ಕ್ಯಾಸೆಟ್‌ನಲ್ಲಿ ತನ್ನ ವೃತ್ತಿ ಕಲಾವಿದ (ಪ್ರತಿವಾದಿ ಕಲಾವಿದ)ನಿಗೆ ಪ್ರಶ್ನೆ; ಪ್ರತಿರೋಧ ಒಡ್ಡಿದರೆ ಅದಕ್ಕೆ ಉತ್ತರ ದೊರಕುವುದು ಮತ್ತಾವುದೋ ಕ್ಯಾಸೆಟ್-ಸಿ.ಡಿ.ಯಲ್ಲಿ, ಅಥವಾ ಪ್ರದರ್ಶನದಲ್ಲಿ. ಈ ಪ್ರಶ್ನೋತ್ತರಗಳ ಚರ್ಚೆ ಅಥವಾ ಈ ವಾದ ಪ್ರತಿವಾದದ ಚರ್ಚೆ ಯನ್ನು ಹತ್ತಾರು ತಂಡಗಳು, ಹತ್ತಾರು ಪ್ರದರ್ಶನಗಳಲ್ಲಿ ಕ್ಯಾಸೆಟ್‌ಗಳಲ್ಲಿ ಮಾಡುತ್ತಿರುತ್ತಾರೆ. ಒಂದು ಪ್ರಶ್ನೆ ಒಂದು ತಂಡಕ್ಕೆ ಅಥವಾ ಒಬ್ಬ ಕಲಾವಿದನಿಗೆ ಕೇಳಿದ ಪ್ರಶ್ನೆ ಆಗಿರುವುದಿಲ್ಲ. ಆಯಾ ಪಂಥದ ಪ್ರತಿಪಾದಕರು ಆಯಾ ಪಂಥದ ತಂಡದವರ ವಾದ-ಪ್ರತಿವಾದಗಳನ್ನು ಬೆಂಬಲಿಸುತ್ತಿರುವುದು ಪಂಥದ; ಕುಲಾಭಿಮಾನವನ್ನು ತಿಳಿಸುತ್ತದೆ. ಹಾಗಾಗಿ ಈ ಕ್ಯಾಸೆಟ್ ಸಂವಾದವನ್ನು ಕೇವಲ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆಯುವ ಮಾತುಕತೆ ಅಥವಾ ಸಂವಾದ ಎಂದು ಕರೆಯುವಂತಿಲ್ಲ. ಸಮುದಾಯದ ಸಮಷ್ಠಿ ನೆಲೆಯಲ್ಲಿ ನಡೆಯುವ ಸಂವಾದವೆಂದೇ ಗ್ರಹಿಸಿಕೊಳ್ಳಬೇಕು. ಈ ಕ್ರಿಯೆ ಪ್ರದರ್ಶನದ ಜವಾಬ್ದಾರಿಯಂತೆ ಕಾಣಿಸುತ್ತದೆ. ಹಾಗಾಗಿ ಡೊಳ್ಳಿನ ಹಾಡುಗಳ ಸಂವೇದನೆಗೆ ಬಳಕೆ ಆಗುವ ಆಧುನಿಕ ಸಂವಹನ ಮಾಧ್ಯಮಗಳ ಪರಿಕರಗಳು ಪ್ರದರ್ಶನದ ಹೊರಗಿನ ಪರಿಕರಗಳಾಗಿ ಕಾಣಿಸುತ್ತಿಲ್ಲ. ಕಲಾವಿದ-ಕಲಾವಿದರ ನಡುವೆ, ಪ್ರೇಕ್ಷಕರ-ಕಲಾವಿದರ ನಡುವೆ ನಡೆಯುವ; ಪ್ರದರ್ಶನದ ಸಾಂದರ್ಭಿಕತೆಯನ್ನು ಬೆಸೆಯುವ ಪರಿಕರಗಳಾಗಿವೆ. ಕೇಳುಗರು ಸಹ ಈ ಹಾಡುಗಳನ್ನು ಪ್ರದರ್ಶನಗಳ ಹಾಡುಗಳೆಂದು ಭಾವಿಸಿಕೊಂಡಿದ್ದಾರೆ. ನಿಜವಾದ ಪ್ರದರ್ಶನ ಎನ್ನುವಂತೆ ಲಕ್ಷಾಂತರ ಜನ ಕೇಳಿ ಎನ್‌ಜಾಯ್ ಮಾಡುತ್ತಾರೆ. ಒಂದು ಕ್ಯಾಸೆಟ್/ಸಿ.ಡಿ.ಯ ವಾಗ್ವಾದದ ಉತ್ತರಕ್ಕೆ ಮತ್ತೊಂದು ಕ್ಯಾಸೆಟ್/ಸಿ.ಡಿ.ಯನ್ನು ಕಾಯುತ್ತಾರೆ. ಕೇಳುಗರಲ್ಲಿ ಇದು ಪ್ರದರ್ಶನದ ಹಾಡು. ಇದು ಮಾಧ್ಯಮಗಳ ಹಾಡು ಎನ್ನುವ ತಾರತಮ್ಯ ಇಲ್ಲ. ಜನಪದರಲ್ಲಿ ಇಲ್ಲದೆ ಇರುವ ತಾರತಮ್ಯತೆ ಅಧ್ಯಯನಕಾರರಲ್ಲೇಕೆ ಎನ್ನುವುದು ಇಲ್ಲಿನ ಮುಖ್ಯ ಪ್ರಶ್ನೆ. ಈ ಕ್ರಿಯೆಯನ್ನು ಗಮನಿಸಿದರೆ ಡೊಳ್ಳಿನ ಹಾಡುಗಳು ಪ್ರಸ್ತುತದಲ್ಲಿ ಜೀವಿಸಲು ಪ್ರೇಕ್ಷಕರ ಸಮುದಾಯದೊಡನೆ ಮಿಲನಗೊಳಿಸಿಕೊಂಡಂತೆ ಕಾಣಿಸುತ್ತಿದೆಯಷ್ಟೆ. ಹಾಗಾಗಿ ಈ ಹಾಡುಗಳನ್ನು ಹೊರಗಡೆ ಇಟ್ಟು ಅಧ್ಯಯನ ಮಾಡುವಂತಿಲ್ಲ. ಒಂದು ವೇಳೆ ಈ ಹಾಡುಗಳನ್ನು ಕೈಬಿಟ್ಟು ಕೇವಲ ಪ್ರದರ್ಶನದ ಹಾಡುಗಳನ್ನಷ್ಟೆ ಅಧ್ಯಯನ ಮಾಡಿದರೆ ಅಧ್ಯಯನ ಪೂರ್ಣವಾಗಲಾರದು ಎನ್ನುವ ಆತಂಕ ಈ ಅಧ್ಯಯನದ್ದು. ಡೊಳ್ಳಿನ ಹಾಡುಗಳ ಪಂಥಗಳ ಅಥವಾ ಕುಲ ಸಂಘರ್ಷಗಳ ಮತ್ತು ಬಂಡವಾಳಶಾಹಿ ಪರಿಣಾಮವನ್ನು ಗುರುತಿಸುವ ಸಂದರ್ಭದಲ್ಲಿ ಈ

ಮಾತು ಇನ್ನೂ ಹತ್ತಿರವಾಗುತ್ತದೆ. ಆದರೆ ಈ ಹಾಡುಗಳನ್ನು ಅಧ್ಯಯನ ಮಾಡುವುದಕ್ಕೆ ಈಗ ಪ್ರಚಲಿತದಲ್ಲಿರುವ ಸಿದ್ಧಾಂತಗಳು ಸಹಾಯಕವಾಗಲಾರವು. ಇವುಗಳ ಪ್ರದರ್ಶನ ಮತ್ತು ಪರಿಕಲ್ಪನೆಯನ್ನು ಆಧರಿಸಿ ಒಂದು ಸಿದ್ಧಾಂತವನ್ನು ಕಟ್ಟಿಕೊಳ್ಳಬೇಕು. ಅದನ್ನು 'ದೇಶಿಯತೆ' ಎಂದು ಕರೆದರೂ ತಪ್ಪಾಗಲಾರದು. ಅಥವಾ ಈಗಿರುವ ದೇಶಿಯತೆಯ ಸಿದ್ಧಾಂತವನ್ನು ಇಂತಹ ಹಾಡುಗಳನ್ನು ಗಮನದಲ್ಲಿಟ್ಟುಕೊಂಡು ಮರುಸೃಷ್ಟಿಸಿಕೊಳ್ಳಬೇಕಾಗಿದೆ.

೭.೩. ಮೌಖಿಕದಿಂದ ಲಿಖಿತತೆಗೆ

ಜನಪದ (Folk) ಮೌಖಿಕತೆಯಲ್ಲಿರುತ್ತದೆ ಎನ್ನುವುದು ಜನಪದ ವಿದ್ವಾಂಸರ ನಂಬಿಕೆ. 'ಅಲೆನ್ ಡೆಂಡಸ್' ಅವರು "ಜನಪದ ಸಂಸ್ಕೃತಿಯನ್ನು 'ಬರಹ ರಹಿತ ಸಂಸ್ಕೃತಿ' (Culture Without Writing)"[೩] ಎಂದು ಕರೆಯುತ್ತಾರೆ. ಚಂದ್ರಶೇಖರ ಕಂಬಾರ ಅವರು "ಜನಪದ ಸಾಹಿತ್ಯ ಓದಿ ಕಲೆಯುವಂತದಲ್ಲ. ಕೇಳಿಯೇ ಕಲಿಯುವಂತಹದ್ದು. ತೋಂಡಿತನವೇ ಇದರ ಜೀವಾಳ. ಬರವಣಿಗೆಯ ಸ್ಪರ್ಶವಾದರೆ ಸಾಕು ಇದರ ಪರಂಪರೆ ಸತ್ತೇ ಹೋಗುತ್ತದೆ" ಎನ್ನುತ್ತಾರೆ. ಈ ಹೇಳಿಕೆಗಳು ಜಾನಪದಕ್ಕಿರುವ ಮೌಖಿಕ ಪರಂಪರೆಯನ್ನು ನಿರ್ದೇಶಿಸುತ್ತವೆ.

ಈಗ ಜನಪದವೆಂದರೆ ಕೇವಲ ಮೌಖಿಕವಾಗಿ ಉಳಿದುಕೊಂಡು ಬಂದಿರುವಂತಹದ್ದು ಎನ್ನುವುದು ಕ್ಷುದ್ರವಾದ ಸಂಗತಿಯೇ ಸರಿ. ಜನಪದ ಕೇವಲ ಮೌಖಿಕವಾಗಿ ಜೀವಿಸುತ್ತಿಲ್ಲ. ಬರಹ ರೂಪದಲ್ಲೂ ಇದೆ; ಜೀವಂತಿಕೆ ಪಡೆಯುವುದಕ್ಕೆ ಹಂಬಲಿಸುತ್ತದೆ. ಮೌಖಿಕದಿಂದ ಲಿಖಿತತೆಗೆ ಕೊಡುಕೊಳ್ಳುವಿಕೆಯ ರೂಪದಲ್ಲಿ ಜೀವಿಸುತ್ತಿದೆ. ಡೊಳ್ಳಿನ ಹಾಡುಗಳಲ್ಲಿ ಈ ವಿಧಾನ ಪ್ರಧಾನ ಧಾರೆಯಲ್ಲಿದೆ. ಈ ಹಾಡುಗಳನ್ನು ಗುರುವಿನ ಮಾರ್ಗದರ್ಶನದಲ್ಲಿ ಕಲಿಯಲಾಗುತ್ತದೆ. ಹಾಡುಗಳನ್ನು ಕಲಿಸುವ ಮತ್ತು ಬರೆಯುವ ವ್ಯಕ್ತಿಗಳು ಸಿಗುತ್ತಾರೆ. ಒಬ್ಬೊಬ್ಬ 'ಬರಹಗಾರ' ನಲವತ್ತು-ಐವತ್ತಕ್ಕೂ ಹೆಚ್ಚು ತಂಡಗಳಿಗೆ ಹಾಡುಗಳನ್ನು ಬರೆದುಕೊಡುತ್ತಿದ್ದಾರೆ. ಬರೆದುಕೊಟ್ಟ ಹಾಡುಗಳನ್ನು ಹಾಡುಗಾರರು ಪರಂಪರೆಯಿಂದ ಮೌಖಿಕವಾಗಿ ಬೆಳೆದು ಬಂದಿವೆ ಎನ್ನುವಂತೆ ಕಠಪಾಠ ಮಾಡಿ ಹಾಡುತ್ತಿದ್ದಾರೆ. ಇದು ಬರಹದ ಹಾಡು, ಇದು ಮೌಖಿಕವಾಗಿ ಬಂದ ಹಾಡು ಎನ್ನುವ ಭಿನ್ನತೆಗಳೇ ಇವರಲ್ಲಿ ಇಲ್ಲ. ಹಾಡುಗಳ ಬರವಣಿಗೆ ಎನ್ನುವುದು ಒಂದು ವೃತ್ತಿ ಆಗಿದೆ. ಇವತ್ತಿನ ಅಧ್ಯಯನಕಾರರು ಈ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಹಾಡುಗಳು ಈ ಸ್ವರೂಪವನ್ನು ಪಡೆದುಕೊಂಡಿರುವಾಗ ಜಾನಪದವೆಂದರೆ ಕೇವಲ ಮೌಖಿಕವಾದದ್ದು ಎನ್ನುವ ವಾದಕ್ಕೆ ಬದ್ಧರಾದರೆ ಇವತ್ತಿನ ಜಾನಪದವನ್ನು ಅರ್ಥೈಸಿಕೊಳ್ಳುವುದಾದರೂ ಹೇಗೆ? ಈ ಕಲಾವಿದರು ಹಾಡುತ್ತಿರುವುದು ಜಾನಪದವಲ್ಲವೆ? ಪ್ರಸ್ತುತದಲ್ಲಿ ಜನಪದರು ಅಂದರೆ ಯಾರು? ಜನಪದರಲ್ಲಿ ಇಲ್ಲದ ಲಿಖಿತ-ಮೌಖಿಕದ ತಾರತಮ್ಯತೆ ಅಧ್ಯಯನಕಾರರಲ್ಲೇಕಿದೆ? ಎನ್ನುವ ಹಲವು ಪ್ರಶ್ನೆಗಳು ಅಧ್ಯಯನಕಾರರನ್ನು ಕಾಡುತ್ತಿವೆ. ಈ ತರದ ಗೊಂದಲದ ಪ್ರಶ್ನೆಗಳನ್ನು ಬಿಡಿಸಿ

ಕೊಳ್ಳದೇ ಹೋದಲ್ಲಿ ಪ್ರಸ್ತುತ ಸಂದರ್ಭದ ಜಾನಪದವನ್ನು ಸೈದ್ಧಾಂತಿಕವಾಗಿ ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗುವುದೇ ಇಲ್ಲ.

೭.೩.೧. 'ಕಲಿಕೆ' ಮತ್ತು 'ಅಭಿವ್ಯಕ್ತಿ' ಉದ್ದೇಶದಲ್ಲಾದ ಬದಲಾವಣೆ

ಡೊಳ್ಳಿನ ಹಾಡುಗಳ ತಂಡದಲ್ಲಿ ಒಬ್ಬ ಬರಹಗಾರ ಅಥವಾ ವಿದ್ಯಾವಂತ (ಒಳ್ಳೆಯ ಓದುಗ) ಇರಲೆಬೇಕು ಅನ್ನುವ ನಂಬಿಕೆ ಇತ್ತೀಚಿಗೆ ಆರಂಭವಾಗಿದೆ. ಇದು 'ಮೌಖಿಕತೆ'ಯನ್ನು 'ಲಿಖಿತ' ಗೊಳಿಸುವ ತಂತ್ರಗಾರಿಕೆ ಪ್ರಧಾನವಾಗಿ ಆರಂಭವಾದ ನಂತರ ಸೃಷ್ಟಿಯಾದದ್ದು. ಪ್ರತಿಯೊಂದು ತಂಡದಲ್ಲೂ ಒಬ್ಬ ಅಥವಾ ಇಬ್ಬರು ವಿದ್ಯಾವಂತರು ಇದ್ದಾರೆ. 'ವಿದ್ಯಾವಂತರಿಲ್ಲದೆ ತಂಡಗಳನ್ನು ಕಟ್ಟಿಕೊಳ್ಳುವುದೇ ಅವಮಾನದ ಸಂಗತಿ' ಎನ್ನುತ್ತಾರೆ ಶ್ರೀ ಸಿದ್ಧು ಮೇಟಿ ಅವರು. ಈ ಬರಗಾರರೇ ತಂಡದ ಹಾಡುಗಾರರಿಗೆ ನಿರ್ದೇಶನ ಮಾಡುತ್ತಿರುತ್ತಾರೆ. ವಾದ-ಪ್ರತಿವಾದವನ್ನು ಮಂಡಿಸುವ ನಾಯಕರಿವರು. ಇವರನ್ನು ಡೊಳ್ಳಿನ ಹಾಡುಗಳ ವಾಗ್ವಾದದ ವಕ್ತಾರರೆಂದು ಕರೆಯಬಹುದು. ಹಾಗಾಗಿ ತಂಡದಲ್ಲಿ ಇವರಿಗೆ ವಿಶೇಷವಾದ ಗೌರವ, ಶಿಕ್ಷಣವಂತರು ಎನ್ನುವ ಕಾರಣಕ್ಕೆ ಉಳಿದವರು ಗೌರವ ಕೊಡುತ್ತಾರೆ. ಇದು 'ಶಿಕ್ಷಣ' ತಂದ ಬದಲಾವಣೆ. "ಅಂದರೆ ಶಿಕ್ಷಣವು ಜನರನ್ನು ಎರಡು ಗುಂಪುಗಳನ್ನಾಗಿ ಸೃಷ್ಟಿಸಿತು. ಶಿಕ್ಷಿತರು ಮತ್ತು ಅಶಿಕ್ಷಿತರು ಅಥವಾ ಅಗತ್ಯಕ್ಕಿಂತ ಕಡಿಮೆ ಶಿಕ್ಷಿತರು. ಅಂದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಎರಡೂ ವರ್ಗಗಳು ಕ್ರಮವಾಗಿ 'ಜ್ಞಾನ ಬಂಡವಾಳಿಗ'ರು ಮತ್ತು ಜ್ಞಾನ ದರಿದ್ರರು'. ಈ ಹೊಸ ಸಂಘರ್ಷದಲ್ಲಿ ಹೆಚ್ಚು ಜ್ಞಾನವನ್ನು ಬಳಸುವ ಜನವರ್ಗಕ್ಕೆ ಹೆಚ್ಚು ಮೌಲ್ಯ. ಸಮಾಜ ಅದರ ಮೇಲೆ ಹೂಡಿಕೆ ಹೂಡಿ ಅವರನ್ನು ಮಾನವ ಸಂಪನ್ಮೂಲವಾಗಿ ರೂಪಿಸಿರುತ್ತದೆಯಾದ್ದರಿಂದ ಉತ್ಪಾದನಾ ಸಾಧನಗಳು ಬಹುಪಾಲು ಅವರಿಗೆ ಮೀಸಲು. ಅಂಥ ಶಿಕ್ಷಿತರು ಮಾತ್ರವೇ ಈ ಸಮಾಜದಲ್ಲಿ ಎಲ್ಲಾ ಅನುಕೂಲಗಳಿಗೆ ಹಕ್ಕುದಾರರಾಗಿರುತ್ತಾರೆ. ಉಳಿದ ಬಹುಸಂಖ್ಯಾತರ ಪಾಲಿಗೆ ಉಳಿಯುವುದು ದಾರಿದ್ರ ಮತ್ತು ಅನರ್ಹತೆಗಳು ಮಾತ್ರ".[೪] ಗೌರವಕ್ಕೆ ಮನಸೋತ ಶಿಕ್ಷಣವಂತರು ಡೊಳ್ಳಿನ ಹಾಡುಗಳತ್ತ ಆಗಮಿಸುವುದು ದಿನ ದಿನಕ್ಕೆ ಹೆಚ್ಚುತ್ತಲಿದೆ. 'ಶಿಕ್ಷಣ ಪಡೆದವರು ಜಾನಪದ ಕ್ಷೇತ್ರಕ್ಕೆ ಆಗಮನ ಆಗುತ್ತಿಲ್ಲವೆಂದು ಆತಂಕ ಪಡುವ ಮತ್ತು ಸಾರ್ವತ್ರಿಕ ಹೇಳಿಕೆ ಕೊಡುವ ವಿದ್ವಾಂಸರ ಗ್ರಹಿಕೆಗೆ ವಿರುದ್ಧವಾದ ಕ್ರಿಯೆಯನ್ನು ಇಲ್ಲಿ ಕಾಣಬಹುದು. ಈ ಕ್ಷೇತ್ರಕ್ಕೆ ಶಿಕ್ಷಣವಂತರು ಆಗಮನ ಆಗಿರುವ ರಾಜಕಾರಣಗಳು ಬೇರೆ ಬೇರೆ ಆಗಿರಬಹುದು. ಆ ಅಧ್ಯಯನದ ಹುಡುಕಾಟವೇ ಬೇರೆ. ಇಲ್ಲಿ ಆಗಮಿಸಿರುವ ವಿಧಾನ ನಮಗೆ ಮುಖ್ಯ.

ಈ ಬರಹಗಾರರು ತಂಡಕ್ಕೆ ಇಂತಿಷ್ಟು ಹಾಡುಗಳನ್ನು ರಚನೆ ಮಾಡಿಕೊಟ್ಟರೆ ಇಂತಿಷ್ಟು ಹಣ ಕೊಡಬೇಕು ಎನ್ನುವ ವ್ಯವಹಾರಕ್ಕೆ ಬದ್ಧರಾಗಿರುತ್ತಾರೆ. ಕಲಿಕೆ ಎನ್ನುವುದು ಒಂದು ವ್ಯವಸ್ಥಿತ ನೆಲೆಯಲ್ಲಿ ನಡೆಯುತ್ತದೆ. ಸಹಜ ಕ್ರಿಯೆ ಅಲ್ಲ. ಕಲಾವಿದರು ಕ್ಯಾಸೆಟ್ ಕಂಪನಿಗಳಿಗೆ ಗುತ್ತಿಗೆ ಆಧಾರದ ಹಿನ್ನೆಲೆಯಲ್ಲಿ ಒಪ್ಪಂದ ಮಾಡಿಕೊಂಡು ಹಾಡುಗಳನ್ನು ಹಾಡುವವರಿದ್ದಾರೆ. ಒಂದೊಂದು ಕ್ಯಾಸೆಟ್ ಕಂಪನಿಗಳು ಒಂದೊಂದು ತಂಡದ ಅಥವಾ ಒಂದೊಂದು ಪಂಥದ ಹಾಡುಗಾರರನ್ನು ಆಯ್ಕೆ

[illegible]

ಮಾಡಿಕೊಂಡಿರುವುದು ವಿಶೇಷ. ಉದಾಹರಣೆ 'ಶ್ರೀಶೈಲ ಇಂಗಳೇಶ್ವರ' ಮತ್ತು 'ಮಾನಸಿದ್ಧ ಪೂಜಾರಿ'ರವರು Padmini Music Cassettes ಕಂಪನಿಗೆ ಹಾಡುತ್ತಿದ್ದಾರೆ. ಒಬ್ಬೊಬ್ಬ ಹಾಡುಗಾರರು ಹಾಡಿದ ೩ಂಕ್ಕೂ ಹೆಚ್ಚು ವಾದ-ಪ್ರತಿವಾದದ ಭಾಗಗಳು ಸಿಗುತ್ತವೆ. 'ವಿದ್ಯಾಶ್ರೀ ಆಡಿಯೋ ಫತ್ತರಗಾ' ಅವರು ಅಮೋಘಸಿದ್ಧ ಪಂಥದ ಹಾಡುವ ಗಾಯಕರ ಹಾಡುಗಳನ್ನು ಬಿಡುಗಡೆ ಮಾಡುತ್ತಾರೆ. ಆಯಾ ದೈವಗಳ ಕುಲಸ್ಥರು ಆಯಾ ದೈವದ ಹಾಡುಗಳನ್ನು ಹಾಡಿಸುವುದಕ್ಕೆ ಕಂಪನಿ ಗಳನ್ನು ಆರಂಭಿಸಿದ್ದಾರೆ. ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡ ಕಲಾವಿದ ಆ ಕಂಪನಿಗೆ ಮಾತ್ರ ಹಾಡಬೇಕು ಎನ್ನುವ ಕರಾರಿಗೆ ಬದ್ಧರಾಗಿರಬೇಕು. ಮೀರಿದರೆ ಆ ಕಂಪನಿಗೆ ಹಾಡುವ ಉಳಿದ ಹಾಡುಗಾರರು ಹಾಡಿನಲ್ಲಿ ತಕರಾರು ತೆಗೆಯುವರು. ಮಾತಿಗೆ ಬದ್ಧನಾಗದ ವ್ಯಕ್ತಿಯೆಂದು ಹೀಯಾಳಿಸು ವರು. ಈ ಒಪ್ಪಂದ ಇವತ್ತಿನ IPL ಮತ್ತು KPL ಕ್ರಿಕೆಟ್ ಆಟಗಾರರ ಗುತ್ತಿಗೆ ವಿಧಾನವನ್ನು ನೆನಪಿಗೆ ತರುತ್ತದೆ.

ಹಾಡುಗಳನ್ನು ಕಲಿಯ ಬಯಸುವ ತಂಡ ಹಿರಿಯ ಅಥವಾ ಅನುಭವಿಕ ಕಲಾವಿದನನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಈಗ ಮಾಧ್ಯಮಗಳಲ್ಲಿ ಹೆಚ್ಚು ಜನಪ್ರಿಯ ಇರುವ ಹಾಡುಗಾರರನ್ನು ಕಲಿಕೆಗೆ ಆಯ್ಕೆ ಮಾಡಿಕೊಳ್ಳುತ್ತಿರುವುದು ವಿಶೇಷ. 'ಕಲ್ಮೇಶ್ ಅರಟಾಳ್' ಯುವ ಕಲಾವಿದ. ವಯಸ್ಸು ಮೂವತ್ತೈದು. ಆದರೆ ಮಾಧ್ಯಮಗಳಲ್ಲಿ ಹೆಚ್ಚು ಜನಪ್ರಿಯದಲ್ಲಿರುವ ಕಲಾವಿದ. ಈತ ಅತಿ ಹೆಚ್ಚು ತಂಡಗಳಿಗೆ ತರಬೇತಿ ನೀಡಿದ್ದಾನೆ. ಈತನತ್ತಿರ ಕಲಿತ ತಂಡಗಳಲ್ಲಿ ಮಕ್ಕಳ ತಂಡಗಳೇ ಹೆಚ್ಚು. ನಂತರದ ಸ್ಥಾನದಲ್ಲಿ ಸೋಮಲಿಂಗ ಬಿಜ್ಜರಗಿ, ಶ್ರೀಶೈಲ ಇಂಗಳೇಶ್ವರ ಅವರು ಬರುತ್ತಾರೆ. ಬಿಜ್ಜರಗಿ ಹಿರಿಯ ಕಲಾವಿದರಿಗೆ ಹೆಚ್ಚು ತರಬೇತಿ ಕೊಟ್ಟಿದ್ದಾರೆ. ಅಥವಾ ಹಿರಿಯ ಕಲಾವಿದರು ಹೆಚ್ಚು ತರಬೇತಿ ಪಡೆದುಕೊಂಡಿದ್ದಾರೆ. ತರಬೇತಿ ಪಡೆದಿರುವ ವಿಧಾನದಲ್ಲಿ ಹಿರಿಯ ಮತ್ತು ಮಕ್ಕಳು ಕಲಾವಿದರ ಆಸಕ್ತಿಯನ್ನು ತಿಳಿಯಬಹುದು. ಕಲಿಸುವ ಗುರುಗಳಿಗೆ ಇಂತಿಷ್ಟು ಹಣ ಕೊಡಬೇಕು ಎನ್ನುವ ನಿಯಮಗಳು ಇಲ್ಲಿವೆ. ಸದ್ಯದಲ್ಲಿ ಕಲ್ಮೇಶ್ ಅರಟಾಳ್ ಮತ್ತು ಸೋಮಲಿಂಗ ಬಿಜ್ಜರಗಿ ಹೆಚ್ಚು ಸಂಭಾವನೆ ಪಡೆಯುತ್ತಿರುವ ಕಲಾವಿದರು. ಡೊಳ್ಳಿನ ಹಾಡುಗಳನ್ನು ಕಲಿಯುವವರು ಕುರಿಗಾರರು ಹೆಚ್ಚಾಗಿರುವುದರಿಂದ ಒಂದು 'ಕುರಿ'ಯನ್ನು ಕೊಟ್ಟು ಹಾಡುಗಳನ್ನು ಕಲಿತುಕೊಳ್ಳುವ ಸಂಪ್ರದಾಯ ಹೆಚ್ಚಾಗಿದೆ.

ಡೊಳ್ಳಿನ ಹಾಡುಗಳನ್ನು ಕಲಿಸುವುದು ಮತ್ತು ಹಾಡುವುದು ಲಾಭದಾಯಕ ಮತ್ತು ಜನಪ್ರಿಯತೆ ಸಿಗುವ ವೃತ್ತಿಯಂತೆ ಆಗಿರುವುದರಿಂದ ಈ ಕ್ಷೇತ್ರಕ್ಕೆ ಹೆಚ್ಚು ಹಾಡುಗಾರರು ಬರುತ್ತಿದ್ದಾರೆ. ಇದರಲ್ಲಿ ಹಾಲುಮತ ಮತ್ತು ಹಾಲುಮತೇತರ ಸಮುದಾಯಗಳು ಇವೆ. ಹಾಲುಮತೇತರ ಸಮುದಾಯಗಳಲ್ಲಿ 'ಲಿಂಗಾಯತರು' ಹೆಚ್ಚಾಗಿದ್ದಾರೆ. ಕಳೆದ ಎರಡು ವರ್ಷಗಳಿಂದ ಮಕ್ಕಳ ಆಗಮನ ಮುಂಚೂಣಿಯಲ್ಲಿದೆ. ಹುಡುಗರಿಗಿಂತ ಹುಡುಗಿಯರ ಆಗಮನ ಹೆಚ್ಚು. ಮಾರುಕಟ್ಟೆಯಲ್ಲಿ ಮತ್ತು ಪ್ರದರ್ಶನಗಳಲ್ಲಿ ಹುಡುಗಿಯರ ಹಾಡುಗಳಿಗೆ ಬೇಡಿಕೆ ಇರುವುದು ಇದಕ್ಕೆ ಪ್ರಮುಖ ಕಾರಣ. ಆಗಮನವಾಗಿರುವ

ಮಕ್ಕಳಲ್ಲಿ ಸರಕಾರಿ ಶಾಲೆಯಲ್ಲಿ ಓದುತ್ತಿರುವ ಮತ್ತು ಅಶಿಕ್ಷಿತ ಪಾಲಕರ ಮಕ್ಕಳು ಹೆಚ್ಚಾಗಿದ್ದಾರೆ. ಇದು ಡೊಳ್ಳಿನ ಹಾಡುಗಳನ್ನು ಜೀವಂತಗೊಳಿಸುವ ಅಥವಾ ಸಂಸ್ಕೃತಿಯನ್ನು ಜೀವಂತಗೊಳಿಸುವ ವರ್ಗವನ್ನು ಪ್ರತಿನಿಧಿಸುತ್ತದೆ.

೭.೩.೨. ಜನಪ್ರಿಯ ಶೈಲಿಯನ್ನು ಬೆನ್ನುಹತ್ತಿದ ಕಲಾವಿದರು

ಬರಹಗಾರರು ಈ ಕ್ಷೇತ್ರಕ್ಕೆ ಉದ್ದೇಶಪೂರಿತವಾಗಿ ಆಗಮನವಾದ ನಂತರ ಹಾಡುಗಳ ಶೈಲಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಈ ಬರಹಗಾರರನ್ನು 'ಬಂಡವಾಳಶಾಹಿ' ವ್ಯವಸ್ಥೆಯ ಹಿನ್ನೆಲೆಯಲ್ಲಿ ಆಗಮನವಾದ ಬರಹಗಾರರೆಂದು ಕರೆಯುವುದು ಸೂಕ್ತ. ಈಗ 'ಮಾರ್ಗ'ದ ಹಾಡುಗಳಿಗೂ, 'ಖ್ಯಾಲಿ' ಹಾಡುಗಳಿಗೂ ಸ್ವರೂಪದಲ್ಲಿ ಅಂತಹ ವ್ಯಾತ್ಯಾಸಗಳನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಜನಪ್ರಿಯ ಮತ್ತು ಚಲನಚಿತ್ರ ಹಾಡುಗಳ ಶೈಲಿಗೆ ಪಾರಂಪರಿಕ ಹಾಡುಗಳ ವಸ್ತು ಹೊಂದಿಕೆ ಆಗುವಂತೆ ರಚಿಸಿ ಹಾಡುವ ಪರಂಪರೆ ಈ ವ್ಯತ್ಯಾಸಗಳನ್ನು ಕಳೆದು ಹಾಕಿದೆ. 'ಚಂದ್ರ ಚಕೋರಿ' ಚಲನಚಿತ್ರದ 'ಕುಹೂ ಕುಹೂ ಕೋಗಿಲೆ' ಹಾಡಿನ ಶೈಲಿಯಲ್ಲಿ ಹಾಡಿದ ಹಾಡನ್ನು ಇಲ್ಲಿ ನೋಡಬಹುದು.

> "ಬಾರೋ ಬಾರೋ ಬೀರಣ ಬೀರಣ ಮಾಡುವೆ ನಿನ್ನ ದ್ಯಾನ
> ನೀ ಕಾಪಾಡೋ ಕಂದನ ನೀ ಕಾಪಾಡೋ ಕಂದನ
> ಬಾರೋ ಬಾರೋ ಮಾಳಣ ಮಾಳಣ ಮಾಡುವೆ ನಿನ್ನ ದ್ಯಾನ
> ನೀ ಕಾಪಾಡೋ ಕಂದನ. ನೀ ಕಾಪಾಡೋ ಕಂದನ
>
> ಸಿಡಿಯಾಣ ಮಠದಾಗ ಸಿದ್ದ ಬೀರಣ ಬೇಡಿ ಕುಂತಾನೋ ಅವ ಹುಲಿಗಿಣ್ಣ
> ಗುರುವಿಗೆ ಮಾಳಪ್ಪ ಕೊಟ್ಯಾನ ವಚನ ನಿನ್ನಾಟ ನನ ಇರಲಿ ಕಡಿತಾನ
> ಗುರುವಿನ ಪಾದಕ ಬಿದ್ದಾನಾ ಗುರು ಬೀರಣ್ಣ ಹಸ್ತ ಇಟ್ಯಾನಾ
> ಮಾಳಿಂಗರಾಯ ಪದ ಬಿಟ್ಟು ಯಾಕಾನ
>
> ಭಂಡಾರ ಚೀಲ ಬಗಲಿಗಾಕ್ಯಾನ ನಾಗರ ಬೆತ್ತೊಂದು ಕೈಯಾಗಿಡುದಾನ
> ಉಮದಿ ಕಂಬಳಿ ಹೆಗಲಿಗೊದ್ದಾನ ನೆಮದ ಬಿತ್ತೊದು ಕೈಯಾಗಿಡುದಾನ
> ಗುರುವಿನ ಗುಡಿ ಬಿಟ್ಯಾನ ಸಿದ್ದ ಮಾಳಣ್ಣ ತಮ್ಮ ಮನಿಗ್ಯಾ ಬಂದಾನ
> ಹುಲಿಗೆ ಮಾಳಪ್ಪ ಭಂಡಾರ ಹೊಡದಾನ ಹಾಲ ಹಿಂಡಿ ಅವ ಗಿಂಡಿ
> ತುಂಬ್ಯಾನ"[೫]

ಹೀಗೆ ಚಲನಚಿತ್ರ ಗೀತೆಗಳು, ಜನಪ್ರಿಯ ಜನಪದ ಗೀತೆಗಳು, ಜನಪ್ರಿಯ ತತ್ವಪದಗಳು ಮುಂತಾದ ಜನಪ್ರಿಯ ಹಾಡುಗಳ ಶೈಲಿಗೆ ಹೊಂದಿಸಿ ಹಾಡುತ್ತಿದ್ದಾರೆ. ಇವುಗಳಲ್ಲಿ ಹಿಂದಿ ಮತ್ತು ಕನ್ನಡ ಚಲನಚಿತ್ರಗಳ ಶೈಲಿಯ ಬಳಕೆ ಮುಂಚೂಣಿಯಲ್ಲಿದೆ.

ಕೇವಲ ಡೊಳ್ಳು ಹಾಡುಗಳಲ್ಲದೆ ಇತರ ಜನಪದ ಗೀತೆಗಳು ಈ ವಿಧಾನವನ್ನು ಅನುಸರಿಸುತ್ತಿವೆ. ಇವುಗಳ ಪ್ರಭಾವ ಮತ್ತು ಜನಾಕರ್ಷಣೆಯನ್ನು ಕುರಿತ ಅಧ್ಯಯನ ಮಾಡಬೇಕು. ಹಿ.ಶಿ. ರಾಮಚಂದ್ರೇಗೌಡ ಅವರು 'ನಕಲಿ ಜನಪದ ಗೀತೆಗಳ ಕ್ಯಾಸೆಟ್; ಸಂವಾದ' ಎನ್ನುವ ಲೇಖನದಲ್ಲಿ ಈ ಹಾಡುಗಳನ್ನು 'ಹೊಲಸು ಸಂಸ್ಕೃತಿ'ಯ ಹಾಡುಗಳೆಂದು ವಿಶ್ಲೇಷಿಸುವುದಕ್ಕೆ ಪ್ರಯತ್ನಿಸಿದ್ದಾರೆ.[೬]

ಇದು ಏಕಮುಖಿ ಚಿಂತನೆ. FAKE ಎಂದು ಅವಹೇಳನ ಮಾಡಿ ಅಧ್ಯಯನದಿಂದ ಕೈಬಿಟ್ಟಿರುವುದು ಒಂದೇ ಈ ರೀತಿ ಅಧ್ಯಯನ ಮಾಡುವುದು ಒಂದೇ. ಈ ಹಾಡುಗಳ ಹಿಂದಿನ ಸಾಂಸ್ಕೃತಿಕ ಪಲ್ಲಟಗಳನ್ನು, ರಾಜಕಾರಣಗಳನ್ನು ಗುರುತಿಸಬೇಕಾಗಿರುವುದು ನಮ್ಮ ಮುಂದಿರುವ ಸವಾಲುಗಳು.

ಈ ರೀತಿಯಾಗಿ ಜನಪ್ರಿಯ ಶೈಲಿಗೆ ತಿರುಚಿ ಹಾಡುವುದರಿಂದ ಡೊಳ್ಳಿನ ಹಾಡುಗಳ ಮೇಲೆ ಅನೇಕ ಪರಿಣಾಮಗಳಾಗಿವೆ. "ಬಹುಮುಖ್ಯವಾಗಿ ಮೂರು ಕ್ಷೇತ್ರಗಳಲ್ಲಿ ಪರಿಣಾಮಕ್ಕೆ ಒಳಗಾಗುತ್ತಿವೆ; ಪದಗಳ ಲಭ್ಯತೆ, ಪ್ರತಿಮಾ ಲಭ್ಯತೆ, ಕುಲದ ಲಭ್ಯತೆ ಈ ಮೂರು ಪ್ರಾಣಾದಾಯಕ ಶಕ್ತಿಗಳ ಲಭ್ಯತೆ ಕಡಿದು ಹೋಗುತ್ತಿದೆ. ಪದಗಳ ಲಭ್ಯತೆ ಎಂದರೆ 'ಕವಿಗೆ ಲಭ್ಯವಿರುವ ಭಾಷಾ ಸಮೂಹ, ಪದಾರ್ಥ ಸಮೂಹ' ಎಂದರ್ಥ. ಪ್ರತಿಮಾ ಲಭ್ಯತೆ ಎಂದರೆ ಕಾವ್ಯ ವಿಸ್ತಾರ ಎಂದರ್ಥ. ಕುಲ ಲಭ್ಯತೆ ಎಂದರೆ ಕುಲ ಮೂಲ ಕಥನಗಳ ಬಹು ಆಯಾಮಗಳು ಎಂದರ್ಥ. ಈ ರೀತಿಯ ಬಹುರೂಪಿ ಪಠ್ಯಗಳು ಕರಗಿ ಹೋಗುತ್ತಿವೆ."[೨] ಕಲಾವಿದರಿಗೆ ಅಥವಾ ಈ ಆಯಾಮಗಳು ಬೇಕೆ ಎನ್ನುವುದು ಮತ್ತೊಂದು ಪ್ರಶ್ನೆ. ಜೊತೆಗೆ ಮಾಧ್ಯಮಗಳು ಕಠಿಣವಾದುದನ್ನು ಪ್ರಸಾರ ಮಾಡುವುದಿಲ್ಲ. ಅದಕ್ಕೆ ಬೇಕಾಗಿರುವುದು ಸರಳತೆ. ಇದು ಅಧ್ಯಯನಕಾರರ ಮನಸ್ಥಿತಿಗೂ ಮತ್ತು ವಾದಕ್ಕೆ ವಿರುದ್ಧವಾದುದು. ಕಲಾವಿದರು ಮಾಧ್ಯಮಗಳಿಗೆ ಪ್ರವೇಶ ಪಡೆಯಬೇಕೆಂದರೆ ತಮ್ಮ ಅಭಿವ್ಯಕ್ತಿಯನ್ನು ಸರಳಗೊಳಿಸಿಕೊಳ್ಳಲೇಬೇಕು.

೭.೪. ಪಂಥಗಳ ಪ್ರತಿಪಾದನೆ

ಡೊಳ್ಳಿನ ಹಾಡುಗಳಲ್ಲಿ 'ಪಂಥ'ಗಳ ಪ್ರತಿಪಾದನೆ ಮಾಡುವ ವಿಧಾನ ತುಂಬಾ ಹಳೆಯದು. ಅಧ್ಯಾಯ ಮೂರು ಹಾಡುಗಳ ವರ್ಗೀಕರಣದಲ್ಲಿ 'ಪಂಥಗಳ ಹಾಡುಗಳು' ಎನ್ನುವ ಪ್ರಕಾರದ ವಿಶ್ಲೇಷಣೆಯಲ್ಲಿ ಈ ಹಾಡುಗಳ ಸ್ವರೂಪವನ್ನು ನೋಡಬಹುದು. ಪುನಾರಾವರ್ತನೆಯನ್ನು ತಡೆಯುವ ದೃಷ್ಟಿಯಿಂದ ಆ ಹಾಡುಗಳ ಸ್ವರೂಪದ ಚರ್ಚೆ ಇಲ್ಲಿ ಮಾಡಿಲ್ಲ. ಹಾಗಾಗಿ ನೇರವಾಗಿ ವಿಷಯಕ್ಕೆ ಪ್ರವೇಶ ಮಾಡಲಾಗಿದೆ.

೭.೪.೧. ಕುಲಶ್ರೇಷ್ಠತೆಯ ಹುಸಿ ವಾಗ್ವಾದ

ಡೊಳ್ಳಿನ ಹಾಡುಗಳಲ್ಲಿ 'ಹಾಲುಮತ ಮತ್ತು 'ಶೀಲಮತ' ಎನ್ನುವ ಎರಡು 'ಕುಲ ಪಂಥ'ಗಳ ವಾಗ್ವಾದ ನಡೆಯುತ್ತಿದೆ. ಈ ಪಂಥಗಳ ಇತಿಹಾಸ ೧೦-೧೨ ವರ್ಷಕ್ಕಿಂತ ಹಿಂದಕ್ಕೆ ಹೋಗುವುದಿಲ್ಲ. ೨-೩ ವರ್ಷಗಳಲ್ಲಿ ತೀವ್ರ ಸ್ವರೂಪ ಪಡೆದಿದೆ. ಕೇಳುಗರು ಡೊಳ್ಳಿನ ಹಾಡುಗಳೆಂದರೆ ಪಂಥಗಳ ಹಾಡುಗಳು ಎನ್ನುವಷ್ಟರಮಟ್ಟಿಗೆ ಪ್ರಭಾವಿಸಿವೆ. ಈ ಪಂಥಗಳ ಸ್ವರೂಪ ಹೀಗಿದೆ. ಹಾಲುಮತ ಪಂಥದಲ್ಲಿ ಭಂಡಾರ ಆರಾಧನೆಯ ಪ್ರತಿಪಾದಕರೆಂದು ಗುರುತಿಸಿಕೊಂಡಿರುವ ಸಾಂಸ್ಕೃತಿಕ ನಾಯಕರ ಜೀವನ ಚರಿತ್ರೆಗಳು ಮತ್ತು ಈ ನಾಯಕರನ್ನು ಆರಾಧಿಸುವ ಭಕ್ತವರ್ಗ ಇದೆ. ಈ ಪಂಥದ ಪ್ರಧಾನ ನಾಯಕ 'ಮಾಳಿಂಗರಾಯ'. ಇವರಲ್ಲಿ ಮುಖ್ಯವಾಗಿ 'ಮಾಂಸಹಾರಿ' ಸಂಸ್ಕೃತಿಯವರು ಕಾಣಿಸಿಕೊಳ್ಳುತ್ತಾರೆ. ಶೀಲಮತದಲ್ಲಿ ಅಮೋಘಸಿದ್ಧ ಮತ್ತು ಆತನ ಪರಂಪರೆಯ ಸಾಂಸ್ಕೃತಿಕ ವೀರರ

ಚಾರಿತ್ರಿಕ ಕಥನಗಳು ಹಾಗೂ ಈ ದೈವಗಳನ್ನು ಆರಾಧಿಸುವ ಭಕ್ತವರ್ಗ ಇದೆ. ಈ ಪಂಥದ ನಾಯಕ 'ಅಮೋಘಸಿದ್ಧ'. ಇಲ್ಲಿ ಕಾಣಿಸಿಕೊಳ್ಳುವ ಭಕ್ತವರ್ಗಕ್ಕೆ ರೇವಣಸಿದ್ಧ, ಸಿದ್ಧರಾಮ, ಮಲ್ಲಿಕಾರ್ಜುನ, ಸೋಮಲಿಂಗ ಕುಲದೈವಗಳಾಗಿರುವುದು ಹೆಚ್ಚು. ಆದರೆ ಅಮೋಘಸಿದ್ಧ ಮತ್ತು ರೇವಣಸಿದ್ಧನನ್ನು ಹೊರತುಪಡಿಸಿ ಉಳಿದ ದೈವಗಳು ವಾದಕ್ಕೆ ಬಳಕೆ ಆಗುವುದು ಕಡಿಮೆ. ಈ ಇಬ್ಬರು ನಾಯಕರಲ್ಲಿ ಅಮೋಘಸಿದ್ಧನ ಬಳಕೆ ಹೆಚ್ಚು. ಉಳಿದ ದೈವಗಳ ಬಗ್ಗೆ ಡೊಳ್ಳಿನ ಹಾಡುಗಳು ಇಲ್ಲದಿರುವುದು ಇದಕ್ಕೆ ಪ್ರಮುಖ ಕಾರಣ. ಶೀಲಮತ ವಾದದ ಪ್ರತಿಪಾದಕರ ಜೊತೆ 'ಲಿಂಗಾಯತರು' ಸೇರಿಕೊಳ್ಳುವುದು ಕುತೂಹಲವನ್ನುಂಟು ಮಾಡುತ್ತದೆ. ಈ ಪಂಥಗಳನ್ನು 'ಕುಲ ಸಂಘರ್ಷ'ಗಳ ಪರಿಕಲ್ಪನೆಯಲ್ಲಿ ಅಲ್ಲದೆ ಬೇರೆ ರೀತಿಯಲ್ಲಿ ಅಧ್ಯಯನ ಮಾಡುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಆಗಮನದ ಹಿನ್ನೆಲೆಯ ರಾಜಕಾರಣಗಳನ್ನು ಹುಡುಕಬೇಕು. ಮೇಲ್ನೋಟಕ್ಕೆ ಶೀಲಮತದಲ್ಲಿ 'ವಿಭೂತಿ ಪಂಥ', 'ಲಿಂಗಾರಾಧನೆ' ರೇವಣಸಿದ್ಧ, ಅಮೋಘಸಿದ್ಧ ದೈವಗಳ ಚಾರಿತ್ರಿಕ ಅವಹೇಳನ ನಡೆಯುತ್ತಿದೆ. ಇವರು ಇದನ್ನು ತಮ್ಮ ಸಂಸ್ಕೃತಿಯ ಅವಹೇಳನ ಆಗುತ್ತಿದೆ ಎಂದುಕೊಳ್ಳುತ್ತಾರೆ. ಅದನ್ನು ಪ್ರತಿರೋಧಿಸಬೇಕು, ತಡೆಯಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಪ್ರವೇಶ ಮಾಡಿರುವಂತೆ ಕಾಣಿಸುತ್ತದೆ.

ಶೀಲಮತದ ವಾದಕರಂತೆ ಅಮೋಘಸಿದ್ಧ, ರೇವಣಸಿದ್ಧನಂತೆ ಲಿಂಗಾಯತ ಸಂಸ್ಕೃತಿಗೆ; ವಿಭೂತಿ ಸಂಸ್ಕೃತಿಗೆ ಪರಿವರ್ತನೆ ಆದ ಸಾಂಸ್ಕೃತಿಕ ನಾಯಕನಲ್ಲ. ವಿಭೂತಿ ಪಂಥದ 'ಕುರುಬ ಕುಲ, ಗುರು ಒಡೆಯರು' ಸಂಸ್ಕೃತಿಗೆ ಪರ್ಯಾಯವಾಗಿ 'ಭಂಡಾರ ಸಂಸ್ಕೃತಿ'ಯ ಗುರವರ್ಗವನ್ನು ಸೃಷ್ಟಿಸಿದ ಸಾಂಸ್ಕೃತಿಕ ವೀರ. ಆದರೆ ಶೀಲಮತದ ವಾದಕರು ಪಾರಂಪರಿಕ ವಿಭೂತಿ ಸಂಸ್ಕೃತಿ ದೈವದಂತೆ. ಹಾಡುಗಳನ್ನು ಸೃಷ್ಟಿಸಿ ಹಾಡುತ್ತಿದ್ದಾರೆ; ಇವೆ ಚಾರಿತ್ರಿಕ ಸತ್ಯಗಳೆನ್ನುವಂತೆ ಪ್ರತಿಪಾದಿಸುವುದಕ್ಕೆ ಹಂಬಲಿಸುತ್ತಾರೆ. ಇದು ಮತೀಯ ಸಂಘರ್ಷವನ್ನು, ಚರಿತ್ರೆಯ ಅಕ್ರಮಣವನ್ನು ತಿಳಿಸುತ್ತದೆ. ಇಂತಹ ಕಾರಣಗಳು ಯಾಕಾಗಿ ಜನ್ಮತಾಳಿವೆ ಅನ್ನುವ ಹುಡುಕಾಟಗಳಿಂದಲೇ ಅಧ್ಯಯನಗಳನ್ನು ಶುರು ಮಾಡಬೇಕು. ಆಗ ಇವತ್ತಿನ ಡೊಳ್ಳಿನ ಹಾಡುಗಳ ಸ್ವರೂಪವನ್ನು ಖಚಿತವಾಗಿ ಅರ್ಥೈಸಿ ಕೊಳ್ಳಬಹುದು.

ಈ ಎರಡು ಪಂಥಗಳ ವಾದಕರು ತಮ್ಮ ತಮ್ಮ ಕುಲದೈವಗಳನ್ನು ಮುಂಚೂಣಿಗೆ ತರುವುದಕ್ಕೆ ಮತ್ತು ಶ್ರೇಷ್ಠವೆಂದು ಪ್ರತಿಪಾದನೆ ಮಾಡುವುದಕ್ಕೆ ಹೋರಾಟ ಮಾಡುತ್ತಿವೆ. ಹಾಗಾಗಿ ಇದಕ್ಕೆ ಬೇಕಾದ ಪೂರಕ ಸಾಮಗ್ರಿಗಳನ್ನು ಹಾಡಿನಲ್ಲಿ ತರುತ್ತಾರೆ.

ಸಂಭಾಷಣೆ :

ಮು; ಹಾಲುಮತದೊಳಗ ಬೀರಪ್ಪ, ಮಾಳಿಂಗರಾಯ ಅನ್ನುವರು ಒಂದು ದೊಡ್ಡ ಆಸ್ತಿ ಇದ್ದಂಗ.

ಹಿ: ಹೌದು...

ಮು: ಅಂತಹ ಆಸ್ತಿಯ ಅಧಿಕಾರ ಯಾರಿಗೆ ಸಿಕ್ಕಿತ್ತು ಅಂತ ಅಂದ್ರ

ಹಿ: ಯಾರಿಗೆ ಸಿಕ್ಕಿತ್ತರಿ....

ಮು: ಹಾಲುಮತದೊಳಗೆ ಸೂರ್ಯ ಹೊಂಡಲಾಗಿ, ಸೂರ್ಯ ಮುಳಗಲಾಗಿ ಸುಪ್ರಸಿದ್ಧ ಕಲಾವಂತರಾಗಿ ಹ್ವಾದಂತ 'ಹಾವಿನಾಳ್ ಚಂದ್ರ ಮುತ್ಯಾ'. 'ಬೇವರು ಚನ್ನಬಸಪ್ಪ ಗೌಡ್ರು' ಕೈಯಾಗ ಸಿಕ್ಕಿತ್ತು.

ಹಿ: ಹೌದರಿ ಅವರು ಪುಣ್ಯಾತ್ಮರು.

ಮು: ಅವರಂಗ ಇವೆರಡು ಮಾಡಕೋಕಿ ಏನು ಮಾಡಿ ಬಿಟ್ಟವು.

ಹಿ: ಯಾರ‍್ಯಾರ‍್ರೀ

ಮು: ಉಮದಿ ಮಾನಸಿದ್ಧ, ಸಂಕನಾಳ್ ಗುರುಲಿಂಗ, ಇವರು ಒಡೆಯರ ಮೇಳ ತಯಾರು ಮಾಡ್ಯಾರ.

ಹಿ: ಗಣಪತಿ ಮಾಡಕೊದ್ರು, ಜೋಕುಮ್ಯಾರಾಗಿ ಕುಂತಾದಿ ಅವರ ಪಾಲಿಗಿ.

ಮು: ಅದಕ್ಕೆ ನಿಮ್ಮ ಶೀಲಮತದೊಳಗ 'ಮನಮಿ ಮದಗೊಂಡ ಮಹಾರಾಜರು ಮತ್ತು ಗೂಳಿ ಶಿರಿವಾಳ ಮಹಾರಾಜರ‍್ರು' ಅಂತವರು ಆಗಿ ಹೋಗ್ಯಾರ. ಅವರು ಹೆಚ್ಚಿನ ಶರಣರು;ಹೆಚ್ಚಿನ ಸಿದ್ಧರು.

ಹಿ: ಅವರ ಕಾಲಿನ ಮಣ್ಣು ಸಂಕಟ ಆಗುವುದಿಲ್ಲರ‍್ರಿ ಇವ್ರು.

ಮು: ಅಂತವರ ಪಾದ ತೊಳೆದು ನೀರು ಕುಡಿಯಿರಿ.

ಹಿ: ನಿಮ್ಮ ಶರೀರ ಕರ್ಮ ಬಿಟ್ಟು ಹೋಗ್ತದ ದೂರ

ಮು: ಉಮದಿ ಮಾನಸಿದ್ಧ ಸಂಕನಾಳ್ ಗುರುಲಿಂಗ ನೀವೇನು ಅವರ ಜೋಡಿ ಆಗೋ ಮಾತಲ್ಲ. ನೀವು ಬರಿ ಹೊಟ್ಟಿ ತೆಪ್ಲಿಗಿ ಹಾಡುವರೊ ಬರಿ. ನಾವು ಅಲ್ಲಿ ಹಾಡಬೇಕು. ರೊಕ್ಕ ತರಬೇಕು. ಇಲ್ಲಿ ಹಾಡಬೇಕು, ರೊಕ್ಕ ಗಳಿಸಬೇಕು ಎನ್ನುವರು. ಹಾಲುಮತ ಶೀಲಮತ ಸುಧಾರಿಸಬೇಕು ಅನ್ನುವರು ನೀವಲ್ಲ".[೮] ಈ ವಾದ ಬಂಡವಾಳ ಪರಿಕಲ್ಪನೆಯಲ್ಲಿ ಜನ್ಮ ತಾಳಿರುವಂತದ್ದು. ಅಂದರೆ ಸ್ಥಳೀಯ ದೈವಗಳನ್ನು, ಕುಲ ದೈವಗಳನ್ನು ಹೊಡೆದು ಹಾಕಿ 'ಜಾಗತಿಕ ಸಂಸ್ಕೃತಿ'ಯನ್ನು 'ಏಕಮೂಲ ಸಂಸ್ಕೃತಿ'ಯನ್ನು ಜಾರಿಗೆ ತರುವ ಉದ್ದೇಶವಿದು. ಈ ರಾಜಕಾರಣಕ್ಕೆ ಕಲಾವಿದರಿಂದ ಹಾಲುಮತ ಸಮುದಾಯ ಬಲಿ ಆಗುತ್ತಿದೆ. ಸಮುದಾಯಗಳ ಇವತ್ತಿನ ದುರಂತವೇ ಸರಿ.

ಹೀಗೆ ಹಾಲುಮತದವರು ನಾವು, ನಮ್ಮ ದೈವಗಳು, ನಮ್ಮ ದೈವಗಳನ್ನು ಕುರಿತು ಹಾಡುಗಳನ್ನು ಹಾಡಿದ ವ್ಯಕ್ತಿಗಳು ಅಂದರೆ ನಮ್ಮ ಪಂಥದ ಹಿರಿಕರು ಶ್ರೇಷ್ಠವೆಂದು ಹಾಡುತ್ತ ಹೋಗುತ್ತಾರೆ. ಶೀಲಮತದವರು ಇವರ ವಾದವನ್ನು ಹುಸಿಯಾದುದೆಂದು ಅಲ್ಲಗಳೆಯುತ್ತಾ ನಾವು ಶ್ರೇಷ್ಠವೆಂದು ಹಾಡುತ್ತಾರೆ. ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಅಲ್ಲಗಳೆಯುವುದರ

ಮುಖಾಂತರ ಅವರ ಜೀವನದ ವಾಸ್ತವ ಚಿತ್ರಣಗಳನ್ನು ಹುಸಿಗೊಳಿಸುವದೆಂದರ್ಥ. ಆ ಮುಖಾಂತರ ಸಾಂಸ್ಕೃತಿಕ ವೀರರನ್ನು, ಹಾಲುಮತ ಧರ್ಮವನ್ನು ಇಲ್ಲವಾಗಿಸುವುದು. ಇದು ಬಂಡವಾಳಶಾಹಿಯ ತಂತ್ರ. ವಿಶ್ವಾತ್ಮಕ ಸಂಸ್ಕೃತಿಯನ್ನು ತರುವ ಉದ್ದೇಶ ಇದರ ಹಿಂದಿದೆ.

ಇಂತಹ ಹಾಡುಗಳನ್ನು ಹಾಡುವ ಸಂದರ್ಭದಲ್ಲಿ 'ಕೇಳುಗ'ರಲ್ಲೂ ಎರಡು ಗುಂಪುಗಳಾಗುತ್ತವೆ. ಈ ಗುಂಪುಗಳು ಹಾಡುಗಾರರ ಸ್ವರೂಪದಂತಿವೆ. ಆಯಾ ಪಂಥದ ಕೇಳುಗರು, ಆಯಾ ಪಂಥದ ಹಾಡುಗಾರರನ್ನು ಬೆಂಬಲಿಸುತ್ತಿರುತ್ತಾರೆ. ತಮ್ಮ ಸಂಸ್ಕೃತಿ, ತಮ್ಮ ಪಂಥ, ತಮ್ಮ ಆರಾಧಕ ದೈವಗಳ ಬಗ್ಗೆ ಧಕ್ಕೆ ಬರುವಂತೆ ಹಾಡಿದರೆ ಆ ಹಾಡುಗಾರರನ್ನು ಪ್ರತಿರೋಧ ಮಾಡುತ್ತಾರೆ. ಕೆಲವೊಮ್ಮೆ ಈ ಚರ್ಚೆ ಅತಿರೇಕಕ್ಕೆ ಹೋಗಿ ಹಾಡುಗಾರ-ಹಾಡುಗಾರರ ನಡುವೆ, ಕೇಳುಗರು-ಹಾಡುಗರ ನಡುವೆ ಬಡಿದಾಟಗಳಾದ ಉದಾಹರಣೆಗಳಿವೆ. ಕೆಲವೊಮ್ಮೆ ಮುಖ್ಯ ಹಾಡುಗಾರರನ್ನು ಅದೇ ಮೇಳದ ಸಹಕಲಾವಿದರು ಬಚ್ಚಿಟ್ಟುಕೊಂಡು ಪ್ರದರ್ಶನವನ್ನು ಅರ್ಧಕ್ಕೆ ಕೈಬಿಟ್ಟು ತಮ್ಮ ವಾಹನಗಳಲ್ಲಿ ಬಚ್ಚಿಟ್ಟುಕೊಂಡು ಓಡಿ ಹೋದ ಉದಾಹರಣೆಗಳು ಸಿಗುತ್ತವೆ. ಅಷ್ಟಕ್ಕೆ ಕೈಬಿಡದ ಕೇಳುಗರು-ಹಾಡುಗಾರರು ವಿರೋಧ ತಂಡದವರೂ ಬೆನ್ನಟ್ಟಿ ಹಿಡಿದು ಬಡಿದ ಸಾಕ್ಷಿಗಳು ಸಿಗುತ್ತವೆ. ಜೊತೆಗೆ ಒಬ್ಬ ಕಲಾವಿದ ಮತ್ತೊಬ್ಬ ಕಲಾವಿದನನ್ನು ಬಡಿದಿದ್ದು ಸಾಹಸವೆನ್ನುವಂತೆ ಹಾಡಿನಲ್ಲಿ ಆ ಸಂದರ್ಭಗಳನ್ನು ಹಾಡುಗಳಲ್ಲಿ ತರುತ್ತಾರೆ.

ಸಂಭಾಷಣೆ :

"ಗುಲಬರ್ಗಾ ಜಿಲ್ಲಾ ಆಳಂದ ತಾಲೂಕ 'ಕಡೆಗಂಚಿ' ಉರೊಳ ನನ್ನ ಜೋಡಿ 'ಸಂಕನಾಳ ಗುರುಲಿಂಗ' ಹಾಡಲಾಕ ಬಂದಿದ್ದ. ಕೂಡಿದ್ದ ಜನ ಇವನಿಗೆ ಕೊಟ್ಟಂತ ರೂಪಾಯಿ ಸಮೇತ ವಳ್ಳಿ ಕಸಕೊಂಡು ವಡಮಸ ಹಚ್ಚಿದ್ರು... ಅವ್ನಿಗೆ ಕಂಬಿಗೆ ಕಟ್ಟಲಾಕ ನಿಂತಿದ್ರು ಅಲ್ಲಿ. ಅಮೋಘಸಿದ್ಧ ಮತಮಾನ್ಯದೊಳಗ ಹಾಡುವಂತ ಯೋಗ್ಯ ಕಲಾವಿದ ನೀನಲ್ಲ ಅಂತ ಕಟ್ಟಿ ಹಾಕಲಾಕ ನಿಂತಿದ್ರು, ಅವತ್ತಿನ ದಿವಸ ಇದು ನನ್ನ ಮಾಳಿಂಗರಾಯನ ಮತಮಾನ್ಯ ಅದ. 'ಇಂಡಿ ಜಟ್ಟೆಪ್ಪ ನಿಂದ್ರಿಸಿ ಕಟ್ಟಿಸಿದ ಅಂತ ಬೊಬ್ಬಿ ಹೊಡಿತಾರಂತ ಬಿಡಿಸಿ ಹಚ್ಚಿಕೊಟ್ಟ ಮಗನೇ ನಾನು. ಅವತ್ತಿನಿಂದ ಇವತ್ತಿನವರೆಗೂ ನನ್ನಜೋಡಿ ಭಂಡಾರ ಹಿಡಿಯಾಕ ಅಂಜಿ ಬಿಡಲಾಕ ಹತ್ಯಾದ ಲೌಡಿ. ಯಾಕ ಬಾಳ ಬಿರಸು ಅತ್ತಲಾಕತ್ತದ ಇಂಡಿ ಜಟ್ಟೆಪ್ಪನದು"[7]

ಈ ಬಡಿದಾಟುಗಳಿಗೆ ಭಯಪಡುತ್ತಿರುವ ಅಮೋಘಸಿದ್ಧ ಪಂಥದ ಹಾಡುಗಳನ್ನು ಹಾಡುವ ಉಮದಿ ಮಾನಸಿದ್ಧ ಮುಂತಾದ ಹಾಡುಗಾರರು ಸೊಂಟದಲ್ಲಿ ಪಿಸ್ತೂಲುಗಳನ್ನು ಇಟ್ಟುಕೊಂಡು ಹಾಡುವ ಹಂತವನ್ನು ತಲುಪಿದ್ದಾರೆ. ಹಾಡುಗಳ ಪ್ರದರ್ಶನ ಅಷ್ಟೊಂದು ಜೀವ ಭಯ ಪಡೆದಿದೆ. ಇಲ್ಲಿ ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆಯೆಂದರೆ ಈ ತರಹದ ವಾತಾವರಣ ಕಲಾವಿದರಿಗೆ ಸಮಾಜಕ್ಕೆ, ಸಮುದಾಯಗಳಿಗೆ, ಜಾತಿಗಳಿಗೆ ಬೇಕಾ? ಕೇಳುಗ ವರ್ಗದ ನಡುವೆ ಸದಾ ಜೀವಂತವಾಗಿರ

ಬಯಸುವ ಕಲಾವಿದ ಮತ್ತು ಕಲೆಯ ಉದ್ದೇಶ ಇದೇನಾ? ಡೊಳ್ಳಿನ ಹಾಡುಗಳು ಜನ್ಮ ತಾಳಿದ್ದು ಈ ಕಾರಣಕ್ಕಾಗಿಯೇ? ಈ ರೀತಿಯ ಕಾರ್ಯವೈಖರಿ ಪ್ರವೇಶ ಪಡೆದಿದ್ದು ಯಾವಾಗ? ಯಾರಿಂದ? ಯಾಕಾಗಿ? ಯಾವ ಉದ್ದೇಶಕ್ಕಾಗಿ? ಈ ರೂಪ ಪಡೆಯುವುದಕ್ಕೆ ಇರಬಹುದಾದ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕಾರಣಗಳು ಯಾವುವು? ಅಥವಾ ಇವುಗಳು ಸಂಬಂಧವಿಲ್ಲದೆ ಕೇವಲ ಪರಿಸರದ ಪ್ರಭಾವದಿಂದ ಸೃಷ್ಟಿಯಾಗಿವೆಯೆ? ಅಂದರೆ ಈ ಹಾಡುಗಳು ಬದುಕುವ ಕಾಲಘಟ್ಟವೇ ಈ ನೆಲೆಯಲ್ಲಿದೆಯೆ? ಎನ್ನುವ ಹಲವು ಪ್ರಶ್ನೆಗಳಿಗೆ ಹುಡುಕಾಟ ಮಾಡಬೇಕಾಗಿದೆ. ಈ ಹಾಡುಗಳು FAKE ಎಂದು ಗ್ರಹಿಸಿ ಕೈಬಿಡುವುದರಿಂದ ಈ ರೀತಿಯ ಪಲ್ಲಟಗಳನ್ನು ಗುರುತಿಸು ವುದಕ್ಕೆ ಮತ್ತು ಸರಿಪಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಪ್ರಸ್ತುತ ಅಧ್ಯಯನದ ಈ ರೀತಿಯ ಹುಡುಕಾಟಕ್ಕೆ ಬೇಕಾದ ಪೂರ್ವ ಮಾಹಿತಿಯನ್ನು ಕೊಡುತ್ತದೆ ಅನ್ನುವ ನಂಬಿಕೆ.

ಕ್ಯಾಸೆಟ್ ಹಾಡುವ ಹಾಡುಗಾರರನ್ನು ವಿರೋಧಿಸುವ ವರ್ಗವು ಡೊಳ್ಳಿನ ಹಾಡಿನಲ್ಲಿದೆ. ಕುತೂಹಲವೆಂದರೆ ಕ್ಯಾಸೆಟ್‌ಗೆ ಹಾಡಬೇಡಿ ಅಂತ ಹೇಳುವುದನ್ನು ಸಹ ಹಾಡುವುದನ್ನು ಕ್ಯಾಸೆಟ್‌ಗಳಲ್ಲಿ ಹೇಳುತ್ತಾರೆ. ಈ ಬಗೆಯ ಅಭಿವ್ಯಕ್ತಿಯನ್ನು ಮಾಧ್ಯಮಗಳ ಲಾಭ ಪಡೆದ ಕೆನೆಪದರ ಪ್ರತಿಕ್ರಿಯೆಯಂದು ಕರೆಯಬಹುದು. ಮಾಧ್ಯಮಗಳ ವ್ಯವಸ್ಥೆಯೊಳಗೆ ಇದ್ದುಕೊಂಡು ಪ್ರತಿರೋಧ ಮಾಡುವುದರ ಮುಖಾಂತರ ತನ್ನನ್ನು ತಾನು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ತಪ್ಪನ್ನು ತಿದ್ದಿಕೋ ಎಂದು ಹೇಳುವು ದಕ್ಕೆ ಬೈಗುಳಗಳನ್ನು ಬಳಕೆ ಮಾಡುತ್ತಾನೆ. ಹೀಗೆ ಹಾಡಿದ ನಂತರ ಉಳದ ತಂಡದವರು ಆತನ ಮೇಲೆ ಅಕ್ರಮಣ ಮಾಡುತ್ತಾರೆ. ನಂತರ ಅವರದೇ ಆದ ನೆಲೆಯಲ್ಲಿ ಬೈಗುಳಗಳ ವಾದ-ಪ್ರತಿವಾದ ಮುನ್ನಡೆಯುತ್ತದೆ.

ಸಂಭಾಷಣೆ :

ಮು: ಬೀರಣ್ಣ ಒಂದು ಮಾತು ಹಿಂಗೈತಿ. ಎಷ್ಟೆಷ್ಟು ಜನ ಕೂಡಿ ಎಂತಹ ಕ್ಯಾಸೆಟ್ ಮಾಡ್ಯಾರಪ್ಪ ಅಂದರ

ಹಿ: ಸಿದ್ದರ ಶಿವಸ್ಥಾನ ಮರೆತು ಜೋಗಪ್ಪರಂಗ ಕ್ಯಾಸೆಟ್ ಮಾಡ್ತಾರ ಇವ್ರು.

ಮು: ಆ ಕ್ಯಾಸೆಟ್ ಮ್ಯಾಗ ಏನು ಮಾಡಕ ಹತ್ತ್ಯಾರಪ್ಪ ಅಂದ್ರು

ಹಿ: ಏನ್ ಮಾಡ್ತಾರ್ರೀ....

ಮು: ಮಿಡಿ ಚೂಡಿದಾರ, ಸೀರಿ ಉಟಕೊಂಡು ಸೋಗು ಮಾಡುವರಂಗ ಪೋಜು ಕೊಡ್ತಾರ.

ಹಿ: ಇವ್ರು ಜೋಳೆಗೇರು ಇದ್ದಾಂಗ.

ಮು: ಇಂತವರಿಗೆ ಏನು ಮಾಡಬೇಕಪ್ಪ ಅಂತ ಅಂದ್ರು, ಇವ್ರನೆಲ್ಲ ಒಂದು ಕಾವಲಿ ಕೂಡಿಸಿ, ಒಂದು ಕಂಬಕ್ಕೆ ಕಟ್ಟಿ, ಮಾರಿ ಮಾರಿಗೆ ಹೊಡೆದು, ಚೌಡಕಿ ಕೊಟ್ಟು ಕೊಳ್ಳಾಗ ಒಂದು ಭಂಡಾರ

ಚೀಲ ಹಾಕಿ ಇವ್ರನ ಎಲ್ಲಿಗೆ ಕಳಿಸಬೇಕು ಅಂದ್ರ 'ಹಿರೇಗುಡಿ'ಗೆ ಕಳುಹಿಸಬೇಕು. ಇವ್ರಿಗೆ ಅವಾಗ ಬುದ್ಧಿ ಬರತೈತಿ...." [೧೦]

"ಹೇ ಕ್ಯಾಸೆಟ್ ಮಾಡ್ಯಾರ ಬಲು ಜೋರ
ಮಾತಿನ್ಯಾಗ ಮಾಡಿ ತಕರಾರ
ಪೊಜ ಕೊಡತರಿ ನೀವು ಏನುತಾರ
ಎಷ್ಟು ಉಗುಳಿದರು ಇಲ್ಲೊ ದರಕಾರ
ಏನಂತ ಹೇಳಲಿ ಕಥಿಸಾರ
ತೂಕ ಮಾಡ್ಯಾರ್ರಿ ಹಿರಿಯೂರ
ಹೇ ಹಾಲುಮತ ಶೀಲಮತ ಅನ್ನುತಾರ
ಹಣೆ ಮೇಲೆ ಭಂಡಾರ ಬಡುದಾರ
ಜಾತಿಭೇದ ಸುಳ್ಳೆ ಮಾಡುತಾರ
ದೇವರ ಮಾನ ಕಳಿತಾರ
ಎಂತವರು ಹುಟ್ಟಿ ಬಂದಾರ
ಮೈ ಮಾರ ಎಲ್ಲಾ ಕಳಿಸಾರ" [೧೧]

ಈ ವಾದ-ಪ್ರತಿವಾದಗಳ ಹಾಡುಗಳನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜನ್ಮತಾಳಿದರೂ, ಈ ಪಂಥಗಳ ಸಂಘರ್ಷ ಈ ಸಂದರ್ಭದ ಹಾಲುಮತ ಧರ್ಮದ ಸಂಘರ್ಷದಂತೆ ಕಾಣಿಸುತ್ತದೆ ಅಥವಾ ಈ ಹೊತ್ತಿನ ಹಾಲುಮತ ಸಮುದಾಯದೊಳಗಿನ ಕುಲಗಳ ಸ್ಥಿತಿಯು ಹೌದು. ಹಾಗಾಗಿ ಈ ಹಾಡುಗಳನ್ನು 'ಕುಲ ಸಂಘರ್ಷ'ಗಳ ಹಾಡುಗಳೆಂದು ಕರೆಯುವುದು ಸೂಕ್ತ. ಏಕೆಂದರೆ ಹಾಡುಗಳು ಇವತ್ತಿನ ಹಾಲುಮತ ಸಮುದಾಯ ದೊಳಗಿನ ಶ್ರೇಣೀಕರಣವನ್ನು ಹೊರಹಾಕುತ್ತಿವೆ. ಇದನ್ನು ಹಾಲುಮತ ಸಂಸ್ಕೃತಿಯಲ್ಲಿ ಸೃಷ್ಟಿಯಾಗು ತ್ತಿರುವ 'ನವ ಶ್ರೇಣೀಕರಣ' ಎಂದು ಗುರುತಿಸಬಹುದು. ಈ ರೀತಿಯಾಗಿ ಕುಲ ಪ್ರತಿಪಾದನೆ ಮಾಡುವ ವಿಧಾನದಲ್ಲಿ ಕುಲ ಪ್ರತಿಪಾದನೆಯಲ್ಲಿ ಮಾಳಿಂಗರಾಯನ ಪಂಥದವರು ಮುಂಚೂಣಿಯಲ್ಲಿ ದ್ದಾರೆ. ಇದಕ್ಕೆ ಕಾರಣಗಳಿವೆ. ಪ್ರಮುಖ ಕಾರಣಗಳನ್ನು ಹೀಗೆ ಗುರುತಿಸಬಹುದು. ಈ ಪಂಥದ ಹಾಡುಗಾರರು ಹೆಚ್ಚಾಗಿದ್ದಾರೆ. ಅದರಂತೆ ಕೇಳುಗ ವರ್ಗವು ಹೆಚ್ಚು. ಬೀರಪ್ಪ, ಮಾಳಿಂಗರಾಯ ಮುಂತಾದ ದೈವಗಳನ್ನು ಆರಾಧಿಸುವ ವರ್ಗವು ಹೆಚ್ಚಾಗಿದೆ. ಒಂದು ತಂಡದವರ ವಾದವನ್ನು ಉಳಿದ ತಂಡಗಳು ಅತಿವೇಗದಲ್ಲಿ ಅನುಮೋದಿಸುತ್ತಾ ಹೋಗುತ್ತಾರೆ. ಕೇಳುಗರು ಹೆಚ್ಚಾಗಿರುವುದರಿಂದ ಬಂಡವಾಳಗಾರರು ಹಾಡುಗಳ ಬಂಡವಾಳಕ್ಕೆ ಮುಂದಾಗುತ್ತಿದ್ದಾರೆ. ಕಲಾವಿದರಿಗೆ ಹೆಚ್ಚು ಸಂಭಾವನೆಯು ಸಿಗುತ್ತದೆ ಇನ್ನೂ ಮುಂತಾದವು.

೭.೪.೨. ಲಿಂಗ-ತಾರತಮ್ಯ ಶ್ರೇಷ್ಠತೆಯ ವಾಗ್ವಾದ

ಡೊಳ್ಳಿನ ಹಾಡುಗಳಲ್ಲಿ ಲಿಂಗ ತಾರತಮ್ಯದ ಅಧ್ಯಯನ ಪ್ರತ್ಯೇಕ ಅಧ್ಯಯನವನ್ನು ಬಯಸು ತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಜೊತೆಗೆ ಇಲ್ಲಿ ಮಹಿಳೆಯ ಬಗ್ಗೆ ಇರುವ ಭಿನ್ನ ಪರಿಕಲ್ಪನೆಗಳನ್ನು ಗುರುತಿಸುವುದಿಲ್ಲ. ಈಗ ಬಳಕೆ ಆಗುತ್ತಿರುವ ವಿಧಾನದ ಬಗ್ಗೆ ಮಾತ್ರ ವಿಶ್ಲೇಷಣೆ ಮಾಡಲಾಗಿದೆ.

ಡೊಳ್ಳು ಕಲೆ ಪುರುಷರ ಕಲೆ. ಪುರುಷರು ಮಾತ್ರ ಬಾರಿಸಬೇಕು, ಮಹಿಳೆಯರು ಡೊಳ್ಳನ್ನು ಮುಟ್ಟಬಾರದು ಎನ್ನುವ ಹಲವು ನಿರ್ಬಂಧಗಳನ್ನು ಹೇರಲಾಗಿತ್ತು. ಈ ನಂಬಿಕೆಗಳನ್ನು ಹೊಡೆದು ಹಾಕಿ ಮಹಿಳೆಯರು ಪ್ರವೇಶ ಪಡೆದು ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳುತ್ತಿದ್ದಾರೆ. ಇಲ್ಲಿ ಇನ್ನೂ ಸಂಪೂರ್ಣವಾದ ಗುರುತ್ವವನ್ನು ಕಂಡುಕೊಂಡಿಲ್ಲ. ಪುರುಷರು ಮಹಿಳೆಯ ಆಗಮನವನ್ನು ಒಪ್ಪುತ್ತಿಲ್ಲ. ವಿರೋಧ ಮಾಡುತ್ತಿದ್ದಾರೆ. ಅವಹೇಳನ ಮಾಡಿ ಹಾಡುತ್ತಿದ್ದಾರೆ.

"ಬಾಜರಕ ಬಂದಾಳ ಕಡಬಿಡಕೆ
ಮಾರ್ಲಕ ತಂದಾಳ ಎಲಿ ಅಡಕೆ
ನಡಬರಕ ಕುಂತಾಳ ಹುಳಗಡಕಿ"[೨೧]

ಮುಖ್ಯವಾಗಿ ಮಹಿಳೆಯನ್ನು ಕುರಿತು ಚರ್ಚೆಗಳು ಎರಡು ನೆಲೆಯಲ್ಲಿ ನಡೆಯುತ್ತಿವೆ. ಒಂದು; ಹೆಣ್ಣು ಹೆಚ್ಚೋ ಗಂಡು ಹೆಚ್ಚೋ ಅನ್ನುವ ಸಂದರ್ಭ. ಎರಡು; ಈ ಕಲೆಯ ಆಗಮನದ ಪರ-ವಿರೋಧದ ಚರ್ಚೆ. ಈ ಚರ್ಚೆಗಳಲ್ಲಿ ಮಹಿಳೆಯನ್ನು ವ್ಯಾಪಾರದ ವಸ್ತುವೆನ್ನುವಂತೆ ಕಾಣುತ್ತಿದ್ದಾರೆ. ಪುರುಷರು ಮಹಿಳಾ ಕುಲಕ್ಕೆ ಅವಮಾನ ಆಗುವಂತಹ ಹಾಡುಗಳನ್ನು ಬರೆದುಕೊಟ್ಟು ಮಹಿಳೆಯಿಂದ ಹಾಡಿಸಿ ಅವಮಾನಿತರನ್ನಾಗಿಸುತ್ತಿದ್ದಾರೆ.

"ಬಗ್ಗಿ ಬಾರ ಹಾಕಿ ಹಿಗ್ಗಿ ಹೊರಲಾರ
ತಗ್ಗಿಸಿ ಮಾಡ್ತದ ಖ್ಯಾಳಿ
ತಾಳಲಾದ್ದ ಬಾರ ಗೋಳು ಮಾಡ್ತದ ಗೂಳಿ
ಎಳಿತದ ಎಂಟ್ಯಾಗ ಹುಳ್ಳಿ"

ಒಂದು ಮಹಿಳಾ ತಂಡ ಮತ್ತೊಂದು ಮಹಿಳಾ ತಂಡವನ್ನು ಬೈದು ಹಾಡುತ್ತಿರುವಾಗ ಕೇಳುಗ ಪುರುಷರು ಆ ಬೈಗುಳಗಳನ್ನು ಕೇಳಿ ಸಂತೋಷಪಡುತ್ತಾರೆ. ಈ ಹಾಡುಗಳ ಕೇಳುಗ ವರ್ಗ ನೂರಕ್ಕೆ ತೊಂಬತ್ತರಷ್ಟಿದೆ. ಕೇವಲ ಹತ್ತರಷ್ಟು ಇತ್ತೀಚಗೆ ಆಗಮನವಾಗುತ್ತಿದ್ದಾರೆ. ಕೇಕೆ ಹಾಕಿ ಹರ್ಷ ವ್ಯಕ್ತಪಡಿಸಿ ಕುಣಿದಾಡುತ್ತಾರೆ. ಹೆಚ್ಚು ಹೆಚ್ಚು ಬೈದು ಹಾಡಿದ ಕಲಾವಿದೆಯರಿಗೆ ಬಹುಮಾನ ಅರ್ಪಿಸುತ್ತಾರೆ. ನೋಟುಗಳನ್ನು ದೇಹಕ್ಕೆ ಅಂಟಿಸುತ್ತಾರೆ. ಮಧು, ಗುಟುಕಾ, ಮುಂತಾದ ಪಾಕೀಟುಗಳ ಸರಗಳ ಮಾಲೆಯನ್ನು ಮಾಡಿ ಹಾಕುತ್ತಾರೆ. ಒಟ್ಟಾರೆಯಾಗಿ ಮಹಿಳೆ ಬೋಗದ ಮತ್ತು ಮಾಟದ ವಸ್ತುವೆನ್ನುವಂತೆ ಬಳಕೆ ಆಗುತ್ತಿದ್ದಾಳೆ. ತನ್ನನ್ನು ತಾನು (ಸ್ತ್ರೀ ಕುಲವನ್ನು ಸ್ತ್ರೀ) ಬೈದು ಹಾಡಿಕೊಳ್ಳುವುದೆಂದರೆ ತನ್ನನ್ನು ತಾನು ಹರಾಜು ಹಾಕಿಕೊಂಡಂತೆ. ಆದರೆ ಈ ಹಾಡುಗಾರ್ತಿಯರಿಗೆ ಈ ಪರಿಕಲ್ಪನೆ ತಿಳಿದಿಲ್ಲ. ತಮ್ಮ ಬಗ್ಗೆ ತಾವು ಯೋಚನೆ ಮಾಡುವಷ್ಟು ಬುದ್ಧಿಹೀನರಿವರು. 'ಪುರುಷ ಬಂಡವಾಳಶಾಹಿ ವ್ಯವಸ್ಥೆ'ಯ ರಾಜಕಾರಣವನ್ನು ಅರಿಯದವರು. ಅಂದರೆ ಈ ಕ್ಷೇತ್ರಕ್ಕೆ ಆಗಮನವಾಗಿರುವ ಹಾಡುಗಾರ್ತಿಯರು, ಅಶಿಕ್ಷಿತರು, ಮಕ್ಕಳು. ಅದರಲ್ಲಿ ಎಂಟು-ಹತ್ತು ವರ್ಷದೊಳಗಿನವರು. ನಾಲ್ಕು ತಂಡದ ಹಾಡುಗಾರ್ತಿಯರು ೧೫-೧೭ ವರ್ಷಗಳನ್ನು ದಾಟಿದ್ದಾರೆ. ಇವರ ಪ್ರದರ್ಶನಕ್ಕೆ ಬಾರಿ ಬೇಡಿಕೆ. ಈ ಕ್ಷೇತ್ರದಲ್ಲಿರುವ ಮಹಿಳಾ ಹಾಡುಗಾರ್ತಿಯರು ಸ್ವ-ಚಿಂತನೆ ಮಾಡುವಷ್ಟು

ಶಕ್ತರಾಗಿಲ್ಲ. ಸಂದರ್ಶನದಲ್ಲಿ ಪುರುಷರ ಬಳಿಕೆ ನಮಗೆ ತಿಳಿದಿಲ್ಲವೆಂದು ಹೇಳುತ್ತಿದ್ದರಷ್ಟೆ. ಇದನ್ನು ಅರಿತ ಪುರುಷಪ್ರಧಾನ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆ ಮಾರಾಟದ ವಸ್ತು ಎನ್ನುವಂತೆ ರೂಪಿಸಿಕೊಂಡಿದೆ. ಹಾಗಾಗಿ ತಮಗೆ ಇಷ್ಟಬಂದಂತ ಹಾಡುಗಳನ್ನು ರಚಿಸಿ ಹಾಡಿಸುತ್ತಾರೆ. ಈ ಹಾಡುಗಾರ್ತಿಯರು ಇದನ್ನು ಪ್ರತಿರೋಧ ಮಾಡುವಷ್ಟು ಶಕ್ತರಾಗಿಲ್ಲ. ಸ್ವತಂತ್ರವಾಗಿ ಹಾಡುಗಳನ್ನು ಹಾಡುವುದಕ್ಕೆ ರೂಢಿಸಿಕೊಂಡ ನಂತರ ಈ ಶಕ್ತಿ ಬರುತ್ತದೆ. ಆ ಪ್ರಜ್ಞೆಯನ್ನು ಅವರಿಗೆ ಕೊಡಬೇಕಾಗಿದೆ. ಆಗ ತನ್ನದೆ ಆದ ಸ್ವತಂತ್ರ ಅಸ್ಮಿತೆಯನ್ನು ಕಟ್ಟಿಕೊಳ್ಳಬಲ್ಲರು. ಮಹಿಳಾ ಸ್ಥಿತಿಗತಿಯ ಚಿತ್ರಣವನ್ನು ತರಬಲ್ಲಳು ಹಾಗೂ ಪುರುಷ ಮತ್ತು ಬಂಡವಾಳ ವ್ಯವಸ್ಥೆಯನ್ನು ಪ್ರತಿರೋಧಿಸುವಳು ಎನ್ನುವ ಆಶಯ.

೭.೫. ಕಲಾವಿದರ ತಾರತಮ್ಯತೆ

ಡೊಳ್ಳಿನ ಹಾಡುಗಾರರಲ್ಲಿ ಹಿರಿಯ-ಕಿರಿಯ, ಜ್ಞಾನವಂತ-ದಡ್ಡ, ಅನುಭವಿಕ-ಅನುಭವ ರಹಿತ ಮುಂತಾದ ತರತಮ ಮನೋಭಾವನೆಯನ್ನು ಕಾಣಬಹುದು. ಇದು ಇವತ್ತಿನದಲ್ಲ. ಪ್ರಾಚೀನ ಕಾಲದಿಂದಲೂ ಇದೆ. ಆದರೆ ಈ ಕ್ಷೇತ್ರಕ್ಕೆ ಆಧುನಿಕ ಸಂವಹನ ಮಾಧ್ಯಮಗಳು ಪ್ರವೇಶ ಪಡೆದ ನಂತರ ತೀವ್ರ ಸ್ವರೂಪ ಪಡೆದಿದೆ. ಬಹುಮುಖ್ಯವಾಗಿ ಶಿಕ್ಷಿತ-ಅಶಿಕ್ಷಿತ, ಮಾಧ್ಯಮಗಳಿಗೆ ಹಾಡುವ ಹಾಡುಗಾರ - ಹಾಡದೇ ಇರುವ ಹಾಡುಗಾರ ಎನ್ನುವ ನವ ತಾರತಮ್ಯತೆ ಪ್ರಧಾನಧಾರೆಯಲ್ಲಿದೆ. ಮಾಧ್ಯಮಗಳಿಗೆ ಹಾಡುವ ಕಲಾವಿದ (ಕ್ಯಾಸೆಟ್-ಸಿಡಿ) ಮಾಧ್ಯಮಗಳಿಗೆ ಹಾಡದೇ ಇರುವ ಕಲಾವಿದನನ್ನು 'ದಡ್ಡ', 'ಅಗೌರವ' 'ಪ್ರಚಲಿತದ ಜ್ಞಾನ ತಿಳಿಯದವ'- ಮುಂತಾದ ರೀತಿಯಲ್ಲಿ ಹೀಯಾಳಿಸುತ್ತಾರೆ. ಹಾಡದೇ ಇರುವ ಕಲಾವಿದ ಇದಕ್ಕೆ ಹೊರತಾಗಿಲ್ಲ. ಆಡುವ ಕಲಾವಿದರು ಮತಿಗೆಟ್ಟವರು, ಕುಲಹೀನರು ಸ್ವಾರ್ತಿಗಳು ಮುಂತಾಗಿ ಬೈಯುತ್ತಾರೆ. ಮಾಧ್ಯಮಗಳಿಗೆ ಹಾಡುವವರು ಜನಪ್ರಿಯ ಶೈಲಿಯಲ್ಲಿ ಹಾಡುವವರು ಕಲಾವಿದರೇ ಅಲ್ಲ ಅನ್ನುವುದು ಇವರ ಮನೋಭಾವ. ಇವರು ಹಾಡುಗಳನ್ನು ದೈವದ ಸಂದರ್ಭಗಳಲ್ಲಿ ಮಾತ್ರ ಹಾಡಬೇಕೆನ್ನುವ ಮನೋಭಾವನೆಯನ್ನು ಹೊಂದಿದ್ದಾರೆ. ಹಾಗಾಗಿ ಮಾಧ್ಯಮಗಳಿಗೆ ಹಾಡಲು ನಿರಾಕರಿಸುತ್ತಿದ್ದಾರೆ. 'ಕೊಟ್ಟಗಿ'ಯ ಸಿದ್ಧು ಹಿರೇಕುರುಬರ್ (ವಯಸ್ಸು ೬೦) ಕ್ಯಾಸೆಟ್‌ಗಳಿಗೆ ಹಾಡಲು ನಿರಾಕರಿಸುತ್ತಾರೆ. ಹೀಗೆ ಪರಂಪರೆಗೆ ಬದ್ಧರಾದವರನ್ನು ತಪ್ಪಾಗಿ ಗ್ರಹಿಸಿಕೊಂಡ ಕಿರಿಯ ಕಲಾವಿದರು ಹಿರಿಯರನ್ನು 'ಜ್ಞಾನರಹಿತ' ವ್ಯಕ್ತಿಗಳಂತೆ ಕಾಣುತ್ತಿದ್ದಾರೆ. ಇವರ ಹಾಡುಗಳನ್ನು ಕೆಲಸಕ್ಕೆ ಬಾರದ ಹಾಡುಗಳೆನ್ನುತ್ತಾರೆ.

ಹಾಗಾಗಿ ಕಿರಿಯರು, ವಿಶೇಷವಾಗಿ ಮಕ್ಕಳು ಕಲಾವಿದರು ಹಿರಿಯ ಕಲಾವಿದರ ಹತ್ತಿರ (ಮಾಧ್ಯಮಗಳಿಗೆ ಹಾಡದೆ ಇರುವವರು) ಹಾಡುಗಳನ್ನು ಕಲಿಯುವುದಕ್ಕೆ ಆಸಕ್ತಿ ತೋರುತ್ತಿಲ್ಲ. ಆದ್ದರಿಂದ ಹಿರಿಯ ತಲೆಮಾರಿನ ಹಾಡುಗಳು ಆಧುನಿಕ ಶೈಲಿಯ ಹಾಡುಗಳಷ್ಟು ಮಕ್ಕಳು ಮತ್ತು ಕಿರಿಯ ಕಲಾವಿದರಿಗೆ ರವಾನೆ ಆಗುತ್ತಿಲ್ಲ. ಲಿಖಿತ ಹಾಡುಗಳು ಮೌಖಿಕತೆಯಲ್ಲಿ ಮುಂಚೂಣಿಯಲ್ಲಿವೆ. ಇವುಗಳಲ್ಲಿ ಸಿನಿಮೀಯ ಶೈಲಿಯ ಹಾಡುಗಳು ಹೆಚ್ಚು ಜನಪ್ರಿಯತೆಯಲ್ಲಿವೆ. ಇದೇ ಪರಂಪರೆ ಇನ್ನೂ

ಕೆಲವು ವರ್ಷಗಳು ಮುಂದುವರೆದರೆ ಪಾರಂಪರಿಕ ಹಾಡುಗಳು ಕಣ್ಮರೆ ಆಗುವುದರಲ್ಲಿ ಅನುಮಾನವೇ ಇಲ್ಲ. ಒಂದು ಘಟನೆಯನ್ನು ಉಲ್ಲೇಖಿಸಲೇಬೇಕು. ಕನ್ನಡ ವಿಶ್ವವಿದ್ಯಾಲಯವು ಅಥಣಿ ತಾಲೂಕು 'ಮುರಗುಂಡಿ' ಗ್ರಾಮದಲ್ಲಿ ಡೊಳ್ಳು ಹಾಡುಗಾರರ ತರಬೇತಿ ಸಮ್ಮೇಳನವನ್ನು ಹಮ್ಮಿಕೊಂಡಿತ್ತು. ಇದರಲ್ಲಿ ಎಂಟುವರ್ಷದ ಮಕ್ಕಳಿಂದ ಎಪ್ಪತ್ತು ವರ್ಷದ ಕಲಾವಿದರು ಇದ್ದರು. ಸುಮಾರು ಅರವತ್ತೈದಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. 'ವಿಠಲ ಯನಕಂಚಿ' ಎನ್ನುವ ಹಿರಿಯ ಕಲಾವಿದ ಪ್ರಾರ್ಥನೆಗಾಗಿ ಡೊಳ್ಳಿನ ಹಾಡನ್ನು ಹಾಡುವುದಕ್ಕೆ ಮುಂದಾದಾಗ ಆತನಿಗೆ ಸಾತ್ ಕೊಡುವುದಕ್ಕೆ ಯಾರು ಹೋಗಲಿಲ್ಲ. ಆ ಸಂದರ್ಭದಲ್ಲಿ ನೂರಾರು ಕ್ಯಾಸೆಟ್‌ಗಳಿಗೆ ಹಾಡಿದ, ಹತ್ತಾರು ತಂಡಗಳಿಗೆ ತರಬೇತಿ ಕೊಟ್ಟಿದ್ದ ಕಲಾವಿದರು ಇದ್ದರು. ಅವರೆಲ್ಲರೂ ವಿಠಲ ಯನಕಂಚಿಯ ಶೈಲಿಯಲ್ಲಿ ಹಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದರು. ಅದೇ ವಯಸ್ಸಿನ ಕಲಾವಿದರನ್ನು ಹುಡುಕಿ ತರಬೇಕಾಯಿತು. ಈ ಸಂದರ್ಭ ಪಾರಂಪರಿಕ ಡೊಳಿನ ಹಾಡುಗಳ ವಿಸ್ಮೃತಿಗೆ ಪ್ರಮುಖ ಸಾಕ್ಷಿ. ಆದರೆ ಪಾರಂಪರಿಕ ಹಾಡುಗಳು ಕೇಳುಗರಿಗೆ ಮತ್ತು ಹಾಡುಗಾರರಿಗೆ ಏಕೆ ಬೇಕು? ಉಳಿಸಿ ಕೊಳ್ಳುವುದಾದರೆ ಯಾವ ನೆಲೆಯಲ್ಲಿ ಉಳಿಸಿಕೊಳ್ಳಬೇಕು ಎನ್ನುವದರ ಬಗ್ಗೆ ಯೋಚನೆ ಮಾಡಬೇಕಾಗಿದೆ.

೭.೬. ಡೊಳ್ಳಿನ ಹಾಡುಗಳ ಆಧುನಿಕತೆಯ ತಾತ್ವಿಕತೆ

ಅಶಿಸ್‌ನಂದಿಯವರು ಗ್ರಾಮಗಳ ತತ್ವ ಮತ್ತು ಪರಿಕಲ್ಪನೆಯನ್ನು ಕುರಿತು ಮಾತನಾಡುತ್ತ "ಗ್ರಾಮಗಳಲ್ಲಿನ ತತ್ವ ಅವಸಾನದ ಹಂತವನ್ನು ತಲುಪಿದೆ. ಅಂದರೆ ಗ್ರಾಮದೊಳಗಿನ ಸೃಷ್ಟಿಶೀಲ ಪ್ರತಿಭೆ, ರಮ್ಯ ಕನಸು ಅದನ್ನು ನನಾಗಿಸುವ ಸೃಜನಶಕ್ತಿ ಕಣ್ಮರೆ ಆಗಿದೆ. ಇದನ್ನು ಉಳಿಸಿಕೊಳ್ಳ ಬೇಕೆನ್ನುವುದು ನನ್ನ ವಾದವಲ್ಲ. ಒಂದು ಸಮುದಾಯ ಸಂಸ್ಕೃತಿ-ನಾಗರಿಕತೆಯಾಗಿ ಆ ಪ್ರತಿಭಾಶಕ್ತಿ ಕಳೆದುಕೊಳ್ಳುತ್ತಿದ್ದೆವೆಯಲ್ಲ ಅನ್ನುವ ಆತಂಕ. ಜೊತೆಗೆ ಗ್ರಾಮಸಂಸ್ಕೃತಿಯನ್ನು ಮೋಜಿನ ಸಂಸ್ಕೃತಿಯಾಗಿ ನೋಡಿ ಆನಂದಿಸುತ್ತಿದ್ದೇವೆ ವಿನ; ಅಭಿವೃದ್ಧಿಯ ಬಗ್ಗೆ ಚಿಂತಿಸುತ್ತಿಲ್ಲ"[೧೪] ಎನ್ನುತ್ತಾರೆ. ಮಂಜುನಾಥ ಬೇವಿನಕಟ್ಟಿಯವರು "ಜನಪದ ಕಲೆಗಳನ್ನು ಅವುಗಳ ಪರಿಸರ ಸಂದರ್ಭಗಳಿಂದ ಬೇರ್ಪಡಿಸಿ ಶ್ರೀಮಂತರ ಸುಖ-ಸಂತೋಷಕ್ಕಾಗಿ, ನಗರಗಳ ಪಂಚತಾರಾ ಹೊಟೇಲುಗಳಲ್ಲಿ ಪ್ರದರ್ಶಿಸುವುದು ಇದಕ್ಕೊಂದು ನಿದರ್ಶನ. ಆ ಕಲೆ ಮತ್ತು ಕಲೆಗಾರರನ್ನು ಈ ಸ್ಥಾಪಿತ ಹಿತಾಸಕ್ತಿಗಳು ತಮ್ಮ ಭೋಗಕ್ಕಾಗಿ ದುಡಿಸಿಕೊಳ್ಳುತ್ತಾರೆಯೋ ವಿನಹ ಪೋಷಿಸಿ ಬೆಳೆಸುತ್ತಿಲ್ಲ"[೧೫] ಎನ್ನುತ್ತಾರೆ. ಈ ಇಬ್ಬರು ವಿದ್ವಾಂಸರು ಮಾತುಗಳು ಇವತ್ತಿನ ಜಾನಪದ ಸ್ಥಿತಿಗತಿಯನ್ನು ತಿಳಿಸುತ್ತವೆ. ಜಾನಪದ ಎನ್ನುವುದನ್ನು ಕೇವಲ ಮೋಜಿನ ವಸ್ತುವನ್ನಾಗಿ ನೋಡುತ್ತಿದ್ದಾರೆ ವಿನಹ ಅದರ ಜೀವನದ ಸಂಭ್ರಮದಿಂದಲ್ಲ. ಭವಿಷ್ಯ ಈ ಪರಿಕಲ್ಪನೆಯ ನೋಟದಿಂದ ಬೇಸತ್ತ ಜನಪದ ಕಲೆಗಳು; ಕಲಾವಿದರು ಪ್ರಜ್ಞಾಪೂರ್ವಕವಾಗಿ ಅಲ್ಲದಿದ್ದರೂ ಅಪ್ರಜ್ಞಾಪೂರ್ವಕವಾಗಿ 'ಬಂಡವಾಳಶಾಹಿ' ವ್ಯವಸ್ಥೆಯನ್ನು ಬೆನ್ನು ಹತ್ತಿದ್ದಾರೆ ಎನ್ನುವುದು ಸಂದರ್ಶನದ ಹಲವು ಕಲಾವಿದರ ಮಾತುಗಳಲ್ಲಿ ಇದು ಉಲ್ಲೇಖವಾಗಿದೆ. "ಜನಪದ ಕಲೆಗಳು ಜಾಗತೀಕರಣವನ್ನು ಪ್ರತಿರೋಧ ಮಾಡುವ ಅಂಶಗಳನ್ನು ಕಳೆದುಕೊಳ್ಳುತ್ತಿರುವುದು ಈ ಉದ್ದೇಶದಂತೆ

[illegible]

ಕಾಣುತ್ತಿದೆ. ಇದು ಅಲ್ಲದೆ 'ಜನಪದ ಕಲೆಗಳು ಆಧುನಿಕತೆಯ ಜೊತೆ ಪೈಪೋಟಿ ಮಾಡಲಾರವು. ನಿಜವಾದ ಜನಪದ ಕಲೆ ಮತ್ತು ಸಂಸ್ಕೃತಿಗಳು ಎಂದೂ ಪೈಪೋಟಿಗೆ ಇಳಿಯುವುದಿಲ್ಲ. ಜನಪದ ಕಲೆಗಳು ಅಳಿವಿನ ಅಂಚಿಗೆ ಬಂದು ನಿಲ್ಲಲು ಆಧುನಿಕತೆ ಒಂದೇ ಕಾರಣವಾಗಿರಲಾರದು. ಆಧುನಿಕತೆಯ ಆಯ್ಕೆಗಳು ಬಹಳ ಕ್ರೂರವಾಗಿರುತ್ತವೆ. ಬಲವಿದ್ದದ್ದು ಮಾತ್ರ ಬದುಕುಳಿಯಬೇಕು ಎಂಬ ಧೋರಣೆ ಆಧುನಿಕ ಸಮಾಜಗಳದ್ದು. ಯಾವುದು ಮಾರುಕಟ್ಟೆಯ ಆಕರ್ಷಣೆ ಇರುತ್ತದೋ ಅಂತದನ್ನು ಮುಖ್ಯವೆಂದು ಆಧುನಿಕತೆಯು ಆಯ್ಕೆ ಮಾಡಿಕೊಂಡು ಉಳಿದವನ್ನು ನಿರಾಕರಿಸುತ್ತದೆ. ಹಾಗೆ ಆಯ್ಕೆ ಮಾಡಿಕೊಂಡಾಗಲೂ ಆಧುನಿಕತೆಯ ಆಯಾ ಕಲೆಯ ಸಂಸ್ಕೃತಿಯನ್ನೇ ಆದ್ಯತೆಗೆ ಒಳಪಡಿಸುವುದಿಲ್ಲ" ಎನ್ನುವ ಮೊಗಳ್ಳಿ ಗಣೇಶ್‌ರವರ ಮಾತು ಸರಿಯಾಗಿದೆ. ತನ್ನತ್ತಿರ ಸೆಳೆದುಕೊಳ್ಳುವುದಕ್ಕಾಗಿ ಹಲವು ಯೋಜನೆಗಳನ್ನು ಹಾಕಿಕೊಂಡು ಕಾಯುತ್ತ ಕುಳಿತ ಬಂಡವಾಳಶಾಹಿ (ವಸಾಹತುಶಾಹಿ) ವ್ಯವಸ್ಥೆ ತನ್ನ ಮಾರುಕಟ್ಟೆಗೆ ತಕ್ಕಂತೆ ಜಾನಪದವನ್ನು ರೂಪಾಂತರಿಸತೊಡಗಿತು. ಈಗಿನ 'ಪಂಥಗಳ ಡೊಳ್ಳಿನ ಹಾಡುಗಳು' ಇದಕ್ಕೆ ಮಹತ್ವವಾದ ಸಾಕ್ಷಿ. ಇದರಿಂದ ಅನೇಕ ಪರಿಣಾಮಗಳಾದವು. ಇಲ್ಲಿ ವ್ಯಕ್ತಿಗತ ಚಿಂತನೆಗೆ ಮೊದಲು ಅವಕಾಶ ಕಲ್ಪಿಸಿತು. ಇದರಿಂದ ಹಲವು ವ್ಯಕ್ತಿಗಳ ಸಾಮುದಾಯಕ ಸಮಷ್ಟಿ ಚಿಂತನೆಗಳನ್ನು ವ್ಯಕ್ತಿಗತ ಲಾಭಕ್ಕಾಗಿ ಬಳಸಿಕೊಳ್ಳುವುದಕ್ಕೆ ಆರಂಭಿಸಿದರು. ನಂತರ ವ್ಯಕ್ತಿ-ವ್ಯಕ್ತಿಗಳ ನಡುವೆ ಸ್ಪರ್ಧೆಗಳಾದವು. ಸ್ಪರ್ಧೆಗಳ ನಡುವೆ ಸಮಷ್ಟಿ ಚಿಂತನೆಗಳು ಛಿದ್ರವಾಗತೊಡಗಿದವು. ಇವತ್ತಿನ ಸಮೂಹ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುವ ಡೊಳ್ಳಿನ ಹಾಡುಗಳನ್ನು ನೆನಪಿಸಿಕೊಳ್ಳಬೇಕು. ಹಾಡುಗಳಲ್ಲಿ ಪಾರಂಪರಿಕ ಸಾಂಸ್ಕೃತಿಕ ಅನನ್ಯತೆ ಕಾಣುತ್ತಿಲ್ಲ. "ಜಾಗತೀಕರಣಕ್ಕೆ ಈ ಸಾಮುದಾಯಿಕ ಅಂಗಗಳು ಮುಖ್ಯವಲ್ಲ. ಅದನ್ನು ಗಮನಿಸಿದರೂ ಸಹ ಅದನ್ನು ಕೇವಲ ವ್ಯಕ್ತಿಗತವಾದ ಬೆಳವಣಿಗೆ ಮಾತ್ರ ಮೀಸಲಿಡುತ್ತವೆ. ವ್ಯಕ್ತಿ ಬೆಳವಣಿಗೆಯೆಂದರೆ ಮಾರುಕಟ್ಟೆಗೆ ಬೇಕಾಗುವ ಸಿದ್ಧವಸ್ತುಗಳು ತಯಾರಾಗುವುದು ಎಂದರ್ಥ."[೧೬] ಡೊಳ್ಳಿನ ಹಾಡುಗಳು ಕೇವಲ ವ್ಯಕ್ತಿ ಬೆಳವಣಿಗೆಯಲ್ಲಿ ಮಾರುಕಟ್ಟೆಗೆ ಬೇಕಾಗುವ ಸಿದ್ಧವಸ್ತುಗಳ ರೂಪ ಪಡೆದು ಕೇಳುಗರ ಮುಂದೆ ಬಂದು ನಿಂತಿವೆ.

ಡಿ.ಆರ್. ನಾಗರಾಜ ಅವರು ಜನಪದ ಕಲಾಮೇಳಗಳು ಬೌದ್ಧಿಕ ಚಟುವಟಿಕೆಗಳ ಸಾಂಸ್ಕೃತಿಕ ತರ್ಕದ ಹಾದಿಯನ್ನು ತಪ್ಪಿದರೆ ಮನೋವೈಫಲ್ಯದ ರೂಪ ತಾಳುತ್ತದೆ ಹಾಗೂ ಅಲ್ಲಿನ ಭಾವನೆಗಳು ರೋಗಗ್ರಸ್ಥವಾಗುತ್ತವೆ. ಮತ್ತೆ ನಾವೆಷ್ಟೇ ಪ್ರಯತ್ನ ಮಾಡಿದರೂ ತಾರ್ಕಿಕ ರೂಪ ಪಡೆಯುವುದಿಲ್ಲ ಎನ್ನುತ್ತಾರೆ. ಇವರ ಗ್ರಹಿಕೆ ಇವತ್ತಿನ ಹಾಡುಗಳ ಸ್ವರೂಪವನ್ನು ಎದುರು ನಿಲ್ಲಿಸುತ್ತದೆ. ಈಗಾಗಲೇ ಡೊಳ್ಳಿನ ಹಾಡುಗಳು ಮನೋವೈಫಲ್ಯದ ಹಂತವನ್ನು ತಲುಪಿವೆ. ಸೊಂಟದಲ್ಲಿ ಬಂಧೂಕು ಇಟ್ಟುಕೊಂಡು ಹಾಡುಗಳನ್ನು ಹಾಡುವುದು ಮನೋ ವೈಫಲ್ಯವಲ್ಲದೇ ಮತ್ತೇನು ಅಲ್ಲ. ಎರಿಕ್‌ಫ್ರಾಮ ಅವರು ಈ ತರದ ಅಭಿವ್ಯಕ್ತಿಯನ್ನು "ವೈಯಕ್ತಿಕ ಚೇಷ್ಟೆಯ ಸಾಮಾನ್ಯ ಚಿಂತಕರ ಅಣಕದಂತೆ" ಎನ್ನುತ್ತಾರೆ. ಫ್ರಾಯ್ಡ್ ಇಂತಹ ಸಂದರ್ಭದಲ್ಲಿ 'ಪ್ರಜ್ಞಾಪೂರ್ವಕ ಸಂಬಂಧಗಳು ಅಪ್ರಜ್ಞಾಪೂರ್ವಕ ಸಂಬಂಧಗಳಾಗುತ್ತವೆ" ಎನ್ನುವ ಚಿಂತನೆ ಇವತ್ತಿನ ಡೊಳ್ಳಿನ ಹಾಡುಗಳಿಗೆ ಸರಿಯಾಗಿ ಹೊಂದಿಕೆ

[illegible]

ಆಗುತ್ತದೆ. ತತ್ವ, ನೀತಿ, ಜೀವನದ ಮೌಲ್ಯಗಳು ವಿನ್ಯಾಸದ ಹಂತವನ್ನು ತಲುಪಿವೆ. ಇವುಗಳನ್ನು ರೂಢಿಸಿಕೊಳ್ಳಬೇಕೆಂದರೆ ಮತ್ತೆ ಪಾರಂಪರಿಕ ಪ್ರಕಾರಗಳತ್ತ ತಿರುಗಿ ನೋಡಬೇಕು. ಇದಕ್ಕಿರುವ ಸೂಕ್ತ ಮಾರ್ಗವೆಂದರೆ ಡಿ.ಆರ್. ನಾಗರಾಜ ಅವರು ಹೇಳುವಂತೆ "ಸಮೀಪ ಭೂತಕಾಲದ ಸೇತುವೆಗಳನ್ನು ಮುರಿದು ಹಾಕುವುದು". ಅಧ್ಯಯನಕಾರರು ಮತ್ತು ಹಿರಿಯ ಡೊಳ್ಳಿನ ಹಾಡುಗಾರರು ಈ ನೆಲೆಯಲ್ಲಿ ಯೋಚಿಸಬೇಕು. ಇದರಲ್ಲಿ ಹಾಡುಗಾರರು ಹೆಚ್ಚು ಶ್ರಮ ಹಾಕಬೇಕು. ಏಕೆಂದರೆ ಜನಪದಮುಖಿಯಾದ ಪರಂಪರೆಯನ್ನು ಮುರಿದು ಮತ್ತೊಂದು ಪರಂಪರೆಯನ್ನು ಕಟ್ಟುವ ಹೆಚ್ಚು ಸಾಮರ್ಥ್ಯ ಇರುವುದು ಅವರಿಗೆ ಮಾತ್ರ. ಕಲಾವಿದರಿಗೆ ಬೇಕಾದ ಪೂರ್ವ ತರಬೇತಿಯನ್ನು ಅಧ್ಯಯನಕಾರರು ಕೊಡಬಹುದು. ಹಾಗಾದಾಗ ಪ್ರಸ್ತುತ ಸಂದರ್ಭದಲ್ಲೂ ಈ ಹಾಡುಗಳನ್ನು ಆರೋಗ್ಯಕರವಾದ ನೆಲೆಯಲ್ಲಿ ಉಳಿಸಿಕೊಳ್ಳಬಹುದು.

ಅಡಿಟಿಪ್ಪಣಿಗಳು

೧. ನಟರಾಜ ಹುಳಿಯಾರ್, **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಪರಂಪರೆ**, ಪು. ೧೩೨.

೨. ನಾಗರಾಜ ಡಿ.ಆರ್., **ಅಕ್ಷರ ಚಿಂತನ ಮಾಲೆಗಳಿಗೆ ಬರೆದ ಮುನ್ನುಡಿ**.

೩. ರಾಮಚಂದ್ರೇಗೌಡ ಹಿ.ಶಿ (ಸಂ), **ಜಾನಪದ ಗ್ರಹಿಕೆ; ಪರಿಕಲ್ಪನೆ**, ಪು. ೨೫೮.

೪. ವಿನಯಲಾಲ್ ಮತ್ತು ಆಶೀಶ್ ನಂದಿ (ಸಂ), **ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು**, ಪು. ೨೪೦.

೫. ಹಾಡಿದವರು; ಜಟ್ಟಿಂಗೇಶ್ವರ ಗಾಯನ ಸಂಘ, ಹಿರೇಸೋಗಿ ಕ್ಯಾಸೆಟ್ **ಮಾಳಿಂಗರಾಯನ ಮಹಿಮೆ ಕೇಳೋ ಅಗಸಬಾಳ ಹುಮ್ಮ**.

೬. ನಾಗರಾಜ ಡಿ.ಆರ್., **ರುಜುವಾತು** (ಸಂ.ಯ.ಆರ್.-೧೯೯೪), ಪು. ೩-೬.

೭. ಸಂಭಾಷಣೆ; ಮಾಂತೇಶ ಹಲಸಂಗಿ, ನಿಂಗಪ್ಪ ಹಚ್ಚಾಳ; ಕ್ಯಾಸೆಟ್; **ಸಂಕನಾಳ್ ಹೇಡಿ ಬಿದ್ದಾದ ರಾಡಿ**, ಭಾಗ-೫.

೯. ಅದೇ, ಕ್ಯಾಸೆಟ್

೧೦. ಹಾಡಿದವರು; ಬೀರಣ್ಣ ಪೂಜಾರಿ ಮತ್ತು ಮುತ್ತಣ ಚಿಮಲಗಿ ಕ್ಯಾಸೆಟ್; **ಸವಾಲಿನ ಸರಕಾರ**.

೧೧. ಅದೇ, ಕ್ಯಾಸೆಟ್.

೧೨. ಹಾಡಿದವರು, ಹನುಮಂತ ಹಾಗೂ ಸಂಗಡಿಗರು, ಕ್ಯಾಸೆಟ್; **ಕೆಡಿಸಬ್ಯಾಡ್ರೋ ತಮ್ಮ ಹಾಲುಮತ ಭಾಗ-೧**.

೧೩. ಅದೇ, ಕ್ಯಾಸೆಟ್.

೧೪. ಆಶೀಶ್‌ನಂದಿ, **ಆಶೀಶ್‌ನಂದಿ ವಿಚಾರ**, ಪು. ೧೪-೧೫.

೧೫. ರಮೇಶ ಸ.ಚಿ. (ಸಂ.), **ಜಾನಪದ ಕರ್ನಾಟಕ**, ಸಂ.೩., ಪು. ೧೦೫.

೧೬. ಮೊಗಳ್ಳಿ ಗಣೇಶ್, **ಮೌಖಿಕ ಕಥನ**, ಪು. ೧೪೬.

೧೭. ಡೊಮಿನಕ್ ಡಿ., **ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು**, ಪು. ೫೩.

• • •

ಅಧ್ಯಾಯ ಎಂಟು

ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಅಧ್ಯಯನ ಸಂದರ್ಭದಲ್ಲಿ ಎದುರಾದ ತೊಡುಕು
ಮತ್ತು ಬಿಡಿಸಿಕೊಂಡ ಬಗೆ

೮.೩. ಅಧ್ಯಯನಗಳ ಹೊಸ ಸಾಧ್ಯತೆಗಳು

'ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಅಧ್ಯಯನ' ಎನ್ನುವ ಪ್ರಸ್ತುತ ಅಧ್ಯಯನವು ಡೊಳ್ಳಿನ ಹಾಡುಗಳನ್ನು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ವರ್ತಮಾನದ ಹಿನ್ನೆಲೆಯನ್ನು ಇಟ್ಟುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ವಿಧಾನ ಶಿಷ್ಟ ಹಾಗೂ ಇತರ ಮೌಖಿಕ ಸಾಹಿತ್ಯದ ಪಠ್ಯಗಳನ್ನು, ಜಾತ್ರೆ-ಉತ್ಸವ, ಆಚರಣೆ-ಸಂಪ್ರದಾಯ, ನಂಬಿಕೆ ದೇವಾಲಯ ಮತ್ತು ದೇವಾಲಯಗಳ ಭೌಗೋಳಿಕ ಪರಿಸರ ಮುಂತಾದ ಆಕರಗಳನ್ನು ಆಧರಿಸಿ ರಚಿತವಾಗಿದೆ. ಇದರಿಂದ ಈ ಮೇಲಿನ ಪ್ರಕಾರಗಳಲ್ಲೂ ಚಿತ್ರಣಗೊಂಡಿರುವ ನಿಲುವುಗಳೊಂದಿಗೆ ಡೊಳ್ಳಿನ ಹಾಡುಗಳ ಸಾಮ್ಯತೆ ಮತ್ತು ವೈರುಧ್ಯಗಳನ್ನು ಗುರುತಿಸಲು ಸಾಧ್ಯವಾಗಿದೆ. ಈ ಸಂಶೋಧನೆಯ ಮುಖ್ಯ ಹುಡುಕಾಟವು ಇದಾಗಿತ್ತು.

ಡೊಳ್ಳಿನ ಹಾಡುಗಳು ಹಾಲುಮತ ಸಮುದಾಯದ ಸಮರ್ಥ ಅಭಿವ್ಯಕ್ತಿಯಾಗಿವೆ. ಈ ಹಾಡುಗಳು ಹಾಲುಮತಸ್ಥರ ಆತ್ಮಕಥನಗಳೂ ಹೌದು. ಅವರ ಸಂಸ್ಕೃತಿಯ ಇಚ್ಛಾಶಕ್ತಿಯು ಹೌದು. ಇವರು ದೈವ ತೃಪ್ತಿಗಾಗಿ ಮತ್ತು ಸಮೃದ್ಧಿಯ ಫಲವಂತಿಕೆಗಾಗಿ ಈ ಹಾಡುಗಳನ್ನು ಹಾಡುತ್ತಾರೆ. ಮುಖ್ಯವಾಗಿ ಡೊಳ್ಳಿನ ಹಾಡುಗಳು ಆಚರಣೆಗಳೇ ವಿನಃ ಮನೋರಂಜನೆಯ ಸಂಗತಿಯಲ್ಲ. ಇವುಗಳಲ್ಲಿ ಹಾಲಮತ ಸಮುದಾಯ ತನ್ನ ಅಸ್ತಿತ್ವಕ್ಕಾಗಿ ಹಾಗೂ ಬೆಳವಣಿಗೆಗಾಗಿ ನಡೆಸಿದ ಸಂಘರ್ಷ ಗಳನ್ನು ಕಾಣಬಹುದಾಗಿದೆ. ಹಾಗಾಗಿ ಈ ಹಾಡುಗಳು ಕೇವಲ ಮನೋರಂಜನೆಯಂತಹ ಸರಳ ಕಾರಣಗಳಿಂದಾಗಿ ಜನ್ಮತಾಳಿರದೆ, ಸಮುದಾಯದ ಇಕ್ಕಟ್ಟಿನ ಸಂದರ್ಭಗಳಲ್ಲಿ ಸೃಷ್ಟಿಯಾಗಿವೆ ಎಂದು ಖಚಿತವಾಗಿ ಹೇಳಬಹುದು. ವಿಶೇಷವೆಂದರೆ ಸ್ವ-ಸಂಸ್ಕೃತಿಯ ವಿವರಗಳ ಜೊತೆಗೆ ಇತರ ಸಂಸ್ಕೃತಿಯ ಕೆಲವು ಭಾಗಗಳು ಇಲ್ಲಿ ದಾಖಲಾಗಿವೆ. ಈ ಹಾಡುಗಳಲ್ಲಿ ಮೂಲಭೂತವಾದಕ್ಕಿಂತಲೂ ಬಂಧುತ್ವದ ಸಂಬಂಧ ಪ್ರಧಾನವಾಗಿ ಕಂಡು ಬರುತ್ತದೆ. ಈ ಬಗೆಯ ಬಂಧುತ್ವದ ಸಂಬಂಧವನ್ನು ಇಟ್ಟುಕೊಂಡಿರು ವುದರಿಂದಲೇ ಉಳಿದ ಇತರೇ ಸಮುದಾಯಗಳ ಜೊತೆ ಸಾಮ್ಯ ಸಂಬಂಧವನ್ನು ಮತ್ತು ಅನನ್ಯ ಅಂತರವನ್ನು ಸಾಮರಸ್ಯದ ವಿಧಾನದಲ್ಲಿ ಪಡೆದುಕೊಂಡಿವೆ. ಈ ವಿಶಿಷ್ಟತೆ ಕನ್ನಡ ಜನಪದ ಮಹಾಕಾವ್ಯಗಳಲ್ಲೂ ವಿಶೇಷವಾಗಿ ಕಾಣಬಹುದಾಗಿದೆ. ಹಾಡುಗಳು ಸಾಹಿತ್ಯ ಹಾಗೂ ಸಂಗೀತ ದೃಷ್ಟಿಯಿಂದಲೂ ಮಹತ್ವವಾಗಿವೆ. ವಿಶಿಷ್ಟವಾದ ಪ್ರಾದೇಶಿಕ ಭಾಷಾ ಬಳಕೆ, ಉಪಮೆ ಪ್ರತಿಮೆ ರೂಪಕಗಳ ಸೃಷ್ಟಿ, ವಿವಿಧ ರೀತಿಯ ವರ್ಣನೆಗಳು ಛಂದಸ್ಸಿನ ವಿಶಿಷ್ಟ ಪ್ರಾಸ-ಗಣಗಳ ಬಳಿಕೆ ಸಂಗೀತದ ಲಯ-ಮಟ್ಟು-ಸ್ವರ-ಶೈಲಿ ಇಂಥ ಹಲವಾರು ಸಂಗತಿಗಳನ್ನು ವಿಭಿನ್ನವಾಗಿ ಪ್ರಕಟಪಡಿಸುತ್ತವೆ.

ಈ ಹಾಡುಗಳು ಅಸ್ತಿತ್ವವನ್ನು ದಾಖಲಿಸುವಲ್ಲಿ ಸಮುದಾಯದ ಆಸೆ-ಆಕಾಂಕ್ಷೆ-ಕನಸು-ಕನವರಿಕೆ ಮುಂತಾದವುಗಳು ಸೇರಿಕೊಂಡಿವೆ. ವಿಶೇಷವೆಂದರೆ ತಮ್ಮನ್ನು ಆಳುವ ಅಧಿಕಾರಿಗಳನ್ನು ಪ್ರಶ್ನಿಸುತ್ತಾ ಅವುಗಳ ಹಿಡಿತದಿಂದ ಬಿಡುಗಡೆಗೊಳ್ಳುವ ಕಡೆಗೆ ತವಕಿಸುತ್ತಲೇ ತಮ್ಮದೆಯಾದ ಪರ್ಯಾಯ ವ್ಯವಸ್ಥೆಯೊಂದನ್ನು ಸೃಷ್ಟಿಸುವುದರ ಕಡೆಗೂ ಗಮನಹರಿಸಿವೆ. ಈ ಹಿನ್ನೆಲೆಯಲ್ಲಿಯೇ ತಮ್ಮ ಸಾಂಸ್ಕೃತಿಕ ನಾಯಕರನ್ನು ಹಾಗೂ ನಾಯಕರ ಸಹಚರರನ್ನು ರಾಜರೆಂದೇ ಕರೆದು ರಮ್ಯಾದ್ಭುತವಾಗಿ ಹಾಡಿ ಹೊಗಳಿವೆ. ಹೀಗೆ ಪರಿಭಾವಿಸುವುದರ ಹಿಂದೆ ರಾಜರಿಂದ ರಾಜತ್ವವನ್ನು ಕಿತ್ತುಕೊಳ್ಳುವ ಮತ್ತು ತನ್ನತನವನ್ನೇ ಶ್ರೇಷ್ಠವೆಂದು ಕಾಪಾಡಿಕೊಳ್ಳುವ ಕನಸುಗಳಿವೆ. ಇದು ಮೂಲಭೂತ ವಾದಕ್ಕಿಂತಲೂ ಪ್ರಭುತ್ವಕ್ಕೆ ಅಡಿಯಾಳಗದೆ ಬದುಕುವ ವೈಧಾನಿಕತೆಯಂತೆ ಕಾಣಿಸುತ್ತದೆ. ಇವುಗಳಲ್ಲಿ ಕಾಣಿಸುವ ಪ್ರಮುಖ ಪ್ರಭುತ್ವದ ಮುಖಾಮುಖಿಗಳಲ್ಲಿ ಆರ್ಥಿಕ ಮುಖಾಮುಖಿಯೂ ಒಂದು. ಪಶುಗಳಿಗಾಗಿ, ಹುಲ್ಲುಗಾವಲು ಪ್ರದೇಶಗಳಿಗಾಗಿ ಹಲವು ಸಮುದಾಯಗಳ ಜೊತೆ ಇವರು ಸಂಘರ್ಷ ಮಾಡಿದ್ದಾರೆ. ಹಾಲುಮತ ಸಮುದಾಯವು ಈ ನಾಯಕರು ನಡೆಸಿದ ಇಂಥ ಹೋರಾಟಗಳನ್ನು ಹಾಡುವುದರ ಮೂಲಕ ಇಂದಿನ ಜಾಗತೀಕರಣದ ಬಂಧನದಿಂದ ಬಿಡುಗಡೆಗೊಳ್ಳುವ ಪ್ರಯತ್ನದಲ್ಲಿವೆ ಎಂಬುದು ಅತ್ಯಂತ ಸ್ವಾರಸ್ಯಕರ ಸಂಗತಿಯಾಗಿದೆ. ಅಲ್ಲದೆ ಈ ಹಾಡುಗಾರರು ತಾವು ಹಾಡುವ ಹಾಡುಗಳಲ್ಲಿನ ನಾಯಕರ ತಾತ್ವಿಕತೆಯ ಜೊತೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಹಿಂದೆ ಹೇಳಿದಂತೆ ಜಾಗತೀಕರಣದಂತ ಪ್ರಭುತ್ವ ವಿರೋಧಿ ತಂತ್ರಗಾರಿಕೆಯಾಗಿ ಇದು ಕಾಣಿಸುತ್ತದೆ. ಹಾಗಾಗಿ ಹಾಲುಮತ ಸಮುದಾಯ ಈ ಹಾಡುಗಳನ್ನು ಕೇವಲ ಸಾಂಪ್ರದಾಯಿಕವಾಗಿ ಮಾತ್ರ ಹಾಡುತ್ತಿಲ್ಲ. ಏಕೆಂದರೆ ಹಾಡುಗಾರಿಕೆ ಮತ್ತು ತಮ್ಮ ಸಮುದಾಯದ ಬಗ್ಗೆ ಅವರವರು ಅವರದೇ ಆದ ನಿಲುವುಗಳನ್ನು ಹೊಂದಿದ್ದಾರೆ. ಇಂತಹ ವಿಭಿನ್ನ ಅಭಿವ್ಯಕ್ತಿಗಳನ್ನು ಅರ್ಥೈಸಿಕೊಳ್ಳಲು ಸಾಂಸ್ಕೃತಿಕ ಪರಿಕಲ್ಪನೆಯ ಅಧ್ಯಯನ ವಿಧಾನವು ಅತ್ಯಂತ ಸಮರ್ಥ ಎನ್ನುವುದು ಪ್ರಸ್ತುತ ಅಧ್ಯಯನದಿಂದ ಸಾಕಾರಗೊಂಡಿದೆ.

ಈ ಸಂಪ್ರಬಂಧ ಮುಖ್ಯವಾಗಿ ಸಮುದಾಯಿಕ; ಸಾಂಸ್ಕೃತಿಕ ವಿಶ್ಲೇಷಣೆ ಪ್ರಧಾನವಾದುದರಿಂದ ಆಯಾ ಅಧ್ಯಾಯ ಮತ್ತು ಅದರ ಉಪಶೀರ್ಷಿಕೆಗಳ ಚರ್ಚೆಯಲ್ಲಿಯೇ ಹಾಲುಮತ ಸಮುದಾಯದ ಹಲವು ಒಳನೋಟಗಳನ್ನು ಮತ್ತು ಹಾಡುಗಳ ಒಳನೋಟಗಳನ್ನು ನೀಡಲಾಗಿದೆ. ಹಾಗಿದ್ದೂ ಅಧ್ಯಯನದ ಫಲಿತಗಳಲ್ಲಿ ಅವುಗಳನ್ನೆಲ್ಲ ಸೇರಿಸುತ್ತಾ ಹೋದರೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಹಾಗಾಗಿ ಇಲ್ಲಿ ಅಧ್ಯಯನದಿಂದ ಕಂಡುಕೊಳ್ಳಲಾದ ಬಹುಮುಖ್ಯ ಫಲಿತಗಳನ್ನು ಮಾತ್ರ ಕೊಡಲಾಗಿದೆ. ಅಂತೆಯೇ ಅಧ್ಯಯನದ ಸಂದರ್ಭದಲ್ಲಿ ಎದುರಾದ ತೊಡಕು ಮತ್ತು ಬಿಡಿಸಿಕೊಂಡ ಬಗೆಗಳನ್ನು ವಿವರಿಸಿಸಲಾಗಿದೆ. ಕೊನೆಯದಾಗಿ ಈ ಅಧ್ಯಯನದಿಂದಾಗಿ ಸಂಶೋಧಕರಿಗೆ ಗೋಚರಿಸಿದ ಡೊಳ್ಳಿನ ಹಾಡುಗಳ ಕೆಲವು ಹೊಸ ಸಾಧ್ಯತೆಗಳನ್ನು ಗುರುತಿಸಲಾಗಿದೆ.

೮.೧. ಅಧ್ಯಯನದ ಫಲಿತಗಳು

೧. ಡೊಳ್ಳಿನ ಹಾಡುಗಳ ಸಮಗ್ರ ಪರಿಚಯ ಆಗಿಲ್ಲ

ಡೊಳ್ಳಿನ ಹಾಡುಗಳು ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಪುನರ್‌ಮನನ ಮಾಡಲು ಜನ್ಮತಾಳಿದವು. ಇವುಗಳು ಆಚರಣೆಗಳೇ ಹೊರತು ಮನೋರಂಜನೆಯಲ್ಲ.

ಈ ಹಾಡುಗಳಿಗೆ ಸುಮಾರು ೬೦೦ ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸ ಇದೆ. ಜನ್ಮತಾಳಿದ ಕಾಲದಿಂದಲೂ ಅನೇಕ ರೂಪಾಂತರಗಳನ್ನು ಹೊಂದುತ್ತ ಬಂದಿವೆ. ಇಲ್ಲಿಯವರೆಗೂ ಈ ಹಾಡುಗಳ ಸಂಗ್ರಹ ಸಮಗ್ರವಾಗಿ ಆಗಿಲ್ಲ. ಬುಳ್ಳಪ್ಪ, ಅಮೋಘಸಿದ್ಧ, ಇಟ್ಟಪ್ಪ ಮುಂತಾದ ಸಾಂಸ್ಕೃತಿಕ ವೀರರ ಮಹಾಕಾವ್ಯಗಳು ಡೊಳ್ಳಿನ ಹಾಡುಗಾರರಲ್ಲಿವೆ. ಆ ಕಾವ್ಯಗಳನ್ನು ಸಂಗ್ರಹಿಸಬೇಕಾದ ಅಗತ್ಯವನ್ನು ಮನಗಾಣಬೇಕಾಗಿದೆ. ಸಂಗ್ರಹಿಸಿ ತೌಲನಿಕ ಅಧ್ಯಯನ ಮಾಡಬೇಕಾಗಿದೆ.

೨. ಡೊಳ್ಳಿನ ಹಾಡುಗಳು : ಅಭಿವ್ಯಕ್ತಗೊಳ್ಳುವ ಪ್ರಾದೇಶಿಕ ನೆಲೆ

ಡೊಳ್ಳಿನ ಹಾಡುಗಳು ಬೆಳಗಾಂ, ಬಿಜಾಪುರ, ಬಾಗಲಕೋಟೆ, ಸೊಲ್ಲಾಪುರ, ಕೊಲ್ಲಾಪುರ ಮತ್ತು ಸಾಂಗ್ಲಿ ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತದಲ್ಲಿವೆ. ಉಳಿದಂತೆ ಧಾರವಾಡ, ಗದಗ, ಗುಲಬರ್ಗಾ, ಬೀದರ, ಲಿಂಗಸೂರು, ರಾಯಚೂರು, ಹಾವೇರಿ ಜಿಲ್ಲೆಗಳಲ್ಲಿ ಜೀವಾಳವಾಗಿವೆ. ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಎರಡು ದಶಕಗಳ ಹಿಂದೆ ಜೀವಂತವಾಗಿದ್ದವು. ಇವತ್ತು ಕಣ್ಮರೆ ಆಗಿವೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳು ಡೊಳ್ಳಿನ ಹಾಡುಗಳ ಪರಿಕಲ್ಪನೆಯನ್ನು ಹೊಂದಿದ್ದ ಕೊನೆಯ ಜಿಲ್ಲೆಗಳು. ದಕ್ಷಿಣ ಕರ್ನಾಟಕದ ಜನತೆಗೆ ಈ ಹಾಡುಗಳ ಪರಿಕಲ್ಪನೆ ಇಲ್ಲ. ಈ ಹಾಡುಗಳ ಹುಟ್ಟು ಕರ್ನಾಟಕ, ಮಹಾರಾಷ್ಟ್ರದ ಗಡಿಭಾಗ. ಈ ಭಾಗದಲ್ಲಿ ಪ್ರಚಲಿತವಾಗದಿರುವುದಕ್ಕೆ ಹಲವು ಕಾರಣಗಳಿವೆ. ರೇವಣಸಿದ್ಧನನ್ನು ಪ್ರಧಾನ ದೈವವನ್ನಾಗಿ ಮಾಡಿಕೊಂಡು ಆರಾಧಿಸುತ್ತಿರುವುದು. ಕುರಿಗಾರಿಕೆ ಮುಖ್ಯ ವೃತ್ತಿ ಆಗದೆ ಇರುವುದು. ಕುರಿಗಾರಿಕೆ ಸಂಸ್ಕೃತಿ ವೀರರು ವಿಸ್ತರಣೆಯಾಗದೆ ಇರುವುದು. ಇಲ್ಲಿನ ಹಾಲುಮತಸ್ಥರು ಹದಿನಾರು-ಹದಿನೇಳನೇ ಶತಮಾನದಲ್ಲಿ ಮಲೆಮಾದೇಶ್ವರನ ಆರಾಧನೆಗೆ ಒಳಗಾದರು. ಅಲ್ಲದೇ ಈ ಪ್ರದೇಶದಲ್ಲಿ ಆಚರಣೆಗಳು ಮತ್ತು ಜನಪದ ಗೀತೆಗಳು ಸಾಂಸ್ಕೃತಿಕ ವೀರರನ್ನು ಜೀವಂತಗೊಳಿಸುತ್ತವೆ. ಜನಪದ ಗೀತೆಗಳನ್ನು ಮಹಿಳೆಯರು ಆಚರಣಾತ್ಮಕ ಸಂದರ್ಭಗಳಲ್ಲಿ ಹಾಡುತ್ತಾರೆ. ಈ ಗೀತೆಗಳು ಡೊಳ್ಳಿನ ಹಾಡುಗಳಂತೆ ವೃತ್ತಿಗಾಯಕ ಹಾಡುಗಳಲ್ಲ. ಆಚರಣಾತ್ಮಕ ಸಂದರ್ಭಗಳನ್ನು ಹೊರತುಪಡಿಸಿದರೆ ಉಳಿದ ಸಂದರ್ಭಗಳಲ್ಲಿ ಹಾಡುವುದಿಲ್ಲ. ಇಲ್ಲಿ ಹಾಲುಮತ ಪುರಾಣ ಮತ್ತು ತಗರ ಪವಾಡಗಳು ಹೆಚ್ಚು ಜನಪ್ರಿಯ. ಚನ್ನಬಸವಶಾಸ್ತ್ರಿಗಳ 'ಹಾಲುಮತ ಪುರಾಣ' ಹೆಚ್ಚಾಗಿ ಬಳಕೆಯಾಗುತ್ತದೆ. ತಿಂಗಳುಗಟ್ಟಲೇ ಪುರಾಣಗಳ ಪ್ರವಚನ ಮಾಡುವ ಪದ್ಧತಿ ಇದೆ. 'ತಗರ ಪವಾಡ'ವನ್ನು 'ತಗರ ಜೋಗಿ'ಗಳು ಎನ್ನುವ ವೃತ್ತಿಗಾಯಕ ವರ್ಗ ಜೀವಂತಗೊಳಿಸುತ್ತಿದೆ. ಹಾಗಾಗಿ ಇಲ್ಲಿನ ಹಾಲುಮತ ದೈವಗಳ ಆಚರಣೆಗಳ ಮೇಲೆ ಲಿಖಿತ ಹಾಲುಮತ ಪುರಾಣಗಳ ಪಠ್ಯದ ವಸ್ತು ಹೆಚ್ಚು ಪರಿಣಾಮ ಬೀರಿದೆ. ಉತ್ತರ ಕರ್ನಾಟಕದಲ್ಲಿ ಲಿಖಿತ ಹಾಲುಮತ ಪುರಾಣಗಳ ಪ್ರವಚನ ಕಡಿಮೆ. ಆದರೆ ಎರಡು-ಮೂರು ದಶಕಗಳಿಂದೀಚೆಗೆ ಡೊಳ್ಳಿನ ಹಾಡುಗಳ ರಚನೆಕಾರರು; ಹಾಡುಗಾರರು ಲಿಖಿತ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಹಾಡುಗಳನ್ನು ರಚನೆ ಮಾಡುವುದರ; ಹಾಡುವುದರ ಮುಖಾಂತರ ಲಿಖಿತ ಪುರಾಣಗಳ ವಸ್ತುವನ್ನು ಮೌಖಿಕಗೊಳಿಸುತ್ತಿದ್ದಾರೆ. ಹಾಡುಗಾರರಲ್ಲಿ ಲಿಖಿತತೆ ಮೌಖಿಕವಾಗುತ್ತಿದೆ. ಮೌಖಿಕತೆ ಲಿಖಿತವಾಗುತ್ತಿದೆ. ಇದರಿಂದ ಡೊಳ್ಳಿನ ಹಾಡುಗಳ ಪಾರಂಪರಿಕ ಜ್ಞಾನ ವಿಸ್ಮೃತಿಯಾಗಿ ಲಿಖಿತ ಪುರಾಣಗಳ ಜ್ಞಾನ ಪ್ರಚಲಿತಕ್ಕೆ ಬರುತ್ತಿದೆ. ಉತ್ತರ ಕರ್ನಾಟಕದಲ್ಲಿ ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ಚಹರೆಯನ್ನು ನೆನಪಿಸಿಕೊಳ್ಳುವುದಕ್ಕೆ ಇರುವ ಅಥವಾ ಜೀವಂತ ಗೊಳಿಸುತ್ತಿರುವ ಬಲವಾದ ಸೃಜನಶೀಲ ಸೆಲೆಯೆಂದರೆ ಡೊಳ್ಳಿನ ಹಾಡುಗಳಾಗಿವೆ.

೩. ಹಾಲುಮತದ ಸಾಂಸ್ಕೃತಿಕ ನಾಯಕರು : ಹೊಸ ಹೊಳಹುಗಳು

ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ನಾಯಕರಲ್ಲಿ ಎರಡು ಪಂಥಗಳಿವೆ. ಒಂದು 'ಭಂಡಾರಪಂಥ', ಇನ್ನೊಂದು 'ವಿಭೂತಿಪಂಥ'. ಭಂಡಾರಪಂಥದ ಪ್ರತಿಪಾದಕರಾಗಿ ಮೈಲಾರಲಿಂಗ, ಸೋಮಲಿಂಗ, ಬೀರಪ್ಪ, ಮಾಳಿಂಗರಾಯ, ಬುಳ್ಳಪ್ಪ, ಇಟ್ಟಪ್ಪ, ಅಮೋಘಸಿದ್ಧ, ಮಾಯವ್ವ, ಓರಗಲ್ಲಮ್ಮ, ಯಲ್ಲಮ್ಮ ಮುಂತಾದವರು ಕಾಣಿಸಿಕೊಳ್ಳುತ್ತಾರೆ. ವಿಭೂತಿಪಂಥದ ಪ್ರತಿಪಾದಕರಾಗಿ ರೇವಣಸಿದ್ಧ, ಸಿದ್ಧರಾಮ, ವೀರಗೊಲ್ಲಾಳ, ಶಾಂತಮುತ್ತಯ್ಯ, ಮರುಳಮಂಕ ಮುಂತಾದವರು ಕಾಣಿಸಿಕೊಳ್ಳುತ್ತಾರೆ. ಭಂಡಾರಪಂಥ ಪ್ರಾಚೀನವಾದದ್ದು. ವಿಭೂತಿಪಂಥ ಹನ್ನೆರಡನೆಯ ಶತಮಾನದ ನಂತರ ರೇವಣಸಿದ್ಧನ ಮುಖಾಂತರ ಹಾಲುಮತ ಸಂಸ್ಕೃತಿಗೆ ಪ್ರವೇಶವಾಯಿತು. ಡೊಳ್ಳಿನ ಹಾಡುಗಳು ಭಂಡಾರ ಸಂಸ್ಕೃತಿಯ ಸಾಂಸ್ಕೃತಿಕ ನಾಯಕರ ಜೀವನ ಚರಿತ್ರೆಯನ್ನು ಮಾತ್ರ ಅನಾವರಣ ಮಾಡಿವೆ. ವಿಭೂತಿಪಂಥದ ಸಂಸ್ಕೃತಿಯ ನಾಯಕರನ್ನು ತಾನು ಅನಾವರಣ ಮಾಡುವ ಸಾಂಸ್ಕೃತಿಕ ನಾಯಕರ ಪಟ್ಟಿಯ ಅಭಿವ್ಯಕ್ತಿ ಉದ್ದೇಶದೊಳಗೆ ಸೇರಿಸಿಕೊಂಡಿಲ್ಲ. ಪ್ರಾಚೀನ ಕಾಲದಿಂದಲೂ ವಿಭೂತಿಪಂಥದ ಸಾಂಸ್ಕೃತಿಕ ನಾಯಕರ ಜೀವನ ಚರಿತ್ರೆಯನ್ನು ಡೊಳ್ಳಿನ ಹಾಡುಗಳು ಒಳಗೊಳ್ಳಲಿಲ್ಲ. ಈ ಸಂಸ್ಕೃತಿಯ ನಾಯಕರ ಬಗ್ಗೆ ಕೆಲವು ದಶಕಗಳ ಹಿಂದೆ ಲಿಖಿತ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿ ಹಾಡುವ ವಿಧಾನ ಆರಂಭವಾಯಿತು. ಇವತ್ತು ನಮಗೆ ರಚನೆ ಮಾಡಿ ಹಾಡಿದ ಹಾಡುಗಳು ಹೆಚ್ಚಾಗಿ ಸಿಗುತ್ತವೆ ಹೊರತು ಮೌಖಿಕ ಹಾಡುಗಳು ಸಿಗುವುದು ಕಡಿಮೆ. ಹಾಗಾಗಿ ವಿಭೂತಿಪಂಥದ ಸಾಂಸ್ಕೃತಿಕ ವೀರರ ಹಾಡುಗಳಲ್ಲಿ ವಿಶಿಷ್ಟತೆಯನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಕೇವಲ ಲಿಖಿತ ಪುರಾಣಗಳಲ್ಲಿನ ವಸ್ತುವನ್ನು ಯಥಾವತ್ತಾಗಿ ಮೌಖಿಕ ಸಂವೇದನೆಯಲ್ಲಿ ಅನಾವರಣಗೊಳಿಸುವ ಯಂತ್ರಗಳಂತೆ ಕಾಣಿಸುತ್ತವೆ.

೪. 'ಹಾಲುಮತ ಸಂಸ್ಕೃತಿಯೊಳಗೆ ರೂಪಗೊಳ್ಳುತ್ತಿರುವ ನವಶ್ರೇಣೀಕರಣ'

ಭಂಡಾರ ಮತ್ತು ವಿಭೂತಿ ಪಂಥಗಳು ಇವತ್ತಿನ ಡೊಳ್ಳಿನ ಹಾಡುಗಳಲ್ಲಿ 'ಹಾಲುಮತ' ಮತ್ತು 'ಶೀಲಮತ' ಎನ್ನುವ ಪರಿಕಲ್ಪನೆಗಳಲ್ಲಿ ರೂಪಾಂತರ ಪಡೆದು ಬಿಂಬಿತವಾಗುತ್ತಿವೆ. ಹಾಲುಮತ ಪಂಥಕ್ಕೆ ಪ್ರಧಾನ ನಾಯಕ ಮಾಳಿಂಗರಾಯನಾದರೆ, ಶೀಲಮತಕ್ಕೆ ಪ್ರಧಾನ ನಾಯಕ ಅಮೋಘಸಿದ್ಧ. ಹಾಲುಮತ ಪಂಥಕ್ಕೆ ಭಂಡಾರ ದೈವಗಳ ಆರಾಧಕರು ಬೆಂಬಲಿಗರಾಗಿದ್ದಾರೆ. ಅದರಲ್ಲಿ ವಿಶೇಷವಾಗಿ 'ಮಾಂಸಹಾರಿ ಸಂಸ್ಕೃತಿ'ಯವರು. ಶೀಲಮತದ ಬೆಂಬಲಿಗರಾಗಿ ಒಡೆಯರು, ಗುರುವಿನ್‌ರವರು ಇದ್ದಾರೆ. ಇವರು ಕುರುಬರ ಕುಲಗುರುಗಳು, ಲಿಂಗಧಾರಿಗಳು, ಸಸ್ಯಹಾರಿ ಸಂಸ್ಕೃತಿಯವರು. ಇವರಿಗೆ ರೇವಣಸಿದ್ಧ, ಸಿದ್ಧರಾಮ ಮತ್ತು ಅಮೋಘಸಿದ್ಧ ಕುಲದೈವಗಳು. ಆ ಕಾರಣದಿಂದಾಗಿ ತಮ್ಮ ವಾದಕ್ಕೆ ಪ್ರಧಾನ ದೈವವನ್ನಾಗಿ ಅಮೋಘಸಿದ್ಧನನ್ನು ನೇಮಿಸಿಕೊಂಡಿದ್ದಾರೆ. ಉಳಿದ ನಾಯಕರಾದ ರೇವಣಸಿದ್ಧ, ಸಿದ್ಧರಾಮ ಮುಂತಾದವರು ಅಷ್ಟಾಗಿ ಈ ವಾದಕ್ಕೆ ಬಳಕೆ ಆಗುತ್ತಿಲ್ಲ. ಈ ಸಾಂಸ್ಕೃತಿಕ ನಾಯಕರ ಬಗ್ಗೆ ಪಾರಂಪರಿಕ ಮತ್ತು ಯಥೇಚ್ಛವಾಗಿ ಡೊಳ್ಳಿನ ಹಾಡುಗಳು ಇಲ್ಲದೇ ಇರುವುದು ಇದಕ್ಕೆ ಪ್ರಮುಖ ಕಾರಣ. ಶೀಲಮತದ ವಾದದವರೊಂದಿಗೆ ಲಿಂಗಾಯತರು ಸೇರಿಕೊಂಡಿದ್ದಾರೆ. ಈ

ವಾದದಲ್ಲಿ ಲಿಂಗಧಾರಣೆ ಹಾಗೂ ವಿಭೂತಿ ಆರಾಧನೆ ಚರ್ಚೆ ನಡೆಯುತ್ತಿರುವುದು ಮತ್ತು ಅಮೋಘಸಿದ್ಧ, ರೇವಣಸಿದ್ಧ, ಸಿದ್ಧರಾಮ ಲಿಂಗಾಯತರಿಗೂ ಕುಲದೈವವಾಗಿರುವುದರಿಂದ ಉದ್ದೇಶಪೂರ್ವಕವಾಗಿ ಲಿಂಗಾಯತರು ಸೇರಿಕೊಳ್ಳುತ್ತಿದ್ದಾರೆ. ತಮ್ಮ ಸಂಸ್ಕೃತಿ ಅತಂತ್ರವಾಗುತ್ತಿದೆ. ಅದನ್ನು ತಡೆಯಬೇಕು ಎನ್ನುವುದು ಇವರ ಪ್ರಧಾನ ಉದ್ದೇಶ. ಈ ಎರಡು ವರ್ಗಗಳು ತಮ್ಮ ತಮ್ಮ ಆರಾಧ್ಯ ದೈವಗಳನ್ನು ಮುಂಚೂಣಿಗೆ ತರುವುದಕ್ಕೆ ಹೋರಾಟ ಮಾಡುತ್ತಿವೆ. ಹಾಲುಮತದ ಹಾಡುಗಾರರು ಮಾಳಿಂಗರಾಯ ಶ್ರೇಷ್ಠನೆಂದರೆ ಶೀಲಮತದವರು ಅಮೋಘಸಿದ್ಧ ಶ್ರೇಷ್ಠನೆಂದು ಹಾಡುಗಳನ್ನು ರಚಿಸಿ ಹಾಡುತ್ತಿದ್ದಾರೆ. ಆ ಕಾರಣಕ್ಕೆ ಹಲವು ಲಿಖಿತ ಪುರಾಣಗಳಲ್ಲಿ ಅನಾವರಣ ಗೊಂಡಿರುವ ಅವತಾರಗಳನ್ನು ಬಳಸಿಕೊಳ್ಳುತ್ತಿದ್ದಾರೆ. ತಾವು ಮಂಡಿಸುವ ವಾದಕ್ಕೆ ಲಿಖಿತ ಪುರಾಣಗಳಲ್ಲಿ ಆಧಾರಗಳಿರಬೇಕು. ಪುಸ್ತಕಗಳಲ್ಲಿ ಉಲ್ಲೇಖವಿದ್ದರೆ ಮಾತ್ರ ಮಂಡಿಸಿದ ವಾದ ಸತ್ಯವೆಂದು ವಿರೋಧ ತಂಡದವರು ಮತ್ತು ಕೇಳುಗರು ನಂಬುತ್ತಾರೆ. ಇಲ್ಲವಿದ್ದರೆ ಆ ವಾದದ ಬಗ್ಗೆ ನಂಬಿಕೆ ಇಲ್ಲ. ಹಾಗಾಗಿ ಲಿಖಿತ ಪುರಾಣಗಳ ಕೃತಿಗಳನ್ನು ವೇದಿಕೆಯಲ್ಲಿ (ಪ್ರದರ್ಶನದಲ್ಲಿ) ಜನರಿಗೆ ಕಾಣುವಂತೆ ಎತ್ತಿತೋರಿಸುವ ವಿಧಾನಗಳು ಕಂಡುಬರುತ್ತವೆ. ಹಾಗಾಗಿ ಡೊಳ್ಳಿನ ಹಾಡುಗಳು ಇಂತಹ ಲಿಖಿತ ಆಧಾರಗಳನ್ನು ಆಧರಿಸಿ ಬರುತ್ತಿವೆ. ಈ ವಾದ ಮಂಡಿಸುವಾಗ ಕೇಳುಗರಲ್ಲೂ ಎರಡು ಗುಂಪುಗಳಾಗುತ್ತವೆ. ಆಯಾ ಸಂಸ್ಕೃತಿಯವರು ಆಯಾ ಪಂಥದ ಹಾಡುಗಾರರನ್ನು ಬೆಂಬಲಿಸುತ್ತಾರೆ. ತಮ್ಮ ಸಂಸ್ಕೃತಿಗೆ ಧಕ್ಕೆ ಬಂದಾಗ ಹಾಡುಗಾರರನ್ನು ಬಡಿಯುತ್ತಾರೆ. ಇದನ್ನು ನೋಡಿದ ವಿರೋಧ ತಂಡದವರು ಆ ಕೇಳುಗರನ್ನು ಬಡಿಯುತ್ತಾರೆ. ಹಾಗಾಗಿ ಪ್ರದರ್ಶನದ ಸಂದರ್ಭಗಳು ಎರಡು ಕುಲಗಳ ಸಂಘರ್ಷಕ್ಕೆ ವೇದಿಕೆಯಾಗಿವೆ. ಈ ಸಂಘರ್ಷಕ್ಕೆ ಹೆದರಿದ ಕಲಾವಿದರು ಸೊಂಟದಲ್ಲಿ ‘ಪಿಸ್ತೂಲ’ನ್ನು ಇಟ್ಟುಕೊಂಡು ಹಾಡುಗಳನ್ನು ಹಾಡುತ್ತಿದ್ದಾರೆ. ಈ ಹಾಡುಗಳ ಅಭಿವ್ಯಕ್ತಿ ಅಷ್ಟೊಂದು ಬೀಭತ್ಸಮಯದ ರೂಪ ಪಡೆಯುತ್ತಿದೆ. ಆದರೆ ಇವರು ಮಂಡಿಸುವ ವಾದ ವಾಸ್ತವವಾದುದಲ್ಲ. ಅಂದರೆ ಅಮೋಘಸಿದ್ಧ ವಿಭೂತಿ ಸಂಸ್ಕೃತಿಯ ನಾಯಕನಲ್ಲ. ಭಂಡಾರ ಸಂಸ್ಕೃತಿಯ ನಾಯಕ. ‘ಹಾಲುಮತ ಮತ್ತು ಶೀಲಮತ’ ಎನ್ನುವ ಕುಲಭೇದವನ್ನು ಬಂಡವಾಳಶಾಹಿ ವ್ಯವಸ್ಥೆ ಆರ್ಥಿಕವಾಗಿ ಲಾಭಕ್ಕಾಗಿ ಹುಟ್ಟು ಹಾಕಿರುವಂತದ್ದು. ಇದಕ್ಕೆ ಹಾಡುಗಾರರು ಹಾಲುಮತ ಸಮುದಾಯದ ಸಾಂಸ್ಕೃತಿಕ ಚರಿತ್ರೆ ಬಲಿಯಾಗುತ್ತಿದೆ. ಇದರಿಂದ ಹಾಲುಮತ ಸಂಸ್ಕೃತಿಯಲ್ಲಿ ಸಮಷ್ಟಿ ಪರಿಕಲ್ಪನೆ ಚೂರಾಗುತ್ತಿದೆ. ಕುರುಬರ ಕುಲಗುರುಗಳ ನಡುವೆ ಮತ್ತು ಭಕ್ತರ ನಡುವೆ ಅಂತರ ಸೃಷ್ಟಿಯಾಗುತ್ತಿದೆ. ಇವರಿಬ್ಬರ ನಡುವಿನ ಪಾರಂಪರಿಕ ಅಲಿಖಿತ ಸಾಂಸ್ಕೃತಿಕ ಒಪ್ಪಂದಗಳು ಕಳಚುತ್ತಿವೆ. ಒಡೆಯರು ಕುರುಬ ಸಂಸ್ಕೃತಿಯಿಂದ ಬಿಡಿಸಿಕೊಳ್ಳುವ ಹಂಬಲ ಹೆಚ್ಚಾಗುತ್ತಿದೆ. ಲಿಂಗಾಯತ ಸಂಸ್ಕೃತಿಯತ್ತ ‘ಸಂಸ್ಕೃತೀಕರಣ’ ಗೊಳ್ಳುವ ಮನಸ್ಥಿತಿ ಸೂಕ್ಷ್ಮವಾಗಿ ಕೆಲಸ ಮಾಡುತ್ತಿದೆ. ಹಾಗಾಗಿ ತಾವು ಸಂಸ್ಕೃತೀಕರಣಗೊಂಡಂತೆ ತಾವು ಪೂಜಿಸುವ ದೈವಗಳನ್ನು, ಚರಿತ್ರೆಯನ್ನು, ಅಭಿವ್ಯಕ್ತಿಯನ್ನು, ಸಂಸ್ಕೃತೀಕರಣಗೊಳಿಸುತ್ತಿದ್ದಾರೆ. ಹಾಗಾಗಿ ಹಾಲುಮತ ಸಂಸ್ಕೃತಿಯೊಳಗೆ ನವಶ್ರೇಣೀಕರಣ ಜೀವತಾಳುತ್ತಿದೆ. ಇದನ್ನು ಡೊಳ್ಳಿನ ಹಾಡುಗಳು ಪ್ರತಿಪಾದನೆ ಮಾಡುತ್ತಿವೆ ಅಥವಾ ಪ್ರತಿಪಾದನೆ ಮಾಡಿಕೊಳ್ಳುವುದಕ್ಕೆ ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ.

೫. ಹಾಲುಮತ ಸಂಸ್ಕೃತಿಯ ಸಾಂಸ್ಕೃತಿಕ ನಾಯಕರ ಸಂಕರಶೀಲತೆ

ಹಾಲುಮತದ ಸಾಂಸ್ಕೃತಿಕ ನಾಯಕರ ಮೂಲಸ್ಥಳಗಳು ಕರ್ನಾಟಕ, ಮಹಾರಾಷ್ಟ್ರದ ಗಡಿನಾಡು ಪ್ರದೇಶಗಳಲ್ಲಿ ಹೆಚ್ಚಾಗಿವೆ. ಈ ಪ್ರದೇಶದಲ್ಲಿ ಎಲ್ಲಾ ನಾಯಕರು ಆರಾಧನೆಗೊಳ್ಳುತ್ತಿದ್ದಾರೆ. ಪ್ರಚಲಿತದಲ್ಲಿದ್ದಾರೆ. ಆಚರಣೆ ಮುಂತಾದ ಪರಿಕಲ್ಪನೆಗಳ ಮುಖಾಂತರ ಮರುಸೃಷ್ಟಿಯಾಗುತ್ತಿದ್ದಾರೆ. ಇದರಲ್ಲಿ ಡೊಳ್ಳಿನ ಹಾಡುಗಳು ಹೆಚ್ಚು ಕಾರಣವಾಗಿವೆ. ದಕ್ಷಿಣ ಕರ್ನಾಟಕದಲ್ಲಿ ಈ ಎಲ್ಲಾ ದೈವಗಳ ಪರಿಚಯ ಇಲ್ಲ. ಕೇವಲ ಆಯ್ಕೆ ದೈವಗಳು ಮಾತ್ರ ಆರಾಧನೆಗೊಳ್ಳುತ್ತಿವೆ. ಬೀರಪ್ಪ, ರೇವಣಸಿದ್ಧ, ಸಿದ್ಧರಾಮ, ಮೈಲಾರಲಿಂಗ, ಮಾಯವ್ವ, ಓರಗಲ್ಲಮ್ಮ, ಯಲ್ಲಮ್ಮ ದೈವಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಬೀರಪ್ಪ, ರೇವಣಸಿದ್ಧ, ಓರಗಲ್ಲಮ್ಮ ಪ್ರಮುಖ ದೈವಗಳು ಹಾಗೂ ನಾಯಕ ದೈವಗಳು. ಮಾಳಿಂಗರಾಯ, ಬುಳ್ಳಪ್ಪ, ಅಮೋಘಸಿದ್ಧ, ಭೂತಾಳಸಿದ್ಧ, ಇಟ್ಟಪ್ಪ, ವೀರಗೊಲ್ಲಾಳ ಮುಂತಾದ ದೈವಗಳ ಪರಿಚಯವಿಲ್ಲ. ಇಟ್ಟಪ್ಪನನ್ನು ಆರಾಧನೆ ಮಾಡುವ ಮನೆತನಗಳು ಇವೆ. ಆ ಮನೆಗಳು ಇಟ್ಟಪ್ಪನ ಆರಾಧನೆಗಾಗಿ ಉತ್ತರ ಕರ್ನಾಟಕಕ್ಕೆ ಮತ್ತು ಸೋಲಿಗರ 'ಬಿಳಿಗಿರಿ ರಂಗನ ಬೆಟ್ಟ'ಕ್ಕೆ ಹೋಗುತ್ತಾರೆ. ದಕ್ಷಿಣ ಕರ್ನಾಟಕದ ಕುರುಬರು ಮೂಲತಃ ಉತ್ತರ ಕರ್ನಾಟಕದವರು. ದಕ್ಷಿಣ ಕರ್ನಾಟಕದ ಕಡೆಗೆ ವಲಸೆ ಹೋದವರು, ಹೋಗುವಾಗ ಮೂಲದೈವಗಳನ್ನು ಮತ್ತು ಆ ಸಂದರ್ಭದಲ್ಲಿ ಪ್ರಚಲಿತದಲ್ಲಿದ್ದ ದೈವಗಳನ್ನು ಮಾತ್ರ ತಮ್ಮೊಂದಿಗೆ ತೆಗೆದುಕೊಂಡು ಹೋದರು. ರೇವಣಸಿದ್ಧ ಮತ್ತು ಸಿದ್ಧರಾಮ ಮುಂತಾದ ಸ್ಥಳಗಳಲ್ಲಿ ಸಂಚಾರ ಮಾಡುವುದರೊಂದಿಗೆ ಆರಾಧನೆಗೆ ಒಳಪಟ್ಟರು. ರಾಜಪ್ರಭುತ್ವದ ವ್ಯವಸ್ಥೆಯೊಳಗೆ ಆರಾಧ್ಯ ದೈವಗಳಾಗಿ ವಿಸ್ತರಣೆಯಾದರು. ರೇವಣಸಿದ್ಧ ಮತ್ತು ಸಿದ್ಧರಾಮ ದೈವಗಳು ವಿಜಯನಗರ ಸಾಮ್ರಾಜ್ಯದ ಸಂಗಮ ವಂಶಸ್ಥರ ಪ್ರಭಾವದಿಂದ ಈ ಭಾಗದಲ್ಲಿ ನೆಲೆ ನಿಲ್ಲಲು ಹೆಚ್ಚು ಕಾರಣರಾದರು. ಕೆಲವು ಶತಮಾನಗಳ ನಂತರ ಪ್ರಧಾನ ಧಾರೆಗೆ ಬರುವುದರೊಂದಿಗೆ ಆರಾಧನೆಗೆ ಒಳಪಟ್ಟವು. ಉತ್ತರ ಕರ್ನಾಟಕದಲ್ಲಿ ಅಥವಾ ಕರ್ನಾಟಕ ಮಹಾರಾಷ್ಟ್ರದ ಗಡಿನಾಡ ಪ್ರದೇಶದಲ್ಲಿ ಬೀರಪ್ಪನನ್ನು ಪ್ರಧಾನ ದೈವವನ್ನಾಗಿ ಮಾಡಿಕೊಂಡು ಇಟ್ಟಪ್ಪ, ಮಾಳಪ್ಪ, ಖಂಡೋಬ, ಅಮೋಘಸಿದ್ಧ, ಗೋರಖನಾಥ, ಸೋಮಲಿಂಗ, ಮಾಯವ್ವ, ಯಲ್ಲಮ್ಮ, ಮಾಳಮ್ಮ ಮುಂತಾದ ದೈವಗಳನ್ನು ಸಂಕರಶೀಲಗೊಳಿಸಲಾಗಿದೆ. ಈ ದೈವಗಳು ರೂಪಾಂತರಗೊಳ್ಳದೆ ತಮ್ಮ ಮೂಲತನವನ್ನು ಉಳಿಸಿಕೊಂಡಿವೆ.

೬. ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕ ಪ್ರಾದೇಶಿಕ ವೈವಿಧ್ಯ ಮತ್ತು ಸಾಂಸ್ಕೃತಿಕ ಕೊಡುಕೊಳ್ಳುವಿಕೆ

ಹಾಲುಮತ ಸಮುದಾಯ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದತ್ತ ವಲಸೆ ಹೋಗಿದೆ. ಈ ವಲಸೆಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದವೆಂದರೆ ಉತ್ತರ ಕರ್ನಾಟಕದಲ್ಲಿ ವೀರಶೈವ ಧರ್ಮದ ಪ್ರಭಾವ. ವಿಜಯನಗರ ಸಾಮ್ರಾಜ್ಯದ ಪತನ. ಮುಸ್ಲಿಂ ಧರ್ಮದ ದಾಳಿಗಳ ಹೆಚ್ಚಳ. ಮೈಸೂರು ಸಾಮ್ರಾಜ್ಯದ ಸ್ಥಾಪನೆ, ವೈಷ್ಣವ ಧರ್ಮದ ಜನಪ್ರಿಯತೆ ಮುಂತಾದವುಗಳು. ಇವುಗಳಲ್ಲಿ ವಿಜಯನಗರ ಸಾಮ್ರಾಜ್ಯದ ಪತನ ವಲಸೆಗೆ ಹೆಚ್ಚು ಅವಕಾಶ ಕಲ್ಪಿಸಿತು. ತಾಳಿಕೋಟೆ ಕದನದಲ್ಲಿ ಸೋತ ಕಾರಣಕ್ಕೆ ಗ್ರಾಮದ ಹಾಲುಮತಸ್ಥರೆಲ್ಲರೂ ಸೇರಿ ಗುಂಪು ಗುಂಪಾಗಿ ವಲಸೆ

ಹೋದರು. ಹೋಗಿ ತಮ್ಮದೇ ಆದ ಗ್ರಾಮಗಳನ್ನು ಕಟ್ಟಿಕೊಂಡರು. ವಲಸೆ ಹೋದವರು ಆರಂಭದಲ್ಲಿ ಪಶುಪಾಲನೆ ಮಾಡಿದ್ದಾರೆ. ನಂತರದಲ್ಲಿ ಕೃಷಿ ಸಂಸ್ಕೃತಿಗೆ ಪರಿವರ್ತನೆ ಆಗಿದ್ದಾರೆ. ಈ ವೃತ್ತಿ ಪಲ್ಲಟಗಳ ಚಿತ್ರಣಗಳನ್ನು ಪ್ರತಿಬಿಂಬಿಸುವ ಹಲವು ಕಥನಗಳು ನಮಗೆ ಸಿಗುತ್ತವೆ. ಒಂದೊಂದು ಗ್ರಾಮದಲ್ಲಿ ಎರಡೆರಡು ಬೀರದೇವರ ದೇವಾಲಯಗಳು ಇರುವುದು ಇದಕ್ಕೆ ಬಹುದೊಡ್ಡ ಉದಾಹರಣೆ. ಒಂದು ದೇವಾಲಯ ಹಳ್ಳದಲ್ಲಿದ್ದರೆ ಮತ್ತೊಂದು ದೇವಾಲಯ ಗ್ರಾಮದಲ್ಲಿದೆ. ಈ ಸಮುದಾಯದ ಆರಂಭಿಕ ನೆಲೆಗಳು ಹಳ್ಳ, ನದಿ, ಕೆರೆ, ತಗ್ಗು ಪ್ರದೇಶಗಳಲ್ಲಿವೆ. ಕಾಲಾಂತರದಲ್ಲಿ ಈ ಪ್ರದೇಶಗಳಿಂದ ಎತ್ತರದ ಪ್ರದೇಶಗಳ ಕಡೆಗೆ ವಿಸ್ತರಣೆ ಆಗಿದ್ದಾರೆ. ಇವತ್ತು ಮೂಲಸ್ಥಳಗಳಲ್ಲಿ ಆರಾಧ್ಯ ದೈವಗಳ ದೇವಾಲಯಗಳು ಮಾತ್ರ ಉಳಿದುಕೊಂಡಿವೆ. ಈ ದೇವಾಲಯಗಳಿಗೆ ವಿಶೇಷ ಮಾನ್ಯತೆ ಮತ್ತು ಹತ್ತಾರು ಗ್ರಾಮಗಳು ಮೂಲದೈವಗಳು ಎನ್ನುವ ಹೆಗ್ಗಳಿಕೆಯಿದೆ. ಈ ಗ್ರಾಮ ದೈವಗಳ ಜಾತ್ರೆ, ಉತ್ಸವ ಸಂದರ್ಭದಲ್ಲಿ ಮೊದಲ ಪೂಜೆ ಈ ದೇವಾಲಯಗಳಲ್ಲಿ ನಡೆಯಬೇಕು. ಹಿರಿಯ ದೇವರಿಗೆ ಮೊದಲ ಆದ್ಯತೆ ಎನ್ನುವುದು ಇಲ್ಲಿನ ಜನಪದಿಗರ ನಂಬಿಕೆ ಈ ಆಚರಣೆಗಳು ಮೂಲಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

ಈ ಭಾಗದ ದೇವಾಲಯಗಳಿಗೆ ಒಂದು ವ್ಯವಸ್ಥಿತವಾದ ಪಾರಂಪರಿಕ ಆಡಳಿತ ವ್ಯವಸ್ಥೆಯಿದೆ. ಆಯಾ ದೇವಾಲಯಕ್ಕೆ ಇಂತಿಷ್ಟು ಹಳ್ಳಿಗಳು, ಇಂತಿಷ್ಟು ಮನೆತನಗಳು, ಇಂತಿಷ್ಟು ದೈವಗಳು ಸೇರಿವೆ. ಆ ದೇವಾಲಯಗಳ ಹಕ್ಕುಗಳು, ಆಚರಣೆ, ಉತ್ಸವಗಳು ಆಡಳಿತಕ್ಕೆ ಒಳಪಟ್ಟ ಹಳ್ಳಿಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಪೂಜೆಯ ಸಂದರ್ಭದಲ್ಲಿ ಆಯಾ ಕುಲಮೂರ್ತಿ ಆರಾಧಕರು ಆಯಾ ಮೂರ್ತಿಗೆ ಹೆಚ್ಚು ಆದ್ಯತೆ ಕೊಡುತ್ತಾರೆ. ಕೆಲವು ದೇವಾಲಯಗಳಲ್ಲಿ ಎಷ್ಟು ಹಳ್ಳಿಗಳು ಸೇರಿರುತ್ತವೋ ಅಷ್ಟು ಹಳ್ಳಿಗಳು ಸಂಕೇತವಾಗಿ ಗರ್ಭಗುಡಿಯಲ್ಲಿ ಅಷ್ಟು ಮೂರ್ತಿಗಳಿರುತ್ತವೆ. ಕುಲದ ಮತ್ತು ಗ್ರಾಮದ ಐಡೆಂಟಿಟಿಯ ಪ್ರಜ್ಞಾಪೂರ್ವಕ ಪರಿಕಲ್ಪನೆ ಇದು. ಇದನ್ನು ಕುಲ ಆರಾಧನೆಯ ಧ್ರುವೀಕರಣ ವೆಂದು ಕರೆಯಬಹುದು. ಇಲ್ಲಿ ಸಪ್ತ ಸಂಖ್ಯಾತ್ಮಕ ಆರಾಧನಾ ವ್ಯವಸ್ಥೆ ಹೆಚ್ಚು. ಇಲ್ಲಿ ಹಾಲುಮತ ಸಂಸ್ಕೃತಿ ಮಾತೃಮೂಲ ಆಚರಣೆಗಳು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಕೆಲವು ರೂಪಾಂತರ ಪಡೆದು ಇವತ್ತಿಗೂ ಜೀವಂತವಾಗಿವೆ. ಉತ್ತರ ಕರ್ನಾಟಕದಲ್ಲಿ ಈ ವ್ಯವಸ್ಥೆ ಕಣ್ಮರೆಯಾಗಿದೆ. ಈ ವ್ಯವಸ್ಥೆಗಳನ್ನು ಡೊಳ್ಳಿನ ಹಾಡುಗಳು ಹಾಡಿ ಹೊಗಳುತ್ತವೆ.

೭. ಜಾನಪದದ ವ್ಯಾಖ್ಯಾನವನ್ನು ಪುನರ್ ವ್ಯಾಖ್ಯಾನಕ್ಕೆ ಒತ್ತಾಯಿಸುವ ಡೊಳ್ಳಿನ ಹಾಡುಗಳು

ಜಾನಪದ ತನ್ನ ಅಭಿವ್ಯಕ್ತಿಗೆ ಒಂದು Context ಮುಖ್ಯ. ಅವುಗಳು ಮೌಖಿಕವಾಗಿ ಚಲನಶೀಲವಾಗುತ್ತವೆ. Unwritten Documents ಎನ್ನುವ ಹಲವು ಲಕ್ಷಣಗಳನ್ನು ಹೊಂದಿದೆ. ಆದರೆ ಇವತ್ತಿನ ಡೊಳ್ಳಿನ ಹಾಡುಗಳು ಈ ಲಕ್ಷಣಗಳಿಗೆ ಬದ್ಧವಾಗಿಲ್ಲ. ಇಲ್ಲಿ ಕೇವಲ ಮೌಖಿಕವಾಗಿ ಕಲಿಯುವ ಪರಿಪಾಠ ಈಗ ಇಲ್ಲವೇ ಇಲ್ಲ. ಹಾಡುಗಳನ್ನು ರಚಿಸಿ ಹಾಡುತ್ತಿದ್ದಾರೆ. ಬರಹಗಾರರ ವೃತ್ತಿ ವರ್ಗ ಸೃಷ್ಟಿಯಾಗಿವೆ. ಒಬ್ಬೊಬ್ಬ ಬರಹಗಾರ ನಲವತ್ತು-ಐವತ್ತು ತಂಡಗಳಿಗೆ ಹಾಡುಗಳನ್ನು ಬರೆದುಕೊಡುತ್ತಿದ್ದಾರೆ. ಆ ಹಾಡುಗಳನ್ನು ಕಲಾವಿದರು ಹಾಡುತ್ತಿದ್ದಾರೆ. ಈಗ ಹಾಡುವುದು ಮತ್ತು

ಬರೆಯುವುದು ಒಂದು ಉದ್ಯಮದ ಭಾಗವಾಗಿದೆ, ಗೌರವದ ಪ್ರತೀಕವಾಗಿದೆ. ಆ ಕಾರಣಕ್ಕೆ ಗ್ರಾಮಗಳಲ್ಲಿ ಡೊಳ್ಳಿನ ಹಾಡುಗಳ ತಂಡಗಳು ಹೆಚ್ಚುತ್ತಿವೆ. ಕೆಲವೊಂದು ಗ್ರಾಮದಲ್ಲಿ ನಾಲ್ಕು-ಐದು ತಂಡಗಳಿವೆ. ಯುವಕ ಮತ್ತು ಮಕ್ಕಳ ತಂಡಗಳು ಹೆಚ್ಚುತ್ತಿವೆ. ಸ್ವತಃ ಪಾಲಕರೇ ಮಕ್ಕಳ ತಂಡಗಳನ್ನು ಕಟ್ಟಿಕೊಂಡಿದ್ದಾರೆ. ಇದರಲ್ಲಿ ಮಹಿಳಾ ಮಕ್ಕಳ ತಂಡಗಳೇ ಹೆಚ್ಚು. ವ್ಯಾಪಾರದ ಪರಿಕಲ್ಪನೆಗೆ, ಉದ್ಯಮದ ಶೈಲಿಗೆ ಬೇಕಾದ ಹಾಡುಗಳನ್ನು ತರಬೇತಿದಾರರಿಂದ ಪಡೆದುಕೊಳ್ಳುತ್ತಿದ್ದಾರೆ. ಹಾಡುಗಳ ಕಲಿಕೆಗಾಗಿ ಒಬ್ಬರು ಅಥವಾ ಒಂದೊಂದು ತಂಡ ಇಂತಿಷ್ಟು ಹಣವನ್ನು ವ್ಯಯ ಮಾಡುತ್ತಿವೆ. ಹಣ ಮತ್ತು ಕುರಿಗಳನ್ನು ಕೊಟ್ಟು ಹಾಡುಗಳನ್ನು ಕಲಿಯುತ್ತಿದ್ದಾರೆ. ಎರಡು ವರ್ಷ ಗಳಿಂದ ಮಕ್ಕಳ ಆಗಮನ ದಿನ ದಿನಕ್ಕೆ ಹೆಚ್ಚುತ್ತಿದೆ. ಹುಡುಗರಿಗಿಂತ ಹುಡುಗಿಯರ ಆಗಮನ ಹೆಚ್ಚು. ಇದಕ್ಕೆ ಪ್ರಮುಖ ಕಾರಣ ಮಾರುಕಟ್ಟೆಯಲ್ಲಿರುವ ಹಾಡುಗಳ ಬೇಡಿಕೆ. ಹಾಗಾಗಿ ಇವರ ಆಗಮನ ಹೆಚ್ಚು. ಆಗಮನವಾದ ಮಕ್ಕಳಲ್ಲಿ ಸರಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ಮತ್ತು ಅಶಿಕ್ಷಿತ ಪಾಲಕರ ಮಕ್ಕಳು ಹೆಚ್ಚಾಗಿದ್ದಾರೆ. ಜಾನಪದ ಯುವಕ ಮತ್ತು ಮಕ್ಕಳಿಂದ ದೂರವಾಗುತ್ತಿದೆ ಎನ್ನುವ ವಿದ್ವಾಂಸರ ಆತಂಕಕ್ಕೆ ವಿರುದ್ಧವಾದ ಚಿತ್ರಣ ಇಲ್ಲಿದೆ. ಇಲ್ಲಿ ಆಗುತ್ತಿರುವ ಧೋರಣೆಗಳನ್ನು ಕುರಿತು ವಿಶೇಷವಾದ ಅಧ್ಯಯನ ಮಾಡಿ ವ್ಯವಸ್ಥಿತವಾದ ಅನ್ವಯಿಕ ಪರಿಕಲ್ಪನೆಗೆ ಅವಕಾಶ ಕಲ್ಪಿಸಬೇಕು.

ತಂಡದಲ್ಲಿ ಒಬ್ಬ ಬರಹಗಾರ ಇರಬೇಕು ಎನ್ನುವ ನಂಬಿಕೆ ಇತ್ತೀಚಿಗೆ ಆರಂಭವಾಗಿದೆ. ಆ ಕಾರಣಕ್ಕೆ ಪ್ರತಿಯೊಂದು ತಂಡಗಳು ಒಬ್ಬ ಅಥವಾ ಇಬ್ಬರು ವಿದ್ಯಾವಂತರನ್ನು ಸೇರಿಸಿಕೊಂಡಿವೆ. ಇವರೇ ತಂಡದ ನಿರ್ದೇಶಕರು. ವಾದ-ಪ್ರತಿವಾದ ಚರ್ಚೆಯ ಪ್ರವರ್ತಕರು; ಪ್ರತಿಪಾದಕರು. ಹಾಗಾಗಿ ತಂಡದಲ್ಲಿ ಇವರಿಗೆ ವಿಶೇಷ ಗೌರವ. ಈ ಗೌರವಕ್ಕೆ ಮನಸೋತ ವಿದ್ಯಾವಂತರು ಈ ಕಲೆಯತ್ತ ಬರುತ್ತಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಬಿ.ಎ. ಓದಿರುವ, ಓದುತ್ತಿರುವ ವಿದ್ಯಾರ್ಥಿಗಳು ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬರಹ ಮೌಖಿಕವಾಗಿ ರೂಪತಾಳುತ್ತಿದೆ. ವ್ಯಕ್ತಿ ಚಿಂತನೆ ಸಮಷ್ಟಿ, ಸಾಮುದಾಯಿಕ ಚಿಂತನೆ ಆಗುತ್ತಿದೆ. ಆಧುನಿಕ ಸಂವಹನ ಮಾಧ್ಯಮಗಳನ್ನು (ಕ್ಯಾಸೆಟ್, ಸಿಡಿ, ಡಿವ್ಹಿಡಿ) ಪ್ರದರ್ಶನದ ವೇದಿಕೆಯನ್ನಾಗಿ ಮಾಡಿಕೊಂಡಿವೆ. ಇದನ್ನರಿಯದ ವಿದ್ವಾಂಸರು ಆಧುನಿಕ ಸಂವಹನ ಮಾಧ್ಯಮಗಳಿಂದ ಜಾನಪದ ನಶಿಸುತ್ತಿದೆ ಎನ್ನುವ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಆದರೆ ಡೊಳ್ಳಿನ ಹಾಡುಗಳು ಈ ಮಾಧ್ಯಮಗಳನ್ನು ಬೆನ್ನುಹತ್ತಿವೆ. ಪ್ರದರ್ಶನಕ್ಕೆ ಬೇಕಾದ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದೆ. ಈ ರೂಪಾಂತರದಲ್ಲಿ ಆದಂತಹ ವಸ್ತು ವೈಶಿಷ್ಟ್ಯತೆಯನ್ನು ಅಧ್ಯಯನ ಮಾಡಬೇಕು. ಹಾಗಾಗಿ ಈ ಹಾಡುಗಳನ್ನು ಹೊಸದಾಗಿ ವ್ಯಾಖ್ಯಾನ ಮಾಡಬೇಕಾಗಿದೆ. ಈ ಹಾಡುಗಳ ಅಧ್ಯಯನಕ್ಕೆ ಹಿಂದಿನ ಸಿದ್ಧಾಂತಗಳು ನ್ಯಾಯ ಒದಗಿಸು ವುದಿಲ್ಲ. ಹಾಗಾಗಿ ಪ್ರತ್ಯೇಕವಾದ ಸಿದ್ಧಾಂತಗಳನ್ನು ರೂಪಿಸಬೇಕಾಗಿದೆ.

೮. ಹರಿದು ಹಂಚಿಹೋಗುತ್ತಿರುವ ಸಾಂಸ್ಕೃತಿಕ ವೀರರ ಜೀವನ ಚರಿತ್ರೆ

ಇವತ್ತು ಡೊಳ್ಳಿನ ಹಾಡುಗಳು ತುಂಡು ತುಂಡಾಗಿ ಅಭಿವ್ಯಕ್ತಗೊಳ್ಳುತ್ತಿವೆ. ಇದಕ್ಕೆ ಮಾಧ್ಯಮಗಳು ಮತ್ತು ಕೇಳುಗರ ಪ್ರೇರಣೆ ಕಾರಣವಾಗಿದೆ. ಹಾಗಾಗಿ ಕಲಾವಿದರು ದೀರ್ಘವಾದ ಮಾರ್ಗಸಾಹಿತ್ಯವನ್ನು

ಹಾಡುತ್ತಿಲ್ಲ, ಖ್ಯಾಲಿ ಹಾಡುಗಳನ್ನು ಹಾಡುತ್ತಿದ್ದಾರೆ. ಹಾಡುವ ಹಾಡುಗಳಲ್ಲಿ ಅರ್ಧಭಾಗವನ್ನು ಸಾಂಸ್ಕೃತಿಕ ವೀರರ ಜೀವನ ಚರಿತ್ರೆಗೆ, ಇನ್ನರ್ಧ ಭಾಗವನ್ನು ತಮ್ಮ ವೈಯಕ್ತಿಕ ವಾದ ಮಂಡನೆಗೆ ಬಳಕೆಯಾಗುತ್ತಿದೆ. ವೈಯಕ್ತಿಕ ಚರ್ಚೆಗೆ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯ ತಾತ್ವಿಕ ಅಂಶಗಳನ್ನು ತಮ್ಮ ವ್ಯಕ್ತಿತ್ವವನ್ನು ಹೇಳುವುದಕ್ಕೆ ಅನ್ವಯಿಕವಾಗಿ ಬಳಸಿಕೊಳ್ಳುವುದು ವಿಶೇಷ. ಸಾಂಸ್ಕೃತಿಕ ವೀರರ ತಾತ್ವಿಕ ಬದುಕಿನಂತೆ ನಾವು ಮತ್ತು ನಮ್ಮ ಸಂಸ್ಕೃತಿ, ನಮ್ಮ ಹಾಡುಗಾರಿಕೆ ಎನ್ನುವುದು ಇವರ ಇಂಗಿತವಾಗಿದೆ. ಇದರಿಂದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ತುಂಡು ತುಂಡಾಗಿ ಹಾಡುತ್ತಿದ್ದಾರೆ. ರ್‍ಯಾಣಗಳನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ರ್‍ಯಾಣಗಳ ಸ್ಥಾನವನ್ನು 'ವೈಯಕ್ತಿಕ ಬೈಗುಳಗಳ' ಹಾಡುಗಳು ತುಂಬುತ್ತಿವೆ. ವಸ್ತು ದೃಷ್ಟಿಯಿಂದಲ್ಲದಿದ್ದರೂ, ಮನೋರಂಜನೆಯ ದೃಷ್ಟಿಯಿಂದ ಸ್ಥಾನವನ್ನು ತುಂಬಿವೆ. ಪ್ರಶ್ನಾವಳಿ ರೂಪದ ಸಂಭಾಷಣೆ ಹೆಚ್ಚಾಗಿದೆ. ಈ ಪ್ರಶ್ನೆಗಳಿಗಾಗಿ ಸಾಂಸ್ಕೃತಿಕ ವೀರರ ಹುಟ್ಟು, ಅವತಾರ, ಸಂಘರ್ಷ, ಸ್ಥಳಗಳು ಹಾಗೂ ಒಬ್ಬ ಕಲಾವಿದನನ್ನು ಮತ್ತೊಬ್ಬ ಕಲಾವಿದ ಬಡಿದ ಸಂದರ್ಭಗಳು ಬಳಕೆಯಾಗುತ್ತಿವೆ. ಈ ವಿಧಾನಗಳನ್ನು ಅನುಸರಿಸಿ ಶ.ಶಿ. ಕುಂಬಾರ ಅವರು ರಸಪ್ರಶ್ನೆಗಳಂತಹ ಹಾಲುಮತದ ಪ್ರಶ್ನೋತ್ತರಗಳ ಮಾಲಿಕೆಗಳನ್ನು ತಂದಿದ್ದಾರೆ. ಇದರಲ್ಲಿ ಲಿಖಿತ ಪುರಾಣಗಳ ಬಳಕೆ ಹೆಚ್ಚಾಗಿದೆ. ಈ ಪುಸ್ತಕಗಳ ಬಳಕೆ ಆಗುತ್ತಿವೆ. ಇತ್ತೀಚಿನ ಪ್ರದರ್ಶನಗಳಿಗೆ ಪ್ರಶ್ನಾವಳಿಗಳೇ ಜೀವಂತಿಕೆ. ಪ್ರದರ್ಶನಗಳು ಪ್ರಶ್ನೆಗಳಿಂದ ಆರಂಭವಾಗಿ ಪ್ರಶ್ನೆಗಳಿಂದ ಮುಕ್ತಯವಾಗುತ್ತವೆ. ಪ್ರಶ್ನೆಗಳಿಗೆ ಉತ್ತರವಾಗಿ ಹಾಡುಗಳನ್ನು ಹಾಡಲಾಗುತ್ತಿದೆ. ಹಾಡುಗಳಿಗೆ ಉತ್ತರವಾಗಿ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಪ್ರಶ್ನೋತ್ತರಗಳಿಗೆ ಮತ್ತು ಹಾಡುಗಳಿಗೆ ಸಾವಯವ ಸಂಬಂಧವಿರುತ್ತದೆ. ಈ ಕುರಿತು ಅಧ್ಯಯನಗಳು ಆಗಿಲ್ಲ. ಇವುಗಳಲ್ಲಿ ಆಗುತ್ತಿರುವ ವಸ್ತು ರೂಪಾಂತರವನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡಬೇಕಾಗಿದೆ.

೯. ಸೇವೆಯ ಪ್ರತೀಕವಾಗಿ ಡೊಳ್ಳಿನ ಹಾಡುಗಳು

ಡೊಳ್ಳಿನ ಹಾಡುಗಳನ್ನು ಹಾಡಲು ಕಲಿತವರು ಆರಾಧ್ಯ ದೈವಗಳಿಗೆ 'ಹಾಡಿನ ಹರಕೆ' ಸಲ್ಲಿಸಬೇಕು ಎನ್ನುವ ನಂಬಿಕೆ ಕಲಾವಿದರಲ್ಲಿದೆ. ಈ ನಂಬಿಕೆಗಳಿಂದಲೇ ಕಲಾವಿದರು ಜಾತ್ರೆಗಳಲ್ಲಿ ಹಾಡಿನ ಹರಕೆ ಸಲ್ಲಿಸುತ್ತಾರೆ. ಹುಲಜಂತಿ, ಮಾಳಿಂಗರಾಯ, ಕೋನಗನೂರು ಬೀರಪ್ಪ, ಚಿಂಚಿಲಿ ಮಾಯವ್ವ, ಪಟ್ಟಣಕೊಡಲಿ ಇಟ್ಟಪ್ಪ, ಅರಕೇರಿ ಅಮೋಘಸಿದ್ಧ ದೈವಗಳ ಜಾತ್ರೆಗಳಲ್ಲಿ ಈ ಪದ್ಧತಿ ಹೆಚ್ಚಾಗಿ ಕಂಡುಬರುತ್ತದೆ. ಒಂದೊಂದು ತಂಡಗಳು ೭ ವರ್ಷ, ೯ ವರ್ಷ, ೧೧ ವರ್ಷಗಳಂತೆ ಹರಕೆ ಸಲ್ಲಿಸುವ ಪದ್ಧತಿ ಇದೆ. ೫೧ ವರ್ಷಗಳ ಕಾಲ ಹರಕೆ ಸಲ್ಲಿಸಿದ ತಂಡಗಳು ಇವೆ. ಹುಲಿಜಂತಿ ಮಾಳಿಂಗರಾಯನ ಜಾತ್ರೆಯಲ್ಲಿ ೧೫೦ಕ್ಕೂ ಹೆಚ್ಚು ತಂಡಗಳು ಪ್ರದರ್ಶನ ಕೊಟ್ಟವು. ಹಾಲಮತ ಸಾಂಸ್ಕೃತಿಕ ವೀರರ ಆಚರಣೆಗಳೆಲ್ಲವು ಹೆಚ್ಚಾಗಿ ರಾತ್ರಿ ಸಂದರ್ಭದಲ್ಲಿ ನಡೆಯುತ್ತವೆ. ಈ ಆಚರಣೆಗಳಿಗಾಗಿ ಲಕ್ಷಾಂತರ ಜನರು ಸೇರುತ್ತಾರೆ. ಈ ಸಮುದಾಯದಲ್ಲಿ ವಸತಿ ರಹಿತ ದೇವಾಲಯಗಳು ಹೆಚ್ಚಾಗಿದ್ದು, ಇನ್ನೂ ಕೆಲವು ದೈವಗಳು ಕಾಡಿನಲ್ಲಿವೆ. ನೆರೆದ ಜನರ ಬೇಸರ ಮತ್ತು ನಿದ್ದೆಯನ್ನು ನೀಗಿಸುವ ಬಹುಮುಖ್ಯ ಮನೋರಂಜನೆಯ ವಸ್ತುಗಳಾಗಿ ಈ ಹಾಡುಗಳು ಬಳಕೆಯಾಗುತ್ತಿವೆ.

ಜನರು ಎಚ್ಚರವಾಗಿರುವುದರಿಂದ ಜಾತ್ರೆಯಲ್ಲಿ ನಡೆಯಬಹುದಾದ ಕಳವು ಮುಂತಾದ ಅವಘಡಗಳು ತಪ್ಪುತ್ತವೆ.

೧೦. ಮಾತೃಪ್ರಧಾನ ಸಂಸ್ಕೃತಿಯ ವಿಸ್ಮೃತಿಗೊಳಿಸುತ್ತಿರುವ ಅರ್ಚಕ ವರ್ಗಗಳು

ಹಾಲುಮತ ಸಂಸ್ಕೃತಿಯಲ್ಲಿ ಪೂಜಾರಿಗಳು, ದಳವಾಯಿಗಳು, ಒಡೆಯರು, ಈರಗಾರರು ಮುಂತಾದ ಅರ್ಚಕ ವರ್ಗಗಳಿವೆ. ಇವರು ಸಾಂಸ್ಕೃತಿಕ ವೀರರ ವಕ್ತಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪುರುಷ ಪ್ರಧಾನ ಸಂಸ್ಕೃತಿಯ ಪ್ರತಿಪಾದನೆ ಮಾಡುತ್ತಾ ಬಂದಿರುವ ವಕ್ತಾರರಿವರು. ಇವರು ಸಾಂಸ್ಕೃತಿಕ ವೀರರ ಸೇವೆಗಾಗಿ ಅನುಸರಿಸುವ ಅಲಗು ಸೇವೆ, ಕಾಚಿಬೀರ ಸೇವೆ, ಕಾರ್ಣಿಕೋತ್ಸವ, ಮಳೆ-ಬೆಳೆ-ಹೇಳಿಕೆಗಳು ಮುಂತಾದವು ಮಾತೃಮೂಲ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿದ್ದವು ಎಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಈ ಆಚರಣೆಗಳು ಮಾತೃಮೂಲ ಸಂಸ್ಕೃತಿಯ ಧೋರಣೆಗಳನ್ನು ಬಿಂಬಿಸುತ್ತವೆ. ಅವುಗಳನ್ನು ಆಕ್ರಮಣ ಮಾಡಿಕೊಂಡ ಪುರುಷ ಪ್ರಧಾನ ವ್ಯವಸ್ಥೆ. ಪಾರಂಪರಿಕ ಸಂಸ್ಕೃತಿಗಳ ತಮ್ಮ ಅಸ್ಮಿತೆಗಳೆನ್ನುವಂತೆ ಪ್ರದರ್ಶಿಸುತ್ತಾ ಬಂದರು. ಇವತ್ತು ಕೇವಲ ಪುರುಷ ದೈವಗಳ ಆಚರಣೆಗಳಲ್ಲಿ ಪ್ರಧಾನಧಾರೆಯಲ್ಲಿ ಪ್ರದರ್ಶಿತವಾಗುತ್ತಿವೆ. ಇದರಿಂದ ಪುರುಷ ವರ್ಗ ಪ್ರಬಲವಾಗುತ್ತಾ ಬಂತು. ಮಾತೃಮೂಲ ಅಂಶಗಳು ಕಣ್ಮರೆಯಾದವು.

೧೧. ಬಂಡವಾಳಶಾಹಿ ವ್ಯವಸ್ಥೆಯ ತುಳಿತಕ್ಕೊಳಪಟ್ಟ ಅಭಿವ್ಯಕ್ತಿಯಾಗಿ ಮಹಿಳೆ

ಈ ಕ್ಷೇತ್ರಕ್ಕೆ ಮಹಿಳೆ ಪ್ರವೇಶ ಪಡೆದು ಕೆಲವೇ ಕೆಲವು ವರ್ಷಗಳಾಗಿವೆ. ಅಭಿವ್ಯಕ್ತಿ ವಾತಾವರಣಕ್ಕೆ ಆಕೆ ಇನ್ನೂ ಸಂಪೂರ್ಣವಾಗಿ ಹೊಂದಿಕೊಂಡಿಲ್ಲ. ತನ್ನ ಅಸ್ಮಿತೆಯನ್ನು ಕಟ್ಟಿಕೊಳ್ಳುವ ಹಂಬಲದಿಂದ ಹೋರಾಟ ಮಾಡುತ್ತಿದ್ದಾಳೆ. ಈ ಹಂತದಲ್ಲಿರುವ ಮಹಿಳೆಯನ್ನು ಬಂಡವಾಳಶಾಹಿ ವ್ಯವಸ್ಥೆ ತನ್ನ ಬೌದ್ಧಿಕ ಗುಣದಿಂದ ಮಾರಾಟ ವಸ್ತುವೆನ್ನುವಂತೆ ರೂಪಿಸುತ್ತಿದೆ. ಈ ಶರಣಾಗತಿಗೆ ಪ್ರಮುಖ ಕಾರಣ ಮಹಿಳೆ ಇದುವರೆಗೂ ತನ್ನದೇ ಆದ ಅಭಿವ್ಯಕ್ತಿ ಹೊರಹಾಕದೆ ಇರುವುದು. ಅಥವಾ ಸ್ವ-ತಿಳುವಳಿಕೆಯಿಂದ ಹಾಡುಗಳನ್ನು ಹಾಡದಿರುವುದು. ಈ ಕ್ಷೇತ್ರದಲ್ಲಿ ಮಹಿಳೆ ಸ್ವ-ತಿಳಿವಳಿಕೆಯನ್ನು ಹೊರಹಾಕುವಷ್ಟು ಜ್ಞಾನವಂತಳಾಗಿ ಕಾಣಿಸುತ್ತಿಲ್ಲ. ಪುರುಷರು ರಚನೆ ಮಾಡಿಕೊಟ್ಟ ಹಾಡುಗಳನ್ನು ಮಾತ್ರ ಹಾಡುತ್ತಿದ್ದಾಳೆ. ಇವತ್ತಿನ ಬರಹಗಾರರು ಬಂಡವಾಳಶಾಹಿ ವ್ಯವಸ್ಥೆಯಿಂದ ಪ್ರವೇಶವಾಗಿದ್ದು ವ್ಯಾಪಾರದ ದೃಷ್ಟಿಕೋನದಿಂದಲೇ ರಚನೆ ಮಾಡುತ್ತಿದ್ದಾರೆ. ಈ ಹಾಡುಗಳಲ್ಲಿ ಆಕೆಯ ದೈಹಿಕ ಲಕ್ಷಣಗಳ ಅವಹೇಳನ ಮತ್ತು ಪಾರಂಪರಿಕ ಬೈಗುಳಗಳು ಹೆಚ್ಚಾಗಿ ಬಳಕೆಯಾಗುತ್ತಿವೆ. ಇಂತಹ ಹಾಡುಗಳನ್ನು ಮಹಿಳೆಯರು ತಿಳಿದೂ ತಿಳಿಯದವರಂತೆ ಹಾಡುತ್ತಿದ್ದಾರೆ. ಪ್ರತಿರೋಧ ಮಾಡುತ್ತಿಲ್ಲ. ಇವರು ಪ್ರತಿರೋಧ ಮಾಡುವಷ್ಟು ಜ್ಞಾನ ಈಕೆಯಲ್ಲಿ ಕಾಣಿಸುತ್ತಿಲ್ಲ. ಇವರಿಗೆ ಹಾಡುವ ಪರಂಪರೆ ಇಲ್ಲ. ಜೊತೆಗೆ ಇಲ್ಲಿನ ಹಾಡುಗಾರ್ತಿಯರು ಹೆಚ್ಚಾಗಿ ಅಶಿಕ್ಷಿತರು ಚಿಕ್ಕಮಕ್ಕಳು. ನಮ್ಮ ಅಸ್ಮಿತೆಯನ್ನು ನಾವೇ ಹಾಳುಮಾಡಿಕೊಳ್ಳುತ್ತಿದ್ದೇವೆ ಎನ್ನುವ ಯೋಚನೆಯನ್ನು ಮಾಡದವರು. ಇದನ್ನು ಅರಿತ ಪುರುಷವರ್ಗ ಮತ್ತು ಬಂಡವಾಳಶಾಹಿ ವ್ಯವಸ್ಥೆ ತನ್ನ ಲಾಭಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಇದರಿಂದ ಲಿಂಗಭೇದ ಹೆಚ್ಚಾಗುತ್ತಿದೆ. ಮಹಿಳೆಯರ ಪಾರಂಪರಿಕ ಅಸ್ಮಿತೆ

[illegible]

[illegible]

[illegible]

ವಿಸ್ಮೃತಿಗೆ ಒಳಗಾಗುತ್ತಿದೆ. ಹಾಡುಗಳಲ್ಲಿ ಪ್ರಸ್ತುತ ಸಂದರ್ಭದ ಚಿತ್ರಣಗಳು ಪ್ರವೇಶ ಪಡೆಯುತ್ತಿಲ್ಲ. ಹಾಡುಗಾರ್ತಿಯರಿಗೆ ಈ ಪರಿಕಲ್ಪನೆಯನ್ನು ತಿಳಿಸಿಕೊಡುವ ತರಬೇತಿಗಳು ಅವಶ್ಯಕವಾಗಿವೆ. ಮಹಿಳಾ ಬರಹಗಾರ್ತಿಯರು ಈ ಕ್ಷೇತ್ರಕ್ಕೆ ಬರಬೇಕು. ಈ ಕ್ಷೇತ್ರದಲ್ಲಿರುವ ಮಹಿಳೆಯರು ಬರೆಯುವುದಕ್ಕೆ ಆರಂಭಿಸಬೇಕು. ಸಹಕಾರ ಮತ್ತು ಸಂಘ-ಸಂಸ್ಥೆಗಳು ಕಲೆಗಳ ತರಬೇತಿ ಕೇಂದ್ರಗಳು ಈ ನಿಟ್ಟಿನಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ಆಗ ಇರುವ ವಾಸ್ತವ ಚರಿತ್ರೆಯನ್ನು ತಿಳಿಸುವುದಕ್ಕೆ ಸಾಧ್ಯ.

೧೨. ಹಿರಿಯ ಕಲಾವಿದರ ಜ್ಞಾನವನ್ನು ನಿರಾಕರಿಸುತ್ತಿರುವ ಕಿರಿಯ ಕಲಾವಿದರು

ಡೊಳ್ಳಿನ ಹಾಡುಗಳ ಕ್ಷೇತ್ರಕ್ಕೆ ಆಧುನಿಕ ಸಂವಹನ ಮಾಧ್ಯಮಗಳು ಪ್ರವೇಶ ಪಡೆದು ತನ್ನ ಅಧಿಕಾರವನ್ನು ಭದ್ರಪಡಿಸಿಕೊಂಡು ಅಭಿವ್ಯಕ್ತಿ ವಿಧಾನದ ಮೇಲೆ ರಾಜಕಾರಣ ಮಾಡುತ್ತಿವೆ. ತಮ್ಮ ಅವಶ್ಯಕತೆಗೆ ತಕ್ಕಂತೆ ಹಾಡುಗಳನ್ನು ರೂಪಿಸಿಕೊಳ್ಳುತ್ತಿವೆ. ಈ ರಾಜಕಾರಣವನ್ನು ಅರಿತ ಕೆಲವು ಕಲಾವಿದರು ಪ್ರತಿರೋಧ ಮಾಡಿದರು. ಈ ಪ್ರತಿರೋಧವನ್ನು ಮಾಧ್ಯಮಕ್ಕೆ ಹಾಡುವ ಕಲಾವಿದರು ಅವಮಾನವೆಂದು ಗ್ರಹಿಸಿ ಪಾರಂಪರಿಕ ಹಾಡುಗಾರರನ್ನು ವಿರೋಧಿಸಿದರು. ಸ್ವೀಕಾರ ಮತ್ತು ನಿರಾಕರಣೆಯ ಬಗ್ಗೆ ಈಗಲೂ ಪರ-ವಿರೋಧ ಚರ್ಚೆ ಮುಂದುವರೆದಿದೆ. ಹಿರಿಯ ಕಲಾವಿದರಲ್ಲಿ ತಿರಸ್ಕಾರದ ಮನೋಭಾವನೆ ಕಂಡುಬಂದರೆ ಕಿರಿಯ ಕಲಾವಿದರಲ್ಲಿ ಸ್ವೀಕಾರದ ಮನೋಭಾವನೆ ಹೆಚ್ಚಾಗಿ ಕಂಡುಬರುತ್ತಲಿದೆ.

ಇದರಿಂದ ಮಾಧ್ಯಮಕ್ಕೆ ಹಾಡುವ ಕಲಾವಿದರು ಮಾಧ್ಯಮಕ್ಕೆ ಹಾಡದೇ ಇರುವ ಕಲಾವಿದರು ಎನ್ನುವ ಗುಂಪುಗಳು ಸೃಷ್ಟಿಯಾಗಿವೆ. ಆಧುನಿಕ ಮಾಧ್ಯಮಗಳು ಸೃಷ್ಟಿಸಿರುವ ಕಲಾ ವರ್ಗ ಶ್ರೇಣೀಕರಣ ಇದು ಮಾಧ್ಯಮಕ್ಕೆ ಹಾಡುವ ಕಲಾವಿದರು ಜನಪ್ರಿಯತೆಗೆ ಬಂದು ಆರ್ಥಿಕವಾಗಿ ಸುಧಾರಿಸಿದ್ದಾರೆ. ಇದರಿಂದಾಗಿ ಹಿರಿಯ ಕಲಾವಿದರನ್ನು ಮತ್ತು ಅವರ ಪಾರಂಪರಿಕ ಜ್ಞಾನವನ್ನು ನಿರಾಕರಣೆ ಮಾಡುವಂತಾಯಿತು. ಹಿರಿಯ ಕಲಾವಿದರು ಜ್ಞಾನರಹಿತ ವ್ಯಕ್ತಿಗಳಂತೆ ಕಾಣಿಸಿದರು. ಇವರ ಹಾಡುಗಳು ಉಪಯೋಗಕ್ಕೆ ಬಾರದಿರುವ ವಸ್ತುಗಳಂತಾದವು. ಹಾಗಾಗಿ ಕಿರಿಯ ಕಲಾವಿದರು ಹಿರಿಯ ಕಲಾವಿದರ ಹತ್ತಿರ ಹಾಡುಗಳನ್ನು ಕಲಿಯುವುದಕ್ಕೆ ಮುಂದೆ ಬರುತ್ತಿಲ್ಲ. ಆದ್ದರಿಂದ ಹಿರಿಯರ ಹಾಡುಗಳು ಪಾರಂಪರಿಕ ಹಾಡುಗಳು ಕಿರಿಯರಿಗೆ ಪ್ರಸರಣವಾಗುತ್ತಿಲ್ಲ. ಪಾರಂಪರಿಕ ಹಾಡುಗಳು ವಿಸ್ಮೃತಿಗೆ ಒಳಗಾಗಿವೆ. ಲಿಖಿತ ಹಾಡುಗಳು, ಲಿಖಿತ ಹಾಡುಗಾರರು ಮುಂಚೂಣಿಯಲ್ಲಿದ್ದಾರೆ. ಇನ್ನೂ ಕೆಲವೇ ಕೆಲವು ವರ್ಷಗಳಲ್ಲಿ ಮೌಖಿಕವಾಗಿ ಹರಿದುಬಂದ ಹಾಡುಗಳು, ಮೌಖಿಕವಾಗಿ ಕಲಿಯುವ ಪರಿಪಾಠ ಕಣ್ಮರೆಯಾಗಬಹುದು.

೧೩. ಕುಲ(ಗೋತ್ರ)ಗಳ ಅಸ್ಮಿತೆಗಾಗಿ ದೇವಾಲಯಗಳ ನಿರ್ಮಾಣ

ಹಾಲುಮತ ಸಮುದಾಯದಲ್ಲಿ ತಮ್ಮ ಆರಾಧ್ಯ ದೈವಗಳ ದೇವಾಲಯಗಳನ್ನು ಕಟ್ಟಿಕೊಳ್ಳುವ ಪದ್ಧತಿ ಪ್ರಾಚೀನವಾದದ್ದು. ಈ ಸಮುದಾಯ ಇತರ ಸಮುದಾಯಗಳಿಗಿಂತ ಭಿನ್ನವಾದ ಉದ್ದೇಶವನ್ನು ಹೊಂದಿದೆ. ಕುಲಕ್ಕೆ ಒಂದು ದೇವಾಲಯ ಇರಬೇಕು ಅನ್ನುವ ಪದ್ಧತಿ ಇದೆ. ಕುಲದ ಪ್ರತಿಯೊಂದು ಧಾರ್ಮಿಕ ಕಾರ್ಯಗಳು ಮತ್ತು ಮನೆಯ ವಿಶೇಷ ಆಚರಣೆಗಳು ಕುಲದೈವಗಳ ಸ್ಥಳಗಳಲ್ಲಿ

ನಡೆಯುತ್ತವೆ. ಕುಲದೈವಕ್ಕೆ ಮೊದಲ ಆದ್ಯತೆ. ಹಾಗಾಗಿ ಪ್ರತಿಯೊಂದು ಕುಲದವರು ನಮಗೆ ಒಂದು ದೇವಾಲಯ ಇರಬೇಕೆಂದು ಬಯಸುತ್ತಿದ್ದಾರೆ. ಎರಡು ದಶಕದಲ್ಲಿ ಈ ಪದ್ಧತಿ ಮತ್ತಷ್ಟು ಹೆಚ್ಚಾಗಿದೆ. ಗ್ರಾಮದಲ್ಲಿರುವ ಅಥವಾ ಸುತ್ತಮುತ್ತ ಗ್ರಾಮಗಳಲ್ಲಿರುವ ಕುಲದ ಹಾಲುಮತಸ್ಥರೆಲ್ಲರು ಸೇರಿ ಹಣವನ್ನು ಕೂಡಿಸಿ ದೇವಾಲಯಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ಈ ವಿಧಾನ ಕಡಿಮೆ. ಕುಲದ ಆರಾಧನೆ ಪರಿಕಲ್ಪನೆ ಅಷ್ಟಾಗಿ ಕಾಣುತ್ತಿಲ್ಲ. ದಕ್ಷಿಣ ಕರ್ನಾಟಕದಲ್ಲಿ ಕುಲದ ಆರಾಧನೆಗೆ ಮೊದಲ ಆದ್ಯತೆ. ಕಂತೆ ಸೇವೆ, ತೋಪು ಜಾತ್ರೆ, ದೊಡ್ಡದೇವರ ಜಾತ್ರೆ, ತೆಂಗಿನಕಾಯಿ ಪವಾಡ ಜಾತ್ರೆ ಮಂತಾದ ಪ್ರಮುಖ ಆಚರಣೆಗಳ ಸಂದರ್ಭದಲ್ಲಿ ಆಯಾ ಕುಲದವರು ಒಂದಾಗಿ ಆಚರಣೆ ಮಾಡುತ್ತಾರೆ. ಸುತ್ತಮುತ್ತಲಿನ ಗ್ರಾಮಗಳಲ್ಲಿ ಹಂಚಿ ಹೋಗಿದ್ದರೂ ಆಚರಣೆಗಾಗಿ ಒಂದಾಗುತ್ತಾರೆ. ಕುಲಸೃಷ್ಟಿ ಮತ್ತು ಆರಾಧ್ಯದೈವಗಳ ಸಾಂಸ್ಕೃತಿಕ ಸಂಬಂಧವನ್ನು ತಿಳಿಸುವ ಕಥನಗಳು ಇವೆ. ಅವುಗಳು ಆಚರಣೆಯ ಸಂದರ್ಭಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಚಿಕ್ಕನಾಯಕನಹಳ್ಳಿ, ಹೊಸದುರ್ಗ, ತುರುವೆಕೆರೆ, ತಿಪಟೂರು, ಅರಸಿಕೆರೆ, ಹೊಳಲ್ಕೆರೆ, ಕಡೂರು, ಚನ್ನರಾಯನಪಟ್ಟಣ, ಶ್ರೀರಂಗಪಟ್ಟಣ, ಕೋಲಾರ, ಮೈಸೂರು ತಾಲ್ಲೂಕುಗಳಲ್ಲಿ ಈ ಪದ್ಧತಿ ಹೆಚ್ಚಾಗಿದೆ. ಒಂದೊಂದು ಗ್ರಾಮದಲ್ಲಿ ಐದು-ಆರು-ಏಳು-ಹತ್ತು-ಹತ್ತಕ್ಕಿಂತ ಹೆಚ್ಚು ಕುಲಗಳು ವಾಸ ಮಾಡುತ್ತಿವೆ. ಗ್ರಾಮದ ಎಲ್ಲಾ ಕುಲದವರಿಗೆ ಒಂದೇ ಆರಾಧ್ಯ ದೈವ ಇರುವುದಿಲ್ಲ. ಬೇರೆ ಬೇರೆ ದೈವಗಳು ಇರುತ್ತವೆ. ಒಂದು ಕುಲಕ್ಕೆ ಓರಗಲ್ಲಮ್ಮ ಕುಲದೇವತೆಯಾದರೆ, ಮತ್ತೊಂದು ಕುಲಕ್ಕೆ ಮಾಯವ್ವ, ಇನ್ನೊಂದು ಕುಲಕ್ಕೆ ಯಲ್ಲಮ್ಮ ಹೀಗೆ ಬೀರಪ್ಪ, ಮೈಲಾರಲಿಂಗ, ಸಿದ್ಧೇಶ್ವರ, ಪಾಂಡುರಂಗ ಕುಲದೈವಗಳಾಗಿವೆ. ಬೀರಪ್ಪ ಕುಲದೈವ ಆಗಿರುವುದು ಹೆಚ್ಚು. ಹಾಲುಮತಸ್ಥರು ಇರುವ ಪ್ರತಿಯೊಂದು ಗ್ರಾಮದಲ್ಲಿ ಬೀರಪ್ಪ ಕುಲದವರು ಇದ್ದಾರೆ. ಕೆಲವೊಂದು ಗ್ರಾಮದಲ್ಲಿ ಮೂರು-ನಾಲ್ಕು ಕುಲದವರು ಬೀರಪ್ಪನ ಆರಾಧಕರು ಇದ್ದಾರೆ. ಪ್ರತಿಯೊಂದು ಕುಲದವರು ಒಂದೊಂದು ಬೀರಪ್ಪ ದೇವಾಲಯವನ್ನು ಕಟ್ಟಿಕೊಂಡಿದ್ದಾರೆ. ಇತರ ಆರಾಧ್ಯ ದೈವಗಳಿಗಿಂತ ಬೀರಪ್ಪನ ದೇವಾಲಯಗಳು ಹೆಚ್ಚಾಗಿವೆ; ಹೆಚ್ಚುತ್ತಲಿವೆ.

೧೪. ಕಾಲದ ಬದ್ಧತೆಯನ್ನು ಮೀರಿದ ಪ್ರದರ್ಶನಗಳು

ಡೊಳ್ಳಿನ ಹಾಡುಗಳು ವರ್ಷದ ಕೆಲವೊಂದು ನಿರ್ದಿಷ್ಟ ಕಾಲ; ಸಂದರ್ಭದಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತಿದ್ದವು. ಈಗ ಕಾಲ ಮತ್ತು ಸಂದರ್ಭದ ಬದ್ಧತೆಯನ್ನು ಮೀರಿವೆ ಮತ್ತು ವರ್ಷದ ಎಲ್ಲಾ ಕಾಲದಲ್ಲೂ ಪ್ರದರ್ಶನಗೊಳ್ಳುತ್ತಿವೆ. ಪ್ರಾಯೋಜಕರು ದೊರೆತಾಗಲೆಲ್ಲ ಪ್ರದರ್ಶನಗಳು ಏರ್ಪಡುತ್ತವೆ. ಹಿಂದೆ ಪ್ರೇಕ್ಷಕರು ದೊರೆತಾಗಲೆಲ್ಲ ಪ್ರದರ್ಶನಗಳು ಏರ್ಪಡುತ್ತಿದ್ದವು. ಪ್ರಾಯೋಜಕತ್ವವನ್ನು ಹುಡುಕಿಕೊಂಡು ಪ್ರದರ್ಶಕರು ಹೋಗುತ್ತಿದ್ದಾರೆ ಅಥವಾ ಪ್ರದರ್ಶಕರನ್ನು ಹುಡುಕಿಕೊಂಡು ಪ್ರಾಯೋಜಕರು ಹೋಗುತ್ತಿದ್ದಾರೆ. ಪ್ರದರ್ಶನಗಳು ಪ್ರದರ್ಶಕರ ಮತ್ತು ಪ್ರಯೋಜಕರ ಕೊಡುಕೊಳ್ಳುವಿಕೆಯ ವಸ್ತುವಾಗಿ ಬಳಕೆ ಆಗುತ್ತಿವೆ. ಹಾಗಾಗಿ ಪ್ರದರ್ಶನ ಎನ್ನುವುದು ಪ್ರಾಯೋಜಕತ್ವದ ಮುಖಾಂತರ ನಡೆಯುವ ಒಂದು ವ್ಯವಸ್ಥೆಯಾಗಿದೆ. ಈ ಮಾತು ಉತ್ತರ ಕರ್ನಾಟಕದಲ್ಲಿರುವ ಹಲವು ಜನಪದ ಗೀತ ಮೇಳಗಳಿಗೆ ಅನ್ವಯ ಆಗುತ್ತದೆ. ಜನಪದ ಪ್ರದರ್ಶನಗಳ ಉದ್ದೇಶಗಳಲ್ಲಾದ

ಬಹುದೊಡ್ಡ ಬದಲಾವಣೆ ಇದು. ಇದನ್ನು 'ಆಧುನಿಕತೆ' ಅಥವಾ 'ಉದಾರತೆ' ತಂದ ಬದಲಾವಣೆಯೆಂದೇ ಕರೆಯಬಹುದು. ಈ ಹಾಡುಗಳಿಗೆ ಕೇಳುಗರೇ ಜೀವಂತಿಕೆ. ಕೇಳುಗರು ಇಲ್ಲದಿದ್ದರೆ ಅಸ್ತಿತ್ವ ಇಲ್ಲ. ಈಗ ಪ್ರದರ್ಶನಗಳ ಸ್ವರೂಪದಲ್ಲಿ ಅನೇಕ ಬದಲಾವಣೆಗಳಾಗಿವೆ. ಹಿಂದೆ ಹೇಳಿದಂತೆ 'ಹಾಡುಗಾರರ' ಮತ್ತು 'ಕೇಳುಗರ' ಸಂಬಂಧ ಮಧ್ಯವರ್ತಿಗಳಿಂದ ಏರ್ಪಡುತ್ತಿದೆ ವಿನಹ ಸಹಜ ಪ್ರದರ್ಶನದಂತೆ ಇಲ್ಲ. ಬಂಡವಾಳಶಾಹಿ ಕಂಪನಿಗಳು ಮತ್ತು ಪ್ರಯೋಜಕರು ಇಲ್ಲಿ ಮಧ್ಯವರ್ತಿಗಳು. ಆಧುನಿಕ ಮಾಧ್ಯಮಗಳು ಈ ವ್ಯವಹಾರಕ್ಕೆ ಬಳಸುವ ಪರಿಕರಗಳು. ಆದರೆ ಕೇಳುಗರೇ ಜೀವಂತಿಕೆ ಅನ್ನುವುದನ್ನು ಮರೆಯುವಂತಿಲ್ಲ. ಗ್ರಾಮಸ್ಥರು ಕಲೆಯನ್ನು ಕೇಳುವುದಕ್ಕೆ ಮಾಡಿಕೊಳ್ಳುವ ಪ್ರಾಯೋಜಕತ್ವಕ್ಕೆ ಮೇಲಿನ ಮಾತುಗಳು ಅನ್ವಯ ಆಗುವುದಿಲ್ಲ.

೧೫. ಗದ್ಯವನ್ನೇ ಉಸಿರಾಗಿಸಿಕೊಳ್ಳುತ್ತಿರುವ ಹಾಡುಗಳು

ಹಾಡುಗಳ ಅಭಿವ್ಯಕ್ತಿ ಗದ್ಯದ ಕಡೆ ವಾಲುತ್ತಿದೆ. ಈ ಶತಮಾನದ ಬೆಳವಣಿಗೆಗಳು ತಂದ ಒತ್ತಡವಿದು. ಈಗ ವೈಚಾರಿಕತೆ ಮತ್ತು ಪ್ರತಿಭಟನಾ ಮನೋಧರ್ಮಗಳು ಗದ್ಯವನ್ನೇ ಹೆಚ್ಚು ಪ್ರಚಾರಕ್ಕೆ ತಂದಿವೆ. ಡೊಳ್ಳಿನ ಹಾಡುಗಳ ಮೇಲೂ ಇದರ ಪರಿಣಾಮ ಆಗಿದೆ. ಇದಕ್ಕೆ ಆಧುನಿಕತೆ ಪರಿಕಲ್ಪನೆಯ ವಾದ-ಪ್ರತಿವಾದ ಪ್ರಮುಖ ಕಾರಣವಾಗಿದೆ. ಪ್ರದರ್ಶನಗಳಲ್ಲಿ ಹಾಡುಗಳಿಂತ ಹೆಚ್ಚಾಗಿ ಮಾತುಗಳೇ ಇರುತ್ತವೆ. ಒಮ್ಮೊಮ್ಮೆ ಪ್ರದರ್ಶನ ಪ್ರಶ್ನೋತ್ತರಗಳ ಸಂಭಾಷಣೆಯಲ್ಲೇ ಕಳೆದು ಹೋಗುತ್ತವೆ. ಆಧುನಿಕ ಮಾಧ್ಯಮಗಳಿಗೆ ಹಾಡುವ ಹಾಡುಗಳಲ್ಲಿ ಗದ್ಯವೇ ಪ್ರಧಾನವಾಗುತ್ತಿದೆ. ಈ ಗದ್ಯದಲ್ಲಿ ಸಮಾಜ ಕಲ್ಯಾಣಕ್ಕಿಂತ ಹೆಚ್ಚಾಗಿ ವೈಯಕ್ತಿಕ ಪ್ರತಿಷ್ಟೆ ಮತ್ತು ಹಣಗಳಿಸುವ ತಂತ್ರಗಾರಿಕೆ ಪ್ರಧಾನವಾಗಿರುತ್ತದೆ.

೮.೨. ಅಧ್ಯಯನ ಸಂದರ್ಭದಲ್ಲಿ ಎದುರಾದ ತೊಡುಕು ಮತ್ತು ಬಿಡಿಸಿಕೊಂಡ ಬಗೆ

೧. ಪ್ರಸ್ತುತ ಸಂದರ್ಭದಲ್ಲಿ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸುವುದು ಮತ್ತು ಹಾಡುಗಾರರನ್ನು ಸಂದರ್ಶಿಸುವುದು ಕಷ್ಟದ ಕೆಲಸವೇ ಸರಿ. ಇದು ಒಬ್ಬ ಸಶೋಧಕನಿಂದ ಸಂಶೋಧನೆಯ ಅವಧಿಯೊಳಗಡೆ ಆಗದೇ ಇರುವ ಕೆಲಸ. ಜೊತೆಗೆ ಆರಂಭದಲ್ಲಿ ಕಲಾವಿದರ ಆಯ್ಕೆಯ ಗೊಂದಲ ತೀವ್ರವಾಗಿ ಕಾಡಿತು. ಇತರ ಕನ್ನಡ ಜನಪದ ಗೀತೆಗಳ ಹಾಡುಗಾರರಿಗೆ ಹೋಲಿಸಿಕೊಂಡರೆ ಡೊಳ್ಳಿನ ಹಾಡುಗಳ ತಂಡಗಳು ಹೆಚ್ಚಾಗಿವೆ. ಬಿಜಾಪುರ, ಬೆಳಗಾಂ ಜಿಲ್ಲೆಗಳಲ್ಲಿ ಹಾಡುಗಳ ತಂಡಗಳು ಇರದೆ ಇರುವ ಗ್ರಾಮಗಳು ಸಿಗುವುದು ಅಪರೂಪ. ಈ ಮಾತು ಅತಿಶಯೋಕ್ತಿಯಾದರೂ ವಾಸ್ತವ. ಒಂದೊಂದು ಗ್ರಾಮದಲ್ಲಿ ಎರಡು, ಮೂರು ನಾಲ್ಕು ತಂಡಗಳು ಇವೆ. ಹಾಗಾಗಿ ಯಾವ ತಂಡಗಳನ್ನು ಆಯ್ಕೆ ಮಾಡಿಕೊಂಡು ಹಾಡುಗಳನ್ನು ಹಾಡಿಸಬೇಕು ಅನ್ನುವ ಗೊಂದಲ ಎದುರಾಯಿತು. ನಂತರದಲ್ಲಿ ಎದುರಾದ ಸಮಸ್ಯೆಯೆಂದರೆ ಹಾಡುಗಳನ್ನು ಹಾಡುವುದಕ್ಕೆ ನಿರಾಕರಿಸುತ್ತಿದ್ದ ಮತ್ತು ಹಾಡುವುದಕ್ಕೆ ಒಪ್ಪಿದ ನಂತರವೂ ಅವರಲ್ಲಿ ಕಾಡುತ್ತಿದ್ದ ಅನುಮಾನಗಳು ಹಾಡುಗಳನ್ನು ಹಾಡುತ್ತಿದ್ದ ಸಂದರ್ಭದಲ್ಲಿ ಧ್ವನಿಮುದ್ರಣ ಮಾಡಿಕೊಳ್ಳುತ್ತಿರುವುದನ್ನು ನೋಡಿ, ಹಾಡುವುದನ್ನು ನಿಲ್ಲಿಸಿ 'ತಮ್ಮ ನಮ್ಮ ಹಾಡುಗಳನ್ನು ಮಾರಾಟ ಮಾಡಿಕೊಳ್ಳುವುದಿಲ್ಲವಲ್ಲ ತಾನೆ?'. ನಾವು ನಮ್ಮ ಸಮುದಾಯಕ್ಕೆ

ಉಪಯೋಗ ಆಗುತ್ತಿದೆ ಅನ್ನುವ ಕಾರಣಕ್ಕೆ ಹಾಡುತ್ತಿದ್ದೇವೆ. ನಿಮ್ಮ ವಿಶ್ವಾಸ ನಮ್ಮ ಮೇಲೆ ಇರಲಿ' ಎನ್ನುತ್ತಿದ್ದರು. ಶಹಾಪುರ ತಾಲೂಕು 'ರಜ' ಗ್ರಾಮದ ಹಾಡುಗಾರರು ಹಾಡಲು ನಿರಾಕರಿಸಿದರು. ಪಕ್ಕದ ಗಂಗನಾಳ್ ಗ್ರಾಮದ ನನ್ನ ಮಿತ್ರನ ಸಹೋದರ 'ಸಕ್ರಪ್ಪ ಕಿಲಾರಿ' ನಿಮ್ಮ ಹಾಡುಗಳಿಗೆ ನಾನು ಜವಾಬ್ದಾರಿ ಎಂದು ಹೇಳುವವರೆಗೂ ಹಾಡುಗಳನ್ನು ಹಾಡುವುದಕ್ಕೆ ಆರಂಭಿಸಲೇ ಇಲ್ಲ. ಇಂಥ ಹಲವು ಸಮಸ್ಯೆಗಳ ಕಲಾವಿದರ ಜೊತೆ ಸಂಬಂಧ ಬೆಳೆಸುವ ಸಂದರ್ಭಗಳಲ್ಲಿ ಎದುರಾದವು. ಇವುಗಳಿಗೆ ಪ್ರಮುಖ ಕಾರಣವೆಂದರೆ ಹಾಡುಗಳನ್ನು ರೆಕಾರ್ಡ್ ಮಾಡಿಕೊಂಡು ಹೋಗಿ ಕ್ಯಾಸೆಟ್ ತಯಾರು ಮಾಡಿ ಮಾರಾಟ ಮಾಡಿಕೊಳ್ಳುತ್ತಾರೆ ಎನ್ನುವ ಆತಂಕ.

ಕಲಾವಿದರು ಈ ರೀತಿ ಅನುಮಾನದ ದೃಷ್ಟಿಯಿಂದ ನೋಡುತ್ತಿರುವುದು ತಪ್ಪಲ್ಲ. ಪ್ರಸ್ತುತದ ಸಂದರ್ಭ ಇವರನ್ನು ಹೀಗೆ ಅನುಮಾನ ಪಡುವಂತೆ ಮಾಡಿದೆ. ಈ ಕ್ಷೇತ್ರಕ್ಕೆ ಕ್ಯಾಸೆಟ್/ಸಿ.ಡಿ/ಡಿವಿಡಿ ಮಾಡುವ ಬಂಡವಾಳಶಾಹಿ ಕಂಪೆನಿಗಳು ಮುತ್ತಿಗೆ ಹಾಕಿವೆ. ಹಲವು ಕಂಪನಿಗಳು ಹಾಡುಗಳನ್ನು ಹಾಡಿಸಿಕೊಂಡು ಕ್ಯಾಸೆಟ್ ಮಾಡಿ ಮಾರಾಟ ಮಾಡಿಕೊಂಡರೂ ಹಾಡುಗಾರರಿಗೆ ಹಣ ಕೊಟ್ಟಿಲ್ಲ. ಈ ತಂಡದವರು ಹಾಡಿದ; ರಚಿಸಿದ ಸಾಹಿತ್ಯವನ್ನು ಹಾಡಿಸಿಕೊಂಡು ಹೋದ ನಂತರ ಮತ್ತೊಬ್ಬ (ತಮಗೆ ಬೇಕಾದ ಹಾಡುಗಾರನಿಂದ) ಹಾಡುಗಾರನಿಂದ ಹಾಡಿಸಿ ಹೆಸರುಗಳನ್ನು ಬದಲಾಯಿಸಿ ಕ್ಯಾಸೆಟ್‌ಗಳನ್ನು ಮಾರಾಟಕ್ಕೆ ಬಿಡುತ್ತಾರೆಂದು ಕಲಾವಿದರು ಹೇಳುತ್ತಾರೆ. ಈ ಬಗೆಯ ಅನೇಕ ವಂಚನೆಗಳಿಗೆ ಒಳಗಾಗುತ್ತಿರುವ ಕಲಾವಿದರು ಕ್ಯಾಮರ, ರೆಕಾರ್ಡ್, ವಿಡಿಯಾಕ್ಯಾಮ್; ಹ್ಯಾಂಡಿಕ್ಯಾಮ್ ಹಿಡಿದು ಹೋದ ಸಂಶೋಧಕರನ್ನು ಕ್ಯಾಸೆಟ್ ಕಂಪನಿಯವರಂತೆ ಅನುಮಾನಿಸುತ್ತಿರುವುದರಲ್ಲಿ ಅರ್ಥವು ಇದೆ. ಇದು ತಪ್ಪಲ್ಲ. ಇವರಿಗೆ ಸಂಶೋಧನೆ ಉದ್ದೇಶ ಮತ್ತು ಸಂಶೋಧಕ ವರ್ಗದ ಪರಿಚಯ ಇಲ್ಲದಿರುವುದು ಇದಕ್ಕೆ ಪ್ರಮುಖ ಕಾರಣ. ನಮ್ಮನ್ನು, ನಮ್ಮ ಅಭಿವ್ಯಕ್ತಿಯನ್ನು ಅಧ್ಯಯನ ಮಾಡುವ ಜನರಿದ್ದಾರೆನ್ನುವ ಸುದ್ದಿಯನ್ನೂ ಅವರು ನೋಡಿರುವುದಿಲ್ಲ ಮತ್ತು ಕೇಳಿರುವುದಿಲ್ಲ. ಇದು ಅಧ್ಯಯನಕಾರರು ಇಂತಹ ಕ್ಷೇತ್ರಗಳಿಂದ ಉಳಿದಿರುವ ಅಂತರವನ್ನು ತಿಳಿಸುತ್ತದೆ. ಕೆಲವು ಕಡೆ ಅಧ್ಯಯನಕಾರರು ನಿಮ್ಮ ಹಾಡುಗಳನ್ನು ಮುದ್ರಿಸುತ್ತೇವೆ ಎಂದು ಮೋಸಗೊಳಿಸಿ, ಹಾಡುಗಳನ್ನು ತೆಗೆದುಕೊಂಡು ಹೋದ ಉದಾಹರಣೆಗಳು ಕ್ಷೇತ್ರದಲ್ಲಿ ಸಿಕ್ಕವು. ಹೀಗೆ ಹಾಡುಗಾರರ ಮೇಲೆ ಹಲವು ವ್ಯವಸ್ಥೆಗಳಿಂದಲೂ ಅನ್ಯಾಯಗಳು ಆಗುತ್ತಿವೆ. ಇದರಿಂದ ಕಲಾವಿದರು ನಿರ್ಬಂಧಗಳನ್ನು ಸೃಷ್ಟಿಸಿಕೊಳ್ಳಬೇಕಾದ ಅನಿವಾರ್ಯತೆಯೂ ಸೃಷ್ಟಿಯಾಗಿದೆ.

ಇದರಿಂದಾಗಿ ಕಲಾವಿದರಲ್ಲಿ ಹಲವು ಗೊಂದಲಗಳು ಆರಂಭವಾಗಿವೆ. ಹಾಡುಗಳು ಪ್ರಕಟವಾದರೆ ನಮಗೆ ಬೇಡಿಕೆ ಇರುವುದಿಲ್ಲ. ನಮ್ಮ ಹಾಡುಗಳನ್ನು ಎಲ್ಲರೂ ಕಲಿತು ಬಿಡುತ್ತಾರೆ. ಆಗ ನಮ್ಮನ್ನು ಯಾರು ಪ್ರದರ್ಶನಕ್ಕೆ ಹಾಡುಗಳನ್ನು ಕಲಿಸುವುದಕ್ಕೆ ಕರೆಯುವುದಿಲ್ಲ. ನಮಗಿರುವ ಇಮೇಜ್ ಹಾಳಾಗಿ ಹೋಗುತ್ತದೆ ಎನ್ನುವ ಆತಂಕಗಳು ಪ್ರಮುಖವಾಗಿ ಕಾಡುತ್ತಿವೆ. ಕಲಾವಿದರಲ್ಲಿ ಸೃಷ್ಟಿಯಾಗಿರುವ ಈ ಆತಂಕವನ್ನು ಕುರಿತು ಅಧ್ಯಯನ ಮಾಡಬೇಕು. ಪ್ರದರ್ಶನಗಳ ಸಂದರ್ಭಗಳಲ್ಲಿ ಇಲ್ಲದ ಆತಂಕ ಇಲ್ಯಾಕೆ ಅನ್ನುವುದು ಪ್ರಮುಖ ಪ್ರಶ್ನೆಯಾಗಿ ಕಾಡುತ್ತಿದೆ. ಇದು ಆಧುನಿಕ ಮಾಧ್ಯಮಗಳು ಅಥವಾ

ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿಸಿದ ಭಯವೇ? ಇದರಿಂದ ಜನಪದರಲ್ಲಿ ಸಹಜ ಕಲಿಕೆ ವಿಸ್ಮೃತಿ ಆಗಿರುವಂತೆ ಕಾಣುತ್ತಿದೆ.

ಜೊತೆಗೆ ಪ್ರಸ್ತುತದಲ್ಲಿ ತಂಡಗಳು ಹಾಡುಗಳ ಪ್ರದರ್ಶನಕ್ಕೆ ದುಬಾರಿ ಸಂಭಾವನೆಯನ್ನು ಪಡೆಯುತ್ತಿವೆ. ಒಂದು ಪ್ರದರ್ಶನಕ್ಕೆ ಒಂದೊಂದು ತಂಡ ಆರು; ಏಳು ಸಾವಿರ ರೂಪಾಯಿ ಪಡೆಯುತ್ತಿವೆ. ಒಂದು ಪ್ರದರ್ಶನಕ್ಕೆ ಎರಡು ತಂಡಗಳು ಬೇಕು. ಹಾಗಾಗಿ ಒಂದು ರಾತ್ರಿ ಪ್ರದರ್ಶನಕ್ಕೆ ೧೫ ರಿಂದ ೧೭ ಸಾವಿರ ಖರ್ಚು ಬರುತ್ತದೆ. ಈ ವಾತಾವರಣದಲ್ಲಿರುವ ಹಾಡುಗಾರರು ಅಧ್ಯಯನಕಾರರನ್ನು ಅದೇ ರೀತಿಯಲ್ಲಿ ನೀರಿಕ್ಷೆ ಮಾಡುತ್ತಿದ್ದಾರೆ. ಹಾಡುತ್ತೇವೆ ಎಷ್ಟು ಕೊಡುತ್ತೀರೆಂದು ಕೇಳುತ್ತಾರೆ. ಪ್ರತಿಯೊಂದು ತಂಡವು ಇದೇ ರೀತಿಯಲ್ಲಿ ಇದೆ ಎಂದರ್ಥವಲ್ಲ. ಹೆಚ್ಚು ತಂಡಗಳು ಈ ಭಾವನೆಯಲ್ಲಿವೆ ಎನ್ನುವುದನ್ನು ಮರೆಯುವಂತಿಲ್ಲ.

ಹಾಗಾಗಿ ಈ ಎಲ್ಲಾ ಸಾಹಸಗಳನ್ನು ಕೈಬಿಟ್ಟು ಪ್ರದರ್ಶನಗಳಲ್ಲಿಯೇ ಹಾಡುಗಳನ್ನು ಸಂಗ್ರಹಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಕಲಾವಿದರು ಇದಕ್ಕೆ ಸಹಕಾರ ಕೊಟ್ಟರು. ಕೆಲವು ತಂಡದವರು ತಮ್ಮ ವಾಹನದಲ್ಲಿಯೇ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ವಾಪಸ್ ಕರೆದುಕೊಡು ಬರುತ್ತಿದ್ದರು. ವೈಯಕ್ತಿಕವಾಗಿ ಹಾಡುಗಳನ್ನು ಹೇಳಿರೆಂದು ಕೇಳಿದ ಸಂದರ್ಭಗಳಲ್ಲಿ ಇರುತ್ತಿದ್ದ ಆತಂಕ ಇಲ್ಲಿ ಕಾಣಿಸುತ್ತಿರಲಿಲ್ಲ. ಇದು ಪಾರಂಪರಿಕ ಸಂವಹನ ಪ್ರದರ್ಶನ ವಿಧಾನಕ್ಕೂ ಆಧುನಿಕ ಸಂವಹನ ಮಾಧ್ಯಮಗಳ ಪ್ರದರ್ಶನ ವಿಧಾನಕ್ಕೂ ಇರುವ ವ್ಯತ್ಯಾಸವನ್ನು ತಿಳಿಸುತ್ತದೆ. ಆದರೂ ಹತ್ತಾರು ಪ್ರದರ್ಶನಗಳಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿ ಹಾಡುಗಳನ್ನು ಸಂಗ್ರಹಿಸ ಲಾಯಿತು. ಸಂಗ್ರಹಿಸಿದ ಹಾಡುಗಳನ್ನು ಕೇಳಿಸಿಕೊಳ್ಳುವುದೇ ಕಷ್ಟವಾಗಿತ್ತು. ಸಾಹಿತ್ಯವಂತು ತಿಳಿಯುತ್ತಿರಲಿಲ್ಲ. ವಾದ್ಯಗಳ ಅರ್ಭಟ, ಹಾಡುಗಾರನ ಕಿರುಚುವಿಕೆ, ಹಿಮ್ಮೇಳಕರ ಸಹನುಡಿಗಳ ಅಥವಾ ಬೆಂಬಲಿತ ನುಡಿಗಳ ಕೇಕೆ, ಕೇಳುಗರ ಕೇಕೆ-ಸಿಳ್ಳೆಗಳು ಮುಂತಾದ ಪ್ರದರ್ಶನಗಳ ಸಹಜ ಲಕ್ಷಣಗಳು ಸಾಹಿತ್ಯವನ್ನು ತಿಂದು ಹಾಕಿದ್ದವು. ಇಲ್ಲಿ ಸಂಶೋಧಕರು ಈ ಗುಣಗಳು ಕಾಣಿಸಿಕೊಳ್ಳದೆ ಸಾಹಿತ್ಯ ಕೇಳುವಂತಿರಬೇಕು ಅನ್ನುವುದನ್ನು ನಿರೀಕ್ಷೆ ಮಾಡುವುದು ತಪ್ಪು. ಆರಾಧನೆಯ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳು ಬೇರೆ. ಇಂತಹ ತೊಂದರೆಗಳಲ್ಲಿ ಲಿಪ್ಯಾಂತರಗೊಳಿಸಿ ಸಂಶೋಧನೆಗೆ ಬಳಸಿಕೊಳ್ಳುವುದಕ್ಕೆ ಭಯ ಕಾಡುತ್ತಿತ್ತು. ಬರಹಕ್ಕೆ ತಂದು ದೋಷಗಳನ್ನು ಸರಿಪಡಿಸಿಕೊಳ್ಳುವುದೆಂದರೆ ಕಲಾವಿದರು ಒಪ್ಪುತ್ತಿರಲಿಲ್ಲ. ಮತ್ತದೆ ಬಂಡವಾಳಶಾಹಿ ಆತಂಕವಾದಿತನ ಪೆಡಂಭೂತ ದೈತ್ಯಕಾರವಾಗಿ ಎದುರಿಗೆ ನಿಲ್ಲುತ್ತಿತ್ತು.

ಹಾಗಾಗಿ ಈ ಸಂಶೋಧನೆಗೆ ಸಂಗ್ರಹಿತ ಹಾಡುಗಳಿಗೆ ಹೆಚ್ಚು ಬದ್ಧವಾಗಬೇಕಾಯಿತು. ಪ್ರಸ್ತುತ ಸಂದರ್ಭವನ್ನು ತಿಳಿದುಕೊಳ್ಳುವುದಕ್ಕೆ ಕ್ಯಾಸೆಟ್, ಸಿ.ಡಿ, ಡಿವಿಡಿಗಳನ್ನು ಆಶ್ರಯಿಸಬೇಕಾಯಿತು.

೨. ಹಾಡುಗಳ ತೌಲನಿಕ ಅಧ್ಯಯನಕ್ಕಾಗಿ ಸಾಂಸ್ಕೃತಿಕ ವೀರರ ಜಾತ್ರೆಗಳನ್ನು ನೋಡುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶಗಳಲ್ಲಿ ಇದು ಒಂದು. ಉತ್ತರ ಕರ್ನಾಟಕದಲ್ಲಿ ಈ ಸಾಂಸ್ಕೃತಿಕ ವೀರರ ಜಾತ್ರೆಗಳು ಹೆಚ್ಚಾಗಿ ಒಂದೇ ದಿನ

ನಡೆಯುತ್ತಿರುತ್ತವೆ. ಉದಾಹರಣೆಗೆ ದೀಪಾವಳಿ ಅಮವಾಸೆ ಸಂದರ್ಭದಲ್ಲಿ ಮಾಳಿಂಗರಾಯನ ಜಾತ್ರೆ, ಪಟ್ಟಣಕೊಡಲಿ ಇಟ್ಟಪ್ಪನ ಜಾತ್ರೆ, ಕ್ಯಾಣಗನೂರು ಕಲಿಸಿದ್ದನ ಜಾತ್ರೆ, ಅಲೆಮಾರಿ ಕುರುಬರು ತಾವು ನೆಲೆಸಿದ ಸ್ಥಳದಲ್ಲಿ ಮಾಡುವ ಲಕ್ಷ್ಮಿಪೂಜೆ ಹೀಗೆ ಪಟ್ಟಿ ಮಾಡುತ್ತ ಹೋದರೆ ದೊಡ್ಡದೊಂದು ಗ್ರಂಥಸೂಚಿ ಆಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಕಾಡಿದ ಸಮಸ್ಯೆ ಬೇರೆ. ಇಲ್ಲಿ ಪ್ರಮುಖ ಜಾತ್ರೆಗಳನ್ನು ಹನ್ನೆರಡು ವರ್ಷಕ್ಕೊಮ್ಮೆ ಮಾಡುತ್ತಾರೆ. ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಇಂತಹ ಜಾತ್ರೆಗಳು ಗಮನಕ್ಕೆ ಬರಲಿಲ್ಲ. ಕಂತೆ ಸೇವೆಯಂತಹ ಆಚರಣೆಯನ್ನು ನೋಡುವುದಕ್ಕೆ ಸಿಗಲೇ ಇಲ್ಲ. ಹಾಗಾಗಿ ಕೆಲವು ಪ್ರಮುಖ ಆಚರಣೆಗಳನ್ನು ನೇರವಾಗಿ ನೋಡುವುದಕ್ಕೆ ಆಗಲಿಲ್ಲ. ವಕ್ತೃಗಳ ಮಾಹಿತಿಗೆ ಬದ್ಧರಾಗಬೇಕಾಯಿತು. ಇದು ಸಂಶೋಧನ ಅವಧಿಯ ಮಿತಿಯೂ ಹೌದು.

೩. ಅಧ್ಯಯನದಲ್ಲಿ ಒಂದೇ ಬಗೆಯ ಆಲೋಚನೆಗಳನ್ನು ಮತ್ತೆ ಮತ್ತೆ ಬಳಸಲೇ ಬೇಕಾಯಿತು. ಉದಾಹರಣೆ : ಶಿವವನ್ನು ತೃಪ್ತಿಗೊಳಿಸುವುದಕ್ಕಾಗಿಯೇ ಡೊಳ್ಳಿನ ಹಾಡುಗಳನ್ನು ಹಾಡುತ್ತಾರೆ ಎನ್ನುವುದು. ಸಾಂಸ್ಕೃತಿಕ ವೀರರ ವಿಶ್ಲೇಷಣೆಗಳಲ್ಲಿ ಒಂದೇ ತೆರನಾದ ಆಲೋಚನೆಗಳು ಹೆಚ್ಚು ವೀರರಿಗೆ ಬಳಕೆ ಆಗಿವೆ. ಉದಾಹರಣೆ : ಸ್ಥಳೀಯ ನೆಲೆಸುಗಾರ ದನಗಾರರ ಸಂಹಾರ, ಸಪ್ತಮಾತೃಕೆಯರ ಸಂಬಂಧ ಮುಂತಾದವು. ಇದನ್ನು ಪುನಾರಾರ್ವತನೆ ಅಥವಾ ಅಧ್ಯಯನದ ಮಿತಿ ಎಂದು ಕರೆಯುವಂತಿಲ್ಲ. ಇದು ಸಾಂದರ್ಭಿಕ ಬಳಕೆ. ಈ ನಾಯಕರೆಲ್ಲರೂ ಪಶುಪಾಲಕರು ಮತ್ತು ಮಾತೃಪ್ರಧಾನ ವ್ಯವಸ್ಥೆಯ ಪ್ರೇರಿತರು ಆಗಿರುವುದರಿಂದ ಅವುಗಳ ಉಲ್ಲೇಖ ಅನಿವಾರ್ಯ. ಇನ್ನೊಂದು ಸಮಸ್ಯೆಯನ್ನು ಹೇಳಲೇ ಬೇಕು. ಒಂದೇ ಬಗೆಯ ಹಾಡುಗಳ ಸಾಲುಗಳು ಮತ್ತೆ ಮತ್ತೆ ಬಳಕೆ ಆಗಿವೆ. ಉದಾಹರಣೆ : ಜೀವನ ಜೋಕಾಲಿ ಭಾಗ-೬, ಡೊಳ್ಳಿನ ಹಾಡು' ಸಂಗ್ರಹದಲ್ಲಿ ಸಿಗುವ 'ಬಲ್ಲವರ ಸ್ತುತಿ' ಹಾಡು. ಇದನ್ನು ಪುನಾರಾವರ್ತನೆಯಲ್ಲ, ಆಯಾ ಸಂದರ್ಭದ ವಿಶ್ಲೇಷಣೆ ಮತ್ತು ಒಂದು ಹಾಡನ್ನು ನೋಡುವ ವಿಭಿನ್ನ ಆಯಾಮಗಳು ಹೌದು. ಈ ಉದಾಹರಣೆಗಳು ಪ್ರಸ್ತುತ ಅಧ್ಯಯನದ ಹಲವು ವಿಶ್ಲೇಷಣೆಗಳಿಗೆ ಅನ್ವಯ ಆಗುತ್ತದೆ. ಹೆಚ್ಚು ಸಂಗ್ರಹಗಳಾದರೆ ಮತ್ತು ಅಧ್ಯಯನಗಳಾದರೆ ಇಂತಹ ಸಮಸ್ಯೆಗಳಿಂದ ಬಿಡಿಸಿಕೊಳ್ಳಬಹುದೇನೋ?

೪. ಕಲಾವಿದರ ಮತ್ತು ತಂಡಗಳ ವಿವರಗಳನ್ನು ಕೊಡಬೇಕೂ ಬೇಡವೋ ಎನ್ನುವ ಆತಂಕ ಎದುರಾಯಿತು. ಮುಖ್ಯವಾಗಿ ಸಾಂಸ್ಕೃತಿಕ ಅಧ್ಯಯನ ಆಗಿರುವುದರಿಂದ ಅವರ ಅನುಭವಗಳನ್ನು ಮಾತ್ರ ಬಳಕೆ ಮಾಡಿಕೊಳ್ಳಲಾಯಿತು. ಕಲಾವಿದರ ಮತ್ತು ತಂಡಗಳ ವಿವರಗಳನ್ನು ಕೊಡುತ್ತಾ ಹೋಗಿದ್ದರೆ ಈ ಸಂಶೋಧನೆ ಕಲಾವಿದರ ಮತ್ತು ತಂಡಗಳ ವಿವರಣಾತ್ಮಕ ಸೂಚಿ ಆಗಿ ಬಿಡುವ ಅಪಾಯವು ಈ ಅಧ್ಯಯನಕ್ಕೆ ಇತ್ತು. ಹಾಗಾಗಿ ಕಲಾ ತಂಡಗಳ ಪರಿಚಯ ಕೊಟ್ಟಿಲ್ಲ.

ಇಲ್ಲಿನ ಎಲ್ಲಾ ಅಧ್ಯಯನಗಳಿಗೆ ಸಮಾನ ನ್ಯಾಯ ಒದಗಿಸಲು ಸಾಧ್ಯವಾಗಿಲ್ಲ. ಮಹಿಳಾ ದೃಷ್ಟಿಕೋನ, ಭಾಷಾ ದೃಷ್ಟಿಕೋನ, ಕಲಾವಿದರ ಆತ್ಮಕಥನಗಳ ದೃಷ್ಟಿಕೋನ ಮುಂತಾದವುಗಳು ಅಧ್ಯಯನ ಶಿಸ್ತುಗಳಲ್ಲಿ ಬಹುಮುಖ್ಯವಾಗಿ ಚರ್ಚಿಸುವುದಕ್ಕೆ ಸಾಧ್ಯವಾಗಿಲ್ಲ. ಸಂಶೋಧಕರಿಗೆ ಅರಿವಾದಂತೆ ಈ ಮಹಾಪ್ರಬಂಧದ ಸಾಂಸ್ಕೃತಿಕ ಅನನ್ಯತೆ, ಲೋಕದೃಷ್ಟಿ, ಆಧುನಿಕತೆ ಅಧ್ಯಾಯಗಳು

ದುರ್ಬಲ ಅಧ್ಯಾಯಗಳಂತೆ ಕಂಡಿವೆ. ಇವುಗಳು ಇನ್ನೂ ಬಹುಮುಖ್ಯವಾದ ವಿಶ್ಲೇಷಣೆಗಳನ್ನು ಮತ್ತು ಆಕರಗಳನ್ನು ಬೇಡುತ್ತಿವೆ. ಕೆಲವು ಪುನರಾವರ್ತನೆಯ ಕಾರಣಕ್ಕೆ ಪ್ರಮುಖವೆನಿಸುವ ತಾತ್ವಿಕ ಚರ್ಚೆ ಮಾತ್ರ ಈ ಅಧ್ಯಾಯಗಳಲ್ಲಿ ಸಾಧ್ಯವಾಗಿದೆ.

ಮುಖ್ಯವಾಗಿ ಸಂಶೋಧಕರಿಗೆ ಎದುರಾದ ತೊಡಕು ಮತ್ತು ಅದನ್ನು ಬಿಡಿಸಿಕೊಂಡ ವಿಧಾನದ ಸ್ಥೂಲ ಚಿತ್ರಣವನ್ನು ಇಲ್ಲಿ ಕೊಡಲಾಗಿದೆ. ಒಂದು ಸಂಶೋಧನೆಯ ಮಿತಿಯನ್ನು ಅಧ್ಯಯನಕಾರರೇ ಕಂಡುಕೊಳ್ಳುವುದು, ಪ್ರಶ್ನೆಗಳನ್ನು ಎತ್ತಿಕೊಳ್ಳುವುದು, ಅವುಗಳಿಗೆ ಉತ್ತರಿಸಿಕೊಳ್ಳುವುದು ಮತ್ತು ಸಾಧ್ಯತೆಗಳನ್ನು ಹೇಳುವುದು ಮುಖ್ಯವಾದ ಮಾದರಿ ಎನ್ನುವುದು ಸಂಶೋಧಕರ ನಂಬಿಕೆ. ಹಾಗಾಗಿ ಈ ಭಾಗವನ್ನು ಸೃಷ್ಟಿಸಿಕೊಳ್ಳಲಾಗಿದೆ.

೮.೩. ಅಧ್ಯಯನಗಳ ಹೊಸ ಸಾಧ್ಯತೆಗಳು

ಡೊಳ್ಳಿನ ಹಾಡುಗಳ ಸೂಕ್ಷ್ಮ ಅವಲೋಕನ ಈ ಸಶೋಧನೆಯಿಂದ ಲಭ್ಯವಾಯಿತು. ಇದರಿಂದಾಗಿ ಡೊಳ್ಳಿನ ಹಾಡುಗಳನ್ನು ಕುರಿತು ಅಧ್ಯಯನ ಮಿತಿ, ಶಕ್ತಿ ಮತ್ತು ಪಡೆದುಕೊಳ್ಳಬಹುದಾದ ಹೊಸ ಚಲನೆಯ ಸುಳಿವುಗಳು ಸಿಕ್ಕವು. ಹಾಗಾಗಿ ಡೊಳ್ಳಿನ ಹಾಡುಗಳ ಅಧ್ಯಯನಕ್ಕಾಗಿ ಹೊಸ ಸಾಧ್ಯತೆಗಳನ್ನು ಈ ಸಂಶೋಧನೆಯ ನೆರವಿನಿಂದ ಸೂಚಿಸಬಹುದು. ಈ ಸೂಚನೆಗಳು ಒಂದು ಸಾಧ್ಯತೆಯನ್ನು ಹೇಳುತ್ತವೆಯೇ ಹೊರತು ಸಾರ್ವತ್ರಿಕ ಒಪ್ಪಿಗೆಯನ್ನು ಸೂಚಿಸವುದಿಲ್ಲ. ಬಹುಮುಖ್ಯವಾಗಿ ಬೇರೆ ಬೇರೆ ಅಧ್ಯಯನ ಶಿಸ್ತುಗಳಲ್ಲಿ ಕೆಲಸ ಮಾಡಿದ ವಿದ್ವಾಂಸರು ಈ ಹಾಡುಗಳ ಅಧ್ಯಯನದ ತಾತ್ವಿಕತೆ ಕುರಿತು ಯೋಚಿಸಿದರೆ ಇಲ್ಲಿ ಹೇಳುವ ಸಾಧ್ಯತೆಗಳಿಗಿಂತ ಭಿನ್ನವಾದ ಅಂಶಗಳನ್ನು ಹೇಳಲಿಕ್ಕೆ ಸಾಧ್ಯ. ಅಂದರೆ ಅರ್ಥಶಾಸ್ತ್ರ, ಪುರಾತತ್ವ, ಇತಿಹಾಸ, ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ, ಭಾಷಾಶಾಸ್ತ್ರ ಬೇರೆ ಬೇರೆ ಕ್ಷೇತ್ರದವರು ಆಗಮನವಾಗಿ ಭಿನ್ನ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಬೇಕು. ಆಗ ಖಚಿತತೆಯನ್ನು ಕಾಣಲಿಕ್ಕೆ ಸಾಧ್ಯ. ಹಾಗಾಗಿ ಇಲ್ಲಿ ಸೂಚಿಸಬಹುದಾದ ಡೊಳ್ಳಿನ ಹಾಡುಗಳ ಅಧ್ಯಯನಗಳ ಸಾಧ್ಯತೆಗಳು. ಈ ನೆಲೆಯಲ್ಲಿ ಉಪಯುಕ್ತವಾಗಬಹುದೆಂದು ಸಂಶೋಧಕರ ನಂಬಿಕೆ.

೧. ಡೊಳ್ಳಿನ ಹಾಡುಗಳ ಉಲ್ಲೇಖಿತ ಸಾಂಸ್ಕೃತಿಕ ವೀರರ ಆಚರಣೆ ಲೋಕವನ್ನು ಗುರುತಿಸುವುದಕ್ಕೆ ಕರ್ನಾಟಕ-ಮಹಾರಾಷ್ಟ್ರ-ಆಂಧ್ರಪ್ರದೇಶ ಬೇರೆ ಬೇರೆ ಭಾಗಗಳಲ್ಲಿ ನಡೆಯುವ ಆಚರಣೆ-ಉತ್ಸವಗಳಿಗೆ ಭೇಟಿ ಕೊಡಲಾಯಿತು. ಸಾಂಸ್ಕೃತಿಕ ವೀರರ ಆಚರಣೆಗಳಲ್ಲಿ ಪ್ರಾದೇಶಿಕ ಮತ್ತು ಸಾಮುದಾಯಿಕ ಭಿನ್ನತೆಗಳಿವೆ. ಇವುಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಪ್ರಮುಖವಾಗಿ ದಕ್ಷಿಣ ಕರ್ನಾಟಕದಲ್ಲಿ ಕಂಡು ಬರುವ ಕಂತೆಸೇವೆ, ತೋಪುಜಾತ್ರೆ, ದೊಡ್ಡ ದೇವರ ಜಾತ್ರೆ ತೆಂಗಿನಕಾಯಿ ಪವಾಡ ಆಚರಣೆ, ಸೋಮನಾಥನ ಬಾಯಿಬೀಗ ಜಾತ್ರೆ, ಮುಂತಾದ ಆಚರಣೆಗಳು ಸಿಗುತ್ತವೆ. ಉತ್ತರ ಕರ್ನಾಟಕದಲ್ಲಿ ಚಿಂಚಲಿ ಮಾಯವ್ವ, ಕ್ಯಾಣಗನೂರು ಕರಿಸಿದ್ಧ, ಮುಂಡಗನೂರು ಮುರಸಿದ್ಧ, ಸಿರಡೋನದ ಬೀರಪ್ಪ, ಹುಲಜಂತಿ ಮಾಳಿಂಗರಾಯ, ಅರಕೇರಿ ಅಮೋಘಸಿದ್ಧ, ಪಟ್ಟಣಗೊಡಲಿಯ ಇಟ್ಟಪ್ಪ, ಕಾರಿಕೊಳ್ಳದ ರೇವಣ್ಣಸಿದ್ಧ, ಸರೂರು ಶಾಂತಮುತ್ತಯ್ಯ ಮತ್ತು ರೇವಣಸಿದ್ಧ ಸೊನ್ನಲಾಪುರದ ಸಿದ್ಧರಾಮ, ಗೋಲಗೇರಿಯ ವೀರಗೊಲ್ಲಾಳ, ಮೈಲಾರದ (ಹಡಗಲಿ) ಮೈಲಾರಲಿಂಗ, ಹನುಮಸಾಗರದ

ಚಂದಲಿಂಗ ಮುಂತಾದ ಜಾತ್ರೆಗಳು. ಆ ಎಲ್ಲಾ ಜಾತ್ರೆಗಳ ಪಟ್ಟಿ ಮಾಡುತ್ತಾ ಹೋದರೆ ಬೆಳೆಯುತ್ತಾ ಹೋಗುತ್ತದೆ. ಆ ಎಲ್ಲಾ ಜಾತ್ರೆಗಳ ವಿಸ್ತಾರವಾದ ಮತ್ತು ಪ್ರಾದೇಶಿಕ, ಸಾಮುದಾಯಿಕ ಭಿನ್ನತೆಗಳ ತೌಲನಿಕ ಅಧ್ಯಯನ ಆಗಬೇಕು. ಇವುಗಳ ಜೊತೆಗೆ ಪಶುಪಾಲನ ಸಮುದಾಯಗಳಲ್ಲಿ ನಡೆಯುವ ಈ ಸಾಂಸ್ಕೃತಿಕ ವೀರರ ಜಾತ್ರೆಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಉದಾಹರಣೆ: ಕಚ್ಚೆಗೌಳಿಗರ ಬೈರೋಬಾ, ಖಂಡೋಬಾ ಮತ್ತು ವಿಠೋಬಾನ ಆಚರಣೆಗಳನ್ನು ಮತ್ತು ಕಾಡುಗೊಲ್ಲರ ಗೌರಸಂದ್ರ ಮಾರಮ್ಮನ, ಮ್ಯಾಸಬೇಡರಲ್ಲಿ ನಡೆಯುವ ಮಾರಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ ಮತ್ತು ಸಿದ್ದೇಶ್ವರ ಮುಂತಾದ ಜಾತ್ರೆಗಳನ್ನು ತೌಲನಿಕ ಅಧ್ಯಯನ ಮಾಡಬೇಕು. ಬಂದ ಫಲಿತಗಳಿಂದ ಡೊಳ್ಳಿನ ಹಾಡುಗಳೊಂದಿಗೆ ತೌಲನಿಕ ಅಧ್ಯಯನ ಮಾಡಬೇಕು ಅಥವಾ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಬೇಕು. ಆಗ ಈ ಹಾಡುಗಳ ಉಲ್ಲೇಖಿತ ಪಶುಪಾಲನೆ ವೃತ್ತಿಗಳ ಚಿತ್ರಗಳನ್ನು ಮತ್ತು ಪಶುಪಾಲನೆ ಸಮುದಾಯಗಳ ಛಿದ್ರೀಕರಣವನ್ನು ಸೈದ್ಧಾಂತಿಕವಾಗಿ ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ನಂಬಿಕೆ.

೨. ಸಾಂಸ್ಕೃತಿಕ ವೀರರ ಪ್ರತ್ಯೇಕ ಅಧ್ಯಯನಗಳಾಗಬೇಕು. ಪ್ರಮುಖವಾಗಿ ಬೀರಪ್ಪ, ಬುಳ್ಳಪ್ಪ, ಮಾಳಿಂಗರಾಯ, ಇಟ್ಟಪ್ಪ, ಅಮೋಘಸಿದ್ಧ, ಭೂತಾಳಸಿದ್ಧ ಮತ್ತು ಮಾಯವ್ವ ಮುಂತಾದವರ ಬಗ್ಗೆ ವಿಶೇಷವಾದ ಡೊಳ್ಳಿನ ಹಾಡುಗಳು ಸಿಗುತ್ತವೆ. ಒಬ್ಬೊಬ್ಬರನ್ನು ಕುರಿತ ಒದೊಂದು ಮಹಾಕಾವ್ಯಗಳು (ಡೊಳ್ಳಿನ ಹಾಡುಗಳು) ಆಗುತ್ತವೆ. ಇವರ ಆರಾಧನೆ ಕ್ಷೇತ್ರವಂತು ತುಂಬಾ ವಿಸ್ತಾರ. ಉದಾಹರಣೆ : ಅಮೋಘಸಿದ್ಧ. ಈತನನ್ನು ಆರಾಧಿಸುವ ಜನವರ್ಗ ಮತ್ತು ಆರಾಧನೆ ಕೇಂದ್ರಗಳು ಕರ್ನಾಟಕ-ಆಂಧ್ರಪ್ರದೇಶ-ಮಹಾರಾಷ್ಟ್ರ ಮತ್ತು ಗೋವಾ - ರಾಜ್ಯಗಳಲ್ಲಿ ಕಂಡು ಬರುತ್ತವೆ. ಈತನ ವಂಶ ಶಿಷ್ಯವರ್ಗ ೧೦೧ ರಿಂದ ೭೦೧, ೭೦೧ ರಿಂದ ೧೦೦೧, ೧೦೦೧ ರಿಂದ ೭೦೦೧ ಬೆಳೆಯುತ್ತಾ ಹೋಯಿತು ಅನ್ನುವ ಕಥನಗಳು ಇವೆ. ಆರಂಭಿಕ ಕಾಲದ ೧೦೧ ಜನರ ಹೆಸರುಗಳು ಮತ್ತು ಆರಾಧನೆ ಕೇಂದ್ರಗಳು ಸಿಗುತ್ತವೆ. ಆ ಎಲ್ಲಾ ವ್ಯಕ್ತಿಗಳ ವಿವರಣಾತ್ಮಕ ಅಧ್ಯಯನಗಳಾಗಬೇಕು. ಇದೇ ತರದ ಭಿನ್ನ ಆಯಾಮಗಳು ಪ್ರತಿಯೊಬ್ಬ ಸಾಂಸ್ಕೃತಿಕ ವೀರನಲ್ಲೂ ಸಿಗುತ್ತವೆ. ಅವುಗಳನ್ನು ಸೈದ್ಧಾಂತಿಕ ಅಧ್ಯಯನಕ್ಕೆ ಒಳಪಡಿಸಿದಾಗ ಈ ಸಮುದಾಯಗಳ ಮತ್ತು ಡೊಳ್ಳಿನ ಹಾಡುಗಳ ಚಾರಿತ್ರಿಕ ಪಲ್ಲಟಗಳನ್ನು ಮತ್ತು ಅಸ್ಮಿತೆಗಳನ್ನು ಗುರುತಿಸುವುದಕ್ಕೆ ಸಾಧ್ಯ ಎನ್ನುವ ಭರವಸೆ.

೩. ಡೊಳ್ಳಿನ ಹಾಡುಗಳಲ್ಲಿ ಉಲ್ಲೇಖಿತವಾದ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನಗಳಾಗಬೇಕು. ಏಕೆಂದರೆ ಈ ಸಾಂಸ್ಕೃತಿಕ ವೀರರು ಅಥವಾ ಈ ಸಮುದಾಯ ನೆಲೆಸಿದ, ಆಡಳಿತ ಮಾಡಿದ, ಸಂಘರ್ಷ ಮಾಡಿದ, ವೃತ್ತಿಗಳನ್ನು ಮಾಡುತ್ತಿದ್ದ, ಅಂದರೆ ಪಶುಪಾಲನೆ ಮತ್ತು ವ್ಯಾಪಾರ ಮಾಡುತ್ತಿದ್ದ, ಕಂಬಳಿ ವ್ಯಾಪಾರ ಮಾಡುತ್ತಿದ್ದ ವಿಶೇಷವೆಂದರೆ ಈ ಸಮುದಾಯಗಳು ದೈವವೆಂದು ಆರಾಧಿಸುವ ಸಾಂಸ್ಕೃತಿಕ ವೀರರು ಆರಾಧಿಸುತ್ತಿದ್ದ ಅಥವಾ ಪೂಜಿಸುತ್ತಿದ್ದ ದೈವಗಳ ನೆಲೆಗಳು, ಸಿದ್ಧಿಗಾಗಿ ತಪಸ್ಸು ಮಾಡಿದ, ಯುದ್ಧ ತರಬೇತಿ ಪಡೆದ ಮತ್ತು ಶತ್ರುಗಳನ್ನು ಸಂಹಾರ ಮಾಡಿದ- ಹೀಗೆ ಭಿನ್ನ ಆಯಾಮವನ್ನು ತಿಳಿಸುವ ಸ್ಥಳಗಳ ವಿವರಗಳು ಸಿಗುತ್ತವೆ. ಅವುಗಳನ್ನು ಭೌಗೋಳಿಕವಾಗಿ,

ಚಾರಿತ್ರಿಕವಾಗಿ ಅಧ್ಯಯನಕ್ಕೆ ಒಳಪಡಿಸಬಹುದು. ಇವು ಡೊಳ್ಳಿನ ಹಾಡುಗಳ ಗ್ರಹಿಕೆಗೆ ಪ್ರಮುಖ ಆಕರಗಳಾಗುತ್ತವೆ ಎನ್ನುವ ಬಯಕೆ.

೪. ಹಾಲುಮತ ಸಮುದಾಯದಲ್ಲಿ ಕಂಡು ಬರುವ ಉಪ ಪಂಗಡಗಳ ಅಧ್ಯಯನಗಳಾಗಬೇಕು. ಪ್ರಮುಖವಾಗಿ ಹತ್ತಿ ಕಂಕಣ - ಉಣ್ಣೆ ಕಂಕಣ, ಗೊಂಡ ಕುರುಬ ಮತ್ತು ದನಗಾರರ ಅಧ್ಯಯನ ಗಳಂತು ತಪ್ಪದೇ ಆಗಬೇಕು. ಈಗಾಗಲೇ ಕುರುಬ ಗುರು ಒಡೆಯರ ಸಾಂಸ್ಕೃತಿಕ ಅಧ್ಯಯನ, ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ, ಹಂಡೆ ಕುರುಬರು ಒಂದು ಅಧ್ಯಯನ, ಹೈದ್ರಾಬಾದ್ ಕರ್ನಾಟಕ ಕುರುಬರ ಚರಿತ್ರೆ, ಕಂಬಳಿ ಸಾಂಸ್ಕೃತಿಕ ಅಧ್ಯಯನ ಇಂಥ ಸಂಶೋಧನೆಗಳಾಗಿರುವುದು ಸ್ವಾಗತರ್ಹ.

೫. ಹಾಡುಗಳನ್ನು ಸಂಗ್ರಹಿಸುವುದಕ್ಕೆ ಮತ್ತು ಕಲಾವಿದರನ್ನು ಸಂದರ್ಶಿಸುವುದಕ್ಕೆ ಹಲವು ತಂಡಗಳನ್ನು, ಕಲಾವಿದರನ್ನು ಭೇಟಿ ಮಾಡಲಾಯಿತು. ಹಿರಿಯ ಕಲಾವಿದರು ಮತ್ತು ಕಿರಿಯ ಕಲಾವಿದರು ಭಿನ್ನ ಭಿನ್ನ ಯಾತನೆಗಳನ್ನು ತೋಡಿಕೊಂಡರು. ಹಿರಿಯ ಕಲಾವಿದರು ಮಕ್ಕಳು ನಮ್ಮ ಹಾಡುಗಳನ್ನು ಕೇಳುತ್ತಿಲ್ಲ ಮತ್ತು ಕಲಿಯುತ್ತಿಲ್ಲ ಎನ್ನುವ ಆತಂಕವನ್ನು ವ್ಯಕ್ತಪಡಿಸಿದರೆ ಕಿರಿಯರು ಹಿರಿಯ ಹಾಡುಗಾರರು ನಮ್ಮ ಶೈಲಿಗೆ ಹೊಂದಿಕೆಯಾಗುವಂತೆ ಹಾಡುಗಳನ್ನು ಕಲಿಸುತ್ತಿಲ್ಲ ಎನ್ನುವ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಹಲವು ಆತಂಕಗಳಿಂದ ಒಳ್ಳೆಯ ಕಲಾವಿದ-ಕೆಟ್ಟ ಕಲಾವಿದ ಅನ್ನುವ ಭಿನ್ನತೆಗಳು ಸೃಷ್ಟಿಯಾಗಿವೆ. ಇದು ಕಲಾವಿದರ ವರ್ಗಶ್ರೇಣೀಕರಣವೊಂದು ಮೈದಾಳುತ್ತಿರುವಂತೆ ಕಾಣುತ್ತಿದೆ. ಈ ವರ್ಗಭೇದವು ಭಿನ್ನವಾದ ಗ್ರಹಿಕೆಗಳನ್ನು ಸೃಷ್ಟಿಸುತ್ತಿದೆ. ಹಾಡುಗಳ ಕಲಿಕೆ ಮತ್ತು ಪ್ರದರ್ಶನಗಳ ಮೇಲೆ ಪರಿಣಾಮ ಬೀರುತ್ತಿದೆ. ಹಾಡುಗಾರಿಕೆಯನ್ನು ಕಲಿತುಕೊಳ್ಳುವ ಮತ್ತು ಕೇಳಿಸಿಕೊಳ್ಳುವ ಪ್ರೇಕ್ಷಕ ವರ್ಗದ ಕಾಲ, ಕಲಾವಿದರ ವಯಸ್ಸು, ಶಿಕ್ಷಣ, ಮುಂತಾದವುಗಳ ಇದಕ್ಕೆ ಕಾರಣವಿರಬಹುದು. ಇವುಗಳೇ ಅಂತಿಮ ಸತ್ಯಗಳಲ್ಲ ಅಥವಾ ಖಚಿತವಲ್ಲ. ಹಾಗಾಗಿ ವರ್ಗಭೇದದ ಬಹುಶಿಸ್ತೀಯ ಅಧ್ಯಯನಗಳು ಆಗಬೇಕು.

ಹೀಗೆ ಅಧ್ಯಯನಕ್ಕೆ ಒಳಪಡಿಸಿದ ನಂತರ ಡೊಳ್ಳಿನ ಹಾಡುಗಳ ಪ್ರದರ್ಶನಕ್ಕೆ ಬೇಕಾದ ಅವಶ್ಯಕತೆ, ಕಲಾವಿದರಿಗೆ ಬೇಕಾದ ಅವಶ್ಯಕತೆ ಮತ್ತು ಡೊಳ್ಳಿನ ಹಾಡುಗಳ ಆನ್ವಯಿಕ ನೆಲೆಯನ್ನು ಕುರಿತು ಚಿಂತಿಸಬಹುದು. ಈ ರೀತಿಯ ಅಧ್ಯಯನಗಳಾಗದೇ ಹೊರತು ಸಮಕಾಲೀನ ಬದುಕಿನ ಭಾಗವಾಗಿ ಹೇಗೆ ಹಾಡುಗಳನ್ನು ಪರಿಷ್ಕರಿಸಿ ಆನ್ವಯಿಕಗೊಳಿಸಬಹುದು ಎಂಬ ಅಂಶಗಳನ್ನು ಸೂಚಿಸುವುದು ಅಪೂರ್ಣ. ಪ್ರಸ್ತುತ ಅಧ್ಯಯನದಲ್ಲಿ ಈ ರೀತಿಯ ಅಂಶಗಳನ್ನು ಗುರುತಿಸದೇ ಇರುವುದು ಅಧ್ಯಯನದ ಅಪೂರ್ಣತೆಯನ್ನು ಅಥವಾ ಮಿತಿಯನ್ನು ಗುರುತಿಸುತ್ತಿದೆಯಾದರು ಅವುಗಳನ್ನು ಹೇಳುವುದಕ್ಕೆ ಮೇಲೆ ಸೂಚಿಸಿದ ಸಮಗ್ರ ನೆಲೆಯ ಅಧ್ಯಯನ ಬೇಕೇಬೇಕು ಎನ್ನುವುದನ್ನು ಒತ್ತಿಹೇಳುತ್ತದೆ.

೬. ಡೊಳ್ಳಿನ ಹಾಡುಗಳು ಈ ಕಾಲದಲ್ಲಿ ಭಿನ್ನವಾದ ಚಲನೆಗಳನ್ನು ಪಡೆಯುತ್ತಿವೆ. ತನ್ನದೇಯಾದ ವಿಶಿಷ್ಟ ಸ್ವರೂಪದಲ್ಲಿ ಜೀವಂತವಾಗಿವೆ. ಮಾಧ್ಯಮಗಳ ಮೂಲಕ ಅಭಿವ್ಯಕ್ತಿ

ಆಗುತ್ತಿರುವ ಈ ಹಾಡುಗಳು ಪ್ರಸ್ತುತ ಸಂದರ್ಭದ ಹೊಸ ರೂಪಗಳೇ ಸರಿ. ಅವುಗಳನ್ನು ಜಾನಪದ ಅಧ್ಯಯನದ ಪಾರಿಭಾಷಿಕ ನೆಲೆಯಲ್ಲಿ 'ನವ ಮೌಖಿಕತೆ'ಯಂತಲೂ ಕರೆಯಬಹುದು. ಇದು ಗ್ರಹಿಕೆಯ ಭಿನ್ನತೆಯನ್ನು ಸೂಚಿಸುತ್ತದೆಯಾದರೂ ಸದ್ಯಕ್ಕೆ ಒಪ್ಪಿಕೊಳ್ಳಬಹುದು. ಬದಲಾಗುತ್ತಿರುವ ಸಮಕಾಲೀನ ಸಂದರ್ಭಗಳು ಜೀವನ ವಿಧಾನ ಆಧುನಿಕ ಪರಿಕರಗಳೊಂದಿಗೆ ಒಡನಾಟ. ಈ ಎಲ್ಲಾ ಬಗೆಯ ಸಂಗತಿಗಳಿಂದಲೇ ಡೊಳ್ಳಿನ ಹಾಡುಗಳು ಇವತ್ತಿನ ರೂಪ ತಾಳಿದಂತಿವೆ. ಇಂತಹ ಹಾಡುಗಳನ್ನು ಅಥವಾ ಹೊಸ ಬಗೆಯ ಚಲನೆಯನ್ನು ಗುರುತಿಸುವ ಅಧ್ಯಯನಗಳು ಅತಿಮುಖ್ಯವಾಗಿ ಆಗಬೇಕಿದೆ. ಇದಕ್ಕೆ ಹಾಡುಗಾರರ ಮತ್ತು ಕೇಳುಗರ ಆಶೋತ್ತರಗಳನ್ನು ಮುಖ್ಯವಾಗಿಟ್ಟುಕೊಳ್ಳುವುದು ಒಳಿತು.

೭. ಸಾಂಸ್ಕೃತಿಕ ವೀರರನ್ನು ಕುರಿತು ರಚನೆಯಾದ ಲಿಖಿತ ಪುರಾಣಗಳನ್ನು, ನಾಟಕಗಳನ್ನು ಮತ್ತು ಸಮುದಾಯದ ಲಿಖಿತ ಪುರಾಣಗಳನ್ನು ಅಧ್ಯಯನ ಮಾಡಬೇಕು. ಪ್ರಮುಖವಾಗಿ ಕಾಲಾಂತರದಲ್ಲಿ ಆಗುತ್ತಿರುವ ವಸ್ತು ರೂಪಾಂತರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

೮. ಈ ಕ್ಷೇತ್ರಕ್ಕೆ ಮಹಿಳೆಯರು ಈಗ ತಾನೇ ಪ್ರವೇಶವಾಗಿದ್ದಾರೆ. ಇದರಿಂದ ಕಲೆಯ ಗ್ರಹಿಕೆ ಮತ್ತು ಚಹರೆಗಳಲ್ಲಿ ಹಲವು ಬದಲಾವಣೆಗಳಾಗಿವೆ. ಕಲಾ ಜೀವಂತಿಕೆ ಹೆಚ್ಚುತ್ತಲಿದೆ. ಆದರೆ ಕಲಾ ಬಳಗದಲ್ಲಿ ಈಕೆಯ ಆಗಮನದ ಬಗ್ಗೆ ಪರ ಮತ್ತು ವಿರೋಧದ ಚರ್ಚೆಗಳು ನಡೆಯುತ್ತಿವೆ. ಪ್ರತಿರೋಧ ಮಾಡುವ ಪುರುಷ ವರ್ಗವು ಇದೆ. ಪುರುಷರು ಉದ್ದೇಶಪೂರಿತವಾಗಿ ಅಂದರೆ ಪ್ರತಿರೋಧಿಸುವುದಕ್ಕೆ ಆಕೆಯನ್ನು ಅವಮಾನಿತಳನ್ನಾಗಿಸುತ್ತಿದ್ದಾರೆ. ಇಲ್ಲಿ ಆಕೆಯ ಮನೋಭಾವನೆಗಳ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಬೇಕು. ಇದಕ್ಕೆ ಆಕೆಯ ಕಲಾ ಎನ್ನುವವನ್ನು ಮತ್ತು ಆತ್ಮಚರಿತ್ರೆಗಳನ್ನು ಆಧಾರವಾಗಿಟ್ಟುಕೊಳ್ಳುವುದು ಒಳಿತು. ಮಹಿಳೆಯರಂತೆ ಮಕ್ಕಳು ಆಗಮನವಾಗಿದ್ದಾರೆ. ಇದರಿಂದ ಹಾಡುಗಳ ಭವಿಷ್ಯದ ಬಗ್ಗೆ ಇನ್ನಷ್ಟು ಆಶಾಭಾವನೆಯನ್ನು ಹೊಂದಬಹುದು. ಹಾಗಾಗಿ ಮಕ್ಕಳು ಕಲೆಯ ಬಗ್ಗೆ ಹೊಂದಿರುವ ಭಾವನೆ ಮತ್ತು ಕನಸುಗಳನ್ನು ಕುರಿತು ಅವರನ್ನು ಸಂದರ್ಶಿಸಿ ಅಧ್ಯಯನ ಮಾಡಬೇಕು. ಇದರಲ್ಲಿ ಪಾಲಕರ ಉದ್ದೇಶಗಳನ್ನು ಗಮನಕ್ಕೆ ತೆಗೆದುಕೊಂಡರೆ ಇನ್ನು ಒಳಿತು. ಮಕ್ಕಳು ಸಮಾಜ, ಸಮುದಾಯ ಮತ್ತು ಸರಕಾರದಿಂದ ಏನನ್ನು ನಿರೀಕ್ಷಿಸುತ್ತಾರೆ, ಕಲೆಗೆ ಯಾವ ರೀತಿಯ ಕಾಣಿಕೆಯನ್ನು ಕೊಡುವುದಕ್ಕೆ ಬಯಸುತ್ತಾರೆ. ಯಾವ ನೆಲೆಯಲ್ಲಿ ಉಳಿಸಿಕೊಳ್ಳಲು ಇಷ್ಟಪಡುತ್ತಾರೆ ಎನ್ನುವುದನ್ನು ಅರಿಯುವುದಕ್ಕೆ ಸಾಧ್ಯ. ಏಕೆಂದರೆ ಒಂದು ಪರಂಪರೆಯನ್ನು ಕಟ್ಟುವ ಮತ್ತು ಮುರಿಯುವ ಸಾಮರ್ಥ್ಯ ಕಲಾವಿದರಿಗೆ ಇರುತ್ತದೆ. ಈ ರೀತಿಯ ಅಧ್ಯಯನಗಳು ಆದ ನಂತರ ಒಂದು ಯೋಜನೆಯನ್ನು ಮಾಡಬಹುದು ಅಥವಾ ಕಲೆಯ ಅಳಿವು-ಉಳಿವು ಮತ್ತು ಬೇಕು-ಬೇಡಗಳ ಬಗ್ಗೆ ಚಿಂತಿಸಬಹುದು.

• • •

ಅನುಬಂಧಗಳು

- ವಕ್ತೃಗಳ ವಿವರಗಳು
- ಆಧಾರ ಗ್ರಂಥಗಳು
- ಛಾಯಾಚಿತ್ರಗಳು
- ಕ್ಯಾಸೆಟ್‌ಗಳ ಮುಖಪುಟಗಳು

ವಕ್ತೃಗಳ ವಿವರಗಳು

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಸ್ಥಳ
೧.	ಸಿದ್ದಪ್ಪ ಮೇಟಿ	೮೫	ಡೊಳ್ಳು ಹಾಡುಗಾರಿಕೆ	ಸಾ. ಸೈದಾಪುರ, ಶಹಪುರ ತಾ.
೨.	ಅಡಿವೆಪ್ಪ ಮಹಾರಾಯ	೮೫	ಮಾಳಿಂಗರಾಯನ ಪೂಜಾರಿಕೆ ಡೊಳ್ಳುಹಾಡುಗಾರಿಕೆ	ಸಾ. ಹುಲಜಂತಿ, ಮಾನಖೇಡ ತಾ.
೩.	ಶ್ರೀಶೈಲ ಇಂಗಳೇಶ್ವರ	೪೦	ಡೊಳ್ಳು ಹಾಡುಗಾರಿಕೆ	ಸಾ. ಇಂಗಳೇಶ್ವರ, ಬಸವನ ಬಾಗೇವಾಡಿ ತಾ.
೪.	ಜಕ್ಕಣ್ಣ ಮಾಸ್ತರ್	೪೨	ಡೊಳ್ಳು ಹಾಡುಗಳ ರಚನೆಕಾರ	ಸಾ. ಇಂಗಳೇಶ್ವರ, ಬಸವನ ಬಾಗೇವಾಡಿ ತಾ.
೫.	ಸೋಮಲಿಂಗ ದನಗೊಂಡ ಬಿಜ್ಜರಗಿ	೫೫	ಡೊಳ್ಳು ಹಾಡುಗಾರಿಕೆ	ಸಾ. ಬಿಜ್ಜರಗಿ, ಬಿಜಾಪುರ ತಾ.
೬.	ಕಲ್ಮೇಶ ಅರಟಾಳ್	೩೬	ಡೊಳ್ಳು ಹಾಡುಗಾರಿಕೆ	ಸಾ. ಅರಟಾಳ್, ಅಥಣಿ ತಾ.
೭.	ಬೀರಪ್ಪ ಸತ್ಯಪ್ಪ ಕುಲಕೊಂಡ	೪೦	ಡೊಳ್ಳು ಹಾಡುಗಾರಿಕೆ	ಸಾ. ಕಟಗೇರಿ, ಅಥಣಿ ತಾ.
೮.	ಸದಾಶಿವಪ್ಪ ಅಣ್ಣಪ್ಪ ಚಿಮಕೇರಿ	೪೩	ಡೊಳ್ಳು ಹಾಡುಗಾರಿಕೆ	ಸಾ. ಕಟಗೇರಿ, ಅಥಣಿ ತಾ.
೯.	ವಿಠಲ ಯಮುನಪ್ಪ ಯಣಕಂಚಿ	೮೦	ವ್ಯವಸಾಯ	ಬೀರಲಿಂಗೇಶ್ವರ ದೇವಸ್ಥಾನ ಹತ್ತಿರ, ಅಥಣಿ.
೧೦.	ವಸಂತ ಕಲ್ಲಪ್ಪ ಹೊಸಮನಿ	೩೨	ಜನಪದ ಗೀತೆಗಳ ಹಾಡುಗಾರ (ಆಕಾಶವಾಣಿ ಕಲಾವಿದ)	ಸಾ. ಬೇವನೂರು, ಅಥಣಿ ತಾ.
೧೧.	ಕುಮಾರ ತುಕರಾಮ ಶೆಮ್ನ	೬೩	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ಕೆಂಪೂಡು, ಅಥಣಿ ತಾ.
೧೨.	ಬೀರಪ್ಪ ಹಸ್ಕಿ	೪೨	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಕಣಾಳ್, ಅಥಣಿ ತಾ.

೧೩.	ಬಾಳಪ್ಪ ಬೀರಪ್ಪ ಮಡ್ರಿ	೩೮	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ಕಲ್ಲೊಳ್ಳಿ, ಗೋಕಾಕ್ ತಾ.
೧೪.	ಸಿದ್ದರಾಮಪ್ಪ ಸಿದ್ದಪ್ಪ ಮಡ್ರಿ	೬೦	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ತವಗ, ಗೋಕಾಕ್ ತಾ.
೧೫.	ರಾಮಪ್ಪ ಶಿವರಾಯಪ್ಪ ಮಡಕನಟ್ಟಿ	೬೨	ಡೊಳ್ಳು ಹಾಡುಗಾರಿಕೆ	ಸಾ. ತವಗ, ಗೋಕಾಕ್ ತಾ.
೧೬.	ಬೀರಪ್ಪ ಲಗಮಪ್ಪ ಮಡ್ರಿ	೩೫	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಕಲ್ಲೊಳ್ಳಿ, ಗೋಕಾಕ್ ತಾ.
೧೭.	ಮಾರುತಿ ಲಗುಮಣ್ಣ ಘಂಟಿ	೩೩	ಡೊಳ್ಳು ಹಾಡುಗಾರಿಕೆ	ಸಾ. ಇಡಕಲ್ಲು, ರಾಯಭಾಗ ತಾ.
೧೮.	ರಾಮಣ್ಣ ಸಿದ್ದಪ್ಪ ಒಡ್ಡೊಡಗಿ	೪೫	ಡೊಳ್ಳು ಹಾಡುಗಾರಿಕೆ	ಸಾ. ಹಾರೋಗೇರಿ, ರಾಯಭಾಗ ತಾ.
೧೯.	ನಾಗೇಶ್ ಬಿಜಾಪುರ	೩೬	ಡೊಳ್ಳು ಹಾಡುಗಾರಿಕೆ	ಸಾ. ತಿಕೋಟ, ಬಿಜಾಪುರ ತಾ.
೨೦.	ಗದಿಗೆಪ್ಪ ರಾಯಪ್ಪ ಬೀರಲದಿನ್ನಿ	೧೫	ವಿದ್ಯಾರ್ಥಿ/ಡೊಳ್ಳು ಹಾಡುಗಾರಿಕೆ	ಸಾ. ಬೀರಲದಿನ್ನಿ, ಬಸವನ ಬಾಗೇವಾಡಿ ತಾ.
೨೧.	ಅಡಿವೆಪ್ಪ ಪುಂಡಲಿಕಪ್ಪ ಸಿಂಗಣ್ಣವರ್	೩೬	ಕೃಷಿ/ಡೊಳ್ಳು ಹಾಡುಗಾರಿಕೆ	ಸಾ. ಮೆಳವಂಕಿ, ಗೋಕಾಕ್ ತಾ.
೨೨.	ಸಿದ್ದು ಹಿರೇಕುರಬರ್	೬೦	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ಕೊಟ್ಬಲಗಿ, ಗೋಕಾಕ್ ತಾ.
೨೩.	ಸೋಮಲಿಂಗಪ್ಪ ಸಿದ್ದಪ್ಪ ಗುಡೇನ್ನವರ	೫೨	ಡೊಳ್ಳು ಹಾಡುಗಾರಕೆ	ಸಾ. ಚಿಂಚನೂರ, ರಾಮದುರ್ಗ ತಾ.
೨೪.	ಗಿರಿಯಪ್ಪ ಈರಪ್ಪ ಘಂಟಿಕಾರ	೪೩	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ದುರದುಂಡಿ, ಅಥಣಿ ತಾ.
೨೫.	ರಾಯಪ್ಪ ಸತ್ತೆಪ್ಪ ಕುಲಗೋಡ	೪೫	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಸಿರಹಟ್ಟಿ, ಅಥಣಿ ತಾ.
೨೬.	ಬಸವರಾಜ ಪೂಜಾರಿ	೫೦	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಸುಟ್ಟಹಟ್ಟಿ, ರಾಯಭಾಗ ತಾ.
೨೭.	ದರಿಯಪ್ಪ ಯೋಗಪ್ಪ ಜಂಬಗಿ	೪೮	ಈರಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ಮುರಗುಂಡಿ, ಅಥಣಿ ತಾ.
೨೮.	ಭರ್ಮಪ್ಪ ಕಾಶಪ್ಪ ಅಡಕಲಗುಂಡಿ	೩೭	ಡೊಳ್ಳು ಹಾಡುಗಾರಿಕೆ	ಸಾ. ಸೌದತ್ತಿ
೨೯.	ಅಯ್ಯಪ್ಪ ಮಟ್ಟಗಿ	೫೨	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ನರಗುಂದ, ನವಲಗುಂದ ತಾ.

೩೦.	ಮಾಯಣ್ಣ ಪೂಜಾರಿ ಶಿವಯೋಗಪ್ಪ	೪೮	ಡೊಳ್ಳು ಹಾಡುಗಾರಿಕೆ	ಸಾ. ಹಡಗಲಿ, ಸಿಂದಗಿ ತಾ.
೩೧.	ಜಮ್ಮಪ್ಪ ದೇವಪ್ಪ ಮಾನಿ	೫೨	ಡೊಳ್ಳು ಹಾಡುಗಾರಿಕೆ	ಸಾ. ಎಸ್.ಎನ್. ಕರಡಿಗುಡ್ಡ, ಬಾದಾಮಿ ತಾ.
೩೨.	ನಾಗಪ್ಪ ಬಸಪ್ಪ ತ್ಯಾಪಿ	೫೫	ಡೊಳ್ಳು ಹಾಡುಗಾರಿಕೆ	ಸಾ. ಎಸ್.ಎನಂ. ಕರಡಿಗುಡ್ಡ, ಬಾದಾಮಿ ತಾ.
೩೩.	ಸಿದ್ಧರಾಮಪ್ಪ ಸಿದ್ಧಪ್ಪ ಮಡ್ಡಿ	೬೮	ಡೊಳ್ಳು ಹಾಡುಗಾರಿಕೆ	ಸಾ. ತವಗ, ಬೆಳಗಾವಿ ತಾ.
೩೪.	ರಾಮಪ್ಪ ಶಿವರಾಮಪ್ಪ	೬೦	ಡೊಳ್ಳು ಹಾಡುಗಾರಿಕೆ	ಸಾ. ಮಿಡಕನಹಟ್ಟಿ, ಬೆಳಗಾವಿ ತಾ.
೩೫.	ಅಯ್ಯಪ್ಪ ಭೀಮಪ್ಪ ಮಜ್ಜಗಿ	೫೩	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ನರಗುಂದ, ನವಲಗುಂದ ತಾ.
೩೬.	ಹೆಗ್ಗಪ್ಪ ನಾಗಪ್ಪ ಮಜ್ಜಗಿ	೫೬	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ನರಗುಂದ, ನವಲಗುಂದ ತಾ.
೩೭.	ಸಂಗಪ್ಪ ಮಾ. ಪೂಜಾರಿ	೫೦	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಅರಟಾಳ್, ಅಥಣಿ ತಾ.
೩೮.	ಮಾಳಪ್ಪ ಮಾ. ಪೂಜಾರಿ	೪೮	ಡೊಳ್ಳು ಹಾಡುಗಾರಿಕೆ	ಸಾ. ಅರಟಾಳ್, ಅಥಣಿ ತಾ.
೩೯.	ಮಾಯಣ್ಣ ಪೂಜಾರಿ	೬೩	ಡೊಳ್ಳು ಹಾಡುಗಾರಿಕೆ	ಸಾ. ಬೆನಕನಹಳ್ಳಿ, ಇಂಡಿ ತಾ.
೪೦.	ಕಲ್ಮೇಶ್ ಪೂಜಾರಿ ಅರಟಾಳ್	೩೨	ಡೊಳ್ಳು ಹಾಡು ಕಲಿಸುವುದು ಮತ್ತು ಹಾಡುವುದು	ಸಾ. ಅರಟಾಳ್, ಅಥಣಿ ತಾ.
೪೧.	ಜಟ್ಟೆಪ್ಪ ರಾಮಪ್ಪ ಕಳ್ಳಿ	೪೭	ಡೊಳ್ಳು ಹಾಡುಗಾರಿಕೆ	ಸಾ. ಹುಟಗಿ, ಜತ್ತ ತಾ., ಸಾಂಗಲಿ ಜಿಲ್ಲೆ.
೪೨.	ರಮೇಶ ಶಿವರಾಯಪ್ಪ	೫೦	ಡೊಳ್ಳು ಹಾಡುಗಾರಿಕೆ	ಸಾ. ಸವದತ್ತಿ, ಬೆಳಗಾವಿ ಜಿಲ್ಲೆ.
೪೩.	ಹೊನ್ನಪ್ಪ ತಮ್ಮಣ್ಣ ಎಲ್.	೪೦	ಡೊಳ್ಳು ಹಾಡುಗಾರಿಕೆ	ಸಾ. ಅವರಕೋಡ್, ಅಥಣಿ ತಾ.
೪೪.	ಸಾತಪ್ಪ ಬುಳ್ಳಪ್ಪ ಎಲ್.	೪೨	ಡೊಳ್ಳು ಹಾಡುಗಾರಿಕೆ	ಸಾ. ಅವರಕೋಡ್, ಅಥಣಿ ತಾ.
೪೫.	ಮುರಿಗೆಪ್ಪ ಸಿದ್ಧಪ್ಪ ಕಲ್ಲೊಳಿ	೫೩	ಡೊಳ್ಳು ಹಾಡುಗಾರಿಕೆ	ಸಾ. ಮುರಗುಂಡಿ, ಗೋಕಾಕ್ ತಾ.

೪೬.	ಗುರುಸಿದ್ದಪ್ಪ ಸೋಮಲಿಂಗಪ್ಪ	೮೨	ಡೊಳ್ಳು ಹಾಡುಗಾರಿಕೆ	ಬಾಗಲಕೋಟೆ ತಾ.
೪೭.	ಬುಡ್ಡಾ ನಬಿಸಾಬ್ ಗೌಂಡಿ	೭೨	ಡೊಳ್ಳು ಹಾಡುಗಾರಿಕೆ	ಬಿಜಾಪುರ ತಾ.
೪೮.	ಗಿರಿಮಲ್ಲಪ್ಪ ಶಿ. ಬೆಳ್ಳುಂಡಿಗೆ	೪೫	ಡೊಳ್ಳು ಹಾಡುಗಾರಿಕೆ	ಸಾ. ಶಿರಾಡೋನ
೪೯.	ಬೆಳ್ಳುಂಡುಗಿ ಜಿ.ಎಸ್.	೫೨	ಶಿಕ್ಷಕ/ಡೊಳ್ಳು ಹಾಡುಗಾರಿಕೆ	ಸಾ. ಶಿರಡೋನ, ಇಂಡಿ ತಾ.
೫೦.	ರೇಣುಕ ಮಣ್ಣೂರು	೧೬	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಮಣ್ಣೂರು, ಅಫಜಲಪುರ ತಾ.
೫೧.	ಮೀನಾಕ್ಷಿ ಮಣ್ಣೂರು	೧೫	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಮಣ್ಣೂರು, ಅಫಜಲಪುರ ತಾ.
೫೨.	ಜಯಶ್ರೀ ಅವರಕೋಡ್	೧೪	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಅವರಕೋಡ್ ಅಥಣಿ ತಾ.
೫೩	ಚೈತ್ರ ಅವರಕೋಡ್	೧೨	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಅವರಕೋಡ್ ಅಥಣಿ ತಾ.
೫೩	ಮಾಯಕ್ಕ ಅವರಕೋಡ್	೧೪	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಅವರಕೋಡ್ ಅಥಣಿ ತಾ.
೫೪.	ಲಕ್ಷ್ಮಿ ಅಮಸಿದ್ದ ಪೂಜಾರಿ	೧೨	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಒಡೆಯರಹಟ್ಟಿ ಅಥಣಿ ತಾ.
೫೫.	ಒಗೆನಪ್ಪ ಭೀಮಪ್ಪ ಪೂಜಾರಿ	೧೨	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಒಡೆಯರಹಟ್ಟಿ ಅಥಣಿ ತಾ.
೫೬.	ಮಾನಂದ ಬೆನಕನಹಳ್ಳಿ	೧೮	ಕೃಷಿ ಡೊಳ್ಳು ಹಾಡುಗಾರಿಕೆ	ಸಾ. ಬೆಕನಹಳ್ಳಿ ಇಂಡಿ ತಾ.
೫೭.	ಸಾವಿತ್ರಿ ಬೆನಕನಹಳ್ಳಿ	೧೭	ಕೃಷಿ ಡೊಳ್ಳು ಹಾಡುಗಾರಿಕೆ	ಸಾ. ಬೆಕನಹಳ್ಳಿ ಇಂಡಿ ತಾ.
೫೮.	ಅಶ್ವಿನಿ ಬಸಗೊಂಡ ಗೌಡಿ	೧೪	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಕೀರಣಗಿ ಅಥಣಿ ತಾ.
೫೯.	ಆಶಾ ಬಸಗೊಂಡ ಗೌಡಿ	೧೨	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಕೀರಣಗಿ ಅಥಣಿ ತಾ.
೬೦.	ಮಾಯವ್ವ ನಿಂಗಪ್ಪ ಪೂಜಾರಿ	೧೩	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಕಿರಣಗಿ ಅಥಣಿ ತಾ.
೬೧.	ಲಕ್ಷ್ಮಿ ತೊದಲಬಾಗಿ	೧೨	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ತೊದಲಬಾಗಿ ಜಮಖಂಡಿ ತಾ.

೬೨.	ಅನ್ನಪೂರ್ಣ ಸಿರಗಾರ	೪೦	ಕೂಲಿ ಡೊಳ್ಳು ಹಾಡುಗಾರಿಕೆ	ಸಾ. ಶಿರಗುರ ಇಂಡಿ ತಾ.
೬೩.	ಶಾಂತಬಾಯಿ ಪೂಜಾರಿ	೪೨	ಕೃಷಿ ಡೊಳ್ಳು ಹಾಡುಗಾರಿಕೆ	ಸಾ. ಮ್ಯಾರಹಳ್ಳಿ
೬೪.	ಭಾರತಿ ತಳೆವಾಡ	೧೪	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ತಳೆವಾಡ
೬೫.	ಸಾವಿತ್ರಿ ತಳೆವಾಡ	೧೪	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ತಳೆವಾಡ
೬೬.	ಜಟ್ಟೆಪ್ಪಾ ಶಿ. ಮಿರಗಿ	೧೮	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಹಿರೇರೋಗಿ
೬೭.	ಬೀರಪ್ಪ ಪೂಜಾರಿ	೧೩	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಬೀರಲದಿನ್ನಿ
೬೮.	ಮುತ್ತಣ್ಣ ಚಿಮ್ಮಲಗಿ	೧೩	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ಬೀರಲದಿನ್ನಿ
೬೯.	ಮೆಹಬೂಬ ಇಂಗಳೇಶ್ವರ	೧೨	ವಿದ್ಯಾರ್ಥಿನಿ/ಡೊಳ್ಳು ಹಾಡುಗಾರಿಕೆ	ಸಾ. ಇಂಗಳೇಶ್ವರ ಬಸವನಬಾಗೇವಾಡಿ ತಾ.
೭೦.	ದೇವಪ್ಪ ತಂದೆ ದ್ಯಾವಣ್ಣ	೨೫	ಕುರಿಗಾರಿಕೆ/ಡೊಳ್ಳು ಹಾಡುಗಾರಿಕೆ	ಸಾ. ಮಹಲ್‌ರೋಜಾ, ಶಹಾಪುರ ತಾ.
೭೧.	ಬೀರಪ್ಪ ತಂದೆ ಸಿದ್ಧಪ್ಪ	೩೨	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಮಹಲ್‌ರೋಜಾ, ಶಹಾಪುರ ತಾ.
೭೨.	ಜಟ್ಟೆಪ್ಪ ಲಕ್ಕುರ ತಂದೆ ಸಾಯಿಬಣ್ಣ	೨೯	ಡ್ರೈವರ್/ಡೊಳ್ಳು ಹಾಡುಗಾರಿಕೆ	ಸಾ. ಮಹಲ್‌ರೋಜಾ, ಶಹಾಪುರ ತಾ.
೭೩.	ಬೀರಪ್ಪ ಗೊಲ್ಲಾಳಪ್ಪ	೮೦	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಿಂದಗಿ
೭೪.	ಮೈಲಾರಪ್ಪ ನಿಂಗಪ್ಪ	೬೨	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಮಡಬಾಳ, ಶಹಾಪುರ ತಾ.
೭೫.	ಶಿಲಿಸಿದ್ಧ ಮಹಾರಾಜ	೪೦	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಹತ್ತೂರು ಸೊಲ್ಲಾಪು ತಾ.
೭೬.	ಅವಸಿದ್ಧ ಬನಸಿದ್ಧ ಹಿರಕೂರು	೭೩	ವ್ಯವಸಾಯ/ಡೊಳ್ಳು ಹಾಡುಗಾರಿಕೆ	ಸಾ. ಹತ್ತೂರು ಸೊಲ್ಲಾಪು ತಾ.
೭೭.	ಸಿದ್ಧರಾಮಯ್ಯ ತಂದೆ ಈಶ್ವರಯ್ಯ ಒಡೆಯರ್	೬೦	ಒಡೆಯತನ	ಸಾ. ಹಂದನಕೆರೆ ಚಿಕ್ಕನಾಯಕನಹಳ್ಳಿ ತಾ.

೭೮.	ಲಕ್ಷ್ಮಜ್ಜಿ ಹಂದನಕೆರೆ	೬೨	ಮನೆಗೆಲಸ	ಸಾ. ಹಂದನಕೆರೆ, ಚಿಕ್ಕನಾಯನಹಳ್ಳಿ ತಾ.
೭೯.	ಶಾಂತಪ್ಪ ತಂದೆ ಪಂಚಪ್ಪ	೩೫	ಒಡೆಯತನ	ಸಾ. ಶಿವನಿ, ತರೀಕೆರೆ ತಾ.
೮೦.	ಚನ್ನಬಸಯ್ಯ ಒಡೆಯರ್	೧೦೩	ಒಡೆಯತನ	ಸಾ. ಹಾಗಲವಾಡಿ, ಗುಬ್ಬಿ ತಾ.
೮೧.	ಸಿದ್ಧಣ್ಣ ಒಡೆಯರು	೬೫	ಒಡೆಯತನ	ಸಾ. ಬೆಕ್ಕಸಿಂದೋಗಿ, ಕೊಪ್ಪಳ ತಾ.
೮೨.	ಶರಣಯ್ಯ ಸ್ವಾಮಿಗಳ	೫೪	ಒಡೆಯತನ	ಕುರಬರ ಬೀದಿ ಬಳ್ಳಾರಿ.
೮೩.	ರೋಹಿತ್ ಸ್ವಾಮಿ ಒಡೆಯರ್	೬೦	ಒಡೆಯತನ	ಸಾ. ದೇವಲಾಪುರ, ಸಿರುಗುಪ್ಪ ತಾ.
೮೪.	ಸಿ.ಕೆ. ರೇಣುಕಮೂರ್ತಿ	೫೧	ಒಡೆಯತನ	ತುರುವೆಕೆರೆ.
೮೫.	ಮೈಲಾರಪ್ಪ ತಂದೆ ಹನುಮಂತಪ್ಪ	೪೨	ಪೂಜಾರಿಕೆ	ಸಾ. ಕೆಂಕೆರೆ, ಅರಸಿಕೆರೆ ತಾ.
೮೬.	ಶಿವಯ್ಯ ಒಡೆಯರ್	೪೭	ಒಡೆಯತನ	ಸಾ. ಸಂತೆಶಿವುರ, ಚೆನ್ನರಾಯಪಟ್ಟಣ ತಾ.
೮೭.	ಎಂ. ರಾಜಪ್ಪ ತಂದೆ ಕೋಶಪ್ಪ	೫೦	ಒಡೆಯತನ	ಸಾ. ಸರವರಕೇರಿ, ಹೊನ್ನಾಳಿ ತಾ.
೮೮.	ಸಿದ್ಧಲಿಂಗಯ್ಯ ಒಡೆಯರ್	೬೦	ಒಡೆಯತನ	ಸಾ. ಕೆಂಚಗಟ್ಟ, ತಿಪಟೂರು ತಾ.
೮೯.	ಗವಿಸಿದ್ಧಯ್ಯ ದೊಡ್ಡಮಣ್ಣಯ	೪೨	ಒಡೆಯತನ	ಸಾ. ಹಿರೇಕುಂಬಿ, ಸೌದತ್ತಿ ತಾ.
೯೦.	ಎಸ್.ಎಸ್. ಖಾಡೆ	೬೫	ಗುಡಿಗೌಡ್ರು	ಸಾ. ಹಿರೇನಸಬಿ, ಬಾದಾಮಿ ತಾ.
೯೧.	ಸಿದ್ಧಯ್ಯ ಶೇಷಯ್ಯ ಒಡೆಯರ್	೪೯	ಒಡೆಯತನ	ಅಮ್ಮಿನಬಾವಿ, ಧಾರವಾಡ.
೯೨.	ತಾರಕೇಶ್ವರಯ್ಯ ಲಿಂಗಯ್ಯ ಅಮುಗಿಮಠ	೫೪	ಒಡೆಯತನ	ಸಾ. ಹುಲ್ಲೂರು, ಲಕ್ಷ್ಮೇಶ್ವರ ತಾ.
೯೩.	ತಿಪ್ಪೇರುದ್ರಸ್ವಾಮಿ	೫೨	ಗುಡಿಗೌಡ್ರು	ಸಾ. ಹಿರೇನಲ್ಲೂರು, ಕಡೂರು ತಾ.
೯೪.	ಶಿವಶಂಕರಪ್ಪ	೬೫	ವಕೀಲರು	ಕಡೂರು.

೯೫.	ಪ್ರಕಾಶ್ ಒಡೆಯರ್	૩೫	ಒಡೆಯರ್	ಸಾ. ದೊಡ್ಡೇರಿ, ಚಳ್ಳಕೆರೆ ತಾ.
೯೬.	ಕೆ.ಪಿ. ಶ್ರೀರಾಯ ತಂದೆ ಪದ್ಮಣ್ಣ	೪೫	ಪೂಜಾರಿಕೆ	ಸಾ. ಕೆ.ಜಿ. ಹಳ್ಳಿ, ಶಿರಾ ತಾ.
೯೭.	ಬೀರಪ್ಪ ತಂದೆ ಸೋಮಪ್ಪ	೫೮	ಪೂಜಾರಿಕೆ	ಪಟ್ಟನಾಯಕನಹಳ್ಳಿ, ಶಿರಾ ತಾ.
೯೮.	ಅಪ್ಪಣ್ಣ ಸಾಂದಲಗ	೬೦	ಕುರಿಗಾರಿಕೆ	ಅಲೆಮಾರಿತನ ಕವಿಹಂ
೯೯.	ಫಕ್ಕೀರಪ್ಪ ಕರಿಯಪ್ಪ ಕುರಿವಿನ್	೪೨	ಪೂಜಾರಿಕೆ	ಸಾ. ಸಂಗ್ರೇಶಕೊಪ್ಪ, ಸೌದತ್ತಿ ತಾ.
೧೦೦.	ರೇವಣ್ಣಯ ಒಡೆಯರ್	೨೯	ಒಡೆಯತನ	ಸಾ. ತಾಳೆಕಟ್ಟೆ, ಹೊಳಲಕೆರೆ ತಾ.
೧೦೧.	ಸಿದ್ದಪ್ಪ ಮಹಾದೇವಪ್ಪ ಪೂಜಾರಿ	೬೨	ಗುಡಿಗೌಡ್ರು	ಸಾ. ಹೊರ್ತಿ, ಬಿಜಾಪುರ ತಾ.
೧೦೨.	ಮಾದೇಗೌಡ್ರು ತಂದೆ ಮಾದೇಗೌಡ್ರು	೫೩	ಗುಡಿಗೌಡ್ರು	ಸಾ. ಕಳಲೆ, ನಂಜನಗೂಡು ತಾ.
೧೦೩.	ಸಿದ್ದು ಮೇಟಿ	૩೭	ಕಂಬಳಿ ತಯಾರಿಕೆ	ಸಾ. ಚಿಕ್ಕನರಗುಂದ, ನವಲಗುಂದ ತಾ.
೧೦೪.	ಬೀರಪ್ಪ ತಂದೆ ಹನುಮಂತಪ್ಪ	೬೭	ಕುರಿಗಾರಿಕೆ	ಸಾ. ಗೋಲಗೇರಿ, ಸಿಂದಗಿ ತಾ.
೧೦೫.	ನಿಂಗಪ್ಪ ತಂದೆ ಮೈಲಾರಪ್ಪ	૩೦	ಗೋರವ	ಸಾ. ಮೈಲಾರ, ಹಡಗಲಿ ತಾ.
೧೦೬.	ಮಹಾದೇವಪ್ಪ ಅಮುಗಿಸಿದ್ದ ಒಡೆಯರ್	૩೫	ಒಡೆಯರ್	ಸಾ. ಢವಳರ್, ಸಿಂದಗಿ ತಾ.
೧೦೭.	ಗಂಗಮ್ಮ ಬಸಪ್ಪ ಒಡೆಯರ್	૩೮	ಒಡೆಯರಮ್ಮ	ಸಾ. ಹೊನ್ನಾವಳಿ, ತಿಪಟೂರು.
೧೦೮.	ರೇಣುಕಮ್ಮ ಒಡೆಯರ್	೬೫	ಒಡೆಯರಮ್ಮ	ಚಿಕ್ಕನಾಯಕನಹಳ್ಳಿ
೧೦೯.	ಶಾರದ ಒಡೆಯರ್	೨೨	ಒಡೆಯರಮ್ಮ	ಸಾ. ಹಿರೇಕುಂಬಿ, ಸೌದತ್ತಿ ತಾ.

• • •

ಆಧಾರ ಗ್ರಂಥಗಳು

ಪುಸ್ತಕಗಳು (ಕನ್ನಡ)

೧. ಅಂಗಡಿ ಎಸ್.ಎಸ್., ಕುರುಬರ ಸಮುದಾಯದ ಭಾಷೆ (ಮಾನವಶಾಸ್ತ್ರ ಅಧ್ಯಯನ), ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೯.

೨. ಅಂಜಗಿಮಠ ಎ.ಸಿ. (ಸಂ.), ಡೊಳ್ಳಿನ ಪದಗಳು, ಶಾರದಾ ಪ್ರಕಾಶನ, ಗದಗ, ೧೯೫೫.

೩. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಪ್ರಜ್ವಲ ಪ್ರಕಾಶನ, ಮೈಸೂರು, ೧೯೯೨.

೪. ಅಡಿವೆಪ್ಪ ಮಾಳಪ್ಪ ಸೊಮತ್ತೆ ಒಡೆಯರ್, ಮಹಿಮಾಂತಕ ಮಹಾಲಿಂಗರಾಯ ಹಾಲುಮತ ಪುರಾಣ, ಕೇಶವ ಪ್ರಿಂಟರ್ಸ್, ಬಿಜಾಪುರ, ೧೯೯೧.

೫. ಅಣ್ಣಪ್ಪ ವಾಸುದೇವರಾಯ, ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ಧೇಶ್ವರ ಪುರಾಣ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೬. ಅರ್ಜುನ ಗೊಳಸಂಗಿ (ಸಂ.), ಡೊಳ್ಳಿನ ಪದಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮.

೭. ಅಮೃತ್ ಸೋಮೇಶ್ವರ, ತುಳುವ ಜನಪದ ಕೆಲವು ನೋಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೮. ಆರ್‌ಗೌಡ ಎಚ್.ಎಂ., ದಕ್ಷಿಣ ಭಾರತದ ಕುರುಬರು, ಶಿವಕೃಪ, ನಂ. ೭೯೪, ೫ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು.

೯. ಆಶೀಸ್ ನಂದಿ, ಆಶೀಸ್ ನಂದಿ ವಿಚಾರ, ಅಕ್ಷರ ಪ್ರಕಾಶನ, ಹೆಗ್ಗೋಡು.

೧೦. ಈರಪ್ಪ ಮ. ಹಿಂಜೆಡ್ಡಿ, ಡೊಳ್ಳಿನ ಹಾಡು, ಪಾರು ಪ್ರಕಾಶನ, ಸ್ಟೇಶನ್ ರೋಡ್, ಗದಗ, ೨೦೦೭.

೧೧. ಒಡೆಯರ್ ಡಿ. ಹೆಗ್ಗಡೆ, ಹಕ್ಕ-ಬುಕ್ಕ, ತನುಮನು ಪ್ರಕಾಶನ, ರಾಮಕೃಷ್ಣನಗರ, ಮೈಸೂರು, ೨೦೦೩.

೧೨. ಒಡೆಯರ್ ಡಿ. ಹೆಗ್ಗಡೆ, ಹಾಲುಮತ ಕುರುಬ ಜನಾಂಗದ ಇತಿಹಾಸ, ಅಖಿಲಾ ಏಜೆನ್ಸೀಸ್, ಮೈಸೂರು, ೨೦೦೫.

೧೩. ಒಡೆಯರ್ ಡಿ. ಹೆಗ್ಗಡೆ, ಕುರುಬ ಜನಾಂಗದ ರಾಜವಂಶಗಳು, ಅಖಿಲಾ ಏಜೆನ್ಸೀಸ್, ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು, ೨೦೦೫.

೧೪. ಒಡೆಯರ್ ಡಿ. ಹೆಗ್ಗಡೆ, ಶ್ರೀ ರೇವಣಸಿದ್ಧೇಶ್ವರ ಮತ್ತು ಶ್ರೀ ಬೀರೇಶ್ವರರು, ಅಖಿಲಾ ಏಜನ್ಸೀಸ್, ಮೈಸೂರು, ೨೦೦೫.

೧೫. ಕಮಲ ಹಮ್ಮಿಗೆ, ದೇವರಿಗೆ ಶರಣೆನ್ನುವನೆ... (ಡೊಳ್ಳಿನ ಹಾಡು), ಪ್ರಭಾ ಪಬ್ಲಿಷರ್ಸ್, ಧಾರವಾಡ, ೧೯೯೪.

೧೬. ಕರಡಿ ಎಂ.ಎಂ. (ಸಂ.), ಡೊಳ್ಳಿನ ಪದಗಳು, ಎಂ.ಎಂ. ಕರಡಿ ಬುಕ್ ಸೆಲ್ಲರ್, ಹುಬ್ಬಳ್ಳಿ, ೧೯೬೧.

೧೭. ಕರಿಯಪ್ಪ ಎಂ., ಹಾಲತೊರೆ, ನಗರ ಕುರುಬರ ಸಂಘ, ಹದಡಿ ರಸ್ತೆ, ದಾವಣಗೆರೆ, ೨೦೦೩.

೧೮. ಕಲಬುರ್ಗಿ ಎಂ.ಎಂ., ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮.

೧೯. ಕಲಬುರ್ಗಿ ಎಂಎಂ., ಹರಿಹರ ರಗಳೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೨೦. ಕಲಬುರ್ಗಿ ಎಂ.ಎಂ., ಪರಶುರಾಮಯ್ಯ ಸಿ.ಕೆ. ಮತ್ತು ಹಳ್ಳಿಕೇರಿ ಎಫ್.ಟಿ. (ಸಂ.), ತಗರ ಪವಾಡ, ವಿದ್ಯಾನಿಧಿ ಪ್ರಕಾಶನ, ಗದಗ.

೨೧. ಕಲಬುರ್ಗಿ ಎಂ.ಎಂ., ಭಾನುಮತಿ ವೈ.ಸಿ., ಸಿದ್ಧಮಂಕ ಚರಿತೆ, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ, ೨೦೦೪.

೨೨. ಕಲಬುರ್ಗಿ ಎಂ.ಎಂ., ಸಂಸ್ಕೃತಿ-ವಿಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೨೩. ಕಲ್ಲಪ್ಪ ಎಂ.ಎಸ್., ಪ್ರದರ್ಶನಾತ್ಮಕ ಜನಪದ ಕಲೆಗಳು, ಜೈಗೌರಿ ಮುದ್ರಣಾಲಯ, ಕೆ.ಎಚ್.ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರ ನಗರ, ಬೆಂಗಳೂರು.

೨೪. ಕೃಷ್ಣಮೂರ್ತಿ ಮ.ಸು., ಸಿದ್ಧಸಾಹಿತ್ಯ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೮೨.

೨೫. ಕುಂಬಾರ ಶ.ಶಿ., ಪುರಾಣ ಪ್ರಶ್ನಾವಳಿ, ವಿಜೇತ ಪ್ರಕಾಶನ, ಗದಗ, ೨೦೦೬.

೨೬. ಕುಂಬಾರ ಶ.ಶಿ., ಹಾಲುಮತದ ಗುರುಶಿಷ್ಯರು, ವಿಜೇತ ಪ್ರಕಾಶನ, ಗದಗ, ೨೦೦೭.

೨೭. ಕುರುವ ಬಸವರಾಜ, ಡೊಳ್ಳು ಮೇಳ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ೨೦೦೪.

೨೮. ಕೋಸಂಬಿ ಡಿ.ಡಿ. (ಮೂ.), ಪುರಾಣ ಮತ್ತು ವಾಸ್ತವ, ವೇಣುಗೋಪಾಲ್ ಟಿ.ಎಸ್., ಶೈಲಜಾ (ಅನು.), ಚಿಂತನ ಉತ್ತರ ಕನ್ನಡ C/o ಪಂಡಿತ ಸಾರ್ವಜನಿಕ ಗ್ರಂಥಾಲಯ, ಹಳೇ ಬಸ್‌ನಿಲ್ದಾಣದ ಹತ್ತಿರ, ಶಿರಸಿ, ಉತ್ತರಕನ್ನಡ.

೨೯. ಗಂಗಾಧರ ದೈವಜ್ಞ (ಸಂ.), ಅಡಿವೆಪ್ಪ ಒಡೆಯರು (ಹಾ) ಮಾಳಿಂಗರಾಯನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಗದ್ದಗೀಮಠ ಬಿ.ಎನಂ. ಕನ್ನಡ ಜಾನಪದ ಗೀತೆಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೨.

೩೧. ಗೊಲ್ಲಾಳಪ್ಪ ಪೂಜಾರಿ ಹೊನಗುಂಟಾ, ಶ್ರೀ ಶಿವಸಿದ್ಧಬೀರೇಶ್ವರ (ಪೌರಾಣಿಕ ನಾಟಕ), ಅಂಬಿಕಾ ಪ್ರಿಂಟರ್ಸ್, ಶಹಾಬಾದ್.

೩೨. ಚಂದ್ರಕಾಂತ ಪ್ರಭುರಾವ ಬಿರಾದಾರ, ಅಮೋಘಸಿದ್ದೇಶ್ವರ ಚರಿತ್ರೆ, ಕಿರಣ ಪ್ರಿಂಟರ್ಸ್, ಗುಲಬರ್ಗಾ, ೧೯೮೨.

೩೩. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೬.

೩೪. ಚಂದ್ರಶೇಖರ್ ಎಂ., ಶಾಂತವೀರಯ್ಯ ಹೀ.ಚಿ. (ಸಂ.), ವೀರಗೊಲ್ಲಾಳನ ಕಾವ್ಯ, ಮೋಹನ್ ಪ್ರಿಂಟರ್ಸ್, ಬೆಂಗಳೂರು, ೧೯೭೨.

೩೫. ಚಕ್ಕೆರೆ ಶಿವಶಂಕರ್ (ಸಂ.), ಮೈಲಾರಲಿಂಗನ ಕಾವ್ಯ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು, ೧೯೮೭.

೩೬. ಚನ್ನಣ್ಣ ವಾಲಿಕರ್, ಹೈದ್ರಾಬಾದ್ ಕರ್ನಾಟಕ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಗುಲಬರ್ಗಾ, ೧೯೯೮.

೩೭. ಚನ್ನಪ್ಪ ಕಟ್ಟಿ, ವಾಡೇದ್ ಆರ್.ಎಸ್., ಕುರುಬ ಜನಪದ, ಕನಕ ಜಯಂತೋತ್ಸವ ಸಮಿತಿ, ಸಿಂದಗಿ ವಿಜಾಪುರ, ೧೯೯೭.

೩೮. ಚನ್ನಬಸವ ಕವಿಯಂ, ಹಾಲುಮತ ಪುರಾಣ, ಅಂಬಿಕಾ ಪ್ರೆಸ್, ಮೈಸೂರು, ೧೯೫೫.

೩೯. ಚನ್ನಮಲ್ಲಿಕಾರ್ಜುನ, ಶ್ರೀ ರೇವಣಸಿದ್ಧರು (ಸಂ.-೧.), ಸಧರ್ಮ ದೀಪಿಕೆಯ ಪ್ರಕಾಶನ, ಮೈಸೂರು, ೧೯೫೧.

೪೦. ಚಪ್ಪರಬಂದ ಆರ್., ಬಿಜಾಪುರ ಜಿಲ್ಲೆಯ ಜಾತ್ರೆಗಳು, ಯಾಸ್ಮಿನ್ ಪ್ರಕಾಶನ, ಬಿಜಾಪುರ, ೨೦೦೬.

೪೧. ಚಿನ್ನಪ್ಪಗೌಡ ಕೆ., ಸಂಸ್ಕೃತಿ ಸಿರಿ, ಮುದಿಪು ಪ್ರಕಾಶನ, ಮಂಗಳ ಗಂಗೋತ್ರಿ, ೨೦೦೨.

೪೨. ಜಕಬಾಳ್ ಎಸ್.ಎಸ್., ಕುರುಬರ ರಟ್ಟಮತಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦.

೪೩. ಜಕಬಾಳ ಎಸ್.ಎಫ್. (ಸಂ.),, ನುಡಿನಮನ, ಶ್ರೀಯುತ ಎಚ್.ಬಿ. ಕಟಿಗೆನ್ನವರ ಅಭಿನಂದನಾ ಹಾಗೂ ಷಷ್ಟ್ಯಬ್ಧಿ ಸಮಾರಂಭ ಸಮಿತಿ, ಧಾರವಾಡ, ೨೦೦೬.

೪೪. ಜವರೇಗೌಡ ದೇ. (ಸಂ.), ಜನಪದ ವಾಹಿನಿ, ಡಿವಿಕೆ ಮೂರ್ತಿ, ಮೈಸೂರು, ೧೯೮೬.

೪೫. ಜೈಕುಮಾರ್ ಎಂ., ನಡೆಮಡಿ, ಶೃತಿ ಪ್ರಕಾಶನ, ಬೆಂಗಳೂರು, ೧೯೮೦.

೪೬. ಜ್ಯೋತಿ ಹೊಸೂರು, ಡೊಳ್ಳಿನ ಹಾಡುಗಳ ಸಮೀಕ್ಷೆ, ಕಾಲಗತಿ ಪ್ರಕಾಶನ, ರಾಯಭಾಗ, ಬೆಳಗಾವಿ, ೨೦೦೩.

೪೭. ಜ್ಯೋತಿ ಹೊಸೂರು, ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು, ಕಾಲಗತಿ ಪ್ರಕಾಶನ, ಬೆಳಗಾವಿ, ೨೦೦೭.

೪೮. ತಪಸ್ವಿಕುಮಾರ (ಸಂ.), ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨.

೪೯. ತೋಂಟಾಪುರ ಎನ್.ಬಿ., ತೋಜೋಮಯ ಹಾಲುಮತ ಪುರಾಣ, ಶಿವಪದ್ಮ ಪ್ರಕಾಶನ, ಗಾಂಧಿ ನಗರ, ಬೆಂಗಳೂರು, ೧೯೯೨.

೫೦. ದೇವಾನಂದ ಮಾಲಗತ್ತಿ, ರ್‍ಯಾಣಗಳು, ಶೈಲ ಪ್ರಕಾಶನ, ಮುದ್ದೇಬಿಹಾಳ್, ೧೯೯೫.

೫೧. ದೊಡ್ಡಣ್ಣ ಗದ್ದನಕೇರಿ, ಬೀರದೇವರ ಸಂಪ್ರದಾಯಗಳು ಮತ್ತು ಆಚರಣೆಗಳು, ಕಮಲ ಪ್ರಕಾಶನ, ಚಿತ್ತವಾಡಗಿ, ೨೦೦೩.

೫೨. ನಟರಾಜ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೫೩. ನಾಗರಾಜ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೬.

೫೪. ನಾಗರಾಜ ಡಿ.ಆರ್., ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೫೫. ನಾಯ್ಕರ ಬ.ಪ., ಹಾಲುಮತಸ್ಥರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩.

೫೬. ನಿಂಗಣ್ಣ ಸಣ್ಣಕ್ಕಿ, ಜಾನಪದ ತರಂಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨.

೫೭. ನಿಂಗಣ್ಣ ಸಣ್ಣಕ್ಕಿ, ಸಾತುಕ್ಯಾಮಣ್ಣನ ಲಾವಣಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೫೮. ನಿಂಗಪ್ಪ ಮುದೇನೂರು, ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೫೯. ನೀಲಗಾರ, ಜಾನಪದ ಜೇನು, ಜಾಗೃತ ಭಾರತ, ಧಾರವಾಡ, ೧೦೯೭.

೬೦. ನೀಲಪ್ಪ ದೊಡ್ಡ ಹನುಮಪ್ಪ ಶರಸೂರಿ, ಬಿನ್ನಿ...ಪುಲಿಗೆರೆಯ ಪುಣ್ಯಕ್ಷೇತ್ರಕ್ಕೆ, ಶ್ರೀ ಮಾಲತೇಶ ಪ್ರಕಾಶನ, ಲಕ್ಷ್ಮೇಶ್ವರ, ಶಿರಹಟ್ಟಿ, ೨೦೦೭.

೬೧. ನೇಗಿನಾಳ್ ಎಂ.ಬಿ., ಮೈಲಾರಲಿಂಗನ ಪದಗಳು, ಸಿ.ಎಂ. ನೇಗಿನಾಳ್, ಮೂರನೆಯ ತಿರುವು, ವಿಜಯನಗರ, ಹಿಂಡಲಗಾ, ಬೆಳಗಾವಿ, ೧೯೯೦.

೬೨. ಪಡಶೆಟ್ಟಿ ಎಂ.ಎಂ., ಹೇಳಕೀ ಮಾಡ್ಯಾರ ಒಡೆಯರು, ನೆಲೆ ಪ್ರಕಾಶನ, ಸಿಂದಗಿ, ೧೯೯೩.

೬೩. ಪರಮಶಿವಯ್ಯ ಜೀ.ಶಂ., ಜನಪದ ಕಾವ್ಯ ಕಥೆಗಳು, ಸುರುಚಿ ಪ್ರಕಾಶನ, ಮೈಸೂರು, ೧೯೭೧.

೬೪. ಪರಮಶಿವಯ್ಯ ಜೀ.ಶಂ., ಕನ್ನಡ ವೃತ್ತಿಗಾಯಕ ಕಾವ್ಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

೬೫. ಪರಶುರಾಮಯ್ಯ ಸಿ.ಕೆ., ಚೌಡಿಕೆಯವರು, ಪರಶು ಪ್ರಕಾಶನ, ಚಿಕ್ಕನಾಯಕನಹಳ್ಳಿ, ೨೦೦೭.

೬೬. ಪಾಲ್ತಾಡಿ ರಾಮಕೃಷ್ಣ, ಜನಪದ ಕುಣಿತಗಳು, ಪ್ರಸನ್ನ ಪ್ರೆಸ್, ಪುತ್ತೂರು, ೧೯೯೨.

೬೭. ಪಾಲ್ತಾಡಿ ರಾಮಕೃಷ್ಣ, ಸಂವಹನ ಮಾಧ್ಯಮವಾಗಿ ಜನಪದ ಕುಣಿತಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ೧೯೯೯.

೬೮. ಪ್ರಭಾಕರ್ ಎ.ಎಸ್., ಮ್ಯಾಸಬೇಡರ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೬೯. ಪ್ರಭಾಕರ ಎ.ಎಸ್., ಬುಡಕಟ್ಟು ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭೦. ಪುರುಷೋತ್ತಮ ಬಿಳಿಮಲೆ, ಕೂಡುಕಟ್ಟು, ಅನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೧೯೯೭.

೭೧. ಪುರುಷೋತ್ತಮ ಬಿಳಿಮಲೆ, ಹುಲಿಗೆಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೭೨. ಪೋತೆ ಎಚ್.ಟಿ., ಹೈದರಾಬಾದ್ ಕರ್ನಾಟಕ ಜನಪದ ಪ್ರದರ್ಶನ ಕಲೆಗಳು, ಅಂಬು ಪ್ರಕಾಶನ, ರಾಯಚೂರು, ೨೦೦೦.

೭೩. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಹಾಲುಮತ ಪುರಾಣವು, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯.

೭೪. ಬಸವನಗೌಡ ಪಾಟೀಲ, ತೂಕ ಮಾಡಿ ಹೇಳತೀನಿ ನ್ಯಾಯ (ಡೊಳ್ಳಿನ ಪದಗಳು), ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ, ೧೯೮೧.

೭೫. ಬಸವಯ್ಯ ಶಾಸ್ತ್ರಿಗಳು ಹಿರೇಮಠ, ಅರವತ್ತು ವರ್ಷಗಳ ಕುರುಬರ ರಟ್ಟಮತಶಾಸ್ತ್ರ, ಮೆ. ಪಿ.ಸಿ. ಶಾಬಾದಿಮಠ, ಬುಕ್ ಡಿಪೋ, ಗದಗ.

೭೬. ಬಸವರಾಜ ಕಲ್ಗುಡಿ, ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೭೭. ಬಸವರಾಜ ನೆಲ್ಲಿಸರ್ (ಸಂ.), ಡೊಳ್ಳಿನ ಹಾಡು, ಯಕ್ಷ ಪ್ರಕಾಶನ, ಮೈಸೂರು, ೧೯೭೮.

೭೮. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕ ಜಾನಪದ ವಾದ್ಯಗಳು, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೧೯೯೭.

೭೯. ಬಾನಂದೂರು ಕೆಂಪಯ್ಯ, ಕರ್ನಾಟಕ ದಲಿತ ಜನಪದ ಸಂಗೀತ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೮೦. ಬೀರಪ್ಪ ಲ. ಹಳಮನಿ (ಸಂ.), ಜನಪದ ಕಾವ್ಯ ಡೊಳ್ಳಿನ ಪದಗಳು, ವಾಸವಿ ಪ್ರಿಂಟರ್ಸ್, ಬಾಗಲಕೋಟೆ.

೮೧. ಬೋನಾ ಬಸವರಾಜ, ಹಾಲುಮತದ ಹುಟ್ಟು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦.

೮೨. ಬೋನಾ ಬಸವರಾಜ, ಭಗವಾನ್ ಬೀರೇಶ್ವರರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೮೩. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೮೪. ಬೋರಲಿಂಗಯ್ಯ ಹಿ.ಚಿ. (ಸಂ.), ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೫. ಬೋರಲಿಂಗಯ್ಯ ಹಿ.ಚಿ., ಉಜ್ಜನಿ ಚೌಡಮ್ಮ, ಗ್ರಾಮದೇವತೆ ಅಧ್ಯಯನ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೮೬. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೮೭. ಬೋರಲಿಂಗಯ್ಯ ಹಿ.ಚಿ., ದಾಸಪ್ಪ ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೮೮. ಮದಗೊಂಡ ದೊಂಡಾಪ್ಪಾ ಒಡೆಯರ್ (ಲೇ) (ಮಹಾರಾಯ), ಸಿದ್ಧಸಿರಿ (ಶ್ರೀ ಅಮೋಘಸಿದ್ದೇಶ್ವರ ಚರಿತ್ರಾಮೃತ), ಸಂಪುಟ-೧, ೧೯೯೭.

೮೯. ಮಲಕಣ್ಣ ಸಿದ್ಧರಾಯ ಪೂಜಾರಿ, ಶ್ರೀ ರೇವಣಸಿದ್ಧೇಶ್ವರ ಚರಿತ್ರೆ (ಸುಕ್ಷೇತ್ರ ಹೊರ್ತಿ), ಶ್ರೀ ರೇವಣಸಿದ್ಧೇಶ್ವರ ಸಂಸ್ಥೆ, ಹೊರ್ತಿ, ೨೦೦೭.

೯೦. ಮಲ್ಲೇಪುರಂ ಜಿ. ವೆಂಕಟೇಶ (ಸಂ.), ಶಂಬಾ ಕೃತಿ ಸಂಪುಟ-೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೯೧. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಸಂಸ್ಕೃತಿ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ೨೦೦೪.

೯೨. ಮುತ್ತಯ್ಯ ಎಸ್.ಎಂ., ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೯೩. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೯೪. ಮೊಗಳ್ಳಿ ಗಣೇಶ್, ಆದಿಮ, ಸಾರಾಂಗ ಪ್ರಕಾಶನ, ತಿಪಟೂರು, ೨೦೦೫.

೯೫. ಮೊಗಳ್ಳಿ ಗಣೇಶ್, ಮೌಖಿಕ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೯೬. ಯರ‍್ರೆಪ್ಪ ಡಿ., ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೮.

೯೭. ಯಲ್ಲನಗೌಡ ಫ. ಅತ್ತಿಕೊಳ್ಳ, ಹಾಲುಮತದ ಚರಿತ್ರೆ, ಚಂದ್ರೋದಯ ಮುದ್ರಣಾಲಯ, ಧಾರವಾಡ, ೧೯೪೯.

೯೮. ಯಲ್ಲನಗೌಡ ಅತ್ತಿಕೊಳ್ಳಿ (ಸಂ.), ಡೊಳ್ಳಿನ ಪದಗಳು, ಎಂ.ವಿ. ವೀರಪ್ಪ ಪಬ್ಲಿಷರ್ಸ್, ಗದಗ.

೯೯. ರಂಗರಾಜ ವನದುರ್ಗ, ಜನಪದ ಸಾಂಸ್ಕೃತಿಕ ವೀರರು, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ೨೦೦೭.

೧೦೦. ರಮೇಶ ಸ.ಚಿ. (ಸಂ.), ಜಾನಪದ ಕರ್ನಾಟಕ, ಸಂ.೩., ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೦೧. ರಮೇಶ ಸ.ಚಿ. (ಸಂ.), ಜಾನಪದ ಕರ್ನಾಟಕ, ಸಂ. ೪, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೦೨. ರವಿ ಬಿ.ಕೆ. (ಅನು), ಶಶಿ ಸಿಂಪಳ್ಳಿ (ಮೂಲ), ಭಾರತದ ಕುರುಬರು, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೫.

೧೦೩. ರವೀಂದ್ರನಾಥ ಕೆ., ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸೊಂಡೂರು, ೨೦೦೭.

೧೦೪. ರಸ್ತಾಪುರ ಭೀಮಕವಿ, ಶ್ರೀ ರೇವಣಸಿದ್ಧೇಶ್ವರ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣವು, ಅಂಬಿಕಾ ಪ್ರಿಂಟರ್ಸ್, ಬೆಂಗಳೂರು, ೧೯೧೬.

೧೦೫. ರಹಮತ್ ತರೀಕೆರೆ, ಪ್ರತಿಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩.

೧೦೬. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೦೭. ರಹಮತ್ ತರೀಕೆರೆ, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೦೮. ರಾಜಶ್ರೀ, ತುಳು ಜನಪದ ಕಾವ್ಯ ಇಹಪರ ಲೋಕದೃಷ್ಟಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ೨೯೯೮.

೧೦೯. ರಾಜಾರಾಮ ಹೆಗಡೆ, ಲೌಖಿಕ ಅಲೌಖಿಕ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೧.

೧೧೦. ರಾಜಾರಾಮ ಹೆಗಡೆ, ಗತಕಥನ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೫.

೧೧೧. ರಾಜೇಗೌಡ ಹೊಸಹಳ್ಳಿ, ತಾಳಬಂದೊ....ತಂಬೂರಿ ಬಂದೊ., ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೧೧೨. ರಾಮಚಂದ್ರ ಚಿಂತಾಮಣಿ ಢೇರೆ (ಮೂ.), ಚಂದ್ರಕಾಂತ ಪೋಕಾಳೆ (ಅನು.), ಶ್ರೀ ವಿಠಲ ಒಂದು ಮಹಾಸಮನ್ವಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೧೧೩. ರಾಮಚಂದ್ರ ಚಿಂತಾಮಣಿ ಢೇರೆ (ಮೂ.), ರಾಮಕೃಷ್ಣ ಮರಾಠೆ (ಅನು.), ದಕ್ಷಿಣದ ದೇಶಿ ದೇವರು ಶ್ರೀ ಖಂಡೋಬಾ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

೧೧೪. ರಾಮಚಂದ್ರ ಚಿಂತಾಮಣಿ ಢೇರೆ (ಮೂ.), ವಿಠಲರಾವ್ ಗಾಯಕ್ವಾಡ್ (ಅನು.), ಮಲ್ಲಿಕಾರ್ಜುನ ಮತ್ತು ಮಹಾರಾಷ್ಟ್ರ, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸಂಡೂರು, ೨೦೦೬.

೧೧೫. ರಾಮಚಂದ್ರ ಚಿಂತಾಮಣಿ ಢೇರೆ (ಮೂ.), ಚಂದ್ರಕಾಂತ ಪೋಕಳೆ (ಅನು.), ನಾಥ ಸಂಪ್ರದಾಯದ ಇತಿಹಾಸ, ಕನ್ನಡ ಜಾಗೃತಿ ಪುಸ್ತಕ ಮಾಲೆ, ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಸಿದ್ಧಸಂಸ್ಥಾನಮಠ, ಚಿಂಚಣಿ, ೨೦೦೪.

೧೧೬. ರಾಮಚಂದ್ರನ್ ಸಿ.ಎನ್., ವಸಾಹತೋತ್ತರ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೨.

೧೧೭. ರಾಮಚಂದ್ರಗೌಡ ಹಿ.ಶಿ., ಪುರದ ಪುಣ್ಯಂ, ಕನ್ನಡ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೪.

೧೧೮. ಲಲಿತಾ ಎ.ಸಿ., ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೩.

೧೧೯. ವಿರೂಪಾಕ್ಷಪ್ಪಗೌಡ ಕೆ., ಕೊಟ್ರಪ್ಪ ಮೇಟಿ (ಸಂ.), ನಡಿಯಪ್ಪ ನಮ್ಮ ನಾಡಿಗೆ (ಡೊಳ್ಳಿನ ಹಾಡುಗಳು), ರಾಮನಗರ, ಹಗರಿಬೊಮ್ಮನಹಳ್ಳಿ, ೧೯೮೧.

೧೨೦. ವೀರೇಶ ಶೇ. ಬಡಿಗೇರ, ಉತ್ತರ ಕರ್ನಾಟಕ ಜನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ, ವಿಮೋಚನಾ ಪ್ರಕಾಶನ, ಅಥಣಿ, ಬೆಳಗಾವಿ ಜಿ., ೧೯೯೯.

೧೨೧. ವೀರಣ್ಣದಂಡೆ, ಜಾನಪದ ಕಾವ್ಯ ಮೀಮಾಂಸೆ, ಮೂಡಲ ಪ್ರಕಾಶನ, ಕಲುಬುರ್ಗಿ, ೧೯೮೨.

೧೨೨. ವೀರಣ್ಣದಂಡೆ, ಜನಪದ ಸಾಹಿತ್ಯ ಸಿದ್ಧಾಂತಗಳು, ಬಸವ ಪ್ರಕಾಶನ, ಕಲಬುರ್ಗಿ, ೧೯೯೬.

೧೨೩. ವೀರಣ್ಣದಂಡೆ (ಸಂ.), ಸಿದ್ಧಪ್ಪ ಮೇಟಿ (ಹಾ.), ಜನಪದ ಹಾಲುಮತ ಮಹಾಕಾವ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೧೨೪. ವೀರಣ್ಣದಂಡೆ, ಜನಪದ ಕಾವ್ಯ ಮೀಮಾಂಸೆ ಹಾಗೂ ವಿಮರ್ಶ ಪ್ರಸ್ಥಾನಗಳು, ಕವಿಮಾರ್ಗ ಪ್ರಕಾಶನ, ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಕಲಬುರ್ಗಿ, ೨೦೦೪.

೧೨೫. ವಿವೇಕ ರೈ ಬಿ.ಎ., ಅನ್ವಯಿಕ ಜಾನಪದ, ಮಂಗಳ ಗಂಗೋತ್ರಿ (ದಕ್ಷಿಣ ಕರ್ನಾಟಕ), ೧೯೮೭.

೧೨೬. ವಿವೇಕ ರೈ ಬಿ.ಎ., ಗಿಳಿಸೊವೆ, ಅಕ್ಕಸಿರಿ ಸಾಂಸ್ಕೃತಿಕ ಕೇಂದ್ರ, ಮಂಗಳೂರು, ೧೯೯೫.

೧೨೭. ವಿಷ್ಣು ಎಂ. ಶಿಂದೆ, ಮಹಾಶಕ್ತಿ ಚಿಂಚಲಿ ಮಾಯಕ್ಕದೇವಿ, ಶ್ರೀ ಮಾಯಕ್ಕದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ, ಚಿಂಚಲಿ, ರಾಯಭಾಗ ತಾ., ೨೦೦೦.

೧೨೮. ವೆಂಕಟೇಶ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೨೯. ವೆಂಕಟೇಶ ಇಂದ್ವಾಡಿ (ಸಂ.), ಮಲೆಯ ಮಾದಪ್ಪನ ಮಹಾಕಾವ್ಯ : ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೧೩೦. ಶಂಕರನಾರಾಯಣ (ಸಂ.), ಕರ್ನಾಟಕ ಜನಪದ ಮಹಾಕಾವ್ಯಗಳು, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೧೩೧. ಶಂಕರ ಶಿ. ಕುಂಬಾರ, ಹಾಲುಮತದ ಪ್ರಶ್ನೋತ್ತರ ಮಾಲೆ, ಬಸವ ಪ್ರಕಾಶನ, ಕಬ್ಬೂರ, ೨೦೦೪.

೧೩೨. ಶಂಕರ ಶಿ. ಕುಂಬಾರ, ಹಾಲುಮತದ ಮೂಲಗುರು ರೇವಣಸಿದ್ಧರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೧೩೩. ಶಂಕರ ಶಿ. ಕುಂಬಾರ, ಹಾಲುಮತದ ಸಿದ್ಧರಾಮ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬-೦೭.

೧೩೪. ಶಂಕರಾನಂದಪ್ಪ ಎನ್. (ಸಂ.), ಹಾಲುಮತ ಪುರಾಣ ಅಥವಾ ಮುದ್ದಲಿಂಗೇಶ್ವರ ಚರಿತ್ರೆ, ವಿದ್ಯಾನಿಧಿ ಪ್ರಕಾಶನ, ಗದಗ.

೧೩೫. ಶಂಬಾ ಜೋಶಿ, ಹಾಲುಮತ ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೧೩೬. ಶಿವಲಿಂಗ ಕುಂಬಾರ (ಸಂ.), ಬೀರೇಶ್ವರ ಮಾಳಿಂಗರಾಯರ ಡೊಳ್ಳಿನ ಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೧೩೭. ಶಿವಾನಂದ ಗುಬ್ಬಣ್ಣವರ್ (ಸಂ.), ದೇವರ್ ಬಂದಾವ್ ಬನ್ನಿರೇ ಭಾಗ-೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೧೩೮. ಶಿವಾನಂದ ಗುಬ್ಬಣ್ಣವರ್ (ಸಂ.), ದೇವರ್ ಬಂದಾವ್ ಬನ್ನಿರೇ ಭಾಗ-೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೧೩೯. ಶಿವಾನಂದ ಗುಬ್ಬಣ್ಣವರ, ಕರ್ನಾಟಕ ಕುರುಬರು, ಅಕ್ಷರ ಪ್ರಕಾಶನ, ಧಾರವಾಡ, ೧೯೯೩.

೧೪೦. ಶಿವಾನಂದ ಶೆಲ್ಲಿಕೇರಿ (ಸಂ.), ಕೃಷ್ಣಾತೀರದ ಹಾಡು ಸಂಸ್ಕೃತಿ, ಗೌರಿ ಪ್ರಕಾಶನ, ಯಂಡಿಗೇರಿ, ಬಾದಾಮಿ ತಾ., ೨೦೦೧.

೧೪೧. ಶಿವಾಜಿ ಕಾಂಬಳೆ, ದಿವ್ಯಮೂರ್ತಿ ಮಾಳಿಂಗರಾಯ, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ, ಗುಲಬರ್ಗಾ ವಿಭಾಗ, ದೇವದುರ್ಗ ತಾ., ೨೦೦೮.

೧೪೨. ಶ್ರೀರಾಮ ಇಟ್ಟಣ್ಣ, ಕೊಣ್ಣೂರ ಕರಿಸಿದ್ಧೇಶ್ವರ ದೇವಸ್ಥಾನ, ನಾಗಪ್ಪ ಕರಿಯಪ್ಪ ಪೂಜೇರ ಪ್ರಕಾಶನ, ಕೊಣ್ಣೂರ್, ೧೯೯೫.

೧೪೩. ಶ್ರೀರಾಮ ಇಟ್ಟಣ್ಣ (ಪ್ರ.ಸಂ.), ಹಾಲಕೆನೆ, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ಬಿಜಾಪುರ, ೨೦೦೨.

೧೪೪. ಷಲ್ಡನ್ ಪೊಲಕ್ (ಮೂ.), ಅಕ್ಷರ ಕೆ.ವಿ. (ಅನು.), ವಿಶ್ವಾತ್ಮಕ ದೇಶಭಾಷೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೩.

೧೪೫. ಸುಧಾಕರ (ಸಂ.), ದಿವಂಗತ ವಿ.ಆರ್. ಹನುಮಂತಯ್ಯ (ಲೇ.), ಕುರುಬರ ಚರಿತ್ರೆ, ಪ್ರತಿಭಾ ಪ್ರಕಾಶನ, ಮೈಸೂರು, ೧೯೨೬.

೧೪೬. ಸುಧಾಕರ, ಜನಪದ ನುಡಿಗಟ್ಟುಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೪೭. ಸುಶೀಲಾ ಪಿ., ಜನಪದ ಆರಾಧನೆ ಮತ್ತು ರಂಗಕಲೆ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೧೪೮. ಸೋಮಶೇಖರ ಇಮ್ರಾಪೂರ (ಸಂ.), ಜಾನಪದ ಸಾಹಿತ್ಯ ದರ್ಶನ ಭಾಗ-೧೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೧೪೯. ಹನುಮಂತಯ್ಯ ವಿ.ಆರ್., ವಿಜಯನಗರ ಸಾಮ್ರಾಜ್ಯ ಚರಿತ್ರೆ, ೧೯೫೨.

೧೫೦. ಹರಿದಾಸ ಭಟ್ಟ ಕು.ಶಿ., ರಶಿಯಾದಲ್ಲಿ ಡೊಳ್ಳಿನ ದಿಗ್ವಿಜಯ, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ. ೧೯೯೩.

೧೫೧. ಹಾಲೇಶ್ ಎಂ. ಮೇಟಿ, ಡೊಳ್ಳಿನ ಹಾಡುಗಳು, ಎಂ.ಎಂ. ಕರಡಿ ಬುಕ್ ಸೆಲ್ಲರ್, ಹುಬ್ಬಳ್ಳಿ, ೧೯೫೯.

೧೫೨. ಹಿರೇಮಠ ಎಸ್.ಎಸ್., ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ, ೧೯೯೩.

೧೫೩. ಹಿರೇಮಠ ಎಸ್.ಎಸ್., ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ, ೨೦೦೫.

೧೫೪. ಹಿರೇಮಠ ಕೆ.ಎಸ್., ಶ್ರೀ ಶ್ರೀ ಶ್ರೀ ರೇವಣಸಿದ್ಧೇಶ್ವರರು, ಶ್ರೀ ಘನಮಠೇಶ ಧರ್ಮಪ್ರಚಾರಕ ಮಂಡಳಿ, ವಿರಕ್ತಮಠ, ನರಗುಂದ, ೧೯೮೨.

೧೫೫. ಹಿರೇಮಠ ವ್ಹಿ.ಬಿ. (ಸಂ.), ಶಿಕ್ಷಣ ಪ್ರದೀಪ, ಪ್ರೊ. ಬಿ.ಎಸ್. ದಂಡಿನವರ ಅಭಿನಂದನ ಗ್ರಂಥ ಸಮಿತಿ, ಗದಗ, ೧೯೯೨.

೧೫೬. ಹೆಗಡೆ ಎಲ್.ಆರ್., ಕರ್ನಾಟಕ ಕರಾವಳಿಯ ಜನಪದ ಗೀತೆಗಳು, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು.

ಇಂಗ್ಲೀಷ್ ಪುಸ್ತಕಗಳು

೧೫೭. Gunther-Dietz-Sontteimer, Pastoral deihies in western India, Oxford University Press, Delhi, 1993.

೧೫೮. Gunther-Dietz Sontheimer, Essays on Religion Literature and Law, Indian Gandhi National Centre for the Arts, New Delhi, 2004.

೧೫೯. Gustove Oppert, The Original Inhabitants of Bharatavastha or India, Asian Education Services, New Delhi, 1998.

೧೬೦. Herskovites, Cultural Anthropology, Mohan Publisher, New Delhi, 1974.

೧೬೧. Kariyappa M., Pal Darshini, Harthikote, 1993.

೧೬೨. Nanjundayya H.V., and Ananthakrishna Iyer L.K., Mysore Tribes and Castes, Vol IV, Mysore Govt Press, 1926.

೧೬೩. Shashi S.S., The Shepherds of India, sundeep Prakashan Delhi, 1978.

ಪಿಎಚ್.ಡಿ. ಪ್ರಬಂಧಗಳು

೧೬೪. ಉಮೇಶ ಗುರಿಕಾರ, ಹೈದ್ರಾಬಾದ್ ಕರ್ನಾಟಕ ಕುರುಬರ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೬೫. ಗುಂಡಕರ್ಜಗಿ (ಸಂ.), ಹಂಡೆ ಕುರುಬರು : ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

೧೬೬. ಬಿರಾದರ ಬಿ.ಜಿ. (ಸಂ.), ಕುರುಬಗುರು ಒಡೆಯರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೬೭. ಯರ‍್ರೆಪ್ಪ ಡಿ. (ಸಂ.), ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೬೮. ವಿಜಯಶ್ರೀ ಇಟ್ಟಣ್ಣವರ (ಸಂ.), ಕಂಬಳಿ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೧೬೯. ಸತೀಶ ಪಾಟೀಲ್ (ಸಂ.), ಪಂಚಗಣಾಧೀಶ್ವರರು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಲೇಖನಗಳು

೧೭೦. ಕಲುಬುರ್ಗಿ ಎಂ.ಎಂ., ಹಕ್ಕ-ಬುಕ್ಕ, ಸಂಶೋಧನ ವ್ಯಾಸಂಗ ೪-೫

೧೭೧. ರಾಮಚಂದ್ರನ್ ಸಿ.ಎನ್. ಜನಪದ ಹಾಲುಮತ ಮಹಾಕಾವ್ಯ, ಹೊಸಮುಡಿಯ ಮೇಲೆ ಚದುರಂಗ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೭.

೧೭೨. ವೀರಣ್ಣ ದಂಡೆ, ಬೀರಪ್ಪ ಮಾಳಿಂಗರಾಯ ಇಬ್ಬರು ಬುಡಕಟ್ಟು ಸಾಂಸ್ಕೃತಿಕ ನಾಯಕರು, ಗಿರಿಜನ ಸಿರಿ, ಡಾ. ಪಿ.ಕೆ. ಖಂಡೋಬಾ ಅಭಿನಂದನ ಸಂಪುಟ, ನಾಯಕ ಡಿ.ಬಿ. (ಸಂ.), ಡಾ. ಪಿ. ಖಂಡೋಬಾ ಅಭಿನಂದನ ಸಮಿತಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೭೩. ಶ್ರೀರಾಮ ಇಟ್ಟಣ್ಣ, ಡೊಳ್ಳಿನ ಹಾಡು, ಡಾ. ಎಂ.ಬಿ. ಕೊಟ್ರಶೆಟ್ಟಿ ಸ್ಮರಣ ಸಂಪುಟ, ಬಸವರಾಜ ಮಲಶೆಟ್ಟಿ (ಸಂ.), ಡಾ. ಎಂ.ಬಿ. ಕೊಟ್ರಶೆಟ್ಟಿ ಸ್ಮರಣ ಗ್ರಂಥ ಸಮಿತಿ, ಹೊಸಪೇಟೆ, ೧೯೯೩.

೧೭೪. ಸಿದ್ಧರಾಮಯ್ಯ ಎಸ್.ಜಿ., ವಚನಕಾರ ವೀರಗೊಲ್ಲಾಳ, ಅನಿಕೇತನ (ತ್ರೈಮಾಸಿಕ), ವೆಂಕಟಗಿರಿ ದಳವಾಯಿ (ಸಂ.), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಏಪ್ರಿಲ್-ಜೂನ್, ೨೦೦೬.

೧೭೫. ಹುರಕಡ್ಲಿ ಶಿವಕುಮಾರ, ಡೊಳ್ಳಿನ ಹಾಡುಗಳಲ್ಲಿ ಸಾಮಾಜಿಕ ನೀತಿ, ಜಾನಪದ ಸಂಪದ, ಮಲ್ಲಿಕಾರ್ಜುನ ಶಿ. ಲಠ್ಠೆ (ಸಂ.), ಡಾ. ಎಂ.ಎಸ್. ಸುಂಕಾಪುರ ಅಭಿನಂದನ ಗ್ರಂಥ, ೧೯೮೨.

೧೭೬. ಕಲುಬುರ್ಗಿ ಎಂ.ಎಂ., ಸಿದ್ಧರಾಮ ಶಿವಯೋಗಿಯಾದ ರೇವಣಸಿದ್ಧನನ್ನು ಶಿವಚಾರ್ಯ ಮಾಡಿದರು ಲಿಂಗಾಯತ (ಪತ್ರಿಕೆ), ಜುಲೈ ೨೦೦೬.

೧೭೭. ನಾಗಭೂಷಣ ಸ್ವಾಮಿ ಓ.ಎಲ್., ಅರಿವಿನ ಕುಲದಲ್ಲಿ ಅಡಗುವ ಆಸೆ ವೀರಗೊಲ್ಲಾಳನ ವಚನಗಳು, ಸಾಹಿತ್ಯ ಸಂವಾದ-೬೩, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ.

೧೭೮. ಮಲ್ಲಿಕಾ ಘಂಟಿ, ಹಾಲುಮತದ ಮಹಿಳೆಯರ ಸಾಧನ-ಸಿದ್ದಿ, ತನುಕರಗದವರಲ್ಲಿ.., ಗೌತಮ ಪ್ರಕಾಶನ, ಬಳ್ಳಾರಿ, ೨೦೦೦.

ಪತ್ರಿಕೆಗಳು

೧೭೯. ಅರ್ಚನಾ ಬೊಮ್ಮಳ್ಳಿ, ಗ್ರಾಮಾಭಿವೃದ್ಧಿಗೆ ಯುವಕರ ಡೊಳ್ಳಿನ ಕುಣಿತ, ಕನ್ನಡ ಪ್ರಭ, ಕರ್ನಾಟಕ ಕನ್ನಡಿ, ೨೮ನೇ ಮಾರ್ಚ್, ೨೦೦೭.

೧೮೦. ನಿರಂಜನ ವಾನಳ್ಳಿ, ಜೇನುಕುರುಬರ ಹಾಡಿನಲ್ಲಿ ಕೃಷಿಹಾಡು, ಪ್ರಜಾವಾಣಿ, ೧೯೯೭.

೧೮೧. ಬಸವರಾಜ ಸಂಪಳ್ಳಿ, ನಾಡಿನ ಪ್ರಥಮ ಮಹಿಳಾ ಡೊಳ್ಳುಮೇಳ, ಪ್ರಜಾವಾಣಿ, ಭೂಮಿಕಾ, ೨೩ ಏಪ್ರಿಲ್, ೨೦೦೫.

೧೮೨. ಪಾಟೀಲ್ ಎಸ್.ಸಿ., ಅಮೋಘಸಿದ್ಧನ ಹೇಳಿಕೆಗಳು, ಜಾನಪದ ಜಗತ್ತು ೩-೯, ೧೯೮೧.

೧೮೩. ಮಹಾಲಿಂಗ ಮಂಗಿ, ಕುರುಬರ ದಟ್ಟಿ ಆಟ, ಜಾನಪದ ಜಗತ್ತು ೩-೬, ೧೯೮೧.

೧೮೪. ಮಾರುತಿ ಆರ್., ಡೊಳ್ಳಿನ ಕುಣಿತಕ್ಕೆ ಹೊಸ ಆಯಾಮ, ಪ್ರಜಾವಾಣಿ, ಭೂಮಿಕಾ, ೨೨ನೇ ಅಕ್ಟೋಬರ್, ೨೦೦೫.

೧೮೫. ರಾಜಶೇಖರ ಗು. ಮುತ್ತಿನಮಠ, ಡೊಳ್ಳುಕುಣಿತದಲ್ಲಿ ಸಾಗರ ಮಹಿಳೆಯರು, ಪ್ರಜಾವಾಣಿ, ಭೂಮಿಕಾ, ೧೭ನೇ ಜೂನ್, ೨೦೦೬.

೧೮೬. ರಾಮಭಟ್ಟ ಬಿ.ಎಸ್., ಬುಡಕಟ್ಟು ಜನಾಂಗದ ಕುರುಬರ ಚಾರಿತ್ರಿಕ ವಿಶ್ಲೇಷಣೆ, ಕಸ್ತೂರಿ, ಸೆಪ್ಟೆಂಬರ್, ೨೦೦೩.

ಕ್ಯಾಸೆಟ್‌ಗಳು

೧. ಶ್ರೀಶೈಲ ಇಂಗಳೇಶ್ವರ ಹಾಗೂ ಸಂಗಡಿರು; ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಸಂಘ ಇಂಗಳೇಶ್ವರ;

* ಮಳ್ಳ ಮಾನಸಿದ್ಧ, ವಾಲ್ಯೂಮ್- ೧೯.

* **ಮುಂಡಾಸಹೊಯಿಕ ಹುಲಜಂತಿ ಬೆಳಕ,** ವಾಲ್ಯೂಮ್-೧೩.

* ಭಂಡಾರದ ಒಡೆಯಾ, ವಾಲ್ಯೂಮ್-೨೩.

* **ಮಾನಸಿದ್ಧ ಮಾಡುತಾನ ಡೌಲ,** ವಾಲ್ಯೂಮ್-೧೪.

* **ಸಭದಾಗ ಮಾಡೊ ಪಾಸಾ,** ವಾಲ್ಯೂಮ್-೦೭.

Padmini Music Cassttes, Krishna Complex Amrai Road, SANGLI.

೨. ಮಾನಸಿದ್ಧ ಪೂಜಾರಿ ಹಾಗೂ ಸಂಗಡಿಗರು ಸಾ || ಉಮದಿ;

* ಶ್ರೀಶೈಲ ಹರಿತೀನಿ ನಿನ್ನ ಕರಿ, ವಾಲ್ಯೂಮ್-೦೩.

* **ಹಾಕಿನಿ ಸವಾಲ ವಡದ ಹೇಳೊ ಶ್ರೀಶೈಲ,** ವಾಲ್ಯೂಮ್-೦೪.

* **ಹಗಮಲ್ಲಿ** ಶ್ರೀಶೈಲ, ವಾಲ್ಯೂಮ್-೦೫.

Padmini Music Cassttes, Krishna Complex Amrai Road, SANGLI.

೩. ಜೆಟ್ಟೆಪ್ಪಾ ಶಿ. ಮಿರಗಿ ಹಾಗೂ ಸಂಗಡಿಗರು; ಶ್ರೀ ಜಟ್ಟಿಂಗೇಶ್ವರ ಗಾಯನ ಸಂಘ, ಹಿರೇರೂಗಿ; **"ಮಾಳಿಂಗರಾಯನ ಮಹಿಮೆ ಕೇಳೊ ಅಗಸಬಾಳದ ಹುಮ್ಮ"**; Laxmi Music Cassettes, Vijay Chowk Near S.T Stand, AKKELKOT.

೪. ಬೀರಣ್ಣ ಪೂಜಾರಿ, ಮುತ್ತಣ್ಣ ಚಿಮ್ಮಲಗಿ ಶ್ರೀ ಕರಿಸಿದ್ಧೇಶ್ವರ ಡೊಳ್ಳಿನ ಸಂಘ; **"ಸವಾಲಿನ ಸರದಾರ"**; Music world A.C.O. Complex, Bus Stand Road, ILKAL.

೫. ಬಸವರಾಜ ಗುಂಡಗಿ, ಚಿದಾನಂದ ಗುಂಡಗಿ ಹಾಗೂ ಸಂಗಡಿಗರು; ಶ್ರೀ ಜಟ್ಟೆಪ್ಪ ಬಳಗಾರಿ ಡೊಳ್ಳಿನ ಸಂಘ, ಇಂಡಿ; **"ಮಾಳಿಂಗರಾಯ ನಮ್ಮಾಂವ ಅಮೋಘಸಿದ್ಧ ನಿಮ್ಮಾಂವ ಭಾಗ-೧೦"**; Music world A.C.O. Complex, Bus Stand Road, ILKAL..

೬. ಅನ್ನಪೂರ್ಣ ಶಿರಗೂರ ಶ್ರೀ ಸಿದ್ಧರಾಯದೇವರ ಡೊಳ್ಳಿನ ಸಂಘ, ಶಿರಗೂರ ತಾ. ಇಂಡಿ; **"ಹಾದಿ ಹಿಡಿದು ಹಾಡದು ಕಲಿ-ಭಾಗ-೧"**; Music world A.C.O. Complex, Bus Stand Road, ILKAL.

೭. ಯಂಕಪ್ಪ ಹೊಸೂರ ಚಂದ್ರಣ್ಣ ಹೊಸಮನಿ ಮತ್ತು ಸಂಗಡಿಗರು; ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಸಂಘ, ಗುಗಿಹಾಳ್, ಹನುಮಾಪೂರ; **"ಮಾನಗೆಟ್ಟ ಮಂದಿಗೆ ಮಚ್ಚಿಯ ಏಟಾ"**; ವಿದ್ಯಾಶ್ರೀ ಆಡಿಯೋ ಫತ್ತರಗಾ.

೮. ಶಿವಣ್ಣಾ ಶಿವಲಿಂಗ ಮತ್ತು ಸಂಗಡಿಗರು; ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಹಾಡಕಿ ಸಂಘ, ಕೇರೂರ ತಾ. ಸಿಂದಗಿ; **"ಮಾನಗೆಟ್ಟ ಮಂಗಗಳು"**; Laxmi Music Cassettes, Vijay Chowk Near S.T Stand, AKKELKOT.

೯. ಕರಪ್ಪ, ಸದಾಶಿವ ನಾಯಕ; ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಸಂಘ, ಯಲ್ಪಾರಟ್ಟಿ; **"ಬಿಟ್ಟ್ಯಾಕ ಸ್ವಾದರ ಮಾವನ ಗೆಳೆತನ"**; Monoranjan Audio, No. 8st FLoor, Ist Main Gandinagara, Banglore

೧೦. ಮಾಂತೇಶ ಹಲಸಂಗಿ, ನಿಂಗಪ್ಪ ಹಚ್ಯಾಳ್; ಇಂಡಿ ಜಟ್ಟೆಪ್ಪ ಬಳಗಾರಿಯವರ ಡೊಳ್ಳಿನ ಸಂಘ; **"ಸಂಕನಾಳ ಹೇಡಿ ಬಿದ್ದಾರ ರಾಡಿ"**; Ashwini Recording Company, # 11. B.B. Naidu Road, Gandinagara, Banglore

೧೧. ಗುರುಲಿಂಗ ಮಾಸ್ತರ ಸಂಕನಾಳ್ ಹಾಗೂ ಸಂಗಡಿರು; ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಸಂಘ, ಸಂಕನಾಳ್; **"ಸಾಯಬ್ಯಾಡ ನೀ ಹುಟ್ಟಿ"**; Padmini Music Cassttes, Krishna Complex Amrai Road, SANGLI.

೧೨. ರೇಣುಕಾ, ಮೀನಾಕ್ಷಿ; ದೇವರಾಯ ಮುತ್ಯಾ ಡೊಳ್ಳಿನ ಸಂಘ, ಮಣ್ಣೂರು;

* **ನೋಡು ಮಾಲಿಂಗರಾಯನ ಶಿಖರ, ಭಾಗ-೧.**

* **ನೀನು ಬಾಳ ಸ್ಮೋಕಿ ನಿಮ್ಮಪ್ಪ ಬಾಳ ಬೆರಕಿ, ಭಾಗ-೫**; ವಿದ್ಯಾಶ್ರೀ ಆಡಿಯೋ ಫತ್ತರಗಾ.

೧೩. ಶಾಂತಾಬಾಯಿ ಪೂಜಾರಿ, ಕಾಂತಬಾಯಿ ಡೊಳ್ಳಿನ ಸಂಘ, ಮ್ಯಾರ್ಸಹಳ್ಳಿ; **"ಕುಮಾರಿ ಜೆಟ್ಟಿ ತುಡುಗಿಗೆ ಹೊಂಟ"**; Sri Shanti Prakash Audio No. 2 Tilak Road, BIJAPURA.

೧೪. ಶ್ರೀ ಮದಗೊಂಡ ಮಹಾರಾಜರು; ಮಳಿಗಾಲಸಿದ್ಧ ಗಾಯನ ಸಂಘ, ಮನಮಿ; **"ಸ್ವಲ್ಪ ತಡಕೊ ಗುರ್ತ ಹಿಡಿಕೊ"**; Sri Renuka Recording Company, Gandinagara, Banglore.

೧೫. ಭಾರತಿ, ಸಾವಿತ್ರಿ ಹಾಗೂ ಸಂಗಡಿಗರು; ಶ್ರೀ ಅಮೋಘಸಿದ್ಧೇಶ್ವರ ಬಾಲಕಿಯರ ಗಾಯನ ಸಂಘ; **"ಬಂದಿದಿ ಬಾರ ಊರಿಂದ ದೂರ"**; Padmini Music Cassttes, Krishna Complex Amrai Road, SANGLI.

• • •

ಛಾಯಾಚಿತ್ರಗಳು ಮತ್ತು ಕ್ಯಾಸೆಟ್‌ಗಳ ಮುಖಪುಟಗಳು



ಡೊಳ್ಳು ಕುಣಿತದ ಬಂಗಿ –
ಶ್ರೀ ಉಲ್ತೆಪ್ಪಡೊಳ್ಳಿನ ಸಂಘ
ಮಲಪನಗುಡಿ.



ಡೊಳ್ಳು ಬಡಿತದ ಉಬ್ಬುಶಿಲ್ಪ–
ಶ್ರೀ ಬೀರಲಿಂಗೇಶ್ವರ ದೇವಾಲಯ
ಶಿವನಿ, ಚಿಕ್ಕಮಂಗಳೂರು ಜಿ.



ಕರಿಸಿದ್ಧೇಶ್ವರ ಮೂರ್ತಿ,– ಸಂಗ್ರೇಶಕೊಪ್ಪ
ಬೆಳಗಾಂ ಜಿಲ್ಲೆ



ಮಾಳಿಂಗರಾಯನ ಸಮಾಧಿ ಮೂರ್ತಿ–
ಹುಲಜಂತಿ. ಮಂಗಳವೇಡ ತಾ॥



ಡೊಳ್ಳು ಕುಣಿತದ ಬಂಗಿ,- ದೇಸಿ ಸಮ್ಮೇಳನ, ಕುಪ್ಪಳ್ಳಿ.



ಬೀರದೇವರ ಡೊಳ್ಳು,- ವಿರುಪಾಕ್ಷೇಶ್ವರ ದೇವಾಲಯ, ಹಂಪಿ.



ವಡ್ಡಿ ವಾಲಗ - ಶ್ರೀ ಇಟ್ಟಪ್ಪ ದೇವಾಲಯ ಪಟ್ಟಣಕೊಡಲಿ, ಕೊಲ್ಲಾಪುರ ತಾ॥



ಮರಾಠಿಗರ ಡೊಳ್ಳು ಹಾಡುಗಾರಿಕೆಯ ವಿಧಾನ.- ಪಟ್ಟಣಕುಡಿ ಜಾತ್ರೆ .



ಡೊಳ್ಳುಹಾಡುಗಾರಿಕೆಯ ವಿಧಾನ- ಡೊಳ್ಳಿನ ಹಾಡುಗಳ ತಂಡೋತಿ ಸಮ್ಮೇಳನ ಮುರಗುಂಡಿ (ಗ್ರಾ)
ಅಥಣಿ ತಾ।



ಜಾತ್ರೆ ಸಂದರ್ಭದಲ್ಲಿ ಪ್ರದರ್ಶನ ಕೊಡುತ್ತಿರುವ ಬಾಲಕಿಯರು. ಅರಕೇರಿ.



ಡೊಳ್ಳಿನ ಹಾಡುಗಳ ಕ್ಯಾಸೇಟ್ಗಳ ಮಾರಾಟ ಮಾಳಿಗೆ– ಹುಲಜಂತಿ.



ಕಬ್ಬಿಣದ ಡೊಳ್ಳುಗಳ ಮಾರಾಟ ಮಾಳಿಗೆ– ಪಟ್ಟಣಕೊಡಲಿ.



ಬಯಲು ಪ್ರದೇಶದಲ್ಲಿ ಡೊಳ್ಳಿನ ಹಾಡುಗಳ ಪ್ರದರ್ಶನ, ಮಾಳಿಂಗರಾಯನ ಜಾತ್ರೆ– ಹುಲಜಂತಿ.



ಬೀರಪ್ಪನ ಮೂರ್ತಿ- ಡೊಡ್ಡೇರಿ, ಚಳ್ಳಕೆರಿ ತಾ||.



ಬೀರಪ್ಪ ದೇವಾಲಯ- ಹಂಪಿ.



ಬೀರಪ್ಪ ದೇವಾಲಯ- ತಾಳೀಕಟ್ಟೆ, ಹೊಳಲ್‌ಕೆರೆ ತಾ||.



ಮಾಳಿಂಗರಾಯ ದೇವಾಲಯ- ಹುಲಜಂತಿ.



ಸಿದ್ಧಾಟಿಕೆಗಳನ್ನು ಹೇಳುವುದಕ್ಕೆ ಸಿದ್ಧವಾಗಿರುವ ಪೂಜಾರಿಗಳು- ಹುಲಜಂತಿ.



ಪಲ್ಲಕ್ಕಿಗಳ ಬೇಟಿ ಮಾಳಿಂಗರಾಯನ ಜಾತ್ರೆ- ಹಾಲಹಳ್ಳ ಹುಲಜಂತಿ.



ಕುರಿಹಿಕ್ಕೆಗಳನ್ನು ಹುಡುಕುತ್ತಿರುವುದು, ಕುರಿಹಟ್ಟಿ- ಮಂಗಳವೇಡ ತಾ॥



ಬುಳ್ಳಪ್ಪ ದೇವಾಲಯ,-ಬಿಜ್ಜರಗಿ, ಬಿಜಾಪುರ (ಜಿ).



ಮಾಳಿಂಗರಾಯನ ಜಾತ್ರೆಗೆ ಹೊರಟಿರುವ ಬುಳ್ಳಪ್ಪನ ಪೂಜಾರಿ- ಮರಿಹಟ್ಟಿ, ಮಂಗಳವೇಡ ತಾ॥



ಇಟ್ಟಪ್ಪ ದೇವರ ಗದ್ದುಗೆ – ಪಟ್ಟಣಕೊಡಲಿ ಕೊಲ್ಲಾಪುರ ಜಿಲ್ಲೆ.



ಅಲಗು ಪವಾಡ – ಪಟ್ಟಣಕೊಡಲಿ, ಕೊಲ್ಲಾಪುರ ಜಿಲ್ಲೆ



ಇಟ್ಟಪ್ಪನಿಗೆ ಅರ್ಪಿಸುವ ದಾನದ ಪೂಜೆ– ಪಟ್ಟಣಕೊಡಲಿ, ಕೊಲ್ಲಾಪುರ ಜಿಲ್ಲೆ.




ರೇವಣಸಿದ್ಧೇಶ್ವರ ಮೂರ್ತಿ–
ಸಿದ್ಧೇಶ್ವರ ದೇವಾಲಯ, ಡಂಬಳ.
ಚಿತ್ರದುರ್ಗ. ತಾ||



ಶ್ರೀ ರೇವಣಸಿದ್ಧೇಶ್ವರ ಮೂರ್ತಿ–ಬಾಗೂರು.



ಗಂಗಿಮಾಳಮ್ಮನ ಮೂರ್ತಿ
ಹೊರ್ತಿ, ಬಿಜಾಪುರ ತಾ||



ಓರಗಲ್ಲಮ್ಮ ದೇವಿಯ ಮೂರ್ತಿ – ಓರಗಲ್ಲಮ್ಮ ದೇವಾಲಯ,
ಬಾಗೂರು, ಕಡೂರು ತಾ||



ಅಮೋಘಸಿದ್ಧ ದೈವದ ಪಲ್ಲಕ್ಕಿ ಉತ್ಸವ– ಅರಕೇರಿ.



ಬೀರಪ್ಪ–ಸೋಮೇಶ್ವರ– ಶಿವ,ಪಾರ್ವತಿ ದೈವಗಳ ಗದ್ದುಗೆ– ಪಟ್ಟನಾಯಕನಹಳ್ಳಿ, ಶಿರಾ ತಾ॥.



ಮುರಸಿದ್ಧ ದೇವರ ಗಂಗೆಪೂಜೆ ಆಚರಣೆ– ಹುಲಬಾಳ ಗ್ರಾಮ, ಅಥಣಿ ತಾ॥.



ಶ್ರೀ ರೇವಣಸಿದ್ಧೇಶ್ವರ ದೇವಾಲಯ - ಸರೂರು, ಮುದ್ದೇಬಿಹಾಳ ತಾ||.



ಶ್ರೀ ರೇವಣಸಿದ್ಧೇಶ್ವರ ದೇವಾಲಯ - ಕಳಲೆ, ನಂಜನಗೂಡು ತಾ||.



ಶ್ರೀ ಹರಿಯಪ್ಪ ದೇವಾಲಯ - ಯಳನಡು, ತರೀಕೆರೆ ತಾ||.



ಗಣಸಿದ್ಧ ದೈವದ ಮೂರ್ತಿ–
ಗಣಸಿದ್ಧೇಶ್ವರ ದೇವಾಲಯ, ಹತ್ತೂರು.
ಸೊಲ್ಲಾಪುರ ತಾ॥.



ಸೋಮನಾಥ ದೈವದ ಮೂರ್ತಿ
ಮೈಲಾರ. ಹಡಗಲಿ ತಾ॥.



ಬೀರಪ್ಪ– ಮಾಳಿಗರಾಯನ ಗದ್ದುಗೆ
ಸಿಡಿಯಾಣ, ಇಂಡಿ ತಾ॥.



ಅಲುಗು ಸೇವೆ ಅರ್ಪಿಸುತ್ತಿರುವ ನಾಥ–
ಮಾಳಿಂಗರಾಯನ ಜಾತ್ರೆ, ಹುಲಜಂತಿ.



'ಗೊರವರ ಪೂಜೆ' - ಹಾಲಳ್ಳಿ ಹುಲಜಂತಿ.



ಗೊರವರು– ಮೈಲಾರಲಿಂಗೇಶ್ವರ ಜಾತ್ರೆ, ದೊಡ್ಡಮೈಲಾರ, ಹರಪನಹಳ್ಳಿ ತಾ॥.



ನರ್ತನ ಮಾಡುತ್ತಿರುವ ಪದ್ಮಬಾಯಿ ಭಕ್ತರು– ಪಟ್ಟಣಕೊಡಲಿ.



ಬಸವನ ಮೇಲೆ ಸವಾರಿ ಮಾಡುತ್ತಿರುವ ರೇವಣಸಿದ್ಧ ಒಡೆಯರು-ಶ್ರೀರಾಂಪುರ, ಹೊಸದುರ್ಗ ತಾ॥.



ಅಲೆಮಾರಿ ಕುರುಬರ ಮಹಿಳೆಯರು- ಪಾಪಿನಾಯಕನಹಳ್ಳಿ, ಹೊಸಪೇಟೆ ತಾ॥.



ಅಲೆಮಾರಿ ಕುರುಬರ ಪಾಂಡವರ-ಲಕ್ಷ್ಮಿ ಪೂಜೆ ಆಚರಣೆ ಹಂಪಿ.



ಕುರುಬನ ಚಿತ್ರ– ಪ್ರಸನ್ನ ವಿರೂಪಾಕ್ಷ ದೇವಾಲಯ, ಹಂಪಿ.



ಅಲೆಮಾರಿ ಕುರುಬರ ಹಾಲು ಉಕ್ಕಿಸುವ ಆಚರಣೆ – ಹಂಪಿ.



ಬೀರದೇವರ ಕಂಬಳಿ ಧ್ವಜ–ಹುಲಜಂತಿ.



ಡೋಣಿಪೂಜೆ ಮೈಲಾರ ಹಡಗಲಿ ತಾ||.



ಬೂತಾಳಸಿದ್ಧನ ಮೂರ್ತಿ- ಹಿರೇಕುಂಬಿ ಸೌದತ್ತಿ ತಾ||.



ಕರಿಸಿದ್ಧ-ಸಿದ್ಧಪ್ಪ- ಬೀರಪ್ಪ ದೈವಗಳ ಗದ್ದಗೆ, ಕೆಲ್ಲೋಡು, ಹೊಸದುರ್ಗ ತಾ||.



ಕಂಬಳಿ ಸಂತೆ- ಚಳ್ಳಕೆರೆ.



ಬೈರವಿ ಮೂರ್ತಿ, ಸಿರಿವಾಳ.



ದೊಡ್ಡದೇವರ ಜಾತ್ರೆಯಲ್ಲಿ ಬೀರದೇವರ ಪೂಜಾರಿಗಳ
ಅಲಗುಗಳನ್ನು ಪೂಜಿಸುತ್ತಿರುವುದು, ಶಿವಗಂಗೆ ಬೆಟ್ಟ, ಕೊಲಾರ.



ಸೋಲಿಗರ ಆರಾಧ್ಯ ದೈವ ಬಿಳಿಗಿರಿ ರಂಗಸ್ವಾಮಿ ದೇವಾಲಯ
ಬಿಳಿಗಿರಿರಂಗನ ಬೆಟ್ಟ



ಸಿದ್ಧಾಟಿಕೆಗಳನ್ನು ಹೇಳುತ್ತಿರುವ ರೇವಣಸಿದ್ಧ
ಒಡೆಯರು– ತೂಗುಡ್ಡ, ಸರೂರು.



ತೆಂಗಿನ ಕಾಯಿ ಪವಾಡ, ದೊಡ್ಡದೇವರ ಜಾತ್ರೆ- ಕುರುಬರ ಹಟ್ಟಿ, ಕೊಲಾರ.



ಅಲಗ ಸೇವೆ ಮಾಡುತ್ತಿರುವ ಬೀರದೇವರ ಪೂಜಾರಿಗಳು, ದೊಡ್ಡ ದೇವರ ಜಾತ್ರೆ
ಶಿವಗಂಗೆ ಬೆಟ್ಟ, ಕೊಲಾರ.




ಮ್ಯಾಸ ಬೇಡರ ಆರಾಧ್ಯ ದೈವ ಕಂಪಳರಂಗಸ್ವಾಮಿ ಜಾತ್ರೆ- ಕಂಪಳ ದೇವರಹಟ್ಟಿ



ದೈವಗಳನ್ನು ಆಹ್ವಾನ ಮಾಡಿಕೊಳ್ಳುತ್ತಿರುವ ಕೆರೆಸಂತೆ ಲಕ್ಕಮ್ಮನ ಹಿಮ್ಮುಖ ಚಲನೆ, ತೋಪುಜಾತ್ರೆ ಹಿರೇನಲ್ಲೂರು.



ಕಾಚಿಬೀರ ಸೇವೆ ಮಾಡುವ ಈರಗಾರರು, ತೋಪುಜಾತ್ರೆ ಹಿರೇನಲ್ಲೂರು.



ಗೂಡೆ ಆಚರಣೆ, ತೋಪುಜಾತ್ರೆ ಹಿರೇನಲ್ಲೂರು.



ಕಾಚಿಬೀರ ಸೇವೆ ಮಾಡುತ್ತಿರುವ ದಳವಾಯಿ ತೋಪುಜಾತ್ರೆ ಹಿರೇನಲ್ಲೂರು .



ಕಾಳು ಪ್ರಸಾದ ತೋಪುಜಾತ್ರೆ ಹಿರೇನಲ್ಲೂರು.



ಲಕ್ಷ್ಮೀಪೂಜೆಯ ಕಳಸ ಹೊತ್ತ ಯುವತಿ. ತೋಪುಜಾತ್ರೆ ಹಿರೇನಲ್ಲೂರು.



ಕ್ಯಾಸೆಟ್‌ಗಳ ಮುಖಪುಟಗಳು

